
ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ

- ಬುಕ್ಕಾಂಬುಧಿ ಕೃಷ್ಣಮೂರ್ತಿ
- ಪ್ರೊ. ಜಿ. ಅಶ್ವತ್ಥನಾರಾಯಣ



BUKKAMBUDHI
PRADESHIKA PADAKOSHA

ಬುಕ್ಕಾಂಬುಧಿ
ಪ್ರಾದೇಶಿಕ ಪದಕೋಶ

ಕನ್ನಡ–ಇಂಗ್ಲೀಷ್

(ಸಚಿತ್ರ ಸೋದಾಹರಣ ಸಾಮಾಜಿಕ ವಿವರಣೆಗಳೊಂದಿಗೆ)

BUKKAMBUDHI
PRADESHIKA PADAKOSHA

Kannada - English

(Illustrated examples with social explanations)



BUKKAMBUDHI PRADESHIKA PADAKOSHA
book released at NAVIKA, USA

ಬುಕ್ಕಾಂಬುಧಿ
ಪ್ರಾದೇಶಿಕ ಪದಕೋಶ

ಕನ್ನಡ–ಇಂಗ್ಲೀಷ್

(ಸಚಿತ್ರ ಸೋದಾಹರಣ ಸಾಮಾಜಿಕ ವಿವರಣೆಗಳೊಂದಿಗೆ)

ಸಂಪಾದಕರು

ಬುಕ್ಕಾಂಬುಧಿ ಕೃಷ್ಣಮೂರ್ತಿ

ಸಹ ಸಂಪಾದಕರು

ಪ್ರೊ. ಜಿ. ಅಶ್ವತ್ಥನಾರಾಯಣ

ಸುಹಾಸ್ ಗ್ರಾಫಿಕ್ಸ್
Suhaas Graphics
CREATIVE • DESIGN • DEVELOPMENT

ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ
ಕನ್ನಡ–ಇಂಗ್ಲೀಷ್
(ಸಚಿತ್ರ – ಸೋದಾಹರಣ ಸಾಮಾಜಿಕ ವಿವರಣೆಗಳೊಂದಿಗೆ)

ಸಂಪಾದಕರು : ಬುಕ್ಕಾಂಬುಧಿ ಕೃಷ್ಣಮೂರ್ತಿ
ಸಹ ಸಂಪಾದಕರು : ಪ್ರೊ. ಜಿ. ಅಶ್ವತ್ಥನಾರಾಯಣ

ಮೊದಲನೇ ಮುದ್ರಣ : 2025
ಪುಟಗಳು : xlviii + 478
ಕಾಗದ : 80 ಜಿ.ಎಸ್.ಎಂ. ಮ್ಯಾಪ್ಲಿಥೋ

ಬೆಲೆ : ₹. 600/–

ಹಕ್ಕುಗಳು : ಸಂಪಾದಕರು

ISBN : 978-93-90952-26-7

Bukkambudhi Pradeshika Padakosha

Kannada-English
(A book of Regional Kannada Vocabulary around Bukkambudhi)
(With English translation and illustrations, Examples and Social explanations)

Editor : Bukkambudhi Krishnamurthy
Co-Editor : Prof. G. Aswathanarayana

First Edition : 2025
Pages : xlviii + 478
Paper : 80 GSM Maplitho

Price : ₹. 600/-

© : Editor

ISBN : 978-93-90952-26-7

ಪ್ರಕಾಶಕರು / Publisher:

ಸುಹಾಸ್ ಗ್ರಾಫಿಕ್ಸ್
Suhaas Graphics
CREATIVE • DESIGN • DEVELOPMENT
www.suhaasgraphics.com | Ph: 98453 55509
ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 6ನೇ ಬ್ಲಾಕ್, ಬೆಂಗಳೂರು – 560 010
Dr. Rajkumar Road, Rajajinagar 6th Block, Bengaluru - 560 010

ಸಂಪಾದಕರ ಮಾತು

ಸುಮಾರು 1935–40ರ ಕಾಲ. ಸ್ವಾತಂತ್ರ್ಯಪೂರ್ವಕಾಲ, ಬ್ರಿಟೀಶರ ಆಡಳಿತಕಾಲ, ಹಳೇ ಮೈಸೂರಿನ ಅರಸರಕಾಲ. ಆಗೆಲ್ಲ ರುಪಾಯಿ, ಆಣೆ, ಕಾಸುಗಳ ವ್ಯವಹಾರ. ಅದೂ ಹಳ್ಳಿಗಾಡಿನಲ್ಲಿ ಅಪರೂಪ. ಕಾರಣ, ಜನಗಳು ಹಣ ಕೊಟ್ಟು–ಕೊಳ್ಳುವ ಪದಾರ್ಥಗಳು ಬಹಳ ಕಡಿಮೆ. ಪ್ರತಿಯೊಂದು ಸಂಸಾರದವರೂ ಬೇಕಾದ ದವಸಧಾನ್ಯಗಳನ್ನು ಹೊಲ–ಗದ್ದೆಗಳಲ್ಲಿ ಬೆಳೆದುಕೊಳ್ಳುತ್ತಿದ್ದರು. ಅವರ ಬೇಕು–ಬೇಡಗಳು ಕಡಿಮೆ ಅವರವರಿಗೆ ಅವರದೇ ಆದ ನಿತ್ಯದ ಬದುಕು. ತೃಪ್ತಿಕರವಾದ ವಿನಿಮಯ ಜೀವನ. ಹಾಗಾಗಿ ಹಣವನ್ನು ಕೊಟ್ಟು–ಕೊಳ್ಳುವ ಪದಾರ್ಥಗಳು ಕೇವಲ ನಾಲ್ಕಾರು ಮಾತ್ರ. ನನಗೆ ತಿಳಿದಂತೆ ನಮ್ಮ ಹಳ್ಳಿಯಾದ ಬುಕ್ಕಾಂಬುಧಿಯಲ್ಲಿ (ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ ರಾಜ್ಯ) ಬೀಳ್ಯದೆಲೆ, ಸೂಜಿ, ಹೊಲಿಯುವ ದಾರ ಮುಂತಾದುವನ್ನು ಕೊಳ್ಳುವಾಗ ಹಣದ ಬದಲು ರಾಗಿಯನ್ನೋ, ಅಕ್ಕಿಯನ್ನೋ ಕೊಡುತ್ತಿದ್ದರು. ಚಲಾವಣೆಯಲ್ಲಿದ್ದ ನಾಣ್ಯಗಳೆಂದರೆ – ಕಾಸು, ಮೂರುಕಾಸು (ತಾಮ್ರದ್ದು), ನಾಲ್ಕು ಕಾಸು, ಒಂದಾಣೆ, ಎರಡಾಣೆ (ನಿಕ್ಕಲ್ ಲೋಹ), ನಾಲ್ಕಾಣೆ (ನಿಕ್ಕಲ್ ಮತ್ತು ಬೆಳ್ಳಿ), ಎಂಟಾಣೆ, ರೂಪಾಯಿ ಬೆಳ್ಳಿಯದು. ನಾಲ್ಕಾಣೆಯನ್ನು 'ಪಾವಲಿ' ಎಂದೂ ಹೇಳುತ್ತಿದ್ದರು. ನಾಲ್ಕು ಕಾಸುಗಳಿಗೆ 'ದುಡ್ಡು' ಎಂದು ಹೆಸರು.

ಹಣಕಾಸಿನಂತೆಯೆ, ಅಳತೆಮಾಡುವ ಉಪಕರಣಗಳಾದ ಚಟಾಕು, ಅರ್ಧಪಾವು, ಪಾವು, ಅಚ್ಚೇರು, ಸೇರುಗಳನ್ನು ಅಕ್ಕಿ, ರಾಗಿ ಮುಂತಾದ ದವಸಧಾನ್ಯಗಳನ್ನು ಅಳತೆಮಾಡಲು ಉಪಯೋಗಿಸುತ್ತಿದ್ದರು. ಸೇರಿಗಿಂತಲೂ ದೊಡ್ಡದಾದ ಅಳತೆಗೆ 'ಬಳ್ಳ' (ಬಳ್ಳ ಎಂದರೆ ನಮ್ಮಲ್ಲಿ 8 ಸೇರು ಕೊಳಗ) ಎಂದು ಹೇಳುತ್ತಾರೆ. ನೂರು ಸೇರಿಗೆ 'ಪಲ್ಲ' ಎಂದು, ಮುನ್ನೂರು ಸೇರಿಗೆ 'ಖಂಡುಗ' ಎಂದು ಹೆಸರು. ಬಟ್ಟೆಯನ್ನು ಅಳೆಯಲು – ಚೋಟು, ಗೇಣು, ಮೊಳ, ಮಾರು ಪದಗಳು ಬಳಕೆಯಲ್ಲಿದ್ದವು. ಜನಸಾಮಾನ್ಯರು ಕೈಯಲ್ಲೆ ಸೂಜಿಯಿಂದ ಬಟ್ಟೆ ಹೊಲಿದುಕೊಳ್ಳುತ್ತಿದ್ದರು. ಈಗ ನಾನಾರೀತಿಯ ಹೊಲಿಗೆಯಂತ್ರಗಳು ಬಂದಿವೆ. ಅಳತೆಮಾಡಲು ಮೀಟರ್‌ಪದ್ಧತಿ ಬಳಕೆಗೆ ಬಂದಿದೆ.

ಬೆಲ್ಲ ಮುಂತಾದ ಪದಾರ್ಥಗಳನ್ನು ತಕ್ಕಡಿಯಲ್ಲಿ ತೂಕ ಮಾಡಿ ಕೊಡುವ ಅಳತೆಕಲ್ಲುಗಳಿಗೆ 'ತೂಕದ ಬಟ್ಟು' ಎಂದು ಹೆಸರು. ಅದು ಕಬ್ಬಿಣದ್ದು. ಅವುಗಳಿಗೂ ಕೂಡ – ಸೇರು, ಸವ್ವಾಸೇರು, ಅಡಿಸೇರು, ವೀಸೆ, ಪಂಚೇರು,

ಧಡಿಯ, ಮಣ ಎಂದೆಲ್ಲ ಹೆಸರುಗಳು. ಈಗ ಕೇಜಿ, ಪೌಂಡು ತೂಕಗಳು, ಸೆಂಟಿಮೀಟರ್, ಕಿಲೋಮೀಟರ್ ದೂರದ ಅಳತೆಗಳು ಬಳಕೆಗೆ ಬರುತ್ತಿವೆ.

ಆ ಕಾಲಕ್ಕೆ ಹೊತ್ತುಹೇಳಲು ಗಡಿಯಾರಗಳೇನೂ ಇರಲಿಲ್ಲ. ನಮ್ಮ ಅಜ್ಜಿ ಬಿಸಿಲಿನ ನೆರಳನ್ನು ನೋಡಿ ಎಷ್ಟು ಗಂಟೆ ಇರಬಹುದೆಂದು ತಿಳಿಸುತ್ತಿದ್ದರು. ಸೂರ್ಯನಿಗೆ ಅಭಿಮುಖವಾಗಿ ನಿಂತು ನೆಲದ ಮೇಲೆ ಬೀಳುವ ನೆರಳಿನಿಂದ ಗಂಟೆಗಳನ್ನು ಗೊತ್ತು ಮಾಡುತ್ತಿದ್ದರು, ಸೂರ್ಯನು ನೆತ್ತಿಯ ಮೇಲೆ ಬಂದಾಗ ಮಧ್ಯಾಹ್ನ 12 ಗಂಟೆ. ಸೂರ್ಯ ಮುಳುಗುವ ಸಮಯವಾದರೆ ಸುಮಾರು ಆರು ಗಂಟೆ, ಹೀಗೆಲ್ಲ ಇತ್ತು. ಈಗ ಮಕ್ಕಳ ಕೈಗೂ ಗಡಿಯಾರಗಳು ಬಂದಿವೆ, ನಾನಾ ರೀತಿಯ ಗಡಿಯಾರಗಳು ಬಳಕೆಗೆ ಬಂದಿವೆ. ಒಂದು ಕಾಲದಲ್ಲಿ ಬೆಂಗಳೂರು, ಮೈಸೂರು ಅಂತಹ ದೊಡ್ಡ ನಗರಗಳಲ್ಲಿ ಕಲ್ಲು ಗೋಪುರದ ಗಡಿಯಾರಗಳು ನಿರ್ಮಾಣವಾಗಿದ್ದವು.

ನಮ್ಮ ಹಳ್ಳಿಗಾಡಿನಲ್ಲಿ (ಬುಕ್ಕಾಂಬುಧಿ, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ) ಉಪಯೋಗಿಸುತ್ತಿದ್ದ ಪದಗಳನ್ನು ಆಗಾಗ್ಗೆ ಮೆಲುಕು ಹಾಕಬೇಕೆಂದು ಬಯಸಿ, ಒಂದೊಂದನ್ನೂ ಜ್ಞಾಪಕಕ್ಕೆ ಬಂದ ಬಂದ ಹಾಗೆ ಬರೆಯಹೊರಟಿದ್ದೇನೆ. ಎಷ್ಟೋ ವಸ್ತುಗಳ ಹೆಸರುಗಳು, ಆಚರಣೆಗಳು ನಮ್ಮ ಮಕ್ಕಳಿಗೆ ಗೊತ್ತಿಲ್ಲ. ಅಂದ ಮೇಲೆ ಮುಂದಿನ ಪೀಳಿಗೆಗೆ ಇವುಗಳನ್ನು ತಿಳಿಸಿದಾಗ ನಮ್ಮ ಮೊಮ್ಮಕ್ಕಳು, ಮರಿಮಕ್ಕಳು ಆ ಹೆಸರುಗಳನ್ನು ಯಾವುದಾದರೂ ಪ್ರಾಣಿಯೋ ಅಥವಾ ಹಳ್ಳಿಯ ಹೆಸರೋ ಎಂದು ತಪ್ಪಾಗಿ ಭಾವಿಸಿದರೆ ಆಶ್ಚರ್ಯವೇನಿಲ್ಲ!

ಬುಕ್ಕಾಂಬುಧಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬಳಸುವ ಪದಗಳನ್ನು ಅದೇ ರೂಪದಲ್ಲಿ ಅಥವಾ ಬೇರೆ ರೂಪದಲ್ಲಿ ಬಳಕೆ ಇರುವುದನ್ನು ನನ್ನ ತಿಳಿವಳಿಕೆಗೆ ಬಂದುದನ್ನು ಹಾಗೂ ಜಾನಪದಕೋಶ ಮೊದಲಾದ ಆಕರಗಳಿಂದಲೂ ಆರಿಸಿಕೊಟ್ಟಿದ್ದೇನೆ. ಆ ಸಂಪಾದಕರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಹೀಗೆ ಬರೆದು ಸಿದ್ಧಪಡಿಸಿದ ಸಾಮಗ್ರಿಯನ್ನು ನನ್ನ ಮಿತ್ರರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ತೋರಿಸಿದಾಗ, ಅವರು "ಇದು ಶ್ಲಾಘನೀಯವಾದ ಕಾರ್ಯ. ಕನ್ನಡದಲ್ಲಿ ನಾನಾ ಬಗೆಯ ನಿಘಂಟುಗಳು ಪ್ರಕಟವಾಗಿವೆ. ಆದರೆ ಪ್ರಾದೇಶಿಕ ಶಬ್ದಗಳನ್ನೇ ಕುರಿತು ಬರೆದಿರುವ ಪ್ರತ್ಯೇಕ ನಿಘಂಟು ಎಂದರೆ 'ಚಿಗಟೇರಿ ಶಬ್ದಕೋಶ'ವನ್ನು ಬಿಟ್ಟರೆ ಬೇರಾವುದೂ ನನ್ನ ಗಮನಕ್ಕೆ ಬಂದಿಲ್ಲ. ಕನ್ನಡದ ಉಳಿದ ನಿಘಂಟುಗಳಲ್ಲಿ ಆಡುಮಾತುಗಳು, ಪ್ರಾದೇಶಿಕ ಶಬ್ದಗಳು, ಅರ್ಥವಿವರಣೆಗಳು, ಅಲ್ಲಲ್ಲಿ ಸಾಂದರ್ಭಿಕವಾಗಿ ಸೇರಿವೆ. ಪ್ರತ್ಯೇಕವಾಗಿ

ಪ್ರಕಟವಾಗಿಲ್ಲ. ಕನ್ನಡದಲ್ಲಿ ನಿಮ್ಮದೇ ವಿಶೇಷ ಪ್ರಾದೇಶಿಕ ಕನ್ನಡ ನಿಘಂಟು. ಅಮೆರಿಕೆಯಲ್ಲಿ ನೆಲೆಸಿದ್ದು ಒಬ್ಬಂಟಿಗರಾಗಿ ಇಳಿವಯಸ್ಸಿನಲ್ಲಿ (99 ದಾಟಿದವರಾಗಿ) ಈ ಸಾಹಸಕ್ಕೆ ಇಳಿದಿರುವುದು ಇತರರಿಗೆ ಸ್ಫೂರ್ತಿದಾಯಕವಾದ ಸಂಗತಿಯಾಗಿದೆ" ಎಂದು ಹೇಳಿದ್ದಷ್ಟೇ ಅಲ್ಲದೆ ನಾನಾ ರೀತಿಯಲ್ಲಿ ಶ್ರಮವಹಿಸಿ ಈ ಪದಕೋಶ ನಿರ್ಮಾಣಕಾರ್ಯದಲ್ಲಿ ಸಹ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಇದರ ಯಶಸ್ಸಿಗೆ ಭಾಗಿಗಳಾಗಿದ್ದಾರೆ. ಅವರ ಶ್ರಮಕ್ಕೆ, ಸೇವೆಗೆ, ಸ್ನೇಹಾಭಿಮಾನಕ್ಕೆ ನಾನು ಕೃತಜ್ಞನಾಗಿದ್ದೇನೆ. ಹಾಗೂ ಕಂಪ್ಯೂಟರ್ ವಿಜ್ಞಾನದಲ್ಲಿ ಪರಿಶ್ರಮ ಪಡೆದಿರುವ ಸ್ವಾತಿ ವಿವೇಕ್‌ರವರು ಗೂಗಲ್ ಮೂಲಕ ಚಿತ್ರಗಳನ್ನು ಅಳವಡಿಸಿಕೊಟ್ಟರು. ಅಲ್ಲದೆ ಅನೇಕ ತಿದ್ದುಪಡಿಗಳನ್ನು ಮಾಡುವಾಗ ಪದ್ಮ ಮತ್ತು ಅನಂತ್‌ಹೆಗ್ಡೆಯವರು ಬಹಳವಾಗಿ ಸಹಕರಿಸಿದರು. ಅವರಿಗೂ ನನ್ನ ಅಭಿವಂದನೆಗಳು.

ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶವನ್ನು ತಯಾರು ಮಾಡುವಲ್ಲಿ ಈ ಕೆಳಕಂಡ ಶಬ್ದಕೋಶಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡಿದ್ದೇನೆ. ಆ ಕೋಶಗಳ ಎಲ್ಲ ಸಂಪಾದಕರಿಗೂ ನಾನು ಆಭಾರಿಯಾಗಿದ್ದೇನೆ.

ಕನ್ನಡ ಜಾನಪದ ಕೋಶ: ಕರ್ನಾಟಕ ಜಾನಪದ ಪರಿಷತ್ತು, ನಂ. 7, 5ನೇ ರಸ್ತೆ, 4ನೇ ಬ್ಲಾಕ್ ಕುಮಾರಾಪಾರ್ಕ್ ವೆಸ್ಟ್, ಬೆಂಗಳೂರು 560 020

ಸಂಕ್ಷಿಪ್ತ ಕನ್ನಡ ನಿಘಂಟು: ಕನ್ನಡ ಸಾಹಿತ್ಯ ಪರಿಷತ್ತು, (2010), ಚಾಮರಾಜಪೇಟೆ, ಬೆಂಗಳೂರು 560018

ಕನ್ನಡ ರತ್ನಕೋಶ: ಕನ್ನಡ ಸಾಹಿತ್ಯ ಪರಿಷತ್ತು, (2001), ಚಾಮರಾಜಪೇಟೆ, ಬೆಂಗಳೂರು 560020

ಜಾನಪದ ಕೋಶ: ಸಂಪಾದಕರು: ಹೆಚ್. ನಂಜೇಗೌಡ, (2002), ನಿವೃತ್ತ ಕನ್ನಡ ಪ್ರಾಧ್ಯಾಪಕರು, ಸರಸ್ವತಿ ನಿವಾಸ, ಹಾರೋಹಳ್ಳಿ, ಪಾಂಡವಪುರ

ಚಿಗಟೇರಿ ಪದಕೋಶ: ಸಂಪಾದಕರು: ಮುದೇನೂರು ಸಂಗಣ್ಣ, (1997), ಎಂ. ಜಿ. ಎಂ ಕಾಲೇಜು, ಉಡುಪಿ

ನಮ್ಮೂರಿನ ಅನೇಕ ವೃತ್ತಿಕಾರರ ಮನೆತನಗಳಲ್ಲಿ ಧಾರ್ಮಿಕ ಆಚಾರ ವಿಚಾರಗಳಿಗೆ ಸಂಬಂಧಿಸಿದಂತೆ ವೃತ್ತಿಗೆ ಸೇರಿದ ಅನೇಕ ಪದಗಳು ಬಳಕೆಯಲ್ಲಿವೆ. ಆ ಪೈಕಿ ಬಾಲ್ಯದಲ್ಲಿ ನಾನು ನಮ್ಮೂರಿನಲ್ಲಿ, ಸುತ್ತಮುತ್ತಲ ಜನರು ನಿತ್ಯಜೀವನದಲ್ಲಿ ಬಳಸುತ್ತಿದ್ದ ಶಬ್ದಗಳನ್ನು, ಅವರ ಜೀವನ ವಿಧಾನಗಳನ್ನು,

ಆಚರಣೆಗಳನ್ನು ನನಗೆ ತಿಳಿದಮಟ್ಟಿಗೆ ಈ ಕೋಶದಲ್ಲಿ ವಿವರಣೆಸಹಿತ ಕೊಟ್ಟಿದ್ದೇನೆ. ಇಲ್ಲಿ ಬಿಟ್ಟುಹೋದ ಶಬ್ದಗಳನ್ನೂ ಮತ್ತು ಇಲ್ಲಿ ಕೊಟ್ಟ ವಿವರಣೆಯಲ್ಲಿ, ಆಚರಣೆಯ ವಿಧಾನಗಳನ್ನು ತಿಳಿಸಿರುವುದರಲ್ಲಿ ತಪ್ಪುಗಳಿದ್ದರೆ, ಅವುಗಳನ್ನೂ ವಿದ್ವಾಂಸರು, ಭಾಷಾತಜ್ಞರು, ನಮ್ಮ ಊರಿನ ಬೇರೆಬೇರೆ ವೃತ್ತಿಜನರು, ಹಿರಿಯರು ನನ್ನ ಗಮನಕ್ಕೆ ತಂದರೆ ಕೃತಜ್ಞತೆಯಿಂದ ಈ ಕೋಶದ ಮುಂದಿನ ಆವೃತ್ತಿಯಲ್ಲಿ ಅಳವಡಿಸುತ್ತೇನೆ. ಸಹೃದಯರೆಲ್ಲರೂ ಈ ಕಾರ್ಯದಲ್ಲಿ ನೆರವಾಗುತ್ತಾರೆಂದು ನಂಬಿದ್ದೇನೆ.

ತಮ್ಮ ಬರಹ ಸಾಫ್ಟ್‌ವೇರ್ ಮೂಲಕ ಕನ್ನಡದಲ್ಲಿ ಬರೆಯಲು ಸಹಾಯ ಮಾಡಿದ್ದಕ್ಕಾಗಿ ನಾನು ಶ್ರೀ ಶೇಷಾದ್ರಿವಾಸು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಬೆಂಗಳೂರು
08–01–2025

ಬುಕ್ಕಾಂಬುಧಿ ಕೃಷ್ಣಮೂರ್ತಿ
ಸಂಪಾದಕರು

Krishna Murthy 200 Middlesex
Essex Tpke, Suite 103, Iselin
NJ 08830, USA
Ph.: +1 732-986-7041

ಕೋಶ ರಚನೆಯನ್ನು ಕುರಿತು

ಕನ್ನಡದಲ್ಲಿ ಕಥೆ, ಕಾದಂಬರಿ, ಕವನ, ನಾಟಕ, ವಿಮರ್ಶೆ ಇತ್ಯಾದಿ ಸಾಹಿತ್ಯಕೃತಿಗಳು ಅಪಾರ ಸಂಖ್ಯೆಯಲ್ಲಿ ಪ್ರಕಟವಾಗುತ್ತಿವೆ. ಆದರೆ ನಿಘಂಟು, ಛಂದಸ್ಸು, ವ್ಯಾಕರಣ, ಅಲಂಕಾರಶಾಸ್ತ್ರ, ವಿಜ್ಞಾನ, ಕಲೆ, ಭಾಷೆ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಶಾಸ್ತ್ರಗ್ರಂಥಗಳು ಮೊದಲಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗುತ್ತಿದ್ದರೂ ಕನ್ನಡದ ಅವಶ್ಯಕತೆ, ಬೆಳವಣಿಗೆಯ ದೃಷ್ಟಿಯಲ್ಲಿ ಏನೇನೂ ಸಾಲದು. ಪಾಂಡಿತ್ಯದಫಲವಾಗಿ ಮೂಡಿಬರುವ ಈ ಬಗೆಯ ಗ್ರಂಥಗಳನ್ನು ರಚಿಸಬೇಕಾದರೆ ಹತ್ತಾರು ವರ್ಷಗಳ ಅಧ್ಯಯನ, ಶ್ರಮ, ನಿಷ್ಠೆ, ಸತತಪ್ರಯತ್ನ ಬೇಕಾಗುತ್ತದೆ. ಈ ರೀತಿಯ ವಿದ್ವಾಂಸರು ನಮ್ಮಲ್ಲಿ ವಿರಳ. ಏಕೆಂದರೆ ಇಂದು ಓದುವುದಕ್ಕಿಂತ ಬರೆಯುವುದು ಹೆಚ್ಚಾಗಿದೆ. ಶೀಘ್ರಪ್ರಚಾರಕ್ಕೆ ಸಾಹಿತಿಗಳೂ ವಿದ್ವಾಂಸರೂ ಆಸಕ್ತರಾಗಿದ್ದಾರೆ. ಎಲ್ಲೋ ಕೆಲವು ಆಸಕ್ತ ಅಧ್ಯಯನಕಾರರು, ವಿದ್ವಾಂಸರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಕೇವಲ ಕನ್ನಡಕ್ಕೊಂದು ವಿಶೇಷ ಕೊಡುಗೆಯನ್ನು ತಮ್ಮ ಕೈಲಾದಮಟ್ಟಿಗೆ ಶ್ರಮಿಸಿ ನೀಡಬೇಕೆಂಬ ಹಂಬಲವುಳ್ಳವರಾಗಿದ್ದಾರೆ.

ತಾವು ವಿದ್ವಾಂಸರಾಗದಿದ್ದರೂ, ವಿಶೇಷಾಧ್ಯಯನಕ್ಕೆ ಅನುಕೂಲಗಳಿಲ್ಲದಿದ್ದರೂ ಇದ್ದಷ್ಟೇ ಸಾಧ್ಯತೆಗಳಲ್ಲಿ ನಿರಂತರ ಪರಿಶ್ರಮದಿಂದ ಕನ್ನಡಕ್ಕೆ ದುಡಿಯುವ ಕನ್ನಡಿಗರು, ನಮ್ಮಲ್ಲಿ ಮತ್ತು ವಿದೇಶಗಳಲ್ಲಿ ಹಲವಾರು ಜನ ಇದ್ದಾರೆ. ಅವರಲ್ಲಿ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರೂ ಒಬ್ಬರು. 'ಎಲ್ಲಾದರೂ ಇರು, ಎಂತಾದರೂ ಇರು, ನೀ ಕನ್ನಡಸೇವೆ ಮಾಡುತ್ತಿರು' ಎಂಬ ಧ್ಯೇಯದ ಕನ್ನಡಿಗರಲ್ಲಿ ಅವರೊಬ್ಬರು.

ಹತ್ತಾರು ವರ್ಷಗಳಿಂದ (1997) ಅಮೆರಿಕೆಯಲ್ಲಿ ನೆಲಸಿರುವ, ಬೆಂಗಳೂರಿನಲ್ಲಿ ಬಾಳಿದ ಕನ್ನಡಿಗರು. ಚಿಕ್ಕಮಗಳೂರಿನ ಬುಕ್ಕಾಂಬುಧಿ ಊರಿನಲ್ಲಿ ಹುಟ್ಟಿ ಬೆಳೆದವರು. ಒಳ್ಳೆಯ ಸಾಹಿತ್ಯಾಭಿರುಚಿ ಉಳ್ಳವರು. ಹಲವು ವರ್ಷಗಳ ಕೆಳಗೆ 'ಬರಹ' ಖ್ಯಾತಿಯ ವಾಸು ಅವರ ತಂದೆಯವರೂ, ಅನಕೃ ಅವರ ಪರಮಭಕ್ತರೂ ಆದ ಕೆ. ಟಿ. ಚಂದ್ರಶೇಖರ್ ಅವರು ಅವರ ಪುಸ್ತಕವೊಂದಕ್ಕೆ ಮುನ್ನುಡಿ ಬರೆಸಲು ನನಗೆ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರ ಪರಿಚಯ ಮಾಡಿಸಿದರು. ಹತ್ತಾರು ವರ್ಷಗಳಿಂದ ಬೆಂಗಳೂರಿನ ಜಯನಗರದಲ್ಲಿ ನಮ್ಮ ಮನೆಯಿಂದ ಇನ್ನೂರಡಿ ದೂರದಲ್ಲಿದ್ದರೂ ಅವರ ಪರಿಚಯ ಇರಲಿಲ್ಲ. ಪಕ್ಕದಮನೆಯಲ್ಲಿದ್ದರೂ ಏನೇನೂ ಪರಿಚಯವಿಲ್ಲದ ಪರಿಸ್ಥಿತಿ ಇಂದು ಬೆಂಗಳೂರಿನಲ್ಲಿದೆ. ನಿಸಾರ್ ಅಹಮದ್, ಕೆ. ಎಸ್. ನರಸಿಂಹಸ್ವಾಮಿ, ಪು. ತಿ. ನ. ಮೊದಲಾದ ಅನೇಕ ಸಾಹಿತಿಗಳು ನಮ್ಮ ಬಡಾವಣೆಯಲ್ಲಿ ಅಕ್ಕಪಕ್ಕದ ರಸ್ತೆಗಳಲ್ಲಿ ಹತ್ತಾರು ವರ್ಷಗಳು ಇದ್ದರೂ

ಸುತ್ತಮುತ್ತಲಿನ ಅನೇಕರಿಗೆ ಗೊತ್ತೇ ಇರಲಿಲ್ಲ. ಅವರ ಮನೆ ಎಲ್ಲಿ? ಎಂದು ಅನೇಕರು ನನ್ನಲ್ಲಿ ಹುಡುಕಿಕೊಂಡು ಬರುತ್ತಿದ್ದರು. ಹೀಗಾಗಿ ಕೃಷ್ಣಮೂರ್ತಿ ಪರಿಚಯ ನನಗಾಗಿರಲಿಲ್ಲ. ಅಂತೂ ಒಟ್ಟಿನಲ್ಲಿ ಕೆ. ಟಿ. ಚಂದ್ರಶೇಖರ್ ಅವರಿಂದ ಪರಿಚಯವಾಯಿತು.

ಪರಿಚಯವಾದ ಮೇಲೆ ಕೃಷ್ಣಮೂರ್ತಿ ಅವರು ತಾವು ಬರೆದ ಹಲವು ಪುಸ್ತಕಗಳನ್ನು, ಪ್ರಕಟಣೆಗೆ ಮೊದಲು ಅಭಿಪ್ರಾಯಕ್ಕೆ, ಪರಿಷ್ಕರಣೆಗೆ ನನಗೆ ತೋರಿಸಿದರು. ಅಮೆರಿಕೆಯಲ್ಲಿ ಇಳಿವಯಸ್ಸಿನಲ್ಲಿ ಹತ್ತಾರು ವರ್ಷಗಳಿಂದ ಇದ್ದರೂ, ಸುಮ್ಮನೆ ಕೂಡದೆ ಕನ್ನಡಗ್ರಂಥ ರಚನೆಯಲ್ಲಿ ನಿರತರಾದುದನ್ನೂ ಅವರ ಕನ್ನಡಾಭಿಮಾನವನ್ನೂ ಕಂಡು ಬೆರಗಾದೆ. ಅವರ ತಂದೆಯನ್ನು ಕುರಿತು ಗ್ರಂಥ ಬರೆದಾಗ ಹೇಳಿದರು "ನಮ್ಮ ಕುಟುಂಬದವರಿಗೆ ನಮ್ಮ ವಂಶದ ಹಿರಿಯರ ಪರಿಚಯವಿಲ್ಲ, ಅವರೆಲ್ಲ ಅದ್ಭುತ ಸಾಧನೆಮಾಡಿದ್ದಾರೆ. ಆದರ್ಶ ಬದುಕಿನಲ್ಲಿ ಬಾಳಿದ್ದಾರೆ. ಅದಕ್ಕಾಗಿ ವೆಂಕಟರಮಣ ಭಾಗವತರನ್ನು (ನಮ್ಮ ತಂದೆ) ಕುರಿತು ಬರೆದೆ. ನಾಳೆ ಮಕ್ಕಳು–ಮೊಮ್ಮಕ್ಕಳಿಗೆ ನಾವು ಎಂಥ ವಂಶದವರು ಎಂಬ ಅಭಿಮಾನವಿರಲಿ ಎಂದು ನನ್ನಾಸೆ ಎಂದರು."

ಈಚೆಗೆ ಅವರು ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬಂದು ಹಸ್ತಪ್ರತಿಯೊಂದನ್ನು ತೋರಿಸಿದರು. ಪ್ರತಿಸಲ ಬೆಂಗಳೂರಿಗೆ ಬಂದಾಗ ಎಲ್ಲಾ ಬಂಧುವರ್ಗವನ್ನು, ಕುಟುಂಬದವರನ್ನು, ಮಿತ್ರರನ್ನು ಭೇಟಿಮಾಡುವುದು, ಯಾವುದಾದರೂ ಪ್ರದೇಶಕ್ಕೆ ಪ್ರವಾಸ ಹೋಗಿ ಬರುವುದು ಅವರ ಹವ್ಯಾಸ. ಜಗತ್ತಿನ ನಾನಾ ಪ್ರದೇಶಗಳನ್ನೂ, ಭಾರತದ ಎಲ್ಲ ಪ್ರದೇಶಗಳನ್ನೂ ಸುತ್ತಿದ್ದಾರೆ. ಪ್ರವಾಸಗ್ರಂಥವೊಂದನ್ನು ಬರೆದಿದ್ದಾರೆ. ಪ್ರತಿಬಾರಿ ಬೆಂಗಳೂರಿಗೆ ಬಂದಾಗ ಯಾವುದಾದರೂ ಸಾಹಿತ್ಯಕೃತಿಯ ಹಸ್ತಪ್ರತಿ ತಂದು, ನೋಡಿಕೊಡಿ; ತಿದ್ದಿಕೊಡಿ; ಅಭಿಪ್ರಾಯಕೊಡಿ; ಎನ್ನುತ್ತಿದ್ದರು. ಈ ಬಾರಿ ಅವರು ತಂದದ್ದು ಸಾಹಿತ್ಯಕೃತಿ ಅಲ್ಲ. ಪದಕೋಶ. ನನಗೆ ಆಶ್ಚರ್ಯವಾಯಿತು. ಅಮೆರಿಕೆಯಲ್ಲಿ ಒಬ್ಬರೇ ಕೂತು ಯಾವುದೇ ತಕ್ಕ ಆಕರಗಳ ಮತ್ತು ಗ್ರಂಥಗಳ ನೆರವೂ ಇಲ್ಲದೆ, ಸ್ವಂತ ಅನುಭವ ಅಭಿಮಾನದಿಂದ, ತಮ್ಮ ಊರಿನ ಜನ ಬಳಸುತ್ತಿದ್ದ ಭಾಷೆಯನ್ನು ಕುರಿತು, ತಮ್ಮ ಕಾಲದ ಆಚರಣೆಗಳನ್ನು ಕುರಿತು, ಹಿರಿಯರ ಪದ್ಧತಿಗಳನ್ನು ಕುರಿತು ರಚಿಸಿದ ಪ್ರಾದೇಶಿಕ – ಸಾಮಾಜಿಕ ಪದಕೋಶ ಕರಡುಪ್ರತಿ ತಂದಿದ್ದರು.

"ನಮ್ಮೂರಿನ ಭಾಷೆಯನ್ನು ಕನ್ನಡವನ್ನು, ನಮ್ಮ ಹಿರಿಯರ ಆಚರಣೆ ಅನುಭವಗಳನ್ನು ಕುರಿತು ನಮ್ಮ ಈಗಿನ ತಲೆಮಾರಿನವರಿಗೆ ಪರಿಚಯವೇ ಇಲ್ಲ. ಅದರಲ್ಲೂ ಯುವಕರಿಗೆ ಏನೇನೂ ಪರಿಚಯವಿಲ್ಲ. ಅದನ್ನು ತಿಳಿಸಬಲ್ಲ ಹಿರಿಯರೂ ಕಡಿಮೆ ಆಗುತ್ತಿದ್ದಾರೆ. ಇನ್ನು ನಮ್ಮ ಆಡುಮಾತಿನಲ್ಲಿ ನಾವು ಬಳಸುತ್ತಿದ್ದ ಅಚ್ಚ ಕನ್ನಡ

ಪದಗಳು, ನುಡಿಗಟ್ಟುಗಳು ಮರೆಯಾಗುತ್ತಿವೆ. ಇವೆಲ್ಲವನ್ನೂ ನನಗೆ ತಿಳಿದಮಟ್ಟಿಗೆ ಒಂದುಕಡೆ ಬರೆದಿಟ್ಟಿರುವ ಗ್ರಂಥವೇ **'ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ'**. ನಾನು ವಿದ್ವಾಂಸನಲ್ಲ, ಪಾಂಡಿತ್ಯವಿಲ್ಲ, ಕನ್ನಡದ ವಿಶೇಷ ಅಧ್ಯಯನ ಮಾಡಿದವನೂ ಅಲ್ಲ. ಕನ್ನಡ ಸೇವೆಯನ್ನು ಕೈಲಾದಷ್ಟು ಮಾಡಬೇಕು, ಎಂಬ ಆಸೆಯಿಂದ ಈಗಿನ ಯುವಜನರಿಗೆ ತಿಳಿಸಬಹುದಾದ ನಮ್ಮ ಹಿರಿಯರ ಜೀವನಸಾಧನೆ, ಅವರ ಕನ್ನಡ ಭಾಷೆಯ ಬಳಕೆಯಲ್ಲಿ ಇದ್ದ ಕನ್ನಡ ಪದ ಬಳಕೆ, ನುಡಿಗಟ್ಟು ಬಳಕೆ, ಭಾಷೆಯ ಸೊಗಸು, ನಮ್ಮ ಸಂಸ್ಕೃತಿ, ಹಬ್ಬಹರಿದಿನಗಳ ಆಚರಣೆ ಇಲ್ಲಿದೆ. ಬುಕ್ಕಾಂಬುಧಿ ಮತ್ತು ಸುತ್ತಮುತ್ತಲ ಜನರ ಬದುಕಿನ ಭಾಷೆ ಇತ್ಯಾದಿ ತಿಳಿಸುವ ಪ್ರಯತ್ನಮಾಡಿದ್ದೇನೆ" ಎಂದು ಗ್ರಂಥವನ್ನೂ ಕೊಟ್ಟರು.

ನಾನು ಪುಟಗಳನ್ನು ತಿರುವಿ ಹಾಕಿದಂತೆಲ್ಲಾ ಬುಕ್ಕಾಂಬುಧಿ ಕೃಷ್ಣಮೂರ್ತಿಗಳ ಕನ್ನಡ ಭಾಷಾ ಪರಿಚಯ, ಅಭಿಮಾನ, ಆಸಕ್ತಿ ಮುಂದಿನ ತಲೆಮಾರಿಗೆ ಕನ್ನಡ ಪದ ಸಂಪತ್ತು, ಊರಿನ ಆಚರಣೆಗಳು, ಜನರ ಜೀವನ ಪರಿಚಯಗಳನ್ನು ತಿಳಿಸಬೇಕೆಂಬ ಹಂಬಲ ಕಂಡು, ಅಮೆರಿಕೆಯಲ್ಲಿ ಕುಳಿತು ಈ ಬಗ್ಗೆ ಒಂಟಿಯಾಗಿ ನಡೆಸಿದ ಪ್ರಯತ್ನಕಂಡು, ಹೆಮ್ಮೆಯಾಯಿತು. ಸಂತೋಷವಾಯಿತು. ಬೆಂಗಳೂರಿನ ಕಾಫ್ಲಿಬೋರ್ಡಿನಲ್ಲಿ ಉದ್ಯೋಗಿಯಾಗಿ ನಿವೃತ್ತರಾದ ಮೇಲೆ ಅಮೆರಿಕೆಯಲ್ಲಿ ಮಗಳ ಮನೆಗೆ ಹೋದವರು ಅಲ್ಲಿಯೇ ನೆಲಸಿದ ಇವರ ಕನ್ನಡ ಕಾಯಕ ಕಂಡಾಗ ಇವರಂತೆಯೇ ಎಲ್ಲಾ ಅಮೆರಿಕಾ ಕನ್ನಡಿಗರೂ ಕನ್ನಡಚಿಂತನೆ ಮಾಡಿದರೆ ಎಷ್ಟು ಚೆನ್ನ ಎನ್ನಿಸಿತು!

ಇವರ ಪದಕೋಶ ಹಸ್ತಪ್ರತಿ ಕಂಡಾಗ ಇದೊಂದು ವಿಶೇಷ ಕೃತಿ ಎನ್ನಿಸಿತು. ಏಕೆಂದರೆ ಕನ್ನಡದಲ್ಲಿ ಹತ್ತಾರು ಬಗೆ ಬಗೆಯ ಪದಕೋಶಗಳಿವೆ ನಿಜ. ಆದರೆ ಸಚಿತ್ರ –ಸೋದಾಹರಣೆಯ ಪ್ರಾದೇಶಿಕ – ಸಾಮಾಜಿಕ ಪದಕೋಶಗಳಿಲ್ಲ. ಚಿಗಟೇರಿ ಶಬ್ದಕೋಶವೊಂದು ನನ್ನ ಗಮನಕ್ಕೆ ಬಂದಿದೆ. ಇನ್ನು ಜಾನಪದಕೋಶಗಳು ಕೆಲವು ಪ್ರಕಟವಾಗಿವೆ. ಅವುಗಳು ನಿರ್ದಿಷ್ಟ ಪ್ರದೇಶದ ಆಚಾರವಿಚಾರಗಳನ್ನು ತಿಳಿಸಲು ಸೀಮಿತವಾಗಿಲ್ಲ. ಇನ್ನು ಕನ್ನಡ ಪದಕೋಶಗಳಲ್ಲಿ ಸಾಂದರ್ಭಿಕವಾಗಿ ಆಡುಮಾತುಗಳು, ಗ್ರಾಮ್ಯಪ್ರಯೋಗಗಳು, ರೂಢಿಯನುಡಿಗಳು, ನುಡಿಗಟ್ಟುಗಳು, ಗಾದೆಗಳು ಉದಾಹರಣೆಯಾಗಿ ಬಂದಿವೆ. ಆದರೆ ಸಮಗ್ರವಾಗಿ, ಪ್ರತ್ಯೇಕವಾಗಿ ಬಂದಿಲ್ಲ. ಅದು ಆ ಪದಕೋಶಗಳ ಉದ್ದೇಶವೂ ಅಲ್ಲ.

ಒಂದು ಪ್ರದೇಶದ ಜನರ ಆಡುಭಾಷೆಯ ಪದಗಳನ್ನೂ, ಆ ಮೂಲಕ ಅಲ್ಲಿಯ ಜನರ ಆಚಾರ, ವಿಚಾರ, ಸಂಪ್ರದಾಯ ನುಡಿಗಟ್ಟುಗಳನ್ನೂ ವಿಶೇಷವಾಗಿ ಮಧ್ಯಮವರ್ಗದವರ (ಬ್ರಾಹ್ಮಣವರ್ಗದವರ) ನಡೆನುಡಿಗಳನ್ನು ತಿಳಿಸುವ ಪ್ರಯತ್ನದ ಸಚಿತ್ರ – ಸೋದಾಹರಣ ಪದವಿವರಣೆಗಳ ಸಾಮಾಜಿಕ ಪದಕೋಶ ಎಂದರೆ ನನಗೆ

ತಿಳಿದಮಟ್ಟಿಗೆ ಕನ್ನಡ–ಇಂಗ್ಲೀಷ್‌ನಲ್ಲಿ ಇದೇ ಮೊದಲನೆಯದು ಎಂದು ಹೇಳಿದರೆ ತಪ್ಪಾಗದು.

ಈ ಪದಕೋಶವನ್ನು ಅಕಾರಾದಿಯಾಗಿ ರಚಿಸಿದೆ. ಪರಿಷತ್ತಿನ ನಿಘಂಟಿನ ಅಕಾರಾದಿಕ್ರಮವನ್ನು ಅನುಸರಿಸಿದೆ. ಏಕೆಂದರೆ ಕನ್ನಡದ ನಿಘಂಟುಗಳಲ್ಲಿ ಹಲವುರೀತಿಯ ಅಕಾರಾದಿಕ್ರಮಗಳನ್ನು ಅನುಸರಿಸಲಾಗಿದೆ. ಉದಾಹರಣೆಗೆ ಅನುಸ್ವಾರ ವಿಸರ್ಗದ ಪದಗಳನ್ನು ಇಲ್ಲಿ ಮೊದಲಿಗೆ ಕೊಟ್ಟರೆ ಕೆಲವು ಕನ್ನಡ ನಿಘಂಟುಗಳಲ್ಲಿ ಸ್ವರಪದಗಳ ಅಕಾರದ ಕೊನೆಯಲ್ಲಿ ಕೊಡಲಾಗಿದೆ.

ಅನುನಾಸಿಕ ವರ್ಣಗಳನ್ನೊಳಗೊಂಡ ಪದರೂಪಗಳು ಕೆಲವು ನಿಘಂಟುಗಳಲ್ಲಿದ್ದರೆ (ನಿಬನ್ಧ ಕಂನಡ ಇತ್ಯಾದಿ) ಸೊನ್ನೆಬಳಕೆ ಅನೇಕ ನಿಘಂಟುಗಳಲ್ಲಿವೆ. ಈ ಬಗ್ಗೆ ಹೆಚ್ಚಿನ ವಿಚಾರಪ್ರಸ್ತಾಪ ಇಲ್ಲಿ ಅನಗತ್ಯ. ಒಟ್ಟಿನಲ್ಲಿ ಪರಿಷತ್ತಿನ ನಿಘಂಟಿನ ಕ್ರಮ ಎಲ್ಲರಿಗೂ ಆದರ್ಶಪ್ರಾಯವಾಗಿದೆ ಎಂದಷ್ಟೇ ಹೇಳಬಹುದು ಮತ್ತು ಶಾಸ್ತ್ರೀಯವಾಗಿದೆ.

ಈ ಪದಕೋಶನಲ್ಲಿ ಬಳಸಿದ ಶಬ್ದಗಳಿಗೆ ಬೇರೆ ಪ್ರದೇಶಗಳಲ್ಲಿ ಬೇರೆ ಶಬ್ದಗಳಿದ್ದರೆ ಅವುಗಳನ್ನು ಸಮಾನಪದಗಳು ಎಂದು ಕೊಟ್ಟಿದೆ. ಉಚ್ಚಾರಣಾ ವ್ಯತ್ಯಾಸದಿಂದ ಪದಗಳನ್ನು ಭಿನ್ನರೂಪಗಳು ಎಂದು ಸೂಚಿಸಿದೆ. ಪದಗಳಲ್ಲಿ ಎಷ್ಟೋ ಪದಗಳಿಗೆ ಬೇರೆ ಬೇರೆ ಅರ್ಥಗಳು, ಆಚರಣೆಗಳು ಇದ್ದರೂ ಇಲ್ಲಿ ಈ ಪ್ರದೇಶದಲ್ಲಿರುವ ಆಚರಣೆ, ಅರ್ಥಗಳನ್ನು ಮಾತ್ರ ಕೊಟ್ಟಿದೆ. ಕನ್ನಡ ಪದಗಳಿಗೆ ಸಮಾನಾರ್ಥಕ ಇಂಗ್ಲಿಷ್ ಪದಗಳು ಸಿಗದಿದ್ದಾಗ ಕನ್ನಡ ಪದವನ್ನೇ ಇಂಗ್ಲಿಷ್ ಲಿಪಿಯಲ್ಲಿ ಕೊಟ್ಟಿದೆ ಮತ್ತು ಇಂಗ್ಲಿಷ್ ಸಮಾನಾರ್ಥಕ ಪದ ಇಲ್ಲವೆಂಬುದನ್ನು (–) ಸಂಕೇತದೊಡನೆ ಸೂಚಿಸಿದೆ.

ಓದುಗರ ಅನುಕೂಲಕ್ಕಾಗಿ ಪ್ರಾರಂಭದಲ್ಲಿ ಅಕಾರಾದಿಪದಪಟ್ಟಿ ಮತ್ತು ಪದಸಂಖ್ಯೆ ಕೊಟ್ಟಿದೆ. ಪದದ ಉಲ್ಲೇಖಕ್ಕೆ ಮತ್ತು ಪದ ಗುರುತಿಸಲು ಈ ಸಂಖ್ಯೆ ನೆರವಾಗುತ್ತದೆ. ಅನೇಕ ವಸ್ತುಗಳು ದಿನಬಳಕೆಯಲ್ಲಿ ಈಗ ಕಣ್ಮರೆಯಾಗಿವೆ: ರಾಗಿಕಲ್ಲು, ಗಾಣ, ನೀರೆತ್ತುವ ಏತ, ಒತ್ತುಸೇವಿಗೆಯಂತ್ರ ಇತ್ಯಾದಿ. ಇಂತಹವನ್ನು ಅರ್ಥಮಾಡಿಕೊಳ್ಳಲು ನೂರಾರು ಚಿತ್ರಗಳನ್ನು ಸೇರಿಸಿ ಈ ಪದಕೋಶವನ್ನು ಸಚಿತ್ರಗೊಳಿಸಲಾಗಿದೆ.

ಪ್ರತಿಪದಕ್ಕೂ ಉದಾಹರಣೆ ವಾಕ್ಯಗಳನ್ನು ಕೊಡುವುದರ ಮೂಲಕ ಅರ್ಥವನ್ನು ಅಧಿಕೃತಗೊಳಿಸಲಾಗಿದೆ. ಅನೇಕ ಆಚರಣೆಗಳ ವಿವರಣೆಗಳಲ್ಲಿ ಅನೇಕರಿಗೆ ಭೇದ ಕಾಣಬಹುದು. ಭಿನ್ನ ಆಚರಣೆ ಕಾಣಬಹುದು. ಉದಾಹರಣೆಗೆ ಮದುವೆಯ ಶಾಸ್ತ್ರದ ಆಚರಣೆಗಳು ಬುಕ್ಕಾಂಬುಧಿಯಲ್ಲಿಯೇ ಬೇರೆ. ಬೇರೆ

ಮತಸ್ಥರಲ್ಲಿ, ಕುಲದವರಲ್ಲಿ ಬೇರೆಬೇರೆ ರೀತಿ ಇದೆ. ಇಲ್ಲಿ ವಿಶೇಷವಾಗಿ ಮಧ್ಯಮವರ್ಗದ ಬ್ರಾಹ್ಮಣರಲ್ಲಿ ಕಂಡುಬರುವ ಆಚರಣೆಗಳನ್ನು ಅನುಭವದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಸ್ಥಳೀಯ ಆಚರಣೆಗಳ ಕೋಶ ಇದಾಗಿದೆ. ಇತರ ಪ್ರದೇಶಗಳ ಆಚಾರ ವಿಚಾರಗಳ ಅಧ್ಯಯನ ಮಾಡುವ ಸಾಮಾಜಿಕ ಶಾಸ್ತ್ರದ ಅಧ್ಯಯನಕಾರರಿಗೆ ಈ ವಿವರಗಳು ಉಪಯುಕ್ತವಾಗಿವೆ.

ಈ ಪ್ರಯತ್ನವನ್ನು ಪರಿಪುಷ್ಟಿಗೊಳಿಸಲು ಬುಕ್ಕಾಂಬುಧಿಯ ವಿವಿಧ ವರ್ಗಗಳ, ವೃತ್ತಿಗಳ ಜನರು, ಶಾಸ್ತ್ರಜ್ಞರು, ವಿದ್ವಾಂಸರು ಈ ಪದಕೋಶವನ್ನು ನೋಡಿ, ಸಲಹೆ ಸೂಚನೆಗಳನ್ನು ನೀಡಬೇಕು ಎಂದು ಬಿನ್ನವಿಸಿಕೊಳ್ಳುತ್ತೇನೆ.

ಬೆಂಗಳೂರು
8–1–2025

ಪ್ರೊ. ಜಿ. ಅಶ್ವತ್ಥನಾರಾಯಣ
ಸಹ ಸಂಪಾದಕರು

95, 34 ಬಿ ಕ್ರಾಸ್, 16ನೇ ಮೈನ್
4 ಟಿ ಬ್ಲಾಕ್, ಜಯನಗರ
ಬೆಂಗಳೂರು–560041
ದೂ: 080–26637783

Bukkambudhi Pradeshika Padakosha

Kannada-English

A Book of Regional Kannada Vocabulary of Bukkambudhi

(With English Translation illustrations - Examples and Social Explanations)

Before we begin…

We are talking about a period between 1935 and 1940. It was the pre-Independence period, a period of British rule and the Royal Kings of old Mysore. All economic transactions were in Rupees, Ane and Kasu. Even this currency was very rare in villages. Each family grew many of the groceries required for the day-to-day sustenance in their dry/wet lands. Their requirements were also very minimal, and each one was busy in his own daily routine. It was a life of exchanges but with high satisfaction. Thus, there were few items which have to be bought by paying money. As I remember in our village - Bukkambudhi - Tarikere Taluk, Chikmagalur District, Karnataka State - only Ragi or Rice was being given in exchange while purchasing Betal leaf, sewing needle, thread etc. The coins under currency were Kasu, Three Kasu (of copper), four Kasu, one Ana, Two Anas (of Nickel), Four Anas (of Nickel and Silver), Eight Anas, Silver Rupee etc. Four Anas was also called 'Pavali'. Four Kasu was called a 'Duddu'.

Measuring vessels like Chataku, Half Pavu, Pavu, Achheru and Seru were used for measuring Rice, Ragi etc. by volume. For measurement bigger than Seru, they used Balla (equivalent to 8 Serus) or 'Kolaga'. The Measurement 'Palla' was for 100 Serus and 'Khanduga' was for 300 Serus.

The words 'Chotu', 'Genu', 'Mola' and 'Maru' were used for measuring the cloth. Generally common man used to sew his own clothes by hand. Now, we have many sewing machines to stitch the clothes. 'Meter' was being used for the measurement of length.

To weigh Jaggery and other items, weighing stones called 'Tookada Battu', made of Iron, was used. They were in the categories of 'Seru', 'Savvaseru', 'Adiseru', 'Veese', 'Pancheru', 'Dhadiya', 'Mana' etc. Now we have Kilogram (Kg), Pound etc., in their place; Centimeter, Meter and Kilometer are being used for the measurement of distance.

In those days, there were no clocks to tell about the time. Our grandma used to tell us the time approximately by referring to the shadows. They used to stand facing the sun and judge the time by the length of the shadows. It used to be 12 Noon when the sun is directly above our head, and approximately 6 P.M. while the sun is setting. Now even the children have watches in their hands, in various designs and colours. There were times when huge stone pillars were built to erect clocks in large cities like Bangalore and Mysore.

I wanted to recapitulate and remember the words which were being used in our village – Bukkambudhi – and hence I went on writing down those words, as and when I could remember. There are names of many items and customs which are not known to our children. In this situation, there is a possibility of our grandchildren and great grandchildren mistaking these words as to be that of an animal or a place!!

I have collected, recorded and presented here some of the words used in Bukkambudhi and its surrounding areas, in the same exact form or in the form currently being used and from 'Janapada Kosha' to the best of my knowledge. I would like to thank them with gratitude.

The complete material collected by me was shown to my dear friend Prof. Aswathnarayana. After studying it, he told me – “This is a commendable work. There are many types of dictionaries published in Kannada. But except the one – 'Chigateri dictionary' I have not come across any dictionary specially for the local regional words. In the published

Kannada dictionaries, colloquial and regional words, meanings etc., are found occasionally. But there is no exclusive dictionary for the same. Your's is the special only Kannada Regional dictionary. Being settled in USA and at this diminishing age of 99 years, your courageous attempt in the field is really exemplary and highly encouraging the others". Not stopping at this, he has worked hard and joined hands with me as a Co-editor in this work, thus supporting its success. I am grateful to him for this hard work, service, friendship and encouragement.

Smt. Swathi Vivek, a computer expert, has collected many pictures from Google and has adopted here. Smt. Padma and Sri Ananth Hegde have co-operated while incorporating many corrections. I thank them for this kind gesture.

While preparing this **Bukkambudhi Pradeshika Padakosha**-Kannada-English, I have used the following dictionaries as and when required. I am grateful to the editors of all these dictionaries.

Kannada Janapada Kosha: Karnataka Janapada Parishath, No.7, 5th Rd. IV Block, Kumara park West, Bangalore 560 020

Sankshipta Kannada Nighantu: Kannada Sahitya Parishath (2010) Chamarajpet, Bangalore 560 020

Kannada Ratnakosha Sahitya Parishath: Kannada (2001), Chamarajpet, Bangalore 560 020

Janapada Kosha: Editor – H. Nanjegowda, (2002), Kannada Professor (Retd), Saraswathi Nivasa, Harohalli, Pandavapura

Chigateri Padakosha: Editor – Mudenuru Sanganna (1997), MGM College, Udupi

In the customs and traditions of many of the artisans of our village there are many words related with Dharmic customs and rituals. To the best of my ability, I have collected and presented many words which were used in and around our village, during their day-to-day activities, in their life style and customs, including relevant explanations.

I thank Mr. Sheshadrivasu for helping me to write in Kannada through his baraha software.

I request the learned, philologists and the different artisans and elders of our village to bring to my notice any mistakes/misrepresentations in my book regarding the details, customs and traditions. I will adopt these corrections, gratefully, in the coming editions of this work. I hope and believe that all like-minded, learned people will help me in this work.

I request the esteemed readers of this dictionary to convey their opinions to the following address of the Editor.

Bangalore
08-01-2025

Bukkambudhi Krishnamurthy
Editor

Krishna Murthy 200 Middlesex
Essex Tpke, Suite 103, Iselin
NJ 08830, USA
Ph.: +1 732-986-7041

About the Compilation of Kosha

Books like Storys, Novel, Poems, Drama, Criticisms etc. are being published in large number in Kannada. Though books dictionary, Metrics, Grammar, Alankara Shastra, Science, arts and languages are also being published, their numbers are meager considering the requirements and developments in Kannada. Books of the kind are the result of deep learning and take many years of continuous, dedicated activity and study. Such learned people are very few, in general. This is more because the reading habits have grown far more than the writings. The present day writers are more interested in instant-fame and Names. Those learned writers who, without any great expectations, want to serve the cause of Kannada with their exceptional works can be numbered on fingers – their numbers are very bleak. Though they may not be counted as "Learned" and they may not be having the necessary infrastructure to conduct the exceptional studies, they still work continuously, both within our country and from abroad also. Bukkambudhi Krishnamurthy is one such person. He is one of those Kannadigas whose noble goal is "Wherever you stay, whatever you do, whatever may be your status, be always serving the Kannada literature."

Sri Krishnamurthy lived in Bangalore and is now settled in USA since 1997; He took birth in Bukkambudhi, Chikmagalur District and has a deep love for good literature. Few years back Sri K. T. Chandrashekhar who is a great admirer of A.na.Kru, whose son is Sri Sheshadrivasu of "Baraha" fame introduced Sri Bukkambudhi Krishnamurthy, for writing a preface for some book. Though Krishnamurthy stayed just 200 ft. away from my house in Jayanagar for tens of years, I had never known him at all. Such is the condition in Bangalore that we may not know our own neighbours.

Even great writers like K. S. Narasimhaswamy, Pu.ti.na, Nissar Ahmed, who stayed for years around us, nobody knew them as such! In such situations, I had not met Sri Krishnamurthy so far.

Once introduced, Sri Krishnamurthy showed me some of his books, before publication, for suggestions and improvements. Even though he is staying for the few decades, at the dusk portion of his life, in America, he did not keep quiet. he started writing books in Kannada. I was totally impressed by his love for Kannada language. When he wrote a book on his father, he said: "Our family does not know anything about our family lineage. Our elders have achieved great tasks and lived a life that was example to others; Therefore I wrote about my father – Sri Venkataramana Bhagavatha. I wish the future generation will feel proud about their lineage".

Recently when he came to Bangalore he came to our house and showed me a written manuscript. Whenever he comes to Bangalore he makes it a point to meet all his relatives and friends and arranges trips to some place or other. He has visited many countries in the world and he has travelled all through India. He has written a Travelogue also. During every visit to Bangalore, he will give me some manuscript or other for my reading, opinion and corrections etc. What he brought during his present visit was not a literary book. It was a Padakosha!! I was surprised to the core. Sitting alone in America, without the help of any source books etc., just with his own self interest and love for the place, he has completed this Padakosha. This work is about the various words used in and around his village, the traditions and the habits of his forefathers. It is a Padakosha of Regional and social words of his village. He told me, "the present generation does not have any knowledge about our forefathers, their customs and traditions and their

experiences. Even the youngsters do not have this basic knowledge at all! Those elders who were knowledgeable about these things are fast dwindling! Even the original Kannada words and proverbs, sayings etc., which we were using are also vanishing. To put down and record all these, to the best of my knowledge, is the very purpose of this Bukkambudhi Kosha. I am not a learned man, not a professor, neither have I done deep extra studies on Kannada. I wish to serve the purpose of Kannada with this intension this book tries to inform that educate the youth about the achievements of our forefathers, the Kannada words used by them, the proverbs and Sayings often quoted by them, the beauty of the language, our culture, details of Festivals and Fairs etc. which were being used in and around Bukkambudhi."

As I started perusing the book I felt deep pride, appreciation and happiness of Sri Krishnamurthy for his great effort in recording the words / rituals / habits / proverbs of his forefathers, even though he was sitting alone in USA. Sri Krishnamurthy had retired from the Coffee Board in Bangalore and went to join his daughter in USA and stayed for good. Seeing his works in Kannada, I felt it would have been wonderful if all other Kannadigas in USA had thought about Kannada like Sri Krishnamurthy.

On seeing the manuscript of this Padakosha, I felt it is an extraordinary one. No doubt there are many varieties of Padakosha in Kannada. But there are no Regional Social Padakoshas with illustrations, examples and pictures, except that of Chigateri. There are some Janapada Koshas, but they do not deal with a particular region and its practices. In the regular Kannada Padakosha there are occasional colloquial words, Sayings and proverbs, purely as an example. But they do not deal in totality and Regionally. Of course, this is not the purpose of such dictionaries. To the best of my

knowledge, this is the special ever Regional Social Padakosha dealing with the local people of a particular region, their practices, rituals, fairs and festivals, words, proverbs and sayings – along with relevant pictures and examples.

This Padakosha is in the alphabetical order. It follows the alphabetical order of the dictionaries of Parishat. There are many different alphabetical orders followed in Kannada dictionaries. For eg: Words ending in Anuswara are listed in the beginning of some dictionaries, while some list the same at the end of the Swarapadas.

Some dictionaries list words having nasal consonants (Anunasika varna) while some use Sonne (o) in usages like Nibandha, Anga, Kannada etc. Additional discussion regarding this may not be relevant here. Ultimately the practices and usages adopted in the dictionaries of Parishat is the benchmark for all others to follow, as it is equally scholastic also.

The present Padakosha has some directions for usage. Words where '**Nodi'** is attached indicates that the words with equivalent meaning are in usage elsewhere. When there are some other words used in other regions for the ones listed here, they have been shown as 'Samana padagalu'. If the words have different soundings they are listed as 'Bhinna Roopagalu'. There could be many words where the meanings and practices may be different in other regions; But only words related to Bukkambudhi area are only listed here.

For the convenience of readers an Alphabetical order and a number have been given to each of the words. This helps in searching and locating the words. There are many items which have ceased to exist in the present day usage; Ex: Ragi kallu, Gana, Neerettuva Eta, Ottusevige etc. To make their matter more clear, hundreds of pictures have been included in

this illustrated Padakosha. Every word is authenticated by giving a relevant exemplifying sentences. There could be differences in the customs and traditions and their explanations. Practices may vary a lot. For eg: The traditional marriage procedures of Bukkambudhi itself may vary from caste to caste and philosophies. In the present Padakosha the traditions and practices of Brahmins of Middle strata have been explained based on the experiences. This is particularly a Padakosha of Regional practices only. These details may be useful to those researching on the social customs and traditions of other regions.

To support this great cause I hope that the people of other categories / professionals / artisans will go through this Padakosha and offer more opinions / additions / corrections for a better future Padakosha.

Bangalore
8-1-2025

Prof. G. Ashwathnarayana
Co-Editor

No. 95, 34th B Cross
16th Main, 4 T Block
Jayanagara, Bangalore - 560 041
Ph: 080-26637783

ಪ್ರಕಾಶಕರ ಮಾತು

ಸುಹಾಸ್ ಗ್ರಾಫಿಕ್ಸ್ ಬೆಂಗಳೂರು ನಮ್ಮ ಈ ಸಂಸ್ಥೆ ಎರಡು ದಶಕಗಳಿಂದ ಮುದ್ರಣ ಮತ್ತು ಪ್ರಕಟಣಾ ಸೇವೆಗಳನ್ನು ಮಾಡುತ್ತಾ ಬಂದಿರುತ್ತೇವೆ. ಇತಿಹಾಸ, ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಮಹತ್ತರ ಕೃತಿಗಳನ್ನು ಪ್ರಕಾಶನ ಹಾಗೂ ಮಾರಾಟ ಮಾಡುತ್ತಿರುತ್ತೇವೆ. ಬುಕ್ಕಾಂಬುದಿ ಪ್ರಾದೇಶಿಕ ಪದಕೋಶ ಕೃತಿ ಪ್ರಕಟಿಸಲು ನಮಗೆ ಬಹಳ ಸಂತೋಷ ಮತ್ತು ಸಂಭ್ರಮವನ್ನು ತಂದಿದೆ. ಈ ಕೃತಿಯನ್ನು ನಮ್ಮ ಪ್ರೀತಿ ಪಾತ್ರರಾದ, ಶತಾಯುಷಿಗಳಾದ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರು ಬಹಳ ಶ್ರಮವಹಿಸಿ ಸಂಪಾದಿಸಿರುತ್ತಾರೆ. ಅಮೇರಿಕ ದೇಶದಲ್ಲಿ ವಾಸವಾಗಿ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಹೊಂದಿದ್ದಾರೆ. ತಮ್ಮ ಕಾಲದ ಪದಗಳು, ವಸ್ತುಗಳು, ಸಂಪ್ರದಾಯಗಳ ಸಾರವನ್ನು ಸಮಗ್ರವಾಗಿ ಸಂಗ್ರಹಿಸಿ ಬರೆದಿದ್ದಾರೆ. ಅದು ಅಲ್ಲದೆ ಅವರೇ ಇಂಗ್ಲಿಷ್ ಭಾಷೆಗೂ ಸಹ ಅನುವಾದ ಮಾಡಿದ್ದಾರೆ. ಆಧುನಿಕ ಕಾಲದ ಇಂಗ್ಲಿಷ್ ಕಲಿತವರಿಗೂ, ಅನ್ಯ ಭಾಷಿಕರಿಗೂ ಯುವಕರಿಗೂ ಅರ್ಥವಾಗಲಿ ಎಂಬ ಅಭಿಲಾಷೆಯಿಂದ ಇಂತಹ ಅವಶ್ಯಕ ಕೃತಿಯನ್ನು ಪ್ರಕಟಿಸಲು ನಮ್ಮ ಸಂಸ್ಥೆಗೆ ಹೆಮ್ಮೆಯೆನಿಸುತ್ತದೆ. ಪ್ರಕಟಿಸಲು ಅನುವು ಮಾಡಿಕೊಟ್ಟ ಹಿರಿಯರಿಗೆ ನಮ್ಮ ಅನಂತ ನಮಸ್ಕಾರಗಳು.

ಮೇಲುಕೋಟೆ ಎನ್. ಮುರಳೀಧರ್
ಸುಹಾಸ್ ಗ್ರಾಫಿಕ್ಸ್

Publisher Note

Suhas Graphics, Bangalore has been in printing and publishing services for more than two decades. We publish and sell great works that are related to history, art, architecture and culture. It has brought us great joy and excitement to publish the Bukkambudhi Regional Dictionary. This work has been compiled with great effort by our beloved, centenarian Shri Bukkambudhi Krishnamurthy.

He lives in the United States and has a great love for the Kannada language. He has comprehensively collected and written the essence of the words, objects and traditions of his time. He has also translated it into English. Our company is proud to publish such a necessary work with the desire that it will be understandable to modern English learners and the youth. Our endless salutations to the elders who made it possible for us to publish it.

Melukote N. Muralidhar
Suhaas Graphics

ಲಿಪ್ಯಂತರ ಪಟ್ಟಿ (ಕನ್ನಡ – ಇಂಗ್ಲೀಷ್)
Transliteration chart Kannada – English

ಸ್ವರಗಳು (*Vovels*)

ಅ	a	ಅಜ – aja
ಆ	aa	ಆಟ – aaTa
ಇ	I	ಇಲಿ – ili
ಈ	ii	ಈಗ – iiga
ಉ	u	ಉರ – ura
ಊ	uu	ಊಟ – uuTa
ಋ	Ru	ಋಣ – RuNa
ಎ	e	ಎಡ – eDa
ಏ	ee	ಏತ – eeta
ಐ	ei	ಐದಳ – eidaLa
ಒ	o	ಒಣಮರ – oNamara
ಓ	oo	ಓಟ – ooTa
ಔ	ou	ಔಷಧ – ousHadha
ಅಂ	am	ಅಂಬ – aMba
ಅಃ	aH	ಅಂತಃಕರಣ – antaHKaraNa

ವರ್ಗೀಯ ವ್ಯಂಜನಗಳು (Classified Consonants)

ಕ	Ka	ಕರ – Kara
ಖ	Kha	ಖಳ – KhaLa
ಗ	ga	ಗಣ – gaNa
ಘ	gha	ಘಟ – ghaTa
ಙ	n	ಲಙ್ಕ (ಲಂಕ) – Lanka
ಚ	ca	ಚಮಚ – camaca
ಛ	cha	ಛಲ – chala
ಜ	Ja	ಜನ – jana
ಝ	Jha	ಝಷ – JhasHa
ಞ	n	ಜ್ಞಾನ – gNaana
ಟ	Ta	ಆಟ – aaTa
ಠ	Tha	ಮಠ – maTha
ಡ	Da	ದಡ – daDa
ಢ	Dha	ಢಗೆ – Dhage
ಣ	Na	ಮಣ – maNa
ತ	ta	ತಲೆ – tale
ಥ	tha	ರಥ – ratha
ದ	da	ದನ – dana
ಧ	dha	ಧನ – dhana
ನ	na	ನರ – nara
ಪ	pa	ಪಟ – paTa
ಫ	pha	ಫಲ – phala
ಬ	ba	ಬಳಪ – BaLaPa
ಭ	bha	ಭಯ – Bhaya
ಮ	ma	ಮರ – mara

ಅವರ್ಗೀಯಾಕ್ಷರಗಳು (Non-Classified Consonants)

ಯ	ya	ಯಮ – yama
ರ	ra	ರಸ – rasa
ಲ	la	ಲವಣ – lavaNa
ವ	va	ವರ – Vara
ಶ	Sha	ಶಂಕರ – Shankara
ಷ	SHa	ಷರಾ – sHaraa
ಸ	sa	ಸರ – Sara
ಹ	ha	ಹರ – hara
ಳ	La	ನಳ – naLa
ಜ್ಞ	Jna	ಅಜ್ಞ – ajna

ಕಾಗುಣಿತ

ಕ	ka	ಕರಗ	karaga
ಕಾ	kaa	ಕಾಗದ	kaagada
ಕಿ	ki	ಕಿರಣ	kiraNa
ಕೀ	kii	ಕೀಟ	kiiTa
ಕು	ku	ಕುರಿ	kuri
ಕೂ	kuu	ಕೂಟ	kuuTa
ಕೃ	kRu	ಕೃಷ್ಣ	krushna
ಕೆ	ke	ಕೆಲಸ	kelasa
ಕೇ	kee	ಕೇಡು	keeDu
ಕೈ	kei	ಕೈಕೆ	keike
ಕೊ	ko	ಕೊಡ	koDa
ಕೋ	koo	ಕೋತಿ	kooTi
ಕೌ	kou	ಕೌರವ	kourava
ಕಂ	kam	ಕಂದ	kanDa
ಕಃ	kHa	ಕಃಕಃ	KhaKha

ಪದಪಟ್ಟಿ

ಅ

1. ಅಂಕಣ / ankaNa - 01
2. ಅಂಕಪರದೆ / ankaparade - 01
3. ಅಂಗತ್ತು / angattu - 02
4. ಅಂಗಡಿ / angaDi - 02
5. ಅಂಗಲಾಚು / angalaacu - 03
6. ಅಂಗಳ / angaLa - 03
7. ಅಂಗವಸ್ತ್ರ / ChooTapanche - 03
8. ಅಂಗುಷ್ಠ / angusHTha - 03
9. ಅಂತರಗಟ್ಟೆಯಮ್ಮನ ಜಾತ್ರೆ / antaragaTTeyammana Jaathre - 04
10. ಅಂತರಗಾಯಿ / antharagaayi - 04
11. ಅಂತರ್ಪ / antarpa - 05
12. ಅಂತೆಕಂತೆ / anthekanthe - 06
13. ಅಂಚೆಕಚೇರಿ / ancekacheeri - 06
14. ಅಂಜನ ಹಾಕುವುದು / Anjanahaakuvudu - 07
15. ಅಂಟಿನುಂಡೆ / anTinunDe - 07
16. ಅಂಟು / anTu - 08
17. ಅಂಟುವಾಳ / anTuvaaLa - 08
18. ಅಂತಸ್ತು / anthasthu - 09
19 ಅಂದಾಜು / andaaju - 09
20. ಅಂಡೆ / anDe - 09
21. ಅಂಬಲಿ / aMbali - 10
22. ಅಂಬಲಿಹುಯ್ಯುವುದು / aMbalihuyyuvudu - 10
23. ಅಂಬು ಹೊಡೆಯುವುದು / ambuhoDeyuvudu - 11
24. ಅಕ್ಕಸಾಲೆ / akkasaale - 11
25. ಅಕ್ಷತೆಕಾಳು / akshatekalu - 12
26. ಅಕ್ಕೀತರಿ / akkitari - 12
27. ಅಕ್ಕೀಪಡಿ / akkipadi - 13
28. ಅಕ್ಕೀರೊಟ್ಟಿ / ricerotti - 13
29. ಅಗತೆ / agathe - 13
30. ಅಗಸ / agasa - 14
31. ಅಗಳಿ / agali - 14
32. ಅಗ್ಗ / agga - 15
33. ಅಗ್ರಹಾರ / agrahaara - 16
34. ಅಗ್ನಿಕುಂಡ / agnikunDa - 16
35. ಅಗ್ರೋದಕ / agroodaka - 16
36. ಅತಿಥಿ / atithi - 17
37. ಅಚ್ಚೆಳ್ಳೆಣ್ಣೆ / acchelleNNe - 17
38. ಅಜ್ಜಿಪುರಾಣ/ ajjipuraaNa - 18
39. ಅಚ್ಚುಬೆಲ್ಲ / accubella - 18
40. ಅಟ್ಟ / aTTa - 19
41. ಅಟ್ಟಕ್ಕೇರಿಸುವುದು / aTTakkeerisuvudu - 19
42. ಅಟ್ಟಣೆ / aTTaNe - 19
43. ಅಟ್ಟುಗುಣಿ / aTTuguNi - 20
44. ಅಡಕೆಮಣೆ / aDakemaNe - 21
45. ಅಡಕೆಮರ / aDakemara - 22
46. ಅಡಕೆಪಟ್ಟೆ / aDakepaTTe - 23
47. ಅಡಾವುಡಿ / aDaavudi - 23
48. ಅಡಿಗಲ್ಲು / aDigallu - 24
49. ಅಡಿಪಾಯ / aDipaaya - 24
50. ಅಡೆಹಾಕು / aDehaaku - 24
51. ಅಡ್ಡಗಟ್ಟು / aDDagaTTu - 25
52. ಅಡ್ಡಗಾಲು ಹಾಕು / aDDagaalu haaku - 26
53. ಅಡ್ಡಗೋಡೆ / aDDagooDe - 26
54. ಅಡ್ಡದಾರಿ / aDDadaari - 27

55. ಅಡ್ಡಬೀಳುವುದು / aDDabiiLuvudu - 27
56. ಅಡ್ಡ ಮಳೆ / aDDa maLe - 27
57. ಅಡ್ಡವಾಸನೆ / aDDa vaasane - 28
58. ಅಡ್ಡಹೆಸರು / aDDahesaru - 28
59. ಅಡ್ಡಾದಿಡ್ಡಿ / aDDadiDDi - 29
60. ಅಡ್ಡೆ / aDDe - 29
61. ಅಡ್ಡೆಯವರು / aDDeyavaru - 29
62. ಅಣಸು / aNasu - 30
63 ಅಣ್ಣ / aNNa - 30
64. ಅನ್ನಪ್ರಾಶನ / annaprashana - 30
65. ಅಪರೂಪ / aparuupa - 31
66. ಅಪಾಪೋಲಿ / apaapooli - 31
67. ಅಬ್ಬೇಪ್ಯಾರಿ / abbepyaari - 31
68. ಅಭ್ಯಂಗನ / abhyangana - 32
69. ಅಭಿಷೇಕ / abhisheeka - 32
70. ಅಮಲೇರು / amaleeru - 32
71. ಅಮಾನತ್ತು / amaanatthu - 33
72. ಅಯ್ಯ / ayya - 33
73. ಅರಕಲಚೆಟ್ಟಿ / arakalachetti - 33
74. ಅರನೆಲ್ಲಿಕಾಯಿ / aranellikayi - 34
75. ಅರ್ಘ್ಯಪಾತ್ರೆ / arghyapaathre - 34
76. ಅರಚು / arachu - 35
77. ಅರವಟ್ಟಿಗೆ / aravaTTige - 35
78. ಅಯ್‌ನೆಲ್ಲು / aynellu - 36
79. ಅಯೋಗ್ಯ / ayoogya - 36
80. ಅರಗು / aragu - 36
81. ಅರಳಿಕಟ್ಟೆ / araLikaTTe - 37
82. ಅರಳು / araLu - 38
83. ಅರೆಕಲ್ಲು / arekallu - 38
84. ಅರೆಮರುಳು / aremaruLu - 39
85. ಅರೆವಾಶಿ / arevashi - 39
86. ಅಲಮಾರು / alamaaru - 39
87. ಅಲಾಯಿದ / alaayida - 40
88. ಅಲಾಲ್‌ಟೋಪಿ / alaalToopi - 40
89. ಅಲೆಚಾಟಲು / alechaaTalu - 40
90. ಅವಳಿಜವಳಿ / avaLiJavaLi - 41
91. ಅವಿಭಕ್ತ ಕುಟುಂಬ / avibhaktakuTumba - 41
92. ಅಳತೆಗಳು / aLathegaLu - 42
93. ಅಳುಗುಳಿಮಣೆ / aLuguLimaNe - 43
94. ಅಳುಮುಂಜಿ / aLumunji - 43

ಆ

95. ಆಬಾದು / aabaadu - 44
96. ಆಚಾರಿ / aachaari - 44
97. ಆಜುಬಾಜು / aajubaaju - 45
98. ಆನೆಕಟ್ಟಾಟ / aanekaTTaaTa - 45
99. ಆಪಾಟಿ / aapaaTi - 46
100. ಆಮ್ಯಾಕೆ / aamyaake - 46
101. ಆಣಿ / aaNi - 46
102. ಆರಂಬ / aaramba - 47
103. ಆರಾಧನೆ / aaraadhane - 47
104. ಆಲದೆಲೆ / aaladele - 47
105. ಆಲೆಮನೆ / aalemane - 48
106. ಆವರಿಕೆ / aavarike - 48
107. ಆವಿಗೆ / aavige - 49
108. ಆಸುಪಾಸು / aasupaasu - 49
109. ಆಸಿಗ್ಗೆಬ್ಯಾಸಿಗ್ಗೆ / aasiggebyasigge - 49

ಇ

110. ಇಕ್ಕಳ / ikkaLa - 50
111. ಇಡುಗಾಯಿ / iDugaayi - 50

112. ಇತ್ತಂಡ / itthanDa - 51
113. ಇಚಾರಮಾಡು / ichaaramaaDu - 52
114. ಇಬ್ಬೆ / ibbe - 52
115. ಇರಚಲುಮಳೆ / iracalumaLe - 52
116. ಇರಸಾಲು / irasaalu - 53
117. ಇರುಸುಮುರುಸು / irasumurasu - 53
118. ಇಲ್ಲೀಗಂಟ / illiiganTa - 53
119. ಇಳಕಲು / iLakalu - 54
120. ಇಳಿವು / iLivu - 54
121. ಇಳಿಮೇಜು / ilimeeju - 54

ಈ

122. ಈಬೂತಿ / iibuuti - 55
123. ಈಳಿಗೆಮಣೆ / iiLigemaNe - 55

ಉ

124. ಉಂಬಳಿ / umbali - 56
125. ಉಕ್ಕಡ / ukkaDa - 56
126. ಉಚ್ಚಿಕೊಳ್ಳುವುದು / ucchikolluvudu - 57
127. ಉತ್ತರೀಯ / utthareeya - 57
128. ಉದಾರ / udaara - 57
129. ಉಡಾಯಿಸು / uDaayisu - 58
130. ಉಪನಯನ / upanayana - 58
131. ಉರುಳುಸೇವೆ / uruLuseeve - 59
132. ಉಂಡಾಡಿ / unDaaDi - 60
133. ಉಂಡಿಗೆ / unDige - 60
134. ಉಕ್ಕೆ / ukke - 61
135. ಉಗ್ರಾಣ / ugraaNa - 61
136. ಉಜಾಡು / ujaaDu - 62
137. ಉಜ್ಜುಬೆಲ್ಲ / ujjubella - 62
138. ಉಜ್ಜುಗೊರಡು / ujjugoraDu - 63
139. ಉಡುದಾರ / uDudaara - 63
140. ಉಣ್ಣೆ / uNNe - 64
141. ಉದ್ಧರಣೆ / uddharaNe - 64
142. ಉಪಾಕರ್ಮ / upaakarma - 65
143. ಉಪಾಹಾರ / upaahaara - 65
144. ಉಪ್ಪಿನಾನೆಆಟ / uppinaaneaaTa - 66
145. ಉಯ್ಯಾಲೆ / uyyaale - 66
146. ಉರುಟಣೆ ಶಾಸ್ತ್ರ / uruTaneshaasthra - 67
147. ಉಸುಬು / usubu - 68

ಊ

148. ಊದುಕೊಳವೆ / oodugoLave - 69
149. ಊಟಕ್ಕೆ ಕರೆಯುವುದು / ooTakkekareyuvudu - 69
150. ಊರಿನ ಕಲಾವಿದರು / oorina kalaavidaru - 72

ಋ

151. ಋಣಾನುಬಂಧ / ruNaanubandha - 73

ಎ

152. ಎಕ್ಕಹುಟ್ಟಿಸು / ekkahuTTisu - 73
153. ಎದುರಕ್ಕಿ / edurakki - 73
154. ಎಡೆ ಮಾಡು / eDemaaDu - 74
155. ಎಡಬಿಡಂಗಿ / eDabiDangi - 75
156. ಎಣ್ಣೆಶಾಸ್ತ್ರ / eNNeshaasthra - 75
157. ಎತ್ತಿನ ಗಾಡಿ / etthinagaaDi - 75
158. ಎಲೆಗುದ್ದಲಿ / eleguddali - 76
159. ಎಳಗಂದಿ / elegandi - 76
160. ಎಳ್ಳುಸೂಸಲು / eLLususalu - 77

ಏ

161. ಏತ / eetha - 77
162. ಏದುಸಿರು / eedusiru - 78

163. ಏರುಪೇರು / eerupeeru - 78

ಐ

164. ಐಲ್‌ಪೈಲ್ / ailpail - 78

ಒ

165. ಒಂದರಿ / ondari - 79
166. ಒತ್ತುಕಾಗದ / otthukaagada - 79
167. ಒಗ್ಗರಣೆ / oggaraNe - 79
168. ಒಟ್ಟಾರೆ / oTTaare - 80
169. ಒಡಕು ಬಾಯಿ / odakubaayi - 80
170. ಒಡಲುರಿಸು / oDalurisu - 81
171. ಒಡ್ರಾಗಿಹಿಟ್ಟು / oDraageehiTTu - 81
172. ಒಡೇಕಲ್ಲು / vaDekallu - 81
173. ಒನಕೆ / onake - 82
174. ಒಪ್ಪಂದಪತ್ರ / oppandapathra - 83
175. ಒಬ್ಬೆ / obbe - 83
176. ಒಮ್ಮೆ / omme - 83
177. ಒಳಲೆ / oLale - 83
178. ಒಳ್ಳೆಣ್ಣೆ / oLLenne - 84

ಓ

179. ಓಕುಳಿಯಾಟ / okuLiyaaTa - 84
180. ಓಣಿ / oNi - 85
181. ಓಲೆಕಾರ / oolekaara - 86

ಔ

182. ಔತಣ / outhaNa - 87

ಕ

183. ಕಂಕಣ / kankaNa - 88
184. ಕಂಕುಳ ಶಂಖ / kankuLashankha - 88
185. ಕಂತೆಕಟ್ಟು / kanthekaTTu - 89
186. ಕಂಚು / kanchu - 89
187. ಕಂತೆಪುರಾಣ / kanthepuraaNa - 90
188. ಕಂದಾಚಾರ / kandaachaara - 90
189. ಕಂದುಬೆಳ್ಳಿ / kandubeLLi - 90
190. ಕಂಡಾಬಟ್ಟೆ / kandaabaTTe - 90
191. ಕಕ್ಕಾಬಿಕ್ಕಿ / kakkaabikki - 91
192. ಕತ್ತಾಳೆ / katthaaLe - 91
193. ಕದಾಚಿತ್ / kadaachith - 91
194. ಕಟಾಯಿಸುವುದು / kaTaayisuvudu - 92
195. ಕಟ್ಟಳೆ / kattalLe - 92
196. ಕಟ್ಟು / kaTTu - 92
197. ಕಟ್ಟುಹಾಕುವುದು / kaTTuhaakuvudu - 92
198. ಕಡಗೋಲು / kaDagoolu - 93
199. ಕಡಾಣಿ / kaDaaNi - 94
200. ಕಡಾಯಿ / kaDaayi - 94
201. ಕಡಿವಾಣ / kaDivaNa - 94
202. ಕಡ್ಡಿಶಾಸ್ತ್ರ / kadDishaasthra - 94
203. ಕಣಜ / kaNaja - 95
204. ಕಣಪೂಜೆ / kaNapooje - 96
205. ಕಣಿಕೇಳುವುದು / kaNnikeLuvudu - 96
206. ಕಣ್ಕಪ್ಪ / kaNkappu - 97
207. ಕಣ್ಣಾಡಿಸು / kaNNaaDisu - 97
208 ಕಣ್ಣಾಮುಚ್ಚಾಲೆ ಆಟ / kaNNaamucchaale aata - 97
209. ಕಣ್ಣುರಿ / kaNNuri - 98
210. ಕಣ್ಣೆಸರು / kaNNesaru - 98
211. ಕತ್ತೆಮದುವೆ / katthemaduve - 98
212. ಕತ್ತೇಮಗ / kattheemaga - 99
213. ಕತ್ತೇಮುಂಡೆ / katthemunDe - 99
214. ಕನ್ನ / kanna - 99
215. ಕನ್ಯಾಗಮನ / kanyaagamana - 99

216. ಕಪಿಲೆಬಾವಿ / kapilebhaavi - 100
216. ಕಮಂಡಲು / kamanDalu - 100
218. ಕಮಾನುಗಾಡಿ / kamaanugaaDi - 101
219. ಕಮ್ಮಾರ / kammaara - 101
220. ಕರ್ಚಿವೀಳ್ಳೇದೆಲೆ / karchiviilledele - 102
221. ಕರಟ / karaTa - 102
222. ಕರಡಿ ಆಡಿಸುವುದು / karadi aadisuvudu - 103
223. ಕರಾಮತ್ತು: ಕರಾಮತ್ತು / karaamathhu - 104
224. ಕರಾರು / karaaru - 104
225. ಕರಾರುಪತ್ರ / karaarupathra - 104
226. ಕರಿಬಟ್ಟು / karibaTTu - 104
227. ಕರಿದಾರ / karidaara - 105
228. ಕಲಗಚ್ಚು / kalagachhu - 105
229. ಕಲಬತ್ತು / kalabathhu - 105
230. ಕಲಸೋರೆ / kalasore - 106
231. ಕಲ್ಲಿಚೀಲ / kallichiila - 106
232. ಕಲ್ಲುಮುಳ್ಳು / kallumuLLu - 107
233. ಕವಣೆಕಲ್ಲು / kavaNekallu - 108
234. ಕವಳಿಗೆ / kavaLige - 108
235. ಕಷಾಯ / kashaaya -109
236. ಕಸಪೊರಕೆ / kasaporake - 109
237. ಕಸಿ ಮಾಡುವುದು / kasimaaDuvudu - 109
238. ಕಳಶ / kalasha - 110
239 ಕಳಶಗಿತ್ತಿ / kalashagithhi - 110
240. ಕಳಲೆ / kaLale - 111
241. ಕಳ್ಳಿರೆಂಬೆ / kaLLirembe - 111
242. ಕಳ್ಳಿಹಾಲು / kallihaalu - 112
243. ಕಳೆಕೀಳುವುದು / KaLeKiiLuvudu - 112
244. ಕ್ರಯಚೀಟಿ / krayachiiTi - 113
245. ಕಾಗದಪತ್ರ / kaagadapathra - 113
246. ಕಾಗೆಶಕುನ / kaageshakuna - 113
247. ಕಾಟಾಚಾರ / kaaTaachaara - 114
248. ಕಾರ್ತಿಕ ಸೋಮವಾರ / kaarthiika somavaara - 114
249. ಕಾಫಿಬೆಲ್ಲ / kaafiibella - 114
250. ಕಾಮನಹಬ್ಬ / kaamanahabba - 114
251. ಕಾಯೊಬ್ಬಟ್ಟು / kaayobbaTTu - 115
252. ಕಾರಣೆಸಾರಣೆ / kaaraNesaaraNe - 116
253. ಕಾಲ್ಮಣೆ / kaalmaNe - 116
254. ಕಾಲ್ದಾರಿ / kaaldaari - 116
255. ಕಾಲುವೆ / kaaluve - 117
256. ಕಾಲ್ಮೇಜು / kaalmeju - 117
257. ಕಾಶೀಯಾತ್ರೆ / kaashiiyathre - 118
258. ಕಾಸು / kaasu - 119
259. ಕಿಗ್ಗಾಣಿ kiggaaNi - 119
260. ಕಿತ / kitha - 119
261. ಕಿತಾಪತಿ / kithaapathi - 120
262. ಕಿತ್ತಾನಾರು / kithhaanaaru - 120
263. ಕಿರಿಬಿದಿರು / kiribidiru - 121
264. ಕಿರಿಕಿರಿ / kirikiri - 121
265. ಕಿರುನೆಲ್ಲಿಕಾಯಿ / kirunelliikaayi - 122
266. ಕಿವಿಚುಚ್ಚುವುದು / kivichuchhuvudu - 122
267. ಕೀಲೆಣ್ಣೆ / kiileNNe - 122
268. ಕುಂಟಂಪಿಲ್ಲಿ / kunTampilli - 122
269. ಕುಂದಲಿಗೆ / kunDalige - 123

270. ಕುಂಟೆ / kunTe -123
271. ಕುಂಡ / kunDa - 124
272. ಕುಂಬಾರ / kumbaara - 124
273. ಕುಂಭದ್ರೋಣಮಳೆ / kumbhadronamaLe - 125
274. ಕುಕ್ಕೆ / kukke - 125
275. ಕುಚ್ಚುಮೊಟ್ಟೆ / kuchhumoTTe - 125
276. ಕುಟ್ಟಾಣಿ / kuTTaani - 126
277. ಕುಟೀರ / kuTira - 126
278. ಕುಡುಗೋಲು / kuDugoolu - 126
279. ಕುಡಿಕೆ / kuDike - 127
280. ಕುದುರು / kuduru - 128
281. ಕುಮ್ಮಕ್ಕು / kummakku - 128
282. ಕುಮ್ಮಟಿಗೆ / kummaTige - 128
283. ಕುರುಂಬಾಳೆ / kurumbaaEe - 128
284. ಕುಲಾವಿಟೋಪಿ / kulaaviTopi - 128
285. ಕುಲುಮೆ / kulume - 129
286. ಕುಸುಬಲಕ್ಕಿ / kusubalakki - 129
287. ಕುಳ್ಳು / kuLLu - 129
288. ಕೂಚಂಭಟ್ಟ / koochambhaTTa - 129
289. ಕೂಟು / kooTu - 130
290. ಕೂರಿಗೆ / koorige - 130
291. ಕೂಳೆ / kooLe - 130
292. ಕೃಷ್ಣತುಳಸಿ / krishNathulasi - 131
293. ಕೃಷ್ಣಾಜಿನ / krishnaajina - 131
294. ಕೆಂಜುಗ / kenjuga - 131
295. ಕೆಂಡಹಾಯಿಸುವುದು / kenDahaayisuvudu - 131
296. ಕೆಂಡರೊಟ್ಟಿ / kenDaroTTi - 132
297. ಕೆಸರುಗದ್ದೆ / kesarugadde - 132
298. ಕೆಯ್ಮಸಕ / kaimasaka - 133
299. ಕೇಣಿ / keeNi - 133
300. ಕೇರಿ / keeri - 133
301. ಕೇರುವಮೊರ / keruvamora -133
302. ಕೈಔಷಧಿ / kaioushadhi - 134
303. ಕೈಗಡ / kaigaDa -135
304. ಕೈದೋಟ / kaidooTa - 135
305. ಕೈಗುದ್ದಲಿ / kaiguddali - 136
306. ಕೈಗುಣ / kaiguNa - 136
307. ಕೈಸಾಲ / kaisaala - 137
308. ಕೊಂಪೆ / kompe - 137
309. ಕೊಟ್ಟಿಗೆ / koTTige - 137
310. ಕೊಟ್ಟಿಗೆಗೊಬ್ಬರ / koTTigegobbara - 138
311. ಕೊಟ್ಟುಉಣ್ಣು ಪದ್ಧತಿ / koTTuuNNu padhhathi - 138
312. ಕೊಡ / koDa - 138
313. ಕೊಡತಿ / koDathi - 138
314. ಕೊಡಲಿ / koDali - 139
315. ಕೊನೆಗತ್ತಿ / konegathhi - 139
316. ಕೊಪ್ಪರಿಗೆ / kopparige - 140
317. ಕೊರಕಲು / korakalu - 141
318. ಕೊರಡು / koraDu - 141
319. ಕೊರವಂಜಿ / koravanji -141
320. ಕೊಲ್ಲಾರದಬಂಡಿ / kollaaradabandi - 142
321. ಕೊಸರು / kosaru - 142
322. ಕೋಡ್ಲೊಲೆ / kooDlole - 142
323. ಕೋಡಿ / kodi - 143
324. ಕೋಣ / kona - 143
325. ಕೋತಿಆಡಿಸುವುದು / kothiaadisuvudu - 144
326. ಕೋಲಾಟ / kolaata - 144
327. ಕೋಲೇಬಸವ / kolebasava - 145
328. ಕೋಲ್ಕಳ್ಳಿ / kolkalli - 146

329. ಕೋಸುಂಬರಿ / kosumbari -146
330. ಕೌದಿ / koudi - 147
331. ಕ್ರಯಚೀಟಿ / krayacheeti - 147
332. ಕ್ಷಾಮ / kshaama - 147
333. ಕ್ಷೌರ / kshoura - 148

ಖ

334. ಖಂಜರಿ / khanjari - 149
335. ಖಂಡುಗ / khanduga - 150
336. ಖರ್ಚು / kharchu - 150
337. ಖರೀದಿಪತ್ರ / khareedipathra - 150
338. ಖಾಜೀನ್ಯಾಯ / khajeenyaaya - 150
339. ಖಾತೆ / khaathe - 151
340. ಖಾನೇಶುಮಾರಿ / khaaneshumaari - 151
341. ಖುಲಾಯಿಸು / khulaayisu - 151

ಗ

342. ಗಂಗಮ್ಮನ ಪೂಜೆ / gangammanapooje - 152
343. ಗಂಗಾ ಸಮಾರಾಧನೆ / gangaasamaaraadhane - 153
344. ಗಂಗಾಳ / gangaala - 153
345. ಗಂಗೆ ತರುವುದು / gangetharuvudu - 153
346. ಗಂಜಿಯೂಟ / ganjiyoota - 154
347. ಗಂಟುಬೀಳು / gantubeelu - 154
348. ಗಂಟುಹಾಕುವುದು / gantuhaakuvudu - 154
349. ಗಂಡಾಂತರ / ganDaanthara - 155
350. ಗಂಡಾಳು / ganDaaLu - 155
351. ಗಂಜಲ / ganjala - 155
352. ಗಂಜಲಗುಂಡಿ / ganjalagunDi - 156
353. ಗಂಧಾಕ್ಷತೆ / gandhaakshathe - 156
354. ಗದ್ದೆಮಾರು / gaddemaaru - 156
355. ಗಟ್ಟಿಕುಳ / gaTTikulLa - 157
356. ಗಡಪಾರಿ / gaDapaari - 157
357. ಗಡಿಗೆ / gaDige - 158
358. ಗಡಗ / gaDaga - 158
359. ಗಡು / gaDu - 158
360. ಗಣಪತಿವ್ರತ / ganapatheevratha - 159
361. ಗಣೇಶ (ಗಣಪತಿ) / ganesha (Ganapathi) - 159
362. ಗರಡಿಮನೆ / garaDimane - 159
363. ಗರಿಕೆ / garike - 160
364. ಗಲ್ಲಿ / galli - 160
365. ಗವಳಿಗಿತ್ತಿ / gavaLigiththi - 161
366. ಗಷ್ಟು / gashTu -161
367. ಗಳಿಗೆಮುರಿ / gaLigemuri - 162
368. ಗಾಣ / gaaNa - 162
369. ಗಾಣಿಗ / gaaNiga - 163
370. ಗಾಣಿಗಿತ್ತಿ / gaaNigiththi - 163
371. ಗಾರೆಗಾಣ / gaaregaaNa - 163
372. ಗಿಡ್ಡನಾಮ / giDDanaama - 163
373. ಗಿಣಿಶಾಸ್ತ್ರ / giNishaasthra - 164
374. ಗಿಟುಕು / giTuku - 164
375. ಗುಂಟೆ / gunTa - 165
376. ಗುಂಡುಕಲ್ಲು / gunDakallu - 165
377. ಗಿಣ್ಣು / giNNu -167
378. ಗಿಲಗಚ್ಚಿ / gilagachchi - 167
379. ಗುಂಗೆಮಾವು / gungemaavu - 168
380. ಗುಂಭದಮರ / gumbhadamara - 168
381. ಗುಗ್ಗರಿ / guggari - 169
382. ಗುಡಾಣ / guDaaNa - 169

383. ಗುಡಿಸಿಲು / guDisilu - 170
384. ಗುಣಿ / guNi - 171
385. ಗುತ್ತಿಗೆ / guthhige - 171
386. ಗುನ್ನಂಪಟ್ಟೆ / gunnampaTTe - 172
387. ಗುರಿಮುಟ್ಟುವುದು / gurimuttuvudu - 172
388. ಗುರುಕಾಯಿಸುವುದು / gurukaayisuvudu - 173
389. ಗೂಡು / gooDu - 173
390. ಗೂಬೆಶಕುನ / goobeshakuna - 173
391. ಗೆಜ್ಜೆವಸ್ತ್ರ / gejjevasthra - 174
392. ಗೇರಾಯಿಸು / geeraayisu - 174
393. ಗೇರುಕುಕ್ಕೆ / gerukukke - 175
394. ಗೊಂತು / gonthu - 175
395. ಗೊಂಬೆಕೂರಿಸುವುದು / gombekoorisuvudu - 176
396. ಗೊಜ್ಜು / gojju - 176
397. ಗೊಟ್ಟ / goTTa - 177
398. ಗೊಡ್ಡುಸಾರು / goDDusaaru - 177
399. ಗೊಡ್ಡೆಮ್ಮೆ / goDDemme - 178
400. ಗೊಪ್ಪೆ / goppe - 178
401. ಗೊಲ್ಲ / golla - 178
402. ಗೋಂದು / gondu - 178
403. ಗೋಧಿಕಲ್ಲುಶಾಸ್ತ್ರ / godhikallushaasthra - 179
404. ಗೋಟಡಿಕೆ / gotadike - 179
405. ಗೋಡೆದೀಪ / godedeepa - 179
406. ಗೋಣಿತಾಟು / gooNithaatu - 180
407. ಗೋಣಿದಾರ / gooNidaara - 181
408. ಗೋಪಾಳಬುಟ್ಟಿ / gopaalabuTTi - 181
409. ಗೋಪಿಚಂದನ / gopichandana - 181
410. ಗೋಮೆ / gome - 181
411. ಗೋಮಾಳ / gomaaLLa - 182
412. ಗೋಸುಂಬೆ / gosumbe - 182
413. ಗೌರೀಹಬ್ಬ / goureehabba - 183
414. ಗೃಹಪ್ರವೇಶ / gruhapraveesha -184
415. ಗೃಹಸ್ಥಾಶ್ರಮ / gruhasthhaashrama - 184
416. ಗ್ಯಾಪಕ / gyaapaka - 184
417. ಗ್ರಾಮ ದೇವತೆಗಳು / graamadevathegaLu - 185
418. ಗ್ರಾಮಪಂಚಾಯಿತಿ / gramapanchaayithi - 185

ಚ

419. ಚಂದ್ರಿಕೆ / Chandrike - 186
420. ಚಕ್ಕಂದ / chakkanda - 186
421. ಚಕ್ರಬಡ್ಡಿ / chakrabaDDi - 186
422. ಚಕ್ಕುಬಂದಿ / chakkubandi - 187
423. ಚನ್ನಾಮಣೆ / channaamaNe - 187
424. ಚನ್ನಂಗಿಬೇಳೆ / channangibeeLe - 187
425. ಚಟ್ಟ / chaTTa - 188
426. ಚಟ್ಟಿ / chaTTi - 189
427. ಚಟ್ಟುಬಡಿಯುವುದು / chaTTubaDiyuvudu -189
428. ಚದರ / chadara - 190
429. ಚಪ್ಪರಹಾಕುವುದು / chapparahaakuvudu - 190
430. ಚಪ್ಪರದವರೆ / chapparadavare - 190
431. ಚಪ್ಪರವಿಸರ್ಜನೆ / chapparavisarjane - 191
432. ಚರಂಡಿ / charanDi - 192

433. ಚರಟ / charaTa - 192
434. ಚರುಪು / charupu - 192
435. ಚಳಿಸುವುದು / chaLisuvudu -192
436. ಚಾಕೊಲೇಟ್‌ಬೆಲ್ಲ / chacoleTebella - 193
437. ಚಾಟಿ / chaatT - 193
438. ಚಾಮರಸೇವೆ / chamaraseeve - 193
439. ಚಾವಡಿಕಟ್ಟೆ / chaavaDikaTTe - 193
440. ಚಿಕ್ಕಸಾಲ / chikkasaala - 194
441. ಚಿಕ್ಕಾಸು / chikkaasu - 194
442. ಚಿಗುರು / chiguru - 194
443. ಚಿಗುರು ವೀಳ್ಯೇದೆಲೆ / chiguruviiLLEdele - 195
444. ಚಿಗುಳಿ / chiguli - 195
445. ಚಿನಿವಾರ / chinivaara - 195
446. ಚಿನ್ನಿದಾಂಡು / chinnidaanDu - 195
447. ಚಿಟಿಕೆಹಾಕು / chitikehaaku - 196
448. ಚಿಪ್ಪು / chippu - 197
449. ಚಿಬ್ಬಲು / chibbalu - 197
450. ಚಿಮಣಿ / chimaNi - 197
451. ಚಿಮುಟ / chimuTa - 198
452. ಚಿಲಕವರೆ / chilakavare - 198
453. ಚೀಪುವುದು / chiipuvudu - 198
454. ಚೆಜ್ಜ: ನೋಡಿ / cejja - 199
455. ಚೆರು / ceru - 199
456. ಚೆಲ್ಲಾಪಿಲ್ಲಿ / cellaapilli 199
457. ಚೆಲ್ಲು / chellu - 200
458. ಚೇಣಿಹುಲ್ಲು / cheNihullu - 200
459. ಚಿಂದಿಉಡಾಯಿಸುವುದು / chindiuDaayisuvudu - 200
460. ಚುಕ್ತಾ / chukthaa - 201
461. ಚೂಡಾಕರ್ಮ / chooDaakarma -201
462. ಚೊಂಬು / chombu - 202
463. ಚೋಡಿ / choDi - 202
464. ಚೋಮನ ಕುಣಿತ / chomanakunitha - 203
465. ಚೌಕಾಬಾರ / chowkaabaara - 203
466. ಚೌಕಾಸಿ / choukaasi - 204
467. ಚೌರಪದ್ಧತಿ / chourapadhhathi - 204
468. ಚೌಲ / choula - 205

ಛ

469. ಛತ್ರ / chhathra - 206
470. ಛಾಪಾಕಾಗದ / cchaapaakaagada - 207
471. ಛೋಟಾಪಂಚೆ / cchoTaapanche - 207

ಜ

472. ಜಗುಲಿ / jaguli - 208
473. ಜನಿವಾರ / janivaara - 208
474. ಜಟ್ಟಿ / jaTTi - 209
475. ಜಡಿಮಳೆ / jaDimale - 209
476. ಜಡೆಕೋಲಾಟ / jaDekolaaTa - 209
477. ಜಪಮಾಡುವುದು / japamaaDuvudu - 210
478. ಜಪ್ತಿ / japthi - 210
479. ಜಮಾಬಂದಿ / jamaabandi - 211
480. ಜಮೀನ್‌ದಾರ / jamiindaara - 211
481. ಜರಡಿ / jaraDi - 211
482. ಜಲಸಮಾಧಿ / jalasamaadhi - 212
483. ಜಲ್ದಿ / jaldi - 213

484. ಜಲ್ಲೆ / jalle - 213
485. ಜವಳಿ / javaLi - 213
486. ಜವಳಿ ವ್ಯಾಪಾರಿ / javali vyaapaari - 214
487. ಜವಾಬು / javaabu - 214
488. ಜಳಕ / jaLaka - 214
489. ಜಾಗರಣೆ / jaagaraNe - 215
490. ಜಾದೂಗಾರ / jaadoogaara - 215
491. ಜಿಟಿಜಿಟಿಮಳೆ / jaTijaTimaLe - 215
492. ಜಿಡ್ಡಿ / jiDDi - 215
493. ಜಿರಾಯುತು / jiraayithu - 215
494. ಜೀರ್‌ಗಂಟು / jiirganTu - 216
495. ಜೀವನಾಂಶ / jeevanaamsha - 216
496. ಜೋನಿಬೆಲ್ಲ / joonibella - 216
497. ಜೋಡಿಒಲೆ / jooDiole - 216
498. ಜೋಪಡಿ / jopaDi - 216
499. ಜೋಯಿಸ / joyisa - 216
500. ಜೋಳಿಗೆ / jooLige - 217
501. ಜ್ಯೋತಿಷ್ಯ / jyothishya - 217

ಡ

502. ಡಬ್ಬ / Dabba - 218
503. ಡೋಲಾಯಮಾನ / doolaayamaana - 219

ತ

504. ತಂಗಡಿಹೂ / thangaDihoovu - 219
505. ತಂಗಳು / thangaLu - 219
506. ತಂಬಿಗೆ / thambige - 219
507. ತಂಬಿಟ್ಟು / thambiTTu - 220
508. ತಕರಾರು ಅರ್ಜಿ / thakaraaruarji - 220
509. ತಕಲಿ / thakali - 220
510. ತಗಾದೆ / thagaade - 221
511. ತಟಗುಟ್ಟು / thaTaguTTu - 221
512. ತಟಾಯಿಸುವುದು / thaayisuvudu - 222
513. ತಡಿಕೆ / thaDike - 222
514. ತತ್ತಳಿಸು / taththaLisu - 222
515. ತದುಕು / thaduku - 223
516. ತನಿಎರೆಯುವುದು / taniereyuvudu - 223
517. ತಪ್ಪುಗಾಣಿಕೆ / thappugaaNike - 224
518. ತಬ್ಬಲಿ / thabbali - 224
519. ತಬ್ಬಿಬ್ಬು / thabbibbu -224
520. ತಮಟೆ / thamaTe - 225
521. ತರಗು / tharagu - 225
522. ತಲೆಕೆಳಗಾಗು / thalekeLagaagu - 226
523. ತಲೆಗೆಡಿಸು / thalegeDisu - 226
524. ತಲೆಬಿಸಿ / thalebisi - 226
525. ತವುಡು / thavuDu - 227
526. ತಲಾತಟ್ಟಿ / thalaathaTTi - 227
527. ತಳಮಳ / thaLamaLa - 227
528. ತಳಿಸು / thaLisu - 228
529. ತಾಟಿನಿಂಗು / thaaTiningu - 228
530. ತಾಯಿತ / thaayitha - 228
531. ತಾಲಿಪಿಟ್ಟು / thaalipiTTu - 229
532. ತಾಳ / thaaLa - 229
533. ತಾಳೆನೋಡು / thaaLenooDu - 230
534. ತಾಳೇಗರಿ / thaaLegari - 230
535. ತಿಕ್ಕಲು / thikkalu - 231
536. ತಿಥಿಅಡಿಗೆ / thitthiaDige - 231
537. ತಿದಿ / thidi - 232
538. ತಿಪ್ಪರಲಾಗ / thiparalaaga - 232
539. ತಿಪ್ಪೆಗುಂಡಿ / thippegunDi - 233

540. ತೀರ್ಥ / theertha - 233
541. ತೀರಿಹೋಗು / theerihoogu - 233
542. ತುಂತುರುಮಳೆ / thunthurumaLe - 234
543. ತುಂಬೆಗಿಡ / thumbegidDa - 234
544. ತುಟ್ಟಿ / thuTTi - 234
545. ತುಳಸೀಕಟ್ಟೆ / thuLasikaTTe - 234
546. ತೂಬು / thuubu - 235
547. ತೇರು / theeru - 236
548. ತೇಪೆ / theepe - 236
549. ತೇವ / theeva - 237
550. ತೊಂಡೆ / thonDe - 237
551. ತೊಕ್ಕು / thokku - 237
552. ತೊಟ್ಟಿಮನೆ / thoTTimane - 238
553. ತೊವ್ವೆ / thovve - 238
554. ತೊಳಸಂಬಟ್ಟೆ / thoLasambaTTe - 239
555. ತೋಟದ ಸಂತರ್ಪಣೆ / thotada sanTorpaNe - 239
556. ತೋಪಡಾ / thoopaDaa - 240
557. ತೋರಣ / thooraNa - 240
558. ತೌರುಮನೆ / thourumane - 241

ಥ

559. ಥಂಡಿ / ThhanDi - 241
560. ಥಾಲಿ / thaali - 241

ದ

561. ದಂಡಪಿಂಡ / danDapinDa - 242
562. ದಂಡೆ / dande - 242
563. ದಫ್ಲ / dafa - 242
564. ದಬ್ಬಳ / dabbaLa - 243
565. ದಮಡಿ / damaDi - 243
566. ದಮ್ಮಸ್ಸು / dammassu - 244
567. ದರಖಾಸ್ತು / darakhaasthu -244
568. ದರ್ಭೆ: ದರ್ಭೆ / darbhe - 244
569. ದಸ್ಕತ್ತು / daskathhu - 245
570. ದಸಿ / dasi - 245
571. ದಟ್ಟ / daTTa - 246
572. ದಾಸಯ್ಯ / daasayya -246
573. ದಾಸಯ್ಯನಿಗೆ ಇಕ್ಕುವುದು / daasayyanige ikkuvudu -247
574. ದಿಂಡು: ದಿಂಡು / dinDu - 248
575. ದಿಕ್ಕಾಪಾಲು / dikkaapaalu -249
576. ದಿನಗೂಲಿ / dinagool - 249
577. ದಿನಸಿ ಅಂಗಡಿ / dinasiangaDi - 249
578. ದಿಮ್ಮಗೆ / dimmage - 249
579. ದೀಪಾವಳಿ / diipaavaLi - 250
580. ದೀವಟಿಗೆ / diivaTige - 250
581. ದುಂಬಾಲುಬೀಳುವುದು / dumbaalubeeluvudu - 250
582. ದುಪಟಿ / dupati - 250
583. ದುಬಾರಿ / dubaari - 251
584. ದುರಸ್ತುಮಾಡುವುದು / durasthumaaDuvudu - 251
585. ದುರುಗುಟ್ಟು / dhuruguTTu - 251
586. ದುಷ್ಟ / dushTa - 251
587. ದೂರ್ವೆ / dDoorve - 251
588. ದೃಷ್ಟಿತೆಗೆಯುವುದು / drushTithegeyuvudu - 252
589. ದೇವರತೋಟ / deevarathooTa - 253
590. ದೇವರಮನೆ / deevaramane - 254
591. ದೇವರಸಮಾರಾಧನೆ / deevarasamaaraadhane - 254
592. ದೇವಸ್ಥಾನ / deevasthaana - 254
593. ದೊಂಬರಾಟ / dombaraaTa - 255

594. ದೊಡ್ಡಪತ್ರೆ / doDDapathre - 256
595. ದೊಡ್ಡಿ / doDDi - 256
596. ದೊನ್ನೆ / donne - 257
597. ದೋಟಿ / dooTi - 258
598. ದೋರೆಗಾಯಿ / doregaayi - 258
599. ದೌತಿ / douthi - 259

ಧ

600. ಧನುರ್ಮಾಸ / dhanurmaasa - 259
601. ಧಾರಾಗ್ನಿ / dhaaraagni - 260

ನ

602. ನಂಜು / nanju - 260
603. ನಂದಿಕಂಬ / nandikamba - 261
604. ನಗೆಚಾಟಲು / nagechaaTalu - 261
605. ನವಧಾನ್ಯ / navadhaanya - 261
606. ನವರಾತ್ರಿ / navaraathri - 262
607. ನಸುಗುನ್ನಿ / nasugunni -263
608. ನಾಂದಿ / naandi - 264
609. ನಾಂದೀಪದ್ಯ / naandiipadya - 264
610. ನಾಗಪ್ಪಶಾಸ್ತ್ರಿ / naagappashaasthri - 264
611. ನಾಗರಕಟ್ಟೆ / naagarakaTTe - 265
612. ನಾಗೊಂದಿಗೆ / naagondige - 265
613. ನಾಟಿಔಷಧಿ / naaTioushadhi - 265
614. ನಾಟಿವೈದ್ಯ / naaTivaidya - 266
615. ನಾಟಿಹಾಕುವುದು / naaTihaakuvudu - 266
616. ನಾಡಿಗ / naaDiga - 267
617. ನಾಡಹೆಂಚು / naaDahenchu - 267
618. ನಾಮಕರಣ / naamakaraNa - 267
619. ನಾದುವುದು / naaduvudu - 269
620. ನಾಯಿಮುಂಡೇದೆ / naayimunDede - 269
621. ನಾರು / naaru - 269
622. ನಿರ್ಮಾಲ್ಯ / nirmaalya - 270
623. ನಿವಾಳಿಸು / nivaaLisu - 270
624. ನಿಶ್ಚಿತಾರ್ಥ / nishchithaarttha - 270
625. ನಿಷೇಕ / nisheeka - 271
626. ನೀರ್‌ಗಂಟಿ / neerganTi - 272
627. ನೀರಡಿಕೆ / neeraDike - 272
628. ನೀರುತುಂಬುವ ಹಬ್ಬ / niiruthumbuvahabba - 272
629. ನೀರುಮಜ್ಜಿಗೆ / niirumajjige - 272
630. ನುಚ್ಚು / nuchhu - 273
631. ನುಲಿ / nuli - 273
632. ನೂಕುನುಗ್ಗಲು / nuukunuggalu -274
633. ನೆಲಬಾವಿ / nelabaavi - 274
634. ನೆಲುವು / neluvu 275
635. ನೈವೇದ್ಯ / naiveedya -275
636. ನೊಗ / Noga -276
637. ನೊಜೆಹುಲ್ಲಿನ ಪರಕೆ / nojehullinaporake - 277

ಪ

638. ಪಂಚಕಜ್ಜಾಯ / panchakajjaaya - 278
639. ಪಂಚಪಾತ್ರೆ / panchapaathre - 278

640. ಪಂಚಾಂಗಶ್ರವಣ / panchaangashravaNa - 279
641. ಪಂಚಾಮೃತ / panchaamruta - 280
642. ಪಂಜು / punju - 280
643. ಪಂಚವಾಳ / panchavaaLa - 281
644. ಪಗಡೆ ಆಟ / pagadDeaaTa - 282
645. ಪತ್ರೊಡೆ / pathroDe - 283
646. ಪಟ್ಟುಹಾಕುವುದು / paTTuhaakuvudu - 283
647. ಪಟಾಪಟಿಕಬ್ಬು / paTaapaTikabbu - 283
648. ಪಡಪೋಸಿ / padaposi - 284
649. ಪಡಸಾಲೆ / paDasaale - 284
650. ಪಡಿಕೊಡುವುದು / paDikoDuvudu - 285
651. ಪಣತ / paNatha - 285
652. ಪಣಿವಾರ / paNivaara - 286
653. ಪರದೆ / parade - 286
654. ಪರ್ಜನ್ಯಜಪ / parjanyajapa - 286
655. ಪರಾತ / paratha - 287
656. ಪರಾವಲಂಬಿ / paraavalambi - 287
657. ಪರಾಶ್ರಯ / paraashraya 288
658. ಪರಾರಿ / paraari - 288
659. ಪರಿಪಾಟಲು / paripaaTalu - 288
660. ಪರಿಷೆ / parishe - 288
661. ಪಲ್ಲಕ್ಕಿ / pallakki - 289
662. ಪಲ್ಲಕ್ಕಿಸೇವೆ / pallakkiseeve - 289
663. ಪಹಣಿ / pahaNi - 290
664. ಪ್ರಸಾದ / prasaada - 291
665. ಪಾಚಿ / paachi - 291
666. ಪಾಣಿಪಂಚೆ / paaNipanche - 291
665. ಪಾತಾಳಗರಡಿ / paataaLagaraDi - 291
668. ಪಾತಿ / paathi - 292
669. ಪಾದಪೂಜೆ / paadapooje -292
670. ಪಾಪಾಸುಕಳ್ಳಿ / paapaasukaLLi - 292
671. ಪಾಯ / paaya - 293
672. ಪಾರಾಯಣ / paaraayaNa - 293
673. ಪಾರೀಖತ್ತು / pareekhathhu - 294
674. ಪಾವಲಿ / paavali - 294
675. ಪಾಸಲೆ / paasale - 295
676. ಪಾಳು / paalu - 295
677. ಪಾಳುಗುಡಿ / paaLuguDi - 296
678. ಪ್ರಾದೇಶಿಕ ಭಾಷೆ / praadeeshikabhaashe - 296
679. ಪ್ರಾರಬ್ಧ / praarabdha - 297
680. ಪಿಂಗಾಣಿ / pingaaNi - 297
681. ಪಿಂಜಾರರು / pinjaararu - 297
682. ಪಿಂಜು / pinju - 297
683. ಪಿಂಡಿ / pinDi - 298
684. ಪಿಸುಗುಡು / pisuguDu - 298
685. ಪಿಸುಮಾತು / pisumaathu - 298
686. ಪೀಚು / piichu - 298
687. ಪುಂಡ / punDa - 299
688. ಪುಂಡೀಹುರಿ / punDiihuri - 299
689. ಪುಗಸಟ್ಟೆ / pugasaTTe - 299
690. ಪುಣ್ಯಾಹ / puNyaaha - 300
691. ಪುದುವಟ್ಟು / puduvaTTu - 300

691. ಪುರೋಹಿತ / puroohitha - 300
693. ಪುಡಿಗಾಸು / puDigaasu - 301
694. ಪುರುಡು / purudu - 302
695. ಪೂರ್ಣಾಹುತಿ / purNaahuthi - 302
696. ಪೆಟ್ಟಿಗೆ ಅಂಗಡಿ / peTTigeangaDi - 302
697. ಪೆಟ್ಟು / eTLu - 303
698. ಪೆಠಾರಿ / peTNaari - 303
699. ಪೆಂಡಿ / penDi - 304
700. ಪ್ಲೇಗಮ್ಮ / pleegamma - 304
701. ಪೊಗದಸ್ತು / pogadasthu - 306
702. ಪೊದೆ / poDe - 306
703. ಪೋಕರಿ / pookari - 306
704. ಪೋಟಿಗೆ / PooTige - 306
705. ಪೋಟ್ಲೀಸ್ / pooTLees - 307
706. ಪೈಲ್ವಾನ್ / pailwaan - 308
707. ಪೈಸಾ / paisaa - 308

ಫ

708. ಫಜೀತಿ / phajeeTi - 308
709. ಫಲಪೂಜೆ / phalapuje - 308

ಬ

710. ಬಂಜರು / banjaru - 309
711. ಬಗಿ / bagi - 309
712. ಬಗ್ಗಡ / baggaDa - 309
713. ಬಚ್ಚಲುಮನೆ / bachhalumane - 310
714. ಬಟ್ಟಿಬೀಳುವುದು / baTTibiiluvudu - 311
715. ಬಡ್ಡಿರಹಿತಸಾಲ / baDDirahithasaala - 311
716. ಬಣವೆ / baNave - 311
717. ಬದು / badu - 312
718. ಬಯಲಾಟ / bayalaaTa - 313
719. ಬರಖಾಸ್ತು / barakhaasthu - 313
720. ಬರಾವರ್ದು / baraavardu - 314
721. ಬಲಿಪಾಡ್ಯಮಿ / balipaadDyami -314
722. ಬವನಾಸಿ / bavanaasi - 315
723. ಬಳಕೆವಾದ್ಯಗಳು / baLakevaadyagaLu - 315
724. ಪೂಜಾವಾದ್ಯಗಳು / Pujaa vaaDyagaLu - 316
725. ಹರಿಕಥೆವಾದ್ಯಗಳು / harikathe vaaDyagaLu - 316
726. ಉತ್ಸವವಾದ್ಯಗಳು: uthsavavaDyagaLu - 317
727. ತಮಟೆ / tamaTe - 318
728 ಪುಂ . Pungi 318
729 ಏಕನಾದ, ಕಿನ್ನರಿ / Ekanada, Kinnari - 318
730. ಸಂಗೀತವಾದ್ಯಗಳು / sangiitha vaadyagalu - 319
731. ಓಲಗವಾದನ: olagavaadana
732. ಬಳಕೆಹೆಸರು (ಗಿಡ್ಡಹೆಸರು) / baLakehesaru (giddahesaru) - 319
733. ಬಳ್ಳಿ / baLLi - 320
734. ಬಳೆಗಾರ / baLegaara - 320
735. ಬ್ರಹ್ಮಚಾರಿ / brahmacaari - 320
736. ಬಾಗಿನಮೊರ / baaginamora - 321
737. ಬಾಗಿಲು ತಡೆಯುವುದು / baagiluthaDeyuvudu - 321
738. ಬಾಣಂತಿ / baaNaNthi - 322
739. ಬಾಣಲೆ / baaNale - 323
740. ಬಾದರಾಯಣಸಂಬಂಧ / baadaraayaNa sambandha - 323

741. ಬಾನಿ / baani - 323
742. ಬಾಯಾರಿಕೆ / baayaarike - 324
743. ಬಾಯಿಕುಕ್ಕೆ / baayikukke - 325
744. ಬಾಯಿಹಾಕು / baayihaaku - 325
745. ಬಾರುಕೋಲು / baarukoolu - 325
746. ಬಾಸಿಂಗ / baasinga - 326
747. ಬಾಳಕ / baaLaka -327
748. ಬಾಳೆಎಲೆಊಟ / baaLeeleooTa - 327
749. ಬಾಳೆಕಾಯಿ / baaLekaayi - 328
750. ಬಾಳೆಹಣ್ಣು / baaLehaNNu - 329
751. ಬಾಳೆಪಟ್ಟೆ / baalepaTTe - 329
752. ಬಾಳೆಕಂಬ / baalekamba - 330
753. ಬಾಳೆಕಂದು / baaLekandu - 330
754. ಬಾಳೆಗಿಡ / baaLegiDa - 331
755. ಬಾಳೆನಾರು / baaLenaaru - 331
756. ಬ್ರಾಹ್ಮಣಾರ್ಥ / braahmaNaarTha - 331
757. ಬ್ರಾಹ್ಮಣರ ಬೈಗುಳ / braahmaNarabaiguLa 332
758. ಬ್ರಾಹ್ಮಣೇತರ ಬೈಗುಳಶಬ್ದಗಳು / brahmaNeethara baiguLashabdagaLu - 333
759. ಬಿಂದಿಗೆ / bindige - 334
760. ಬಿಚ್ಚೋಲೆ / bichhoole - 334
761. ಬಿಡಿಗಾಸು / biDigaasu - 334
762. ಬಿಡಿಯೆಲೆ / bidiele - 335
763. ಬಿಮ್ಮಗೆ / bimmage -336
764. ಬಿಸಿಲಡಿಗೆ / bisilaDige - 336
765. ಬೀಗ / biiga - 336
766. ಬೀಗರು / biigaru - 337
767. ಬೀಗರೂಟ / biigaruuTa - 337
768. ಬೀದಿಪಾಲು / biidipaalu - 338
769. ಬೀಸುವಕಲ್ಲು / biisuvakallu - 338
770. ಬುಗುರಿಆಟ / buguriaaTa - 339
771. ಬುಡ್ಡಿದೀಪ / buDDidiipa - 340
772. ಬುಡುಬುಡಿಕೆ / buDubuDike - 340
773. ಬುತ್ತಿ / buthhi - 341
774. ಬುರುಡೆ / buruDe - 342
775. ಬೂರುಗ / buuruga - 342
776. ಬೂಸಾಮಾತು / buusaamaathu - 343
777. ಬೃಂದಾವನ / brindaavana - 343
778. ಬೆಂಡು / benDu - 343
779. ಬೆಂಡೆಬ್ಬಿಸು / bendebbisu - 343
780. ಬೆಕ್ಕಿನಶಕುನ / bekkinashakuna - 344
781. ಬೆನ್ನಟ್ಟು / bennaTTu - 344
782. ಬೆಣಚುಕಲ್ಲು / beNachukallu - 345
783. ಬೆಣೆ / beNe - 345
784. ಬೆರಕೆಸೊಪ್ಪು / berakesoppu - 345
785. ಬೆರಣಿ / beraNi - 346
786. ಬೆಲೆಕಟ್ಟು / belekaTTu - 346
787. ಬೆಳ್ಳಿರಥ / beLLiratha - 347
788. ಬೆಳ್ಳುಳ್ಳಿ / beLLuLLi - 347
789. ಬೇಕಾಬಿಟ್ಟಿ / beekaabiTTi - 348
790. ಬೇಕೂಫ್ಲಾ / beekuuta - 348
791. ಬೇಬಾಕು / bebaaku - 348
792. ಬೇಲದಹಣ್ಣು / beeladahaNNu - 349
793. ಬೇಲಿ / beeli - 349
794. ಬೇವು / beevu - 350
795. ಬೂತಾಳೆ / buuthaaLe - 350

796. ಬೊಂತೆ / bonthe - 350
797. ಬೊಗಸೆ / bogase - 350
798. ಬೊಬ್ಬೆಹಾಕುವುದು / bobbehaakuvudu - 351
799. ಬೋಣಿಮಾಡು / boonimaaDuvudu - 351
800. ಬೋರಲು / booralu - 352
801. ಬೋಸಿ / boosi - 352
802. ಬ್ರಹ್ಮಚಾರಿ ಉಡುಪುಗಳು / brahmachari uDupugaLu - 352

ಭ

803. ಭಜನೆ / bhajane - 353
804. ಭರಣಿ / bharaNi - 353
805. ಭವಿಷ್ಯಹೇಳುವುದು / bhavishyaheeLuvudu - 354
806. ಭಂಡಾರ ಒಡೆಯುವುದು / bhanDaara oDeyuvudu - 354
807. ಭಾಂಗಿ / bhaangi - 355
808. ಭಿಕ್ಷೆ / bhikshe - 355
809. ಭೂಮದೂಟ / bhuumaduuTa - 355
810. ಭೋಗ್ಯ / bhoogya - 356

ಮ

811. ಮಂಕರಿ / munkari - 357
812. ಮಂಗಳೂರುಹೆಂಚು / mangalLuuruhenchu - 358
813. ಮಂಚಿಗೆ / manchige - 358
814. ಮಂತ್ರವಾದಿ / manthravaadi - 358
815. ಮಂತ್ರಾಕ್ಷತೆ / manthraakshathe - 359
816. ಮಂಡಿ / manDi - 359
817. ಮಂದಲಿಗೆಚಾಪೆ / mandaligechaape - 359
818. ಮಕರತೋರಣ / makarathooraNa - 360
819. ಮಗ್ಗ / magga - 360
820. ಮಗುಟ / maguTa -360
821. ಮಜ್ಜಲಿಪುಡಿ / majjalipuDi - 361
822. ಮಜ್ಜಿಗೆಹುಳಿ / majjigehuLi - 361
823. ಮಡಕೆ / maDake -361
824. ಮಡಿಕೋಲು / maDikoolu - 361
825. ಮಡಿಪಂಚೆ / maDipanche - 362
826. ಮಡಿಲುತುಂಬುವುದು / maDiluthumbuvudu - 362
827. ಮಡಿವಾಳ / madDivaaLa - 362
828. ಮಣಕ / maNaka - 362
829. ಮದಗ / madaga - 363
830. ಮದನಿಂಗ / madaninga - 363
831. ಮನೆತುಂಬಿಸುವುದು / manethumbisuvudu - 364
832. ಮನೆದೇವರು / manedevaru - 364
833. ಮನೆಮುಂದೆ ಕೂಗುವವರು / manemunde kuuguvavaru - 365
834. ಮನೆಮುಂದೆ ಬೆಂಕಿ / manemunde benki - 365
835. ಮನೆವೈದ್ಯ / manevaidya - 366
836. ಮಮ್ಮಟಿ / mammaTi 366
837. ಮದುವೆಯ ಮೊದಲನೆ ಕಾರ್ಯಕ್ರಮ / maduveya modalane kaaryakrama - 366
838. ಮರಣಸಂಸ್ಕಾರ / maraNasamskaara - 367

839. ಮರಮುಟ್ಟು / maramuTTu - 367
840. ಮರ ಹೊಡೆಯುವುದು / marahoDeyuvudu - 368
841. ಮರಳುಕಾಂತಿ ಭತ್ತ / maraLukaanthi bhathha - 368
842. ಮಲ್ನೀರು ಎರೆಯುವುದು / malneeruereyuvudu - 369
843. ಮಸೆಗಲ್ಲು / masegallu - 369
844. ಮಳೆಕರೆಯುವುದು: maLekareyuvudu - 369
845. ಮಹಡಿಮನೆ / mahaDimane - 370
846. ಮಾಗಳಿ / maaGaLi - 370
847. ಮಾಟಮದ್ದು / maaTamaddu -370
848. ಮಾಯುವುದು / maayuvudu -371
849. ಮಾರಮ್ಮನ ಸಿಡಿ / maarammana siDi 371
850. ಮಾಂಗಲ್ಯಧಾರಣೆ / mangalyadhaaraNe - 372
851. ಮಿಡಿಕಾಯಿ / miDikaayi - 372
852. ಮಿದ್ದೆಅನ್ನ / miDDeanna - 373
853. ಮಿಳ್ಳೆ / miLLe - 373
854. ಮೀಸಲುಕಟ್ಟುವುದು / meesalukaTTuvudu - 374
855. ಮುಕ್ಕಾಂ (ಮೊಕ್ಕಾಂ) / mukkaam (mokkaam) - 374
856. ಮುತ್ಥಾಳ / mutthaaLa - 375
857. ಮುಡಿಕೊಡುವುದು: / muDikoDuvudu - 375
858. ಮುತ್ತುಗದ ಎಲೆ / mutthhugadaele - 375
859. ಮುದ್ದೆ / mudde - 375
860. ಮುಳುಗಡೆ / muLugaDe - 376
861. ಮುಂಗಾರುಮಳೆ / mungaarumaLe -376
862. ಮುಂಭಾರ / mumbhaara - 377
863. ಮೂಗ್ದಾರ / muugdaara - 377
864. ಮೂಗುದಾಣ / muugudaaNa -377
865. ಮೂಗೇಟು / muugeeTu - 378
866. ಮೂರ್ಖ / moorkha - 378
867. ಮೆಟ್ಟಕ್ಕಿಕುಕ್ಕೆ / meTTakkikukke - 378
868. ಮೆಟ್ಟಲುಬಾವಿ / meTTalubaavi - 379
869. ಮೆದೆ / mede - 379
870. ಮೆಹನತ್ತು / mehanathhu - 379
871. ಮೇದರವನು / meedaravanu - 380
872. ಮೇವು / meevu - 380
873. ಮೊಂಡುಪರಕೆ / monduparake - 381
874. ಮೊಗಸಾಲೆ / mogasaale - 381
875. ಮೊಟ್ಟೆ / moTTe - 381
876. ಮೊದಲತೀರ್ಥ / modalatheerTha - 382
877. ಮೊದಲಸುತ್ತು / modalasuthhu - 382
878. ಮೊಹರಂ / moharam - 383
879. ಮೊಳ / moLa - 384
880. ಮೋಜಣಿದಾರ / moojaNidaara - 384
881. ಮೋಟುಗೋಡೆ / mooTugooDe - 384
882. ಮೋತೆ / moothe - 385
883. ಮೌಂಜಿ / mounji - 385

ಯ

884. ಯಕ್ಕಾಹುಟ್ಟೋಯ್ತು / yakkaahuTTooythu - 386

885. ಯವಾರ / yavaara - 386
886. ಯಾಪಾಟಿ / yaapaaTi - 387
887. ಯುಗಾದಿಹಬ್ಬ / yugaadihabba - 387

ರ

888. ರಂಗೋಲಿ / rangooli - 388
889. ರಂಪ / rampa - 389
890. ರಕ್ಕಸಪಟ್ಟೆ / rakkasapaTTe - 390
891. ರಚ್ಚೆ / rachhe - 390
892. ರಥ ಎಳೆಯುವುದು / raThaeLeyuvudu - 390
893. ರಥಬೀದಿ / rathabeedi - 391
894. ರಥೋತ್ಸವ / raThothsava -391
895. ರವೆ / rave - 392
896. ರಸದಾಳೆಕಬ್ಬು / rasadaaLekabbu - 393
897. ರಾಗಿಕಲ್ಲು / raagiikallu - 393
898. ರಾಟೆ / raaTe - 393
899. ರಾಜಿ / raaji - 394
900. ರಾಮನವಮಿ / raamanavami - 395
901. ರಾಮೋತ್ಸವ / raamoothsava 395
902. ರೂಬುರೂಬು / ruuburuubu - 396
903. ರೂಲುದೊಣ್ಣೆ / ruuludoNNe 396
904. ರೈಲುಚೊಂಬು / railuchombu - 397
905. ರೊಪ್ಪ / roppa - 397
906. ರೋಣುಗಲ್ಲು / ronugallu - 398

ಲ

907. ಲಂಟಾನ / lanTaana - 399
908. ಲಕೋಟಿನ ಹೋಳಿಗೆ / lakoTanahooLige - 399
909. ಲಕ್ವ / lakva - 400
910. ಲಟ್ಟಣಿಗೆ / laTTaNige - 400
911. ಲಾಜಾಹೋಮ / laajaahoma - 401
912. ಲಾಟೀನು / laaTiinu - 401
913. ಲಾಳ / laaLa - 402
914. ಲಾಳಿಹೊಡೆ / laaLihode - 402
915. ಲಿಖಾವಟ್ / likhaavaT - 402
916. ಲೇವಾದೇವಿ / leevaadevi - 403

ವ

917. ವಕ್ಕರಿಸು / vakkarisu - 403
918. ವಜನು / vajanu - 403
919. ವಟು / vaTu - 404
920. ವಥಾರ / vaThaara - 404
921. ವರಪೂಜೆ / varapooje - 404
922. ವರಸಾಮ್ಯ / varasaamya - 405
923. ವರಹ / varaha – 405
924. ವರ್ಷತೊಡಕು / varshathoDaku - 405
925. ವಾಡಿಕೆ / vaaDike - 406
926. ವಾಡೆ / vaaDe - 406
927. ವಾನಪ್ರಸ್ಥಾಶ್ರಮ / vaanaprasThaashrama - 406
928. ವಾರದಸಂತೆ / vaaradasanthe - 407
929. ವಾರಸುದಾರ / vaarasudaara - 407
930. ವ್ಯಾಸಪೀಠ / vyaasapeeTha - 408
931. ವಿಲೇವಾರಿ / vileevaari - 408
932. ವೆಂಕಟರಮಣಭಾಗವತರು / venkaTaramaNa bhaagavatharu- 408

933. ವೇದಿಕೆ / veedike - 409
934. ವೈದೀಕ / vaidiika - 410

ಶ

935. ಶಂಕುಸ್ಥಾಪನೆ / shankusThaapane - 411
936. ಶೀಕರಣೆ / shiikaraNe - 411
937. ಶ್ರಾದ್ಧ / shraaddha - 411
938. ಶ್ರಾವಣಮಾಸ / shraavaNamaasa - 411
939. ಶ್ಯಾನುಭೋಗ / shyaanubhooga - 412

ಷ

940. ಷರಾ / sHaraa - 413

ಸ

941. ಸಂಕ್ರಾಂತಿಹಬ್ಬ / sankraanthihabba - 414
942. ಸಂಚಿ / sanchi - 415
943. ಸಂಡಿಗೆ / sanDige - 415
944. ಸಂತೆಮಾಳ / santhemaaLa - 416
945. ಸಂದೂಕ / sandooka - 416
946. ಸಂಧ್ಯಾವಂದನೆ / sandhyaavandane - 417
947. ಸಕ್ಕರೆಗುತ್ತಿ / sakkareguthhi - 417
948. ಸಗಣಿ / sagaNi - 417
949. ಸಜ್ಜಿಗೆ / sajjige - 418
950. ಸಪ್ತಪದಿ / sapthapadi - 419
951. ಸಪ್ತಾಹ / sapthaaha - 419
952. ಸಮಿತ್ತು / samithhu - 420
953. ಸರಗುಣಿಕೆ / saraguNike - 420
954. ಸರಿಹೊತ್ತು / sarihothhu - 420
955. ಸಲ / sala - 421
956. ಸಲಕರಣೆ / salakaraNe - 421
957. ಸಾಂಬಾರಮರಿಗೆ / saambaaramarige - 421
958. ಸಾಗುವಳಿ / saaguvaLi - 422
959. ಸಾಣೆ ಹಿಡಿಯುವುದು / saaNehiDiyuvudu - 422
960. ಸಾಣೇಕಲ್ಲು / saaNekallu - 423
961. ಸಾಬೂನು / saabuunu - 424
962. ಸಾರಣೆಕಾರಣೆ / saaraNeekaaraN - 424
963. ಸಾರು / saaru - 424
964. ಸಿಂಡರಿಸು / sinDarisu- 425
965. ಸಿಂಬೆ / simbe - 425
966. ಸಿಕ್ಕಾಬಟ್ಟೆ / sikkabaTTe - 426
967. ಸೀನೀರಿನಬಾವಿ / siiniirinabaavi - 426
968. ಸೀಮಂತ / siimantha - 426
969. ಸುಫರ್ದು / suphardu - 427
970. ಸುಸ್ತಿಬಡ್ಡಿ / susthibaDDi - 427
971. ಸುಳಿ/ suLi - 427
972. ಸೂತಕ / suuthaka - 428
973. ಸೂರ್ಯನಮಸ್ಕಾರ / suuryanamaskaara - 428
974. ಸೂಲಗಿತ್ತಿ / suulagithhi - 429
975. ಸೂಳೇಮಗ / suuLemaga - 429
976. ಸೆತ್ತೆ / sethhe - 429
977. ಸೇವಾಕರ್ತರು / sevakartharu - 430
978. ಸೇರುಮಣ್ಣು / seerumaNNu - 430
979. ಸೊಕ್ಕು / sokku - 431
980. ಸೊಗಡವರೆ / sogaDavare - 431
981. ಸೊಗಡು / sogaDu - 431
982. ಸೊನೆ / sone - 431

983. ಸೊಪ್ಪಿನಹುಳಿ / soppinahuLi - 432
984. ಸೊಪ್ಪೆತೆಂಗಿನಕಾಯಿ / soppethenginakaayi - 432
985. ಸೊಲ್ಲಡಗು / sollaDagu - 432
986. ಸೋನೆಮಳೆ / soonemaLe - 433
987. ಸೋಪಸ್ಕರ / soopaskara - 433
988. ಸ್ತ್ರೀಯರ ಉಡುಪುಗಳು / sthriiyara uDupugaLu - 433

ಹ

989. ಹಂಚಿಕಡ್ಡಿ / hanchikaDDi - 434
990. ಹಂಡೆ / hanDe - 435
991. ಹಗ್ಗ / hagga - 435
992. ಹಚ್ಚಡ / hachhaDa - 436
993. ಹಜಾಮತ್ / hajaamath - 436
994. ಹಟ್ಟಿ / haTTi - 436
995. ಹಡಪ / haDapa - 436
996. ಹಣತೆ / haNathe - 436
997. ಹಣಾಹಣಿ / haNaahaNi - 437
998. ಹಣಿ / haNi - 437
999. ಹಣ್ಣು ಮಾಡುವುದು / haNNumaaDuvudu - 437
1000. ಹಣ್ಣುಕಾಯಿ ಮಾಡಿಸು / haNNukaayimaaDisu - 438
1001. ಹತ್ತರಿ / hathhari - 438
1002. ಹತಾಹಿತಿ / hathaahithi - 438
1003. ಹನಿಮಳೆ / hanimaLe - 439
1004. ಹಬ್ಬದಡಿಗೆ / habbadaDige - 439
1005. ಹರಳೆಣ್ಣೆ / haraLeNe - 439
1006. ಹರಿಕಥೆ / harikatha - 440
1007. ಹರಿತಾಳ / harithaaLa - 440
1008. ಹರಿದಾಸರು / haridaasaru - 440
1009. ಹರಿಯೊಲೆ/ hariyoole - 440
1010. ಹಲಗೆ ಆರತಿ / halagearathi - 441
1011. ಹಲಸಿನಹಣ್ಣು/ halasinahaNNu - 442
1012. ಹಲ್ಲಿಶಕುನ / hallishakuna - 442
1013. ಹಸಿನೂಲು / hasinuulu - 443
1014. ಹಸು / hasu - 443
1015. ಹಸ್ತೋದಕ / hasthoodaka - 443
1016. ಹಳೇತಲೆ / haLeethale - 445
1017. ಹಳೇಹುಲಿ / haLeehuli - 445
1018. ಹಾರೆ / haare - 445
1019. ಹಾಲಕ್ಕಿ / haalakki - 446
1020. ಹಾಲ್ಬಾಯಿ / haalbaayi - 446
1021. ಹಾಲ್ವಾಣ / haalvaaNa - 447
1022. ಹಾಲುಕ್ಕಿಸುವುದು / haalukkisuvudu - 447
1023. ಹಾಸಿಗೆಹಿಡಿ / haasigehiDi - 447
1024. ಹಾಳುಮನೆ / haaLumane - 448
1025. ಹಿಚಕವರೆ / hichakavare - 448
1026. ಹಿಂಡಿ / hinDi - 448
1027. ಹಿಡಿ / hiDi - 449
1028. ಹಿಡುಗಲು / hiDugalu - 449
1029. ಹಿತ್ತಿಲು / hithhilu - 449
1030. ಹಿತ್ತಿಲಗಿಡ / hithhalagiDa - 450
1031. ಹಿತ್ತಲಮದ್ದು / hithhalamaddu - 450
1032. ಹಿಲಾಲು / hilaalu - 450
1033. ಹಿಸ್ಸೆ / hisse - 450

1034. ಹೀಚು / hiichu - 450
1035. ಹೀನಸುಳಿ / heenasuli - 451
1036. ಹೀರುಕಾಗದ / hiirukaagada - 451
1037. ಹುಚ್ಚುಹೊಳೆ / huchhuhoLe - 451
1038. ಹುಟ್ಟುಗುಣ / huTTuguNa - 451
1039. ಹುದುಗು / hudugu - 452
1040. ಹುರಿಮಂಜು / hurimanju - 452
1041. ಹುರಿಹಗ್ಗ / hurihagga - 453
1042. ಹುರಿಹಿಟ್ಟು / hurihiTTu - 453
1043. ಹುರುಳಿಕಟ್ಟು / huruLikaTTu - 454
1044. ಹುಲಿಕುರಿ ಆಟ / hulikuriaaTa - 454
1045. ಹುಳಿ / huLi - 455
1046. ಹೂರಣದೊಬ್ಬಟ್ಟು / hooraNadobbaTTu - 455
1047. ಹೂವೀಳ್ಯ / huuviiLya - 456
1048. ಹೂಳು / huuLu - 456
1049. ಹೆಂಗಸರ ಆಭರಣಗಳು/ hengasara aabharaNagaLu - 457
1050. ಹೆಂಚು / henchu - 457
1051. ಹೆಚ್ಚುಗಟ್ಟಲೆ / hechhugaTTale - 458
1052. ಹೆಡೆಮೊಟ್ಟೆ / heDemoTTe - 458
1053. ಹೆಣ್ಣೊಪ್ಪಿಸುವುದು / hennoppisuvudu - 458
1054. ಹೆಪ್ಪಳಿಕೆ / heppalike - 459
1055. ಹೆಬ್ಬೆಟ್ಟೊತ್ತು / hebbeTTothhu - 459
056. ಹೆರಿಗೆ / herige - 460
1057. ಹೊಂಡ / honDa - 461
1058. ಹೊಂಬಾಳೆ / hombaaLe - 461
1059. ಹೊಗಳಿಕೆಗಳು / hogaLikegaLu - 462
1060. ಹೊಟ್ಟೆಕಿಚ್ಚು / hoTTekichchu - 463
1061. ಹೊತ್ತಾರೆ / hothhaare - 463
1062. ಹೊರಗೆಹೋಗುವ ಶಾಸ್ತ್ರ / horagehooguva shaasthra - 463
1063. ಹೊಸ ಬಟ್ಟೆ / hosabaTTe - 463
1064. ಹೊಳಲು ಸುತ್ತುವುದು / hoLalusuttuvudu - 464
1065. ಹೋಮ / hooma - 464
1066. ಹೋರಿ / hoori - 466
ಮ್ಯಾಪ್ / myaap - 466
ಬುಕ್ಕಾಂಬುಧಿ ಊರಿನ ಪರಿಚಯ – 468
About Bukkambudhi - 468
ಬುಕ್ಕಾಂಬುಧಿ ಕೃಷ್ಣಮೂರ್ತಿ ಜೀವನ ಪಥ – 470
ಪ್ರೊ. ಜಿ. ಆಶ್ವತ್ಥನಾರಾಯಣ ಜೀವನ ಪಥ – 476

ಅ / A

1. **ಅಂಕಣ:** ಮನೆಯ ನಾಲ್ಕು ಗೋಡೆಗಳ ಮಧ್ಯೆ ಇರುವ ಜಾಗಕ್ಕೆ **ಅಂಕಣ** ಅಥವಾ **ಚದರ** ಎಂದು ಹೇಳುತ್ತಾರೆ. ಇದು ಸಾಮಾನ್ಯವಾಗಿ ಉದ್ದ, ಅಗಲ ಒಂದೇ ಸಮನಾಗಿದ್ದು ಚಚ್ಚೌಕವಾಗಿರುತ್ತದೆ.

ಉದಾ: ನಮ್ಮ ಹಳ್ಳಿಯ ಗಣ್ಯವ್ಯಕ್ತಿಯಾದ ವಿರೂಪಾಕ್ಷಪ್ಪ 20 ಅಂಕಣದ ದೊಡ್ಡ ಮನೆಯನ್ನು ಕಟ್ಟಿಸಿದ್ದಾರೆ. ನೋಡಿ: ಚದರ

<ankaNa> (-) Square space between four walls or beams of a house. Generally, the length and width will be equal.

Eg: An eminent person of our village, Viruupakshappa has built a 20 Square house.

2. **ಅಂಕಪರದೆ**: ದೇವಸ್ಥಾನಗಳಲ್ಲಿ ದೇವರಿಗೆ ಅಭಿಷೇಕವಾದ ನಂತರ ಅಲಂಕಾರ ಮಾಡಿ, ನೈವೇದ್ಯ ಮಾಡುತ್ತಾರೆ. ಇವೆಲ್ಲವು ಆಗುವತನಕ ದೇವರ ಮುಂಭಾಗದಲ್ಲಿ **ಅಂಕಪರದೆ** ಇಳಿಬಿಟ್ಟಿರುತ್ತಾರೆ. ಮಂಗಳಾರತಿ ಸಮಯಕ್ಕೆ ಪರದೆ ತೆಗೆದನಂತರ ಎಲ್ಲರಿಗೂ ದೇವರದರ್ಶನ ಆಗುತ್ತದೆ.

ನಾಟಕ ಪ್ರಾರಂಭವಾಗುವುದಕ್ಕೆ ಮುಂಚೆ **ಅಂಕಪರದೆ** ನಾಟಕ ವೇದಿಕೆಯ ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಮುಚ್ಚಿರುತ್ತೆ. ನಾಟಕದ ಸೂತ್ರಧಾರ ತೆರೆಯ ಮುಂದೆ ಬಂದು ದೇವರ ಸ್ತುತಿಯನ್ನು ಹೇಳಿದ ಮೇಲೆ ಅಂಕಪರದೆಯನ್ನು ಎಳೆದು ನಾಟಕವನ್ನು ಪ್ರಾರಂಭಮಾಡಲಾಗುತ್ತೆ.

ಉದಾ: ಪ್ರೇಕ್ಷಕರೇ, ಕೇವಲ ಹತ್ತು ನಿಮಿಷಗಳಲ್ಲಿ, ಅಂಕಪರದೆ ಎಳೆದಕೂಡಲೆ ನಾಟಕ ಪ್ರಾರಂಭವಾಗುತ್ತೆ.

<ankaparade> The curtain drawn at the end of an act in a play. In temples after washing the deity with water it is decorated with cloth and ornaments. Food prepared is offered to the God. When all these are being done, in front of the God, a curtain will be hanging. Curtain is removed at the time of ritualistic waving of a lamp. Before commencement of the Play,

the stage is covered by a curtain. After the narrator singing a ritual song, the curtain is raised and Play begins.

During the Play also, at the end of each part, curtain closes from top to bottom, or from right to left. At the end of the Play also, the curtain is closed from one side to the other end.

Eg: *Dear spectators, just in ten minutes, after the curtain is raised the Play begins*

During the Play also, at the end of each part, curtain closes from top to bottom, or from right to left. At the end of the Play also, the curtain is closed from one side to the other end.

Eg: *Dear spectators, just in ten minutes, after the curtain is raised the Play begins.*

3. **ಅಂಗತ್ತು:** ಮುಖ ಮೇಲೆ ಮಾಡಿ ಮಲಗಿದರೆ, ಅದಕ್ಕೆ ಅಂಗತ್ತಾಗಿ ಮಲಗಿದ್ದಾನೆ ಎನ್ನುತ್ತಾರೆ. ಮುಖ ನೆಲದ ಕಡೆ ಮಾಡಿ ಮಲಗಿದರೆ ಬೋರಲು ಮಲಗಿದ್ದಾನೆ ಎನ್ನುತ್ತಾರೆ.

ಉದಾ: ಯಾಕೆ ಬೆನ್ನು ನೋವಾಗ್ಯೆತಾ, ಒಂದು ಅರ್ಧ ಗಂಟೆ ಅಂಗತ್ತಾಗಿ ಮಲಕ್ಕ, ಸರಿಹೋಗುತ್ತೆ. ನೋಡಿ: ಬೋರಲು

<angattu> Lying face upwards, when you lie down with the face up, they say he is lying Angatthu. If lying with face down, they say he is lying topsy-turvy.

Eg: *Why, do you have backpain. Lie down for half an hour facing up. It will be all right.*

4. **ಅಂಗಡಿ:** ಮಾರಾಟದ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವ ಸ್ಥಳಕ್ಕೆ **ಅಂಗಡಿ** ಎಂದು ಹೆಸರು. ಅಕ್ಕಿ, ಬೇಳೆ ಮುಂತಾದ ದಿನಸಿ ವಸ್ತುಗಳನ್ನು ಮಾರಾಟ ಮಾಡುವ ಸ್ಥಳಕ್ಕೆ ದಿನಸಿ **ಅಂಗಡಿ** ಎಂದು ಹೆಸರು. ಬೀಡಿ, ಬೆಂಕಿಪೊಟ್ಟಣ, ಬಟ್ಟೆ ಒಗೆಯುವ ಸೋಪು ಮುಂತಾದ ಪದಾರ್ಥಗಳನ್ನು ಮಾರುವ ಸಣ್ಣಪುಟ್ಟ ಪೆಟ್ಟಿಗೆ ಜಾಗಕ್ಕೂ ಪೆಟ್ಟಿಗೆ ಅಂಗಡಿ ಎನ್ನುತ್ತಾರೆ. ದಿನಸಿ ಅಂಗಡಿ ಮತ್ತು ಪೆಟ್ಟಿಗೆ ಅಂಗಡಿ ಎರಡನ್ನೂ ಅಂಗಡಿ ಎಂದೇ ಕರೆಯುವುದು ಪದ್ಧತಿ.

ಉದಾ: ಹತ್ತಿರದ ಪೆಟ್ಟಿಗೆ ಅಂಗಡಿಗೆ ಹೋಗಿ ಬೆಂಕಿಪಟ್ಣ ತಾ.

<angaDi> Store or Shop. The place where things are sold in retail is called Store or Shop. Place where rice, dal etc. are sold is called as Grocery Store Place where cigarette, matchbox, soap etc. are sold is also known as Shop. Grocery Shop and Petty shop both are called as Shop.

Eg: *Go to nearby petty Shop and bring matchbox.*

5. **ಅಂಗಲಾಚು:** ದೈನ್ಯದಿಂದ ಇನ್ನೊಬ್ಬರನ್ನು ಸಹಾಯಕ್ಕಾಗಿ ಕೇಳಿದರೆ **ಅಂಗಲಾಚುವುದು** ಎಂದು ಹೇಳುತ್ತಾರೆ.

ಉದಾ: ನಿನ್ನ ಕೆಲಸ ಆಗ್ಬೇಕೂಂತಿದ್ರೆ, ಗೌಡ್ರತಾವ ಹೋಗಿ ಅಂಗಲಾಚಿ ಬೇಡ್ಕಳ್ಬೇಬೇಕ್ಕಣಪ್ಪ.

<angalaacu> Beg with humbleness, if you ask for help with a person in a pitiable condition they say as begging with humbleness.

Eg: *If you want your work done, you must approach the Gowda and beg.*

6. **ಅಂಗಳ:** ಮನೆಗೇ ಸೇರಿದ ಮನೆಯ ಮುಂಭಾಗದ ಬಯಲಿಗೆ ಅಂಗಳ ಎಂದು ಹೆಸರು. ಹಿಂಭಾಗದಲ್ಲಿರುವುದಕ್ಕೆ ಹಿತ್ತಿಲು ಎನ್ನುತ್ತಾರೆ.

ಉದಾ: ಅಂಗಳದಲ್ಲಿ ಸಂಡಿಗೆ ಒಣ ಹಾಕಿದೀನಿ, ದನಾ ಬಂದಾತೋ ನೋಡ್ತಿರು.

<angaLa> A yard - The front side of a house is known as Angala (Open Yard). The rear part is called as hittal.

Eg: *Front side, I have spread SanDige for drying. Be on the lookout if any cow is coming.*

7. **ಅಂಗವಸ್ತ್ರ:** ನೋಡಿ: ಛೋಟಾಪಂಚೆ, ಮಡಿಪಂಚೆ

See ChoTapanche, MaDipanche/PaNipanche

8. **ಅಂಗುಷ್ಠ: ಕಾಲಿನ ಹೆಬ್ಬೆರಳಿಗೆ ಅಂಗುಷ್ಠ** ಎಂದು ಹೆಸರು.

ಉದಾ: ನೆನ್ನೆ ಕತ್ತಲಲ್ಲಿ ಎಡವಿಬಿಟ್ಟೆ. ಬಲಗಾಲ ಅಂಗುಷ್ಠಕ್ಕೆ ಬಲವಾದ ಪೆಟ್ಟುಬಿತ್ತು.

<angusHTha> Thumb of leg is called AngusHTha. Thumb of hand is also called AngusHTha.

Eg: *Last night, I slipped. Right thumb of leg got hurt severely.*

9. ಅಂತರಗಟ್ಟೆಯಮ್ಮನ ಜಾತ್ರೆ: ಪ್ರತಿಯೊಂದು ಊರಿನಲ್ಲೂ ಒಂದು ಜಾತ್ರೆ ವರ್ಷಕ್ಕೊಂದಾವರ್ತಿ ನಡೆಯುತ್ತೆ. ಆ ಊರಿನ ಪ್ರಧಾನ ದೇವತೆಯನ್ನು ಮುಂದಿಟ್ಟುಕೊಂಡು ಜಾತ್ರೆ ಪ್ರಾರಂಭವಾಗುತ್ತೆ. ಅಂತರಗಟ್ಟೆಯಮ್ಮನ ಜಾತ್ರೆಯನ್ನು ಆ ಮನೆತನದವರೇ ಜವಾಬ್ದಾರಿ ತೆಗೆದುಕೊಂಡು ಊರಿನ ಜನರನ್ನೆಲ್ಲ ಕರೆದು ಊಟಹಾಕುತ್ತಾರೆ. ಅಂತರಗಟ್ಟೆ ನಾಡಿಗ ಮನೆತನದವರೆಲ್ಲ ಬುಕ್ಕಾಂಬುಧಿಯಲ್ಲೆ ವಾಸಿಸುತ್ತಿದ್ದರು.

ನಮ್ಮೂರಿನ ಹತ್ತಿರ ಇರುವ ಅಂತರಗಟ್ಟೆಯಲ್ಲಿ ವರ್ಷವರ್ಷವೂ ಅಂತರಗಟ್ಟೆಯಮ್ಮನ ಜಾತ್ರೆ ನಡೆಯುತ್ತೆ. ದೇವಸ್ಥಾನದಲ್ಲಿ ಆ ದಿನದ ಕಾರ್ಯಕರ್ತರು ನಾಡಿಗ ಮನೆತನದವರು. ಬಂದ ಭಕ್ತಾದಿಗಳಿಗೆಲ್ಲ ಅನ್ನ ಸಂತರ್ಪಣೆ ಮಾಡುತ್ತಾರೆ.

ಉದಾ: ಈ ಸಲ ಅಂತರಗಟ್ಟೆಯಮ್ಮನ ಜಾತ್ರೆಗೆ ಎಲ್ಲರೂ ಹೋಗಬೇಕಂತೆ.

<antaragaTTeyammana Jaatre> (-) In every village, once a year festival is observed in honor of a deity. It commences with the main deity of the village. The particular Family taking the responsibility to conduct the festival of Anthar**g**atteyamma, invite all the villagers and feed them. All Antharagatte Nadig family were living in Bukkambudhi. In Antharagatte, nearby our village, jaatre is arranged every year. The Nadig family takes the responsibility to perform the festival on that day in the Temple. They feed all the devotees who come.

Eg: *This year all are expected to go to Antaraga TTeyamma festival.*

10. ಅಂತರಗಾಯಿ: ಮನೆಗೆ ಏನೂ ಕೆಡುಕಾಗದಿರಲೆಂದು ಮಂತ್ರಿಸಿದ ಸೊಪ್ಪೆತೆಂಗಿನಕಾಯನ್ನು ಮುಂದಿನ ಬಾಗಿಲಿನ ಒಳಗಡೆ ಮೇಲ್ಭಾಗಕ್ಕೆ ಕಟ್ಟುತ್ತಾರೆ. ಅದಕ್ಕೆ **ಅಂತರಗಾಯಿ** ಎಂದು ಹೇಳುತ್ತಾರೆ. ಹೊಸದಾಗಿ ಕಟ್ಟಿರುವ ಮನೆಗೆ ಗೃಹಪ್ರವೇಶ ಮಾಡುವ ದಿನವೂ ಅಂತರಗಾಯನ್ನು ಕಟ್ಟುವ ಸಂಪ್ರದಾಯವಿದೆ.

ಉದಾ: ಶಾಸ್ತ್ರಿಗಳೇ ಅಂತರಗಾಯನ್ನು ನೀವೇ ಬಾಗಿಲಿಗೆ ಕಟ್ಟಿಬಿಟ್ಟರೆ ಉತ್ತಮ.

ನೋಡಿ: ಸೊಪ್ಪೆತೆಂಗಿನಕಾಯಿ

<antaragaayi> Coconut with outer skin - So that nothing untoward will happen to the house, a ritualistic Cocoanut with outer skin is tied at the top of front door. It is known as Antaragayi. On the day of House - Warming eremony of the house, there is a Traditional system of tieing Antharagayi.

Eg: *Shastriji, it is better if you only tie the Antaragayi to the door.*



11. ಅಂತರ್ಪಟ: ಮದುವೆ ಮುಹೂರ್ತದಲ್ಲಿ ಮೊದಲಬಾರಿಗೆ ಹೆಣ್ಣನ್ನು ಹಸೆಮಣೆಗೆ ಕರೆತರುವಾಗ ವಧೂ–ವರರ ಮಧ್ಯೆ ಇಬ್ಬರು ಒಂದು ಅಗಲದ ಅಂಗವಸ್ತ್ರವನ್ನು ಹಿಡಿದುಕೊಂಡು ಗಂಡಿನ ತಂದೆ, ಅಜ್ಜನ ಹೆಸರು ಗೋತ್ರವನ್ನು, ಹೆಣ್ಣಿನ ತಂದೆ, ಅಜ್ಜನ ಹೆಸರು ಗೋತ್ರವನ್ನು ಎಲ್ಲರಿಗೂ ಕೇಳುವಂತೆ ಹೇಳಿದ ನಂತರ, ಅಂಗವಸ್ತ್ರವನ್ನು ತೆಗೆದು ಬಿಡುತ್ತಾರೆ. ಆ ಅಂಗವಸ್ತ್ರಕ್ಕೆ ಅಂತರ್ಪಟ ಎಂದು ಹೆಸರು. ವಧೂವರರು ಒಬ್ಬರ ತಲೆಯ ಮೇಲೆ ಒಬ್ಬರು ಅಕ್ಕಿಯನ್ನು ಬೊಗಸೆಯಲ್ಲಿ ಹಾಕುತ್ತಾರೆ. ಯಾರು ಮುಂಚಿತವಾಗಿ ಇನ್ನೊಬ್ಬರ ತಲೆಯಮೇಲೆ ಅಕ್ಕಿಯನ್ನು ಹಾಕುತ್ತಾರೊ ಅವರು ಹೇಳಿದಂತೆ ಇನ್ನೊಬ್ಬರು ಕೇಳುತ್ತಾರೆಂದು ತಮಾಷೆ ಮಾಡುತ್ತಾರೆ. ಇದೊಂದು ನಂಬಿಕೆಯೂ ಹೌದು.

ಉದಾ: ಅಂತರ್ಪಟ ಸರಿಸಿದಾಗ ನಮ್ಮ ಹುಡುಗೀನೇ ಮೊದಲು ಅಕ್ಕಿ ಹಾಕಿದ್ದು; ಏನಿಲ್ಲ ನಮ್ಮ ಮಗನೇ ಹಾಕಿದ್ದು.

<antarpaTa> (-) A cloth held between bride and bridegroom during marriage ceremony. During marriage, while bringing the bride to the mantap for the first time, between them, two priests holding an Angavastra, recite the name of the bridegroom's father, grandfather and their lineage, as also, the name of the bride's father and grandfather and their lineage and then the Angavashtra is removed. That Angavastra is called as Antharpata. The bride and the bridegroom will pour a handful of rice on each other. The relatives make fun that whoever pours rice early the other should obey to him or her. This is a belief

also.

Eg: *When Antharpata was removed our girl only poured the rice first. No, no. Our son only poured first.*

12. ಅಂತೆಕಂತೆ: ಯಾವುದಾದರೂ ಸಂಗತಿಯನ್ನು ಅಧಿಕೃತವಾಗಿ ತಿಳಿಸದೆ ಇರುವಾಗ ಒಬ್ಬೊಬ್ಬರೂ ಅವರವರಿಗೆ ತೋಚಿದಂತೆ ಹೇಳ್ತಾರೆ. ಅದೆಲ್ಲ **ಅಂತೆಕಂತೆ**.

ಉದಾ: ದೇವರಿಗೆ ಬಿಟ್ಟಿರುವ ಒಂದೆಕರೆ ತ್ವಾಟ ಯಾರ ಸುಫರ್ದಿನಲ್ಲಿರಬೇಕು ಅನ್ನುವುದು ಇನ್ನೂ ನಿರ್ಧಾರವಾಗಿಲ್ಲ. ತಲಾತಟ್ಟಿ ಮಾತ್ನಾಡ್ತಾ ಇದಾರೆ, ಎಲ್ಲಾ ಅಂತೆಕಂತೆ.

ಅನ್ಯ: ತಲಾತಟ್ಟಿ

<anthekanthe> Casually Speaking - When a fact could not be revealed authentically, each one will speak as he understands. All is casual.

Eg: *It is not yet definite, the one-acre garden offered to the Deity, to be in whose custody. Each is speaking according to his way. Everything is Ante Kante.*

See: TalaataTTi

13. ಅಂಚೆಕಚೇರಿ: ಹಳ್ಳಿಯಲ್ಲಿ ಯಾರಿಗಾದರೂ ಬೇರೆ ಊರುಗಳಿಂದ ಬಂದ ಕಾಗದಪತ್ರಗಳನ್ನು ಅಥವಾ ಬೇರೆ ಊರುಗಳಲ್ಲಿರುವ ನೆಂಟರಿಗೆ ಕಳುಹಿಸಬೇಕಾದ ಕಾಗದಪತ್ರಗಳನ್ನು ವಿತರಣೆ ಮಾಡುವ ಜಾಗಕ್ಕೆ **ಅಂಚೆಕಚೇರಿ** ಎಂದು ಹೆಸರು. ಬೇರೆ ಊರಿಗೆ ಕಳುಹಿಸುವ ಪತ್ರಗಳನ್ನು ಹಾಕುವ ಡಬ್ಬಿಗೆ **ಅಂಚೆಡಬ್ಬ** ಅಥವಾ **ಅಂಚೆಪೆಟ್ಟಿಗೆ** ಎನ್ನುತ್ತಾರೆ.

ಉದಾ: ಅಂಚೆಡಬ್ಬಿಗೆ ಈ ಕಾರ್ಡ್ ಹಾಕಿ ಬಾ.

ನೋಡಿ: ಓಲೆಕಾರ

<ancekacheeri> Post Office - In a village, the place where letters received from outside places, or letters to be sent to any relatives outside is known as Ancekaccheri (Post Office). For putting the letters to be sent to outside places is called Post Box.

Eg*: Put this card in the Post Box and come.*

See: Postman

14. ಅಂಜನ ಹಾಕುವುದು: ಅಂಜನ ಹಾಕುವವರು ಬಹಳ ನೇಮದಿಂದ ನಡೆದುಕೊಳ್ಳುತ್ತಾರೆ. ಅಂಜನ ಒಂದು ತರಹ ಕಪ್ಪು. ದಾಯಾದಿಗಳು ಏನಾದರೂ ತೊಂದರೆ ಮಾಡಿದ್ದರೆ, ಯಾರು ಮಾಡಿರಬಹುದೆಂದು ತಿಳಿಯಲು ಕಣ್ಣಿಗೆ ಅಂಜನಹಾಕಿ ನೋಡಿಸುತ್ತಾರೆ. ಇದೊಂದು ವಿದ್ಯೆ. ವಂಶ ಪಾರಂಪರ್ಯವಾದುದು. ಹಸುಕರು ಕಳೆದು ಹೋದಾಗಲೂ ಅಂಜನ ಹಾಕಿಸಿ ನೋಡುತ್ತಾರೆ. ಕಣ್ಣಿಗೆ ಅಂಜನ ಹಾಕ್ಕಂಡು ನೋಡು, ಕಾಣುತ್ತೆ (ಗಾದೆ).

ಉದಾ: ಅಯ್ಯನೋರೆ, ಹಸ ಕಳೆದು ಹೋಗಿದೆ, ಅಂಜನಹಾಕಿ ನೋಡಿ.

<Anjanahaakuvudu> (-) A Black unguent applied to the corners of the eyes. The people who put Anjana will follow very ritualistic method. It is a type of unguent. If a relative has hurt another one, to detect the person who has done that, they search through Anjana. This is a type of knowledge. This has come as heritage. If a cow or calf is missing, they find out applying Anjana.

Eg: *Put Anjana to eye; You will see (Proverb). Shastriji, cow is missing. See through Anjana.*

15. ಅಂಟಿನುಂಡೆ: ಒಂದೆರಡು ಜಾತಿಯ ಮರಗಳಲ್ಲಿ ಅವುಗಳ ಕಾಂಡದ ಮೇಲೆ ಹಾಲು ಹೊರಬಂದು ಅಂಟು ಉಂಟಾಗುತ್ತದೆ. ಆ ಅಂಟನ್ನು ತುಪ್ಪದಲ್ಲಿ ಕರಿದು ಪುಡಿಮಾಡಿ, ಎಳ್ಳುಪುಡಿ, ಒಣಕೊಬರಿ, ಉತ್ತುತ್ತೆ ಚೂರು, ಬಾದಾಮಿ ಚೂರುಗಳನ್ನು ಬೆಲ್ಲದಪಾಕಕ್ಕೆ ಹಾಕಿ ಉಂಡೆ ಮಾಡುತ್ತಿದ್ದರು. ಸಾಮಾನ್ಯವಾಗಿ ಅಂಟಿನ ಉಂಡೆಯನ್ನು ಬಾಣಂತಿಯರಿಗೆ ತಿನ್ನಲು ಕೊಡುತ್ತಾರೆ. ನಾವೂ ತಿನ್ನಬಹುದು! ಬಹಳ ರುಚಿಯಾಗಿರುತ್ತೆ.

ಉದಾ: ಅಷ್ಟೊಂದು ಅಂಟಿನುಂಡೆ ಖರ್ಚಾಗಿ ಹೋಯ್ತೆ?

<anTinunDe> (-) A kind of sweet dish made with black thil powder mixing with gum. On one or two types of trees milk oozes out and converts into gum. That gum is fried in ghee and powdered. Added with thil powder, dried coconut, date pieces, almond pieces and mixed with jaggery, they prepare small balls. Generally, they give this ball to ladies who have recently delivered a baby. We can also eat. It will be quite tasty.

Eg: So much of AnTinunDe is consumed already?

16. ಅಂಟು: ಕಾಗದವನ್ನು ಒಂದಕ್ಕೊಂದು ಸೇರಿಸಿ ಬಿಗಿ ಮಾಡುವಾಗ ಉಪಯೋಗಿಸುವ ಪದಾರ್ಥಕ್ಕೆ ಅಂಟು ಎಂದು ಹೆಸರು. ಅಂಟು ಹಾಲವಾಣ ಅಥವಾ ಬೇವಿನ ಮರದಿಂದ ಹೊರಡುವ ರಸದಿಂದ ತಯಾರಾಗುತ್ತದೆ. ಯಾರಾದರೂ ನಮ್ಮಿಂದ ಬಲವಂತವಾಗಿ ಕೆಲಸ ಮಾಡಿಸಿಕೊಳ್ಳಲು ಪ್ರಯತ್ನಿಸಿದರೆ, ಅಂಟಿಕೊಂಡುಬಿಟ್ಟಿದಾನೆ ಅನ್ನುವುದು ರೂಢಿ.

ಉದಾ: ಕೊಡೀಹಳ್ಳಿ ಶಿವಪ್ಪ ಒಂದೇಸಮ ತಿಂಗಳಿಂದ ಅಂಟಿಕೊಂಡ್ಬಿಟ್ಟಿದಾನೆ.

ನೋಡಿ: ಗೋಂದು

<anTu> Glue / Gum / Sticky substance - The thing which is used to join one sheet to another is called Glue or Gum. The gum is prepared with the juice oozed out of Halvana or Neem tree. It is the common usage that if anybody wants a work to be done by us with pressure, he is known as antuka.

Eg: *KoDihalli Shivappa has been an AnTuka throughout since a month***.**

See: Goondu

17. ಅಂಟುವಾಳ: ಅಂಟುವಾಳ ಒಂದು ವಿಧವಾದ ಕಾಯಿ. ಅದನ್ನು ನೀರಿನಲ್ಲಿ ನೆನೆಸಿ ಸ್ವಲ್ಪಕಾಲದ ನಂತರ ಕಲ್ಲಿನಿಂದ ಜಜ್ಜಿದರೆ ಅದು ನೊರೆನೊರೆಯಾಗಿ ಬದಲಾಯಿಸುತ್ತದೆ. ಆ ನೊರೆಯನ್ನು ಕೊಳೆಬಟ್ಟೆಗಳ ಮೇಲೆ ಉಜ್ಜಿದರೆ ಕೊಳೆ ಹೋಗುತ್ತದೆ. ಹಳ್ಳಿಗಳಲ್ಲಿ ಯಾರೂ ಬಹಳಮಟ್ಟಿಗೆ ಸೋಪನ್ನು ಬಳಸುತ್ತಿರಲಿಲ್ಲ. ಸೋಪಿಗೆ ಬದಲಾಗಿ ಉಪಯೋಗಿಸುವ ಅಂಟುವಾಳವನ್ನು **ಸೋಪುಕಾಯಿ** ಎಂದೂ ಕರೆಯುತ್ತಾರೆ.

ಉದಾ: ರಾಮೂ, ಬಟ್ಟೆ ಒಗೀಬೇಕು. ಸ್ವಲ್ಪ ಅಂಟುವಾಳ ತಗೊಂಬಾ.

ನೋಡಿ: ಸಾಬೂನು

<anTuvaaLa> (-) AnTuvala is a kind of nut. If it is soaked in water for some time and pounded with stone, foam comes out. When that foam is rubbed on dirty clothes, it removes dirt. In villages to a large extent, they were not using soap. Antuvala used in place of soap is also called Soapukai.

Eg*: Ramu, bring some AnTuvala to wash the clothes.*

See: Soap

18. ಅಂತಸ್ತು: ಒಂದರ ಮೇಲೊಂದು ಕಟ್ಟುವ ಮನೆಗೆ **ಅಂತಸ್ತು** ಎಂದು ಹೇಳುತ್ತಾರೆ.

ಉದಾ: ಸಾಹುಕಾರ್ ರುದ್ರಪ್ಪ ನಾಲ್ಕು ಅಂತಸ್ತಿನ ಮನೆ ಕಟ್ಟಿಸ್ಯೆ.

ನೋಡಿ: ಮಹಡಿಮನೆ

<anthasthu> Tier - A house built one above the other is called as Anthasthu.

Eg: *Sahukar Rudrappa has built a house of four floors*.

See: Mahadimane.

19 ಅಂದಾಜು: ಅಂದಾಜು ಅಂದರೆ ಊಹೆಯಿಂದ ಹೇಳುವ ಲೆಕ್ಕ. ಸ್ವಲ್ಪ ಹೆಚ್ಚಾಗಲೀ, ಕಡಮೆಯಾಗಲೀ ಆಗಬಹುದು. 20–22, 50–55 ಹೀಗೆ.


ಉದಾ: ಈ ಸಲ ಭತ್ತ ಏಟಾಗಬಹುದು, ಅಂದಾಜು ನೂರು ಚೀಲ ಆದೀತಾ?

ವಿರುದ್ಧಪದ: ಖಚಿತ, ಗ್ಯಾರಂಟಿ

<andaaju> Estimate - Andaaju means a guess work. May be more or less. Like 20-22, 50-55.

Eg: *This time how much paddy, approximately*

20. ಅಂಡೆ: ಬಿದಿರಿನ ಕೊಳವೆಯನ್ನು ಹತ್ತು–ಹನ್ನೆರಡು ಅಂಗುಲದಷ್ಟು ಉದ್ದಕ್ಕೆ ಕತ್ತರಿಸಿ ಮಾಡಿರುವುದಕ್ಕೆ **ಅಂಡೆ** ಎಂದು ಹೆಸರು. ಹಸುವಿನ ಕರುಗಳಿಗೆ ಔಷಧಿ, ಮಜ್ಜಿಗೆ ಕುಡಿಸಲು ಉಪಯೋಗಿಸುತ್ತಾರೆ. ಇದನ್ನು ಗೊಟ್ಟ ಎಂದೂ ಕರೆಯುತ್ತಾರೆ.



ಉದಾ: ತ್ವಾಟದ್‌ಕಡೆ ಹೋದಾಗ ಎರಡು ಅಂಡೆ ತಗಂಬಾ.

<anDe> (-) A long vessel made of hollow bamboo. Bamboo cut into a size of ten to twelve inches is called as AnDe. This is used for feeding medicine or Buttermilk to the cow. It is also called as GoTTa.

Eg: *When you go to the garden bring two Andes*

21. ಅಂಬಲಿ: ಅಕ್ಕಿಯ ನುಚ್ಚು ಅಥವಾ ರಾಗಿ ಹಿಟ್ಟನ್ನು ನೀರಿನಲ್ಲಿ ಬೇಯಿಸಿ, ಉಪ್ಪು, ಸಾಸುವೆ–ಮೆಣಸಿನಕಾಯಿನ ಒಗ್ಗರಣೆ ಹಾಕಿ ಬಡಿಸುತ್ತಾರೆ. ಮಲೆನಾಡಿನ ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಜಮೀನ್ದಾರರ ಮನೆಗಳಲ್ಲೂ ಬೆಳಗಿನ ತಿಂಡಿಗೆ ಅಂಬಲಿ ಮಾಡಿಸುತ್ತಾರೆ. ಇದನ್ನು **ಗಂಜಿಯೂಟ** ಎಂದೂ ಹೇಳುತ್ತಾರೆ. ಗಂಜಿಯೂಟದ ಜೊತೆಗೆ ಉಪ್ಪಿನಕಾಯಿ ಇದ್ದರಂತೂ, ಅದರ ರುಚಿ ಹೇಳತೀರದು.

ಉದಾ: ಚಿಕ್ಕಪ್ಪಾ ಗಂಜಿಯೂಟ ಮಾಡಿ ತೋಟಕ್ಕೆ ಹೋಗೋಣ.

ನೋಡಿ: ಗಂಜಿಯೂಟ

<ambali> (-) A kind of gruel made of Ragi or Rice. Granulated rice or ragi is baked in water and added with salt, mustard and chillis fried in oil and served. In villages, even in big zamindar's house, they prepare Ambali for morning breakfast. It is also called as Ganjiyoota. If pickle is added with Ganjiyoota, it is fantastic.

Eg: *Uncle, after Ganjiyoota, shall go to the garden.*

See: Ganjiyoota

22. ಅಂಬಲಿಹುಯ್ಯುವುದು: ಅಂಬಲಿಹುಯ್ಯುವುದು ಒಂದು ಆಚರಣೆ. ಅದು ಕೇವಲ ಒಂದೆರಡು ಮನೆತನದವರು ತಲತಲಾಂತರದಿಂದ ನಡೆಸಿಕೊಂಡು ಬಂದ ಪದ್ಧತಿ. ನಾಲ್ಕಾರು ಬಗೆಯ ಅನ್ನವನ್ನು ಮಾಡಿ ಒಂದು ದೊಡ್ಡ ಕುಡಿ ಬಾಳೆ ಎಲೆಯ ಮೇಲೆ ಇಡುತ್ತಾರೆ. ಅಂಬಲಿ ಹುಯ್ಯುವವರು ಎರಡು ಮೂರು ಜನ ಅದರ ಸುತ್ತ (ಅಂಬಲಾಯಂಬೋ ಧೀಂ) ಎಂದು ಪದಗಳನ್ನು ಹೇಳಿಕೊಂಡು ತಿರುಗುತ್ತ ಬಾಯಿಂದ ಅನ್ನವನ್ನು ತಿನ್ನುತ್ತಾರೆ. ಕೈಯಲ್ಲಿ ಮುಟ್ಟುವುದಿಲ್ಲ.

ಉದಾ: ರಾಮಪ್ಪನವರ ಮನೆಗೆ ನಾಳೆ ಅಂಬಲಿಹುಯ್ಯೋರು ಬರ್ತಾರಂತೆ.

<ambalihuyyuvudu> (-) AMbalihuyyuvudu is a custom. It is a custom for one or two families only observed

from heritage. Four or five varieties of cooked rice are served on banana leaves. Two or three persons who are known for that purpose, reciting "Ambalayimbo Dheem" loudly, they go round the leaves and eat the rice. They do not touch by hand.

Eg*: For Raamappa's house tomorrow such persons will be coming.*

23. ಅಂಬು ಹೊಡೆಯುವುದು: ಬಿಲ್ಲಿಗೆ ಬಾಣವನ್ನು ಸೇರಿಸಿ ಹೊಡೆಯುವುದಕ್ಕೆ **ಅಂಬು ಹೊಡೆಯುವುದು** (ಬಾಣ ಬಿಡುವುದು) ಎನ್ನುತ್ತಾರೆ. ನವರಾತ್ರಿಯ ವಿಜಯದಶಮಿಯ ದಿನ ಊರಿನ ಶ್ಯಾನುಭೋಗರು ಬನ್ನಿಯ ಮರದ ಹತ್ತಿರ ನೆಟ್ಟಿರುವ ಬಾಳೇಕಂದಿಗೆ ಅಂಬುಹೊಡೆಯುತ್ತಿದ್ದರು.

ಉದಾ: ಶ್ಯಾನುಭೋಗ್ ಸೀತಾರಾಮಯ್ಯನವರು ನಾಳೆ ವಿಜಯದಶಮಿಯ ದಿನ ಅಂಬು ಹೊಡೆಯುತ್ತಾರಂತೆ.

<ambuhoDeyuvudu> Charging with arrow - To fix arrow to the bow and charge is known as Ambuhodeyuvudu. On the Vijayadasami Day the Shanbhog of the village was charging the arrow to the banana plant fixed near the tree known as Banni Tree (a prickly tree).

Eg*: Shanbhog Sitharamaiah is expected to charge the Ambu tomorrow the Vijayadasami Day.*



24. ಅಕ್ಕಸಾಲೆ: ಚಿನ್ನ, ಬೆಳ್ಳಿ ಒಡವೆಗಳನ್ನು ಮಾಡುವವನಿಗೆ **ಅಕ್ಕಸಾಲೆ, ಅಕ್ಕಸಾಲಿ** ಅಥವಾ **ಅಕ್ಕಸಾಲಿಗ** ಎನ್ನುತ್ತಾರೆ. **ಚಿನಿವಾರ** ಎಂಬ ಪದವೂ ರೂಢಿಯಲ್ಲಿದೆ.

ಉದಾ: ಏನು ಗೌಡರೆ, ಮನೆತಾವ ಹೋಗಿದ್ದೆ, ಕಾಣ್ಲೇ ಇಲ್ಲ. ಇಲ್ಕಣಪ್ಪ ಒಸಿ ಕೆಲಸ ಇತ್ತು, ಅಕ್ಕಸಾಲೆ ಮನೆಗೆ ಹೋಗಿದ್ದೆ.

ನೋಡಿ: ಚಿನಿವಾರ

<akkasaale> Goldsmith The person who does gold and silver ornaments is called goldsmith (Akkasaale, Akkasaali or Akkasaaliga). The word Chinivara is also in vogue.

Eg*: Gowdji, had been to your house. Didn't see you. No man, had some work; Had been to Goldsmith's house.*

See: Chinivara

25. ಅಕ್ಷತೆಕಾಳು: ಅಕ್ಷತೆಕಾಳನ್ನು ಅಕ್ಕಿ ಮತ್ತು ಕುಂಕುಮವನ್ನು ಬೆರೆಸಿ ಒಂದು ಹನಿ ತುಪ್ಪವನ್ನು ಹಾಕಿ ಕಲಸುತ್ತಾರೆ. ಈ ಕೆಂಪು ಅಕ್ಷತೆಯನ್ನು ಸಾಮಾನ್ಯವಾಗಿ ಶುಭಕಾರ್ಯಗಳಲ್ಲಿ ಮಾತ್ರ ಉಪಯೋಗಿಸುತ್ತಾರೆ. ಅರಿಶಿನ ಬೆರೆಸಿದ ಹಳದಿ ಅಕ್ಷತೆಕಾಳನ್ನು ಶ್ರಾದ್ಧಕರ್ಮದ ಕಡೆಯಲ್ಲಿ ಕೆಲವು ಕಡೆಗಳಲ್ಲಿ ಬಳಸುವುದು ರೂಢಿ.

ಉದಾ: ಪಂಚಪಾಳದಲ್ಲಿ ಅಕ್ಷತೆಯೆಲ್ಲ ಮುಗಿದುಹೋಗಿದೆ. ಸ್ವಲ್ಪಮಾಡಿ ತುಂಬಿಡು.

<akshatekalu> (-) Rice soaked with a little ghee and mixed with turmeric powder. This is used generally on auspicious day. Rice mixed with turmeric powder is used at the end of propitiatory rite on anniversary of a person's death.

Eg: *Akshatekalu is completely exhausted in Panchavala. Make some and fill up.*

26. ಅಕ್ಕೀತರಿ: ಅಕ್ಕಿಯನ್ನು ಬೀಸುವ ಕಲ್ಲಿನಲ್ಲಿ ತರಿತರಿಯಾಗಿ ಬೀಸಿದರೆ ಅಕ್ಕೀತರಿಯಾಗುತ್ತೆ. ತರಿಯನ್ನು ಸ್ವಲ್ಪ ಕೆಂಪಗೆ ಹುರಿದು ಅನಂತರ ಉಪ್ಪಿಟ್ಟನ್ನು ಮಾಡಬಹುದು. **ಅಕ್ಕೀತರಿ** ಉಪ್ಪಿಟ್ಟಿಗೆ, ಉಪ್ಪಿನಕಾಯಿ, ಕೆನೆ ಮೊಸರು ಇದ್ದರೆ ಬಹಳ ರುಚಿಯಾಗಿರುತ್ತೆ. ತರಿಯನ್ನು **ರವೆ** ಎಂದೂ ಕರೆಯುತ್ತಾರೆ.

ಉದಾ: ನಿನ್ನೆ ರಾಮಣ್ಣನವರ ಮನೇಲಿ ಕೊಟ್ಟ ಅಕ್ಕೀತರಿ ಉಪ್ಪಿಟ್ಟು ರುಚಿಯಾಗಿತ್ತು.

ನೋಡಿ: ರವೆ

<akkithari> Granulated rice - If rice is grinded in grinding stone, it becomes Granulated rice. Roasting that rice, upma can be prepared. For Upma, pickle and curds are added it will be quite tasty. Granulated Rice is also called as Rava.

Eg: *Yesterday at Ramanna's house the granulated rice upma was tasty.*

See: Rava

27. **ಅಕ್ಕೀಪಡಿ:** ಅರ್ಧಸೇರು ಅಕ್ಕಿ, ಅಡಿಗೆ ಮಾಡಲು ಬೇಕಾದ ಬೇಳೆ, ಉಪ್ಪು, ಹುಣಸೆಹಣ್ಣು, ಹಾಲು, ಮೊಸರು, ತರಕಾರಿ ಮುಂತಾದುವನ್ನು ಒಂದು ತಟ್ಟೆಯಲ್ಲಿಟ್ಟು ಯಾರಿಗಾದರೂ ದಾನಕೊಡುವುದಕ್ಕೆ **ಅಕ್ಕೀಪಡಿ** ಎನ್ನುತ್ತಾರೆ.


ಉದಾ: ನಾಡಿದ್ದು ಅಪ್ಪನ ತಿಥಿ ಮಾಡುಕ್ಕಾಗುಲ್ಲ, ನಂಗೂ ಉಸಾರಿಲ್ಲ, ಶಾಸ್ತ್ರಿಗಳಿಗೆ ಅಕ್ಕೀಪಡಿ ಕೊಟ್ಬರಾತು.

<akkipaDi> (-) To offer a person, half a seer of rice and for cooking the required dal, salt, tamarind, milk, curds and vegetables etc. in a plate is called as Akkipadi

Eg: *Tomorrow is my father's ceremony. I am also not well. Let us give Akkipadi to Shastriji.*

28. **ಅಕ್ಕೀರೊಟ್ಟಿ** ನೋಡಿ: ತಾಲಿಪಿಟ್ಟು

<ricerotti> See: Talipittu



29. **ಅಗತೆ:** ಗುದ್ದಲಿಯಿಂದ ನೆಲವನ್ನು ಅಗೆದು ಮಣ್ಣನ್ನು ಸಡಿಲ ಮಾಡುವ ಕ್ರಮಕ್ಕೆ ಅಗತೆ ಎನ್ನುತ್ತಾರೆ. ಮರದ ಸುತ್ತ ಮಣ್ಣನ್ನು ಸಡಿಲ ಮಾಡಿದಾಗ ಅದರ ಮೇಲೆ ಹಾಕಿರುವ ಗೊಬ್ಬರವು ಮಣ್ಣಿನೊಂದಿಗೆ ಹೊಂದಿಕೊಂಡು ಮರದ ಬೇರುಗಳ ಮೂಲಕ ಮರ ಹಸನಾಗಿ ಬೆಳೆಯಲು ಅನುಕೂಲವಾಗುತ್ತೆ. ಸಾಮಾನ್ಯವಾಗಿ ತೋಟಗಳಲ್ಲಿ ಅಗತೆ ಮಾಡಲು ಬರುವ ಜನ ಅವರದೇ ಒಂದು ಗುಂಪಿರುತ್ತೆ.

ಉದಾ: ಮುಂದಿನವಾರ ತೋಟದ ಅಗತೆ ಮಾಡಿಸ್ಬೇಕು. ಬಿಲ್ಲಹಳ್ಳಿಯಲ್ಲಿ ಏಳೆಂಟು ಜನ ಬಂದಿದಾರಂತೆ. ಈಗಲೇ ಹೋಗಿ ಮಾತುಕತೆ ಆಡ್ಕಂಡ್ಬಾ.

<agathe> Digging: Excavation Soil is made loose by digging with spade. It is called Agathe. When earth is loosened

around the tree, the manure spread on it will get mixed through roots and it helps the tree grow well. The people who do Agathe will have a clan of their own.

Eg: *Next week we must get Agathe done for the garden. Eight to Ten people have come to Billahalli. Go now itself and discuss with them.*

30. ಅಗಸ: ಹಳ್ಳಿಯಲ್ಲಿ ಸಾಮಾನ್ಯವಾಗಿ ಕೆಲವರ ಮನೆಯ ಬಟ್ಟೆಗಳನ್ನು ಒಗೆಯುವವನಿಗೆ **ಅಗಸ** ಎನ್ನುತ್ತಾರೆ. ಅವನು ಬಟ್ಟೆಗಳ ಗಂಟನ್ನು ಬೇರೆಬೇರೆಯಾಗಿ ತೆಗೆದುಕೊಂಡು ಕತ್ತೆಯ ಬೆನ್ನಿನ ಮೇಲೆ ಹಾಕಿಕೊಂಡು ಕೆರೆಗೆಹೋಗಿ ಬಟ್ಟೆಗಳನ್ನೆಲ್ಲ ಒಗೆದು ಒಣಗಿಸಿ ತಂದು ಕೊಡುತ್ತಾನೆ. ಅವನ ಕೂಲಿ ಹಣದ ಮೂಲಕ ಇಲ್ಲದಿದ್ದರೆ ಅಕ್ಕಿ, ರಾಗಿ ಮೂಲಕ ಸಂದಾಯವಾಗುತ್ತೆ.

ಉದಾ: ಅಗಸರ ಹಟ್ಟೀಗೆ ಹೋಗಿ ನೋಡ್ಕಂಡ್ ಬಾ ಯಾರಾದರೂ ಈ ಕಡೆ ಬರ್ತಾರಾ ಅಂತ.

ನೋಡಿ: ದೋಬಿ, ಮಡಿವಾಳ

<agasa> Washerman: In villages generally who washes clothes in some of the houses, is called as Agasa. He will take the bundle of clothes separately on the back of donkey to the tank, washes the clothes, dries and deliver. He will get his wages by cash or in kind through rice, ragi etc.

Eg*: Go and enquire in Washermen's hamlet whether anyone is coming this side.*

See: Dhobi, Madivala

31. ಅಗಳಿ: ಅಗಳಿಯನ್ನು ಮರದ ತುಂಡಿನಿಂದ ಮಾಡುತ್ತಾರೆ. ಸುಮಾರು ಒಂದು ಮೊಳದುದ್ದ ಮರದ ತುಂಡನ್ನು ದುಂಡಾಗಿ ಕೆತ್ತಿ, ಬಾಗಿಲಿನ ಹಿಂಭಾಗಕ್ಕೆ ನೆಲದ ಮೇಲೆ ಗುಂಡಿಯನ್ನು ತೋಡಿ ಅದರಲ್ಲಿ ಇಡುವಂತೆ ಮಾಡಿರುತ್ತಾರೆ. ಅಗಳಿಯನ್ನು ಇಟ್ಟಿರುವಾಗ ಹೊರಗಿನಿಂದ ಬಾಗಿಲನ್ನು ತೆರೆಯುವುದಕ್ಕೆ ಆಗುವುದಿಲ್ಲ. ಮೇಲ್ಭಾಗದಲ್ಲಿ ಕಬ್ಬಿಣದ ಸರಪಳಿ ಇರುತ್ತೆ. ಇದು ಚಿಲಕ. ಚಿಲಕವನ್ನು ಮರದಿಂದಲೂ



ಮಾಡುತ್ತಾರೆ. ಮರದ ಚಿಲಕ ಸುಮಾರು ಒಂದು ಅಡಿ ಮಾತ್ರ ಇರುತ್ತೆ. ಬಾಗಿಲು ತೆಗೆಯದಂತೆ ಅಡ್ಡಡ್ಡಲಾಗಿ ಒಂದು ಮರದ ಕೋಲನ್ನು ಇಡುತ್ತಾರೆ. ನಗರಗಳಲ್ಲಿ ಲೋಹದ ಅಗಳಿ, ಚಿಲಕಗಳನ್ನು (ಕಬ್ಬಿಣ, ಸ್ಟೀಲ್, ಹಿತ್ತಾಳೆ) ಬಳಸುತ್ತಾರೆ. ಅಡ್ಡಮರದ ಬದಲು ಸರಪಣಿಯನ್ನು ಬಳಸುತ್ತಾರೆ.

ಉದಾ: ಹಿಂಭಾಗ, ಮುಂಭಾಗದ ಎರಡು ಬಾಗಿಲುಗಳಿಗೂ ಹೊನ್ನೆಮರದ ಕೋಲುಗಳನ್ನು ಅಡ್ಡಲಾಗಿಡು.

ಸಮಾನಾರ್ಥಕ: ಚಿಲಕ, ಬೆಣೆ

<agaLi> Bolt - Bolt is prepared by a wooden piece. Approximately a size of one and a half foot of wooden piece is cut roundly and fixed on the ground behind the door. When bolt is put, door cannot be opened from outside. On top, an iron chain is put. This is called latch. Latch is made of wood also. Wooden latch is only of one foot. A wooden pole is fixed horizontally behind the door so that door cannot be opened. In cities, latch made of iron, steel, brass etc. is used. Instead of Wood metal latch is used.

Eg: *Back and front for both the doors, put poles of Poon tree.*

Equivalent: Latch, Wooden peg

32. ಅಗ್ಗ: ಕಡಮೆ ಬೆಲೆಗೆ ಪದಾರ್ಥಗಳನ್ನು ಕೊಳ್ಳುವಾಗ **ಅಗ್ಗ** ಎಂಬ ಪದವನ್ನು ಬಳಸುತ್ತಾರೆ. ಬೆಲೆ ಜಾಸ್ತಿಯಾದಾಗ **ದುಬಾರಿ** ಎನ್ನುತ್ತಾರೆ.

ಉದಾ: ಈ ವರ್ಷ ಕಬ್ಬು ಭರ್ಜರಿಯಾಗಿ ಬೆಳೆ ಬಂದು ಸಂತೆಯಲ್ಲಿ ಬೆಲ್ಲ ಅಗ್ಗವಾಗಿದೆ.

ಉದಾ: ಹಬ್ಬಬಂತು ಅಂತ ಹೂವಿನ ಬೆಲೆ ದುಬಾರಿಯಾಗಿದೆ.

<agga> Cheap - When you buy things at cheaper rate, they use the term Agga. When price is high, they say Dubari (costly).

Eg: *Since this year sugarcane was grown plenty, price of jaggery in shandy became cheap***.**

Eg: *Because of festival, the price of flowers is costly.*

33. ಅಗ್ರಹಾರ: ಪಂಡಿತರ, ಬ್ರಾಹ್ಮಣರ ವಾಸಕ್ಕಾಗಿ ಹಿಂದೆ ರಾಜಮಹಾರಾಜರುಗಳು ಮತ್ತು ಮಠಾಧಿಪತಿಗಳು ದಾನವಾಗಿ ಬಿಟ್ಟುಕೊಟ್ಟಿದ್ದ ಜಾಗದಲ್ಲಿದ್ದ ಮನೆಗಳ ಬಡಾವಣೆಗೆ ಅಗ್ರಹಾರ ಎಂದು ಹೆಸರು. ಸುಮಾರು 20–30 ಸಂಸಾರಗಳು ಅಲ್ಲಿ ನೆಲೆಸಿರುತ್ತಿದ್ದವು. ಅಂತಹವರಿಗೆ ಸ್ವಲ್ಪ ಜಮೀನನ್ನೂ ಬಿಟ್ಟುಕೊಡುತ್ತಿದ್ದರು.

ಉದಾ: ಶೃಂಗೇರಿಗೆ ಒಂದು ಮೈಲಿ ದೂರದಲ್ಲಿರುವ ಆನೆಗುಂದ ಅಗ್ರಹಾರವನ್ನು ಶೃಂಗೇರಿಮಠದವರು ದಾನವಾಗಿ ಕೊಟ್ಟಿದ್ದರು.

<agrahaara> (-) The village given as a gift by Kings or Monastery to brahmins is called Agrahara. About twenty to thirty families were living there. A piece of land was also given to such people.

Eg: *A mile away from Sringeri (Karnataka State) Anegunda Agrahara had been gifted by Sringeri Mutt.*

34. ಅಗ್ನಿಕುಂಡ: ನೋಡಿ: ಕುಂಡ

<agnikunDa> A pit made for the sacrificial fire.

See: KunDa

35. ಅಗ್ರೋದಕ: ಬ್ರಾಹ್ಮಣರು ಸ್ನಾನವಾದ ನಂತರ ದೇವರ ಪೂಜೆಗಾಗಿ ಮೀಸಲು ನೀರನ್ನು ತಾಮ್ರದ ಕೊಡದಲ್ಲಿ ತುಂಬಿ ತಂದು ಯಾರೂ ಮುಟ್ಟದಂತೆ ಪ್ರತ್ಯೇಕವಾಗಿ ಇಡುತ್ತಿದ್ದರು. ಆ ನೀರಿಗೆ ಅಗ್ರೋದಕ ಎಂದು ಕರೆಯುತ್ತಿದ್ದರು. ಸತ್ತವರ ಶ್ರಾದ್ಧ ಕರ್ಮಗಳನ್ನು ಮಾಡುವಾಗ ಬ್ರಾಹ್ಮಣರ ಕಾಲು ತೊಳೆಯಲು ಅಗ್ರೋದಕವನ್ನು ಬಳಸುತ್ತಾರೆ.

ಉದಾ: ದೇವರಮನೆಯಲ್ಲಿರುವ ತಾಮ್ರದ ಕೊಡವನ್ನು ಶುಭ್ರವಾಗಿ ತೊಳೆದು ಅಗ್ರೋದಕ ತಂದು ಬಾಗಿಲಿನ ಹತ್ತಿರ ಇಟ್ಟಿರು.

<agroodaka> Water meant for worshipping - Brahmins after bath, were keeping water for worshipping God, in a copper vessel separately so that nobody should touch. They were calling that as Agrodaka. While doing ritual ceremonies of the deceased persons, to wash legs of the invited brahmins they use Agrodaka.

Eg: *Wash neatly the copper vessel kept, till water and keep near the door.*

36. ಅತಿಥಿ: ಯಾರನ್ನಾದರೂ ಮನೆಗೆ ಕರೆದರೆ ಅಥವಾ ಅನಿರೀಕ್ಷಿತವಾಗಿ ಮನೆಗೆ ಬರುವ ವ್ಯಕ್ತಿಗೆ ಅತಿಥಿ ಎನ್ನುತ್ತಾರೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಮಧ್ಯಾಹ್ನ ಊಟದ ವೇಳೆಗೆ ಯಾರಾದರೂ ಬರಬಹುದೆಂದು ಹೊರಗಡೆ ಬಂದು ನಿರೀಕ್ಷಿಸುತ್ತಾರೆ. ಯಾರೂ ಕಾಣಿಸದೆ ಇದ್ದರೆ, ಒಂದು ಊಟದ ಎಲೆಗೆ ಮಾಡಿದ ಅಡಿಗೆಯನ್ನು ಬಡಿಸಿ ಮೀಸಲಾಗಿಟ್ಟು, ನಂತರ ಮನೆಯ ಯಜಮಾನನು ಊಟ ಮಾಡುತ್ತಾನೆ. ಊಟ ಮುಗಿಸಿದ ನಂತರವೂ ಯಾರೂ ಬರದೇ ಇದ್ದರೆ. ಆ ಬಡಿಸಿದ ಎಲೆಯನ್ನು ಹಸುವಿಗೆ ಕೊಡುತ್ತಾರೆ. ಇದು ಹಳ್ಳಿಯ ಸಂಪ್ರದಾಯದಲ್ಲಿ ಕಂಡುಬರುವ ವಿಶೇಷ ಸಂಗತಿ. ಅನ್ನದಾನ ಮಾಡದೆ ಊಟ ಮಾಡಬಾರದು ಎಂಬುದು ನಮ್ಮ ಸಂಸ್ಕೃತಿ.

ಉದಾ: ಇನ್ನೂ ಸ್ವಲ್ಪ ಹೊತ್ತು ತಡವಾದರೂ ಚಿಂತೆಯಿಲ್ಲ. ಯಾರಾದರೂ ಅತಿಥಿಗಳು ಬರಬಹುದು, ಸ್ವಲ್ಪ ಹಾಗೇ ಕಣ್ಣಾಡಿಸು.

<athithi> Guest - The person who is invited or a person who comes unexpectedly or uninvited is called as guest. Generally, in villages, at the time of afternoon lunch, they will be looking for any unexpected guest. If nobody is seen outside, they will keep reserve a leaf with food, and then the head of the family will take food. Even after that if nobody turns up, the leaf reserved is offered to a cow. This is a special feature observed in the customs followed in villages. It is our culture, that without offering food to anyone we should not eat.

Eg: *No problem if it takes some more time. Some guests may come. Please be on the lookout.*

37. ಅಚ್ಚೆಳ್ಳೆಣ್ಣೆ: ಹರಳು ಬೀಜದಿಂದ ತಯಾರಿಸಿದ ಎಣ್ಣೆಗೆ **ಅಚ್ಚೆಳ್ಳೆಣ್ಣೆ** (ಹರಳೆಣ್ಣೆ) ಎಂದು ಹೆಸರು. ಭೇದಿಯಾಗದೆ ತೊಂದರೆಯಾದಾಗ ಒಂದು ಚಮಚದಷ್ಟು ಅಚ್ಚೆಳ್ಳೆಣ್ಣೆಯನ್ನು ಬಿಸಿಬಿಸಿ ಕಾಫಿಗೆ ಬೆರೆಸಿ ಕುಡಿಯಲು ಕೊಡುತ್ತಿದ್ದರು.

ಉದಾ: ಮಗುವಿಗೆ ಭೇದಿಯಾಗದೆ ಹೊಟ್ಟೆನೋವು ಅಂತ ಅಳ್ತಾ ಇದೆ. ಒಂದು ಚಮಚ ಹರಳೆಣ್ಣೆ ಕಾಫಿಗೆ ಬೆರೆಸಿಕೊಡು, ಸರಿಹೋಗುತ್ತೆ.

<acchelleNNe> (-) The oil prepared out of the seed is called as Acchellenne or Haralenne castor oil**.** They were giving

a spoon of Haralenne with hot coffee to drink, if suffering from constipation.

Eg: *The child is crying with stomach pain on account of diarrhea. Mix a spoon of Haralenne with hot coffee and give. It will be all right.*

38. ಅಜ್ಜಿಪುರಾಣ: ವಯಸ್ಸಾದ ಅಜ್ಜಿಯರು ಮೊಮ್ಮಕ್ಕಳಿಗೆ ಹೇಳಿದ ಹಳೆಯ ಕಾಲದ ಸಂಗತಿಗಳು/ಕಥೆಗಳನ್ನು **ಅಜ್ಜಿಪುರಾಣ** ಎನ್ನುತ್ತಾರೆ. ಆ ಕಥೆ ಸ್ವಾಭಾವಿಕ–ವಾಗಿರುವುದಕ್ಕಿಂತ ಕಾಲ್ಪನಿಕವಾಗಿ ರಂಜನೀಯವಾಗಿ ಆಶ್ಚರ್ಯಕರವಾಗಿರುತ್ತೆ.

ಉದಾ: ಸುಮ್ಮನೆ ಏನೇನೋ ಕಥೆ ಕಟ್ಕಂಡು ಅಜ್ಜಿಪುರಾಣ ಹೇಳ್‌ಬ್ಯಾಡ, ಇರೂ ವಿಸಯ ಸರಿಯಾಗಿ ಬೊಗಳು.

<ajjipuraaNa> Bull Story - The facts and stories of olden days told by elderly grand mothers to the grandchildren, which are not relevant to this generation are called Ajjipurana. That story though not realistic will be imaginative and surprising.

Eg: *Do not tell simply all bull stories like Ajjipurana. Tell me the real facts.*

39. ಅಚ್ಚುಬೆಲ್ಲ: ಕಬ್ಬಿನಹಾಲನ್ನು ಕೊಪ್ಪರಿಗೆಯಲ್ಲಿ ಕಾಯಿಸಿ ಒಂದು ಹದಕ್ಕೆ ಬಂದ ನಂತರ ಆ ಪಾಕವನ್ನು ಚೌಕಟ್ಟಾದ ಮರದ ಅಚ್ಚಿಗೆ ಹುಯ್ದು ಆರಿದ ನಂತರ ತೆಗೆದರೆ ಅದು **ಅಚ್ಚುಬೆಲ್ಲ** ಎನಿಸುತ್ತದೆ. ಸುಮಾರು ಒಂದು ಅಂಗುಲ ಚಚ್ಚೌಕವಾದ ಬೆಲ್ಲವನ್ನು ಕಾಫಿಬೆಲ್ಲ ಎಂದು ಹೇಳುತ್ತಿದ್ದರು. ಎರಡು–ಮೂರು ಅಂಗುಲ ಚಚ್ಚೌಕವಾದ ಅಚ್ಚುಬೆಲ್ಲವನ್ನೂ ಮಾಡುತ್ತಿದ್ದರು. ಇದನ್ನು **ದೊಡ್ಡಚ್ಚುಬೆಲ್ಲ** ಎನ್ನುತ್ತಿದ್ದರು.

ಉದಾ: ಅಚ್ಚುಬೆಲ್ಲ ಎಲ್ಲ ಚೀಲಕ್ಕೆ ಹಾಕಿ ಮೂಟೆ ಕಟ್ಟಿಡು, ನಾಳೆ ಸಂತೇಗೆ ಹಾಕಾವ.

ನೋಡಿ: ಕೊಪ್ಪರಿಗೆ

<accubella> Jaggery - Sugarcane juice is boiled in a large metal vessel and when it comes to a correct temperature is poured into a molded wooden object of a shape of about an inch. When cooled it will be taken out. It is known as Acchubella.

They were telling it as Coffee jaggery. They were doing with a size of two-or three-inches square of Acchubella. It is called as Doddacchu Bella.

Eg: *Put all Accubella into a bag and tie. Tomorrow we shall put it in the Shandy.*

See: Kopparige

40. ಅಟ್ಟ: ಸಾಮಾನ್ಯವಾಗಿ ಮನೆಯ ಅಡಿಗೆ ಮನೆಯಲ್ಲಿ ನೆಲದಿಂದ ಏಳೆಂಟು ಅಡಿ ಎತ್ತರದಲ್ಲಿ ಮರದ ಹಲಗೆಗಳನ್ನು ಒಂದು ಗೋಡೆಯಿಂದ ಇನ್ನೊಂದು ಗೋಡೆಗೆ ಜೋಡಿಸಿ, ಅದರ ಮೇಲೆ ಸಾಮಾನುಗಳನ್ನು ಇಡುತ್ತಿದ್ದರು. ಅದಕ್ಕೆ ಅಟ್ಟ ಎಂದು ಹೆಸರು. ದಿನಂಪ್ರತಿ ಬೇಡವಾದ ಎಲ್ಲಾ ಪದಾರ್ಥಗಳಿಗೂ ಅದು ಕೂಡಿಡುವ ಜಾಗ.

ಉದಾ: ಅಡಕೆಮೂಟೆಗಳೆಲ್ಲ ಅಟ್ಟದಮೇಲಿವೆ. ಒಂದೊಂದಾಗಿ ಕೆಳಕ್ಕೆ ಇಳಿಸು.

<aTTa> Loft - Generally, in the house kitchen, seven to eight height, attached wooden planks from one wall to another wall, on top of it keeping things. It is called Staircase. Things which are not required daily, it is the place to store.

Eg: Areca bags are all on stair. Bring down one by one.

41. ಅಟ್ಟಕ್ಕೇರಿಸುವುದು: ಇರುವ ಪರಿಸ್ಥಿತಿಗಿಂತ ಯಾರನ್ನಾದರೂ ಅತಿಯಾಗಿ ಹೊಗಳಿದರೆ, ಉತ್ಪ್ರೇಕ್ಷೆಯಿಂದ ಮಾತಾಡಿದರೆ ಅದನ್ನು ತಿಳಿಸುವುದಕ್ಕೆ **ಅಟ್ಟಕ್ಕೇರಿಸುವುದು** ಎಂಬ ಪದವನ್ನು ಬಳಸುತ್ತಾರೆ.

ಉದಾ: ಎಲ್ಲರೂ ಸೇರ್ಕಂಡು ಆ ರಾಮಪ್ಪನ್ನ ಅಟ್ಟಕ್ಕೇರಿಸಿ ಕುಂತವ್ರೆ, ಅವನು ಆಡಿದ್ದೇ ಆಟ.

<aTTakkeerisuvudu> Praising too much - When you praise anybody unnecessarily than the reality, or talk with exaggeration, to make it understand they use the word Attakkerisuvudu.

Eg: All joining, are sitting unnecessarily praising Ramappa. He plays his own game.

42. ಅಟ್ಟಣೆ: ಗದ್ದೆ, ಹೊಲಗಳಲ್ಲಿ ಏಳೆಂಟು ಅಡಿ ಎತ್ತರಕ್ಕೆ ಗಳುವಿನಿಂದ ಮಾಡಿರುವ ಚಪ್ಪರಕ್ಕೆ **ಅಟ್ಟಣೆ** ಎಂದು ಹೆಸರು. ಅಟ್ಟಣೆಯ ಮೇಲೆ ಕುಳಿತುಕೊಂಡು

ದನಕರುಗಳು ಜಮೀನಿನಲ್ಲಿ ನುಗ್ಗದಂತೆ ಬೆಳೆಯನ್ನು ಕಾಯುತ್ತಾರೆ. ಅಟ್ಟಣೆಗೆ **ಮಂಚಿಗೆ** ಎಂದೂ ಹೇಳುವರು. ಹುಲ್ಲಿನ ಮೆದೆಯನ್ನು ಒಟ್ಟುಹಾಕಲು ನೆಲದಿಂದ ಒಂದೆರಡು ಅಡಿ ಎತ್ತರಕ್ಕೆ ಬೊಂಬಿನಿಂದ ಮಾಡಿರುವ ಜಾಗಕ್ಕೂ ಅಟ್ಟಣೆ ಎಂದೇ ಹೆಸರು.

ಉದಾ: ಗದ್ದೆತಾವ ಹಾಕಿರುವ ಅಟ್ಟಣೆಯ ಎರಡು ಗೂಟ ಮುರ್ಕಂಡವೆ. ನಾಳೆ ಬೇರೆ ಗೂಟ ಹಾಕು.

ನೋಡಿ: ಮಂಚಿಗೆ

<aTTaNe> High Platform. A pandal erected at a height of seven or eight feet made of Bamboo in paddy field is called Attane or Attanige. They sit on that and protect the crop and see that cows are not rushing inside the paddy field. They also call Attane as Manchige.

Eg: Two poles of pandal in the paddy field are broken Put new ones

See: Mancige

43. ಅಟ್ಟುಗುಣಿ: ಕರೀಮರದಿಂದ ತಯಾರಾದ ಆಟದ ಮಣೆ. ಅದರಲ್ಲಿ 14 ಗುಣಿಗಳಿರುತ್ತವೆ. ಒಂದೊಂದರಲ್ಲೂ 5 ಹುಣಸೆ ಬೀಜ ಅಥವಾ ಹಾಲುವಾಣದ ಬೀಜವನ್ನು ತುಂಬಿ ಆಟವಾಡುತ್ತಾರೆ. ಇಬ್ಬರು ಎದುರುಬದಿರಿಗೆ ಕುಳಿತುಕೊಂಡು ಆಡಬಹುದು. ಆ ಮಣೆಗೆ ಅಟ್ಟುಗುಣಿ, ಚನ್ನಾಮಣೆ ಅಥವಾ ಅಳುಗುಳಿಮಣೆ ಎಂದು ಹೆಸರು. ಹಳ್ಳಿಗಾಡಿನಲ್ಲಿ ಹೆಣ್ಣು ಮಕ್ಕಳೇ ಈ ಆಟವನ್ನು ಹೆಚ್ಚುಮಟ್ಟಿಗೆ ಆಡುವುದು.

ಒಬ್ಬರು ಆಡುವಾಗ ಒಂದು ಗುಣಿಯಲ್ಲಿರುವ ಐದು ಬೀಜಗಳನ್ನು ತೆಗೆದುಕೊಂಡು ಅದರ ಎಡಭಾಗದಲ್ಲಿರುವ ಪ್ರತಿಯೊಂದು ಗುಣಿಗೂ ಒಂದೊಂದು ಬೀಜವನ್ನು ಹಾಕುತ್ತಾ ಹೋಗಬೇಕು. ಅದು ಮುಗಿದ ಕೂಡಲೆ ಅದರ ಪಕ್ಕದ ಗುಣಿಯಲ್ಲಿರುವ ಬೀಜಗಳನ್ನು ತೆಗೆದುಕೊಂಡು ಅದರ ಮುಂದಿನ ಗುಣಿಗಳಿಗೆ ಹಾಕುತ್ತಾ ಹೋಗಬೇಕು. ಅದು ಮುಗಿದಾಗ ಮುಂದಿನ ಗುಣಿ ಖಾಲಿ ಇದ್ದರೆ ಖಾಲಿ ಗುಣಿಯ ಮುಂದಿನ ಗುಣಿಯಲ್ಲಿ ಎಷ್ಟು ಬೀಜಗಳು ಭರ್ತಿಯಾಗಿರುತ್ತೋ ಅದೆಲ್ಲವೂ ಅವರಿಗೇ ಸಿಗುತ್ತೆ, ಅಷ್ಟು ಬೀಜಗಳನ್ನು ಗೆದ್ದ ಹಾಗೆ. ನಂತರ ಎದುರು ಬದಿಯ ಆಟಗಾರನು ಶುರುಮಾಡುತ್ತಾನೆ.

ಉದಾ: ಕಮಲಾ ಚನ್ನಾಮಣೆ ಆಡೋಣ ಬರ್ತೀಯಾ? ನೋಡಿ: ಚನ್ನಾಮಣೆ–ಅಳುಗುಳಿಮಣೆ

<aTTuguNi> A kind of play - A wooden plank with fourteen holes (two rows of seven each). It is made of black wood. They play, filling in each hole five tamarind or haluvana seeds. Two players sit facing each other and play. That plank is also called Attuguni, Channamane or Alugulimane. While one is playing, picking up the five seeds in a hole goes on putting one each into one hole on left side. When it is finished taking the seeds of the side hole putting each into the next holes. When that is finished if the next hole is empty, next hole with seeds whatever is filled, that player who is playing will get. The opposite player commences to play.

Eg: Kamala, can you come to play Channamane?

See Channamane, Alugulimane.

44. ಅಡಕೆಮಣೆ: ಅಡಕೆ ಕಾಯಿನ ಸಿಪ್ಪೆಯನ್ನು ಸುಲಿಯಲು ಉಪಯೋಗಿಸುವ ಸಾಧನ ಅಡಕೆ ಮಣೆ. ಮಲೆನಾಡು ಪ್ರದೇಶದಲ್ಲಿ ಸಾಮಾನ್ಯವಾಗಿ ಹೆಂಗಸರೇ ಈ ಕೆಲಸವನ್ನು ಮಾಡುವುದು. ರಾಶಿರಾಶಿಯಾಗಿ ಬಿದ್ದಿರುವ ಅಡಕೆ ಕಾಯಿನ ಸಿಪ್ಪೆಯನ್ನು ಸುಲಿದು ಸಣ್ಣಗೆ ಚೂರು ಮಾಡಿ, ಅನಂತರ ಅದನ್ನು ಬೇಯಿಸುತ್ತಾರೆ.

ಬೇಯಿಸಿದ ಅಡಕೆಯನ್ನು ಬಿದಿರನ ಚಾಪೆಯ ಮೇಲೆ ಹರಡಿ ಒಣಗಿಸುತ್ತಾರೆ. ತೋಟಗಾರಿಕೆಯಲ್ಲಿ ಕೇಣಿ, ಗುತ್ತಿಗೆ ಇಂದಿಗೂ ಬಳಸುತ್ತಿರುವ ಶಬ್ದಗಳು. ಸಾಮಾನ್ಯವಾಗಿ ಅಡಕೆಯನ್ನು ಕೇಣಿಗೆ ಕೊಡುತ್ತಾರೆ. ತೋಟದಲ್ಲಿರುವ ಅಡಕೆ ಮರದಲ್ಲಿ ಬಿಟ್ಟಿರುವ ಕಾಯನ್ನು ನೋಡಿ, ಅಂದಾಜಿನ ಮೇಲೆ ಅದರ ಮಾರಾಟದಿಂದ ಬರಬಹುದಾದ ಹಣವನ್ನು ಗೊತ್ತು ಪಡಿಸಿಕೊಂಡು ಮಾರಿದಹಾಗೆ, ಕೊಂಡಿರುವವರು ಅಡಕೆ ಕಾಯನ್ನು ಮರದಿಂದ ಇಳಿಸಿ ಸಿಪ್ಪೆ ಸುಲಿದು, ಬೇಯಿಸಿ, ಒಣಗಿಸಿ ಮಾರಾಟ ಮಾಡುತ್ತಾರೆ.

ತೋಟದ ಮಾಲಿಕರಿಗೆ ನಾಲ್ಕೈದು ಸೇರು ಅಡಕೆಯನ್ನೂ ಕೊಡುತ್ತಾರೆ. ಬೇಯಿಸಲು ಸಾಧ್ಯವಾಗದೆ ಇರುವ ಕಾಯಿಗಳನ್ನು ಬಿಸಿಲಿನಲ್ಲಿ ಒಣಗಿಸಿ ಮಾರಾಟ ಮಾಡುತ್ತಾರೆ. ಚೂರಾಗಿರುವ ಅಡಕೆಯನ್ನು ಮಾರಾಟ ಮಾಡಿದಾಗ ಹೆಚ್ಚುಬೆಲೆ ದೊರಕುತ್ತೆ.

ಉದಾ: ಅಡಕೆಕಾಯಿನ ಸುಲಿಸ್ಬೇಕು, ಅಡಕೆಮಣೆ ತಂದಿಡು.

ನೋಡಿ: ಗುತ್ತಿಗೆ, ಕೇಣಿ

<aDakemaNe> (-) Instrument to peel outer skin of areca - The tool used for peeling the skin of betelnut is called Adakemane**.** Generally, in Malnad area, only women do this job. They peel the skin of betelnuts spread in heaps, cut into pieces, then bake. Spreading the baked nuts on Bamboo mats. In gardening, Keni, Guttige (Contract, Agreement) are the words in usage. Generally, for betelnuts, they give for Keni. After observing the betelnut tree, they come to know the estimated price that is expected, the buyers will get the nuts plucked and processed and sell. They also offer four or five seers of nuts to the owners. The nuts which cannot be baked are dried in the sun and sold. If the fully processed ones are sold they get more money.

Eg: We must get peeled the nuts. Bring the ADakemaNe and keep here.

See: Guttige, KeeNi.




45. ಅಡಕೆಮರ: ಅಡಕೆ ಮರಗಳು ಮಲೆನಾಡಿನಲ್ಲಿ ಹೆಚ್ಚು. ಅಡಕೆ ತೋಟ ಮಾಡುವವರು ನಮ್ಮೂರಲ್ಲಿ ಸಾಕಷ್ಟು ಜನ ಇದ್ದಾರೆ. ಅಡಕೆ ಮರದ ತುದಿ ಮತ್ತು ಬುಡವನ್ನು ಕತ್ತರಿಸಿ ಮಧ್ಯಭಾಗವನ್ನು ಮನೆ ಕಟ್ಟಲು ತೊಲೆಯಾಗಿ ಉಪಯೋಗಿಸುತ್ತಾರೆ. ಅದನ್ನು ನಾಲ್ಕು ಭಾಗವಾಗಿ ಸೀಳಿ ಒಂದರಪಕ್ಕಕ್ಕೊಂದನ್ನು ಜೋಡಿಸಿದರೆ ಮೇಲ್ಛಾವಣಿಯಾಗುತ್ತೆ.

ಉದಾ: ಅಡಕೆ ಮರವನ್ನು ಮದುವೆ ಚಪ್ಪರಕ್ಕೆ ಕಂಬಗಳಂತೆ ಬಳಸುತ್ತಿದ್ದರು.

<aDakemara> Areca Tree - In Malnad, there are plenty of betelnut trees. Number of people do Areca. Areca is also another name for betelnut. Cutting the upper and lower portion of the tree, they use the middle portion for house Construction.

If it is split into four pieces vertically and joined side by side, it becomes roof.

Eg: They were using arecatree as poles for constructing marriage pandal.



46. ಅಡಕೆಪಟ್ಟೆ: ಅಡಕೆ ಗೊಂಚಲನ್ನು ಮುಚ್ಚಿರುವ ದೊಡ್ಡ ಬಿಳಿಯ ಪಟ್ಟೆ. ಇದು ಮರದಿಂದ ಕೆಳಕ್ಕೆ ಬಿದ್ದಾಗ, ಅದರ ತೊಟ್ಟನ್ನು ಕತ್ತರಿಸಿ ಹಾಳೆಯಿಂದ ತಲೆಗೆ ಹಾಕುವ ಟೋಪಿಯನ್ನು ಮಾಡಲು ಕೂಲಿಗಳು ಉಪಯೋಗಿಸುತ್ತಾರೆ. ಈ ಹಾಳೆಯಿಂದ ದೊನ್ನೆ, ತಟ್ಟೆಗಳನ್ನೂ ಮಾಡಬಹುದು. ಊರಿಂದೂರಿಗೆ ಹೋಗುವಾಗ, ಅಡಕೆ ಹಾಳೆಯ ತಳ ಭಾಗವನ್ನು ಮೆತ್ತಗೆ ಸುಲಿದು, ಮೇಲ್ಭಾಗದ ಹಾಳೆಯಲ್ಲಿ, ಪುಳಿಯೋಗರೆ, ಮೊಸರನ್ನವನ್ನು ಇಟ್ಟುಕೊಂಡು ಹೋಗುತ್ತಿದ್ದರು. ಇದು ಕಟ್ಟುವುದಕ್ಕೆ ಬಹಳ ಸುಲಭ.

ಉದಾ: ನಾಳೆ ಊರಿಗೆ ಹೊರಡೋಕ್ಮುಂಚೆ ಪುಳಿಯೋಗರೆ ಮಾಡಿ ಅಡಕೆಹಾಳೇಲಿ ಕಟ್ಕೊಡು.

ನೋಡಿ: ಕುರುಂಬಾಳೆ

<aDakepaTTe> Bark of Areca - The bark of areca tree is called Areca bough. When it falls from the Tree, the labourers cut the edge and use the bark as cap. Cups and plates are also made of the bough. When going out of the town, slowly peeling out the bottom layer of the bough, in the upper portion they used to keep tamarind rice and curd rice. This is easy to tie.

Eg: Tomorrow before leaving prepare tamarind rice and tie it in the Areca bough.

See: KurumbaaLe.

47. ಅಡಾವುಡಿ: ಸುಮ್ಮನೆ ಇಲ್ಲಸಲ್ಲದ ಗಡಿಬಿಡಿ ಮಾಡುತ್ತಿದ್ದರೆ ಅಡಾವುಡಿ ಅನ್ನುವ ಪದವನ್ನು ಹೇಳುತ್ತಾರೆ.

ಉದಾ: ಅವ ಅಡಾವುಡಿ ಮಾಡಿ ಪ್ರತಿಯೊಂದೂ ಕುಲಗೆಟ್ ಹೋಗೈತೆ. ನೀನು ಅಡಾವುಡಿ ಮಾಡ್ದೇ ಇದ್ದಿದ್ದರೆ ಅರ್ಧಕರ್ಧ ಸಾಮಾನು ಉಳಿಸ್ಕೋಬಹುದಾಗಿತ್ತು.

<aDaavudi> Confusion - If one is creating confusion unnecessarily, they use the word ADaavudi.

Eg: He is creating unnecessary confusion, everything is destroyed. If you had not been hasty; you could have saved half of things.

48. ಅಡಿಗಲ್ಲು: ನೋಡಿ: ಬೀಸುವಕಲ್ಲು

<aDigallu> Lower Millstone

49. ಅಡಿಪಾಯ: ಅಡಿಪಾಯ ಎಂದರೆ ಕಟ್ಟಡಕ್ಕೆ ನೆಲದ ಮಟ್ಟದಿಂದ ಕೆಳಕ್ಕೆ ಕಟ್ಟುವ ಕಲ್ಲಿನಗೋಡೆ. ಅಡಿಗಲ್ಲು ಎಂದರೆ ಪಾಯದ ಕಲ್ಲು. ಕಟ್ಟಡಕ್ಕೆ ಬಳಸುವ ಕಲ್ಲು ಅಡಿಗಲ್ಲು. ಅಡಿಗಲ್ಲನ್ನು ಇಡುವುದು ಎಂದರೆ ಪಾಯದ ಮೊದಲ ಕಲ್ಲನ್ನು ಯಾರಾದರೂ ಗಣ್ಯರ ಕೈಲಿ ಇಡಿಸುವುದಕ್ಕೆ ಶಂಕುಸ್ಥಾಪನೆ, ಅಡಿಗಲ್ಲು ಹಾಕುವ ಸಮಾರಂಭ ಎನ್ನುತ್ತಾರೆ. ಅಡಿಗಲ್ಲು ಎಂಬ ಮಾತನ್ನು ಕಮ್ಮಾರರು ಕೊಡಲಿ, ಸುತ್ತಿಗೆಯಿಂದ ಕಬ್ಬಿಣ ಕುಟ್ಟುವ ಕೆಲಸಕ್ಕೆ ಅಡಿಯಲ್ಲಿ (ಕೆಳಗಿರುವ) ಬಳಸುವ ಕಲ್ಲಿಗೂ ಅಡಿಗಲ್ಲು ಎನ್ನುತ್ತಾರೆ.

ನೋಡಿ: ಕಮ್ಮಾರ, ತಿದಿ, ಕುಲುಮೆ

<aDipaaya> Foundation - For the house, stone wall built below the ground level, is known as Foundation. Stone used for basement is Adigallu. To put Foundation Stone means, the first Stone laid by any eminent person, is known as Foundation Ceremony, customary practice of laying a stone. The word Adigallu is used by blacksmiths also for hammering axe etc. with iron Hammer on ADigallu.

See: Kammaara, Tidi, Kulume.

50. ಅಡೆಹಾಕು: ಮರದಿಂದ ಕಿತ್ತ ಮಾವಿನ ಕಾಯಿಗಳನ್ನು ಕಳಿತು ಹಣ್ಣಾಗಲು ಹುಲ್ಲು ಹಾಸಿನ ಮೇಲೆ ಹಾಕುತ್ತಾರೆ. ನೆಲದ ಮೇಲೆ ಭತ್ತದ ಹುಲ್ಲನ್ನು ಹರಡಿ ಮಾವಿನಕಾಯಿಗಳನ್ನು ಸಾಲಾಗಿ ಜೋಡಿಸಿ, ಮೇಲ್ಭಾಗವನ್ನು ಹುಲ್ಲಿನಿಂದ ಮುಚ್ಚುತ್ತಾರೆ. ಅದಕ್ಕೆ **ಅಡೆಹಾಕುವುದು** ಎಂದು ಹೆಸರು.

ಅಂತೆಯೇ ಬಾಳೆಕಾಯನ್ನು ಹಣ್ಣು ಮಾಡುವುದಕ್ಕೆ ಮಣ್ಣಿನಿಂದ ಮಾಡಿರುವ ಗುಡಾಣದೊಳಕ್ಕೆ ಆವರಿಕೆಸೊಪ್ಪನ್ನು ಹರಡಿ ಬಾಳೆಕಾಯಿನ ಚಿಪ್ಪುಗಳನ್ನು ಜೋಡಿಸಿಟ್ಟು ಮೇಲ್ಭಾಗವನ್ನು ಪುನಃ ಸೊಪ್ಪಿನಿಂದ ಮುಚ್ಚುತ್ತಾರೆ. ಗುಡಾಣದ ಬಾಯನ್ನು ಮಣ್ಣಿನ ತಟ್ಟೆಯಿಂದ ಮುಚ್ಚಿ ಮೇಲ್ಭಾಗಕ್ಕೆ ಬೆರಣಿಯಿಟ್ಟು ಬೆಂಕಿಹಾಕುತ್ತಾರೆ. ನಾಲ್ಕಾರು ದಿವಸಗಳಲ್ಲಿ ಬಾಳೆಕಾಯಿ ಹಣ್ಣಾಗುತ್ತೆ.

ಉದಾ: ಮಾವಿನ ಕಾಯಿ ಅಡೆ ಹಾಕಿದೆ, ಮುಂದಿನ ವಾರ ಬಾ ಹಣ್ಣು ಕೊಡ್ತೇನೆ.

ನೋಡಿ: ಹಣ್ಣುಮಾಡು

<aDehaaku> (-) To stock unripe fruits inside bay **-** Mangoes plucked from the tree are spread on thick grass to ripen them. Spreading paddy grass, they arrange mangoes in rows and cover with grass. This is called Adehakuvudu**.** Same way for ripening raw bananas, in the large earthen pot, they spread a kind of leaves called Avarike. On top of it place bananas and cover with same leaves. They cover the mouth of the pot with an earthen lid and placing dry cow dung and put fire on it. Within 4-5 days, bananas will ripe.

Eg: *Mangoes are under processing. Come next week I will give you.*

See: Hannu maaDu.

51. ಅಡ್ಡಗಟ್ಟು: ಹರಿಯುವ ನೀರನ್ನು ತಡೆದು ನಿಲ್ಲಿಸಲು ಕಾಲುವೆಗೆ ಅಡ್ಡ ಹಾಕಲು ಅಣೆಕಟ್ಟನ್ನು ಹಾಕುತ್ತಾರೆ. ಅದಕ್ಕೆ **ಅಡ್ಡಗಟ್ಟು** ಎಂದು ಹೆಸರು. ಹಾಗೆ ಅಡ್ಡಗಟ್ಟು ಹಾಕಿದ ನಂತರ ನೀರನ್ನು ಆಯಾಯ ತೋಟಗಳಿಗೆ ಬಿಡಬಹುದು. ತೋಟದ ಪೂರ್ತಿ ನೀರು ಹಾಯಿಸಿದ ಮೇಲೆ, ಅಡ್ಡಗಟ್ಟನ್ನು ತೆಗೆಯುತ್ತಾರೆ. ಅದರ ಉಸ್ತುವಾರಿಯೆಲ್ಲ ಹಳ್ಳಿಗೆ ಜವಾಬ್ದಾರನಾದ ನೀರ್‌ಗಂಟಿಯ ಕೆಲಸ.

ಉದಾ: ನಿನ್ನೆ ಕೆರೆಯಿಂದ ಕಾಲುವೆಗೆ ನೀರು ಬಿಟ್ಟಿದಾರಂತೆ. ನಮ್ಮ ತ್ವಾಟದ ಮುಂದೆ ಅಣೆಕಟ್‌ಹಾಕಿ ತ್ವಾಟಕ್ಕೆ ನೀರು ಹಾಯಿಸ್ಬೇಕು.

ನೋಡಿ: ನೀರ್‌ಗಂಟಿ

<aDDagaTTu> (-) Stand in a way and obstruct movement **-** To stop the running water, they put a barrier to the

canal. The name of the barrier is AddagaTTu. After putting the barrier water flow can be diverted to the respective gardens. When the garden is fully watered, the barrier is removed. For supervision of all this work the person responsible in the village is called NeergaNTi.

Eg: *Yesterday they have diverted water from the tank to the canal. In front of our garden, putting barrier divert water to the garden.* [See: NeergaNTi]

52. ಅಡ್ಡಗಾಲು ಹಾಕು: ಮಾಡುವ ಕೆಲಸಕ್ಕೆ ಅನವಶ್ಯಕವಾಗಿ ಏನಾದರೂ ತೊಂದರೆ ಮಾಡಿದರೆ ಅಡ್ಡಗಾಲು ಹಾಕ್ತಾರೆ ಅನ್ನುವುದು ರೂಢಿ.

ಉದಾ: ಎಲ್ಲಾ ಕಡೇ ಹಂತಕ್ಕೆ ಬಂದಿತ್ತು, ಆ ನಂಜಪ್ಪ ಅಡ್ಡಗಾಲು ಹಾಕ್ಬಿಟ್ಟು ಕೆಲಸ ಎಲ್ಲಾ ನಿಂತೋಯ್ತು.

<aDDagaalu haaku> (-) To create trouble in one's path **-** If unnecessarily create trouble for the work to be done, it is common usage to say ADDagaalu haaktare.

Eg*: It had reached the final stage. That Nanjappa intervened and obstructed. All the work came to a halt.*

53. ಅಡ್ಡಗೋಡೆ: ಮನೆಯಲ್ಲಿ ಸ್ವಲ್ಪ ಭಾಗವನ್ನು ಪ್ರತ್ಯೇಕ ಮಾಡಬೇಕಾದರೆ, **ಅಡ್ಡ ಗೋಡೆ** ಹಾಕುತ್ತಾರೆ. ಅಡ್ಡಗೋಡೆ ಮೇಲ್ಛಾವಣಿಗಿಂತ ಕೆಳಕ್ಕೆ ಮೊಟಕಾಗಿರುತ್ತೆ. ಯಾವಾಗ ಬೇಕೆಂದರೆ ಆಗ ತೆಗೆದು ಬಿಡಬಹುದು.

ಅಡ್ಡಗೋಡೆಯ ಮೇಲೆ ದೀಪ ಇಟ್ಟಂಗೆ ಅನ್ನುವ ಗಾದೆ ಬಳಕೆಯಲ್ಲಿದೆ. ಕಾರಣ ಆ ದೀಪ ಆ ಕಡೆಗೂ ಕಾಣುತ್ತೆ, ಈ ಕಡೆಗೂ ಕಾಣುತ್ತೆ. ಯಾವುದಾದರೂ ತೀರ್ಮಾನವನ್ನು ಸರಿಯಾಗಿ ಹೇಳದೆ ಅದು ಎರಡು ಕಡೆಗೂ ಸರಿ ಹೊಂದುವಹಾಗಿದ್ದಾಗ ಆ ಗಾದೆಯನ್ನು ಹೇಳುತ್ತಾರೆ.

ಉದಾ: ಸುಮ್ಕೆ ಅಡ್ಡ ಗೋಡೆ ಮೇಲೆ ದೀಪ ಇಟ್ಟಂಗೆ ಮಾತಾಡ್ಬ್ಯಾಡ. ವಸಿ ಏಚನೆ ಮಾಡಿ ಉತ್ತರ ಹೇಳು.

ನೋಡಿ: ಮೋಟು ಗೋಡೆ

<aDDagooDe> Partition wall - If a portion in the house is to be separated, they put a partition wall. It is a small wall below the roof. Any time it can be removed. There is a proverb

"Just as putting a lamp on the partition wall". Reason, the lamp can be seen from this side and that side. If any decision on an appeal is applicable to both sides they use the proverb.

Eg: *Do not talk like putting lamp on partition wall. Think a little and tell the correct answer.*

See Motugode.

54. ಅಡ್ಡದಾರಿ: ಮುಖ್ಯವಾದ ರಸ್ತೆಯನ್ನು ತಲುಪಲು ಇರುವ ದಾರಿ ಬಿಟ್ಟು ಬೇರೆ ಕಡೆ ತಿರುಗುವುದನ್ನು **ಅಡ್ಡದಾರಿ** ಎನ್ನುತ್ತಾರೆ. ತಪ್ಪುದಾರಿಯಲ್ಲಿ ಮನಸ್ಸನ್ನು ಹರಿಬಿಟ್ಟರೆ ಅವನು ಅಡ್ಡದಾರಿಯಲ್ಲಿ ಹೋಗುತ್ತಿದ್ದಾನೆಂದು ಹೇಳುವುದು ರೂಢಿ.

ಉದಾ: ಗೌಡ್ರ ಎರಡನೆ ಮಗ ಅಡ್ಡದಾರಿ ಹಿಡಿದಿದ್ದಾನೆ, ಅವನನ್ನು ಸರಿಯಾದ ದಾರಿಗೆ ತರುವುದು ಬಹಳ ಕಷ್ಟದ ವಿಚಾರ.

<aDDadaari> (-) Path running across Main road - Instead of main road, if you turn in a crossroad, it is called Addadari. If you start thinking in a wrong direction, it is common usage to say that he is going in crossroad.

Eg: *The second son of Gowda is going in wrong path. It is difficult to set right him.*

55. ಅಡ್ಡಬೀಳುವುದು: ನೆಲದ ಮೇಲೆ ಮಲಗಿ ಸಾಷ್ಟಾಂಗ ನಮಸ್ಕಾರ ಮಾಡುವುದಕ್ಕೆ ಅಡ್ಡ ಬೀಳುವುದು ಎನ್ನುವ ಪದ ರೂಢಿಯಲ್ಲಿದೆ.

ಉದಾ: ನಾನು ನಿಂಗಯ್ಯ ಅಡ್ಡಬಿದ್ದೆ ಬುದ್ದಿ, ಸ್ವಾಮೇರು ನಂಗೆ ಸಹಾಯ ಮಾಡ್ಬೇಕು.

<aDDabiiLuvudu> Prostrate - To lie down on the floor and prostrate is known as ADDabiiLuvudu**.**

Eg*: Me, Ningaiah. ADDabidde buddi. Please help me.*

56. ಅಡ್ಡ ಮಳೆ: ಮಳೆಗಾಲದಲ್ಲಲ್ಲದೆ ಯಾವುದೋ ಕಾಲದಲ್ಲಿ ಇದ್ದಕ್ಕಿದ್ದಂತೆ ಸುರಿಯುವ ಮಳೆಗೆ **ಅಡ್ಡ ಮಳೆ** ಎನ್ನುತ್ತಾರೆ.

ಉದಾ: ಈ ವರ್ಷ ಅಡ್ಡ ಮಳೆ ಬಂದು ಪೈರೆಲ್ಲ ಹಾಳಾಗೋಯ್ತು.

<aDDa maLe> Unseasoned Rain - Apart from rainy season, suddenly if rains in any other season, they say ADDa

maLe.

Eg: *This year on account of unseasonal rain, entire crop was destroyed.*

57. ಅಡ್ಡವಾಸನೆ: ವಾಸ್ತವ ಪರಿಸ್ಥಿತಿಯಲ್ಲಿರುವುದಕ್ಕಿಂತ ಏನಾದರೂ ವ್ಯತ್ಯಾಸವಾಗಿದ್ದರೆ ಅಡ್ಡವಾಸನೆ ಬರುತ್ತಿದೆ ಎನ್ನುತ್ತಾರೆ.

ಉದಾ: ಬೆಣ್ಣೆ ಕಾಯಿಸಿದರೆ ತುಪ್ಪ ಏನೋ ಅಡ್ಡವಾಸನೆ ಬರುತ್ತಿದೆ. ಬೆಣ್ಣೆಗೆ ಏನಾದರೂ ಬೆರೆಸಿರಬಹುದು.

<aDDa vaasane> Unnatural smell - An unusual smell of a substance if you are smelling differently from its reality, they say ADDa vaasane is coming.

Eg: *When butter is heated some odd smell is coming. Something might have been mixed.*

58. ಅಡ್ಡಹೆಸರು: ಮಗುವಿಗೆ ನಾಮಕರಣ ಮಾಡಿದಾಗ ಜಾತಕದಲ್ಲಿ ಬರೆದ ಹೆಸರನ್ನು ಬೇರೆ ಹೆಸರಿನಿಂದ ಕರೆಯುವುದಕ್ಕೆ ಅಡ್ಡ ಹೆಸರು ಎಂದು ಹೇಳುವುದು ವಾಡಿಕೆ. ಕರೆಯುವುದಕ್ಕೆ ಸುಲಭವಾಗುವುದು ಒಂದಾದರೆ, ಪ್ರೀತಿಯಿಂದ ಕರೆಯುವುದು ಇನ್ನೊಂದು ಕಾರಣ.

ಉದಾ: ನಮ್ಮ ಹಳ್ಳಿಯಲ್ಲಿ ಒಬ್ಬರ ಹೆಸರು ಸುಬ್ರಹ್ಮಣ್ಯ ಶಾಸ್ತ್ರಿ ಎಂದು. ಅವರಿಗೆ ಅಡ್ಡಹೆಸರಿನಿಂದ ಕರೆಯುತ್ತಿದ್ದುದು ಜಟಾಯು ಎಂದು! ಅದಕ್ಕೆ ಕಾರಣ ಅವರ ತಲೆಯ ಕೂದಲು ಫಕೀರರ ತಲೆಯ ಕೂದಲಿನಂತೆ ಸುರುಳಿ ಸುರುಳಿಯಾಗಿ ಇಳೀಬಿಟ್ಟಿತ್ತು.

ನೋಡಿ: ಬಳಕೆಹೆಸರು (ಗಿಡ್ಡಹೆಸರು)

<aDDahesaru> Nick name - Apart from what is written in the horoscope of the child, to call with a different name is called as ADDahesaru (nickname). If one reason is easy to call, another reason to show affection.


Eg*: In our village, one person's name is Subramanya Shastri. But he was being called with nickname as Jatayu! The reason for this is, his hair was hanging coil like that of a Muslim mendicant*.

See Usage name (Balake hesaru), GiDDahesaru.

59. ಅಡ್ಡಾದಿಡ್ಡಿ: ನೋಡಿ: ತೊಳಸಂಬಟ್ಟೆ

<aDDadiDDi> Mess or Confusion, See: Tholasambatte.

60. ಅಡ್ಡೆ: ಬಾವಿ ಅಥವಾ ಕೆರೆಯಿಂದ ನೀರನ್ನು ತರುವಾಗ ಒಂದು ಬಳುಕುವಂತಹ ಬಿದಿರಿನ ಕೋಲಿಗೆ ಎರಡು ಕಡೆಗೂ ಹಗ್ಗವನ್ನು ಕಟ್ಟಿ, ಒಂದೊಂದು ಹಗ್ಗಕ್ಕೂ ಒಂದು ನೀರು ತುಂಬಿದ ಕೊಡವನ್ನು ಕಟ್ಟಿ ಬಿದಿರನ ಕೋಲನ್ನು ಹೆಗಲು ಮೇಲೆ ಹೊತ್ತಿಕೊಂಡು ತರುತ್ತಾರೆ. ಕೋಲಿನ ಉದ್ದ ಸುಮಾರು 4–5 ಅಡಿ. ಅಡ್ಡೆ ಹೆಗಲ ಮೇಲಿದ್ದರೆ ಎರಡು ಕೊಡಗಳನ್ನು ಒಟ್ಟಿಗೆ ತೆಗೆದುಕೊಂಡು ನಡೆಯಬಹುದು.



ಉದಾ: ತಿಮ್ಮ ದಿನಾ ಅಡ್ಡೆಯಿಂದ ಕೆರೆನೀರು ತರುತ್ತಿದ್ದ.

<aDDe> Carrier: An equipment to carry water on shoulders. For bringing water from well or tank, a bamboo strip with rope tied on both edges is called Adde. Two water pots can be fixed to the rope. The bamboo strip is of a size of 4-5 feet length. If the strip is on shoulder, you can walk with two pots of water.

Eg: *Thimma was bringing water daily on ADDe.*

61. ಅಡ್ಡೆಯವರು: ದೇವರ ಉತ್ಸವ ಮೂರ್ತಿಯನ್ನು ಬೊಂಬಿನಿಂದ ಚೌಕಾಕಾರವಾಗಿ ಕಟ್ಟಿರುವ **ಅಡ್ಡೆಯ ಮೇಲೆ** ಇಟ್ಟು ನಾಲ್ಕು ಜನಗಳು ಹೆಗಲಿನ ಮೇಲೆ ಹೊತ್ತು ಊರಿನ ಎಲ್ಲಾ ರಸ್ತೆಗಳಲ್ಲು ಉತ್ಸವ ತೆಗೆದುಕೊಂಡು ಹೋಗುತ್ತಾರೆ. ಈ ತರಹ ಅಡ್ಡೆ ಭಾರವಾಗಿರುವುದಿಲ್ಲ. ಈ ಅಡ್ಡೆಯನ್ನು ಅಡ್ಡಪಲ್ಲಕ್ಕಿ ಎಂದು ಕರೆಯುವುದುಂಟು.

ಉದಾ: ಅಡ್ಡೆಯವರು ಸಿದ್ಧರಿದ್ದಾರಾ? ಕರೆಯಿರಿ.

ನೋಡಿ: ಅಡ್ಡಪಲ್ಲಕ್ಕಿ

<aDDeyavaru> One who carriers Adde - Keeping the God's idol on Adde constructed squarely with bamboo, four devotees carry on their shoulders and take the procession on

roads throughout. This type of Adde is not heavy. This is also called Palanquin (Pallakki).

Eg*: Are carriers ready? Call them.*

See: ADDapallakki (Palanquin)

62. ಅಣಸು: ಒನಕೆಯ ತುದಿ ಸವೆದು ಹೋಗದಂತೆ ಮಾಡಲು ಕಬ್ಬಿಣದ ಪಟ್ಟಿಯನ್ನು ತುದಿಗೆ ಸೇರಿಸುತ್ತಾರೆ. ಅದಕ್ಕೆ **ಅಣಸು** ಎಂದು ಹೆಸರು. ಅಂತೆಯೇ ಎತ್ತಿನ ಕೋಡುಗಳಿಗೆ ಮತ್ತು ಆನೆಯ ದಂತಕ್ಕೆ ಹಿತ್ತಾಳೆಯ ಅಣಸನ್ನು ಹಾಕುತ್ತಾರೆ.

ಉದಾ: ರಾಮೂ, ಕಮ್ಮಾರನ ಹತ್ತಿರ ಹೋಗಿ ಒನಕೆಗೆ ಅಣಸು ಹಾಕಿಸ್ಕೊಂಡ್ಬಾ.

<aNasu> Ferrule - To see that the edge of wooden pestle does not shrink, an iron blade is attached to it.It is called Anasu. Same way, for horns of ox and elephant's tusk brass blade is attached.

Eg*: Go to blacksmith and get iron blade for the pestle.*

63 ಅಣ್ಣ: ಮನೆಯಲ್ಲಿ ತಂದೆಯನ್ನು ಕೆಲವರು ಅಪ್ಪ ಎಂದು ಕರೆದರೆ ಕೆಲವರು ಅಣ್ಣ (ದೊಡ್ಡವನು) ಎಂಬರ್ಥದಲ್ಲಿ ಕರೆಯುತ್ತಾರೆ. ತಂಗಿ ತಮ್ಮಂದಿರು ತಮಗಿಂತ ದೊಡ್ಡವರಾದವರನ್ನು ಅಣ್ಣ ಎಂದು ಕರೆಯುತ್ತಾರೆ.

ಉದಾ: ಅಣ್ಣ ಸಂಜೆ ಬರುತ್ತಾನೆ, ಪುಸ್ತಕ ತರುತ್ತಾನೆ.

<aNNa> (-) In the house, some children call their father as Appa, others will call as ANNa, as an Elderly person. Sisters and brothers call their elder brother as ANNa. It is also in vogue**.**

In some of the places, to call their father as Bhaava or Bhavaiah and Mavaiah.

Eg: *ANNa is coming this evening. Will bring book.*

64. ಅನ್ನಪ್ರಾಶನ: ಮಗುವಿಗೆ ಒಂದು ವರ್ಷವಾದ ಮೇಲೆ **ಅನ್ನಪ್ರಾಶನ** ಮಾಡುತ್ತಾರೆ. ಈ ಶಾಸ್ತ್ರವನ್ನು ಹಿರಿಯ ಮುತ್ತೈದೆಯರಾಗಿ ಕೇವಲ ಹೆಂಗಸರೇ ನಡೆಸುತ್ತಾರೆ. ಅನ್ನಪ್ರಾಶನ ಎಂದರೆ ಮಗುವಿಗೆ ಅನ್ನ ತಿನ್ನಿಸುವ ಶಾಸ್ತ್ರ.

ಉದಾ: ಮುಂದಿನ ತಿಂಗಳು ಮಗುವಿಗೆ ಅನ್ನಪ್ರಾಶನ ಶಾಸ್ತ್ರ ಮಾಡಿಸುತ್ತಾರೆ.

<annapraashana> (-) Feeding the child with cooked rice **-** A ceremony of feeding the child for the first time with cooked rice. After the end of first year, to feed the child is called Anaprashana. Generally, the elderly women of the village only do this ceremony. Annaprashana means feeding the child with cooked rice.

Eg*: Next month they do Annaprashana for the child.*

65. ಅಪರೂಪ: ಬಹಳ ದಿವಸಗಳಿಂದ ಒಬ್ಬರನ್ನೊಬ್ಬರು ನೋಡಲು ಸಾಧ್ಯವಾಗದಿದ್ದಾಗ **ಅಪರೂಪ** ಎನ್ನುವ ಪದವನ್ನು ಬಳಸುವುದು ರೂಢಿಯಲ್ಲಿದೆ.

ಉದಾ: ಏನಪ್ಪ ಬಹಳ ಅಪರೂಪವಾಗ್ಬಿಟ್ಟೆ, ಒಂದು ವರ್ಷದಿಂದ ನಮ್ಮ ಹಳ್ಳೀ ಕಡೆ ತಲೆ ಹಾಕಿಲ್ಲ.

<aparuupa> (-) Rarity - When it is not possible to see one another for number of days, they use the word aparoopa (Rarity).

Eg: *What. It has become very rare to see. You have not come this side since a year.*

66. ಅಪಾಪೋಲಿ: ಕೆಟ್ಟನಡತೆಯುಳ್ಳ ಮನುಷ್ಯನಿಗೆ **ಅಪಾಪೋಲಿ** ಎಂದು ಕರೆಯುತ್ತಾರೆ.

ಉದಾ: ಕಡೇ ಮನೆ ಶೀನ ಊರಲ್ಲೆಲ್ಲ ಅಪಾಪೋಲಿಯಾಗಿ ತಿರುಗಾಡ್ತವ್ನೆ.

<apaapooli> Rake - A man with bad character is called Apapoli.

Eg*: Sheena of that last house has been roaming about in town as Apaapooli.*

67. ಅಬ್ಬೇಪ್ಯಾರಿ: ಸ್ವಲ್ಪವೂ ತಿಳುವಳಿಕೆಯಿಲ್ಲದೆ ಉಂಡಾಡಿಗುಂಡನಾಗಿ ಅಲೆಯುತ್ತಿರುವವನನ್ನು **ಅಬ್ಬೇಪ್ಯಾರಿ** ಎನ್ನುತ್ತಾರೆ.

ಉದಾ: ಗೌಡ್ರ ಕಡೇ ಹುಡುಗ ಅಬ್ಬೇಪ್ಯಾರಿಯಾಗಿ ತಿರುಗಾಡ್ಕಂಡಿದಾನೆ, ಮನೇಲಿ ಒಬ್ಬರೂ ಅವನಿಗೆ ನಿಗಾ ಕೊಟ್ಟಿಲ್ಲ.


<abbepyaari> (-) Without any knowledge if anyone is walking around lazily is called as Abbepyaari.

Eg: *The youngest son of Gowda has been roaming around. Nobody has taken care of him.*

68. ಅಭ್ಯಂಗನ ನೋಡಿ: ಜಳಕ, ಎಣ್ಣೆಶಾಸ್ತ್ರ.

<abhyangana> Bathing - Smearing the whole body with oil and take bath. It is also called ENNeshastra or JaLaka**.**

See: JaLaka, ENNeshaastra



69. ಅಭಿಷೇಕ: ದೇವಸ್ಥಾನಗಳಲ್ಲಿ ದೇವರ ವಿಗ್ರಹಕ್ಕೆ ಪಂಚಾಮೃತಸ್ನಾನ (ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ) **ಅಭಿಷೇಕ** ಮಾಡುತ್ತಾರೆ. ನಂತರ ಅದನ್ನು ತೀರ್ಥವಾಗಿ ಭಕ್ತಾದಿಗಳಿಗೆಲ್ಲ ನೀಡುವುದು ಸಂಪ್ರದಾಯ.

ಉದಾ: ರಾಮೇಶ್ವರ ದೇವಸ್ಥಾನದಲ್ಲಿ ಪಂಚಾಮೃತ ಅಭಿಷೇಕಕ್ಕೆ ಕೊಟ್ಟಿದ್ದೇನೆ.

<abhisheeka> A ritual bath given to idol. In temples, bathing the idol with milk, curds, ghee, honey and sugar is known as Abhisheeka / Panchamrutha snana. After abhisheeka that water is given to the devotees as holy water.

Eg: *We have given for Abhisheeka in the Rameshwara Temple.*

70. ಅಮಲೇರು: ಹೆಚ್ಚು ಕುಡಿದಾಗ ಬುದ್ಧಿ ವಿಕಾರವಾಗುವುದನ್ನು **ಅಮಲೇರುವುದು** ಎನ್ನುತ್ತಾರೆ.

ಉದಾ: ಅವನಿಗೆಲ್ಲೊ ಅಮಲೇರಿದೆ ಅಂತ ಕಾಣ್ತದೆ, ಸಂಜೆ ಮನೆತಾವ ಬರಲಿ, ಅವನ ಹುಟ್ಟಡಗಿಸಿಬಿಡ್ತೀನಿ. ಪಟ್ಟಾಗಿ ಹೆಂಡ ಕುಡಿದವ್ನೆ, ಇನ್ನೇನಾಗ್ತದೆ, ಅಮಲೇರಿದೆ.

<amaleeru> Become intoxicated - To loose wisdom is called Amaleruvudu.

Eg: *It seems he has been intoxicated. Let him come near the house. I will destroy him. He has drunk toddy fully. What else can happen. He has lost temper.*

71. **ಅಮಾನತ್ತು:** ದೂರುಗಳನ್ನು ವಿಚಾರಣೆ ಮಾಡುವುದಕ್ಕೆ ಸ್ವಲ್ಪಕಾಲ ಬೇಕು. ಅಲ್ಲಿಯವರೆಗೆ ಎಲ್ಲಾ ದೂರುಗಳನ್ನೂ **ಅಮಾನತ್ತಿನಲ್ಲಿಡಲಾಗಿದೆ** ಎಂದರೆ ದೂರನ್ನು ತನಿಖೆ ಮಾಡುವ ಅವಧಿ. ಅಂತಿಮ ತೀರ್ಮಾನವಾಗುವವರೆಗು ದೂರುಗಳ ಬಗ್ಗೆ ಯಾರೂ ಮಾತನಾಡುವಹಾಗಿಲ್ಲ.

ಉದಾ: ಇಬ್ಬರ ಅಹವಾಲುಗಳನ್ನೂ ತನಿಖೆ ಮಾಡಿ ಒಂದು ತೀರ್ಮಾನಕ್ಕೆ ಬರುವತನಕ ಅಮಾನತ್ತಿನಲ್ಲಿಡಬೇಕೆಂದು ಶ್ಯಾನುಭೋಗರು ತಿಳಿಸಿದರು.

<amaanatthu> (-) Deposit a thing for safe keeping - To keep in suspense: Some time is required to enquire into the complaints. Till such time all complaints are kept in suspense. That means till the final decision is taken, nobody can talk about the complaints.

Eg: *Till both the appeals are gone through and come to a final decision the Shaanbhooga informed to keep the appeals in suspense*

72. **ಅಯ್ಯ:** ಮಕ್ಕಳು ತಂದೆಯನ್ನು **ಅಯ್ಯ** ಅಥವಾ ಅಪ್ಪ ಎಂದು ಸಂಬೋಧಿಸುತ್ತಾರೆ. ಹಿರಿಯ ಗೌರವಸ್ಥರನ್ನು ಮತ್ತು ಜಂಗಮರನ್ನು ನೋಡಿದಾಗ ಅಯ್ಯನೋರು ಬಂದಿದಾರೆ, ವಸಿ ನೋಡು ಅನ್ನುತ್ತಾರೆ.


ಶಾಸ್ತ್ರಿಗಳು ಅಥವಾ ಪುರೋಹಿತರಿಗೆ ಅಯ್ಯನೋರು ಅನ್ನುವುದು ವಾಡಿಕೆಯಲ್ಲಿದೆ. ಹಳ್ಳಿಯಲ್ಲಿ ಶಾಲೆಯ ಮಕ್ಕಳಿಗೆ ಪಾಠ ಹೇಳುವ ಉಪಾಧ್ಯಾಯರಿಗೂ ಅಯ್ಯನೋರು ಎನ್ನುತ್ತಾರೆ.

ಉದಾ: ಅಯ್ಯನೋರು ಬಂದ್ರು ಮಣೆಹಾಕು.

<ayya> (-) Children address their father as Ayya or Appa. When an elderly person or a holy Veerashaiva is seen they say Ayyanooru has come. It is in vogue to call Shaastriji or Purohit (Priest) as Ayyanooru. In villages, the teacher who teaches to the school children is also called as Ayyanoru.

Eg: *Ayyanooru has come. Put the wooden seat.*

73. **ಅರಕಲಚೆಟ್ಟಿ:** ಅಗಲವಾದ ಬಾಯುಳ್ಳ ಹಿತ್ತಾಳೆಯ ಪಾತ್ರೆಗೆ ಅರಕಲಚೆಟ್ಟಿ ಎಂದು ಹೇಳುತ್ತಾರೆ. ಅದು ಸುಮಾರು ಮೂರು ಅಂಗುಲದಷ್ಟು ಎತ್ತರವಿರುತ್ತೆ. ಶ್ರಾದ್ಧಕರ್ಮಗಳಲ್ಲಿ ಪಿಂಡವನ್ನು ಕಟ್ಟುವುದಕ್ಕೆ ಬೇಕಾದ ಅನ್ನವನ್ನು



ಅರಕಲಚಟ್ಟಿಯಲ್ಲಿಟ್ಟು ಕೊಡುತ್ತಿದ್ದರು. ಅರಕಲಚಟ್ಟಿಯಲ್ಲಿ ರೊಟ್ಟಿ ಮಾಡುವ ಅಕ್ಕಿಹಿಟ್ಟು, ರಾಗಿಹಿಟ್ಟು ಮುಂತಾದುವನ್ನು ಕಲೆಸುವುದಕ್ಕೆ ಸುಲಭ.

ಉದಾ: ಲಲಿತೂ, ರೊಟ್ಟಿಮಾಡಬೇಕು, ಅರಕಲಚೆಟ್ಟಿ ತಂದಿಡು.

ಭಿನ್ನರೂಪ: ಅರಕನಚಟ್ಟಿ

<arakalachetti> (-) A large-mouthed brass vessel. It is about three-inch height. During ritual ceremony of the deceased, the lump of rice to be offered to ancestors, was kept in that vessel. It is easy to mix rice or ragi flour in that vessel while making roti.

Eg*: Lalithu, to make roti bring the Arakalachetti.*

Different variation: Arakanachetti, Arakamchetti.



74. **ಅರನೆಲ್ಲಿಕಾಯಿ:** ಇದು ಒಂದು ವಿಶೇಷವಾದ ನೆಲ್ಲಿಕಾಯಿ. ಏಣುಏಣುಗಳಾಗಿ ಬೆಳೆಯುತ್ತೆ. **ಅರೆನೆಲ್ಲಿಕಾಯಿ** ಹುಳಿಸಿಹಿ ಮಿಶ್ರಿತವಾಗಿರುತ್ತೆ. ಉಪ್ಪಿನಕಾಯಿ ಹಾಕಲು ಬಳಸುತ್ತಾರೆ. ಉಪ್ಪು ಮೆಣಸಿನ ಪುಡಿಯನ್ನು ಚುಮುಕಿಸಿ ಹಾಗೆಯೆ ತಿನ್ನಬಹುದು. ಇದನ್ನು **ಕಿರುನೆಲ್ಲಿಕಾಯಿ** ಎಂದೂ ಹೇಳುತ್ತಾರೆ.

ನೋಡಿ: ಕಿರುನೆಲ್ಲಿಕಾಯಿ

<aranellikayi> A special variety of gooseberry is called Aranellikayi. The taste is a mixture of sour and sweet. This is used for making pickle. It can be eaten as it is adding chilli powder and salt. It is also known as Kirunellikayi. Aranellikayi is also called as Bettadanellikayi which is big in size.

See: Kirunellikayi.

75. **ಅರ್ಘ್ಯಪಾತ್ರೆ:** ಅರ್ಘ್ಯಪಾತ್ರೆಯನ್ನು ದೇವರಿಗೆ ಅಭಿಷೇಕ ಮಾಡುವಾಗ ಉಪಯೋಗಿಸುತ್ತಾರೆ. ತರ್ಪಣ ಕೊಡುವಾಗಲೂ ಬಳಸುವುದುಂಟು.



ನೋಡಿ: ಪಂಚಪಾತ್ರೆ

<arghyapaatre> (-) The vessel used for a ritual bath given to an idol. It is also used for libation to the deity.

See: Metal with five cups.

76. **ಅರಚು:** ಮಾತನಾಡುವಾಗ ಗಟ್ಟಿಯಾಗಿ ಕಿರುಚುವಹಾಗೆ ಕೂಗಾಡುತ್ತಿದ್ದರೆ **ಅರಚುವುದು** ಎಂದು ಹೇಳುತ್ತಾರೆ.

ಉದಾ: ಏನ್ ಕತ್ತೇಹಾಗೆ ಅರಚ್ತಾ ಇದೀಯಾ ವಸಿ ಮೆತ್ತಗೆ ಮಾತಾಡು.

<arachu> Screaming - When you are talking so loudly, they use the word Shout.

Eg: *Why you are shouting like an ass? Speak a little slowly.*

77. **ಅರವಟ್ಟಿಗೆ:** ಬಹಳ ಹಿಂದಿನ ಕಾಲದಲ್ಲಿ, ಊರಿಂದ ಊರಿಗೆ ಹೋಗಲು ಬಸ್ಸಿನ ಸೌಕರ್ಯವಿರಲಿಲ್ಲ. ಕಾಲು ನಡಿಗೆಯಲ್ಲೇ ಪ್ರಯಾಣ ಮಾಡಬೇಕಿತ್ತು. ಅಕ್ಕಪಕ್ಕದ ಹಳ್ಳಿಯವರು ರಸ್ತೆಯ ಪಕ್ಕದಲ್ಲಿ ತೆಂಗಿನ ಸೋಗೆಯಿಂದ ಚಪ್ಪರವನ್ನು ಕಟ್ಟಿ, ದಾರಿಹೋಕರಿಗೆ ನೀರು, ಮಜ್ಜಿಗೆ, ಕಬ್ಬಿನಹಾಲು ಕೊಡುತ್ತಿದ್ದರು. ಅಂತಹ ಚಪ್ಪರಕ್ಕೆ **ಅರವಟ್ಟಿಗೆ** ಎಂದು ಹೆಸರು.

ಕರ್ನಾಟಕದಲ್ಲಿನ ಹಿರೇಮಗಳೂರಿನಲ್ಲಿ ಪ್ರತಿವರ್ಷವೂ ರಥೋತ್ಸವ ಆಗುತ್ತಿತ್ತು. ಚಿಕ್ಕಮಗಳೂರಿನಿಂದ ಹಿರೇಮಗಳೂರಿಗೆ ಹೋಗುವಾಗ (ಕೇವಲ ಎರಡು ಮೈಲಿ ಪ್ರಯಾಣ) ದಾರಿಯುದ್ದಕ್ಕೂ **ಅರವಟ್ಟಿಗೆ**ಗಳನ್ನು ಕಟ್ಟುತ್ತಿದ್ದರು. ಬರುವವರೆಲ್ಲರಿಗೂ ನೀರು ಮಜ್ಜಿಗೆಯನ್ನು ಕೊಟ್ಟರೇ ಅವರ ಮನಸ್ಸಿಗೆ ಸಮಾಧಾನ.

ಸಾಮಾನ್ಯವಾಗಿ ರಥೋತ್ಸವದ ವೇಳೆಯಲ್ಲಿ ಎಲ್ಲ ಊರುಗಳಲ್ಲೂ ಅರವಟ್ಟಿಗೆಗಳನ್ನು ರಥೋತ್ಸವದ ಮಾರ್ಗದಲ್ಲಿ, ದೇವಸ್ಥಾನದ ಫಾಸಲೆಯಲ್ಲಿ ದಾನಿಗಳು, ಭಕ್ತರು ಏರ್ಪಡಿಸುತ್ತಾರೆ. ಬೆಂಗಳೂರಿನ ಕರಗದ ವೇಳೆ ಏರ್ಪಡಿಸುವ ಅರವಟ್ಟಿಗೆಗಳು ರಾತ್ರಿಯಲ್ಲಾ ಪಾನಕ–ಕೋಸುಂಬರಿ ಇತ್ಯಾದಿ ವಿತರಣೆ ಮಾಡುತ್ತವೆ. ಉಳಿದಕಡೆ ಹಗಲಲ್ಲಿ ಅರವಟ್ಟಿಗೆಗಳನ್ನು ಏರ್ಪಡಿಸುತ್ತಾರೆ.

ಉದಾ: ಸಾಹುಕಾರ್ ಶೀನಪ್ಪನವರ ಮನೆತನದವರು ನಮ್ಮೂರಿನ ರಥೋತ್ಸವ ಕಾಲದಲ್ಲಿ ಹತ್ತಾರು ವರ್ಷಗಳಿಂದ ಅರವಟ್ಟಿಗೆ ನಡೆಸುತ್ತಿದ್ದಾರೆ.

<aravaTTige> In earlier times, to go from place to place there was no bus transportation. They had to travel by walk only. The neighbor villagers used to construct pandals with coconut tree leaves and offering water, buttermilk and sugarcane juice to the travelers. That pandal was called Aravattige. In Hiremagalur (Karnataka State) every year temple car festival is being observed. From Chikmagalur to Hiremagalur (just two miles travel) in between they used to build pandals. They were happy only when they offered buttermilk to everyone who comes. Generally, during temple car festival the devotees and donors build such Aravattige in every village. In Bangalore Karaga festival pandals throughout the night offer juice, kosumbari etc. In other places, pandals function during daytime.

Eg*: The family of Sahukar Seenappa has been running pandals in our village since ten to twelve days during temple car festival.*


78. ಅಯ್‌ನೆಲ್ಲು: ನೋಡಿ: ಕಳೆ

<aynellu> See: Weed

79. ಅಯೋಗ್ಯ: ನೋಡಿ: ಬ್ರಾಹ್ಮಣರ ಬೈಗುಳ

<ayoogya> See: Unworthy person

80. ಅರಗು: ಮುದ್ರೆ ಮಾಡಲು ಉಪಯೋಗಿಸುವ ಸಾಧನಕ್ಕೆ **ಅರಗು** ಎಂದು ಹೇಳುತ್ತಾರೆ. ಅರಗಿನ ಬಣ್ಣ ಕೆಂಪು. ಅರಗಿನ ಕಡ್ಡಿಯನ್ನು ಉರಿಯುವ ದೀಪಕ್ಕೆ ಹಿಡಿದರೆ ಕರಗುತ್ತೆ. ಅದನ್ನು ಮುದ್ರೆಮಾಡುವ ಜಾಗಕ್ಕೆ ಬಳಿದು, ಕಬ್ಬಿಣದ ಅಂಚಿನಿಂದ ಒತ್ತುತ್ತಾರೆ.




ಉದಾ: ಬುಕ್ಕಾಂಬುಧಿ ಅಂಚೆ ಇಲಾಖೆಯಲ್ಲಿ ಕಾಗದ ಪತ್ರಗಳನ್ನು ಚೀಲದಲ್ಲಿ ತುಂಬಿ ಬಾಯಿಕಟ್ಟಿ ದಾರದ ಗಂಟಿನಮೇಲೆ ಅರಗಿನಿಂದ ಮುದ್ರೆಹಾಕುತ್ತಿದ್ದರು.

<aragu> Sealing wax - The thing used for sealing is called Red Sealing Wax. It melts when it is held before a burning lamp. It is put on the place where it is to be sealed and pressed with an iron metal.

Eg: In Bukkambudhi Post Office after filling the mailing covers in a bag and tying with a thread, they were sealing with Red Wax (aragu).

81. ಅರಳಿಕಟ್ಟೆ: ಪ್ರತಿಯೊಂದು ಹಳ್ಳಿಯಲ್ಲೂ ಸಾಮಾನ್ಯವಾಗಿ ಊರ ಹೊರಗಡೆ ಒಂದು ಅರಳಿಮರಕ್ಕೆ ಸುತ್ತಲೂ ಕಲ್ಲಿನ ಕಟ್ಟೆಯನ್ನು ಕಟ್ಟಿರುತ್ತಾರೆ. ಬೇರೆ ಮರಗಳಿಗಿಂತ ಅರಳಿಮರದ ಎಲೆಗಳಲ್ಲಿ ಆಮ್ಲಜನಕ ಹೆಚ್ಚಾಗಿರುತ್ತೆ. ಮದುವೆಯಾಗಿ ಮಕ್ಕಳಾಗದಿರುವವರು ಭಕ್ತಿಯಿಂದ ಅರಳಿಮರದ ಮುಂದಿರುವ ನಾಗರಕಟ್ಟೆಯ ನಾಗರಕಲ್ಲಿಗೆ ಪೂಜಿಸಿ ಅರಳಿಮರದ ಸುತ್ತ ಪ್ರದಕ್ಷಿಣೆ ಮಾಡಿದರೆ ಮಕ್ಕಳಾಗುವ ಸಂಭವವಿದೆಯೆಂಬ ಭಾವನೆ ಬೇರೂರಿರುತ್ತೆ. ಬ್ರಹ್ಮೋಪದೇಶವಾದ ವಟುವನ್ನು ಮುಂಜಿಯ ಕಾರ್ಯಕ್ರಮ ಮುಗಿದ ಮೇಲೆ ಅರಳಿಕಟ್ಟೆಗೆ ವಾದ್ಯಸಮೇತ ಕರೆದುಕೊಂಡು ಹೋಗಿ ಅವನ ಕೈಯ್ಯಲ್ಲಿರುವ ಮುತ್ತುಗದ ಕೊಂಬೆಯನ್ನು ಮಣ್ಣಿನ ಕಟ್ಟೆಮಾಡಿ ಅದರಲ್ಲಿ ಸೆಕ್ಕಿಸಿ ಬರುತ್ತಾರೆ.



ನೋಡಿ: ನಾಗರಕಟ್ಟೆ

<araLikatte> Stone Platform - Generally, in every village, outside they build a stone Platform around a Pipal tree. In leaves of Pipal tree, oxygen content is more compared to any other tree. It is the belief that anyone who has no children, if she worships the Nagarakallu fixed in front of the tree with devotion and moving around she will get children. After the function of Brahmopadesha the Vatu is taken to the Pipal tree with band orchestra and fix the branch of Flame tree in front of Pipal tree.

[See: Nagarakatte].

82. ಅರಳು: ರಾಗಿ ಅಥವಾ ಭತ್ತವನ್ನು ಕಬ್ಬಿಣದ ಬಾಣಲೆಯಲ್ಲಿ ಹುರಿದಾಗ ಅರಳಾಗುತ್ತದೆ. ರಾಗಿಯ ಅರಳು ಹುರಿಟ್ಟು ಮಾಡುವುದಕ್ಕಾದರೆ ಭತ್ತದ ಅರಳನ್ನು ಸಂಡಿಗೆ ಮಾಡಿ ಎಣ್ಣೆಯಲ್ಲಿ ಕರಿದು ತಿನ್ನುವುದಕ್ಕೆ ರುಚಿಯಾಗಿರುತ್ತೆ. ಭತ್ತದ ಅರಳನ್ನು ಮದುವೆಯ ಸಮಾರಂಭದ ಲಾಜಾಹೋಮದ ಕಾರ್ಯಕ್ರಮದಲ್ಲಿ ಮತ್ತು ನಾಗರಪಂಚಮಿಯ ದಿನ ರಂಗೋಲಿಯಿಂದ ಬರೆದ ನಾಗಪ್ಪನಿಗೆ ಪೂಜೆ ಮಾಡಲು ಉಪಯೋಗಿಸುತ್ತಾರೆ. ಭತ್ತದ ಅರಳನ್ನು ಮದುವೆ ಸಮಾರಂಭದಲ್ಲಿ ಬೀಗರನ್ನು ಎದುರುಗೊಳ್ಳುವಾಗ ಅವರ ತಲೆಯ ಮೇಲೆ ಎರಚುತ್ತಾರೆ.

ಹೂವಿನಮೊಗ್ಗು ಅಗಲವಾದಾಗ ಹೂ ಅರಳಿತು ಎನ್ನುತ್ತೇವೆ. ರಾಗಿಯನ್ನು ಹುರಿದಾಗ, ರಾಗಿ ಅರಳಿನಂತೆ ದೊಡ್ಡದಾಗುತ್ತದೆ. ರಾಗಿಅರಳು ಎನ್ನುತ್ತೇವೆ.

ಉದಾ: ರಾಗಿಅರಳನ್ನು ಮಾಡಿಡು, ಹುರಿಟ್ಟು ಆಗಿಹೋಗಿದೆ.

ನೋಡಿ: ಹುರಿಟ್ಟು

ಉದಾ: ಬೀಗರು ಇನ್ನು ಹತ್ತು ನಿಮಿಷದಲ್ಲಿ ಬರುತ್ತಾರೆ. ಆ ಬಿದಿರಿನ ಚಿಬ್ಬಲಿನಲ್ಲಿ ಅರಳು ತುಂಬಿ ಇಡಿ.

<araLu> Parched paddy - When Paddy is roasted in an iron pan it becomes parched paddy. If you want to do Hurittu, soak Ragi in water for a few minutes, take out the water, mix one or two spoons of sour buttermilk, a spoon of salt just heat for two or three minutes. Put one spoon of mixed ragi into hot pan and mix well. It becomes Aralu. Then grind it in mixer or millstone. It converts as powder. That powder can be added with raw sugar and milk or with curds and salt. Parched paddy is used in the ritual ceremony during the marriage and on the Nagarapanchami festival to worship the God. Parched paddy is poured on the head of bridegroom's party when they are welcomed for the marriage. When the flower bud is fully developed, we say it has blossomed. When Ragi is roasted it becomes big. We say it is parched ragi.

Eg*: The bridegroom's party is expected in another ten minutes. Please keep parched paddy filled in that bamboo lid.*

83. ಅರೆಕಲ್ಲು: ನೋಡಿ: ಗುಂಡಕಲ್ಲು

<arekallu> See: Millstone

84. ಅರೆಮರುಳು: ಅರವತ್ತರ ಪ್ರಾಯ ದಾಟಿದ ಮೇಲೆ ಕೆಲವರಿಗೆ ನೆನಪಿನ ಶಕ್ತಿ ಕುಂದಿಹೋಗುತ್ತೆ. ಅಂಥವನಿಗೆ **ಅರೆಮರುಳು** (ಅರುಳು ಮರಳು) ಆಗಿದೆ ಎನ್ನುತ್ತಾರೆ.

ಉದಾ: ಶಿವಪ್ಪಂಗೆ ನೆನ್ನೆಮೊನ್ನೆ ಅರವತ್ತು ತುಂಬ್ತು. ಈಗ್ಲೇ ಅರೆಮರುಳಾಗಿದೆ. ಈಗ ಹೇಳಿದ್ದು ಇನ್ನೊಂದು ಗಳಿಗ್ಗೆ ನೆಪ್ಪಿರುಲ್ಲ.

<aremaruLu> (-) A state of half insanity. After sixty years the memory power of humanbeing is lost to some people. We express that they have become Aremarulu.

Eg: *Shivappa completed sixty years just a few days back. He has become almost half insanity. He will not remember what he said a minute back*

85. ಅರೆವಾಶಿ: ಅರ್ಧ ಎನ್ನುವುದನ್ನು ಹೇಳುವುದಕ್ಕೆ **ಅರೆವಾಶಿ** ಎನ್ನುವ ಪದವನ್ನು ಬಳಸುವುದು ರೂಢಿ. ಅರ್ಧಭಾಗ ಎಂದರ್ಥ.

ಉದಾ: ಬಾಳೇಕಾಯೆಲ್ಲ ಅರೆವಾಶಿ ಹಣ್ಣಾಗಿವೆ. ಹಣ್ಣೆಲ್ಲ ಬೇರೆಮಾಡಿಡು.

<arevaashi> (-) It is in usage to say Arevashi to express half, meaning half of anything.

Eg: *Raw banana has ripened half and half. Keep separately the fully ripened ones separately.*

86. ಅಲಮಾರು: ಮರದ ಹಲಗೆಯಿಂದ ತಯಾರಾದ ಬೀರು. ಮನೆಯಲ್ಲಿ ದಿನಬಳಕೆಯ ಅಡುಗೆಗೆ ಬೇಕಾಗುವ ಸಾಸುವೆ, ಜೀರಿಗೆ, ಕೊತ್ತುಂಬರಿ ಬೀಜ ಮುಂತಾದ ಪದಾರ್ಥಗಳನ್ನು ಇಡುವ ಬೀರುವಿಗೆ **ಅಲಮಾರು** ಎಂದು ಹೆಸರು.



ಉದಾ: ಅಲಮಾರಿನಲ್ಲಿ ಉಪ್ಪಿದೆ ತಾ.

<alamaaru> Cupboard made of wood. The daily required ingredients in the kitchen, like mustard, jeera, coriander etc. are kept in Cupboard. It is called Alamaaru.

Eg: *Salt is in Alamaaru. Bring it.*

87. ಅಲಾಯಿದ: ಯಾವುದಾದರೂ ಕೆಲಸಕ್ಕಾಗಿ ಕೆಲವು ಸಾಮಾನುಗಳನ್ನಾಗಲಿ ಅಥವಾ ಹಣವನ್ನಾಗಲಿ ಪ್ರತ್ಯೇಕವಾಗಿ ಇಡುವುದಕ್ಕೆ **ಅಲಾಯಿದ** ಎಂದು ಹೇಳುತ್ತಾರೆ.

ಉದಾ: ಮಳೆಗಾಲ ಮುಗಿದ ಮೇಲೆ ಮನೆ ರಿಪೇರಿ ಮಾಡಿಸ್ಬೇಕು, ಹತ್ತು ಸಾವಿರ ರುಪಾಯಿ ಅಲಾಯಿದ ಇಟ್ಟಿದೀನಿ. ಮಗಳಿಗೆ ಗಂಡು ಗೊತ್ತಾದರೆ ಮದುವೆಗಾಗಿ ಐವತ್ತುಸಾವಿರ ರುಪಾಯಿ ಅಲಾಯಿದ ಇಟ್ಟಿದೀವಿ.

<alaayida> Apart for any work, to keep separately some things or money is expressed as Alayida.

Eg: *After rainy season house must be repaired. Kept ten thousand Rupees separately (Alayida). If a boy is selected for my daughter's Marriage, I have kept Rs.50,000 Alayida.*

88. ಅಲಾಲ್‌ಟೋಪಿ: ಹಳ್ಳಿಗೆ ಸಂಬಂಧಿಸಿದ ಯಾವ ಕೆಲಸಕಾರ್ಯಗಳಲ್ಲೂ ಭಾಗವಹಿಸದೆ, ಅಲ್ಲಿ ಇಲ್ಲಿ ಸಿಕ್ಕಷ್ಟು ತಿಂದು ಹಳ್ಳಿಯಲ್ಲಿ ಬೇಜವಾಬ್ದಾರಿಯಿಂದ ಓಡಾಡಿಕೊಂಡಿರುವ ಮನುಷ್ಯನನ್ನು **ಅಲಾಲ್‌ಟೋಪಿ** ಎನ್ನುತ್ತಾರೆ.

ಉದಾ: ಅವನು ಬಿಡಪ್ಪ ಅಲಾಲ್‌ಟೋಪಿ, ಅವನಿಂದ ಈ ಕೆಲಸಕ್ಕೆ ಏನೂ ಉಪಯೋಗವಾಗುಲ್ಲ. ಸುಮ್ಮನೆ ಅಲಾಲ್‌ಟೋಪಿಯ ಹಾಗೆ ತಿರುಗಾಡ್ಕಂಡು ಇರಬೇಡ, ಯಾವುದಾದರೂ ಒಂದು ಕೆಲಸ ಹಚ್ಚಿಕೊ, ನಿಮ್ಮ ಅಪ್ಪ ಅಮ್ಮಂಗು ಸಮಾಧಾನವಾಗುತ್ತೆ.

<alaalToopi> Irresponsible person - Without participating in any of the activities connected to the village, eating whatever he gets here and there, if one is roaming about, is called Alaaltoopi.

Eg; *He is an irresponsible person. We will not get any work from him. Do not be an irresponsible person. Search for a job and do something. Your parents also get satisfaction.*

89. ಅಲೆಚಾಟಲು: ವಿಪರೀತ ಕೆಲಸದಿಂದಾಗಿ ಮೈಗೆ ಆಯಾಸವಾಗಿದ್ದರೆ **ಅಲೆಚಾಟಲಾಗಿದೆ** ಎಂದು ಹೇಳುತ್ತಾರೆ.

ಉದಾ: ನಿನ್ನೆ ಬೈಗಿಂದ ಚಂಜೆವರೆಗೂ ತೋಟದ ಕೆಲಸಮಾಡಿ ಮೈಗೆ ಅಲೆಚಾಟಲಾಗಿದೆ.

<alechaaTalu> Uneasiness - When you are tired due to over work, they say alechaatalu.

Eg: *Yesterday right from morning to evening working in the garden Bodily tired (Alechaatalagide).*

90. ಅವಳಿಜವಳಿ: ಎರಡುಮಕ್ಕಳು ಒಟ್ಟಿಗೇ ಹುಟ್ಟಿದರೆ ಅವನ್ನು ಅವಳಿಜವಳಿ ಎನ್ನುತ್ತಾರೆ. ಎರಡೂ ಗಂಡಾಗಿರಬಹುದು, ಹೆಣ್ಣಾಗಿರಬಹುದು. ಅಥವಾ ಒಂದು ಹೆಣ್ಣು, ಒಂದು ಗಂಡಾಗಿರಬಹುದು.

ಉದಾ: ಶ್ಯಾನುಭೋಗರ ಮಗಳಿಗೆ ಈ ಸಲ ಅವಳಿಜವಳಿ ಮಕ್ಕಳಂತೆ, ಗಂಡು ಹೆಣ್ಣು.

<avaLiJavaLi> Twins - If two children are born in one birth, they call it as Twins (AvaLiJavali). Both the babies may be male or female. Or may be a male and a female.

Eg: *For daughter of Shanubhog this time it is twins, a boy and a girl.*


91. ಅವಿಭಕ್ತ ಕುಟುಂಬ: ಹಿರಿಯರು ಮತ್ತು ಒಡಹುಟ್ಟಿದ ನಾಲ್ಕಾರು ಜನ ಅಣ್ಣತಮ್ಮಂದಿರು ಹೆಂಡತಿ, ಮಕ್ಕಳೊಡನೆ ಒಂದೇ ಮನೆಯಲ್ಲಿ ವಾಸ ಮಾಡುವುದನ್ನು **ಅವಿಭಕ್ತ ಕುಟುಂಬ** ಎನ್ನುತ್ತಾರೆ. ಮನೆಯ ಕೆಲಸ ಕಾರ್ಯಗಳು, ತೋಟಗಾರಿಕೆ, ಹೊಲ ಗದ್ದೆಯ ಬೇಸಾಯ ಎಲ್ಲವನ್ನೂ ಹಂಚಿಕೊಂಡು ಯಾವ ತಕರಾರುಗಳು ಇಲ್ಲದಂತೆ ಸಂಸಾರ ಮಾಡುವುದೇ ಅವಿಭಕ್ತ ಕುಟುಂಬದ ಉದ್ದೇಶ. ಸಾಮಾನ್ಯವಾಗಿ ಅವಿಭಕ್ತ ಕುಟುಂಬಕ್ಕೆ ಯಜಮಾನ ಎಂಬ ಹಿರಿಯನೊಬ್ಬನಿರುತ್ತಾನೆ.

ಉದಾ: ಶೀನಪ್ಪನ ಅವಿಭಕ್ತ ಕುಟುಂಬದಲ್ಲಿ 40 ಜನರಿದ್ದಾರೆ.

<avibhaktakuTumba> Joint or Undivided family. Elderly people and sisters and brothers born together, living in the same house is called Joint family (Avibhaktakutumba). The main aim is distributing the entire work in the family such as gardening, agriculture etc. without any hindrance and work together. Generally, there will be one elderly person in the Joint family.

Eg: In the Joint family of Seenappa, there are forty members.

92. ಅಳತೆಗಳು: ತೂಕದ ಅಳತೆಗಳು, ಪಾತ್ರೆಗಳ (ಗಾತ್ರಗಳ) ಅಳತೆಗಳು, ಉದ್ದದ ಅಳತೆಗಳು ಎಂದು ಹಲವಾರು ಬಗೆ ಅಳತೆಗಳಿವೆ.



ತೂಕದ ಅಳತೆಗಳಿಗೆ ತಕ್ಕಡಿಯನ್ನು ಬಳಸುತ್ತಾರೆ. ತೊಲ, ಸೇರು, ಸವ್ವಾಸೇರು, ಅಡಿಸೇರು, ಪಂಚೇರು, ಧಡಿಯ, ಮಣ ಮೊದಲಾದ ಅಳತೆಗಳಲ್ಲಿ ಸೌದೆ, ಬೆಳ್ಳಿ ಬಂಗಾರ, ಬೆಲ್ಲ ಮೊದಲಾದುವನ್ನು ತೂಗುತ್ತಾರೆ.



ಪಾತ್ರೆಗಳ ಅಳತೆಗಳಲ್ಲಿ ಚಟಾಕು, ಅರೆಪಾವು, ಪಾವು, ಅಡಿಸೇರು (ಅಚ್ಚೇರು), ಸೇರು, ಕೊಳಗ, ಖಂಡುಗ ಮೊದಲಾದ ಅಳತೆಗಳ ಪಾತ್ರೆಗಳನ್ನು ಬಳಸುತ್ತಾರೆ. ಇವು ಕಬ್ಬಿಣದ್ದು ಅಥವಾ ಹಿತ್ತಾಳೆಯ ಅಥವಾ ಮರದ್ದಾಗಿರುತ್ತದೆ. ದವಸ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಾರೆ. ಎಣ್ಣೆ ತೂಕಕ್ಕೂ ಬಳಸುತ್ತಾರೆ.



ಉದ್ದದ ಅಳತೆಗಳಿಗೆ ಕೋಲು, ಕಡ್ಡಿ, ಕೈ, ಹಗ್ಗ ಮೊದಲಾದುವನ್ನು ಬಳಸುತ್ತಾರೆ. ಚೋಟು, ಗೇಣು, ಮೊಳ, ಮಾರುಗಳಿಗೆ ಕೈಯ್ಯನ್ನು ಬಳಸುವುದು ಹೆಚ್ಚು. ಅಡಿ, ಗಜಗಳನ್ನು ಕೋಲು, ಗಜಕಡ್ಡಿ, ಹಗ್ಗಗಳಿಂದ ಸಾಮಾನ್ಯವಾಗಿ ಅಳೆಯುತ್ತಾರೆ. ಮನೆ, ರಸ್ತೆ, ಗೋಡೆ ಅಳತೆ ಮಾಡುವಾಗ ಅಳತೆ ಪಟ್ಟಿಗಳನ್ನು ಬಳಸುತ್ತಾರೆ. ಬಟ್ಟೆ ಅಳತೆ ಮಾಡುವಾಗ ಅಳತೆ ಪಟ್ಟಿ (ಸ್ಕೇಲ್), ಗಜಗಡ್ಡಿ, ಕೈ ಬಳಸುತ್ತಾರೆ.

ಉದಾ: ಅವನಿಗೆ 8 ಮೊಳ ಪಂಚೆ ಬೇಕು, 6 ಮೊಳ ಸಾಲದು.

ಉದಾ: ಅವರದು 60 ಅಡಿ ಅಗಲ, 40 ಅಡಿ ಉದ್ದದ ಮನೆ.

ಉದಾ: 10 ಚದರದ ಮನೆ ಸಾಕು ನನಗೆ.

ಉದಾ: 4 ಸೇರು ತುಪ್ಪ ಬೇಕು.

ಉದಾ: ಅಮ್ಮಯ್ಯ ಹೇಳಿದಂತೆ ಸರ ಮಾಡಿಸೋಕೆ 10 ತೊಲ ಬಂಗಾರ ಬೇಕು.

<aLategaLu> Measures - Weight of things, thickness of vessels, length etc. are in usage. For weighing of things, they use balance (pair of Scales), Thola, One and a quarter seer, two

and a half seers, Five seers, two and a half kg. are weighed in the balance. For weights of metals, quarter of a Pav, half pav, one pav**,** half seer, one seer, four seers are used. These are of iron, brass or wood. They are used for measuring groceries like rice, paddy or oils. For length, scale, rope is used. While measuring the house or road or the wall, they use measuring tape. For measuring cloth, they use yard stick or hand.

Eg: He requires 8 cubits dhothi; 6 cubits is not sufficient.

Eg: His house is of 60 ft width and 40 ft length.

Eg: It is enough for me to have ten square-house.

Requires four seers of ghee.

Eg: As told by mom ten tolas of gold is required for making necklace.

93. ಅಳುಗುಳಿಮಣೆ: ನೋಡಿ: ಅಟ್ಟುಗುಣಿಮಣೆ

<aLuguLimaNe> See: ATTuguNimaNe.

94. ಅಳುಮುಂಜಿ: ಯಾವ ಕೆಲಸಕಾರ್ಯಗಳಿಗು ಸ್ವಲ್ಪವೂ ಉತ್ಸಾಹ ತೋರಿಸದೆ ಸಪ್ಪೆಮೋರೆ ಹಾಕಿಕೊಂಡಿರುವವನನ್ನು ಅಳುಮುಖಿ ಮಾಡಿಕೊಂಡಿರುವವನನ್ನು ಅಳುಮುಂಜಿ ಎನ್ನುತ್ತಾರೆ.

ಉದಾ: ಸುಮ್ಮನೆ ಅವನ್ನ ನೆಚ್ಚಿಕೊಂಡು ಕೆಲಸ ಶುರು ಮಾಡ್ಬೇಡಿ, ಅವನೊಬ್ಬ ಅಳುಮುಂಜಿ.

ಸಮಾನಾರ್ಥಕ: ಅಳ್ಮುಂಜಿ, ಅಳುಬುರುಕ

ವಿರುದ್ಧಪದ: ನಗುಮುಂಜಿ

<aLumunji> (-) A weepy person One who does not show any interest in the activities is called as ALumunji.

Eg: *Do not start any work depending on him. He is just an Alumunji (An Uninterested person).*

Equivalent: ALmunji, ALuburuka.

❑

ಆ / Aa



95. ಆಬಾದು: ಜಮೀನು ಸಾಗುವಳಿ ಮಾಡುವುದಕ್ಕೆ ಆಬಾದು ಎನ್ನುತ್ತಾರೆ.

ಉದಾ: ಗೌಡ್ರದ್ದು ನಾಕೆಕರೆ ಜಮೀನು ಪಾಳುಬಿದ್ದಿತ್ತು. ಈಗ ಆಬಾದು ಮಾಡಸ್ತಾಇದಾರೆ.

ನೋಡಿ: ಸಾಗುವಳಿ

<aabaadu> Cultivation. To cultivate the agricultural land is known as Abadu.

Eg: Four acres of land of Gowda had become waste land. Now they are cultivating.

See: Cultivation.

96. ಆಚಾರಿ: ಮರಗೆಲಸ ಮಾಡುವವನು, ಚಿನ್ನ–ಬೆಳ್ಳಿ ಒಡವೆಗಳನ್ನು ಮಾಡುವವನು ಮತ್ತು ಕಲ್ಲು ಕೆತ್ತಿ ವಿಗ್ರಹಗಳನ್ನು ತಯಾರಿಸುವವನು ಇವರುಗಳನ್ನು **ಆಚಾರಿ** ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಈ ಪಂಗಡದವರು ವಂಶ ಪಾರಂಪರ್ಯವಾಗಿ ಈ ಉದ್ಯಮಗಳನ್ನು ರೂಢಿಗೆ ತಂದುಕೊಂಡಿರುತ್ತಾರೆ. ಚಿನ್ನ–ಬೆಳ್ಳಿ ಒಡವೆಗಳನ್ನು ಮಾಡುವವನು ಅಕ್ಕಸಾಲಿ.

ಕೆಲವು ಅಕ್ಕಸಾಲಿಗಳಿಗೆ ಬಯಲುನಾಟಕ ಆಡಿಸುವ ಹುಚ್ಚು ಇರುತ್ತೆ. ಯಾವ ಹಳ್ಳಿಯಲ್ಲಿ ಬಯಲು ನಾಟಕವಾದರೂ ಅಲ್ಲಿಗೆ ಹೋಗಿ ಜನಗಳಿಗೆ ತರಬೇತಿ ಕೊಟ್ಟು ನಾಟಕ ಆಡಿಸುತ್ತಾರೆ. ಅದರಿಂದ ಅವರಿಗೆ ಏನೂ ಆದಾಯವಿಲ್ಲದಿದ್ದರೂ ಆಟ ಆಡಿಸುವುದೆ ಅವರ ಮನಸ್ಸಿಗೆ ತೃಪ್ತಿ.

ಉದಾ: ಚಿನ್ನಾಚಾರಿ ಇನ್ನೂ ಒಡವೆ ತಂದುಕೊಟ್ಟಿಲ್ಲವೇ?

<aachaari> (-) One who follows the established rule of conduct. Those who do Carpentry, Goldsmith or a sculpture who manufactures idols are called Aachaari. Generally, this sect has been doing this work as heritage. The person who does ornaments of gold and silver is Akkasaale (Goldsmith). Some goldsmiths have the hobby as organizing dramas. They will go

to any place and give training and play them acting. Though there is no income, they feel happy in getting them playing.

Eg: Chinnachaari has not yet given back the ornaments.

97. ಆಜುಬಾಜು: ಆಜುಬಾಜು ಅಂದರೆ ಅಕ್ಕಪಕ್ಕ.

ಉದಾ: ಆಜುಬಾಜು ಹೊಂದಿಕೊಂಡು ಹೋಗುವಂತಹ ಜನಗಳಿದ್ದರೆ ಸಾಕು, ನಿರ್ಯೋಚನೆಯಿಂದಿರಬಹುದು.

ಬೆಂಗಳೂರಿನಲ್ಲಿ ಜಟಕಾ ಗಾಡಿಗಳು ಜಾಲ್ತಿ ಇದ್ದಾಗ ಸ್ವಾತಂತ್ರ್ಯ ಪೂರ್ವದಲ್ಲಿ ರಸ್ತೆಯಲ್ಲಿ ಗಾಡಿ ಓಡಿಸುವಾಗ ಜನರನ್ನು ಬಾಜೂ ಬಾಜೂ (ದಾರಿಬಿಡಿ ದಾರಿಬಿಡಿ) ಎನ್ನುತ್ತಿದ್ದರು. ಧಾರವಾಡದ ಕಡೆ ಗಾಡಿಯವರು ಹೋಳಾಗಿರಿ ಹೋಳಾಗಿರಿ ಎನ್ನುತ್ತಾರಂತೆ.

ಉದಾ: ಕತ್ತಲಾಗ್ತಾ ಬಂತು, ಆಜುಬಾಜು ನೋಡಿಕೊಂಡು ಹೋಗು. ಈ ಹಳ್ಳಿಯಲ್ಲಿ ಆಜುಬಾಜೆಲ್ಲ ಅಡಕೆಮರಗಳೇ ಜಾಸ್ತಿ.


ನೋಡಿ: ಆಸುಪಾಸು

<aajubaaju> Side by side.

Eg: *It is enough if people side by side are cooperative.*

We can stay without worries. In Bangalore when Jutka vehicles were being used before freedom, the Jutka rivers were shouting bajoo, bajoo (give way, give way). In Dharwada side, it seems Jutka drivers say Holagiri, Holagiri.

Eg: Getting dark, see right and left and go in that village. In this village side by side areca trees are more.



98. ಆನೆಕಟ್ಟಾಟ: ಆನೆಕಟ್ಟಾಟವು ಹುಲಿಕುರಿ ಆಟದಂತೆ ಒಂದಾಟ. ಆಡುವ ವಿಧಾನದಲ್ಲಿ ಸ್ವಲ್ಪ ವ್ಯತ್ಯಾಸ. ಇದರ ನಕ್ಷೆ ಹುಲಿಕುರಿ ಆಟದ ನಕ್ಷೆಯೊಂದಿಗೆ ಹೋಲಿಸಿದರೆ ತಿಳಿಯುತ್ತದೆ. ಆನೆಕಟ್ಟಾಟ ಮತ್ತು ಹುಲಿಕುರಿ ಆಟಗಳು ಕೂಡಾ ಹುಣಸೆ ಬೀಜ, ಹಾಲ್ವಾಣದ ಬೀಜ ಅಥವಾ ಸಣ್ಣ ಕಲ್ಲುಗಳನ್ನಿಟ್ಟುಕೊಂಡು ಆಡಬಹುದು. ಒಂದನೆ ಬಿಂದುವಿನಿಂದ ಮೂರನೆ ಬಿಂದುವಿಗೆ ಹಾರುವ ಅವಕಾಶದಲ್ಲಿ ಎರಡನೆ

ಬಿಂದುವಿನಲ್ಲಿ ಒಂದು ಕಾಯಿಯನ್ನು ಗೆಲ್ಲಲು ಸಾಧ್ಯವಿದೆ. ಆ ಕಾಯಿಯನ್ನು ಆಟದ ಚೌಕದಿಂದ ಹೊರತೆಗೆಯುವುದು. ಈಗೆ ಎಲ್ಲ ಕಾಯಿಯನ್ನು ಚೌಕದಿಂದ ಹೊರಪಡೆಯಲು ಸಾಧ್ಯವಾದರೆ ಅದು ಗೆಲುವು ಎನಿಸುವುದು. ಇದೊಂದು ಜಾನಪದ ಆಟ.

<aanekaTTaaTa> A kind of play - AanekaTTaTa is just like Hulikattata. Slight difference in playing. When compared with one another, you can know that both can be played with Tamarind or haalvana seeds. Or you can play with small stones. A folk play.

99. ಆಪಾಟಿ: ಅಷ್ಟೊಂದು ಅಥವಾ ಜಾಸ್ತಿ ಅಥವಾ ವಿಪರೀತವಾಗಿದೆ ಎನ್ನುವುದನ್ನು ಸೂಚಿಸುವಾಗ **ಆಪಾಟಿ** ಅನ್ನುವ ಪದ ರೂಢಿಯಲ್ಲಿದೆ.

ಉದಾ: ಅವನಿಗೇನ್ಬಂತು ಕೇಡು ಆಪಾಟಿ ಆಸ್ತಿ ಇಟ್ಕಂಡು ಇನ್ನೊಬ್ರದ್ದಕ್ಕೆ ಕಣ್ ಹಾಕಿದಾನೆ.

<aapaaTi> So much - When you express it is too much, the word Aapaati is used.

Eg: Why he is so greed, having so much of wealth he is eyeing on others.

100. ಆಮ್ಯಾಕೆ: ಸ್ವಲ್ಪಹೊತ್ತು ಬಿಟ್ಟು ನಂತರ ಹೋಗು ಎಂದು ಹೇಳುವುದಕ್ಕೆ ಆಮೇಲೆ ಎಂಬುದನ್ನು ಆಮ್ಯಾಕೆ ಅಥವಾ ಆಮ್ಯಾಲೆ ಅನ್ನುವ ಪದವನ್ನು ಹೇಳುತ್ತಾರೆ. ಧಾರವಾಡದ ಕಡೆ ಹಿಂದುಗಡೆ ಎನ್ನುತ್ತಾರೆ.

ಉದಾ: ಬೆಳಗಿನಿಂದ ಹಸ್ಕಂಡಿದೀಯ, ಒಂದು ತುತ್ತು ಅನ್ನ ತಿಂದು ಆಮ್ಯಾಕೆ ಹೊರಡು.

<aamyaake> (-) To express go after some time, they use the word Aamyaake or Aamyaale. Dharwad side they say HindugadDe.

Eg: You are hungry; Eat a little and go aamyaake.

101. ಆಣೆ: ಬರಿಗಾಲಿನಲ್ಲಿ ಓಡಾಡುವಾಗ ಸಣ್ಣ ಹರಳುಕಲ್ಲಿನಂತಹವು ಅಂಗಾಲಿಗೆ ಒತ್ತಿ ಗಂಟಾಗುತ್ತದೆ. ಅದಕ್ಕೆ **ಆಣೆ** ಎಂದು ಹೆಸರು.

ಉದಾ: ಬಲಗಾಲಿನ ಅಂಗಾಲಲ್ಲಿ ಆಣಿ ಬೆಳೆದೈತೆ. ರಾತ್ರೆ ಎಕ್ಕದ ಹಾಲು ಹಾಕು ಮೆತ್ತಗಾಗುತ್ತೆ.

<aaNi> Knot formed while walking - When you walk on the road without chappal, small pebbles will press the portion under the feet and forms a knot. It is called AaNi.

Eg: On the portion under the right leg Aani has grown. Night put some milk of ekka (a kind of plant). It becomes smooth.

102. ಆರಂಬ: ಬೇಸಾಯ (ವ್ಯವಸಾಯ) ಮಾಡುವುದನ್ನು **ಆರಂಬ** ಎಂದು ಹೇಳುತ್ತಾರೆ. **ಉಳುಮೆ** ಎಂದೂ ಹೇಳುತ್ತಾರೆ.



ಉದಾ: ರಾಮಯ್ಯ ಈಗ ಒಂದು ಎಕರೆ ಜಮೀನಿನಲ್ಲಿ ಆರಂಬ ಮಾಡ್ಕಂಡವ್ನೆ.

<aaramba> Cultivation: Agriculture is called as Aaramba or Ulume.

Eg: Ramaiah has cultivated in one acre of land.

103. ಆರಾಧನೆ: ಬೃಂದಾವನಸ್ಥರಾದ ಅಥವಾ ದೈವಾಧೀನರಾದ ಮಠಾಧಿಪತಿಗಳು ಅಥವಾ ಸಂನ್ಯಾಸಾಶ್ರಮ ತೆಗೆದುಕೊಂಡವರನ್ನು ಸ್ಮರಣೆ ಮಾಡಲು ನಡೆಸುವ ಆಚರಣೆಗೆ **ಆರಾಧನೆ** ಎನ್ನುತ್ತಾರೆ.

ಉದಾ: ನಾಳೆ ನಮ್ಮ ಮನೆಯಲ್ಲಿ ಸ್ವಾಮಿಗಳ ಆರಾಧನೆ ಇದೆ, ತಪ್ಪದೇ ಬರಬೇಕು.

<aaraadhane> Worship. To remember an ascetic or Head of a Mutt who has expired, they worship. It is called Aaraadhane.

Eg: Tomorrow in our house we observe Swamiji's Aaraadhane. Please come without fail.

104. ಆಲದೆಲೆ: ನೋಡಿ ಮುತ್ತುಗದ ಎಲೆ

<aaladele> See: Flame tree.

105. ಆಲೆಮನೆ: ಕಬ್ಬಿನ ಹಾಲಿನಿಂದ ಬೆಲ್ಲವನ್ನು ತಯಾರಿಸುವ ಜಾಗಕ್ಕೆ **ಆಲೆಮನೆ** ಎಂದು ಹೆಸರು. ಆಲೆಮನೆಯಲ್ಲಿ ಯಾವಾಗಲೂ ಕಬ್ಬಿನ ಹಾಲು ಕೊಪ್ಪರಿಗೆಯಲ್ಲಿ ಕುದಿಯುತ್ತಿರುವುದರಿಂದ ಗಮ್ಮೆಂದು ವಾಸನೆ ಮೂಗಿಗೆ ಬಡಿಯುತ್ತೆ.

ಉದಾ: ಗುಂಡಪ್ಪೋರ ಆಲೆಮನೆಗೆ ಹೋಗಿ ಎರಡು ಜೊಂಬು ಕಬ್ಬಿನಹಾಲು ತೆಗೆದುಕೊಂಡುಬಾ.

<aalemane> (-) Place where jaggery is prepared is called Aalemane. In Aalemane since the sugarcane juice will be boiling always in the large metal boiler good smell touches the nose.

Eg: Go to Gundappa's Alemane and bring two vessels of sugarcane Juice.

106. ಆವರಿಕೆ: ಇದು ಒಂದು ಜಾತಿಯ ಗಿಡ. ಬಾಳೆಕಾಯನ್ನು ಹಣ್ಣು ಮಾಡಲು ಈ ಗಿಡದ ಸೊಪ್ಪನ್ನು ಉಪಯೋಗಿಸುತ್ತಾರೆ. ಗುಡಾಣದಲ್ಲಿ ಬಾಳೆಕಾಯಿನ ಒಂದೊಂದು ಚಿಪ್ಪಿಗೂ ಮಧ್ಯೆ ಆವರಿಕೆಸೊಪ್ಪನ್ನು ಇಟ್ಟು ಗುಡಾಣದ ಬಾಯನ್ನು ಮುಚ್ಚಿ ಒಂದು ವಾರದ ನಂತರ ನೋಡಿದರೆ, ಹಸಿರಾಗಿದ್ದ ಬಾಳೆಕಾಯಿ ಹಳದಿಬಣ್ಣಕ್ಕೆ ತಿರುಗಿ ಹಣ್ಣಾಗಿರುತ್ತೆ.

ಆವರಿಕೆ ಗಿಡದಲ್ಲಿ ಬಿಡುವ ಹಳದಿಯ ಹೂವನ್ನು ನೆರಳಿನಲ್ಲಿ ಒಣಗಿಸಿ ನಂತರ ಕುದಿಯುವ ನೀರಿಗೆ ಹಾಕಿದರೆ ಚಹಾ ಪುಡಿಯ ಹಾಗೆ ಕಷಾಯ ಬರುತ್ತದೆ. ಅದಕ್ಕೆ ಹಾಲು, ಸಕ್ಕರೆ ಬೆರೆಸಿ ಕುಡಿಯುತ್ತಾರೆ. ಆವರಿಕೆ ಚಹಾ ದೇಹಕ್ಕೆ ಬಹಳ ತಂಪು. ನಮ್ಮ ಹಳ್ಳಿಯಲ್ಲಿ ಆವರಿಕೆ ಹೂವು ಸಿಕ್ಕಾಗೆಲ್ಲ ಒಣಗಿಸಿ ಇಟ್ಟುಕೊಂಡಿರುತ್ತಿದ್ದರು. ಅದನ್ನು **ತಂಗಡಿ ಹೂವು** ಎಂದೂ ಹೇಳುತ್ತಾರೆ.

ಉದಾ: ಗದ್ದೆಕಡೆ ಹೋದಾಗ ಸ್ವಲ್ಪ ಆವರಿಕೆಹೂವ ತಂದು ಒಣಗಿಸಿಡು.

ನೋಡಿ: ತಂಗಡಿಹೂ

<aavarike> A kind of plant - To ripen raw banana, leaves of Aavarike are used. In the big earthen pot in between every bunch of banana, they spread Aavarike leaves and close with lid. After one week, if you open the lid you can see the green raw banana will have turned into yellow color and ripen. The yellow color flowers of Aavarike after spreading in shade and dried are used for making decoction like tea. Adding milk and sugar they drink. Aavarike chaha is cool. In our village,

whenever it is available, they used to keep it for drying and use in winter days. It is also called as Thangadi flowers.

Eg: When you go to the field bring some Aavarike flowers and get dried.

See: Thangadi flower

107. ಆವಿಗೆ: ಹಸಿಮಣ್ಣಿನಿಂದ ಮಾಡಿದ ಮಡಕೆ, ಕುಡಿಕೆಗಳನ್ನು ಸುಡುವುದಕ್ಕೆ ಬಳಸುವ ಒಲೆಗೆ **ಆವಿಗೆ** ಎಂದು ಹೆಸರು.

ಉದಾ: ಈಸ್ವರಪ್ಪ ಆವಿಗೆ ಮುಂದೆ ಕುಂತಿರ್ತಾನೆ, ಬಡಾಬಡಾ ಹೋಗಿ ಎರಡು ಮಡಕೆ ತಗಂಬಾ.

<aavige> To burn the wet earthen pots, the oven used is called Aavige.

Eg: Easwarappa will be sitting in front of Aavige. Go quickly and bring two earthen pots.

108. ಆಸುಪಾಸು: ಸಮಾನಾರ್ಥಕ: ಅಕ್ಕಪಕ್ಕ, ಆಬದಿ ಈಬದಿ

ನೋಡಿ: ಆಜುಬಾಜು

<aasupaasu> Side by side; This side that side.

See: Aajubaaju

109. ಆಸಿಗ್ಗೆಬ್ಯಾಸಿಗ್ಗೆ: ಒಂದಲ್ಲ ಒಂದು ಕಾರಣದಿಂದ ಆಗಾಗ್ಗೆ ಬಂದುಹೋಗಿ ಮಾಡುವ ನೆಂಟರಿಷ್ಟರಿಗೆ ಸಂಬಂಧಿಸಿದಂತೆ ಹೇಳುವಾಗ ಆಸಿಗ್ಗೆಬ್ಯಾಸಿಗ್ಗೆ ಎಂದು ಹೇಳುತ್ತಾರೆ. ಬಂದು ಹೋದರೆ ಬಂಧು ಬಳಗ, ಕಂಡು ಉಂಡೂ ಹೋದರೆ ನೆಂಟರು ಎಂಬುದು ಗಾದೆ.

ಉದಾ: ನಮ್ಮ ಬೀಗರು ಆಸಿಗ್ಗೆಬ್ಯಾಸಿಗ್ಗೆ ನಮ್ಮೂರಿಗೆ ಬರ್ತಾಇರ್ತಾರೆ.

<aasiggebyasigge> Rare Visiting - To express, for some reason or other, the relatives coming very rare, they use the term Aasiggebyaasigee (Coming and going Relatives; Just coming eating and going Relatives is the proverb)

Eg: The father of my son in law will visit us Aasiggebyaasigge (once in a way).

❑

ಇ / I



110. ಇಕ್ಕಳ: (ಇಕ್ಕುಳ / ತಂಡಸ) ಬಿಸಿಪಾತ್ರೆಯನ್ನು ಒಲೆಯ ಮೇಲಿಂದ ಕೆಳಕ್ಕಿಳಿಸಬೇಕಾದಾಗ, ಪಾತ್ರೆಯನ್ನು ಬಿಗಿಯಾಗಿ ಹಿಡಿದುಕೊಳ್ಳಲು ಉಪಯೋಗಿಸುವ ಒಂದು ಸಾಧನವೆ ಇಕ್ಕಳ. ಇದನ್ನು ಉಕ್ಕು ಅಥವಾ ಕಬ್ಬಿಣದಿಂದ ತಯಾರಿಸುತ್ತಾರೆ. ಇಕ್ಕಳ ಎಂಬ ಪದವನ್ನು ಬೇರೆ ಅರ್ಥದಲ್ಲಿ ಬಳಸುತ್ತಾರೆ. ಯಾರಾದರೊಬ್ಬರನ್ನು ಅನವಶ್ಯಕವಾಗಿ ತೊಂದರೆಗೆ ಸಿಕ್ಕಿಸಿದರೆ ನಾನೇನು ತಪ್ಪು ಮಾಡಿದೆ ಅಂತ ನನ್ನನ್ನು ಇಕ್ಕಳದಲ್ಲಿ ಸಿಕ್ಸಿದಾನೆ ಅವ ಅನ್ನುವುದು ರೂಢಿಯಾಗಿದೆ. ಹೀಗೆ ಇಕ್ಕಟ್ಟಿಗೆ ಎಂಬರ್ಥದಲ್ಲಿ ಈ ಪದವನ್ನು ಬಳಸುತ್ತಾರೆ.

ಉದಾ: ನಿನ್ನ ಮಾತಿನಿಂದ ನಾನು ಇಕ್ಕಳದಲ್ಲಿ ಸಿಕ್ಸಿದಂತಾಯಿತು.

<ikkaLa> Tongs - When hot vessel is to be removed out of oven, the equipment used is known as IkkaLa (Tongs/pineers). The word Ikkala is also used to express the other way. If anyone is troubled unnecessarily for no reason, 'What mistake I have committed to put me in trouble by him is the word IkkaLa is in usage.

Eg: Because of you, I am put in IkkaLa.



111. ಇಡುಗಾಯಿ: (ಈಡುಗಾಯಿ) ಪ್ರತಿಯೊಂದು ಊರಿನಲ್ಲಿ ದೇವಸ್ಥಾನದ ಊರ ದೇವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಬೀದಿ ಬೀದಿಯಲ್ಲೂ ಮೆರವಣಿಗೆ ಮಾಡುತ್ತಾರೆ. ಪ್ರತಿಯೊಂದು ಮನೆಯವರೂ ಅವರವರ ಮನೆಯ ಮುಂದೆ ನೆಲಸಾರಿಸಿ ರಂಗೋಲಿ ಹಾಕಿ ಮೆರವಣಿಗೆ ಬಂದಾಗ ಮಂಗಳಾರತಿ ಮಾಡಿಸಿ, ದೇವರ ಮುಂದೆ ನಿವಾಳಿಸಿ ನೆಲಕ್ಕೆ ಬೀಸಿ ಎಸೆದು ಇಡೀ ತೆಂಗಿನಕಾಯನ್ನು ಒಡೆಯುತ್ತಾರೆ. ಅದಕ್ಕೆ **ಇಡುಗಾಯಿ** ಎಂದು ಹೆಸರು. ಹಾಗೆ ಒಡೆದ ತೆಂಗಿನಕಾಯಿನ ಚೂರುಗಳನ್ನು ಹುಡುಗರು ಆರಿಸಿಕೊಂಡು ತಿನ್ನುತ್ತಾರೆ. ಮದುವೆಯ ಗಂಡನ್ನು ಹೆಣ್ಣಿನ ಕಡೆಯವರು ಎದುರುಗೊಂಡು ಮದುವೆ ಚಪ್ಪರದೊಳಕ್ಕೆ ಕರೆದೊಯ್ಯುವಾಗ, ಅವನಿಗೆ ಚಪ್ಪರದ

ಮುಂದುಗಡೆಯೆ ಆರತಿ ಎತ್ತಿ, ಇಡುಗಾಯನ್ನು ದೃಷ್ಟಿಪರಿಹಾರಕ್ಕಾಗಿ ನಿವಾಳಿಸಿ ಒಡೆಯುತ್ತಾರೆ.

ಉದಾ: ಗಣಪತಿ ಉತ್ಸವ ಮನೆಮುಂದೆ ಬರ್ತಾ ಇದೆ. ಇಡುಗಾಯಿ ಸಿದ್ಧಮಾಡಿರು.

<iDugaayi> (-) Coconut wavered in front of idols and broken on the ground - In every village the idol of main God is put in Palanqin and taken in procession. All the house people clean the floor in front of their house, decorate and break the cocoanut when the procession stops there. That cocoanut is called Idugaayi. The children pick the cocoanut pieces and eat. When the bridegroom is welcomed to the marriage pandal, they show the burning lamp placed in a metal plate and break the Idugaayi.

Eg: Ganesha procession is coming in front of our house. Keep ready the Idugaayi.

112. ಇತ್ತಂಡ: ಎರಡು ತಂಡವಾಗುವುದು ಇತ್ತಂಡ. ನಮ್ಮ ಹಳ್ಳಿಯಲ್ಲಿ ಎಷ್ಟೋ ವರ್ಷಗಳಿಂದ ಚೆನ್ನಾಗಿ ಬಾಳಿ ಬದುಕಿದೆವು, ಈಗ ಕೆಲವಾರು ತಿಂಗಳಿಂದೀಚೆಗೆ ಇತ್ತಂಡವಾಗಿ ಎರಡು ಗುಂಪಿನವರಿಗೂ ಜಗಳ ಶುರುವಾಗಿದೆ. ರಾಯರ ಮನೆಯಲ್ಲಿ ಮಕ್ಕಳಲ್ಲೇ ಇತ್ತಂಡವಾಗಿ ಜಗಳವೋ ಜಗಳ. ರಾಜಕೀಯದಲ್ಲಿ ಗುಂಪು ಇತ್ತಂಡವಾಗುವುದು ಸರ್ವೇಸಾಮಾನ್ಯ.

ಉದಾ: ರಾಮರಾಯರ ಕುಟುಂಬದಲ್ಲಿ ಜಗಳವಾಗಿ ಇತ್ತೀಚೆಗೆ ಕುಟುಂಬ ಇತ್ತಂಡವಾಗಿದೆ.

<itthanDa> Break into two groups - We lived in our village for years together without any problem. Since a few years, quarrel has erupted between two groups. Quarrel has begun in the house of Rama Raya between children. In politics groups formation is quite common.

Eg: In the family of Ramaraya due to quarrel family has ***become divided.***

113. ಇಚಾರಮಾಡು: ವಿಷಯವನ್ನು ಸ್ಪಷ್ಟವಾಗಿ ಯೋಚಿಸುವುದನ್ನು ಹೇಳ ಬೇಕಾದರೆ **ಇಚಾರಮಾಡಿ** (ವಿಚಾರ ಮಾಡಿ) ಎನ್ನುತ್ತಾರೆ.

ಉದಾ: ನಾನು ಹೇಳಿದ್ದು ಸರಿಯಲ್ಲ ಅನ್ನುವುದಾದರೆ, ನೀವೇ ಇಚಾರ ಮಾಡಿ ಹೇಗೆ ಮಾಡ್ಬೇಕು ಅಂತ ಏಳ್ರಿ. ನಾಕ್ದಿನದಿಂದ ಇಚಾರ ಮಾಡ್ತಾನೆ ಇದೀವಿ, ಯಾವುದೂ ತೀರ್ಮಾನವಾಗಿಲ್ಲ.

<ichaaramaaDu> Think clearly - If you want to express anything very clearly, they say IchaaramaaDu (vichaaramaaDu).

Eg: If you think that what I am saying is not correct, you only think and tell what exactly I must do. I have been thinking in the last four days, nothing is decided.

114. ಇಬ್ಬೆ: (ಒಬ್ಬೆ) ಇದು ಒಂದು ಅಳತೆಯ ಪ್ರಮಾಣ. ಆಂಬೊಡೆ ಮಾಡಲು, ನೀರಿನಲ್ಲಿ ನೆನೆಸಿದ ಕಡಲೆಬೇಳೆಯನ್ನು ಒರಳಿಗೆ ಒಂದು ಸಲಕ್ಕೆ ಒಂದೊಂದು **ಇಬ್ಬೆ**ಯಂತೆ ಹಾಕಿ ತಿರುವುತ್ತಾರೆ. ಎರಡು ಅಂಗೈಗಳನ್ನು ಸೇರಿಸಿದಾಗ ಅದು ಹಿಡಿಯುವಷ್ಟು ಪ್ರಮಾಣಕ್ಕೆ ಒಂದು ಬೊಗಸೆ ಅಂದರೆ ಒಂದು **ಇಬ್ಬೆ** ಅನ್ನುವುದು ರೂಢಿ. ಕೆಲವು ಕಡೆಗಳಲ್ಲಿ **ಒಬ್ಬೆ** ಎಂದು ಹೇಳುತ್ತಾರೆ.

ಉದಾ: ಇವತ್ತು ಬಹಳ ಮಂದಿಯನ್ನು ಊಟಕ್ಕೆ ಕರೆದಿದ್ದಾರೆ, ಸುಮಾರು ನಾಲ್ಕು ಇಬ್ಬೆನಾದರೂ ಕಡಲೆಬೇಳೆ ನೆನೆಸಬೇಕು.

ನೋಡಿ: ಒಬ್ಬೆ

<ibbe> A Measure - This is a measure to make a fried cake (AAmboDe) made of Bengal gram. Gram soaked in water they put into the millstone at one time is called Ibbe. To make stretch with two hands is known as Ibbe. In some places it is called Obbey.

Eg: Today they have invited many people for lunch. At least four Ibbes of gram must be soaked.

115. ಇರಚಲುಮಳೆ: ಮಳೆ ವಿಪರೀತವಾಗಿ ರಪರಪ ಬರುತ್ತಿದ್ದರೆ **ಇರಚಲುಹೊಡೀತಾ** ಇದೆ ಅಂತಾರೆ.

ಉದಾ: ಹಿಂದ್ಗಡೆ ಒಪ್ಪಾರಿನ ಬಾಗಿಲು ಮುಚ್ಚು ಇರಚಲುಹೊಡೀತಾ ಇದೆ.

<iracalumaLe> Rain directed by breeze - If it rains with full force, they express Irachalu hodeethaide.

Eg: Close the door behind corridor. Splashing rain is coming.

116. ಇರಸಾಲು: ತೋಟ, ಗದ್ದೆ, ಮನೆ ಮುಂತಾದ ಆಸ್ತಿಗಳ ಮೇಲೆ ಕೊಡಬೇಕಾದ ಕಂದಾಯವನ್ನು ಸರ್ಕಾರಕ್ಕೆ ಒಪ್ಪಿಸುವುದನ್ನು **ಇರಸಾಲು** ಎನ್ನುತ್ತಾರೆ.

ಉದಾ: ಇದೇ ಕಡೇಕಂತು ಕಂದಾಯ ಎಲ್ಲ ಇರಸಾಲು ಮಾಡ್ಬಿಡಬೇಕು.

<irasaalu> Remitance of land tax - To remit money on garden, field or house, property etc. to the government is called Irasaalu.

Eg: This is final instalment. We must remit.

117. ಇರುಸುಮುರುಸು: ಮನಸ್ಸು ಸರಿಯಾದ ಸ್ಥಿತಿಯಲ್ಲಿಲ್ಲದಿದ್ದರೆ, ಏನೋ **ಇರುಸುಮುರುಸಾಗಿದೆ,** ಕೆಲಸ ಮಾಡುವುದಕ್ಕೆ ಮನಸ್ಸಿಲ್ಲ ಅನ್ನುತ್ತಾರೆ.

ಉದಾ: ಒಂದು ವಾರದಿಂದೀಚೆಗೆ ಅವರಿಬ್ಬರಿಗೂ ಇರುಸುಮುರುಸಾಗಿದೆ, ಯಾವಾಗಲೂ ಮನಸ್ತಾಪ, ಜಗಳ.

<irasumurasu> Discomfort of body - If state of mind is not perfect, they say discomfort of body. There is no mood to work.

Eg: Since last one week, there is discomfort for both of them. Always hatred, quarrel.

118. ಇಲ್ಲೀಗಂಟ: ಇಲ್ಲಿಯವರೆಗೆ ಎನ್ನುವುದನ್ನು ಇಲ್ಲೀಗಂಟ ಎನ್ನುತ್ತಾರೆ.

ಉದಾ: ನಮ್ಮ ಜಮೀನು ಇಲ್ಲೀಗಂಟ ಇದೆ. ಹ್ವಾದ್ವಾರ ಕೆರೆದಂಡೆ ಒಡೆದು ನೀರು ನುಗ್ಗಿದಾಗ ಇಲ್ಲೀಗಂಟ ಬಂದಿತ್ತು.

<illiiganTa> Till this end - they say illeeganTa.

Eg: Our field extends till this end.

Last week when the tank bund broke, water rushed up to this end.

119. ಇಳಕಲು: ಎರಡು ಗುಡ್ಡಗಳ ನಡುವೆ ಇರುವ ಸಣ್ಣ ರಸ್ತೆಯಲ್ಲಿ ತುಂಬಾ ಇಳಿಜಾರಾಗಿರುತ್ತೆ. ಅದನ್ನು ಇಳಕಲುರಸ್ತೆ ಎನ್ನುತ್ತಾರೆ. ಅಂತಹ ಕಡೆ ಗಾಡಿ ಹೊಡೆಯುವವನು ಎತ್ತುಗಳ ಕೊರಳಿಗೆ ಕಟ್ಟಿರುವ ಹಗ್ಗವನ್ನು ಎಳೆದು, ಇನ್ನೊಬ್ಬನು ಗಾಡಿಯ ಮೂಕಿಯ ಮುಂಭಾಗವನ್ನು ಒತ್ತಿ ಹಿಡಿದು ಗಾಡಿ ಇಳಕಲು ಜಾಗವನ್ನು ದಾಟುವವರೆಗೂ ನಿಧಾನವಾಗಿ ಹೋಗುತ್ತಾರೆ.

ಉದಾ: ಇಳಕಲುರಸ್ತೆ ಬಂತು ನಿಧಾನವಾಗಿ ಗಾಡಿನಡೆಸು.

<iLakalu> Slope land between two hills - the road in between will be too slope. It is called ILakaLu road. On such road the cartman pulls the rope tied to the neck of bullock and other person presses the front portion of cart, and goes slowly till they pass on road.

120. ಇಳಿವು: ಮಾಮೂಲಿನಂತೆ ಆಗುವ ಫಸಲು ಕಡಮೆಯಾದಾಗ **ಇಳಿವಾಗೈತೆ** ಎಂದು ಹೇಳುತ್ತಾರೆ.

ಉದಾ: ಆನೆಕಲ್ಲು ಮಳೆಬಿದ್ದು ಈ ಸಲ ಮಾವಿನ ಫಸಲು ಇಳಿವಾಗ್ಬಿಡ್ತು.

<iLivu> (-) Get low crop than the estimation - When the crop drops down than the required estimation, they express crop iluvaagaithe.

Eg: Due to hailstone rain this time, mango crop dropped.

121. ಇಳಿಮೇಜು: ನೋಡಿ: ಕಾಲ್ಮೇಜು (ಕಾಲ್ಮಣೆ)

<iLimeeju> See: Kaalmeeju (KaalmaNe)

❑

ಈ / Ii

122. ಈಬೂತಿ: ಬೆರಣಿಯನ್ನು ಸುಟ್ಟಾಗ ಬರುವ ಬೂದಿಗೆ **ವಿಭೂತಿ** ಎಂದು ಹೆಸರು. ಇದು ಹಳ್ಳಿಯ ಭಾಷೆಯಲ್ಲಿ **ಈಬೂತಿ**ಯಾಗಿದೆ. ಈಬೂತಿಯನ್ನು ಬ್ರಾಹ್ಮಣರು ಸಂಧ್ಯಾವಂದನೆ ಮಾಡುವುದಕ್ಕೆ ಮುಂಚೆ, ಹಣೆ, ಮೊಣಕೈ, ಭುಜಗಳಿಗೆ ಹಚ್ಚಿಕೊಳ್ಳುತ್ತಾರೆ. ಲಿಂಗಾಯಿತರು ಕೂಡಾ ಈಬೂತಿಯನ್ನು ಹಣೆಗೆ ಹಚ್ಚಿಕೊಳ್ಳುತ್ತಾರೆ. ಮಕ್ಕಳಿಗೆ ಶೀತವಾದಾಗ ಈಬೂತಿಯನ್ನು ಅಂಗಾಲುಗಳಿಗೆ ಹಚ್ಚಿ ಚೆನ್ನಾಗಿ ತಿಕ್ಕಿದರೆ ಮೈಯಲ್ಲಿ ಬಿಸಿ ಉಂಟಾಗಿ ಶೀತ ಕಮ್ಮಿಯಾಗುತ್ತದೆ. ಈಬೂತಿಯನ್ನು ಇಡಲು ಹಲಗೆಯಲ್ಲಿ ಮಾಡಿರುವ ಡಬ್ಬಿಗೆ ಈಬೂತಿ ಬಟ್ಟು ಎಂದು ಹೆಸರು. ಬೆಳಿಗ್ಗೆ ಎದ್ದು ಮುಖ ತೊಳೆದ ಕೂಡಲೆ ಕೈಗೆ ಎಟುಕುವಂತೆ ಈಬೂತಿ ಬಟ್ಟುವನ್ನು ಗೋಡೆಯಲ್ಲಿ ಒಂದು ಗೂಡನ್ನು ಮಾಡಿ ಅಲ್ಲಿ ಇಟ್ಟಿರುತ್ತಾರೆ.

ಉದಾ: ಮಗೂಗೆ ಶೀತವಾಗಿದೆ ಸ್ವಲ್ಪ ಈಬೂತಿ ಬಳಿ.

<iibuuti> Ash of burnt cow dung - The dried cow dung which is burnt is called as iibuuti. This has iibhooti in village language. The brahmins get smeared with iibuuti on forehead, on hand and shoulders before doing Sandhyavandana. Lingayats also smear iibuuti on foreheads. When children get cold, if iibuuti is rubbed on sole, heat increases in the body and cold comes down. The box made of wood to keep iibuuti is known as iibuutibattu. Immediately after getting up in the morning, washing face, eebhoothi is accessible near, kept in a pouch.

Eg: Child is suffering with cold. Smear iibuuti.



123. ಈಳಿಗೆಮಣೆ: ಸುಮಾರು ಎರಡು ಅಡಿ ಉದ್ದ, ಒಂದು ಅಡಿ ಅಗಲದ ಮರದ ಮಣೆಗೆ ಕಬ್ಬಿಣದ ಕತ್ತಿಯನ್ನು ಸೆಗೆಸಿರುತ್ತಾರೆ. ಕತ್ತಿಯ ವೆೀಲ್ಭಾಗದಲ್ಲಿ ತುರಿಯುವುದಕ್ಕೆ ಬಿಲ್ಲೆಯಾಕಾರವಾಗಿದ್ದು ಸಣ್ಣ ಸಣ್ಣ

ಹಲ್ಲುಗಳಿರುತ್ತವೆ. ಅದರಿಂದ ತೆಂಗಿನಕಾಯಿ ತುರಿಯುವುದಕ್ಕೂ ಮತ್ತು ಕತ್ತಿಯಿಂದ ತರಕಾರಿಗಳನ್ನು ಹೆಚ್ಚುವುದಕ್ಕೂ ಉಪಯೋಗವಾಗುತ್ತೆ.

ಉದಾ: ಅಡಿಗೆಮನೆ ಬಡೂನಲ್ಲಿ ಈಳಿಗೆಮಣೆ ಇಟ್ಟಿದೀನಿ, ತಗಂಬಾ.

<iiligemane> Vegetable cutter - A wooden palage of 2 feet length and one-foot width is fixed with an iron sickle. In upper portion it will be like small round plate with teeth to grate Cocoanut and lower portion to cutvegetables.

Eg: In the kitchen on the shelf I have kept Eeligemane. Bring it.

❑

ಉ / U

124. ಉಂಬಳಿ: ದೇವಸ್ಥಾನದ ಮೇಲುಸ್ತುವಾರಿಗೆ ಮತ್ತು ನಿತ್ಯ ಪೂಜೆಗೆ ಅಲ್ಪಸ್ವಲ್ಪ ಜಮೀನನ್ನು ಬಿಟ್ಟುಕೊಡುತ್ತಾರೆ. ಅದಕ್ಕ **ಉಂಬಳಿ** ಎಂದು ಹೆಸರು.

ಉದಾ: ಈಸ್ವರ ದೇವರ ಗುಡೀಗೆ ಒಂದು ಎಕರೆ ತೋಟ ಉಂಬಳಿ ಬಿಟ್ಟವ್ರೆ.

<umbaLi> Land granted as gift to temple - For maintenance of the temple and daily worshipping, they will have reserved some land. It is called Umbali (land granted as gift).

125. ಉಕ್ಕಡ: ಊರಿಂದೂರಿಗೆ ಬಂದು ಹೋಗುವ ವಾಹನಗಳಿಂದ ಸುಂಕ ವಸೂಲ್ಮಾಡಲು ನಿಗದಿಯಾಗಿರುವ ಜಾಗಕ್ಕೆ **ಉಕ್ಕಡ** ಎಂದು ಹೇಳುತ್ತಾರೆ.

ಉದಾ: ನಮ್ಮೂರು ತಾವ ಇರುವ ಉಕ್ಕಡಕ್ಕೆ ಸಾಮಾನು ಹೇರ್ಕಂಡು ಹೋಗುವ ಎತ್ತಿನಗಾಡೀಗೂ ಸುಂಕ ಕೊಡ್ಬೇಕು.

<ukkaDa> Tollgate - The place where to receive money as toll on incoming and outgoing vehicles is called Ukkada (Tollgate).

Eg: For the tollgate near our village we must pay toll for the cart also which transports things

126. ಉಚ್ಚಿಕೊಳ್ಳುವುದು: ಆಹಾರ ವ್ಯತ್ಯಾಸದಿಂದಾಗಿ ನೀರಿನಂತೆ ಭೇದಿಯಾಗುತ್ತಿದ್ದರೆ **ಉಚ್ಚಿಕೊಳ್ಳುವುದು** ಎನ್ನುತ್ತಾರೆ.

ಉದಾ: ಮಗು ಏನ್ ತಿಂತೋ ಏನೋ ಬೈಗಿಂದ ನಾಲ್ಕುಸಾರಿ ಉಚ್ಕೋಂತು.

<ucchikoLLuvudu> Loose motion - Due to change of food, if you are suffering with diarrhea, they say Ucchikolluvudu.

Eg: Child what he ate since morning has diarrhea.

127. ಉತ್ತರೀಯ: ಸೊಂಟದಿಂದ ಮೇಲ್ಭಾಗಕ್ಕೆ ಹೊದೆಯುವ ಐದು ಮೊಳದ ಸಣ್ಣ ಪಂಚೆಗೆ **ಉತ್ತರೀಯ** ಎಂದು ಹೆಸರು. ಸಂಧ್ಯಾವಂದನೆ ಮಾಡುವಾಗ **ಉತ್ತರೀಯವನ್ನು** ಹೊದ್ದುಕೊಳ್ಳಲೇ ಬೇಕು.

ಸತ್ತವರ ಅಪರಕ್ರಿಯೆಯನ್ನು ಸ್ಮಶಾನದಲ್ಲಿ ಮಾಡುವಾಗ ಐದಾರು ಸಲ ಸ್ನಾನ ಮಾಡಬೇಕಾಗುವುದರಿಂದ ಉತ್ತರೀಯ ಬಹಳ ಅನುಕೂಲವಾಗಿರುತ್ತೆ. ಒದ್ದೆಯಾಗಿರುವ ಪಂಚೆ ಬೇಗ ಒಣಗಿಹೋಗುತ್ತೆ.

ಉದಾ: ನಾಳೆ ಶಿವಮೊಗ್ಗಕ್ಕೆ ಹೋದಾಗ ಎರಡು ಜೊತೆ ಉತ್ತರೀಯ ತರಬೇಕು.

<utthareeya> Upper cloth - The thin upper cloth used to wear above the waist is known as Utthareeya. One should wear this cloth while doing Sandhyavandana. When doing ritual ceremony of the deceased person in the cremation ground, since four or five times to bathe, utthareeya is very convenient. The wet cloth dries quickly.

Eg: When you go to Shimogga tomorrow, you must bring two pairs of Utthareeya.

128. ಉದಾರ: ಧಾರಾಳವಾಗಿ ಏನನ್ನಾದರೂ ಮತ್ತೊಬ್ಬರಿಗೆ ಕೊಡುವುದಕ್ಕೆ **ಉದಾರ** ಎನ್ನುತ್ತಾರೆ.

ಉದಾ: ನಮ್ಮ ಹಳ್ಳಿಯ ಸೋಮಶೇಖರ ರಾಯರು ತುಂಬಾ ಉದಾರಿ. ಅವರ ಮನೆಗೆ ಬಂದವರು ಯಾರೂ ಖಾಲಿಕೈಲಿ ಹೋಗಿಲ್ಲ. ಅವರದು ಯಾವಾಗಲೂ ಉದಾರ ಮನಸ್ಸು.

<udaara> Liberal - To give anything to others liberally, they say udaara.

Eg: Somashekhararaya of our village is a very generous person. Whoever goes to his house has not come back emptyhanded. He has always a liberal mind.

129. ಉಡಾಯಿಸು: ಹಿಂದು ಮುಂದೆ ಯೋಚನೆ ಮಾಡದೆ ಆಸ್ತಿಯನ್ನು ಹಾಳು ಮಾಡಿದರೆ **ಉಡಾಯಿಸು** ಅನ್ನುವ ಪದವನ್ನು ಬಳಸುತ್ತಾರೆ.


ಉದಾ: ಕೆಟ್ಟ ಚಾಳಿಗೆ ಬಿದ್ದು ಅಪ್ಪ ಕೂಡಿಟ್ಟ ಹಣವನ್ನೆಲ್ಲ ಒಂದೇ ಬಾರಿಗೆ ಮಗ ಉಡಾಯಿಸಿಬಿಟ್ಟ.

<uDaayisu> Squandering - Without thinking deeply if you squander the property they use the word Udaayisu.

Eg: Son squandered the entire money saved by his father due to bad habits.



130. ಉಪನಯನ: ಹುಡುಗನಿಗೆ ಎಂಟು–ಹತ್ತು ವರ್ಷಗಳು ತುಂಬಿದ ನಂತರ ಮುಂಜಿ (ಬ್ರಹ್ಮೋಪದೇಶ) ಮಾಡುತ್ತಾರೆ. ಹುಡುಗನನ್ನು ಹಸೆಯ ಮೇಲೆ ಕೂರಿಸಿ ತಲೆಗೆ ಒಂದು ಬಟ್ಟು ಕೊಬರಿ ಎಣ್ಣೆಯನ್ನು ಅರಿಶಿನದೊಂದಿಗೆ ಹಚ್ಚಿ ಆರತಿ ಮಾಡುತ್ತಾರೆ. ಕ್ಷೌರಿಕನು ಬಂದ ಮೇಲೆ ಹುಡುಗನ ತಲೆಯಲ್ಲಿ ಗೋಪಾದದಷ್ಟು ಕೂದಲನ್ನು ಬಿಟ್ಟು ಉಳಿದೆಲ್ಲವನ್ನೂ ಕತ್ತರಿಸುತ್ತಾನೆ. ಸ್ನಾನವಾದ ಮೇಲೆ ತಾಯಿ – ಮಗ ಒಂದೇ ಎಲೆಯಲ್ಲಿ ಊಟ ಮಾಡುತ್ತಾರೆ. ಹುಡುಗನಿಗೆ ಆ ದಿನ ಅರಿಶಿನದ ನೀರಿನಲ್ಲಿ ಅದ್ದಿ ಒಣ ಹಾಕಿದ ಪಂಚೆ ಉಡುವುದಕ್ಕು, ಹೊದೆಯುವುದಕ್ಕು ಕೊಡುತ್ತಾರೆ. ಕೌಪೀನಕ್ಕೂ ಅರಿಶಿನದಬಟ್ಟೆಯೆ. ಸೊಂಟಕ್ಕೆ ನೊಜೆಹುಲ್ಲಿನಿಂದ ಮಾಡಿದ ದಾರ (ಮೌಂಜಿ). ಒಂಟಿ ಜನಿವಾರ, ಕೈಗೊಂದು ಮುತ್ತುಗ ಮರದ ರೆಂಬೆ. ಮುಂಜಿಯಾದ ದಿನದಿಂದ ಅವನನ್ನು **ಬ್ರಹ್ಮಚಾರಿ** ಎನ್ನುತ್ತಾರೆ.



ಮುಂಜಿಯ ಶಾಸ್ತ್ರಗಳು ಮುಗಿದ ಮೇಲೆ ಮುತ್ತೈದೆಯರು ಬ್ರಹ್ಮಚಾರಿಗೆ ಭಿಕ್ಷೆ ನೀಡುತ್ತಾರೆ. ನಂತರ ಬ್ರಹ್ಮಚಾರಿಯನ್ನು ಓಲಗ ಸಮೇತ ಊರ ಹೊರಗಿನ ಅರಳಿ ಮರದ ಹತ್ತಿರ ಕರೆದುಕೊಂಡು ಹೋಗಿ ಮುತ್ತುಗದ ರೆಂಬೆಯನ್ನು ಮಣ್ಣಿನ ಗುಡ್ಡೆ ಮಾಡಿ ಅದರಲ್ಲಿ ನೆಡುತ್ತಾರೆ. ಆ ದಿನದಿಂದ

ಅವನು ಶಾಸ್ತ್ರೋಕ್ತವಾದ ನಿಯಮಗಳನ್ನು (ಪ್ರಾತಃ ಸಂಧ್ಯಾವಂದನೆ, ಔಪಾಸನೆ, ಮಾಧ್ಯಾಹ್ನಿಕ, ಸಂಜೆ ಸಂಧ್ಯಾವಂದನೆ) ಪಾಲಿಸಬೇಕು. ಚಾಪೆಯ ಮೇಲೆ ಮಲಗಬೇಕು. ಇವೆಲ್ಲವೂ ಬ್ರಹ್ಮಚಾರಿಯಾದವನು ಅನುಸರಿಸಬೇಕಾದ ವಿಧಿಗಳು.

ಅಲ್ಲಿಂದ ಮುಂದೆ ಅವನು ಕೆಲವಾರು ವರ್ಷಗಳು ಗುರುಕುಲಾಭ್ಯಾಸ ಮಾಡುತ್ತಾನೆ. ಗುರುವಿನ ಆಶೀರ್ವಾದ ಪಡೆದು ಮನೆಗೆ ಹಿಂತಿರುಗುತ್ತಾನೆ.

ಉದಾ: ನಾಳೆ ನಮ್ಮ ಶೀನನಿಗೆ ಉಪನಯನ ಕೃಷ್ಣ ಕಲ್ಯಾಣ ಮಂಟಪದಲ್ಲಿ.

<upanayana> Thread ceremony - After completion of eight or ten years for the boy parents do Brahmopadesha. The boy will be seated on a decorated plank.They smear a pinch of cocoanut oil with turmeric powder on his head and swing the burning lamp in front of him. The barber comes and cut his hair leaving a small piece. After bath, mother and son will take food in the same banana leaf. They give cloth to the boy, colored with turmeric powder to wear. Even for the underwear, the same type of cloth. For the belt they use the fibers of a type of grass. A single auspicious thread (janivara) and branch of flame tree. After the day of brahmopadesha, he is called as Brahmachari. When the ritual ceremonies are over, the elderly women will offer alms (Bhiksha). Then he will be taken near the pipal tree with band orchestra and get the branch of flame tree fixed with mud. From that day onwards, he must follow the rule (morning sandhyavandana, worship of the sacred fire, midday Prayers, evening sandhyavandana). He must sleep on the carpet. These are all the rules to be followed by Brahmachari. After taking education in Gurukula for a few years, returns home with blessings of Guru.

Eg: Tomorrow, Brahmopadesha for Sheena in Krishna Kalyanamantap.

131. ಉರುಳುಸೇವೆ: ಕೆಲವರು ಮನೆಯಲ್ಲಿ ಏನಾದರೂ ತೊಂದರೆಯಾದಾಗ ದೇವರಿಗೆ ಹರಕೆ ಹಾಕಿಕೊಳ್ಳುತ್ತಾರೆ. ನದಿಯಲ್ಲಿ ಸ್ನಾನ ಮಾಡಿ, ಒದ್ದೆ ಬಟ್ಟೆಯನ್ನುಟ್ಟುಕೊಂಡು ದೇವಸ್ಥಾನದ ಹೊರಾಂಗಣದಲ್ಲಿ ನೆಲದ ಮೇಲೆ ದೇವಸ್ಥಾನದ ಸುತ್ತಲೂ ಮಲಗಿ ಹೊರಳಿಕೊಂಡು ಹೋಗುತ್ತಾರೆ. ಅದನ್ನು



ಉರುಳುಸೇವೆ ಎನ್ನುತ್ತಾರೆ. ಸಾಮಾನ್ಯವಾಗಿ ಕರ್ನಾಟಕದ ನಂಜನಗೂಡು, ಚಾಮುಂಡಿ ಬೆಟ್ಟ ಮತ್ತು ತಿರುಪತಿ (ಆಂಧ್ರ) ಮೊದಲಾದ ಊರುಗಳಲ್ಲಿ ಉರುಳು ಸೇವೆ ಮಾಡುವವರನ್ನು ನೋಡಬಹುದು.

<uruLuseeve> Rolling in front of temple - Some people when they face any hurdle in the house, they make a Vow to perform a service to the God. Taking bath in the river they go to the temple with wet cloth, lie down on the floor outside of the temple and crawl. It is called Uruluseeve. Generally, in Nanjangud, Chamundi Hills (Karnataka), Tirupati (Andhra Pradesh) you can see such people crawling in front of the temple.

132. ಉಂಡಾಡಿ: ಏನೂ ಕೆಲಸ ಮಾಡದೆ ಅಲ್ಲಿ ಇಲ್ಲಿ ಸಿಕ್ಕಷ್ಟನ್ನು ಉಂಡು ಊರಲ್ಲೆಲ್ಲ ತಿರುಗಾಡಿಕೊಂಡಿರುವವನಿಗೆ ಉಂಡಾಡಿ ಎನ್ನುತ್ತಾರೆ.

ಉದಾ: ಅವನು ಯಾವ ಕೆಲಸಕ್ಕೂ ಬಾರದವನು, ಉಂಡಾಡಿಗುಂಡ ಅವನ ಮಾತನ್ನ ನಂಬಬೇಡ.

ಸಮಾನಾರ್ಥಕ: ಉಡಾಳ

<unDaaDi> Idler - Without doing any work if a person eating whatever he gets here and there and roam about in the village is named as UnDaaDi (idler).

Eg: He is unfit for any work, a lazy fellow. Don't trust him.

Equivalent: Udala (Vagrant)


133. ಉಂಡಿಗೆ: ಕಲ್ಲಂಗಡಿ ಅಥವಾ ಹಲಸಿನಹಣ್ಣು ತಿನ್ನಲು ಚೆನ್ನಾಗಿ ಪಕ್ವವಾಗಿದೆಯೆ ಎಂದು ತಿಳಿಯಬೇಕಾದರೆ, ಒಂದು ಸೀಳಿನಷ್ಟು ಗಾತ್ರಕ್ಕೆ ಹಣ್ಣನ್ನು ರಂಧ್ರಮಾಡಿ ಆ ಚೂರನ್ನು ತೆಗೆದು ಒಳಭಾಗ ಹೇಗಿದೆ ಎಂದು ನೋಡುತ್ತಾರೆ. ಅದಕ್ಕೆ ಉಂಡಿಗೆ ಎಂದು ಹೆಸರು. ಅದು ಹಣ್ಣಾಗಿದ್ದರೆ ಮಾತ್ರ ಕೊಯ್ಯುತ್ತಾರೆ. ಇಲ್ಲದಿದ್ದಲ್ಲಿ ಆ ಚೂರನ್ನು ಹಾಗೆಯೇ ಮುಚ್ಚಿ ಎರಡು ದಿವಸ ಹಣ್ಣನ್ನು ಇಟ್ಟರೆ, ತಿನ್ನುವುದಕ್ಕೆ ಸಿದ್ಧವಾಗುತ್ತೆ. ಉಂಡಿಗೆಗೆ ಚಂದ್ರಿಕೆ ಎಂದೂ ಹೇಳುತ್ತಾರೆ.

ಉದಾ: ಕಲ್ಲಂಗಡಿ ಹಣ್ಣಿಗೆ ಉಂಡಿಗೆ ಹಾಕಿನೋಡು, ಚೆನ್ನಾಗಿ ಹಣ್ಣಾಗಿದ್ದರೆ ಗೊತ್ತಾಗುತ್ತೆ.

<unDige> (-) Piece of fruit taken out ot check wheather ripen - To make certain that to eat a watermelon or jack fruit is ripen, they make a small hole and take out a piece to look inside. That piece is called Undige. If it is fully ripened then only they cut. If not close the hole with that piece. Keeping it for another two days it ripens.

Undige is known as Chandrike also.

Eg: For watermelon put Undige and see. Whether it is ripened you can know.



134. ಉಕ್ಕೆ: ಭತ್ತ, ರಾಗಿ ಮುಂತಾದ ಧಾನ್ಯದ ಬೀಜವನ್ನು ನೆಲಕ್ಕೆ ಹಾಕುವ ಮುಂಚೆ, ನೆಲವನ್ನು ಉಳಬೇಕು. ಹೊಲದಲ್ಲಿ ನೇಗಿಲಿನ ಸಹಾಯದಿಂದ ಉತ್ತರೆ, ತೋಟಗಳಲ್ಲಿ ಗುದ್ದಲಿಯಿಂದ ನೆಲವನ್ನು ಅಗೆದು, ಭೂಮಿಯನ್ನು ಹಸನಾಗಿ ಮಾಡುತ್ತಾರೆ. ಒಂದೇ ಸೀಳಿನಂತೆ **ಉಕ್ಕೆ** ಮಾಡುವುದಕ್ಕೆ ನೇಗಿಲು, ನಾಲ್ಕಾರು ಸೀಳುಗಳನ್ನು ಒಟ್ಟಿಗೆ ಉಳುವುದಕ್ಕೆ ಕುಂಟೆ ಹೊಡೆಯುವುದು ಎನ್ನುತ್ತಾರೆ.

ಉದಾ: ನಾಳೆ ಉಕ್ಕೆ ಹೊಡೆದರೆ ನಾಡಿದ್ದು ಬೀಜ ಬಿತ್ತಿ ಬಿಡಬಹುದು.

<ukke> (-) Make the land fit for sowing paddy - Before sowing paddy, ragi etc. grains, you must dig the earth. In Paddy field through a plough, in garden by spade, dig the earth and make fit to grow. To make one row, they use Plough, for four or six rows together, they say kuntehodeyuvudu (an instrument of agriculture).

135. ಉಗ್ರಾಣ: ದಿನಂಪ್ರತಿ ಬಳಕೆಯಲ್ಲಿಲ್ಲದ ಮನೆಯ ಪದಾರ್ಥಗಳನ್ನು ಕೂಡಿಡುವ ಜಾಗಕ್ಕೆ **ಉಗ್ರಾಣ** ಎನ್ನುತ್ತಾರೆ. ಹತ್ತು–ಹದಿನೈದು ಅಡಿ ಉದ್ದ, ಎಂಟು–ಹತ್ತು ಅಡಿ ಅಗಲವಾದ ಕೊಠಡಿ. ಮನೆಯ ಎಲ್ಲ ಬೇಕು ಬೇಕಿಲ್ಲದ ಸಾಮಾನುಗಳು **ಉಗ್ರಾಣದಲ್ಲಿ** ಅಡಕವಾಗಿರುತ್ತವೆ.

ಉದಾ: ಉಗ್ರಾಣದಲ್ಲಿ ನೀರುಸೇದುವ ಹಗ್ಗ ಇದೆ. ಹುಡುಕಿ ನೋಡು.

<ugraana> Store room - The place where to store the things required every day is called as Ugraana (Storehouse). Ten to fifteen feet height, eight to ten feet width storehouse. The things which are required and not required are all stored in Ugraana.

Eg: The rope used for drawing water from the well is kept in Ugraana, search for it.

136. ಉಜಾಡು: ಯಾವುದಾದರೂ ಪದಾರ್ಥ ಹಾಳಾಗಿದ್ದರೆ **ಉಜಾಡಾಗಿದೆ** ಎಂದು ಹೇಳುವುದು ರೂಢಿ.

ಉದಾ: ನೆನ್ನೆ ಅಡ್ಡಾದಿಡ್ಡಿ ಮಳೆ ಬಂದು ಹೂವಿನ ಗಿಡಗಳೆಲ್ಲ ಉಜಾಡ್ ಎದ್‌ಹೋಗಿದೆ.

<ujaaDu> That which is desolate - If anything is deteriorated it is common to use the word UjaaDu that which is desolated.

Eg: Last night it rained heavily, and all the flower plants are desolated.

137. ಉಜ್ಜುಬೆಲ್ಲ: ಬೆಲ್ಲದ ಪಾಕ ಒಂದು ಹದಕ್ಕೆ ಬಂದಾಗ, ಅದನ್ನು ಸ್ವಲ್ಪಸ್ವಲ್ಪವಾಗಿ ಗೋಡೆಯ ಮೇಲೆ ಸಿಮೆಂಟ್ ಹಾಕುವ ಉಕ್ಕಿನ ಕರಣೆಯಿಂದ ಕೊಪ್ಪರಿಗೆಯ ಅಂಚಿಗೆ ಬೆಲ್ಲದ ಪಾಕವನ್ನು ಉಜ್ಜಬೇಕು. ಸ್ವಲ್ಪ ಹೊತ್ತು ಉಜ್ಜಿದರೆ ಅದು ಹಳದಿ ಬಣ್ಣಕ್ಕೆ ತಿರುಗುತ್ತದೆ. ಆರಿದ ನಂತರ ಅದನ್ನು ಚಾಕುವಿನಿಂದ ಬಿಲ್ಲೆಬಿಲ್ಲೆಯಾಗಿ ಕತ್ತರಿಸಬಹುದು. ತಿನ್ನಲು ಮೈಸೂರ್‌ಪಾಕ್‌ನಂತೆ ರುಚಿಯಾಗಿರುತ್ತೆ. ತಿಂಗಳಾನುಗಟ್ಟಲೆ ಇಟ್ಟಿರಬಹುದು. ಬಿಲ್ಲೆಬೆಲ್ಲ ಎಂದು ಇದನ್ನು ಕರೆಯುತ್ತಾರೆ.

ಕಾದ ಪಾಕವನ್ನು ಒಂದು ಅಡಿ ಉದ್ದದ ಬಿದಿರಿನ ಕೊಳವೆಯೊಳಕ್ಕೆ ಹಾಕಿ ಆರಿದ ನಂತರ, ಕೊಳವೆಯನ್ನು ಸೀಳಿದಾಗ ಬೆಲ್ಲ ಚಾಕ್‌ಲೇಟ್ ಮಾದರಿಯಲ್ಲಿ ಕಾಣುತ್ತೆ. ಹುಡುಗರು ಚೀಪಿಕೊಂಡು ತಿನ್ನುತ್ತಾರೆ. ಇದನ್ನು ಉಜ್ಜುಬೆಲ್ಲ ಎಂದು ಕರೆಯುತ್ತಾರೆ. ಚಾಕೊಲೇಟ್‌ಬೆಲ್ಲ ಎಂದೂ ಕರೆಯುತ್ತಾರೆ.

ಉದಾ: ರಾಮಯ್ಯನೋರ ಆಲೆಮನೇಲಿ ಎಲ್ಲರಿಗೂ ಉಜ್ಜುಬೆಲ್ಲ ಕೊಟ್ಟರು.


ನೋಡಿ: ಕೊಪ್ಪರಿಗೆ, ಚಾಕೊಲೇಟ್‌ಬೆಲ್ಲ

<ujjubella> A type of jaggery - When the thick liquid of boiling sugarcane juice comes to a stage for preparing jaggery, it must be smeared by a mason's trowel to the edge of broad mouthead metal vessel. After some time, it turns into yellow color. Then it can be cut into small slabs. It is sweet like Mysurpak. It is called Ujjubella. It can be preserved for months together. It is also known as Billebella.

Eg: At Ramayya's Alemane they offered Ujjubella to everyone.

See: Kopparige, Chackoletbella.

138. ಉಜ್ಜುಗೊರಡು: ಮರಗೆಲಸ ಮರದ ಉಬ್ಬು ತಗ್ಗುಗಳನ್ನು ಸಮಗೊಳಿಸಲು ಉಪಯೋಗಿಸುವ ಸಾಧನಕ್ಕೆ **ಉಜ್ಜುಗೊರಡು** ಎನ್ನುತ್ತಾರೆ. ಉಜ್ಜುಗೊರಡನ್ನು ಕಬ್ಬಿಣ ಅಥವಾ ಗಟ್ಟಿಯಾದ ಮರದಿಂದ ತಯಾರಿಸಬಹುದು.



ಮರದ ಉಜ್ಜುಗೊರಡನ್ನು, ಮರಗೆಲಸದವರೇ ಮಾಡಿಕೊಳ್ಳುತ್ತಾರೆ. ಉಜ್ಜುಗೊರಡನ್ನು **ಹತ್ತರಿ** ಎಂದೂ ಹೇಳುತ್ತಾರೆ. ತೋಪಡಾ ಎಂದೂ ಕರೆಯುತ್ತಾರೆ.

ಉದಾ: ಅಲ್ಲಿಟ್ಟಿರುವ ಮರದ ಹಲಗೆಗಳನ್ನೆಲ್ಲ ಉಜ್ಜುಗೊರಡು ಹಾಕಿ ನಯಮಾಡಬೇಕು.

ಸಮಾನಾರ್ಥಕ: ಹತ್ತರಿ, ತೋಪಡಾ

<ujjugoraDu> Filer Metal tool for smothen wood - The carpenter who uses the equipment for levelling the wooden plank is called as Ujjugoradu. Ujjugoradu can be made of iron or hard wood. With hard wood, carpenter himself will prepare. Ujjugoradu is also called as Thopada.

Eg: The planks kept there must be made smooth by Ujjugoradu.

Equivalent: Hattari, Thopada.

139. ಉಡುದಾರ: ಸೊಂಟಕ್ಕೆ ಕಟ್ಟುವ ದಾರವೇ ಉಡುದಾರ. ಶ್ರೀಮಂತರಾದರೆ ಬೆಳ್ಳಿ ಅಥವಾ ಚಿನ್ನದ **ಉಡುದಾರ**ವನ್ನು ಮಕ್ಕಳಿಗೆ ಕಟ್ಟುತ್ತಾರೆ. ಸಾಮಾನ್ಯವಾಗಿ ಕರಿಬಣ್ಣದ ದಾರವನ್ನು ಉಡುದಾರವಾಗಿ ಉಪಯೋಗಿಸುವುದು ವಾಡಿಕೆಯಲ್ಲಿದೆ.



ಉಡುದಾರವನ್ನು ಕರಿದಾರ ಎಂದೂ ಕೆಲವರು ಕರೆಯುವುದುಂಟು. ಮುಂಜಿಯಾದ ವಟುವಿಗೆ **ಲಂಗೋಟಿಯನ್ನು ಕಟ್ಟಲು ಅನುಕೂಲವಾಗುತ್ತೆ.**

ಉದಾ: ಮಗೂಗೆ ಉಡುದಾರ ಹಾಕಬೇಕು. ನಾಳೆ ಕರಿಬಣ್ಣದ ದಾರ ಕೊಂಡ್ಕಂಡ್ಬಾ.

ನೋಡಿ: ಕರಿದಾರ

<uDudaara> (-) String tied round the waist - The thread to be tied to the waist is called UDudaara. Generally, the black colored thread is used in usage. UDudaara is also known as Karidaara. It is useful to tie to a brahmachaari.

Eg: We must tie uDudaara to the child. Buy black thread and bring.

See: Karidaara.


140. ಉಣ್ಣೆ: ಉಣ್ಣೆ ಒಂದು ಜಾತಿಯ ಕ್ರಿಮಿ. ನೆಲಗಡಲೆಬೀಜದ ಗಾತ್ರಕ್ಕಿರುತ್ತೆ. ಎತ್ತು, ಎಮ್ಮೆ, ಹಸು, ಕರುಗಳ ಮೈಗೆ ಅಂಟಿಕೊಂಡು ರಕ್ತವನ್ನೆಲ್ಲ ಹೀರಿಬಿಡುತ್ತದೆ. ಉಣ್ಣೆಯನ್ನು ಕೈಯಿಂದ ಕಿತ್ತು ತೆಗೆಯಬೇಕು.

ಉದಾ: ಹಸುವಿಗೆ ಮೈಯಲ್ಲಿ ಉಣ್ಣೆ ಹತ್ತಿದೆ. ಕೀಳಬೇಕು.

<uNNe> (-) Unne is a kind of creature. It is as thick as a peanut. It must be plucked by hand.

Eg: Unne has affected to the cow. Must pluck it out.

141. ಉದ್ಧರಣೆ: ಉದ್ಧರಣೆಯನ್ನು ತಾಮ್ರದ ದಪ್ಪ ತಗಡಿನಿಂದ ಮಾಡುತ್ತಾರೆ. ಅದರ ಉದ್ದ ಮೂರು ಅಂಗುಲದಿಂದ ಒಂಬತ್ತು ಅಂಗುಲದವರೆಗೆ ಇರುತ್ತೆ. ಪಂಚ ಪಾತ್ರೆಯಿಂದ ನೀರನ್ನು ತೆಗೆದುಕೊಳ್ಳಲು ಉದ್ಧರಣೆಯೇ ಬೇಕು. ಬ್ರಾಹ್ಮಣರು ಸಂಧ್ಯಾವಂದನೆ ಮಾಡುವಾಗ ಪಂಚಪಾತ್ರೆ, ಉದ್ಧರಣೆಯನ್ನು ಬಳಸುತ್ತಾರೆ.



ಉದಾ: ರಾಮೂ, ಪಂಚಪಾತ್ರೆ, ಉದ್ಧರಣೆ ತಂದಿಡು ಇಲ್ಲಿ.

ನೋಡಿ: ಪಂಚಪಾತ್ರೆ

<uddharaNe> Small metal ladle. It is made of thick copper plank. Its length will be from 3-9 inches. To take out water from panchapatre UddharaNe is only required. Brahmins while doing Sandhyavandana, use panchapatre and uddharaNe.

Eg: Ramu, keep it here panchapatre and uddharaNe.

See: Panchapatre.

142. ಉಪಾಕರ್ಮ: ಬ್ರಾಹ್ಮಣ ಮತದವರು ವರ್ಷಕ್ಕೊಂದಾವರ್ತಿ ಜೀರ್ಣವಾದ ಜನಿವಾರವನ್ನು ತೆಗೆದು, ಹೊಸ ಜನಿವಾರವನ್ನು ಹಾಕಿಕೊಳ್ಳುವ ಧಾರ್ಮಿಕವಿಧಿಗೆ ಉಪಾಕರ್ಮ ಎಂದು ಹೇಳುತ್ತಾರೆ. ಆ ದಿನ ಸಾಮಾನ್ಯವಾಗಿ ಪುರೋಹಿತರ ಮನೆಯಲ್ಲಿ ಹತ್ತಾರು ಜನ ಒಟ್ಟಾಗಿ ಸೇರಿ ಉಪಾಕರ್ಮವನ್ನು ಆಚರಿಸುತ್ತಾರೆ. ಎಲ್ಲರಿಗೂ ಪುರೋಹಿತರ ಮನೆಯಲ್ಲೆ ಊಟದ ಏರ್ಪಾಟು ಇರುತ್ತೆ. ಕೆಲವು ಕಡೆಗಳಲ್ಲಿ ದೇವಸ್ಥಾನಗಳಲ್ಲಿ ಸೇರುತ್ತಾರೆ.

ಉದಾ: ಶನಿವಾರ ದೇವಸ್ಥಾನದಲ್ಲಿ ಉಪಾಕರ್ಮ ಏರ್ಪಾಡು ಮಾಡಿದ್ದಾರೆ.

<upaakarma> Changing of sacred thread - Brahmin community once a year, remove the sacred thread and wear a new one. That sacred ritual ceremony is called Upaakarma. On that day generally, in Purohit's house ten to twelve people gather to perform Upaakarma. For everyone lunch is prepared in Purohit's house. In some places they arrange in temple.

Eg: Saturday they have arranged Upaakarma in the temple


143. ಉಪಾಹಾರ: (ಫಲಾಹಾರ) ಸಾಮಾನ್ಯವಾಗಿ ಮನೆಯ ಹಿರಿಯರು ರಾತ್ರೆಯ ಹೊತ್ತು ಊಟ ಮಾಡುವುದಿಲ್ಲ. ಸ್ವಲ್ಪವೇ ಸ್ವಲ್ಪ ರೊಟ್ಟಿ, ಅವಲಕ್ಕಿ, ಹುರಿಟ್ಟು ಅಥವಾ ಹಣ್ಣು ಹಂಪಲನ್ನು ತಿನ್ನುತ್ತಾರೆ. ಈ ತರಹ ತಿಂಡಿಗೆ ಉಪಾರ/ಉಪಾಹಾರ ಎನ್ನುತ್ತಾರೆ. ಕೆಲವರು ವಾರದಲ್ಲಿ ಎರಡು ದಿವಸ ಉಪಾರ ಮಾಡುತ್ತಾರೆ. ಆದರೆ ಅದು ಕ್ರಮವಾದ ಊಟಕ್ಕಿಂತ ಜಾಸ್ತಿಯೇ ಇರುತ್ತೆ ಉಪಾಹಾರವನ್ನು ಫಲಾರ ಎಂದೂ ಹೇಳುತ್ತಾರೆ.

ಉದಾ: ಅಜ್ಜಿ ರಾತ್ರೆ ಉಪಾಹಾರಕ್ಕೆ ಗೊಜ್ಜವಲಕ್ಕಿ ಮಾಡಿದ್ದಾರೆ.

<upaahaara> Tiffin - Generally, elderly people do not take regular dinner in the night. They eat a little roti, poha, hurittu (a kind of flour made of roasted ragi) or fruits. This type

of food is known as Upaara/Upaahaara. Some people observe Upaahaara two days in a week. But it will be more than the regular dinner Upaahaara is also called as Phalaara.

Eg: Grandmother has prepared Gojjavalakki for night's Upaahaara.



144. ಉಪ್ಪಿನಾನೆಆಟ: ಮದುವೆಯ ಅಂಗವಾಗಿ ಪುರೋಹಿತರು ಬಣ್ಣಬಣ್ಣದ ರಂಗೋಲಿಯಿಂದ ಹಸೆಯನ್ನು ಬರೆದು ಒಂದುಕಡೆ **ಉಪ್ಪಿನ** ಆನೆ, ಇನ್ನೊಂದು ಕಡೆ **ಅಕ್ಕಿಆನೆ** ಚಿತ್ರಗಳನ್ನು ಬರೆಯುತ್ತಾರೆ. ಗಂಡು, ಹೆಣ್ಣು ಆ ಚಿತ್ರಗಳ ಮೇಲೆ ನಿಂತುಕೊಂಡು ಪುರೋಹಿತರು ಹೇಳಿಕೊಟ್ಟಂತೆ ಮಾತುಗಳನ್ನು ಹೇಳುತ್ತಾರೆ. ಇವೆಲ್ಲದರ ಉದ್ದೇಶ ಅವರಿಬ್ಬರಲ್ಲಿ ಸಲಿಗೆ ಉಂಟಾಗಲೆಂದು. ಈ ಶಾಸ್ತ್ರಗಳಲ್ಲಿ ಅವುಗಳಿಗೆ ಸರಿ ಹೋಗುವಂತೆ ಮುತ್ತೈದೆಯರು ಹಾಡುಗಳನ್ನು ಹೇಳುತ್ತಾರೆ.

<uppinaaneaaTa> (-) As part of the marriage, priest draws with colored powder, the sketch of elephant using salt on one side, elephant with rice on the opposite side. The bride and the bridegroom will stand on each one and recite what priest says. The purpose of this is to make them come together affectionately. The elderly women sing songs to coincide to the program.



145. ಉಯ್ಯಾಲೆ: ದೊಡ್ಡ ದೊಡ್ಡ ಜಮೀನ್‌ದಾರರ ಮನೆಗಳಲ್ಲಿ ಉಯ್ಯಾಲೆ ಇಡುವುದಕ್ಕೆ ಪ್ರತ್ಯೇಕ ಸ್ಥಳ ಏರ್ಪಡಿಸಿರುತ್ತಾರೆ. ಮೇಲ್ಗಡೆ ತೊಲೆಯಿಂದ ಏಳೆಂಟು ಅಡಿ ಉದ್ದದ ನಾಲ್ಕು ಕಬ್ಬಿಣದ ಸರಪಣಿಗಳನ್ನು ಇಳಿಬಿಟ್ಟು ಅದಕ್ಕೆ ಮರದ ಹಲಗೆಮಣೆಯನ್ನು ಜೋಡಿಸುತ್ತಾರೆ. ಅದರ ಮೇಲೆ ಇಬ್ಬರು ಜೊತೆಯಾಗಿ ಕುಳಿತು ಜೋಕಾಲಿ ಆಡಬಹುದು. ಜೋಕಾಲಿ ಎಂಬ ಪದವನ್ನು ಉಯ್ಯಾಲೆಗೆ ಬದಲಾಗಿ ಬೇರೆಭಾಗಗಳಲ್ಲಿ ಬಳಸುತ್ತಾರೆ. ಉತ್ತರ ಕರ್ನಾಟಕದ ಭಾಗದಲ್ಲಿ ಜೋಕಾಲಿಪದ ಬಳಕೆಹೆಚ್ಚು. ಭಾರಿ ಜಮೀನ್‌ದಾರರು ರಾತ್ರೆ ಊಟವಾದ ನಂತರ ಉಯ್ಯಾಲೆ ಮೇಲೆ ಕುಳಿತು ವೀಳ್ಯದೆಲೆಯನ್ನು ಜಗಿಯುತ್ತಿದ್ದರು. ವಿಶೇಷದಿನಗಳಲ್ಲಿ

ದೇವರಿಗೆ ಉಯ್ಯಾಲೋತ್ಸವ ಏರ್ಪಡಿಸುತ್ತಾರೆ.

ಉದಾ: ಸುಬ್ಬರಾಯರ ಮನೆ ವರಾಂಡಾದಲ್ಲಿ ದೊಡ್ಡ ತೂಗುಉಯ್ಯಾಲೆ ಕಟ್ಟಿದಾರೆ.

ಉದಾ: ನಾಳೆ ದೇವಸ್ಥಾನದಲ್ಲಿ ಉಯ್ಯಾಲೋತ್ಸವ ಇದೆ.

<uyyaale> Swing - In the houses of big landlords, they will have arranged a separate place to put the Swing. From the terrace 7-8 feet length four iron chains are attached to a wooden plank. On that two people can sit and swing. The word Jokaali is also used. In North Karnataka, Jokaali is quite frequent. Big landlords after dinner, used to sit on Uyyaale and chew pawn. On special occasions, people worship placing the idol in Uyyaale.

Eg: In the veraanDa of Subbaraya's house they have installed a big Uyyaale.

Eg: Tomorrow there is Uyyaale procession in the temple.

146. ಉರುಟಣೆ ಶಾಸ್ತ್ರ: ಉರುಟಣೆ ಶಾಸ್ತ್ರದಲ್ಲಿ ಗಂಡು ಹೆಣ್ಣು ಇಬ್ಬರೂ ಎದುರುಬದಿರಿಗೆ ಕುಳಿತುಕೊಂಡಿರುತ್ತಾರೆ. ಮಧ್ಯೆ ಒಂದು ತಟ್ಟೆಯಲ್ಲಿ ಓಕುಳಿನೀರನ್ನು (ಸುಣ್ಣ, ಅರಿಶಿನ ಬೆರೆಸಿದ ನೀರು) ಇಟ್ಟು ಅದರಲ್ಲಿ ಹೂವಿನ ದಂಡೆಯನ್ನು ಅದ್ದಿ ಒಬ್ಬರ ಮೇಲೊಬ್ಬರು ಚೆಂಡಾಟದಂತೆ ಎಸೆದಾಡುತ್ತಾರೆ. ಉರುಟಣೆ ಹಾಡನ್ನು ಮುತ್ತೈದೆಯರು ಹಾಡುತ್ತಾರೆ.

ಉರುಟಣೆ ಮದುವೆಯ ಕಾರ್ಯಕಲಾಪಗಳಲ್ಲಿ ಒಂದು ವಿಶೇಷವಾದ ಸಂಭ್ರಮ. ವಧೂ–ವರರು ಸಲುಗೆಯಂದಿರಲು ಅವಕಾಶ ಮಾಡಿಕೊಡುವುದೇ ಈ ಕಲಾಪದ ಉದ್ದೇಶ್ಯ. ಹಿರಿಯ ಮುತ್ತೈದೆಯರು ಉರುಟಣೆಗೆ ಸಂಬಂಧಿಸಿದಂತೆ ಹಾಡುಗಳನ್ನು ಹಾಡುತ್ತಾರೆ.

ಉದಾ: ಉರುಟಣೆಶಾಸ್ತ್ರ ನಡೀತಿದೆ ಈಗ.

ಉದಾ: ಬುಕ್ಕಾಂಬುಧಿಯಲ್ಲಿ ಭಾಗಮ್ಮನವರು ಅವರೇ ರಚಿಸಿದ ಉರುಟಣೆ ಹಾಡುಗಳನ್ನು ಸಮಯಕ್ಕೆ ತಕ್ಕಂತೆ ಹಾಡುತ್ತಿದ್ದರು. ಅವರು ತೀರಿಕೊಂಡಾಗ ಕೇವಲ 103 ವರ್ಷವಾಗಿತ್ತು.

<uruTaneshaasthra> (-) A part of marriage program - A game played by bride and groom during marriage sitting

opposite. Keeping the water mixed with lime and turmeric, they dip flower roll and throw on each other like ball game. The elderly women sing songs suitable to that game. It is a special program in the marriage. The main aim of this is to make the couple come close.

Eg: Program of Urutane game is going on now.

Eg: Bhagamma was singing song authored by her in Bukkambudhi during marriages She was 103 when she died.

147. ಉಸುಬು: ನೆಲದ ಮೇಲ್ಭಾಗ ಹಸಿರಾಗಿದ್ದು ಕೆಳಗಡೆ ಕೆಸರು ತುಂಬಿರುವುದು ಕಾಣುವುದಿಲ್ಲ. ಆ ಜಾಗಕ್ಕೆ **ಉಸುಬು** ಎನ್ನುತ್ತಾರೆ. ಗೊತ್ತಿಲ್ಲದೆ ಅಲ್ಲಿ ಕಾಲಿಟ್ಟರೆ ದೇಹದ ಭಾರದಿಂದ ಕೆಳಕ್ಕೆ ಹೋಗಿ ಸಾವು ತಪ್ಪಿದ್ದಲ್ಲ.

ಕೆಲವಾರು ವರ್ಷಗಳ ಹಿಂದೆ ಮೈಸೂರಿನ ಕನ್ನಂಬಾಡಿ ಕಟ್ಟೆಯಲ್ಲಿ ನೀರು ಪೂರ್ತಿ ಬತ್ತಿಹೋಗಿ ಅಲ್ಲಿ ಮುಳುಗಿ ಹೋಗಿದ್ದ ದೇವಸ್ಥಾನ ಕಾಣುತ್ತಿತ್ತು. ಅದನ್ನು ನೋಡುವ ಸಲುವಾಗಿ ಕೆಲವರು ಹೋಗಿ ಉಸುಬಿನಲ್ಲಿ ಸಿಕ್ಕಿ ಸತ್ತೇಹೋದರು.


ಉದಾ: ಕೆರೆಯ ಅಂಗಣದಲ್ಲಿ ನೀರಿಲ್ಲ. ಉಸುಬಿದೆ, ಸ್ವಲ್ಪ ಹುಶಾರಾಗಿ ಹೋಗು.

<usuBu> (-) The upper portion of the earth looking green, the wet soil underneath will not be seen. That portion is known as Usubu. Without knowing that, if we step on that portion, due to the weight the body goes down and sure to die. A few years ago, in Krishnaraja Sagar of Karnataka, water dried completely. The temple which was drowned was seen. Some people who went to see the temple were drowned and died.

Eg: In the tank bund there is no water. It is Usubu, go cautiously.

❑

ಊ / Oo



148. ಊದುಕೊಳವೆ: ಊದುಕೊಳವೆಯನ್ನು ಬಿದಿರಿನಿಂದ ಅಥವಾ ಕಬ್ಬಿಣದ ತಗಡಿನಿಂದ ಮಾಡುತ್ತಾರೆ. ಒಲೆಗೆ ಹಾಕಿದ ಸೌದೆ ಸರಿಯಾಗಿ ಉರಿಯುದೆ ಹೊಗೆ ತುಂಬಿಕೊಂಡರೆ, ಊದುಕೊಳವೆಯಿಂದ ಊದಿದಾಗ ಸೌದೆ ಚೆನ್ನಾಗಿ ಉರಿಯುತ್ತದೆ.

ಉದಾ: ಬಡಗಿ ಬಂದರೆ ಎರಡು ಮೂರು ಊದುಕೊಳವೆ ಮಾಡಿಸ್ಬೇಕು.

<oodugoLave> Blowing pipe: It is made of bamboo or iron plank. When the firewood put into oven is not burnt and produces smoke, if you blow with the blowing pipe, the firewood burns.

Eg: When the carpenter comes, we must get two or three blowing pipes done.

149. ಊಟಕ್ಕೆ ಕರೆಯುವುದು:

ತಿಥಿ ಆಚರಣೆ: ಆದರೆ ತಿಥಿ ಊಟಕ್ಕೆ ಮಾತ್ರ ಬ್ರಾಹ್ಮಣರಿಗೆ ಹೇಳ ಬೇಕಾದರೆ 'ನಾಡಿದ್ದು ಶುಕ್ರವಾರ ನಮ್ಮ ತಂದೆಯವರದು (ತಂದೆಯ ತಿಥಿ), ತಾವು ನಿಮಂತ್ರಣಕ್ಕೆ ಒಪ್ಪಿಕೊಳ್ಳಬೇಕು' ಎಂದು ತಿಳಿಸುತ್ತಾರೆ. ಆ ದಿನ ತಿಥಿಗೆ ಬರಬೇಕಾದ ಬ್ರಾಹ್ಮಣರು ಬೆಳಿಗ್ಗೆ ಏನನ್ನೂ ತಿನ್ನುವುದಿಲ್ಲ, ಬಹಳ ನೇಮದಿಂದಿರಬೇಕು. ತಿಥಿ ಮಾಡುವ ಮನೆಯವರೂ ಕೂಡ ಮಡಿ ಮೈಲಿಗೆಗಳನ್ನು ಅನುಸರಿಸುತ್ತಾರೆ. ಮಕ್ಕಳಿಗೆ ಮಾತ್ರ ಅದರ ಸೋಂಕು ಇರುವುದಿಲ್ಲ. ಅವರಿಗೆ ಪ್ರತ್ಯೇಕವಾಗಿ ಮನೆಗೇ ಸೇರಿದಂತೆ ಇರುವ ಜಾಗದಲ್ಲಿ (ಅದಕ್ಕೆ ಒಪ್ಪಾರು ಎನ್ನುತ್ತಾರೆ) ಕಾಫಿ, ತಿಂಡಿಯನ್ನು ಮಾಡಿಕೊಡುತ್ತಾರೆ. ಮನೆಯ ಯಜಮಾನಿತಿ ಮಡಿಯಿಂದ ಅಡುಗೆ ಮಾಡುತ್ತಾಳೆ. ಬ್ರಾಹ್ಮಣ ಭೋಜನ ಆಗುವವರೆಗೂ ಹಣೆಗೆ ಕುಂಕುಮವನ್ನು ಇಡುವುದಿಲ್ಲ. ಭೋಜನಾ ನಂತರ ಪಿಂಡಪ್ರದಾನ. ಅನ್ನಕ್ಕೆ ಕರಿಯ ಎಳ್ಳನ್ನು ಬೆರೆಸಿ ಸುಮಾರು ಒಂದು ಕಿತ್ತಳೆ ಹಣ್ಣಿನ ಗಾತ್ರಕ್ಕೆ ಮೂರು ಉಂಡೆಗಳನ್ನು ಮಾಡುತ್ತಾರೆ. ಮೊದಲನೆಯದು ತೀರಿಹೋದ ತಂದೆಗಾಗಿ, ಎರಡನೆಯದು ಅಜ್ಜನಿಗೆ, ಮೂರನೆಯದು ಮುತ್ತಜ್ಜನಿಗೆ (ಪಿತೃ,

ಪಿತಾಮಹ, ಪ್ರಪಿತಾಮಹ) ಆ ಪಿಂಡಗಳಿಗೆ ಪೂಜೆ ಮಾಡಿ, ನೈವೇದ್ಯಕ್ಕೆ ಆ ದಿನ ಮಾಡಿದ್ದ ಭಕ್ಷ್ಯಗಳನ್ನು (ಉದ್ದಿನ ಅಥವಾ ಕಡಲೆಬೇಳೆಯವಡೆ, ಒಬ್ಬಟ್ಟು, ಸಜ್ಜಪ್ಪ) ಅರ್ಪಿಸಿ ಮನೆಯವರೆಲ್ಲರಿಗೂ ಪ್ರಸಾದವಾಗಿ ಕೊಡುತ್ತಾರೆ. ಮನೆಯ ಹೆಂಗಸರು ಹಣೆಗೆ ಕುಂಕುಮ ಹಚ್ಚಿಕೊಂಡು, ಪಿಂಡಗಳಿಗೆ ನಮಸ್ಕಾರ ಮಾಡಿ ಶಾಸ್ತ್ರಿಗಳು ಕೊಟ್ಟ ಹೂವನ್ನು ಮುಡಿಯುತ್ತಾರೆ. ತಿಥಿಕಾರ್ಯಕ್ರಮವನ್ನು 'ಶ್ರಾದ್ಧ' ಎಂದು ಕರೆಯುತ್ತಾರೆ.

ಉದಾ: ಮುಂದಿನವಾರ ತಾತನ ತಿಥಿ ಬರುತ್ತೆ, ಶಾಸ್ತ್ರಿಗಳಿಗೆ ಹೇಳಿ ಕಳಿಸಬೇಕು.

ನೋಡಿ: ಶ್ರಾದ್ಧ

ಮದುವೆಗೆ ಕರೆಯುವುದು: ಮುಂಜಿ, ಮದುವೆ ಮುಂತಾದ ಸಮಾರಂಭಗಳಲ್ಲಿ ಮನೆಯ ಬಾಗಿಲ ಮೇಲೆ ಮಾವಿನ ಎಲೆಯ ಹಸಿರು ತೋರಣ ಎದ್ದು ಕಾಣುತ್ತಿರುತ್ತೆ. ಹಬ್ಬ ಹರಿದಿನಗಳಲ್ಲಿ ಊಟಕ್ಕೆ ಕರೆಯುವಾಗ ಅವರ ಮನೆಯ ಹೊಸಿಲಿನ ಮೇಲೆ ಮಂತ್ರಾಕ್ಷತೆಯನ್ನಿಟ್ಟು 'ಈ ದಿನ ಎಲ್ಲರೂ ನಮ್ಮ ಮನೆಗೆ ಊಟಕ್ಕೆ (ಭೋಜನಕ್ಕೆ) ಬರಬೇಕು' ಎಂದು ಹೇಳುತ್ತಾರೆ. ಮದುವೆ, ಮುಂಜಿ ಸಮಾರಂಭಗಳಲ್ಲಿ ಹೊಸಿಲಿನ ಮೇಲೆ ಮಂತ್ರಾಕ್ಷತೆಯನ್ನಿಟ್ಟು ಒಳಗೆಹೋಗಿ ಎಲ್ಲರಿಗೂ ಮಂತ್ರಾಕ್ಷತೆಯ ಬಟ್ಟಲನ್ನು ಮುಟ್ಟಿಸಿ (ಹೆಂಗಸರಿಗೆ ಕುಂಕುಮದ ಭರಣಿ) ಭೋಜನಕ್ಕೆ ಬರಬೇಕೆಂದು ತಿಳಿಸುತ್ತಾರೆ ಅದರಲ್ಲು ಬೀಗರ ಮನೆಯವರಲ್ಲಿ ಯಾರಾದರೂ ಬಿಟ್ಟುಹೋಗಿದ್ದರೆ ಅವರು ಸಿಟ್ಟು ಮಾಡಿಕೊಂಡು ಊಟಕ್ಕೆ ಬರುವುದಿಲ್ಲ!

ಉದಾ: ಸುಬ್ಬೂ, ನೀನೂ ಲಲಿತ ಮಂತ್ರಾಕ್ಷತೆ ಬಟ್ಟಲು, ಕುಂಕುಮದ ಭರಣಿಯನ್ನು ತಗಂಡ್‌ಹೋಗಿ ಬೀಗರನ್ನೆಲ್ಲ ಊಟಕ್ಕೆ ಕರೆದುಬನ್ನಿ.

ಸಂತರ್ಪಣೆಗೆ ಕರೆಯುವುದು (ಸಂತರ್ಪಣೆಗೆ ಕರೆ): ದೇವಸ್ಥಾನದಲ್ಲಿ ಯಾವುದಾದರು ವಿಶೇಷ ದಿವಸಗಳಲ್ಲಿ ಸಂತರ್ಪಣೆ ನಡೆದಾಗ ರಸ್ತೆಯ ಉದ್ದಕ್ಕೂ ಊಟದ ವೇಳೆಗೆ ಝಾಗಟೆ ಬಡಿದುಕೊಂಡು ಊಟಕ್ಕೆ ಎಲೆ ಹಾಕಿದೆ ಎಲ್ಲರೂ ಬರಬೇಕು ಎಂದು ಹೇಳುತ್ತಾರೆ.

<ooTakkekareyuvudu> Inviting for lunch

Performing the ritual ceremony for the deceased person: When inviting for the ritual ceremony of the deceased person, they say 'day after tomorrow Friday my father's ceremony, you must agree to come'. The people who are invited on that day, do not eat anything in the morning, follow certain rules. The people who perform the ceremony also follow the principles. Only for children no restriction. For them food is prepared in the corridor attached to the house (pent roof). The


housewife cooks with all cleanliness. Till the invited brahmins fed, the women do not put sindhoor (a kind of auspicious substance, called as Kunkum). After they serve food for brahmins, for the cooked rice, mixing black thil they do three balls of orange size. The first one is for the father who died, second for grandfather, third one for the great grandfather who died earlier. Those rice balls are worshipped, food prepared such as vada made of urd dal or gram dal and a kind of pancake stuffed with jaggery on that day is offered and every family member will eat it as prasadam. Women put Kunkum on forehead, prostrate to the balls and take flowers from the priest. This ritual ceremony is called Shraaddha (propitiatory rite done for the deceased person).

Eg: Next week grandfather's ceremony. We must inform to the priest.

Inviting for the marriage: During the functions of Brahmopadesha, marriage etc. it will be quite visible on the front door the mango leaves. While inviting for lunch during festivals, putting the red colored rice on the steps in front of their door and tell them 'today all of you must come to our house for lunch'. During marriage function, the cup containing red colored rice is touched by everyone and kunkum for women and invite for lunch. Particularly if anyone in the bridegroom's family is left out by chance, he gets angry and does not come for lunch!

Eg: Subbu, you and Lalitha take the cup of red colored rice and kunkum and invite the family members of bridegroom for lunch. **Inviting large number of people for lunch:** During special occasions in the temple, while inviting for lunch, throughout on the road, they make a sound with brass plate and announce, leaves are arranged for lunch, everybody must come.





150. ಊರಿನ ಕಲಾವಿದರು: ಪ್ರತಿ ಊರು, ಹಳ್ಳಿಗಳಲ್ಲಿ ಪುರಾಣಿಕರು, ಹರಿಕಥೆಗಾರರು, ನಾಟಕಕಾರರು, ಸಂಗೀತಗಾರರು ಇದ್ದು ಆ ಊರಿನ ಜನಕ್ಕೆ ನಿರಂತರವಾಗಿ ಕಲಾ ಸೇವೆ ಸಲ್ಲಿಸುತ್ತಿರುತ್ತಾರೆ. ಅವರಲ್ಲಿ ಅನೇಕರು ತಮ್ಮ ಸ್ಥಳದಲ್ಲಿ ಅಲ್ಲದೆ ಸುತ್ತಮುತ್ತಲ ಊರುಗಳಲ್ಲೂ ಪ್ರಸಿದ್ಧರಾಗಿರುತ್ತಾರೆ. ಬುಕ್ಕಾಂಬುಧಿಯಲ್ಲಿ ವಾಸವಾಗಿದ್ದ ಪುರಾಣಿಕರು ನಾಗಪ್ಪಶಾಸ್ತ್ರಿಗಳು ಮಹಾಭಾರತದ ಕಥೆಗಳನ್ನು ಸ್ವಾರಸ್ಯವಾಗಿ ಹಾಡಿನಂತೆ ಹೇಳುತ್ತಿದ್ದರು. ವೆಂಕಟರಮಣ ಭಾಗವತರು ವರ್ಷದಲ್ಲಿ ಎರಡು ಮೂರು ಬಾರಿ ರಾಮ ಕಥಾಶ್ರವಣ ಮಾಡುತ್ತಿದ್ದರು. ಅವರು ಉಪಾಧ್ಯಾಯರಾಗಿ ನಿವೃತ್ತರಾದ ಮೇಲೆ ಅನೇಕ ಊರುಗಳಲ್ಲಿ ರಾಮೋತ್ಸವ ನಡೆಸಿದರು.

ಉದಾ: ವೆಂಕಟರಮಣ ಭಾಗವತರ ರಾಮಾಯಣದ ಪುರಾಣ ಪ್ರವಚನಕ್ಕೆ ಸುತ್ತಮುತ್ತಲ ಹಳ್ಳಿಯವರೆಲ್ಲ ಬರುತ್ತಿದ್ದರು.

ನೋಡಿ: ನಾಗಪ್ಪಶಾಸ್ತ್ರಿ, ವೆಂಕಟರಮಣ ಭಾಗವತರು

<oorina kalaavidaru> Artists of village - In every town and villages, Priests, Story Tellers, Dramatists, and Singers entertain people. Apart from their own place, they will be famous in other surrounding places also. Nagappa Shasthri who was residing in Bukkambudhi was reciting stories of Mahabharat through a song. Venkataramana Bhagavatar was doing Ramakatha two or three times in a year. After retiring as teacher, he performed Ramotsava in several places.

Eg: For Ramayana Discourse by Venkataramana Bhagavatar, villagers of surrounding places were attending.

See: Nagappa Shasthri, Venkataramana Bhagavatar.

❑

ಋ / Ru

151. ಋಣಾನುಬಂಧ: ಹಳೆಯ ಸಂಬಂಧಗಳನ್ನು ಮುಂದುವರಿಸಲು ಸಾಧ್ಯವಾಗದೇ ಹೋದಾಗ **ಋಣಾನುಬಂಧ** ಅನ್ನುವ ಪದ ಬಳಕೆಯಲ್ಲಿದೆ.

ಉದಾ: ಒಟ್ಟಿನಲ್ಲಿ ಋಣಾನುಬಂಧ ಇಲ್ಲ ಅಂತ ಕಾಣುತ್ತೆ.

<ruNaanubandha> Relationship - When it is not possible to continue the old relationship, the word Runaanubandha (Bond of relationship continued from previous birth) is in usage.

Eg: Overall, there is no Runaanubandha it seems.

❑

ಎ / E

152. ಎಕ್ಕಹುಟ್ಟಿಸು: ಹಿರಿಯರು ಮಾಡಿಟ್ಟಿರುವ ಆಸ್ತಿಪಾಸ್ತಿಗಳನ್ನು ಊರ್ಜಿತಗೊಳಿಸದೆ ಹಾಳುಮಾಡಿದಾಗ **ಎಕ್ಕಹುಟ್ಟಿಸುವುದು** ಎಂದು ಹೇಳುತ್ತಾರೆ.

ಉದಾ: ವೆಂಕಪ್ಪಯ್ಯ ಅಜ್ಜ ಮಾಡಿಟ್ಟಿದ್ದ ಆಸ್ತಿನೆಲ್ಲಾ ಹಾಳುಮಾಡಿ ಎಕ್ಕಹುಟ್ಟಿಸಿಬಿಟ್ಟ.

<ekkahuTTisu> Squandering - When properties accrued by elders are not improved and squandered, they say ekkahuttisuvudu.

Eg: Venkappiah squandered all the properties saved by grandfather.

153. ಎದುರಕ್ಕಿ: ಮದುವೆಯ ಚಪ್ಪರಕ್ಕೆ ಗಂಡಿನ ಕಡೆಯವರನ್ನು ವಾದ್ಯ ಸಮೇತ ಬರಮಾಡಿಕೊಳ್ಳುವಾಗ ಎರಡು ಕಡೆಯವರೂ ತಲೆಯ ಮೇಲೆ ಭತ್ತದ ಅರಳು ಮತ್ತು ಅಕ್ಕಿಯನ್ನು ಬೆರೆಸಿ ಎರಚುತ್ತಾರೆ. ಈ ಕಾರ್ಯಕ್ರಮವನ್ನು ಎದುರಕ್ಕಿ ಎಂದು

ಹೇಳುವುದು ವಾಡಿಕೆಯಲ್ಲಿದೆ.

ಉದಾ: ಸ್ವಲ್ಪ ಹೊತ್ತಿಗೆ ಬೀಗರು ಬಂದ್ಬಿಡ್ತಾರೆ, ಎದುರಕ್ಕಿ ಸಿದ್ಧಮಾಡಿಡಿ.

<edurakki> (-) Rice sprinkled over while receiving the bridegroom's party. While inviting the boy's family to the marriage pandal with band orchestra, members of both the groups sprinkle on head rice mixed with parched paddy. To express this program, the word Edurakki is in usage.

Eg: In a little time, the boy's party will come. Keep Edurakki ready.

154. ಎಡೆ ಮಾಡು: ಮನೆಯಲ್ಲಿ ನಡೆಸುವ ಮದುವೆ, ಮುಂಜಿ ಮುಂತಾದ ಶುಭ ಕಾರ್ಯಗಳಿಗೆ ಮುಂಚಿತವಾಗಿ ಇಬ್ಬರು ದಾಸಯ್ಯಗಳನ್ನು ಕರೆದು ಅವರಿಗೆ ಊಟಕ್ಕೆ ಬಡಿಸುವುದನ್ನು ಎಡೆ ಮಾಡುವುದು ಎನ್ನುವ ಪದ ರೂಢಿಯಾಗಿದೆ. ದೇವರಿಗೆ ನೈವೇದ್ಯಕ್ಕಿಡುವುದನ್ನೂ ಎಡೆ ಮಾಡುವುದು ಎಂದೇ ಹೇಳುತ್ತಾರೆ. ಮನೆಗೆ ಯಾರಾದರೂ ಸ್ವಾಮಿಗಳನ್ನು ಆಮಂತ್ರಿಸಿದಾಗ ಅವರಿಗೆ ಎಡೆಮಾಡುತ್ತಾರೆ. ಅಮಾವಾಸ್ಯೆ ಮುಂತಾದ ವಿಶೇಷದಿನಗಳಲ್ಲಿ **ಎಡೆ ಇಕ್ಕುವುದು** ಕೆಲವು ಮನೆತನಗಳಲ್ಲಿ ಆಚರಿಸಿಕೊಂಡು ಬಂದಿರುವ ಪದ್ಧತಿ. ಆ ದಿನ ಮನೆಯವರೆಲ್ಲರು ಬಹಳ ನೇಮದಿಂದ ನಡೆದುಕೊಳ್ಳುತ್ತಾರೆ.

ಉದಾ: ನಾಳೆ ಅಮಾವಾಸ್ಯೆ ಎಡೆ ಇಕ್ಕಬೇಕು.

ಉದಾ: ನಾಳೆ ಹುಣ್ಣಿಮೆ. ಸೋಮೇಶ್ವರ ದೇವಸ್ಥಾನಕ್ಕೆ ಎಡೆ ಮಾಡಿ ಕಳಿಸ್ಬೇಕು.

<eDemaaDu> uiyuyty - Before the ritual program of marriage, Brahmopadesha etc. they invite two Dasayyas (Persons who go from one place to another worshipping the God) and take food. This program is known as Edemaduvudu. To offer eatables to a deity is also called as Edemaduvudu. When any Swamiji is invited, they do Ede. On special occasions like Amavasya etc. it is a custom in some of the families to perform Edeikkuvudu. On that day everyone in the family follow the rules with devotion.

Eg: Tomorrow is Amavasya. Must do Ede.

Eg: Tomorrow is Full Moon day. Must prepare Ede and send to Someshwara Temple.

155. ಎಡಬಿಡಂಗಿ: ಎರಡು ಕಡೆಗೂ ಹೊಂದಿಕೊಳ್ಳದ ಮನುಷ್ಯನನ್ನು ಎಡಬಿಡಂಗಿ ಎನ್ನುತ್ತಾರೆ.

ಉದಾ: ಸುಮ್ಮನೆ ಎಡಬಿಡಂಗಿ ಹಾಗೆ ಆಡಬೇಡ, ಕೆಲಸ ಮಾಡುಕ್ಕಾದರೆ ಮಾಡು, ಇಲ್ಲದಿದ್ದರೆ ಹೊರಟು ಹೋಗು.

<eDabiDangi> Confused person - A person who cannot adjust to both the sides is called as Edabidangi (One who is confused).

Eg: Simply do not talk as Edabidangi. If you can do the work, do it. Otherwise get out.

156. ಎಣ್ಣೆಶಾಸ್ತ್ರ: ಮದುವೆ, ಮುಂಜಿ ಸಮಾರಂಭಗಳು ಪ್ರಾರಂಭವಾಗುವುದಕ್ಕೆ ಮುಂಚೆ ಮದುವೆ ಆಗುವ ವಧೂ–ವರರಿಗಾಗಲಿ, ಮುಂಜಿಯಾಗುವ ಹುಡುಗನಿಗಾಗಲಿ ಅವರನ್ನು ಹಸೆಮಣೆಯ ಮೇಲೆ ಕೂರಿಸಿ ಕೊಬ್ಬರಿ ಎಣ್ಣೆಯನ್ನು ಅರಿಶಿನದ ಜೊತೆಗೆ ಅವರ ತಲೆಯ ಮೇಲೆ ಒಂದು ಬೊಟ್ಟನ್ನಿಟ್ಟು ಕೆನ್ನೆಗೂ ಹಚ್ಚಿ ಆರತಿ ಎತ್ತುವ ಕ್ರಮಕ್ಕೆ ಎಣ್ಣೆಶಾಸ್ತ್ರ ಎನ್ನುತ್ತಾರೆ. ನಂತರ ಅವರವರ ತಾಯಿ, ಅಕ್ಕತಂಗಿಯರು ಅವರಿಗೆ ಅಭ್ಯಂಗನ ಮಾಡುತ್ತಾರೆ.

ಉದಾ: ದೇವರ ಸಮಾರಾಧನೆಗೆ ಮುಂಚೆ ಎಣ್ಣೆಶಾಸ್ತ್ರ ಮಾಡಿ ಮುಗಿಸಬೇಕು.


ನೋಡಿ: ದೇವರ ಸಮಾರಾಧನೆ, ಜಳಕ, ಅಭ್ಯಂಗನ

<eNNeshaasthra> (-) A ritual of smearing bride and bridegroom with oil - Before commencement of Marriage, Brahmopadesha, the bride and bridegroom, the boy to get brahmopadesha, are to sit on decorated wooden plank. Coconut oil mixed with turmeric powder is smeared on their head and cheek and swinged with burning lamp on a plate. This is called as Enneshasthra. Then the mother, sisters give them bath.

Eg: We must do Enneshastra before lunch.

See: Devara samaradhane, Jalaka, Abhyangana.

157. ಎತ್ತಿನ ಗಾಡಿ: ಊರಿಂದೂರಿಗೆ ಸಾಮಾನುಗಳನ್ನು ಸಾಗಿಸುವುದಕ್ಕೆ ಉಪಯೋಗಿಸುವುದೇ ಎತ್ತಿನ ಗಾಡಿ. ಈ ತರಹ ಗಾಡಿಗೆ ಕಮಾನು ಇರುವುದಿಲ್ಲ.




ಉದಾ: ಈರುಳ್ಳಿ ಮೂಟೆಗಳನ್ನೆಲ್ಲ ಗಾಡಿಗೆ ತಂದ್‌ಹಾಕು.

ನೋಡಿ: ಕಮಾನುಗಾಡಿ

<etthinagaaDi> Bullock cart - The cart used for transporting things from place to place is called Etthinagadi. This type of cart will not have arched cover.

Eg: Put all the onion bags in the cart.

See: Arched bullock cart.



158. ಎಲೆಗುದ್ದಲಿ: ಸುಮಾರು ಒಂದು ಅಡಿ ಚಚ್ಚೌಕವಾದ ಕಬ್ಬಿಣದ ಹಲಗೆಗೆ ದುಂಡಾಗಿರುವ ಮರದ ಕೋಲನ್ನು ಸೆಕ್ಕಿಸಿ, ಮಣ್ಣನ್ನು ಎತ್ತಿಹಾಕಲು ಉಪಯೋಗಿಸುವ ಸಲಕರಣೆಗೆ ಎಲೆಗುದ್ದಲಿ ಎಂದು ಹೆಸರು. ನಾಲ್ಕೈದು ಸಲ ಮಣ್ಣನ್ನು ಎತ್ತಿಹಾಕಿದರೆ ಒಂದು ಮಂಕರಿ ಭರ್ತಿಯಾಗುತ್ತೆ.

ಉದಾ: ಎಲೆಗುದ್ದಲಿ ಅಂಚೆಲ್ಲ ಬಗ್ಗಿಹೋಗಿದೆ. ಕಮ್ಮಾರನ ಕುಲುಮೆಗೆ ಹೋಗಿ ಮಟ್ಟಮಾಡಿಸ್ಕಂಡ್ಬಾ.

<eleguddali> Spade: About one square foot iron plank attached with a round wooden pole used for lifting mud is known as Eleguddali (Spade). If 4-5 times mud is lifted, it will fill a basket.

Eg: The edge of spade is bent. Go to blacksmith and get it levelled.

159. ಎಳಗಂದಿ: ಹಸು ಅಥವಾ ಎಮ್ಮೆ ಕರುಹಾಕಿದ ನಂತರ ಮೂರು ದಿವಸಗಳವರೆಗೆ ಕರೆಯುವ ಹಾಲಿಗೆ **ಎಳಗಂದಿ ಹಾಲು** ಎಂದು ಹೇಳುತ್ತಾರೆ.

ಉದಾ: ಪಕ್ಕದಮನೆ ಹಸು ಕರು ಹಾಕಿದೆಯಂತೆ. ಸ್ವಲ್ಪ ಎಳೆಗಂದಿ ಹಾಲು ತಗಂಬಾ.

<eLagandi> (-) Cow that has lately calved - The milk taken out of cow or buffalo for three days after it calved is called as elegandi milk.


Eg: The neighbor house cow has calved it seems. Bring some milk.

160. ಎಳ್ಳುಸೂಸಲು: ನೋಡಿ: ಚಿಗುಳಿ

<eLLusuusalu> (-) Roasted black thil powder mixed with jaggery - See: Chiguli.

❑

ಏ / E



161. ಏತ: ಗದ್ದೆ ಹೊಲಗಳಲ್ಲಿ ಬಾವಿಯಿಂದ ನೀರನ್ನು ಮೇಲಕ್ಕೆ ಎಳೆಯಲು ಉಪಯೋಗಿಸುವ ಸಲಕರಣೆಗೆ ಏತ ಎಂದು ಹೆಸರು. ಎರಡು ಬಿದಿರಿನ ಕೋಲನ್ನು ಒಂದಕ್ಕೊಂದನ್ನು ತುದಿಯಲ್ಲಿ ಸೇರಿಸಿ, ಬಾವಿಯೊಳಕ್ಕೆ ಬಿಡುವ ಕೋಲಿಗೆ ಮರದ ಮಂಕರಿಯನ್ನು ಕಟ್ಟಿರುತ್ತಾರೆ. ಮಂಕರಿಯಲ್ಲಿ ನೀರು ತುಂಬಿದ ನಂತರ ಇನ್ನೊಂದು ಕೋಲನ್ನು ಕೆಳಕ್ಕೆ ಎಳೆದರೆ ನೀರು ತುಂಬಿದ ಮಂಕರಿ ಬಾವಿಯಿಂದ ಮೇಲಕ್ಕೆ ಬರುತ್ತೆ. ಬಾವಿಯ ತುದಿಯಿಂದ ಗದ್ದೆ ಹೊಲಗಳ ಉದ್ದಕ್ಕೂ ಕಾಲುವೆ ತೋಡಿರುತ್ತಾರೆ. ನೀರು ಕಾಲುವೆಯ ಮೂಲಕ ಗದ್ದೆಯ ಎಲ್ಲಾ ಭಾಗಕ್ಕೂ ಹೋಗಿ ನೆಲ ಹಸನಾಗುತ್ತೆ.

ಉದಾ: ಶ್ಯಾನುಭೋಗರ ತೋಟದಲ್ಲಿ ಎರಡು ಏತ ಹಾಕಿದಾರೆ.

<eetha> Picotta - The equipment to lift water from the well in field is known as etha. Attaching two bamboo sticks to each other in the end, tie a basket to the one which goes inside well. When basket is filled with water, if you pull up the other stick, the basket with water comes up. From the edge of well throughout the field will have dug canal. Water through canal spreads to all parts and ground becomes suitable.

Eg: In the garden of Shanbhog have installed two equipments.

162. ಏದುಸಿರು: ಒಂದೇಸವ ಬಿಡುವಿಲ್ಲದಂತೆ ಕೆಲಸವಾಡುವಾಗ ಆಯಾಸವಾದಾಗ ಬಿಡುವ ಉಸಿರಿಗೆ **ಏದುಸಿರು** (ಮೇಲುಬ್ಬರ) ಎಂದು ಹೇಳುತ್ತಾರೆ.

ಉದಾ: ನಿಂಗ ಆಗಿನಿಂದ ಏದುಸಿರು ಬಿಡ್ತಾಇದಾನೆ, ಸ್ವಲ್ಪ ಇಚಾರಿಸು.

<eedusiru> Gasping - When working throughout without break and gasping is known as edusiru (gasping heavily).

Eg: Ninga is breathing heavily since some time. Take care of him.

163. ಏರುಪೇರು: ಕೆಲಸಕಾರ್ಯಗಳನ್ನು ಮಾಡುವಾಗ ನಮ್ಮ ಅಪೇಕ್ಷೆಯಂತೆ ಆಗದಿದ್ದರೆ **ಏರುಪೇರಾಗಿದೆ** ಎನ್ನುತ್ತಾರೆ.

ಉದಾ: ನೆನ್ನೆ ಅಡಕೆಕೊಯಿಲು ಮಾಡಬೇಕಾಗಿತ್ತು, ಮಳೆಬಂದು ಎಲ್ಲಾ ಏರುಪೇರಾಗ್ಬಿಡ್ತು.

<eeruperu> Fluctuation - While working if it is not up to our expectation, they say eruperagide (fluctuation).

Eg: Yesterday we had to do harvest of Areca. Raining heavily all was upset.

❑

ಐ / Ai

164. ಐಲ್‌ಪೈಲ್: ಅರ್ಥವಿಲ್ಲದೆ ಹುಚ್ಚುಚ್ಚಾಗಿ ಏನಾದರೂ ಮಾತನಾಡುತ್ತಿದ್ದರೆ ಅಂಥವನನ್ನು **ಐಲ್‌ಪೈಲ್** ಎನ್ನುತ್ತಾರೆ.

ಉದಾ: ಅವತ್ನಿಂದ ನೋಡ್ತ ಇದೀನಿ, ರಾಮಯ್ಯ ಯಾಕೋ ಈಚೀಚೆಗೆ ಐಲ್‌ಪೈಲಾಗಿ ಆಡ್ತಾ ಇದಾನೆ.

<ailpail> Talk irrelevantly - Without any meaning if one is talking something, they call him as ailpail.

Eg: I am seeing him since a few days. Ramaiah somehow seems to be ailpail of late.

❑

ಒ / O

165. ಒಂದರಿ: ನೋಡಿ: ಸಾರಣೆ, ಮೊರ

<ondari> See: **Sieve,** Bamboo fan.

166. ಒತ್ತುಕಾಗದ: ಹಳ್ಳಿಯಲ್ಲಿ ಶ್ಯಾನುಭೋಗರ ಬರವಣಿಗೆಯೆಲ್ಲ ಕೆಂಪು ಮತ್ತು ಕಪ್ಪು ಬಣ್ಣದ ಮಸಿಯಲ್ಲಿ. ಹಸಿಮಸಿಯನ್ನು ಆರಿಸುವುದಕ್ಕೆ ಒಂದು ತರಹ ದಪ್ಪವಾದ ಬಿಳಿಯ ಅಥವಾ ಕೆಂಪು ಕಾಗದವನ್ನು ಉಪಯೋಗಿಸುತ್ತಿದ್ದರು. ಆ ಕಾಗದಕ್ಕೆ ಒತ್ತುಕಾಗದ (Blotting paper) ಎಂದು ಹೆಸರು. ಹೀರುಕಾಗದ ಎಂದೂ ಇದನ್ನು ಕರೆಯುತ್ತಾರೆ.

ಉದಾ: ಶ್ಯಾನುಭೋಗರ ತಾವ ಹೋದರೆ ಒತ್ತುಕಾಗದ ಸಿಕ್ಕೇಸಿಗುತ್ತೆ.

ನೋಡಿ: ಹೀರುಕಾಗದ

<otthukaagada> Blotting paper. In villages the writings of Shanbhog will be in red or block color ink. To wipe off the wet ink, they were using a thick white or red color paper. It is known as Othhukagada (Blotting paper). It is also called as heerukagada.

Eg: If you go to Shanbhog, you will get blotting paper.

See: Heerukagada

167. ಒಗ್ಗರಣೆ: ಒಂದು ಅಥವಾ ಎರಡು ಮಿಳ್ಳೆ ತುಪ್ಪವನ್ನು ಸೌಟಿಗೆ ಹಾಕಿ ಅದು ಕಾದನಂತರ ಒಂದು ಚಮಚ ಜೀರಿಗೆಯನ್ನು ಹಾಕಿ ಸ್ವಲ್ಪ ಹೊತ್ತು ಬಿಟ್ಟರೆ ಜೀರಿಗೆ ಚಟಚಟ ಸಿಡಿಯುತ್ತೆ. ಅದನ್ನು ಸಾರಿಗೆ ಬೆರೆಸಿದರೆ ಅದು ಒಗ್ಗರಣೆ ಎನಿಸುತ್ತದೆ. ಹುಳಿ ಮತ್ತು ಗೊಜ್ಜಿಗೆ ತುಪ್ಪದ ಬದಲು ಎಳ್ಳೆಣ್ಣೆ ಅಥವಾ ಒಳ್ಳೆಣ್ಣೆಯನ್ನು ಬಳಸಿ, ಜೀರಿಗೆಯ ಬದಲು ಸಾಸುವೆಯನ್ನು ಹಾಕಿ **ಒಗ್ಗರಣೆ** ಮಾಡುತ್ತಾರೆ. ಒಂದು ಚಿಟಿಕೆ ಇಂಗನ್ನು ಬೆರೆಸಿದರೆ ಸಾರು, ಹುಳಿ ಬಹಳ ರುಚಿಯಾಗಿರುತ್ತೆ.

ಉದಾ: ಕೋಸುಂಬರಿಗೆ ಒಗ್ಗರಣೆಹಾಕು ಮರೆಯಬೇಡ.

ಉಚ್ಚಾರಭೇದ: ವೊಗ್ಗರಣೆ, ವಗ್ಗರಣೆ

<oggaraNe> (-) Seasoning food by adding fried spices: Putting one or two spoons of ghee into ladle, after it is heated adding a spoon of jeera, leaving some time, jeera will fling. When it is added to Rasam it is known as OggaraNe. For sambar, they mix oil instead of ghee, mustard instead of jeera. If a pinch of asafetida is added for Rasam or Sambar, it will be very tasty.

Eg: Do not forget to add oggaraNe for Kosumbari (salad made of split gram)

Different version: VoggaraNe, VaggaraNe.

168. ಒಟ್ಟಾರೆ: ಒಂದೇಸಲ, ಪೂರ್ತಿಯಾಗಿ ಎಂದು ಹೇಳಬೇಕಾದರೆ ಒಟ್ಟಾರೆ ಅನ್ನುವ ಶಬ್ದ ಬಳಕೆಯಲ್ಲಿದೆ.

ಉದಾ: ಒಟ್ಟಾರೆ ಅವರ ತೋಟದಲ್ಲಿ ಅಡಕೆಮರಗಳೇ ತುಂಬಿವೆ. ವಾರದ ಹಿಂದೆ ಬಿರುಗಾಳಿ ಬಂದು **ಒಟ್ಟಾರೆ** ಹೆಂಚುಗಳೆಲ್ಲಾ ಹಾರಿಹೋದವು, ಅದನ್ನು ಸರಿಪಡಿಸುವುದಕ್ಕೆ ಒಂದು ವಾರವೆ ಬೇಕಾಯಿತು.

<oTTaare> Overall - To express, only one time, complete, the word Ottare (overall) is in usage.

Eg: A week back on account of breeze wind, overall, all the tiles flew away. Almost a week required to set it right.

169. ಒಡಕು ಬಾಯಿ: ಯಾವ ಮಾತನ್ನು ಇನ್ನೊಬ್ಬರ ಎದುರಿಗೆ ಆಡಬಾರದೋ ಅಂಥ ಮಾತನ್ನು ಸ್ವೇಚ್ಛೆಯಾಗಿ ಆಡುವುದಕ್ಕೆ **ಒಡಕು ಬಾಯಿ** ಎನ್ನುತ್ತಾರೆ.

ಉದಾ: ಅವಳುಬಿಡು ಯಾವಾಗಲೂ ಒಡಕು ಬಾಯೇ.

<oDakubaayi> Blabber - One who cannot keep secrets. The word which should not be expressed before another person, if one has arbitrary behavior and talks callously, it is called Odakubayi.

Eg: Leave her. She is always callous.

170. ಒಡಲುರಿಸು: ಅನವಶ್ಯಕವಾಗಿ ಇನ್ನೊಬ್ಬರಿಗೆ ತೊಂದರೆ ಮಾಡುವುದಕ್ಕೆ **ಒಡಲುರಿಸು**ವುದು ಎನ್ನುತ್ತಾರೆ.

ಉದಾ: ಅಯ್ಯೋ ಅವಳೆಂಥಾ ಸೊಸೆ. ನನ್ನ ಒಡಲುರಿಸದೇ ಹೋದರೆ ಅವಳಿಗೆ ಸಮಾಧಾನವಿಲ್ಲ.

ಸಮಾನಾರ್ಥಕ: ಹೊಟ್ಟೆ ಉರಿಸುವುದು

<oDalurisu> Jealousy: To trouble others unnecessarily is known as odalurisuvudu.

Eg: What type of daughter in law she is. She is not satisfied unless she troubles me.

Equivalent: Envy (Be jealous)


171. ಒಡ್ರಾಗಿಹಿಟ್ಟು: ರಾಗಿಯನ್ನು ಎರಡು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ ನೀರನ್ನು ಬಸಿದು ತೆಳುವಾದ ಬಟ್ಟೆಯಲ್ಲಿ ಗಂಟುಕಟ್ಟಿ ಭಾರವಾದ ಕಲ್ಲನ್ನು ಅದರಮೇಲೆ ಹೇರಿಡಬೇಕು. ಮಾರನೆಯ ಬೆಳಿಗ್ಗೆ ಹೊತ್ತಿಗೆ ರಾಗಿ ಮೊಳಕೆಬಂದಿರುತ್ತದೆ. ನಂತರ ಅದನ್ನು ನೆರಳಿನಲ್ಲಿ ಒಣಗಿಸಿ ಬೀಸುವಕಲ್ಲಿನಲ್ಲಿ ಬೀಸಿ ಹಿಟ್ಟುಮಾಡಬೇಕು. ಹಿಟ್ಟನ್ನು ಜರಡಿಯಾಡಿದರೆ ಹೊಟ್ಟು ಬೇರೆಯಾಗಿ ನಯವಾದ ರಾಗಿಹಿಟ್ಟು ಆಗುತ್ತದೆ. ಇದನ್ನೆ ಒಡ್ರಾಗಿಹಿಟ್ಟು ಅನ್ನುತ್ತಾರೆ. ಚಿಕ್ಕಮಕ್ಕಳಿಗಂತೂ **ಒಡ್ರಾಗಿಹಿಟ್ಟು** ಒಳ್ಳೆಯ ತಿಂಡಿ.

ಉದಾ: ಮಗೂಗೆ ಒಡ್ರಾಗಿಹಿಟ್ಟು ತಿನ್ನಿಸು ತುಂಬಾ ಒಳ್ಳೇದು.

<oDraageehiTTu> A type of ragi flour - Soak ragi in water for two hours, then take out the water, put the ragi on a white cloth and tie it. On top of it place a hard-stone slab. Next day morning ragi will have sprouted. Then it should be dried in the shade and grinded in millstone. If you sieve the flour the skin will be separated, and you get nice ragi flour. It is called as Odragihittu. It is a healthy food for children

Eg: Feed the child with Odragihittu. It is very good.

172. ಒಡೇಕಲ್ಲು: ಒಡೇಕಲ್ಲು ಹಲಸಿನ ಮರದಿಂದ ತಯಾರಾದುದು. ಚಕ್ರಾಕಾರವಾದ ಎರಡು ಹೋಳುಗಳು. ಒಂದೊಂದೂ ಒಂದು – ಒಂದೂವರೆ ಅಡಿ ಎತ್ತರವಿದ್ದು, ಒಂದರ ಮೇಲೊಂದನ್ನು ಇಡುತ್ತಾರೆ. ಮೇಲಿನ ಹೋಳಿಗೆ ಮಧ್ಯೆ ಐದಾರು ಅಂಗುಲ ಸುತ್ತಳತೆ ಇರುವ ರಂಧ್ರ. ಒಂದು ಅಂಚಿಗೆ



ನಾಲ್ಕೈದು ಅಂಗುಲದ ಮರದ ಕೋಲನ್ನು ಸೇರಿಸುತ್ತಾರೆ. ಕೆಳಗಿನ ಹೋಳಿಗೆ ಮಧ್ಯದಲ್ಲಿ 4–5 ಅಂಗುಲ ಎತ್ತರದ ಕಬ್ಬಿಣದ ಗೂಟವನ್ನು ಅಲುಗಾಡದಂತೆ ಸೆಗಿಸುತ್ತಾರೆ. ಮೇಲಿನ ಹೋಳು ಅದರ ಮೇಲೆ ಸರಿಯಾಗಿ ಕೂರುವುದರಿಂದ, ಬೀಸುವಾಗ ಅಳ್ಳಾಡುವುದಿಲ್ಲ. ಬೀಸುವಾಗ ಮೇಲಿನ ಹೋಳು ಮಾತ್ರವೆ ತಿರುಗುವುದು. ಬೀಸುವಾಗ ನಿಂತುಕೊಂಡೇ ಬೀಸಬೇಕು. ಒಬ್ಬರು ಬೀಸುತ್ತಿದ್ದರೆ, ಇನ್ನೊಬ್ಬರು ಭತ್ತವನ್ನು ಹಾಕುತ್ತಿರುತ್ತಾರೆ. ಮೇಲಿನ ಹೋಳಿನ ಮಧ್ಯದ ರಂಧ್ರಕ್ಕೆ ಭತ್ತವನ್ನು ಸ್ವಲ್ಪಸ್ವಲ್ಪವಾಗಿ ಹಾಕಿ ಬೀಸಿದಾಗ ಅಕ್ಕಿ ಭತ್ತದ ಸಿಪ್ಪೆಯಿಂದ ಬೇರೆಯಾಗುತ್ತೆ. ಹೋಳಿನಿಂದ ಹೊರಕ್ಕೆ ಬರುವ ಅಕ್ಕಿ ಭತ್ತದ ಮಿಶ್ರಣವನ್ನು ಕೇರುವ ಮೊರದಿಂದ ಕೇರಿ, ಅಕ್ಕಿ ಮತ್ತು ಭತ್ತದ ಸಿಪ್ಪೆಯನ್ನು ಬೇರ್ಪಡಿಸುತ್ತಾರೆ.

ಉದಾ: ಮುಳುಕುಂಟೆ ಭಾಗಮ್ಮನವರು ವಾರಕ್ಕೊಂದಾವರ್ತಿ ಒಡೇಕಲ್ಲಿನಿಂದ ಭತ್ತವನ್ನು ಬೀಸಿ ಅಕ್ಕಿಮಾಡುತ್ತಿದ್ದರು.

<vaDekallu> Paddy grinding stone: Odekallu is made of jackfruit tree stem. Each of slab will be of one to one and half foot thickness. It is kept one above the other. For the upper one in the center, five-six inches width hole. At the end of the big slab a wooden pole of six inches height is attached. For the lower slab four to five inches height iron rod is fixed so that it should not shake while grinding. Only the upper one will be turning when grinding While grinding we must stand. If one is grinding, the other will be filling paddy. When paddy is put little by little on the upper hole after grinding, the skin will separate from rice. The mixture of skin and rice will be winnowed through a bamboo fan.

Eg: Mulukunte Bhagamma once a week used to grind paddy in Vadekallu and prepare rice.



173. ಒನಕೆ: 4–5 ಅಡಿ ಎತ್ತರದ, 5–6 ಅಂಗುಲ ಸುತ್ತಳತೆ ಇರುವ ಕರೀಮರದಿಂದ ತಯಾರಿಸಿರುವ ಕೋಲು. ಅದರ ಕೆಳಭಾಗದ ತುದಿಗೆ ಕಬ್ಬಿಣದ ಪಟ್ಟಿಯನ್ನು ಹಾಕಿರುತ್ತಾರೆ. ಅದರ ಸಹಾಯದಿಂದ ಅಕ್ಕಿ, ಭತ್ತ ಮುಂತಾದುವನ್ನು ಕುಟ್ಟುವುದು. ನಿಂತುಕೊಂಡೆ ಕುಟ್ಟಬೇಕು.

ಭತ್ತವನ್ನು ಒರಳಲ್ಲಿ ಕುಟ್ಟುವಾಗ ಇಬ್ಬರು ಎರಡು ಒನಕೆಗಳಿಂದ ಕುಟ್ಟುತ್ತಾರೆ. ಕೇವಲ 3 ಅಡಿ ಎತ್ತರದ ಒನಕೆಯೂ ಬಳಕೆಯಲ್ಲಿದೆ. ಅದನ್ನು ನೆಲದ ಮೇಲೆ ಕುಳಿತುಕೊಂಡೂ ಕುಟ್ಟಬಹುದು.

ಉದಾ: ಮುಂದಿನವಾರ ಬಡಗಿ ಬಂದರೆ ಹೇಳು; ಇನ್ನೊಂದು ಒನಕೆ ಮಾಡಿಸ್ಬೇಕು.

<onake> Pounder: A long wooden pestle of 4-5 feet height and 5-6 inches round made of black wood for pounding paddy. For the lower edge, an iron stripe is attached. Paddy is pounded through that. Paddy must be pounded by standing only. When pounding two people will work. Pounder of three feet is also used. With that you can sit on the floor and pound.

Eg: If carpenter comes next week tell me, we must get one more Pounder.

174. ಒಪ್ಪಂದಪತ್ರ: ನೋಡಿ: ಕ್ರಯಚೀಟಿ

<oppandapathra> See: **Sale Deed.**

175. ಒಬ್ಬೆ: ನೋಡಿ: ಇಬ್ಬೆ

<obbe> See: Ibbe (A measure)

176. ಒಮ್ಮೆ: ನೋಡಿ: ಕಿತ

<omme> One time - See: Kitha (one time)



177. ಒಳಲೆ: ಚಿಕ್ಕಮಕ್ಕಳಿಗೆ ಹಾಲು ಅಥವಾ ತುಳಸೀರಸದ ಔಷಧಿಯನ್ನು ಕುಡಿಸುವುದಕ್ಕೆ ಉಪಯೋಗಿಸುವ ಸಣ್ಣ ಬಟ್ಟಲಿಗೆ ಒಳಲೆ ಎನ್ನುತ್ತಾರೆ. ಇದು ಸಾಮಾನ್ಯವಾಗಿ ಬೆಳ್ಳಿಯಿಂದ ಮಾಡಿರುವುದು. ಬಡವರ ಮನೆಯಲ್ಲಿ ಅಲ್ಯುಮಿನಿಯಂ ಒಳಲೆ ಇರುತ್ತದೆ.

ಉದಾ: ಒಳಲೆಯಲ್ಲಿ ಹಾಕಿ ಕುಡಿಸು, ಇಲ್ಲದಿದ್ದರೆ ಹಾಲು ಚೆಲ್ಲಿಹೋಗುತ್ತೆ.

<oLale> (-) A small cup with a spout to feed. The cup used for feeding milk or juice of Tulasi leaves to children is called Olale. Generally, it is made of silver. In poor people's house it will be of aluminum.

Eg: Feed with Olale, otherwise will spill.

178. ಒಳ್ಳೆಣ್ಣೆ: ಅಡುಗೆ ಮಾಡಲು ಬೇಕಾಗುವ ಎಣ್ಣೆಗೆ ಒಳ್ಳೆಣ್ಣೆ ಎನ್ನುತ್ತಾರೆ. ನೆಲಗಡಲೆಬೀಜ, ಎಳ್ಳು, ಹುಚ್ಚೆಳ್ಳು, ಕುಸುಬೆ ಮುಂತಾದುವುಗಳಿಂದ ಒಳ್ಳೆಣ್ಣೆಯನ್ನು ತಯಾರಿಸುತ್ತಾರೆ. ಕೆಲವುಕಡೆ ಎಳ್ಳೆಣ್ಣೆ ಎಂದೂ ಹೇಳುತ್ತಾರೆ. ಕರ್ನಾಟಕದ ಮಲ್ನಾಡು ಪ್ರದೇಶದಲ್ಲಿ ತೆಂಗಿನಕಾಯಿ ತುರಿಯಿಂದ ಮಾಡಿದ ಕಾಯೆಣ್ಣೆಯನ್ನು ಸಿಹಿ ಮತ್ತು ಖಾರದ ತಿಂಡಿಗಳನ್ನು ಮಾಡಲು ಬಳಸುತ್ತಾರೆ.

ಉದಾ: ಒಳ್ಳೆಣ್ಣೆ ಎಲ್ಲ ಮುಗಿದುಹೋಗಿದೆ. ಶುಕ್ರವಾರ ಸಂತೇಲಿ ಒಂದು ಡಬ್ಬ ಒಳ್ಳೆಣ್ಣೆ ತರಬೇಕು.

<olleNNe> (-) Cooking oil - The oil required for cooking is called as Ollenne. Oil is prepared out of Thil, Hucchellu and Kusube (a kind of sesame). In Malnad places of Karnataka, oil made of grated coconut is used for preparing sweet and spicy snacks.

Eg: Ollenne is exhausted. One tin of Ollenne must be brought from fair market on Friday.

❑

ಓ / Oo

179. ಓಕುಳಿಯಾಟ: ಓಕುಳಿಯಾಟ ಕೆಲವರ ಮನೆಗಳಲ್ಲಿ ಮಾತ್ರ ಆಚರಣೆಯಲ್ಲಿದೆ. ಅರಿಶಿನ ಮತ್ತು ಸುಣ್ಣವನ್ನು ಕುಂಕುಮದೊಂದಿಗೆ ಬೆರೆಸಿದರೆ ಅದು ಮಾಸಲು ಕೆಂಪು ಬಣ್ಣದ ನೀರಾಗುತ್ತೆ. ಸಾಮಾನ್ಯವಾಗಿ ಬ್ರಾಹ್ಮಣರ ಕೇರಿಯಲ್ಲಿ ವರ್ಷಕ್ಕೊಂದುಸಲ ಓಕುಳಿಯಾಟ ಆಡುತ್ತಾರೆ. ಆ ದಿನ ಯಾವ ಮನೆಯವರು ಕಾರ್ಯಕ್ರಮವನ್ನು ಏರ್ಪಡಿಸುತ್ತಾರೋ ಅವರು ಆ ಬೀದಿಯ ಉದ್ದಕ್ಕೂ ರಸ್ತೆಯ ಮಧ್ಯೆ 20–25 ಅಡಿ ಅಂತರದಲ್ಲಿ ಒಂದೊಂದು ಕೊಳದಪ್ಪಲೆಯಲ್ಲಿ ಭರ್ತಿ ಓಕುಳಿ ನೀರನ್ನು ಇಟ್ಟಿರುತ್ತಾರೆ. ಆ ಕೇರಿಯ ಜನರೆಲ್ಲರೂ ಒಬ್ಬರಿಗೊಬ್ಬರು ಓಕುಳಿ ನೀರನ್ನು ಎರೆಚಾಡುತ್ತಾರೆ. ನಂತರ ಸ್ನಾನವಾದ ಮೇಲೆ ಅವರ ಮನೆಯಲ್ಲಿ ಎಲ್ಲರಿಗೂ ಪಾನಕ, ಕೋಸುಂಬರಿ,

ರಸಾಯನ ಸಮಾರಾಧನೆ. ಊರಿನವರೆಲ್ಲರೂ ಸೇರಿ ಆಡುವುದೂ ಉಂಟು. ಓಕುಳಿಯಾಟಕ್ಕೆ ಗುಲಾಲಾಟ ಎಂದೂ ಹೆಸರಿದೆ. ಬಣ್ಣದಾಟ ಎಂದೂ ಕರೆಯುತ್ತಾರೆ ಬೇರೆಡೆಗಳಲ್ಲಿ.

ಉದಾ: ನಾನು 1933ರಲ್ಲಿ ಮೈಸೂರಿನ ಹಳ್ಳದಕೇರಿಯಲ್ಲಿ ಓಕುಳಿಯಾಟ ನೋಡಿದ್ದೆ.

<okuLiyaaTa> (-) A play performed on road - Colored water thrown on another person during festival. This is in vogue in a few families. When turmeric and lime is mixed with sindhoor it becomes red. Generally, in Brahmins' community, once a year, they observe Okuliyata. On that day which family arranges the program, they keep throughout the road in a gap of 20-25 feet, a big vessel filled with colored water. The people residing in that road, sprinkle the water on each other. After taking bath, that family will have arranged to offer rasayana, kosumbari and juice to everyone. It is also common to mingle with whole community to play. This is also called as Gulalata. Also known as Bannadata.

Eg: I had witnessed Okuliyata at Halladakeri in Mysore in 1933.

180. ಓಣಿ: ಹಳ್ಳಿಗಳಲ್ಲಿ ಎರಡು ಮನೆಗಳ ಮಧ್ಯೆ ಕೇವಲ ಮೂರು ಅಡಿ ಅಗಲ ಇರುವ ಜಾಗಕ್ಕೆ ಓಣಿ ಎನ್ನುತ್ತಾರೆ. ಆ ಮನೆಯಲ್ಲಿರುವವರನ್ನು ಗುರ್ತಿಸಬೇಕಾದರೆ ಓಣಿ ಮನೆ ಸುಬ್ಬರಾಯರು ಬಂದಿದ್ದರು ಅನ್ನುವುದು ರೂಢಿ. ಕೆಲವು ಮನೆಗಳ ಪಕ್ಕದ ಓಣಿಯಲ್ಲಿ ಕೊನೆಗಳು, ಏಣಿ ಮುಂತಾದ ಪದಾರ್ಥಗಳನ್ನು ಇಟ್ಟಿರುತ್ತಾರೆ. ಸಾಮಾನ್ಯವಾಗಿ ವೃತ್ತಿಗಳ ಹೆಸರಿನಿಂದ ಓಣಿಯ ಹೆಸರು ಹೇಳುವುದನ್ನು ಕಾಣುತ್ತೇವೆ. ನೇಕಾರ ಓಣಿ, ಸೊಪ್ಪಿನ ಓಣಿ ಇತ್ಯಾದಿ.

ಉದಾ: ಓಣಿಮನೆ ರಂಗಮ್ಮ ಬಂದಿದ್ದರು. ಅವರಿಗೆ ಕಾಫ಼ಿಪುಡಿ ಬೇಕಾಗಿತ್ತಂತೆ ಹೌದೇನೇ? ಆಗ್ಲೇ ಹೇಳಬಾರದಿತ್ತಾ?

ಉದಾ: ಸೊಪ್ಪಿನ ಓಣಿ ತಿಮ್ಮಪ್ಪನವರನ್ನು ಕರ್ಕೊಂಡು ಬಾ. [ನೋಡಿ: ಗಲ್ಲಿ]

<oNi> Lane: In villages, the place in between two houses, with a width of three feet is known as oNi. To identify a person residing there is expressed as oNi house Subbaraya had

come. In the side lanes of some of the houses tree branches, ladder etc are kept. Generally, we express the name of the lane by profession like Weavers Lane, Greens Lane etc.

Eg: It seems Lane house Rangamma had come. She wanted Coffee powder, is it so. You should have told me then itself.

Eg: Bring Greens Lane Thimmappa.

See: Lane.

181. ಓಲೆಕಾರ: ಕಾಗದ ಪತ್ರಗಳನ್ನು ಊರಿಂದೂರಿಗೆ ತಂದು ಅಂಚೆಯನ್ನು ಮುಟ್ಟಿಸುವವನು, ಮನೆಮನೆಗೆ ಪತ್ರಗಳನ್ನು ಹರಡುವವನನ್ನು **ಓಲೆಕಾರ** ಎನ್ನುತ್ತಾರೆ. ನಮ್ಮ ಬುಕ್ಕಾಂಬುಧಿಯಲ್ಲಿ ಅಂಚೆ ಕಚೇರಿ ಇರಲಿಲ್ಲ. ಎಂಟು ಮೈಲಿ ದೂರದ ಊರಿಂದ ನಮಗೆ ಬಂದ ಕಾಗದ ಪತ್ರಗಳನ್ನು ಒಬ್ಬ ಪೇದೆ ಓಡೋಡುತ್ತ ಬಂದು ಕೊಟ್ಟು ಹೋಗುತ್ತಿದ್ದ. ಆವನಿಗೆ ಓಲೆಕಾರ ಎಂದು ಕರೆಯುತ್ತಿದ್ದರು. ಕಾಗದ ಪತ್ರಗಳನ್ನು ಒಂದು ಚೀಲದಲ್ಲಿ ತುಂಬಿ ಹೆಗಲ ಮೇಲೆ ಹೊತ್ತುಕೊಂಡು, ಗೆಜ್ಜೆ ಕಟ್ಟಿದ ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಓಡಿ ಬರುತ್ತಿದ್ದ. ಗೆಜ್ಜೆಯ ಶಬ್ದ ಹಳ್ಳಿಗೆಲ್ಲ ಕೇಳಿಸುತ್ತಿತ್ತು. ಅವನು ಕೊಟ್ಟ ಪತ್ರಗಳನ್ನು ಹಳ್ಳಿಯ ಉಪಾಧ್ಯಾಯರು ಅಥವಾ ಶ್ಯಾನುಭೋಗರು ಅವರವರಿಗೆ ವಿತರಣೆ ಮಾಡುತ್ತಿದ್ದರು. ಪತ್ರ ಪಡೆದವರು ಬಹುತೇಕ ಅನಕ್ಷರಸ್ಥರಿರುತ್ತಿದ್ದರು. ಇತರರಿಂದ ಅವರಿಗೆ ಬಂದ ಪತ್ರಗಳನ್ನು ಓದಿಸುತ್ತಿದ್ದರು. ಉತ್ತರಗಳನ್ನು ಬರೆಸುತ್ತಿದ್ದರು.

ಉದಾ: ಓಲೆಕಾರ ನಿನ್ನೆ ಟಪ್ಪಾಲು ತಂದುಕೊಟ್ಟ.

ನೋಡಿ: ಅಂಚೆ ಕಚೇರಿ

<olekaara> Postman: Person who brings letters from place to place and delivers. Door to door who distributes letters is called Postman. In our Bukkambudhi, there was no Post Office. From a place eight miles away, a servant coming running, was delivering letters. He was carrying the bag filled with letters, holding a stick in the hand tied with tiny jingling bell, coming by running. The sound of the bell was heard in the whole village. The teacher or the Shanbhog of the village was distributing the letters brought by him to the residents concerned. Many of the persons who had received the letters

were illiterates. They were getting them read by others and got replied.

Eg: The Postman brought the letter yesterday.

See: Post Office. ❑

ಔ / Ou

182. ಔತಣ: ಔತಣ ಎಂದರೆ ವಿಶೇಷವಾದ ಊಟ. ಮದುವೆ ಸಮಾರಂಭಗಳಲ್ಲಿ ಕಾರ್ಯ ಕಲಾಪಗಳೆಲ್ಲವೂ ಮುಗಿದ ಮೇಲೆ ಗಂಡಿನ ಕಡೆಯವರು, ಹೆಣ್ಣಿನ ಕಡೆಯವರಿಗೆಲ್ಲಾ ಒಂದು ವಿಶೇಷ ಊಟ ಏರ್ಪಡಿಸುತ್ತಾರೆ. ಅದನ್ನು ಬೀಗರಔತಣ (ಬೀಗರೂಟ) ಎಂದೇ ಹೇಳುತ್ತಾರೆ. ಅದರ ಏರ್ಪಾಟೆಲ್ಲಾ ಹೆಣ್ಣಿನ ಕಡೆಯವರೇ ಮಾಡಿರುತ್ತಾರೆ!

ಉದಾ: ನಿನ್ನೆ ಬೀಗರೂಟ ಭರ್ಜರಿ ಆಗಿತ್ತು ಶಾಸ್ತ್ರಿಗಳೇ!

<outhaNa> Regale meal: After all the programs of marriage ceremony, bridegroom's party arranges a special meal for the bride's party. It is known as Beegaroota. But all the arrangements will have been done by the bride's party only!

Eg: Yesterday, the Beegaroota was excellent Shastriji.

❑

ಕ / Ka



183. ಕಂಕಣ: ಮದುವೆಯಾಗುವ ಹೆಣ್ಣು, ಗಂಡಿನ ಮುಂಗೈಗೆ ಕಟ್ಟುವ ಅರಿಶಿನ ಹಚ್ಚಿದ ಹಸಿನೂಲಿಗೆ ಕಂಕಣ ಎನ್ನುತ್ತಾರೆ. ಐದಾರು ಜನ ಹಿರಿಯರು ಹಸೆಮಣೆಯ ಸುತ್ತಲೂ ಕುಳಿತುಕೊಂಡು ಬೆಳ್ಳಿಯ ಚೊಂಬಿನಲ್ಲಿ ನೀರು ಹಾಕಿ ಹಸಿನೂಲಿನ ಉಂಡೆಯನ್ನು ಇಟ್ಟು ಚೊಂಬನ್ನು ಒಬ್ಬರಿಂದೊಬ್ಬರಿಗೆ ಕೊಡುವಾಗ ಹಸಿನೂಲು ಎಲ್ಲರ ಕೈಯ್ಯಲ್ಲೂ ಇರುತ್ತೆ. ಹೀಗೆ ಮೂರು ಸುತ್ತು ಎಳೆದನಂತರ ಅದನ್ನು ಶಾಸ್ತ್ರಿಗಳು ಒಂದು ಅರಿಶಿನ ಕೊನೆಯನ್ನು ಸೇರಿಸಿ ಗಂಡು, ಹೆಣ್ಣಿನ ಕೈಗೆ ಕಂಕಣವನ್ನು ಕಟ್ಟುತ್ತಾರೆ. ಇದು ಕಂಕಣಶಾಸ್ತ್ರ. ಮದುವೆಯ ಕಾರ್ಯ ಕಲಾಪಗಳೆಲ್ಲವೂ ಮುಗಿಯುವವರೆಗೆ ಆ ಶಾಸ್ತ್ರದ ಕಂಕಣ ಕೈಯ್ಯಲ್ಲೇ ಇರಬೇಕು.

ಉದಾ: ಅಂತೂ ಅವಳಿಗೆ ಕಂಕಣಬಲ ಕೂಡಿಬಂತು.

<kankaNa> (-) String tied around the wrist of the bride and bridegroom. The thread smeared with turmeric powder that is tied to the wrist of girl and the boy to be married is called as Kankana. Five to six elderly people sit around the decorated plank, putting the thread ball in a silver round vessel will pass on one to another. After doing this for three rounds, the Shastriji will attach a piece of turmeric and tie to the wrist of bride and bridegroom. This is known as Kankana Shasthra. This string should remain on their wrists till all the ritual ceremonies are completed.

Eg: Somehow the luck signifying her wedding came through.

184. ಕಂಕುಳ ಶಂಖ: ಕಂಕುಳಲ್ಲಿ ಕೀವಾಗಿ ಆಗಿರುವ ಗಾಯಕ್ಕೆ **ಕಂಕುಳ ಶಂಖ** ಎಂದು ಹೇಳುತ್ತಾರೆ.

ಉದಾ: ಕಂಕುಳಶಂಖ ಆಗ್ಯೈತೆ, ರಾಗಿ ಪೋಟ್ಲೀಸ್ ಕಟ್ಟು ಎರಡುದಿನ.

<kankuLashankha> (-) The wound developed with pus in the armpit is called as Kankulashankha.

Eg: Kankulashankha has developed. Tie Ragi Potlis (ragi flour and cooking oil boiled) for two days.

185. ಕಂತೆಕಟ್ಟು: ಊರು ಬಿಟ್ಟು ಹೊರಗಡೆ ಎಲ್ಲಾದರೂ ಹೋಗು ಅನ್ನುವುದಕ್ಕೆ ಕಂತೆಕಟ್ಟು ಎನ್ನುವುದು ರೂಢಿ.

ಉದಾ: ನೀನು ಮಾಡಿರುವ ಕೆಟ್ಟಕೆಲಸಕ್ಕೆ ನಿನ್ನ ಜೀವಂತ ಬಿಡೂದಿಲ್ಲ. ಸುಮ್ಮನೆ ಕಂತೆಕಟ್ಕಂಡು ಜಾಗ ಖಾಲಿಮಾಡು.

<kanthekaTTu> (-) To express 'get out of this place and go elsewhere' using the word Kanthekattu is in vogue.

Eg: We will not leave you for the stupid act done by you. Simply vacate this place kanthekatkondu.

186. ಕಂಚು: ಕಂಚುಲೋಹ ತವರ ಮತ್ತು ತಾಮ್ರವನ್ನು ಬೆರೆಸಿ ಮಾಡಿದ ಲೋಹ. ಊಟದ ತಟ್ಟೆ, ರೈಲುಚಂಬು, ದೇವಸ್ಥಾನಗಳಲ್ಲಿ ಇಟ್ಟಿರುವ ದೊಡ್ಡ ಪ್ರಮಾಣದ ಗಂಟೆಗಳು ಎಲ್ಲವೂ ಕಂಚಿನಿಂದ ತಯಾರಿಸಿದ ವಸ್ತುಗಳು. ಊಟ ಮಾಡುವ ತಟ್ಟೆಗೆ ಗಂಗಾಳ ಅಥವಾ ತಳಿಗೆ ಎನ್ನುತ್ತಾರೆ. ಅದನ್ನೂ ಕಂಚಿನಿಂದಲೇ ತಯಾರಿಸುವುದು. ಈ ವಸ್ತುಗಳನ್ನು ತಯಾರು ಮಾಡುವವನನ್ನು ಕಂಚುಗಾರ ಎಂದು ಕರೆಯುತ್ತಾರೆ.



ಉದಾ: ರೈಲುಚೊಂಬು ಶುಭ್ರವಾಗಿ ಬೆಳಗಿಡು. ಕಂಚಿನತಟ್ಟೆ ಎಲ್ಲಿಟ್ಟಿದೀಯೇ?

<kanchu> Bronze: The metal made of copper and tin mixed. Lunch plate, Railchombu (a round vessel with lid of screw) and big bell put in temples are all manufactured with bronze. The lunch plate is called as Gangala (the plate to eat from) or Thalige (metal plate). These are also made of bronze only. The person who prepares such things is called Kanchugara.

Eg: Clean the railchombu neatly. Where have you kept the bronze plate?

187. ಕಂತೆಪುರಾಣ: ಯಾವ ಒಂದು ವಿಷಯಕ್ಕೂ ಸಂಬಂಧಿಸದಂತೆ ಹೇಳುವ ಕತೆ ಕಂತೆಪುರಾಣವಾಗುತ್ತೆ.

ಉದಾ: ಸುಮ್ಮನೆ ಕಂತೆಪುರಾಣ ಬೊಗಳ್ಬ್ಯಾಡ, ವಿಷಯ ಏನೂ ಅಂತ ಸರಿಯಾಗಿ ಹೇಳು.

<kanthepuraaNa> (-) The story told which does not relate to any subject becomes Kanthepurana (useless story).

Eg: Simply do not gossip. What exactly is the subject tell correctly?

188. ಕಂದಾಚಾರ: ಹಿಂದಿನ ಕಾಲದಿಂದ ನಡೆಸಿಕೊಂಡು ಬಂದಿರುವ ಪದ್ಧತಿಗಳಿಗೆ ಕಂದಾಚಾರ ಅನ್ನುವ ಪದ ಬಳಕೆಯಲ್ಲಿದೆ.

ಉದಾ: ಈಗ ಕಾಲ ಬದಲಾಗಿದೆ ಹಿಂದಿನ ಕಂದಾಚಾರ ಪದ್ಧತಿಗಳನ್ನು ಬಿಟ್ಟುಬಿಡಬೇಕು.

<kandaachaara> Tradition: The system followed traditionally is known as Kandachara.

Eg: Now the time has changed. We must give up the old tradition.

189. ಕಂದುಬೆಳ್ಳಿ: ಒಳ್ಳೆಯ ಬೆಳ್ಳಿಲೋಹಕ್ಕೆ ಏನಾದರೂ ಬೆರಕೆಮಾಡಿ ತಟ್ಟೆ, ಬಟ್ಟಲನ್ನು ಮಾಡಿದರೆ ಸ್ವಲ್ಪ ದಿವಸಗಳಲ್ಲಿ ಅದು ಕಪ್ಪು ಬಣ್ಣಕ್ಕೆ ತಿರುಗುತ್ತೆ. ಅದನ್ನು **ಕಂದುಬೆಳ್ಳಿ** ಎನ್ನುತ್ತಾರೆ.

ಉದಾ: ಆ ಅಕ್ಕಸಾಲೆ ತುಂಬಾ ಮೋಸಮಾಡಿದಾನೆ, ನೋಡಿ ಈ ಬೆಳ್ಳಿ ಲೋಟ ಎಷ್ಟು ಕಪ್ಪಾಗಿದೆ, ಅದು ಕಂದುಬೆಳ್ಳಿ ಅಂತ ಕಾಣ್ತದೆ.

<kandubeLLi> Impure silver - If anything is mixed with pure silver, and plate, cup is prepared within a few days it turns black. It is called Kandubelli.

Eg: That goldsmith has cheated fully. See this silver cup, how black it is. It must be impure silver.

190. ಕಂಡಾಬಟ್ಟೆ: ನೋಡಿ. ಸಿಕ್ಕಾಪಟ್ಟೆ

<kanDaabaTTe> See: Sikkapate (Arbitrarily)


191. ಕಕ್ಕಾಬಿಕ್ಕಿ: ಹೇಳಬೇಕಾದ ವಿಷಯವನ್ನು ಸರಿಯಾಗಿ ಹೇಳುವುದಕ್ಕಾಗದೇ ತಡಬಡಿಸುತ್ತಿರುವ ಪರಿಸ್ಥಿತಿಯನ್ನು **ಕಕ್ಕಾಬಿಕ್ಕಿ** ಎನ್ನುತ್ತಾರೆ.

ಉದಾ: ಅವನಿಗೆ ಏನು ಹೇಳಬೇಕೋ ಅದು ಗೊತ್ತಿಲ್ಲ, ಕಕ್ಕಾಬಿಕ್ಕಿಯಾಗಿದಾನೆ, ಪಾಪ.

<kakkaabikki> Bewilderment - The way of struggling to tell the news correctly is called Kakkabikki.

Eg: He does not know what he has to say. Poor fellow he is bewildered.

192. ಕತ್ತಾಳೆ: ಕತ್ತಾಳೆ ಒಂದು ವಿಧವಾದ ಗಿಡ. ಇದನ್ನು ರಕ್ಕಸಪಟ್ಟೆ ಎಂದೂ ಹೇಳುತ್ತಾರೆ. ಇದರ ಎಲೆಗಳು ಸುಮಾರು ನಾಲ್ಕು ಅಂಗುಲ ಅಗಲವಿದ್ದು 3–4 ಅಡಿ ಉದ್ದವಿರುತ್ತೆ. ಎಲೆಯ ಎರಡು ಕಡೆಯೂ ಮುಳ್ಳುಗಳಿರುತ್ತವೆ. ಎಲೆಯ ದಪ್ಪ ಸುಮಾರು ಒಂದು ಅಂಗುಲ. ಈ ಗಿಡವನ್ನು ಬೇಲಿಯಂತೆ ತೋಟ, ಗದ್ದೆಗಳ ಅಂಚಿಗೆ ಬೆಳೆಸುತ್ತಾರೆ.



ಉದಾ: ಶಾಮರಾಯರ ತೋಟದಸುತ್ತ ಬೇಲಿಬದಲು ರಕ್ಕಸಪಟ್ಟೆ ಬೆಳೆಸ್ಬಿಟ್ಟಿದಾರೆ

ನೋಡಿ: ಪಾಪಾಸ್‌ಕಳ್ಳಿ, ಕತ್ತಾಳೆ, ರಕ್ಕಸಪಟ್ಟೆ

<katthaaLe> Kind of plant with thorns - Katthale is a kind of plant. It is also called Rakkasapatte. The leaves will be about four inches width with 3-4 feet height. Both sides of the leaf will have thorns. Thickness of the leaf is about an inch. This is planted at the edge of garden or paddy field like a fence.

Eg: Around the garden throughout, Shamarao has planted Rakkasapatte instead of fence.

See: Paapaaskalli, RakkasapaTTe.

193. ಕದಾಚಿತ್: ಅಕಸ್ಮಾತ್ ಯಾವಾಗಲಾದರು ಒಂದು ಸಲ ಅನ್ನುವುದನ್ನು ತಿಳಿಸುವಾಗ ಕದಾಚಿತ್ ಎಂಬ ಪದ ರೂಢಿಯಲ್ಲಿದೆ.

ಉದಾ: ಕದಾಚಿತ್ ನೀನು ಪಟ್ಟಣಕ್ಕೆ ಹೋದರೆ ನಿಮ್ಮ ಸೋದರಮಾವನ್ನ ನೋಡಿಕೊಂಡು ಬಾ.

<kadaachith> In case - To express "suddenly any one time" the word Kadachith is in vogue.

Eg: Kadachith (by chance) if you go to City you visit your maternal uncle.

194. ಕಟಾಯಿಸುವುದು: ರಾಗಿ, ಭತ್ತ ಮುಂತಾದ ಧಾನ್ಯಗಳ ತೆನೆಯನ್ನು ಕೊಯ್ಯುವುದಕ್ಕೆ **ಕಟಾಯಿಸುವುದು** ಎನ್ನುತ್ತಾರೆ.

ಕಟಾಯಿಸಿದನಂತರ ತೆನೆಗಳನ್ನು ಒಂದುಕಡೆ ಒಟ್ಟುಹಾಕುತ್ತಾರೆ.

ಉದಾ: ನಮ್ಮ ಗದ್ದೇಲಿ ಭತ್ತದ ತೆನೆ ಚೆನ್ನಾಗಿ ಬಲ್ತಿದೆ. ನಾಳೆಯಿಂದ ಕಟಾಯಿಸುವುದಕ್ಕೆ ಶುರುಮಾಡಾವ.

<kaTaayisuvudu> (-) To cut ear of corn like ragi, paddy etc. is called as katayisuvudu. After cutting, it is heaped in a place.

Eg: In our paddy field, paddy has ripened well. We shall start cutting.

195. ಕಟ್ಟಳೆ: ಅನೂಚಾನವಾಗಿ ಅನುಸರಿಸಿಕೊಂಡು ಬಂದ ನಿಯಮಕ್ಕೆ ಕಟ್ಟಳೆ ಅನ್ನುವುದು ವಾಡಿಕೆಯಲ್ಲಿದೆ.

ಉದಾ: ಪ್ರತಿವರ್ಷ ಕಾರ್ತಿಕಮಾಸದ ಕಡೆಯ ಸೋಮವಾರ ನಮ್ಮ ಮನೆಯಲ್ಲಿ ಕಟ್ಟಳೆ ಇದೆ, ದೇವರಿಗೆ ಎಡೆ ಇಕ್ಕಿ ಬರ್ತೀವಿ.

<kaTTaLe> (-) The system followed traditionally is known as Kattale (Special ritual).

Eg: Every year, the last Monday of Karthik month, we have special ritual in our house. We offer food to the deity and come.

196. ಕಟ್ಟು: ನೋಡಿ: ಕವಳಿಗೆ, ಪಿಂಡಿ

<kaTTu>: See: Kavalige, Pindi.

197. ಕಟ್ಟುಹಾಕುವುದು: ಹಳ್ಳಿಗಳ ಕಡೆ ನಾಟಿವೈದ್ಯ ಎಂಬ ದೇಶೀಯ ವೈದ್ಯಪದ್ಧತಿ ಇದೆ. ಕೈಕಾಲು ಮೂಳೆಗಳು ಮುರಿದಲ್ಲಿ, ನರಗಳು ಹಿಡಿದುಕೊಂಡಲ್ಲಿ, ಉಳುಕಿದಾಗ ನೀವಿ ದಬ್ಬೆಕಟ್ಟಿ, ಕಟ್ಟುಹಾಕುತ್ತಾರೆ. ಇದನ್ನೇ ಕಟ್ಟುಹಾಕುವುದು ಎನ್ನುತ್ತಾರೆ. ನಗರಗಳಲ್ಲಿ ಚಿತ್ರಗಳಿಗೆ ಮರದ ಚೌಕಟ್ಟನ್ನು ಸೇರಿಸುವುದಕ್ಕೂ ಕಟ್ಟುಹಾಕುವುದು

ಎನ್ನುತ್ತಾರೆ.

ಉದಾ: ಕಾಯಂಗಡಿ ಪಾಪಣ್ಣನಬಳಿ ರಾಮುವಿಗೆ ಕಟ್ಟುಹಾಕಿಸ್ಕೊಂಡು ಬಾ.

<kaTTuhaakuvudu> Native treatment - In villages a system known as native medication is prevalent. If bones of hands, legs are broken, nerves are struck and sprain, they massage and tie with bamboo stick. This is called Kattuhakuvudu (regulate the system). In cities to fix wooden frame to photos is also known as Kattu haku.

Eg: Go to Kayangadi Papanna and get Kattu to Ramu.



198. ಕಡಗೋಲು: ಕಡಗೋಲು (ಕಡೆಗೋಲು) ಮರದಿಂದ ತಯಾರಾದುದು. ಸುಮಾರು ಒಂದೂವರೆ ಅಡಿಯಿಂದ ಐದು ಅಡಿ ಎತ್ತರಕ್ಕೆ ಇರುವ ಒಂದು ಸಲಕರಣೆ. ಸಣ್ಣ ಕಡಗೋಲಿನಿಂದ, ಬೆಂದಿರುವ ತೊಗರಿಬೇಳೆಯನ್ನು ಕಡೆದರೆ ಬೇಳೆ ನೀರಿನೊಂದಿಗೆ ಚೆನ್ನಾಗಿ ಬೆರೆಯುತ್ತದೆ. ಆ ರೀತಿ ಮಾಡಿದ ಸಾರು ಬಹಳ ರುಚಿಯಾಗಿರುತ್ತೆ.

ಐದು ಅಡಿ ಎತ್ತರದ ಕಡಗೋಲನ್ನು ಮೊಸರು ಕಡೆಯುವುದಕ್ಕೆ ಉಪಯೋಗಿಸುತ್ತಾರೆ. ಕಡಗೋಲಿಗೆ ದಪ್ಪವಾದ ನೂಲಿನ ಹುರಿಯನ್ನು ಸುತ್ತಿ, ಎಡಗೈ ಬಲಗೈನಲ್ಲಿ ಹುರಿಯ ಒಂದೊಂದು ತುದಿಯನ್ನು ಹಿಡಿದುಕೊಂಡು ಮೊಸರನ್ನು ಕಡೆಯುತ್ತಾರೆ. ಅರ್ಧ ಗಂಟೆ ಕಡೆದ ನಂತರ, ಬೆಣ್ಣೆ ಪ್ರತ್ಯೇಕವಾಗಿ ತೇಲುತ್ತದೆ. ಅದನ್ನು ಬೇರ್ಪಡಿಸಿ, ಉಳಿದ ಮಜ್ಜಿಗೆಯನ್ನು ಊಟಕ್ಕೆ ಬಡಿಸುತ್ತಾರೆ. ಆ ತರಹ ಮಾಡಿದ ಮಜ್ಜಿಗೆ ಆರೋಗ್ಯದೃಷ್ಟಿಯಿಂದ ಬಹಳ ಉತ್ತಮ.

ಉದಾ: ನಮ್ಮ ಬುಕ್ಕಾಂಬುಧಿ ಮನೆಯಲ್ಲಿ ಐದು ಅಡಿ ಎತ್ತರದ ಕಡೆಗೋಲಿತ್ತು.

<kaDagolu> (-) Kadagolu is made of wood. An equipment of one and a half foot to five feet length. If you stir baked dal with small equipment it mixes well. Rasam made of it will be quite tasty. The five feet height equipment is used for stirring buttermilk. They attach a thick thread to the equipment holding the thread in each hand and stir. After half an hour butter is separated and floats. It is taken out and feed the rest for lunch.

It is a healthy food.

Eg: In our Bukambudhi house we had five feet height of Kadagolu.

199. ಕಡಾಣಿ: ಎತ್ತಿನ ಗಾಡಿಯ ಚಕ್ರಗಳು ಬಿದ್ದುಹೋಗದ ಹಾಗೆ ತಡೆಯುವುದಕ್ಕೆ ಕಬ್ಬಿಣದ ಕಡಾಣಿಯನ್ನು ಜೋಡಿಸುತ್ತಾರೆ. ಅದು ಸುಮಾರು ಒಂದು ಅಡಿ ಉದ್ದದ ಕಬ್ಬಿಣದ ಪಟ್ಟೆ. ಕಡಾಣಿಯನ್ನು ಕೀಲೆಣ್ಣೆಯಲ್ಲಿ ಅದ್ದಿ ಸೆಕ್ಕಿಸುತ್ತಾರೆ.

ಉದಾ: ಎತ್ತಿನಗಾಡಿಯ ಕಡಾಣಿಗೆ ಎಣ್ಣೆ ಹಾಕಿದೆಯಾ?

<kaDaaNi> Axle pin of a cart. This is fixed to the cart on both sides to see that wheels do not fall out. About one-foot length of iron strap is dipped in lubricant oil and fixed.

Eg: Have you put lubricant oil to the axle?

200. ಕಡಾಯಿ: ನೋಡಿ: ಕೊಪ್ಪರಿಗೆ

<kadaayi> See: Kopparige.

201. ಕಡಿವಾಣ: ಕುದುರೆಬಾಯಿಗೆ ಹಾಕುವ ಕಬ್ಬಿಣದ ಬಳೆಗೆ ಕಡಿವಾಣ ಎಂದು ಹೆಸರು. ಆ ಬಳೆಯನ್ನು ಹಾಕಿದರೆ ಬಾಯಿ ಹತೋಟಿಯಲ್ಲಿರುತ್ತದೆ.

ಉದಾ: ಸಿಕ್ಕಾಪಟ್ಟೆ ಉಚಾಯಿಸಿ ಮಾತನಾಡುವ ಮನುಷ್ಯನಿಗೆ, ಅವನ ಬಾಯಿಗೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಅವನು ಬಗ್ಗುವುದಿಲ್ಲ.

<kaDivaaNa> (-) Metal piece put in horse's mouth is called Kadivana. If you put the metal ring, the horse will be in control.

Eg: For the person who exceeds the limit of talking, must put kadivana to his mouth. Otherwise, he does not come to control.

202. ಕಡ್ಡಿಶಾಸ್ತ್ರ: ರಾಮಾಯಣ ಮೊದಲಾದ ಕಥೆಗಳನ್ನು ಬರೆದ ಸಂಸ್ಕೃತ ಅಥವಾ ಕನ್ನಡ ಕಾವ್ಯಗಳ ತಾಳೆಗರಿ ಗ್ರಂಥಗಳನ್ನು ಕೈಯಲ್ಲಿ ಹಿಡಿದುಕೊಂಡು ಒಂದು ಹಂಚಿ ಕಡ್ಡಿ ಅಥವಾ ಬಿದಿರಿನ ಕಡ್ಡಿ ಇಲ್ಲವೇ ಲೋಹದ ಕಡ್ಡಿಯಿಂದ ತಾಳೆಗರಿ ಗ್ರಂಥದ ಹಾಳೆಗಳ ನಡುವೆ ಚುಚ್ಚಲು ಹೇಳಿದಾಗ ಆಗ ಯಾವ ಹಾಳೆ ಬರುತ್ತದೋ ಆ ಹಾಳೆಯಲ್ಲಿ ಬರೆದಿರುವ ರಾಮಾಯಣದ ಅಥವಾ ಆ ತಾಳೆಗರಿ ಕಾವ್ಯದಲ್ಲಿನ

ಪ್ರಸಂಗಕ್ಕೆ ತಕ್ಕಂತೆ ಭವಿಷ್ಯ ಹೇಳುತ್ತಾರೆ. ಇದು ಕಡ್ಡಿಶಾಸ್ತ್ರ.

ಉದಾ: ರಾಮಣ್ಣ ನಿನ್ನೆ ಕಡ್ಡಿಶಾಸ್ತ್ರ ಕೇಳಿದ. ಅವರ ಮಗಳಿಗೆ ಈ ವರ್ಷದಲ್ಲಿ ಮದುವೆ ಖಂಡಿತ ಆಗುತ್ತಂತೆ.

<kaDDishaasthra> A type of prediction - Holding in one hand the leaf of a type of plant on which the stories of Ramayan etc. are written, they tell to push the wooden or metal stick. Relating to the event, which is written on that age, they predict. This is Kaddishastra.

Eg: Ramanna asked for Kaddishastra yesterday. His daughter's marriage will take place this year.

203. ಕಣಜ: ಭತ್ತ, ರಾಗಿ ಮುಂತಾದ ಧಾನ್ಯಗಳನ್ನು ಕೂಡಿಡಲು ಮಾಡಿರುವ ಜಾಗಕ್ಕೆ ಕಣಜ ಎನ್ನುತ್ತಾರೆ. ನೆಲದ ಕೆಳಗೆ ಐದಾರು ಅಡಿ ಆಳದವರೆಗೂ ದೊಡ್ಡ ಗುಂಡಿಯನ್ನು ಮಾಡಿ ಸುತ್ತಲೂ ಗಾರೆಯಿಂದ ಸಾರಿಸುತ್ತಾರೆ. ಒಬ್ಬ ಇಳಿಯುವಷ್ಟು ಮಾತ್ರ ಮೇಲ್ಭಾಗದಲ್ಲಿ ರಂಧ್ರವಿರುತ್ತೆ. ಅದರೊಳಗೆ ಇಳಿದು ಧಾನ್ಯವನ್ನು ಹೊರಕ್ಕೆ ತೆಗೆಯುವುದಕ್ಕೆ ಮುಂಚೆ, ಹಚ್ಚಿದ ದೀಪವನ್ನು ಕಣಜದ ಒಳಕ್ಕೆ ಇಳೀಬಿಟ್ಟು ಸ್ವಲ್ಪಕಾಲದ ನಂತರ ಇಳಿಯುತ್ತಾರೆ. ಹಾಗೆ ಮಾಡದೇ ಇದ್ದಲ್ಲಿ ಉಸಿರುಕಟ್ಟಿ ಸಾಯುವ ಸಂದರ್ಭವೂ ಇರುತ್ತೆ. ಮೇಲ್ಭಾಗದ ರಂಧ್ರವನ್ನು ಮರದ ಹಲಗೆಯಿಂದ ಮುಚ್ಚಿರುತ್ತಾರೆ. ಕಣಜವನ್ನು ಹಗೇವು ಎಂದೂ ಕರೆಯುತ್ತಾರೆ.

ಉದಾ: ತುಮಕೂರು ಜಿಲ್ಲೆಯ ಮುಳುಕುಂಟೆಗ್ರಾಮದ ನಮ್ಮ ಅಕ್ಕನ ಮನೆಯಲ್ಲಿ ನಡುಮನೆಯಲ್ಲೇ ಒಂದು ದೊಡ್ಡ ಕಣಜವನ್ನು ಮಾಡಿದ್ದರು. ರಾಗಿ ಯಾವಾಗಲೂ ಕಣಜದಲ್ಲಿ ತುಂಬಿರುತ್ತಿತ್ತು.

ನೋಡಿ: ಗುಡಾಣ

<kaNaja> Granary - The place to store paddy, ragi etc. is called Kanaja (Corn bin). Five to six feet down the floor, making a big pit, it is mortared around. There will be a hole on top just enough for one man to get in. Before entering, a burning lamp is pushed in and after some time, they go inside. If you do not do like that, there is possibility of death due to choke. The top is closed with a wooden plank. Kanaja is also called Hagevu (Underground granary).

Eg: At Mulukunte (Tumkur District, Karnataka) in my

sister's house they had contructed a big underground granary inside the hall only. It was always full of ragi.

See: Gudana.



204. ಕಣಪೂಜೆ: ಬೆಳೆದ ದವಸಧಾನ್ಯಗಳನ್ನು ಒಂದು ಕಡೆ ರಾಶಿ ಹಾಕಿ ಪೂಜೆ ಮಾಡುತ್ತಾರೆ. ಆ ಜಾಗದಲ್ಲಿನ ಕಸಕಡ್ಡಿಗಳನ್ನೆಲ್ಲ ಗುಡಿಸಿ, ಸಗಣಿಯಿಂದ ಸಾರಿಸಿ ಅದು ಚೆನ್ನಾಗಿ ಒಣಗಿದ ನಂತರ ಧಾನ್ಯಗಳನ್ನು ಒಟ್ಟುಮಾಡುತ್ತಾರೆ. ಕಣಪೂಜೆಗೆ ನೆಂಟರಿಷ್ಟರೆಲ್ಲ ಸೇರುತ್ತಾರೆ. ಕಣಪೂಜೆ ನಡೆಯುವುದು ಹೊಲ ಗದ್ದೆಗಳಲ್ಲಿ. ಕಣಪೂಜೆಯನ್ನು **ರಾಶಿಪೂಜೆ** ಎಂದೂ ಕರೆಯುತ್ತಾರೆ.

ಉದಾ: ನಾಳೆ ಕಣಪೂಜೆ ಇದೆ, ಊರಿನಿಂದ ಚಿಕ್ಕಪ್ಪ ಬರ್ತಾರೆ. ನೀನು ನಾಳಿದ್ದು ಊರಿಗೆ ಹೋಗು.

<kaNapooje> Puja for the crops grown - The grown corn etc. are heaped and worshipped. In that place they sweep and wash the floor with cow dung and when dried, they pile up the corn in a heap. All the relatives will gather. Kanapuje is done in paddy field only. It is also called **Rashipuje.**

Eg: Tomorrow there is Kanapuje. Uncle is coming from village. You leave after that.

205. ಕಣಿಕೇಳುವುದು: ಪ್ರಶ್ನೆ ಕೇಳುವವರ ಮರ್ಜಿ ತಿಳಿದು, ಕಣಿಹೇಳುವವನು ಉತ್ತರ ಹೇಳುತ್ತಾನೆ. ಇದೂಕೂಡ ಭವಿಷ್ಯ ಹೇಳಿದಂತೆಯೆ. ಹೇಳಿದಂತೆ ನಡೆದೇ ನಡೆಯುತ್ತೆಂಬ ನಂಬಿಕೆಯಿಲ್ಲ. ಕವಡೆ ಹಾಕಿಸಿ ಪ್ರಶ್ನೆಗೆ ಉತ್ತರ ಹೇಳುವವರೂ ಇದ್ದಾರೆ. ಪ್ರಶ್ನೆ ಕೇಳುವವರು ಬಂದ ದಿಕ್ಕು, ಸಮಯ ಇತ್ಯಾದಿ ಗಮನಿಸಿ ಕಣಿ ಹೇಳುವವರೂ ಇದ್ದಾರೆ. ಕಣಿ ಹೇಳುವುದರಲ್ಲಿ ಕೊರವಂಜಿಯರು ಪ್ರಖ್ಯಾತರು.

ಉದಾ: ಕೊರವಂಜಿ ಈಚೆಗೆ ಯಾಕೆ ಬರಲಿಲ್ಲ!

ನೋಡಿ: ಜ್ಯೋತಿಷ್ಯ, ಶಕುನಶಾಸ್ತ್ರ

<kaNikeLuvudu> A type of prediction - Knowing the interest of whom questions, the person replies. This is also like predicting the future. It may not be believed what he tells will

come true. There are people who predict the future with the help of kavade (found in riverbed or seashore). Also knowing the direction and time when the asker comes, they tell the future. Women fortune tellers are famous.

Eg: Why woman fortune teller has not come of late?

See: Jyothishya (Astrology)

206. ಕಣ್ಕಪ್ಪು: ಕಣ್ಕಪ್ಪನ್ನು ನಂಜುಬಟ್ಟಲು (ನಂದಬಟ್ಟಲು) ಹೂವುಗಳಿಂದ ಮಾಡುತ್ತಾರೆ. ಹಣೆಗೆ ಸಾದು ಅಥವಾ ಕುಂಕುಮ, ಕಣ್ಣಿಗೆ ಕಣ್ಕಪ್ಪು, ಕೆನ್ನೆಗೆ ಅರಿಶಿನ ಇವು ಹೆಂಗಸರ ಅಲಂಕಾರಗಳು. ಕಣ್ಕಪ್ಪು ಕಣ್ಣಿಗೆ ಬಹಳ ತಂಪುಂಟುಮಾಡುತ್ತೆ. ಹೆರಿಗೆಯಾದ ನಂತರ ಬಾಣಂತಿಯರು ಪ್ರತಿನಿತ್ಯವು ಕಣ್ಣಿಗೆ ಕಣ್ಕಪ್ಪನ್ನು ಹಚ್ಚಿಕೊಳ್ಳುತ್ತಾರೆ.

ಉದಾ: ಶಂಕ್ರಪ್ಪನ ಹಿತ್ತಲಲ್ಲಿ ಒಂದಿಷ್ಟು ನಂಜಬಟ್ಟಲು ಹೂವು ಕಿತ್ಕಂಡ್ಬಾ, ಕಣ್ಕಪ್ಪು ಮಾಡಾಣ.

<kaNkappu> Kohl - Kankappu is made of a type of fragrant white flower. For forehead for kind of black paste (Saadu), for eye Kankappu, for cheek turmeric powder are women's ornaments. Kankappu makes the eyes cool. After delivery, the women smear Kankappu every day.

Eg: From Shankrappa's kitchen garden bring some fragrant white flowers. Let us prepare Kankappu.

207. ಕಣ್ಣಾಡಿಸು: ಕಾದು ಆಗಾಗ ಗಮನಿಸುವುದು. ಗಮನವಿಟ್ಟು ನೋಡುವುದನ್ನು ಕಣ್ಣಾಡಿಸು ಎಂದು ಹೇಳುವುದು ರೂಢಿ.

ಉದಾ: ನಾವು ಒಂದು ವಾರ ಊರಾಗಿರಾಕಿಲ್ಲ. ಬೀರೇದೇವರ ಜಾತ್ರೆಗೆ ಹೋಗ್ತಿದೀವಿ. ನಮ್ಮ ಗದ್ದೆತಾವ ಹಾಗೆ ಕಣ್ಣಾಡಿಸೋ ಮಗ.

<kaNNaaDisu> Look after - To observe anything with concentration, the word Kannadisu is in vogue.

Eg: We will not be here for a week. Going to Beeredevar festival. Simply look out our agriculture field my son.

208 ಕಣ್ಣಾಮುಚ್ಚಾಲೆ ಆಟ: ಕಣ್ಣಾಮುಚ್ಚಾಲೆ ಆಟದಲ್ಲಿ ಒಬ್ಬರ ಕಣ್ಣನ್ನು ಮುಚ್ಚಿದ ಮೇಲೆ ಉಳಿದವರೆಲ್ಲ ಬೇರೆ ಬೇರೆ ಕಡೆ ಬಚ್ಚಿಟ್ಟುಕೊಳ್ಳುತ್ತಾರೆ. ಅವರೆಲ್ಲ

ಬಚ್ಚಿಟ್ಟುಕೊಳ್ಳುವವರೆಗೆ ಹಾಡನ್ನು (ಕಣ್ಣಾಮುಚ್ಚೆ, ಕಾಡೇಗೂಡೇ, ಉದ್ದಿನಮೂಟೆ ಉರುಳೇಹೋಯ್ತು ನಮ್ಮಹಕ್ಕಿ – ನಿಮ್ಮಹಕ್ಕಿ ಬಚ್ಚಿಟ್ಟುಕೊಳ್ಳಿರೋ ಬಚ್ಚಿಟ್ಟುಕೊಳ್ಳಿ) ಹೇಳಿ ನಂತರ ಕಣ್ಣನ್ನು ಬಿಟ್ಟಾಗ ಅವರನ್ನು ಹುಡುಕಬೇಕು.

ಉದಾ: ಸುಶೀಲಾ, ಮಾಧುರಿ, ಗೋಪಿ ಎಲ್ಲಾ ಬನ್ರೇ, ಕಣ್ಣಾಮುಚ್ಚಾಲೆ ಆಡೋಣ.

<kaNNaamucchaale aata> Hide and seek game: In Kannamucchale ata, after closing the eye of one child, the rest of them will hide here and there. Till everyone hides they will sing (Kannamucche, Kadegoode, Uddinamoote urulehoythu, namma hakki - nimma hakki bacchittukolliro bacchittukolli) and then open the eyes of the child, she must search them.

Eg: Sushila, Madhuri, Gopi come all of you, let us play Kannamucchale

209. ಕಣ್ಣುರಿ: ಇನ್ನೊಬ್ಬರು ಚೆನ್ನಾಗಿರುವುದನ್ನು ನೋಡಿ ಹೊಟ್ಟೆಕಿಚ್ಚು ಪಡುವುದಕ್ಕೆ **ಕಣ್ಣುರಿ** ಎಂಬ ಪದವನ್ನು ಬಳಸುತ್ತಾರೆ.

ಉದಾ: ಆ ಕಡೇಮನೆ ಪಾರ್ವತಮ್ಮನಿಗೆ ನನ್ನ ಕಂಡರೆ ಯಾವಾಗಲೂ ಕಣ್ಣುರಿ.

ನೋಡಿ: ಹೊಟ್ಟೆಕಿಚ್ಚು

<kaNNuri> Jealousy - To be jealous about other's happiness, they use the word Kannuri.

Eg: That last house Parvathamma is always jealous of me.

See: Hottekicchu (envy, jealousy)

210. ಕಣ್ಣೆಸರು: ನೋಡಿ: ದೃಷ್ಟಿತೆಗೆಯುವುದು

<kaNNesaru> Supposed injury of evil look.

See: Drushti thegeyuvudu (Removing of evil)

211. ಕತ್ತೆಮದುವೆ: ನೋಡಿ: ಪರ್ಜನ್ಯಜಪ

<katthemaDuve> See: Parjanyajapa

212. ಕತ್ತೇಮಗ: ನೋಡಿ: ಬ್ರಾಹ್ಮಣರ ಬೈಗುಳ

<katthemaga> Vulgar word - See: Brahmanara baigula

213. ಕತ್ತೇಮುಂಡೆ: ನೋಡಿ: ಬ್ರಾಹ್ಮಣರ ಬೈಗುಳ

<katthemunDe> Vulgar word - See: Brahmanara baigula

214. ಕನ್ನ: ಹಿಂದಿನಕಾಲದಲ್ಲಿ ರಾತ್ರಿಹೊತ್ತು ಮನೆಗಳಲ್ಲಿ ಕಳ್ಳತನ ಮಾಡುವವರು ಮನೆಯ ಗೋಡೆಯನ್ನು ಕೊರೆದು ಒಳಗೆ ತೂರಿ ಕಳ್ಳತನ ಮಾಡುತ್ತಿದ್ದರು. ಇದಕ್ಕೆ ಕನ್ನಹಾಕುವುದು ಎನ್ನುತ್ತಾರೆ. ಕಳ್ಳತನದ ಒಂದು ವಿಧಾನ ಇದು.

ಉದಾ: ರಾಯರೇ, ನಿನ್ನೆ ಶಾಮರಾಯರ ಮನೆಗೆ ಕಳ್ಳ ಕನ್ನಹಾಕಿ ಬೆಳ್ಳಿಸಾಮಾನು ಕದ್ದಿದ್ದಾನಂತೆ.

<kanna> Thieving - In ancient times, thieves used to come during night making hole piercing the wall and thieving. This is called Kannahakuvudu (hole made by burglars in the wall of a building). This is an item of burglary.

Eg: Rayare, yesterday in Shamarao's house, he stole silver vessels.

215. ಕನ್ಯಾಗಮನ: ಧಾರೆ ಮಂಟಪಕ್ಕೆ ವಧುವನ್ನು ಅವಳ ಸೋದರ ಮಾವ ಕರೆದುತರುವುದು ವಾಡಿಕೆ. ಅಲ್ಲಿಯವರೆಗೂ ಅವಳು ಗೌರಿ ಪೂಜೆಯನ್ನು ಮಾಡುತ್ತಿರುತ್ತಾಳೆ. ಸೋದರಮಾವ ಕನ್ಯೆಯನ್ನು ಹೆಗಲಮೇಲೆ ಹೊತ್ತು ಲಗ್ನ ಮಂಟಪಕ್ಕೆ ತರುವುದು ಪದ್ಧತಿ. ತೆಲುಗು ಜನಾಂಗದವರು ವಧುವನ್ನು ಬೆತ್ತದ ತೊಟ್ಟಿಲಲ್ಲಿ ಕೂರಿಸಿ ಐದು ಜನ ತೊಟ್ಟಿಲನ್ನು ಹೆಗಲ ಮೇಲೆ ಹೊತ್ತು ಮಂಟಪಕ್ಕೆ ತರುತ್ತಾರೆ.

<kanyaagamana> (-) It is the custom to bring the bride to the marriage pandal by the maternal uncle. Till such time she will be doing Gouripooja. The Telugu people will bring the bride in a cane cradle, five people carrying the cradle on shoulders.



216. ಕಪಿಲೆಬಾವಿ: ತೋಟಗಳಲ್ಲಿ ಗಿಡಮರಗಳಿಗೆ ನೀರು ಹಾಕುವುದಕ್ಕೆ ದೊಡ್ಡ ಬಾವಿಗಳನ್ನು ತೋಡಿಸಿರುತ್ತಾರೆ. ಬಾವಿಯ ಅಗಲ ಜಾಸ್ತಿ ಇದ್ದು ಆಳವೂ ಬಹಳ. ಎತ್ತುಗಳ ಕೊರಳಿಗೆ ನೊಗವನ್ನು ಕಟ್ಟಿ ಬಾವಿಯಿಂದ ರಾಟೆ ಮೂಲಕ ನೀರನ್ನು ಮೇಲಕ್ಕೆ ಎಳೆದು ಕಾಲುವೆಗಳಿಗೆ ಬಿಡುತ್ತಾರೆ. ಕಾಲುವೆಯಿಂದ ನೀರನ್ನು ಯಾವ ದಿಕ್ಕಿಗೆ ಬೇಕಾದರೂ ತಿರುಗಿಸಬಹುದು. ಮಳೆ ಬಾರದಿದ್ದಾಗ ಕಪಿಲೆ ಬಾವಿಯ ನೀರೇ ಬೇಕು. ಪ್ರತಿಯೊಂದು ತೋಟದಲ್ಲು ಕಪಿಲೆಬಾವಿ ಇರುತ್ತೆ. ಬಾವಿಯ ಒಳಕ್ಕೆ ಇಳಿಯಲು ಅಲ್ಲಲ್ಲೇ ಮೆಟ್ಟಲುಗಳಿರುತ್ತವೆ. **ಮೆಟ್ಟಲುಬಾವಿ** ಎಂದು ಈ ಬಗೆಯ ಬಾವಿಯನ್ನು ಕರೆಯುತ್ತಾರೆ.

ಉದಾ: ನಮ್ಮ ತೋಟದಲ್ಲಿ ಕಪಿಲೆಬಾವಿ ಇದೆ. ತುಂಬಾ ಹಳೆಯ ಬಾವಿ.

ನೋಡಿ: ಮೆಟ್ಟಲುಬಾವಿ

<kapilebhaavi> Big well in garden - For watering plants in garden, they get big wells constructed. The width of the well is more and depth also. Tying the yoke to the neck of the oxen, they draw water from well through spinning wheel and allows into canals. From the canal water can be flowed to any direction. When there is no rain, well water only required. Every garden will have such well. To go inside the well, steps are attached. They call it as Mettalubhavi.

Eg: We have kapilebhavi in our garden, quite an old one.

See: Mettalubhavi




216. ಕಮಂಡಲು: ಕಮಂಡಲು ವಿಶೇಷವಾಗಿ ಸಂನ್ಯಾಸಿಗಳು ಉಪಯೋಗಿಸುವ ಪಾತ್ರೆ. ಸನ್ಯಾಸಿಗಳು ಊರಿಂದೂರಿಗೆ ಹೋಗುವಾಗ ಒಂದು ಕೈಯ್ಯಲ್ಲಿ ಕಮಂಡಲು, ಇನ್ನೊಂದು ಕೈಯ್ಯಲ್ಲಿ ದಂಡಕೋಲು ಇದ್ದೇ ಇರುತ್ತೆ. ಕೊರಳಲ್ಲಿ ರುದ್ರಾಕ್ಷಿಸರ, ಕಾವಿಬಟ್ಟೆ ಮೈಮೇಲೆ. ಇದು ಸಂನ್ಯಾಸಿಗಳ ಉಡುಪು.

ಉದಾ: ಆಮೇಲೆ ಸ್ವಾಮಿಗಳು ಕಮಂಡಲಿನಿಂದ ನೀರನ್ನು ಪ್ರೋಕ್ಷಿಸಿದರು.

<kamanDalu> Water pot of ascetics - Especially the monks use this vessel. When they go from place to place, in one

hand kamandalu and in the other hand a dandakolu (stick held ritualistically by monks). On the neck rosary, red color cloth on body. This is the dress of a monk.

Eg: After that Swamiji sprinkled the water from kamandalu



218. ಕಮಾನುಗಾಡಿ: ಊರಿಂದೂರಿಗೆ ಪ್ರಯಾಣ ಮಾಡುವಾಗ ಜನರು ಕುಳಿತುಕೊಂಡು ಹೋಗಲು ಅನುಕೂಲವಾದ ಎತ್ತಿನಗಾಡಿಯೆ **ಕಮಾನುಗಾಡಿ**. ದಪ್ಪವಾದ ಜಮಖಾನೆಗಳನ್ನು ಹಾಸಿ ಎರಡು ಪಕ್ಕಕ್ಕೂ ಲೋಡುದಿಂಬುಗಳನ್ನಿಟ್ಟು ಜಮೀನ್ದಾರರು ಕುಳಿತುಕೊಂಡು ಹೋಗುತ್ತಿದ್ದರು. ಸಾಮಾನ್ಯವಾಗಿ ಹೆಂಗಸರು ಮಕ್ಕಳು ಪ್ರಯಾಣ ಮಾಡುವಾಗ ಕಮಾನುಗಾಡಿಯಲ್ಲೆ ಹೋಗುವುದು. ಮದುವೆ ದಿಬ್ಬಣವನ್ನು ಕರೆದೊಯ್ಯುವಾಗ ಮತ್ತು ಗಂಡಿನ ಕಡೆಯವರನ್ನು ಕರೆದೊಯ್ಯುವಾಗ ಕಮಾನು ಗಾಡಿಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಕಮಾನು ಗಾಡಿಯನ್ನು ಕೊಲ್ಲಾರದಬಂಡಿ ಎಂದೂ ಕರೆಯುತ್ತಾರೆ.

ಉದಾ: ನಮ್ಮ ದೊಡ್ಡಮಗನನ್ನು ಮದ್ವೇಲಿ ಬೀಗರು ಅಲಂಕಾರಮಾಡಿದ ಕಮಾನುಗಾಡಿಯಲ್ಲಿ ಕರೆದುಕೊಂಡು ಹೋಗುತ್ತಾರೆ.


ನೋಡಿ: ಕೊಲ್ಲಾರದಬಂಡಿ

<kamaanugaaDi> Travel cart with arehead attached is called kamanugadi. Spreading the carpet inside the cart, putting round pillows on both sides, landlords were travelling. Generally, women and children travel in kamanugadi only. During marriage procession and while bringing bridegroom's party, they were taking them in kamanugadi. It is also called as Kollaradabandi.

Eg: During the marriage of my elder son, the bride's party will take him in the decorated kamanugadi.

See: Kollaradabandi.

219. ಕಮ್ಮಾರ: ಕಬ್ಬಿಣದಲ್ಲಿ ರೈತರಿಗೆ, ಮನೆಗಳಿಗೆ ಬೇಕಾದ ಮಚ್ಚು, ಕೊಡಲಿ, ಗುಳ, ಹಾರೆ ಮೊದಲಾದ ಪದಾರ್ಥಗಳನ್ನು ತಯಾರು ಮಾಡುವವನಿಗೆ **ಕಮ್ಮಾರ** ಎಂದು ಕರೆಯುತ್ತಾರೆ. ಕಬ್ಬಿಣದ ಪದಾರ್ಥಗಳನ್ನು ಕುಟ್ಟಲು ಕೊಡತಿ, ಅಡಿಗಲ್ಲುಗಳನ್ನು



ಬಳಸಿದರೆ ಕಬ್ಬಿಣ ಕಾಯಿಸಲು ಕುಲುಮೆ ಎಂಬ ಕಬ್ಬಿಣದ ಒಲೆ ಬಳಸುತ್ತಾನೆ. ಅದಕ್ಕೆ ಗಾಳಿ ಊದಲು ಬಳಸುವ ಪದರಗಳ ಚರ್ಮದಚೀಲಕ್ಕೆ ತಿದಿ ಎನ್ನುತ್ತಾರೆ. ತಿದಿ ಒತ್ತಿದರೆ ಗಾಳಿ ಬರುತ್ತದೆ..

ಉದಾ: ಕಮ್ಮಾರ ವೀರಭದ್ರನ ಮನೆಗೆ ಹೋಗಿ ಮಚ್ಚು, ಕುಡುಗೋಲನ್ನು ಸಾಣೆ ಹಿಡಿಸಿಕೊಂಡು ಬಾ.

<kammaara> Black Smith - One who makes from iron, the required equipment like, sickle, axe, plough share etc. is called Kammara. If he uses iron hammer, anvil to strike iron equipment, he uses furnace to heat iron. For that to blow air he uses leather bag which is called Thidi. When thidi is pressed air comes out.

Eg: Go to Kammara Veerabhadra's house and get the sickle sharpened.

220. ಕರ್ಚಿವೀಳ್ಳೇದೆಲೆ: ಸಾಮಾನ್ಯವಾದ ಒರಟಾದ ವೀಳೆಯದೆಲೆಗೆ ಕರ್ಚಿವೀಳ್ಳೇದೆಲೆ ಎನ್ನುತ್ತಾರೆ. ಕರ್ಚಿಎಲೆಯನ್ನು ಮದುವೆ, ಮುಂಜಿ ಸಮಾರಂಭಗಳಲ್ಲಿ ಹಸೆಯಮೇಲೆ ನಡೆಯುವ ಶಾಸ್ತ್ರಗಳಲ್ಲಿ ಬಳಸುತ್ತಾರೆ. ಕರ್ಚಿವೀಳ್ಳೇದೆಲೆ ಒರಟಾಗಿರುವುದರಿಂದ ಬಾಯಿಗೆ ಹಾಕಿಕೊಂಡು ಜಗಿಯುವುದಕ್ಕಾಗುವುದಿಲ್ಲ.

ಉದಾ: ಸರಸೂ ಮದುವೆಗೆ 12 ಕಟ್ಟು ಕರ್ಚಿವೀಳ್ಳೇದೆಲೆ ಆದರೂ ಬೇಕಾಗುತ್ತೆ.

ನೋಡಿ: ಚಿಗುರು

<karchiveelledele> Rough pawn - The ordinary rough pawn is called Karchiveelledele. It is used generally, in ritual programs done during marriage and brahmopadesa. Since karchiveeledele is rough, it cannot be put into mouth and chewed.

Eg: For Sarasu's marriage at least twelve bundles of karchiveeledele will be required.

221. ಕರಟ: ತೆಂಗಿನಕಾಯನ್ನು ಒಡೆದು ತುರಿಯನ್ನು ತೆಗೆದಮೇಲೆ ಉಳಿಯುವುದೇ **ಕರಟ**. ಕರಟದ ಮೇಲಿರುವ ಜುಂಗನ್ನೆಲ್ಲ ತೆಗೆದು ಮರದ ಕೋಲನ್ನು ಅದಕ್ಕೆ ಸೇರಿಸಿ ಸೌಟಿನಂತೆ ಉಪಯೋಗಿಸುತ್ತಾರೆ. ಹೆಂಗಸರು ಹಣೆಗೆ ಹಚ್ಚುವ ಸಾದನ್ನು



ಕರಟದೊಳಗೆ ಇಡುತ್ತಿದ್ದರು. ಕರಟವನ್ನು ನೀರೊಲೆಗೆ ಹಾಕಿ ಬೆಂಕಿ ಹಚ್ಚಿದರೆ ಅದರ ಕಾವು ಸೌದೆಗಿಂತ ಹೆಚ್ಚು. ಕರಟವನ್ನು ಚಿಪ್ಪು ಎಂದೂ ಕರೆಯುತ್ತಾರೆ.

ಉದಾ: ಸೌದೆ ಜಾಸ್ತಿಇಲ್ಲ. ನೀರೊಲೆಗೆ ಕರಟಹಾಕು.



<karaTa> Shell of coconut - After breaking coconut and taken out the inner portion, the remaining shell is called karata. Removing the fibers on the shell, attaching a wooden stick to that, they use as a ladle. Women used to put the black paste (Saadu) for forehead in the Karata. If the shell is used for heating water, the temperature is more than the wood. It is also called as Chippu.

Eg: There is no more firewood. Put coconut shell to the oven.



222. ಕರಡಿ ಆಡಿಸುವುದು: ಕರಡಿ ಆಡಿಸುವವನು ತಲೆಗೂ ಮೈಗೂ ಕರಡಿಯ ಚರ್ಮದ ಹೊದಿಕೆಯನ್ನು ಇಟ್ಟುಕೊಂಡು ಕರಡಿಯ ಕೊರಳಿಗೆ ಹಗ್ಗವನ್ನು ಕಟ್ಟಿ ಒಂದೆರಡು ಆಟ ಆಡಿಸುತ್ತಿದ್ದ. ಕರಡಿ ಅದರ ತಲೆಯನ್ನು ಕಾಲುಗಳ ಮಧ್ಯೆ ತೂರಿಸಿ ಮೂಟೆಯಂತೆ ಉರುಳಿಕೊಂಡು ಹೋಗುತ್ತಿತ್ತು. ಕರಡಿ ಆಡಿಸುವವನನ್ನು ಗೊರವಯ್ಯ ಎಂದು ಕರೆಯುತ್ತಾರೆ. ಕರಡಿ ಕುಣಿಯುವುದನ್ನು ಕರಡಿಕುಣಿತ ಎನ್ನುತ್ತಾರೆ.

ಉದಾ: ಗೊರವಯ್ಯ ಬಂದಿದ್ದಾನೆ ದವಸಕೊಡು.

<karaDi aadisuvudu> Bear play - One who plays the bear will also wear the skin of bear on the body. He was playing tying the rope to the neck of bear. The bear pushing its head in between the legs, was rolling like a bundle. The person who plays with bear is called Goravayya. The dancing of bear is called karadikunitha.

Eg: Goravayya has come. Give him some rice.

223. ಕರಾಮತ್ತು: ಕರಾಮತ್ತು ಅಂದರೆ ಉಪಾಯ. ಬೇರಾರಿಗೂ ಗೊತ್ತಿಲ್ಲದ ಹಾಗೆ ಉಪಾಯದಿಂದ ಕೆಲಸಮಾಡುವುದು.

ಉದಾ: ನನಗೇನೋ ಅನುಮಾನ, ಅವನ್ನ ನೋಡಿದರೆ ಏನೋ ಕರಾಮತ್ತು ಮಾಡವ್ನೆ ಅಂತ ಕಾಣುತ್ತೆ, ಅವನ್‌ಮೇಲೆ ಸ್ವಲ್ಪ ನಿಗಾ ಇಟ್ಟಿರು.

<karaamathhu> Planning - Without the other's knowledge working with plan.

Eg: Somehow, I doubt. If I see him, he looks like planning something. Have an eye on him.

224. ಕರಾರು: ಯಾವುದಾದರೂ ಆಸ್ತಿಪಾಸ್ತಿಗಳನ್ನು ಕೊಳ್ಳುವುದಾಗಲೀ ಮಾರುವುದಾಗಲೀ ಆಗುವಾಗ ಮಾರುವವನಿಗೂ ಕೊಳ್ಳುವವನಿಗೂ ಮಧ್ಯೆ ನಡೆಯುವ ವ್ಯವಹಾರವನ್ನು ಒಂದು ಒಪ್ಪಂದದ ಮೂಲಕ ಬರೆವಣಿಗೆಯಲ್ಲಿಡುವುದಕ್ಕೆ **ಕರಾರು** ಎನ್ನುತ್ತಾರೆ.

ಉದಾ: ಶಿವಪ್ಪಾ ವ್ಯವಹಾರದಲ್ಲಿ ಸ್ವಲ್ಪ ಹೆಚ್ಚುಕಮ್ಮಿಯಾದರೂ ಚಿಂತಿಲ್ಲ. ಯಾವುದಕ್ಕೂ ಒಂದು ಕರಾರು ಬರೆವಣಿಗೆಯಲ್ಲಿದ್ದರೆ ಉತ್ತಮ.

<karaaru> Agreement - When property is bought or sold, the transaction between buyer and seller made through in writing is called Kararu.

Eg: Shivappa, in transaction may be a little less or more, it is better if the agreement is put in writing.

225. ಕರಾರುಪತ್ರ: ನೋಡಿ: ಕ್ರಯಚೀಟಿ

<karaarupathra> See: Krayacheeti (Sale Deed)

226. ಕರಿಬಟ್ಟು: ಹಸುವಿನ ಸಗಣಿಯಿಂದ ಮಾಡಿದ ಬೆರಣಿಯನ್ನು ಭತ್ತದ ಹೊಟ್ಟಿನೊಡನೆ ಬೂದಿಯಾಗದಂತೆ ಸುಟ್ಟು ಕರಿಕುಮಾಡಿ ಹಲ್ಲನ್ನು ಉಜ್ಜುವುದಕ್ಕೆ ಉಪಯೋಗಿಸುತ್ತಾರೆ. ಆ ಕರಿಕನ್ನು **ಕರಿಬಟ್ಟು** ಎಂದು ಹೇಳುತ್ತಾರೆ. ಹಲ್ಲನ್ನುಜ್ಜುವುದಕ್ಕೆ ಬೇವಿನ ಕಡ್ಡಿಯನ್ನೂ ಬಳಸುತ್ತಾರೆ.

ಉದಾ: ಕರಿಬಟ್ಟು ಆಗಿಹೋಗಿದೆ. ಈವತ್ತು ಬೇವಿನಕಡ್ಡೀಲಿ ಹಲ್ಲುಜ್ಜು.

ಉಚ್ಚಾರಭೇದ: ಬಟ್ಟು (ಬೊಟ್ಟು)

<karibaTTu> Black powder made by burning the cake of cow dung - A round flat made of cow dung is burnt mixed with paddy husk so that it should not become ash, is used for brushing teeth. It is called as Karibattu. To brush teeth, they also use neem stick.

Eg: Karibattu is exhausted. Use neem stick for brushing teeth.

Different pronunciation: Battu (Bottu)

227. ಕರಿದಾರ: ನೋಡಿ: ಉಡುದಾರ

<karidaara> (-) Black thread used to tie to the waist.

See: Ududaara.


228. ಕಲಗಚ್ಚು: ಅನ್ನ ಮಾಡಲು ಮುಂಚೆ ಅಕ್ಕಿಯನ್ನು ನೀರಿನಿಂದ ತೊಳೆದು ಬಸಿದರೆ ಬರುವ ನೀರು **ಕಲಗಚ್ಚು**. ಕಲಗಚ್ಚನ್ನು ತರಕಾರಿ ಸಿಪ್ಪೆ, ಅಕ್ಕಿಯ ತೌಡು ಮುಂತಾದುವುಗಳೊಂದಿಗೆ ಬಾನಿಯಲ್ಲಿ ಬೆರೆಸಿ ದನಕರುಗಳ ಆಹಾರವಾಗಿ ಉಪಯೋಗಿಸುತ್ತಾರೆ. ಕಲಗಚ್ಚನ್ನು **ಅಕ್ಕಚ್ಚು** ಎಂದೂ ಕರೆಯುತ್ತಾರೆ.

ಉದಾ: ಕಮಲೀ, ಕೊಟ್ಟಿಗೇಲಿ ಕಲಗಚ್ಚನ್ನ ಹಸುಗೆ ಇಟ್ಟಿದೀಯಾ?

<kalagachhu> Water in which rice has been washed - The water coming out of rice when washed before baking is called kalagachhu. It is mixed with vegetable skin, rice skin, in a trough and used as food for the cow. Kalagachhu is also called as Akkachhu.

Eg: Kamali, have you put kalagachhu for the cow?

229. ಕಲಬತ್ತು: ಆಯುರ್ವೇದ ಪಂಡಿತರು ತುಳಸಿ, ಬೇವಿನ ಎಲೆ ಮುಂತಾದುವುಗಳನ್ನು ಔಷಧಿ ಮಾಡುವುದಕ್ಕೆ ಉಪಯೋಗಿಸುವ ಸಣ್ಣ ಒರಳಿಗೆ ಕಲಬತ್ತು ಎಂದು ಹೆಸರು. ಕಲಬತ್ತನ್ನು ಮತ್ತು ಅರೆಯುವ ಗುಂಡನ್ನು ಬಿಳಿಯ ಕಲ್ಲಿನಿಂದ ಮಾಡುತ್ತಾರೆ. ಅರೆಯುವಗಿಂಡಿ ಎಂಬುದು ಕಲಬತ್ತಿಗೆ ಇನ್ನೊಂದು ಹೆಸರು.



ಉದಾ: ಆ ಕಲಬತ್ತನ್ನು ಈ ಕಡೆ ತಂದಿಡು.

ನೋಡಿ: ಕುಟ್ಟಾಣಿ

<kalabathhu> Small stone mortar and pestle - A small milling stone used by Ayurvedic Pandits for grinding neem leaf, Tulasi for preparing medicine is known as Kalabathhu. This and the round stick for grinding are made of white stone. Areyuvagindi is also another name for Kalabatthhu.

Eg: Bring that Kalabathhu and keep this side.

See: Kuttani



230. ಕಲಸೋರೆ: ಕಲಸೋರೆ ಒಂದು ವಿಧವಾದ ಬಿಳಿಯ ಬಳಪದಕಲ್ಲಿನಿಂದ ತಯಾರಿಸಿರುವುದು. ಒಂದು ಅಡಿ ಎತ್ತರ ಚಚ್ಚಾಕವಾದ ಕಲ್ಲನ್ನು ಕೊರೆದು ಮಾಡುತ್ತಾರೆ. ಕಲ್ಲು ನಯವಾಗಿ ಇರುವುದರಿಂದ ಹರಿತವಾದ ಚಾಕುವಿನಿಂದ ಕೊರೆಯಬಹುದು. ಇದರಲ್ಲಿ ಸಾರು, ಹುಳಿ ಮುಂತಾದ ಅಡುಗೆ ಪದಾರ್ಥಗಳನ್ನು ಮಾಡಿದರೆ ಅವು ಕೆಡುವುದಿಲ್ಲ. ಕಲಸೋರೆಯನ್ನು ನೇರವಾಗಿ ಒಲೆಯ ಮೇಲಿಡಬಹುದು. ಉಪ್ಪಿನಕಾಯಿ ಮಾಡಿ ಕಲಸೋರೆಯಲ್ಲಿಟ್ಟರೆ ತಿಂಗಳಾನುಗಟ್ಟಲೆಯಾದರೂ ಕೆಡುವುದಿಲ್ಲ. ಇದನ್ನು **ಕಲ್ಲುಮರಿಗೆ** ಎನ್ನುತ್ತಾರೆ ಕೆಲವರು.

ಉದಾ: ಅಟ್ಟದಮೇಲಿರೋ ಕಲಸೋರೆಯನ್ನು ಕೆಳಗಿಳಿಸು.

<kalasore> (-) Vessel made of soft white stone - Kalasore is made of soft white stone. They drill a square stone and do this. Since stone is soft it can be drilled with a sharp knife. When Rasam, Sambar etc. prepared in this vessel do not spoil. The vessel can be put on the oven straight away. Pickle can be kept in this for months together. Some people call it as Kallumarige.

Eg: Bring down the kalasore from top.

231. ಕಲ್ಲಿಚೀಲ: ದಾರದ ನೂಲಿನಿಂದ ಹೆಣೆದ ಸಣ್ಣ ಚೀಲ. ವ್ಯಾಪಾರಸ್ಥರು ಸಂತೆಯಲ್ಲಿ ವ್ಯವಹಾರ ನಡೆಸುವಾಗ **ಕಲ್ಲಿಚೀಲದಲ್ಲಿ** ಹಣವನ್ನು ಇಟ್ಟುಕೊಂಡು ದೊಡ್ಡ ದಾರದಿಂದ ಆ ಚೀಲವನ್ನು ಕುತ್ತಿಗೆಗೆ ನೇತುಹಾಕಿಕೊಂಡಿರುತ್ತಿದ್ದರು. ಆಗ ಕಾಗದದ ನೋಟುಗಳು ಇನ್ನೂ ಬಳಕೆಗೆ ಬಂದಿರಲಿಲ್ಲ. ಪ್ರಯಾಣಮಾಡುವಾಗ

ದಾರಿಯಲ್ಲಿ ತಿನ್ನಲು ಆಹಾರವನ್ನು ತೆಗೆದುಕೊಂಡುಹೋಗುವ ಚೀಲವಾಗಿ ಕಲ್ಲಿಚೀಲವನ್ನು ಬಳಸುತ್ತಾರೆ. ಆಗ ಇದನ್ನು **ಬುತ್ತಿಚೀಲ** ಎನ್ನುತ್ತಾರೆ. ಎಲೆಅಡಿಕೆಗೆ ಬಳಸುವ ಚೀಲವನ್ನು **ಸಂಚಿ** ಎಂದೂ ಹೇಳುವರು.

ಉದಾ: ನಾಳೆ ರೈಲುಪ್ರಯಾಣ ಮಾಡಬೇಕಾಗಿದೆ. ಬುತ್ತಿಚೀಲದಲ್ಲಿ ಪುಳಿಯೋಗರೆ ಮಾಡಿಟ್ಟಿಡು.

ನೋಡಿ: ಸಂಚಿ

<kallicheela> (-) Small bag stitched using cotton thread. Merchants while transacting in flea market, used to keep money in this bag and tying a big thread hanging in the neck. At that time there was no paper currency notes. While travelling they use kallicheela for keeping food. Then they call it as Buthhicheela.

Eg: Tomorrow we must travel in train. Prepare tamarind rice and keep in butticheela.

See: Sanchi.

232. ಕಲ್ಲುಮುಳ್ಳು: ಬೀಸುವಕಲ್ಲಿನಲ್ಲಿ ಅಕ್ಕಿ, ರಾಗಿ ಎಲ್ಲವನ್ನು ಬೀಸಿ ಒಳಭಾಗ ಸವೆದುಹೋದರೆ ಅದಕ್ಕೆ ಕಲ್ಲುಮುಳ್ಳು ಹುಯಿಸುತ್ತಾರೆ. ಆಗ ಅದು ತರಕಲುತರಕಲಾಗಿ ಪುನಃ ಬೀಸುವುದಕ್ಕೆ ಸಾಧ್ಯವಾಗುತ್ತೆ. ಕಬ್ಬಿಣದ ಚಾಣದಿಂದ ಕುಟ್ಟಿ ಮಾಡುತ್ತಾರೆ. ಆ ವೃತ್ತಿಯವರು ಕಲ್ಲುಮುಳ್ಳುಹುಯಿಸೋರೂ ಎಂದು ಬೀದಿಯಮೇಲೆ ಕೂಗುತ್ತಾ ವರ್ಷದಲ್ಲಿ ಒಂದೆರಡು ಬಾರಿ ಬರುತ್ತಾರೆ.

ಉದಾ: ನಮ್ಮ ಮನೆ ಬೀಸುವಕಲ್ಲು ತುಂಬಾ ನಯವಾಗಿಬಿಟ್ಟಿದೆ. ಕಲ್ಲುಮುಳ್ಳುಹುಯಿಸೋರು ಬಂದರೆ ಸ್ವಲ್ಪ ತಿಳಿಸಿ.

<kallumuLLu> (-) After grinding rice, ragi etc. in the grinding stone, the inner portion of the stone becomes wear out, they get the stone redone. It is called kallumulluhyysuvudu. Stone becomes a little rough, making it easy to grind. With small iron chisel, they beat. The professionals shouting on the road loudly 'kallumullu huyisoroo' come one or two times in a year.

Eg: The grinding stone in our house has become fully flat. Please let us know if Kallumulluhuyisoru come.



233. ಕವಣೆಕಲ್ಲು: ಸುಮಾರು ಒಂದೂವರೆ ಅಡಿ ಉದ್ದದ ಬಿದಿರುಕೋಲಿನ ಒಂದು ತುದಿಯನ್ನು ಸೀಳಿ ಅದರ ಮಧ್ಯೆ ಸಣ್ಣಕಲ್ಲನ್ನಿಟ್ಟು ಬೀಸಿದಾಗ ಕವಣೆಕಲ್ಲು ತುಂಬಾ ದೂರಕ್ಕೆ ಹೋಗುತ್ತೆ. ಹೊಲ, ಗದ್ದೆಗಳಲ್ಲಿ ಗುಬ್ಬಿ, ಹಕ್ಕಿಪಕ್ಷಿಗಳನ್ನು ಓಡಿಸಲು ಈ ತರಹ **ಕವಣೆಕಲ್ಲನ್ನು** ಉಪಯೋಗಿಸುತ್ತಾರೆ.

ಉದಾ: ಹೊಲಕ್ಕೆ ಹೋಗುವಾಗ ಕವಣೆಕಲ್ಲು ತಗಂಡ್‌ಹೋಗು.

<kavaNekallu> Catapult - About one-and-a-half-foot length bamboo stick is slit apart to make it two parts and putting a small stone in between swing the stick. The stone will go far off. In paddy field to chase bat, birds etc. they use this.

Eg: When you go to the paddy field take kavanekallu with you.

234. ಕವಳಿಗೆ: ವೀಳ್ಳೇದೆಲೆಯನ್ನು ಮಾರಾಟ ಮಾಡುವಾಗ ಒಂದು ಕಟ್ಟಿನಲ್ಲಿ ಇಪ್ಪತ್ತು ಎಲೆಗಳಂತೆ ಜೋಡಿಸಿಟ್ಟಿರುತ್ತಾರೆ. ಇಪ್ಪತ್ತು ಎಲೆಗಳ ಕಟ್ಟಿಗೆ **ಕವಳಿಗೆ** ಎಂದು ಹೆಸರು. 100 ಎಲೆಗೆ **ಕಟ್ಟು,** 1000 ಎಲೆಗೆ ಪಿಂಡಿ ಎನ್ನುತ್ತಾರೆ. ನಾಲ್ಕು ಕವಳಿಗೆ, ಎಂಟು ಕವಳಿಗೆ ಎಲೆ ಕೊಂಡಾಗ ಅವನ್ನು ಬಾಳೆಪಟ್ಟೆಯಲ್ಲಿ ಕಟ್ಟಿಕೊಡುತ್ತಾರೆ. ಬಾಳೆಪಟ್ಟೆಯಲ್ಲಿ ಎಲೆಗಳನ್ನು ಇಟ್ಟರೆ ಅದು ಬೇಗ ಬಾಡಿಹೋಗುವುದಿಲ್ಲ.

ಉದಾ: ಬಸ್‌ನಲ್ಲಿ ಹೋಗಬೇಕು. ನಾಲ್ಕು ಕವಳಿಗೆ ವೀಳೆದೆಲೆ ಬಾಳೆಪಟ್ಟೇಲಿ ಕಟ್ಕೊಡಿ.

ನೋಡಿ: ಕಟ್ಟು, ಪಿಂಡಿ

<kavaLige> Bundle of twenty leaves - When selling pawn leaves, they keep twenty in one bundle. It is called kavalige. For hundred leaves and thousand leaves they say Pindi. If you buy four or eight bundles, wrap it in skin of plantain stem and give. If it is kept in that it will not fade away quickly.

Eg: We must travel in bus. Wrap four bundles of pawn leaves in plantain stem skin.

See: Kattu, Pindi **(bundle)**

235. ಕಷಾಯ: ತುಳಸಿ, ಬೇವು, ನುಗ್ಗೆ ಮುಂತಾದ ಎಲೆಗಳನ್ನು ನೀರಿನಲ್ಲಿ ಕುದಿಸಿ ಮಾಡುವ ಔಷಧಿಯನ್ನು **ಕಷಾಯ** ಎನ್ನುತ್ತಾರೆ. ಎಲೆಗಳ ಸಾರವೆಲ್ಲ ನೀರಿನಲ್ಲಿ ಬೆರೆತು ಒಗರಾದ ರುಚಿ ಬರುತ್ತೆ. ಕಾಫ಼ಿ ಮತ್ತು ಚಹಾ ಕಷಾಯವೂ ಬಳಕೆಯಲ್ಲಿದೆ. ಹಳ್ಳಿಗಳಲ್ಲಿ ಕಷಾಯದ ಬಳಕೆ ಹೆಚ್ಚು.

ಉದಾ: ಈ ಕಷಾಯ ಕುಡಿ, ಹೊಟ್ಟೆನೋವು ಹೋಗುತ್ತೆ.

<kashaaya> Decoction of medicinal herbs: The medicine prepared from Thulasi, neem, nugge (a kind of plant) leaves boiled in water and residue is used is called Kashaya. The juice of all leaves gets mixed and give a good taste. Coffee and tea decoctions are also in usage. In villages Kashaya is very common.

Eg: Drink this decoction. Stomach pain will reduce.

236. ಕಸಪೊರಕೆ: ನೋಡಿ: ನೊಜೆಹುಲ್ಲಿನಪರಕೆ (ಕಸಬರಲು)

<kasaporake> Broom stick Broom made of grass

See: Nojehullinaparake made of a kind of grass for broomstick.

237. ಕಸಿ ಮಾಡುವುದು: ಗುಲಾಬಿ, ದಾಸವಾಳ ಮುಂತಾದ ಹೂವಿನ ಮತ್ತು ಮಾವು, ಹಲಸು ಮೊದಲಾದ ಸಜಾತಿ ಗಿಡಗಳನ್ನು ಗಿಡಗಳ ಒಂದು ಕಡ್ಡಿಗೆ ಇನ್ನೊಂದನ್ನು ಸೇರಿಸಿ ಸುತ್ತ ಮಣ್ಣು ಕಟ್ಟಿ ವಿಭಿನ್ನವಾಗಿ ಬೆಳೆಸುವುದಕ್ಕೆ **ಕಸಿ ಮಾಡುವುದು** ಎನ್ನುತ್ತಾರೆ. ಒಂದು ಜಾತಿಯ ಮಾವಿನ ಗಿಡಕ್ಕೆ ಇನ್ನೊಂದು ಜಾತಿಯ ಮಾವಿನ ಕೊಂಬೆಯನ್ನು ಸೇರಿಸಿ ಕಸಿ ಮಾಡುತ್ತಾರೆ. ಕಸಿಮಾಡುವುದರಲ್ಲಿ ಮರಕಸಿ, ಬುಡಕಸಿ ಎಂದು ಎರಡು ವಿಧವಾಗಿವೆ.

ಉದಾ: ಕಸಿ ಮಾಡಿದ ಮಾವಿನ ಮರದಲ್ಲಿ ಈ ವರ್ಷ ಹೆಚ್ಚು ಹಣ್ಣು ಬಿಟ್ಟಿದೆ.

<kasimaaDuvudu> Grafting - Attaching a stem of rose, dasavala flower and mango, jack fruit etc. to another stem and tied around with mud and grow in a different type is known as kasimaduvudu. The stem of one variety of mango is grafted with another type and made a different variety. While making that, marakasi and budakasi are two types.

Eg: By grafting mango stem, this year we got more fruits.



238. ಕಳಶ: ಕಂಚಿನ ಗಿಂಡಿಯಲ್ಲಿ ನೀರು ತುಂಬಿ ಎರಡು ವೀಳ್ಳೇದೆಲೆಗಳನ್ನು ಅಥವಾ ಮಾವಿನ ಎಲೆಗಳನ್ನು ಸೆಕ್ಕಿಸಿ, ಅದರ ಮೇಲೆ ಅರಿಶಿನ, ಕುಂಕುಮ ಹಚ್ಚಿದ ತೆಂಗಿನಕಾಯನ್ನು ಇಟ್ಟು ಶುಭಕಾರ್ಯಗಳಲ್ಲಿ ಪೂಜಿಸುತ್ತಾರೆ. ಅದೇ **ಕಳಶ**. ದೊಡ್ಡದೊಡ್ಡ ಕಂಚಿನ ಕಳಶಗಳನ್ನು ದೇವಸ್ಥಾನದ ಗೋಪುರಗಳ ತುದಿಯಲ್ಲಿ ಸ್ಥಾಪಿಸುತ್ತಾರೆ. ಸಾಮಾನ್ಯವಾಗಿ ಇವುಗಳನ್ನು ಸಂಖ್ಯೆಗನುಸಾರವಾಗಿ ಪಂಚಕಳಶಗೋಪುರ, ಸಪ್ತಕಳಶಗೋಪುರ ಇತ್ಯಾದಿಯಾಗಿ ಕರೆಯುತ್ತಾರೆ.


ಉದಾ: ಕಳಶದಲ್ಲಿ ನೀರುತುಂಬಿ ತಂದಿಡು

ಉದಾ: ನಮ್ಮೂರಿನ ವೀರಭದ್ರೇಶ್ವರ ದೇವಸ್ಥಾನಕ್ಕೆ ಪಂಚಕಳಶ ಗೋಪುರವಿದೆ.

<kaLasha> Round metal vessel. During ritual ceremonies, they fill water in the vessel, attach two pawn leaves or mango leaves and on that put a coconut smeared with turmeric powder and kunkum for worshipping. This is called kalasha. They install big size brass kalashas on tower of the temple. Generally, it is called as Panchakalasha tower, Saptakalasha tower according to number.

Eg: Fill the water in Kalasha and keep it here.

Eg: In the Veerabhadreshwara temple of our village, there is Panchakalasha tower.



239 ಕಳಶಗಿತ್ತಿ: ಮದುವೆ ಸಮಾರಂಭಗಳಲ್ಲಿ, ವರನ ತಂಗಿಯುದು ಬಹು ಮುಖ್ಯಪಾತ್ರ. ಮದುವೆ ಕಾರ್ಯಕಲಾಪಗಳು ಮುಗಿಯುವವರೆಗೂ ಕಳಶ ಅವಳ ಕೈಯ್ಯಲ್ಲೇ ಇರುತ್ತೆ. ಅವಳನ್ನು **ಕಳಶಗಿತ್ತಿ** ಎನ್ನುತ್ತಾರೆ. ಕಳಶಗಿತ್ತಿಗೂ ಮದುವೆಯ ಉಡುಗೊರೆ ದೊರೆಯುತ್ತೆ!

ಕಳಶಗಿತ್ತಿಯ ಕೈಯ್ಯಲ್ಲಿ ತಟ್ಟೆ ಅದರಲ್ಲಿ ಒಂದು ಕಳಶ ಎರಡು ವೀಳ್ಳೇದೆಲೆಯೊಂದಿಗೆ. ಕಳಶಗಿತ್ತಿ ಸಾಮಾನ್ಯವಾಗಿ ಚಿಕ್ಕಹುಡುಗಿ ಆಗಿರ್ತಾಳೆ. ವಧೂ–ವರರ ತಂಗಿಯರು ಸಾಮಾನ್ಯವಾಗಿ ಕಳಶಗಿತ್ತಿ ಆಗುತ್ತಾರೆ. ಮದುವೆ ಆಗದ ಕನ್ಯೆಯರೂ ಕಳಶಗಿತ್ತಿಯರು ಆಗುವುದುಂಟು. ಹಾಗೆ ಕಳಶಗಿತ್ತಿಯಾದರೆ ಬೇಗ ಮದುವೆ ಆಗುತ್ತೆ ಎಂದು ನಂಬಿಕೆ ಇದೆ.

ಉದಾ: ಈ ಸಲ ನಮ್ಮ ರುಕ್ಕಿ ಕಳಶಗಿತ್ತಿ ಆಗ್ತಾಳೆ ರಾಮು ಮದುವೆಗೆ.

<kaLashagithhi> (-) Girl holding Kalasha - During marriage, the role of bridegroom's sisters is the main part. Till all the programs of marriage are over, kalasha will be in her hand. She is called Kalashagithhi. Kalashagithhi also gets Udugare (presents). In the hand of Kalashagithhi, a plate and one Kalasha with two pawn leaves will be there. Generally, she will be a small girl Bride and groom's sisters will be Kalashagithhi. Girls who are not married also become Kalashagithhi. It is the belief that she gets married soon.

Eg: This time our Rukki becomes Kalashagithhi during Ramu's marriage.

240. ಕಳಲೆ: ಬಿದಿರಿನ ಮೊಳಕೆಗೆ **ಕಳಲೆ** ಎನ್ನುವುದು ವಾಡಿಕೆಯಲ್ಲಿದೆ. ಕಳಲೆ ಬಹಳ ಮೃದುವಾಗಿರುತ್ತೆ. ಹೇರಳೇಕಾಯಿ ಮತ್ತು ನಿಂಬೇಕಾಯಿನ ಉಪ್ಪಿನಕಾಯಿನ ಜೊತೆಗೆ ಕಳಲೆ ಚೂರುಗಳನ್ನು ಬೆರೆಸುತ್ತಾರೆ. ಈ ತರಹ ಉಪ್ಪಿನಕಾಯನ್ನು ಬಿಸಿ ಅನ್ನಕ್ಕೆ ಹಾಕಿ ಕಲಸಿ ಊಟಮಾಡಲು ಬಹಳ ರುಚಿಯಾಗಿರುತ್ತೆ. ಕಳಲೆಯನ್ನು ಕೆಲವೆಡೆ ಕಳಿಲೆ ಎನ್ನುತ್ತಾರೆ.

ಉದಾ: ಕೊಳ್ಳೇಗಾಲಕ್ಕೆ ಹೋದಾಗ ನಮ್ಮ ಬೀಗರಮನೆಯಲ್ಲಿ ಊಟಕ್ಕೆ ಬಡಿಸಿದ್ದ ಕಳಲೆ ಹಾಕಿದ್ದ ಉಪ್ಪಿನಕಾಯಿ ತುಂಬ ರುಚಿಯಾಗಿತ್ತು.

ಸಮಾನಾರ್ಥಕ: ಕಳಿಲೆ

<kaLale> Bamboo shoot: It is in usage to call as Kalale for the bamboo shoot. It is quite soft. They mix pieces of Kalale for pickle of lemon. This kind of pickle with hot rice will be very tasty. Kalale is also called as Kalile in some places.

Eg: When we went to Kollegala, in the bridegroom's house the pickle with Kalale served for us was very tasty.

Equivalent: Kalile.

241. ಕಳ್ಳಿರೆಂಬೆ: ಸೊಳ್ಳೆ, ಗುಂಗುರುಗಳ ಕಾಟವನ್ನು ತಡೆಯಲು **ಕಳ್ಳಿಯ** ಒಂದು ರೆಂಬೆಯನ್ನು ಮನೆಯೊಳಗೆ ಕಟ್ಟಿರುತ್ತಾರೆ. ಸೊಳ್ಳೆ, ಗುಂಗುರುಗಳು ಅದರ ಮೇಲೆ ಮುತ್ತಿರುತ್ತವೆ. ತೋಟದ ಸುತ್ತಲೂ ಬೇಲಿಗೆ ಕಳ್ಳಿಯ ಗಿಡಗಳನ್ನು ಬೆಳೆಸುತ್ತಾರೆ

ಉದಾ: **ಸೊಳ್ಳೆಕಾಟ ಜಾಸ್ತಿ ಇದೆ ಕಳ್ಳಿರೆಂಬೆ ತಂದುಕಟ್ಟು.**

ನೋಡಿ: ಕೋಲ್ಕಳ್ಳಿ

<kaLLirembe> Cactus branch - To avoid nuisance of mosquitos etc. they tie a branch of cactus. Mosquitos will settle on it. Around the garden, they grow Kalli as fence.

Eg: Mosquitos are too much. Bring a branch of Kalli and tie.

See: KolkaLLi

242. ಕಳ್ಳಿಹಾಲು: ಕಳ್ಳಿ ಒಂದು ವಿಧವಾದ ಗಿಡ. ಇದರ ಹಾಲು ಬೆಳ್ಳಗಿರುತ್ತದೆ. ಕಾಲಿಗೆ ಮುಳ್ಳು ಹೊಕ್ಕಿದ್ದರೆ, ಅದರ ಮೇಲ್ಭಾಗಕ್ಕೆ ಕಳ್ಳಿಯಹಾಲನ್ನು ಹಾಕಿ ಸ್ವಲ್ಪ ಹೊತ್ತು ಬಿಟ್ಟರೆ ಆ ಭಾಗ ಮೃದುವಾಗಿ ಮುಳ್ಳಿನಚೂರು ಹೊರಕ್ಕೆ ಬರುತ್ತೆ.

ಉದಾ: ಕಳ್ಳಿಹಾಲು ಸಿಡಿಯುತ್ತೆ ಹುಷಾರು. ಕಣ್ಣು ಹೋಗುತ್ತೆ.

<kaLLihaalu> Juice of cactus - Kalli is a type of plant. The juice of Kalli is white. If a thorn has gone inside the leg, they put a little juice of kalli. After some time that portion will become soft and thorn comes out.

Eg: Juice of Kalli will pierce. Be careful. Otherwise, you will lose eye.

243. ಕಳೆಕೀಳುವುದು: ಹೊಲ, ಗದ್ದೆಗಳಲ್ಲಿ ಮುಖ್ಯವಾದ ಪೈರಿನ ನಡುವೆ ಬೇರೆ ಜಾತಿಯ ಗಿಡಗಳು, ಹುಲ್ಲು ಬೆಳೆಯುತ್ತವೆ. ಅವುಗಳನ್ನು ತೆಗೆಯುವುದಕ್ಕೆ **ಕಳೆಕೀಳುವುದು** ಎಂದು ಹೇಳುತ್ತಾರೆ. ಕಳೆ ಕೀಳದಿದ್ದರೆ, ಗೊಬ್ಬರದ ಸಾರವೆಲ್ಲ ಬೇರೆ ಜಾತಿಯ ಗಿಡಗಳಿಗೆ ಹೋಗಿ, ಮುಖ್ಯವಾದ ಪೈರಿನ ಬೆಳೆವಣಿಗೆ ಕಡಮೆಯಾಗುತ್ತೆ. **ಅಯ್‌ನೆಲ್ಲು** ಎಂದೂ ಕಳೆಗೆ ಹೇಳುತ್ತಾರೆ.

ಉದಾ: ಕಳೆಕೀಳಲು ಚೆನ್ನೇಗೌಡನಪಾರ್ಟಿ ಅವರು ಇನ್ನೂ ಬಂದಿಲ್ಲ.

ಸಮಾನಾರ್ಥಕ: ಅಯ್‌ನೆಲ್ಲು

ನೋಡಿ: ಅಯ್‌ನೆಲ್ಲು, ಕೆಸರುಗದ್ದೆ

<kaLekeeLuvudu> Plucking weeds - In paddy field in between the main crop different varieties of weeds grow. To remove that it is known as kalekeeluvudu (removing of weeds). If weeds are not removed, the essence of manure will go to weeds and growth of main crop will reduce. Weed is also called

as ainellu.

Eg: To remove weeds, the group of Channegowda has not yet come.

Equivalent: Ainellu.

See: Ainellu, Kesarugadde (wet soil field)

244. ಕ್ರಯಚೀಟಿ: ನೋಡಿ: ಒಪ್ಪಂದಪತ್ರ

<krayacheeti> See: Oppandapathra **(Sale Deed)**

245. ಕಾಗದಪತ್ರ: ಜಮೀನು ಕೊಂಡುಕೊಂಡು ಒಪ್ಪಂದಮಾಡುವಾಗ **ಕಾಗದಪತ್ರ** ಮಾಡಿಸುವುದು ಎಂದು ಹೇಳುತ್ತಾರೆ.

ಉದಾ: ನಮ್ಮ ತ್ವಾಟದ ಆಚೆಗಿರುವ ಒಂದು ಎಕರೆ ಹೊಲವನ್ನು ನಾವೇ ಕರೀದಿಮಾಡಿದೆವು. ನೆನ್ನೆ ಶ್ಯಾನುಭೋಗರು ಕಾಗದಪತ್ರ ಮಾಡಸವ್ರೆ.

<kaagadapathra> Sale deed - After buying a property, to make an agreement is called kagadapathra.

Eg: The one-acre land beyond our garden, we only purchased. Tomorrow the Shanbhog will do agreement.



246. ಕಾಗೆಶಕುನ: ಕಾಗೆ ಸಾಮಾನ್ಯವಾಗಿ ಮನೆಯೊಳಕ್ಕೆ ಬರುವುದಿಲ್ಲ, ಅಕಸ್ಮಾತ್ ಕಾಗೆ ಒಳಕ್ಕೆ ಬಂದರೆ ಆ ಮನೆಯಲ್ಲಿ ಅಶುಭದ ಸೂಚನೆ ಎಂದು ತಿಳಿಯುತ್ತಿದ್ದರು. ಮನೆಯಲ್ಲಿ ವಾಸವಾಗಿರುವ ಯಾರಿಗಾದರೂ ಖಾಯಿಲೆಯಾಗಬಹುದು, ಸಾವು ಬರಬಹುದು ಅನ್ನುವ ಭಯ. ಒಂದೆರಡು ದಿವಸ ಮನೆಯನ್ನು ಬಿಟ್ಟು ಬೇರೆ ಯಾರ ಮನೆಯಲ್ಲಾದರು ಇದ್ದು ನಂತರ ಮನೆಗೆ ವಾಪಸ್ ಬರುತ್ತಿದ್ದರು.

ಉದಾ: ಪ್ರಯಾಣ ಸರಿಯಾಗಲಿಲ್ಲ, ಕಾಗೆ ಮನೆಯೊಳಕ್ಕೆ ಬಂದಿದೆ.

<kaageshakuna> Crow Omen - The crow generally, will not come inside the house. By chance if it comes inside the house, they used to understand it is a bad omen. Any person living in that house may get sickness, or die, is what they feared. One or two days they were going out of the house and stay in somebody's house and then return.

Eg: Travel was not smooth. Crow has come inside the house.

247. ಕಾಟಾಚಾರ: ಶ್ರದ್ಧೆಯಿಂದ ಮಾಡದೇ ಇರುವ ಕೆಲಸಕ್ಕೆ **ಕಾಟಾಚಾರ** ಎನ್ನುತ್ತಾರೆ.

ಉದಾ: ಕಳೆಗಿಳೆ ಎಲ್ಲ ಹಾಗಾಗೇ ಇದೆ. ಬರೀ ಕಾಟಾಚಾರದ ಕೆಲಸವೇ ಅವಂದು.

<kaataachaara> Careless work - The work done without faith is called Katachara (indifferent work)

Eg: Weeds are still prevalent. His work is full of indifference.

248. ಕಾರ್ತಿಕ ಸೋಮವಾರ: ಕಾರ್ತಿಕ ಮಾಸದ ಪ್ರತಿ ಸೋಮವಾರವೂ ಈಶ್ವರ ದೇವಾಲಯಗಳಲ್ಲಿ ಸಾಯಂಪೂಜೆ. ಕಡೆಯ ಸೋಮವಾರ ವಿಶೇಷ ಪೂಜೆ. ಮರದ ಕೋಲಿಗೆ ಹೊಸ ಬಟ್ಟೆಯನ್ನು ಸುತ್ತಿ ಎಣ್ಣೆಯಲ್ಲಿ ಅದ್ದಿ ಉರಿಸುತ್ತಾರೆ. ಕಡೆಯಲ್ಲಿ ಅದರ ಭಸ್ಮವನ್ನು ಎಲ್ಲರೂ ಹಣೆಗೆ ಹಚ್ಚಿಕೊಳ್ಳುತ್ತಾರೆ. ಬಂದವರಿಗೆಲ್ಲ ಪ್ರಸಾದ ವಿನಿಯೋಗ.

ಉದಾ: ಸೋಮೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಕಡೇ ಸೋಮವಾರ ವಿಶೇಷಪೂಜೆ ಇದೆ.

<kaartheeka somavaara> Karthik Monday - Every Monday in Karthik month evening there is pooja in Eashwara temple. The last Monday special pooja. For a wooden stick new white cloth is tied and dipped in oil and burnt outside the temple. At the end everyone smears the ash to his forehead. They offer Prasadam for everybody.

Eg: There is special pooja on last Monday of Karthik month in Someshwara temple.

249. ಕಾಫಿಬೆಲ್ಲ: ನೋಡಿ: ಅಚ್ಚುಬೆಲ್ಲ, ಕೊಪ್ಪರಿಗೆ

<kaafeebella> Coffee Jaggery


See: Achhubella, Kopparige

250. ಕಾಮನಹಬ್ಬ: ಕಾಮನ ಹಬ್ಬದಲ್ಲಿ ಹುಡುಗರು ಅವರಿವರ ಮನೆ ಹಿಂಭಾಗದಲ್ಲಿ ಹಾಕಿರುವ ಮರದ ತುಂಡುಗಳನ್ನು ಕದ್ದುತಂದು ಒಂದು ದಿಬ್ಬದ ಮೇಲೆ ಒಟ್ಟು



ಹಾಕುತ್ತಾರೆ. ಅದರ ಮಧ್ಯೆ ಒಂದು ಗಳುವಿಗೆ ಹಳೆಯ ಕೇರುವ ಮರವನ್ನು ಕಟ್ಟಿ ನೆಡುತ್ತಾರೆ. ಅದನ್ನು ತರುವಾಗ ಎಲ್ಲರೂ ಕಾಮನ ಕಟಿಗೆ, ಭೀಮನ ಬೆರಣಿ, ಅಡಕೇಗೋಟು, ಎಕ್ಕಡದೇಟು, ಈಸಾರಿ ಕಾಮಣ್ಣ ಹೀಗಾಯ್ತಲ್ಲ, ಆಸಾರಿ ಕಾಮಣ್ಣ ಹಾಗಾಯ್ತಲ್ಲ ಎಂಬ ಹಾಡನ್ನು ಗಟ್ಟಿಯಾಗಿ ಒರಲುತ್ತ ಕಟಿಗೆಯನ್ನು ಆ ಜಾಗಕ್ಕೆ ಸೇರಿಸುತ್ತಾರೆ. ಒಂದು ಸಲ ಅಲ್ಲಿಗೆ ಹಾಕಿದ ಸೌದೆಯನ್ನು ಯಾರೂ ಮುಟ್ಟುವುದಿಲ್ಲ. ಅದಕ್ಕೆ ಬೆಂಕಿ ಹಾಕಿ ಎಲ್ಲರೂ ಸುತ್ತ ನಿಂತು ಬಾಯಿ ಬಡಿದುಕೊಳ್ಳುತ್ತಾರೆ. ಬಂದವರೆಲ್ಲರಿಗೂ ಪುರಿ ಬತ್ತಾಸು ಹಂಚುವುದು ಪದ್ಧತಿ. ಮಾರನೆಯ ದಿನ ಕಟಿಗೆಯೆಲ್ಲ ಉರಿದು ಭಸ್ಮವಾಗಿರುತ್ತೆ. ಹುಡುಗರು ಆ ಭಸ್ಮವನ್ನು ಮೈಗೆಲ್ಲ ಬಳಿದುಕೊಂಡು ಸ್ನಾನ ಮಾಡುತ್ತಾರೆ. ಕಾಮನ ಹಬ್ಬದದಿನ ಎಲ್ಲರ ಮನೆಯಲ್ಲು ಪಾಯಸದೂಟ.

<kaamanahabba> Kama Festival - During the Kamanahabba, boys stealing wooden planks etc. from behind the houses and heap on a mound. In the middle they fix a bamboo pole tying an old bamboo fan. While they bring all that, they sing loudly shouting Kamana Katige, Bheemana berani, adakegotu, ekkadetu, this time Kamanna happened this way, that time Kamanna happened that way, they pile up the wood. When once the wood is piled up there, no one can touch it. They lit the fire standing around and beat up their mouth. It is the custom to offer Puri and candies to everyone. Next day all the wood will have been burnt. Boys will smear the ash to their body and take bath. On that day, every house will have meals with Kheer.



251. ಕಾಯೊಬ್ಬಟ್ಟು: ಬೆಲ್ಲಕ್ಕೆ ತೆಂಗಿನಕಾಯಿ ತುರಿಯನ್ನು ಬೆರೆಸಿ ಹೂರಣ ಮಾಡಿ ಅದನ್ನು ಸಣ್ಣರವೆಯಲ್ಲಿ ಕಲಸಿ ಮಾಡಿದ ಕಣಕದೊಳಗಿಟ್ಟು ಹಾಳೆಯಂತೆ ಒತ್ತಿ ಕಾವಲಿಯು ಮೇಲೆ ಬೇಯಿಸಿದರೆ ಅದು ಕಾಯೊಬ್ಬಟ್ಟು. ಗಣಪತಿ ಹಬ್ಬದ ದಿನ ಕರಿಗಡುಬನ್ನು ಮಾಡಿದರೆ, ಗೌರಿಹಬ್ಬದ ದಿನ ಕಾಯೊಬ್ಬಟ್ಟನ್ನು ಮಾಡುತ್ತಾರೆ.

ಮುತ್ತೈದೆಯಾಗಿ ಸತ್ತುಹೋದವರ ವರ್ಷದ ತಿಥಿಗೆ **ಕಾಯೊಬ್ಬಟ್ಟನ್ನು** ಮಾಡುವುದು ಹಳ್ಳಿಗಳಲ್ಲಿರುವ ಸಂಪ್ರದಾಯ.

ನೋಡಿ: ಹೂರಣದೊಬ್ಬಟ್ಟು

<kaayobbattu> (-) A sweet made of rava, jaggery and coconut - Adding grated coconut to jaggery and make sweet stuff. Make a small ball, insert into the batter of fine rava and flatten it. Bake it on pan. That is Kayobbattu. On Ganesha festival if Karigadubu (a kind of sweet dish) is prepared, on Gouri festival day Kayobbattu is prepared.

If the wife dies before her husband, for the annual ritual ceremony of her, it is the custom in villages, to prepare Kayobbattu.

See: Hooranadobbattu.

252. ಕಾರಣೆಸಾರಣೆ: ಕಾರಣೆ ಕುಂಕುಮದ ಹಾಗೆಯೇ ಚಂದ್ರ ಒಂದು ವಿಧವಾದ ಕೆಂಪು ಹಳದಿ ಮಿಶ್ರಿತವಾದ ಬಣ್ಣ. ಚಂದ್ರವನ್ನು ಒಂದು ತೊಟ್ಟು ಹಾಲಿನೊಂದಿಗೆ ಬೆರೆಸಿ, ಗೋಡೆಗೆ ಸುಣ್ಣ ಹಚ್ಚಿದ ನಂತರ, ನೆಲದಿಂದ ಒಂದು ಅಡಿ ಎತ್ತರದಲ್ಲಿ ಉದ್ದಕ್ಕೂ ಆ ಬಣ್ಣವನ್ನು ಗೆರೆಯಾಗಿ ಎಳೆಯುತ್ತಾರೆ. ಅದಕ್ಕೆ ಕಾರಣೆ ಎಂದು ಹೆಸರು. ಹಳ್ಳಿಗಾಡಿನಲ್ಲಿ ಇದು ಸರ್ವೇಸಾಮಾನ್ಯ. ಸಾರಣೆ ಎಂದರೆ ನೆಲಸಾರಿಸುವುದು.

ಉದಾ: ಹಬ್ಬ ಬಂತು, ಮನೆಗೆ ಕಾರಣೆಸಾರಣೆ ಮಾಡಬೇಕು.

<kaaranesaarane> Decoration - Decorative colored stripes at the bottom of wall. Chandra is a mixture of red and yellow color. Mixing a pinch of Chandra with a spoon of milk, they write stripes at the bottom of wall. It is called Karane. It is very common in villages. Sarane means washing the floor.

Eg: Festival is approaching. Karanesarane must be done to the house.

253. ಕಾಲ್ಮಣೆ: ನೋಡಿ: ಇಳಿಮೇಜು (ಕಾಲ್ಮೇಜು)

<kaalmane> Small Table - See Ilimeju (Kalmeju)

254. ಕಾಲ್ದಾರಿ: ಮುಖ್ಯವಾದ ರಸ್ತೆಗಳನ್ನು ಬಿಟ್ಟು ಸಣ್ಣ ದಾರಿಗಳಲ್ಲಿ ನಡೆದುಕೊಂಡು ಹೋಗುವುದು ಕಾಲ್ದಾರಿ. ಪಕ್ಕದ ಹಳ್ಳಿಗೆ ರಸ್ತೆಯಲ್ಲಿ ಹೋದರೆ ನಾಲ್ಕು

ಮೈಲಿಗಳಾಗುತ್ತೆ. ಕಾಲ್ದಾರಿಯಲ್ಲಿ ನಡೆದರೆ ಕೇವಲ ಎರಡೇ ಮೈಲಿ.

ಉದಾ: ಬುಕ್ಕಾಂಬುಧಿಗೆ ಈ ಕಡೆ ಕಾಲ್ದಾರಿಲಿ ಹೋದರೆ 3 ಮೈಲಿ ಆಗುತ್ತೆ.

<kaaldaari> Avoiding main roads to walk in small roads is kaldari. For the neighboring village, if you go in main road, it will be four miles. If walk in small road, it is just two miles.


Eg: To Bukkambudhi if walk this side in small road, it will be three miles.

255. ಕಾಲುವೆ: ಕೆರೆಯ ನೀರನ್ನು ತೋಟ, ಗದ್ದೆಗಳಿಗೆ ಬಳಸುವಾಗ ಕಾಲುವೆಯ ಮುಖಾಂತರ ನೀರನ್ನು ಹಾಯಿಸುತ್ತಾರೆ. ತೋಟಗಳ ಮುಂಭಾಗದಲ್ಲಿ ಉದ್ದಕ್ಕೂ **ಕಾಲುವೆ**ಯನ್ನು ತೋಡಿರುತ್ತಾರೆ. ಯಾವಾಗ ಬೇಕೆಂದರೆ ಆವಾಗ ಕೆರೆಯ ನೀರನ್ನು ಕಾಲುವೆಗೆ ಬಿಡಬಹುದು. ಆಯಾಯ ತೋಟದ ಮುಂಭಾಗದಲ್ಲಿ ಕಾಲುವೆಗೆ ಅಡ್ಡ ಮಣ್ಣಿನ ಗುಡ್ಡೆಯನ್ನು ಮಾಡಿ ನೀರನ್ನು ತಡೆದು ತೋಟಕ್ಕೆ ಹಾಯಿಸುತ್ತಾರೆ.

ಉದಾ: ಪಾತ್ರೆಯನ್ನು ತೊಳೆಯುವುದಕ್ಕೂ, ಬಟ್ಟೆಗಳನ್ನು ಒಗೆಯುವುದಕ್ಕೂ ಹಳ್ಳಿಯ ಹೆಂಗಸರು ಕಾಲುವೆಗೆ ಹೋಗುತ್ತಿದ್ದರು.

<kaaluve> Canal - To use tank water for garden and paddy field, water is flowed through canal. Canal is dug in front of garden throughout. Tank water can be diverted to the canal whenever required. Near the garden they stop the flow of water by putting across a heap of mud and divert the water to flow inside.

Eg: To wash vessels and clothes the village women were going to the canal.



256. ಕಾಲ್ಮೇಜು: ಸುಮಾರು ಎರಡು ಅಡಿ ಉದ್ದ, ಒಂದೂವರೆ ಅಡಿ ಅಗಲದ ಮರದ ಹಲಗೆಗೆ ಕಾಲ್ಮೇಜು ಎನ್ನುತ್ತಾರೆ. ಅದರ ಎತ್ತರ ಒಂದೂವರೆ ಅಡಿ ಮಾತ್ರ. ಮೇಲ್ಗಡೆ ಹಲಗೆ ಸ್ವಲ್ಪ ಇಳಿಜಾರಾಗಿರುವುದರಿಂದ ಅದರ ಮೇಲೆ ಪುಸ್ತಕವನ್ನಿಟ್ಟು ಬರೆಯಲು ಅನುಕೂಲವಾಗಿರುತ್ತೆ. ಅದರ ಒಂದು ಅಂಚಿಗೆ ಮರದ ಪಟ್ಟಿಯನ್ನು ಜೋಡಿಸಿರುವುದರಿಂದ ಪುಸ್ತಕಗಳು ಕೆಳಕ್ಕೆ ಜಾರಿ ಬೀಳುವುದಿಲ್ಲ. ಮೇಲ್ಭಾಗದ ಮುಚ್ಚಳವನ್ನು ತೆಗೆದು ಒಳಗಡೆ

ಪುಸ್ತಕಗಳನ್ನು ಇಟ್ಟುಕೊಳ್ಳಬಹುದು. ಪ್ರತಿಯೊಬ್ಬ ಹಳ್ಳಿಯ ಶ್ಯಾನುಭೋಗರ ಮನೆಯಲ್ಲಿ ಈ ತರಹ ಕಾಲ್ಮೇಜು ಇದ್ದೇ ಇರುತ್ತದೆ. ಶ್ಯಾನುಭೋಗರ ಕಾಗದ ಪತ್ರ ವ್ಯವಹಾರಗಳೆಲ್ಲ ಕಾಲ್ಮೇಜಿನ ಮೇಲೆಯೆ. ಇದನ್ನು **ಕಾಲ್ಮಣೆ, ಇಳಿಮೇಜು** ಎಂದೂ ಕರೆಯುತ್ತಾರೆ.

ಉದಾ: ಏನ್ ಶ್ಯಾನುಭೋಗರೇ ಬೆಳಿಗ್ಗೇನೆ ಕಾಲ್ಮೇಜಿನ ಮುಂದೆ ಕುಂತ್ಬಿಟ್ಟಿದೀರಿ?

ನೋಡಿ: ಇಳಿಮೇಜು, ಕಾಲ್ಮಣೆ

<kaalmeju> A small table with slope: About two feet length, one-and-a-half-foot width wooden plank with four legs is known as kalmeju. The height will be just one-and-half-foot. The upper plank is slope; hence it is easy to place books on it and write. Since a small wooden strip is fixed to one edge, the books will not fall. The upper plank can be lifted, and books kept inside. In every house of village Shanbhog, there will be this Kalmeju. All writings of transaction of Shanbhog will be on Kalmeju. They also call it as Kalmane.

Eg: What Shanbhog you are sitting in front of Kalmeju so early in the morning?

See: Ilimeju, Kalmane.

257. ಕಾಶೀಯಾತ್ರೆ: ಮದುವೆಯ ಅಂಗವಾಗಿ ಎರಡನೆ ದಿನದ ಕಾರ್ಯಕ್ರಮ **ಕಾಶೀಯಾತ್ರೆ**ಯಿಂದ ಪ್ರಾರಂಭವಾಗುತ್ತೆ. ವರನನ್ನು ಚಪ್ಪರದ ಹೊರಗಡೆ ಮಣೆಯ ಮೇಲೆ ನಿಲ್ಲಿಸಿ ಹೆಣ್ಣಿನ ತಂದೆ ವರನ ಕಾಲನ್ನು ತೊಳೆದು ಅವನ ಕೈಗೆ ಅಲಂಕರಿಸಿರುವ ಬೀಸಣಿಗೆ ಮತ್ತು ಅರಿಶಿನ ಹಚ್ಚಿದ ತೆಂಗಿನಕಾಯನ್ನು ಕೊಡುತ್ತಾರೆ. ಹೆಣ್ಣಿನ ಕಡೆಯವರ ಪೈಕಿ ಒಬ್ಬರು ಅವನ ತಲೆಯ ಮೇಲೆ ಛತ್ರಿ ಹಿಡಿದಿರುತ್ತಾರೆ. ಅವನ ಹೆಗಲಿಗೆ ಪಂಚೆಯಲ್ಲಿ ಅಕ್ಕಿ, ಬೇಳೆ ಗಂಟನ್ನು ಹಾಕಿರುತ್ತಾರೆ. ವರನಿಗೆ ಆರತಿ ಎತ್ತಿ ಚಪ್ಪರದ ಒಳಕ್ಕೆ ಕರೆತರುತ್ತಾರೆ. ಅದೇ ಕಾಶೀಯಾತ್ರೆ.

ಉದಾ: ಇನ್ನೇನು ವರನ ಕಾಶೀಯಾತ್ರೆ ಪ್ರಾರಂಭವಾಗುತ್ತೆ ಸ್ವಲ್ಪ ತಡೀರಿ.

<kaasheeyathre> (-) One of the program of marriage functions - As part of the marriage, the second day's program begins with Kashiyathre. They make the bridegroom stand in front of the pandal on a wooden plank. The bride's father washes


his legs and give him a decorated fan and coconut smeared with turmeric powder. One of the bride's party will hold an umbrella on his head. On his shoulder, rice, dal etc. tied in a dhothi is put. The women swing lighted lamp in front of him and bring him inside. This is Kashiyathre.

Eg: The bridegroom's Kashiyathre will begin in no time. Wait.

258. ಕಾಸು: ನೋಡಿ: ಪಾವಲಿ

<kaasu> The smallest copper coin

See: Pavali (Coin of a quarter of rupee)



259. ಕಿಗ್ಗಾಣಿ: ಏನೂ ಬೆಲೆ ಬಾಳದಿರುವುದಕ್ಕೆ ಕಿಗ್ಗಾಣಿ ಎನ್ನುವುದು ರೂಢಿ. ಕಾಣಿ ಒಂದು ಚಿಕ್ಕ ನಾಣ್ಯ, ಅದಕ್ಕೂ ಕೆಳಗಿನದು ಕಿಗ್ಗಾಣಿ. ಚಿಕ್ಕಾಸು ಕಿಗ್ಗಾಣಿಗೆ ಇನ್ನೊಂದು ಹೆಸರು.

ಉದಾ: ನಮ್ಮ ಪಕ್ಕದ ಜಮೀನು ನಾಲ್ಕು ವರ್ಷಗಳಿಂದ ಪಾಳು ಬಿದ್ದಿದೆ. ಅದಕ್ಕೆ ಕಿಗ್ಗಾಣಿ ಬೆಲೆಯೂ ಇಲ್ಲ. ಅದನ್ನು ದುರಸ್ತಿ ಮಾಡಬೇಕಾದರೆ ಐದಾರು ಸಾವಿರ ರುಪಾಯಿ ತೆರಬೇಕಾಗುತ್ತೆ.

ನೋಡಿ: ಚಿಕ್ಕಾಸು

<kiggaani> Coin of very low cost - One which has no value is called Kiggani. Kani is a small coin. Kiggani is still below than Kani. Chikkaasu is another name for Kiggani.

Eg: Our neighbor field has become waste land from four years. It has no kiggani value. To make it fertile, must spend five to six thousand rupees.

260. ಕಿತ: ಸಲ, ಬಾರಿ, ಒಮ್ಮೆ ಎಂದು ಹೇಳುವುದಕ್ಕೆ **ಕಿತ** ಅನ್ನುವ ಪದ ಬಳಕೆಯಲ್ಲಿದೆ.

ನೋಡಿ: ಸಲ, ಬಾರಿ, ಒಮ್ಮೆ

<kitha> (-) To express one time, one, the word Kitha is in usage.

See: Sala, Bari, Omme

261. ಕಿತಾಪತಿ: ಕುಚೇಷ್ಟೆ ಮಾಡುವುದನ್ನು **ಕಿತಾಪತಿ** ಎನ್ನುತ್ತಾರೆ. ಮಾಡುವ ಕೆಲಸಕ್ಕೆ ಅಡ್ಡಿಯಾಗುವುದು.

ಉದಾ: ನಾನು ಎಷ್ಟೋ ಸಲ ನೋಡಿದೀನಿ ಆ ಕಡೇ ಮನೆ ಕುಪ್ಪಣ್ಣ ಇದಾನಲ್ಲಾ ಎಲ್ಲ ಅವಂದೇ ಕಿತಾಪತಿ.

<kithaapathi> Mischief - Mischief done by a person is Kithapathi. Obstructing for any work.

Eg: I have seen so many times. The last house Kuppanna, it is all his kithapathi (mischief).

262. ಕಿತ್ತಾನಾರು: ಕತ್ತಾಳೆಯ ಎಲೆಗಳನ್ನು ನೀರಿನಲ್ಲಿ ನೆನೆಸಿ ಸುಮಾರು ದಿವಸಗಳು ಬಿಟ್ಟರೆ ಅವು ಕೊಳೆತು ಮೆತ್ತಗಾಗುತ್ತವೆ. ನಂತರ ಅದನ್ನು ಕೊಡತಿಯಿಂದ ಜಜ್ಜಿದರೆ ಮೇಲಿನ ಸಿಪ್ಪೆಯೆಲ್ಲ ಬೇರ್ಪಟ್ಟು ಒಳಭಾಗದ ನಾರು ಗುಡ್ಡೆಯಾಗುತ್ತೆ. ಇದನ್ನು **ಕಿತ್ತಾನಾರು** ಎಂದು ಹೇಳುತ್ತಾರೆ. ಈ ನಾರಿನಿಂದ ಮಾಡಿದ ಹಗ್ಗ ರೇಷ್ಮೆಯಂತಿದ್ದು ಬಹಳ ಹೊಳೆಯುತ್ತಿರುತ್ತೆ. ಇದರಿಂದ ಉಡುವ ಪಂಚೆಯನ್ನೂ ಮಾಡುತ್ತಾರೆ. ಇದಕ್ಕೆ **ಮಗುಟ** ಎಂದು ಹೇಳುವುದು ರೂಢಿ. ಪೂಜೆ ಪುನಸ್ಕಾರವನ್ನು ಮಾಡುವಾಗ ಸಾಮಾನ್ಯವಾಗಿ ಕಿತ್ತಾನಾರಿನ ಮಗುಟವನ್ನು ಉಡುತ್ತಾರೆ.

ಉದಾ: ದೇವರಮನೇಲಿ ಕಿತ್ತಾನಾರಿನ ಮಗುಟ ಇದೆ, ಇಲ್ಲಿಗೆ ತಂದು ಇಡು.

ನೋಡಿ: ಮಗುಟ

<kithhaanaaru> Fiber of thorny leaves - The leaves of Kathhale if soaked in water and left for few days it decays and becomes soft. Then if beaten with iron hammer, the skin gets separated and fiber piles up. They call this as Kithhanaru. The rope made of this fiber will be like silk and shining. Dhothi is also made from this. It is common to express as Maguta (silk dhothi). While worshipping, they wear this.

Eg: In Pooja room there is Kithhanaru maguta. Bring and keep it here.

See: Silk Dhothi



263. ಕಿರಿಬಿದಿರು: ಕಿರಿಬಿದಿರು ಹೆಚ್ಚು ದಪ್ಪವಾಗಿಲ್ಲದ ಗಟ್ಟಿಯಾಗಿರುವ ಬೊಂಬು ಸುಮಾರು 3–4 ಬೆರಳುಗಳ ಗಾತ್ರ ಇದ್ದು ಬಹಳ ಎತ್ತರಕ್ಕೆ ಬೆಳೆದಿರುತ್ತೆ. 25–30 ಅಡಿ ಉದ್ದದ ಬಿದಿರನ್ನು ತಂದು ಅದರ ಒಂದು ತುದಿಗೆ ಕಬ್ಬಿಣದ ಕೊನೆಗತ್ತಿಯನ್ನು ಸೆಕ್ಕಿಸಿ, ತೆಂಗಿನಮರದಿಂದ ಕಾಯನ್ನು ಕೆಳಕ್ಕೆ ಬೀಳಿಸಲು ಉಪಯೋಗಿಸುತ್ತಾರೆ. **ದೋಟಿ** ಎಂಬುದು ಇನ್ನೊಂದು ಹೆಸರು.

ಉದಾ: ತೆಂಗಿನಮರ ಎತ್ತರ ಇಲ್ಲ. ದೋಟಿಯಿಂದ ಕಾಯಿಬೀಳಿಸು.

ನೋಡಿ: ದೋಟಿ

<kiribiduru> Small hard bamboo - Kiribidiru not too big in size but hard bamboo, about two inches size grows quite high. Bringing 25-30 feet height length bamboo, attaching an iron axle, use for plucking coconut from the tree. Doti is another name.

Eg: Coconut tree is not much height. Use Doti to pluck coconuts.

See: Doti

264. ಕಿರಿಕಿರಿ: ವೃಥಾ ತೊಂದರೆ ಮಾಡುವುದನ್ನು ಕಿರಿಕಿರಿ ಎನ್ನುತ್ತಾರೆ. ತೊಂದರೆ ನಮ್ಮಿಂದಲೂ ಆಗಬಹುದು, ಬೇರೆಯವರಿಂದ ನಮಗೂ ಆಗಬಹುದು. ಮಕ್ಕಳ ಕಿರಿಕಿರಿ ತಾಯ್ತಂದೆಯವರಿಗೆ ಸಾಮಾನ್ಯ. ದುಷ್ಟರು ಇತರರಿಗೆ ಕಿರಿಕಿರಿ ಮಾಡುವುದೂ ಸಾಮಾನ್ಯ.

ಉದಾ: ಸುಮ್ಮನೆ ಕಿರಿಕಿರಿ ಮಾಡ್ಬೇಡ, ಕೆಲಸ ನಿಯತ್ತಿನಿಂದ ಮಾಡುವುದನ್ನು ಕಲಿ.

<kirikiri> Harassment: To trouble others unnecessarily is called kirikiri. Trouble may be done by us, or by others to us. Troubling by children to parents is common. Wicked people troubling others is also common.

Eg: Simply do not harass. Learn to do the work honestly.

265. ಕಿರುನೆಲ್ಲಿಕಾಯಿ: ನೋಡಿ: ಅರನೆಲ್ಲಿಕಾಯಿ

<kirunelleekaayi> Gooseberry - See: Aranelleekaayi.

266. ಕಿವಿಚುಚ್ಚುವುದು: ಸಾಮಾನ್ಯವಾಗಿ ಮಗುವಿನ ಮೊದಲನೆ ಹುಟ್ಟಿದಹಬ್ಬದ ದಿನ ಕಿವಿಯನ್ನು ಚುಚ್ಚುತ್ತಾರೆ. ಅಕ್ಕಸಾಲೆ ಬಂದು ಚಿನ್ನದತಂತಿಯಿಂದ ತೂತು ಮಾಡುತ್ತಾನೆ. ನಮ್ಮೂರಿನಲ್ಲಿ ಹಿರಿಯ ಹೆಂಗಸರು ಆ ಕೆಲಸವನ್ನು ಮಾಡುತ್ತಿದ್ದರು ಚಿನ್ನದತಂತಿಯಿಂದ ಕಿವಿಯನ್ನು ಚುಚ್ಚಿ ಬಗ್ಗಿಸಿ ಅಲ್ಲೇ ಬಿಡುತ್ತಿದ್ದರು.

ಉದಾ: ಸುಶೀಲಳಿಗೆ ಕಿವಿಚುಚ್ಚಿದಾಗ ಬಹಳ ಅತ್ತಳು.

ನೋಡಿ: ಕಿವಿಯೋಲೆ, ಮೂಗುತಿ

<kivichuchhuvudu> Piercing the ear - Generally, on the first birthday of the child, they pierce the ear. The goldsmith comes and makes hole on the ear with golden wire. In our village the elderly women used to do that work. Piercing with golden wire, bend and leave it on the ear only.

Eg: While piercing the ear for Sushila, she cried very much.

See: Kiviyole, Mooguthi.

267. ಕೀಲೆಣ್ಣೆ: ಎತ್ತಿನ ಗಾಡಿಯ ಕಡಾಣಿಗೆ ಹಾಕುವ ಎಣ್ಣೆಗೆ **ಕೀಲೆಣ್ಣೆ** ಎನ್ನುತ್ತಾರೆ. ಕೀಲೆಣ್ಣೆ ಹಾಕಿದರೆ ಗಾಡಿ ಚಲಿಸುವಾಗ ಕಿರ್ರೆಂದು ಸದ್ದು ಮಾಡುವುದಿಲ್ಲ.

ಉದಾ: ರಂಗಾ ಚಕ್ರಗಳು ಕಿರ್ರೆನ್ನುತ್ತಿವೆ, ಕೀಲೆಣ್ಣೆ ಹಾಕು.

<keelenne> Lubricant oil - The oil smeared for the axle pin of bullock cart is known as Keelenne (lubricant oil). When that oil is put, the cartwheel while moving does not make creek sound.

Eg: Ranga, wheels are making sound, put some oil.

268. ಕುಂಟಂಪಿಲ್ಲಿ: ಕುಂಟಂಪಿಲ್ಲಿ ಆಟಕ್ಕೆ ನಾಡಹಂಚಿನ ಚೂರು ಸಾಕು. ಈ ಬಿಲ್ಲೆಯನ್ನು ಬಚ್ಚ ಎಂದು ಕರೆಯುತ್ತಾರೆ. ನೆಲದ ಮೇಲೆ ಏಳು ಚೌಕಾಕಾರದ ಗೆರೆಗಳನ್ನು ಬರೆದು, ಹಂಚಿನಚೂರನ್ನು ಗೆರೆಗೆ ತಗಲದಂತೆ



ಒಂಟಿಕಾಲಿನಿಂದ ನೂಕ ಬೇಕು. ಹಂಚಿನಚೂರು ಚೌಕದ ಒಳಗೆ ಬಿದ್ದರೆ, ಆ ಚೌಕದಲ್ಲಿ ಎರಡು ಕಾಲನ್ನೂ ಇಡಬಹುದು. ಕುಂಟಂಪಿಲ್ಲಿಯನ್ನು ಎರಡು ವಿಧದಲ್ಲಿ ಆಡುತ್ತಾರೆ.

<kuntampilli> A kind of play - For the game of Kuntampilli, a piece of local tile is enough. This piece is called Bachha. Writing on flour seven squares, the tile piece must be pushed from one square to the other by leg without touching the line. If that piece is fallen within the square you can place both the legs. Kuntampilli is played in two types.

269. ಕುಂದಲಿಗೆ: ಒರಳಿನಲ್ಲಿ ಭತ್ತ ಅಥವಾ ಕಾಳುಗಳನ್ನು ಕುಟ್ಟುವಾಗ ಅದು ಹೊರಗೆ ಚೆಲ್ಲದಂತೆ ತಡೆಯುವುದಕ್ಕಾಗಿ ಕುಂದಲಿಗೆಯನ್ನು ಉಪಯೋಗಿಸುತ್ತಾರೆ. ಇದನ್ನು ದಪ್ಪವಾದ ಮರದ ತುಂಡಿನಲ್ಲಿ ಮಧ್ಯೆ ಕೊರೆದು ಮಾಡುತ್ತಾರೆ. ಕಬ್ಬಿಣದ ಕುಂದಲಿಗೆಯೂ ಬಳಕೆಯಲ್ಲಿದೆ.

ಉದಾ: ನಿಮ್ಮ ಕುಂದಲಿಗೆ ಕೊಟ್ಟಿರಿ, ನಮ್ಮನೇದು ಮುರಿದುಹೋಗಿದೆ.


ನೋಡಿ: ಕುದುರು

<kundalige> (-) When pounding paddy or corns in the stone mortar, to see that is not spilled outside, they use Kundalige. It is made of big wood piece by drilling. Iron Kundalige is also in usage.

Eg: Please spare your Kundalige, ours is broken.


See: Kuduru.

270. ಕುಂಟೆ: ಹೊಲದಲ್ಲಿ ನೇಗಿಲಿನಿಂದ ಮಣ್ಣನ್ನು ಅಗೆದ ನಂತರ ಅದು ದಪ್ಪ ಹೆಂಟೆಯಾಗಿರುತ್ತೆ. ಹೆಂಟೆಗಳನ್ನು ಒಡೆದು ಮಣ್ಣನ್ನು ಸಮ ಮಾಡಲು ಉಪಯೋಗಿಸುವ ಉಪಕರಣಕ್ಕೆ ಕುಂಟೆ ಎನ್ನುತ್ತಾರೆ.



ಉದಾ ಕುಂಟೆ ಹೊಡೆಸಿಯಾಯಿತು, ನಾಳೆ ಬೀಜ ಬಿತ್ತಬಹುದು.

<kunte> Instrument of agriculture - After ploughing the mud in the field, it will be big lump. The equipment used for breaking the lump and levelling the ground is called Kunte.



271. ಕುಂಡ: ಹಳ್ಳಿಗಾಡುಗಳಲ್ಲಿ ಸಾಮೂಹಿಕವಾಗಿ ನಡೆಸುವ ಹವನ ಹೋಮಗಳಲ್ಲಿ ದೇವಸ್ಥಾನದ ಮುಂಭಾಗದಲ್ಲಿ ಚೌಕಾಕಾರವಾಗಿ ಮಣ್ಣಿನ ಕಟಕಟೆಯನ್ನು ಹಾಕಿ ಅದರೊಳಗೆ ಅಗ್ನಿಸ್ಥಾಪನೆ ಮಾಡುತ್ತಾರೆ. ಅದಕ್ಕೆ **ಯಾಗಕುಂಡ** ಅಥವಾ **ಅಗ್ನಿಕುಂಡ** ಎಂದು ಹೆಸರು. ಕುಂಡ ಎಂದರೆ ಮಡಕೆ ಎಂದರ್ಥವೂ ಇದೆ. ನೀರಿಡಲು, ತರಲೂ ಬಳಸುತ್ತಾರೆ. ಸಣ್ಣ ಪುಟ್ಟ ಗಿಡಗಳನ್ನು ಬೆಳೆಸುವುದಕ್ಕೆ ಉಪಯೋಗಿಸುವ ಮಣ್ಣಿನ ಪಾತ್ರೆಗೂ ಕುಂಡ ಎಂದೇ ಹೇಳುತ್ತಾರೆ.



ಉದಾ: ಅವರ ಮನೇಲಿ ಕುಂಡದಲ್ಲಿ ಅಲಂಕಾರದ ಗಿಡ ನೆಟ್ಟಿದ್ದಾರೆ, ನೋಡಲು ಚೆನ್ನಾಗಿದೆ.

ನೋಡಿ: ಅಗ್ನಿಕುಂಡ, ಯಾಗಕುಂಡ, ಮಡಕೆ

<kunda> Pot: In villages for doing ritual ceremonies like havan, homa, in front of temple, they construct a mud square type pit and install fire in that. It is called Yagnakunda or Agnikunda. Mud pot is also in usage for Kunda. It is used to bring or keep water.

To grow small plants also Kunda is used.

Eg: In their house, they have put decorative plant in Kunda. It looks fine.



272. ಕುಂಬಾರ: ಜೇಡಿಮಣ್ಣಿನಲ್ಲಿ ಮಡಕೆ, ಕುಡಿಕೆ, ಗುಡಾಣ ಮುಂತಾದುವನ್ನು ಮಾಡುವವನು ಕುಂಬಾರ. ಕೆರೆಯ ಅಂಗಳದಲ್ಲಿ ದೊರಕುವ ಕರಿಮಣ್ಣನ್ನು ನೀರಿನಿಂದ ಕಲಸಿ ಕಾಲಿನಿಂದ ಚೆನ್ನಾಗಿ ತುಳಿದು ಹದಮಾಡುತ್ತಾನೆ. ಆ ಮಣ್ಣನ್ನು ಯಾವ ರೀತಿ ಬೇಕಾದರೂ ತಿದ್ದಬಹುದು. ಮಡಕೆ, ಕುಡಿಕೆಗಳನ್ನು ಮಾಡುವಾಗ ಅದಕ್ಕೆ ಬೇಕಾಗುವ ಚಕ್ರಗಲ್ಲನ್ನು ಜೋರಾಗಿ ತಿರುಗಿಸಿ ಅದರ ಮೇಲೆ ಮಣ್ಣಿನ ಮುದ್ದೆಯನ್ನು ಇಟ್ಟು ಕೈಯ್ಯಲ್ಲಿ ಯಾವ ಆಕಾರಕ್ಕೆ ಬೇಕೋ ಹಾಗೆ ತಿರುವಿದರೆ ಮಡಕೆ, ಕುಡಿಕೆಗಳು ತಯಾರಾಗುತ್ತವೆ. ಕೆಂಪು ಜೇಡಿ ಮಣ್ಣನ್ನು ಕೂಡ ಇದೇ ರೀತಿ ಉಪಯೋಗಿಸುತ್ತಾರೆ. ಕೆಂಪು ಜೇಡಿ ಮಣ್ಣಿಗೆ ಹೆಚ್ಚು ಹದ ಮಾಡಬೇಕಾದ ಅವಶ್ಯಕತೆ

ಇರುವುದಿಲ್ಲ.

ಉದಾ: ಕುಂಬಾರಪೇಟೇಲಿ ಕುಂಬಾರರೇ ಜಾಸ್ತಿ.

<kumbaara> Pot maker - One who prepares pots, large earthern vessels, small decorative pots using white soil is called Kumbara. The black soil available in tank bed, is mixed with water and made to proper condition by pressing hard with leg. That mud can be converted to any shape. Turning the wheel with full force and putting the mud on that, pots of any shape can be made. Red soil is also used in the same way. For red soil there is no necessity to make it proper condition.

Eg: In Kumbarapete, there are many kumbaras.

273. ಕುಂಭದ್ರೋಣಮಳೆ: ನೋಡಿ: ಸೋನೆಮಳೆ, ಹನಿಮಳೆ, ಜಿಟಿಜಿಟಿಮಳೆ

<kumbhadronamale> Heavy Rain - See: Showers, drizzling, heavy rain.

274. ಕುಕ್ಕೆ: ನೋಡಿ: ಮಂಕರಿ

<kukke> See: Mankari (bamboo basket)


275. ಕುಚ್ಚುಮೊಟ್ಟೆ: ಈಚಲುಗರಿಯ ಬುಡದ ಸುಮಾರು ಒಂದು ಅಡಿ ಉದ್ದದಷ್ಟು ಭಾಗವನ್ನು ಇನ್ನೂ ಹಸಿಯಾಗಿರುವಾಗಲೆ ಒಂದು ತುದಿಯನ್ನು ಕಲ್ಲಿನಮೇಲೆ ಜಜ್ಜಿ ನೊಜೆಪರಕೆಯ ಹಾಗೆ ಮಾಡಿದರೆ ಗೋಡೆಗೆ ಸುಣ್ಣ ಬಳಿಯಲು ಅನುಕೂಲವಾಗುತ್ತೆ. ಅದಕ್ಕೆ ಕುಚ್ಚುಮೊಟ್ಟೆ ಎಂದು ಹೆಸರು.



ಉದಾ: ಸುಣ್ಣದ ಬಕೀಟು, ಕುಚ್ಚುಮೊಟ್ಟೆ ಈ ಕಡೆ ತಗಂಡು ಬಾ.

<kuchhumotte> Rough brush: About one foot of toddy palm leaf when it is still green, the one edge is pressed hard on the stone, it becomes like a broom and can be used to whitewash the wall with lime. It is named as Kuchhumotte.

Eg: Bring this side the bucket of lime and kuchhumotte (rough brush).



276. ಕುಟ್ಟಾಣಿ: ವಯಸ್ಸಾದವರು ಹಲ್ಲಿಲ್ಲದವರು ಗಟ್ಟಿ ಪದಾರ್ಥಗಳನ್ನು ಎಲೆ ಅಡಿಕೆ, ಪುಳ್ಳಂಗಾಯುಂಡೆ, ಚಕ್ಕುಲಿ ಮುಂತಾದುವನ್ನು ಕುಟ್ಟಿಕೊಂಡು ಪುಡಿ ಮಾಡಿ ತಿನ್ನಲು ಬಳಸುವ ಕಂಚಿನ ಬಟ್ಟಲು ಮತ್ತು ಕುಟ್ಟುವ ಕಂಚಿನ ಕಡ್ಡಿ ಇಟ್ಟುಕೊಂಡಿರುತ್ತಾರೆ. ಇದನ್ನೇ ಕುಟ್ಟಾಣಿ ಎನ್ನುತ್ತಾರೆ. ಇದನ್ನು ಏಲಕ್ಕಿ ಮೊದಲಾದುವನ್ನು ಕುಟ್ಟಲೂ ಬಳಸುತ್ತಾರೆ.

ಉದಾ: ಮಾತ್ರೆ ಕುಟ್ಟಬೇಕು. ಅಜ್ಜಿಯ ಕುಟ್ಟಾಣಿ ತಗಂಬಾ.

ನೋಡಿ: ಕಲಬತ್ತು

<kuttaani> (-) Heavy bronze cup with brass stick - Elderly people without teeth will keep a bronze cup and brass stick to pound hard stuff like betel leaf and arecanut, snacks and sweet balls made of peanut and jaggery. They say it is Kuttani. This is also used for pounding cardamom.

Eg: Must pound pill. Bring grandmother's Kuttani.


See: Kalabathhu.

277. ಕುಟೀರ: ಧಾರ್ಮಿಕ ಪ್ರವಚನ ನಡೆಸುವ ಸ್ಥಳವನ್ನು, ಸಾಧುಗಳು ಜಪಮಾಡುವ ಜಾಗವನ್ನು **ಕುಟೀರ** ಎಂದು ಕರೆಯುವುದುಂಟು.

ಉದಾ: ಶಿವಕುಟೀರದಲ್ಲಿ ನಿತ್ಯ ಪ್ರವಚನವಿದೆ.

<kuteera> Place where monks meditate - The place where religious discourses are being conducted, and monks where they meditate is called Kuteera.

Eg: Every day discourses take place in Shiva Kuteera.



278. ಕುಡುಗೋಲು: ಎತ್ತರಕ್ಕೆ ಬೆಳೆದಿರುವ ಹುಲ್ಲನ್ನು ಕತ್ತರಿಸಲು ಉಪಯೋಗಿಸುವ ಸಲಕರಣೆ. ಇದರಿಂದ ಏಳೆಂಟು ಭತ್ತ, ರಾಗಿಯ ತೆನೆಗಳನ್ನು ಒಟ್ಟಿಗೆ ಕತ್ತರಿಸಬಹುದು. ಕಬ್ಬಿಣದಿಂದ ತಯಾರಾದರೂ ಹೆಚ್ಚು ಭಾರವಿಲ್ಲದಿರುವುದರಿಂದ ಆಯಾಸವಾಗುವುದಿಲ್ಲ. ಮೂರು ಅಡಿ ಉದ್ದದ ಕಿರುಬಿದಿರಿನ ತುದಿಗೆ ಕುಡುಗೋಲನ್ನು ಕಟ್ಟಿ, ಮುಳ್ಳಿನ ಗಿಡಗಳನ್ನು ಕಿತ್ತುಹಾಕಲು ಉಪಯೋಗಿಸುತ್ತಾರೆ. ಕುಡುಗೋಲನ್ನು ಬೇರೆ ಪ್ರದೇಶಗಳಲ್ಲಿ ಕುಡ್ಲು, ಕೊಯಲುಗತ್ತಿ, ಕೊನೆಗತ್ತಿ ಎಂದೂ


ಕರೆಯುತ್ತಾರೆ.



ಉದಾ: ಕುಡುಗೋಲು ಡೊಂಕಿಬಿಟ್ಟಿದೆ, ಕಮ್ಮಾರನ ಅಂಗಡಿಗೆ ಹೋಗಿ ಮಟ್ಟ ಮಾಡಿಸ್ಬೇಕು.

<kudugolu> Sickle - An equipment used to cut grass grown at a height. With this can cut seven to eight paddy ears together. Though made of iron, because it is not heavy, you will not get tired. This equipment is attached to the edge of small bamboo stick of three feet length and used to cut thorny plants. This equipment is also called as Kudlu, Koyalugathhi, Konegathhi in some places.

Eg: Kudugolu is bent. Must get it levelled by blacksmith



279. ಕುಡಿಕೆ: ಕುಡಿಕೆಯೂ ಕೂಡ ಕೆರೆಯ ಮಣ್ಣಿನಿಂದ ತಯಾರಾದುದು. ಅರ್ಧ ಬಟ್ಟಲಿಗೂ ಕಡಮೆ ಗಾತ್ರದಲ್ಲಿದ್ದು ಅದನ್ನು ಬೆಂಕಿಯಲ್ಲಿಟ್ಟು ಸುಡುತ್ತಾರೆ. ಸಂಕ್ರಾಂತಿ ಹಬ್ಬದ ದಿನ ಕುಡಿಕೆಯ ಮೇಲೆ ಸುತ್ತಲೂ ಸುಣ್ಣದ ಪಟ್ಟೆ ಬಳಿದು ಅದರೊಳಕ್ಕೆ ಎಳ್ಳು ತುಂಬಿ ಮನೆಮನೆಗೂ ಹೋಗಿ ಬೀರುತ್ತಾರೆ. ಎಳ್ಳನ್ನು ನೀರಿನಲ್ಲಿ ನೆನೆಸಿ ಸ್ವಲ್ಪ ಕಾಲದ ನಂತರ ನೀರನ್ನು ಬಸಿದು ಎಳ್ಳನ್ನು ನೆಲದ ಮೇಲೆ ಹಾಕಿ ಕೈಯ್ಯಿಂದ ಉಜ್ಜುತ್ತಾರೆ. ಆಗ ಅದರ ಹೊಟ್ಟೆಲ್ಲ ಬೇರೆಯಾಗುತ್ತೆ. ನಂತರ ಬಾಣಲೆಯಲ್ಲಿ ಹುರಿದು, ಬೆಲ್ಲದ ಅಚ್ಚನ್ನು ಸಣ್ಣಗೆ ಚೂರು ಮಾಡಿ ಹುರಿಕಡಲೆ, ಕಡಲೇಕಾಯಿಬೀಜ, ಕೊಬರಿ ಬೆರೆಸಿ ಸಂಕ್ರಾಂತಿಎಳ್ಳು ಮಾಡುತ್ತಾರೆ.

ಉದಾ: ಸಂಜೆ ಬರುವಾಗ ಏಳೆಂಟು ಕುಡಿಕೆ ತಗಂಬಾ.

ನೋಡಿ: ಮಡಕೆ

<kudike> Small pot - Small earthen pot is also made of tank bed mud. Lesser than half cup size is burnt in fire. On Sankranthi day they smear lime stripe around the small pot and fill with thil and offer to people going to their houses. They soak thil in water for some time and take out the water and rub that on floor. Skin will be separated. Then it is fried in the pan, adding small pieces of jaggery and dried coconut, fried gram, peanut and prepare the thil mixture.

Eg: While coming in the evening, bring seven or eight Kudikes.

See: Madake (Earthen pot)

280 ಕುದುರು: ನೋಡಿ: ಕುಂದಲಿಗೆ

<kuduru> See: Kundalige

281. ಕುಮ್ಮಕ್ಕು: ಇನ್ನೊಬ್ಬರಿಗೆ ಸಹಾಯಮಾಡುವುದಕ್ಕೆ **ಕುಮ್ಮಕ್ಕು** ಎಂಬ ಪದವನ್ನು ಬಳಸುತ್ತಾರೆ.

ಉದಾ: ನೀವೆಲ್ಲರೂ ಕುಮ್ಮಕ್ಕು ಕೊಡ್ತೀವಿ ಅಂತ ಕೈ ಎತ್ತಿದರೆ, ನಾನೂ ಸೈ ಅಂತೀನಿ.

<kummakku> Help: To give support to another one, they use the word Kummakku.

Eg: If you all give support, I will also say yes.

282. ಕುಮ್ಮಟಿಗೆ: ಕುಮಟಿ ಎಂದರೆ ಅಗ್ಗಿಷ್ಟಿಕೆ. ಇದರೊಳಕ್ಕೆ ಇಜ್ಜಲನ್ನು ತುಂಬಿ ಬೆಂಕಿ ಹಾಕಿ ಅಡಿಗೆ ಪಾತ್ರೆಗಳನ್ನು ಮೇಲಿಡುತ್ತಾರೆ. ಕುಮಟಿಯನ್ನು ಎರಕದಿಂದಲೂ ಮಾಡಬಹುದು, ಮಣ್ಣಿನಿಂದಲೂ ಮಾಡಬಹುದು.



ಉದಾ: ಸಾಮಾನ್ಯವಾಗಿ ಹಳ್ಳಿಗಳಲ್ಲೆಲ್ಲ ಮಣ್ಣಿನ ಕುಮಟಿಯನ್ನೇ ಉಪಯೋಗಿಸುತ್ತಿದ್ದರು.

<kummatige> Round stove - Kumati means stove. Filling charcoal into it and putting fire, they place the cooking vessel on that. Kumati can be made of cast iron or mud.

Eg: Generally, in villages, they were using mud Kumati

283. ಕುರುಂಬಾಳೆ: ನೋಡಿ: ಅಡಕೆಪಟ್ಟೆ

<kurumbaale> See: Arecanut leaf.

284. ಕುಲಾವಿಟೋಪಿ: ಕುಲಾವಿಟೋಪಿಯನ್ನು ದಪ್ಪನಾದ ಉಣ್ಣೆ ಬಟ್ಟೆಯಿಂದ ಹೊಲಿಯುತ್ತಾರೆ. ಚಿಕ್ಕಮಕ್ಕಳು, ವಯಸ್ಸಾದ ಮುದುಕರು ತಲೆ, ಕಿವಿಗಳನ್ನು ಮುಚ್ಚಿ



ಬೆಚ್ಚಗಿರಿಸಲು ಕುಲಾವಿಟೋಪಿಯನ್ನು ಧರಿಸುತ್ತಾರೆ. ಕುಲಾವಿಟೋಪಿಯನ್ನು ಹಾಕಿಕೊಂಡಾಗ ಮುಖ ಮಾತ್ರ ಕಾಣುತ್ತಿರುತ್ತೆ. ಸಾಮಾನ್ಯವಾಗಿ ಬಾಣಂತಿಯರು ಹೆರಿಗೆಯಾದ ಮೇಲೆ ಎರಡು ಮೂರು ತಿಂಗಳಕಾಲ ಕುಲಾವಿಟೋಪಿಯನ್ನು ಹಾಕುತ್ತಾರೆ.

ಉದಾ: ಅಜ್ಜಾ, ನಂಗೆ ಕೆಂಪು ಕುಲಾವಿಟೋಪಿ ಕೊಡಿಸು ನಾಳೆ ಹಾಸನದ ಸಂತೇಲಿ.

<kulaavitopi> Little cap for children: Kulavitopi is stitched with thick woollen cloth. Young children and old people to keep head and ear warm, wear Kulavitopi. While wearing this cap, only face can be seen. Generally, ladies after the birth of baby, wear Kulavitopi for two or three months.

Eg: Grandpa, get me red color Kulavitopi tomorrow in Hassan market.

285. ಕುಲುಮೆ: ನೋಡಿ: ಅಡಿಪಾಯ

<kulume> See: Adipaya

286. ಕುಸುಬಲಕ್ಕಿ: ಭತ್ತವನ್ನು ಬೇಯಿಸಿಮಾಡಿದ ಅಕ್ಕಿಗೆ ಕುಸುಬಲಕ್ಕಿ ಎನ್ನುತ್ತಾರೆ. ಕುಸುಬಲಕ್ಕಿ ಇಡ್ಲಿ, ಕಡುಬು ಮಾಡುವುದಕ್ಕೆ ಹೇಳಿಸಿದ್ದು. ಕುಸುಬಲಕ್ಕಿ ಆರೋಗ್ಯಕ್ಕೆ ಒಳ್ಳೆಯದು.

ಉದಾ: ಕುಸುಬಲಕ್ಕಿ ಹಾಕಿ ಇಡ್ಲಿಹಿಟ್ಟು ಮಾಡಿಡು ನಾಳೆಗೆ.

<kusubalakki> Parboiled Rice prepared from baked paddy is called Kusubalakki. It is known for preparing Idli and Kadubu. It is a very healthy food.

Eg: Using Kusubalakki prepare idli batter for tomorrow.

287. ಕುಳ್ಳು: ನೋಡಿ: ತಿಪ್ಪೆಗುಂಡಿ

<kullu> See: Manure pit

288. ಕೂಚಂಭಟ್ಟ: ಏನೂ ತಿಳುವಳಿಕೆ ಇಲ್ಲದಿರುವ ದಡ್ಡ ಮನುಷ್ಯನನ್ನು ಕೂಚಂಭಟ್ಟ ಎನ್ನುವುದು ರೂಢಿ. ವಿಪರೀತ ಓದಿ ವ್ಯವಹಾರ ಜ್ಞಾನವಿಲ್ಲದವನನ್ನೂ ಕೂಚಂಭಟ್ಟ

ಎನ್ನುತ್ತಾರೆ. ಓದಿಓದಿ ಮರುಳಾದ ಕೂಚಂಭಟ್ಟ ಎಂಬ ಗಾದೆಯಿದೆ.

ಉದಾ: ಅವನು ಬಿಡು ಪೆದ್ದಾ ಅಂದರೆ ಪೆದ್ದ, ಅವನೊಬ್ಬ ಕೂಚಂಭಟ್ಟ.

<koochambhatta> Idiot - It is common to say Koochambhatta for a person who does not have any knowledge. A person having read quite a lot but has no knowledge of worldly transaction is also called as Koochambhatta.

Odiodi marulada Koochambhatta is a proverb.

Eg: Leave him alone, he is a fool, he is Koochambhatta.

289. ಕೂಟು: ನೋಡಿ: ಹುಳಿ

<kootu> See: Huli (Sambar)

290. ಕೂರಿಗೆ: ಹೊಲದಲ್ಲಿ ಮಣ್ಣನ್ನು ಕುಂಟೆಯಿಂದ ಸಮನಾಗಿ ಹರಡಿದ ಮೇಲೆ ಬೀಜವನ್ನು ಬಿತ್ತುತ್ತಾರೆ. ಬೀಜಗಳು ಒಂದೇ ಸಾಲಿನಲ್ಲಿ ಒಂದರಪಕ್ಕಕ್ಕೊಂದು ಬೀಳುವಂತೆ ಮಾಡಲು ಕೂರಿಗೆಗೆ ಜೋಡಿಸಿರುವ ಬಟ್ಟಲಿನಲ್ಲಿ ಬೀಜವನ್ನು ಹಾಕಿದರೆ, ಬೀಜಗಳು ಅಡ್ಡಾದಿಡ್ಡಿ ಹೋಗದೆ ಕೊಳವೆಗಳ ಮೂಲಕ ಕ್ರಮವಾಗಿ ನೆಲದೊಳಕ್ಕೆ ಒಂದೇ ಸಾಲಿನಲ್ಲಿ ಬೀಳುತ್ತವೆ.



ಉದಾ: ನಾಳೆ ಬೀಜಹಾಕಬೇಕು, ಕೂರಿಗೆಯನ್ನು ತೆಗೆದಿಡು.

<koorige> An Instrument of Agriculture - In the field after spreading the soil in a level with the equipment, they sow the seeds in the row. They fill the seeds into the cup attached to the equipment. Through pipes seeds will fall in a line.

Eg: Must sow the seeds tomorrow, keep koorige outside.

291. ಕೂಳೆ: ಭತ್ತ, ರಾಗಿ ಮತ್ತು ಕಬ್ಬನ್ನು ಕೊಯ್ದಮೇಲೆ ಕೆಳಭಾಗದಲ್ಲಿ ಉಳಿಯುವ ಭಾಗಕ್ಕೆ ಕೂಳೆ ಎನ್ನುತ್ತಾರೆ. ಕೂಳೆಯನ್ನು ಸಾಮಾನ್ಯವಾಗಿ ಕೀಳುವುದಿಲ್ಲ. ಅದಕ್ಕೆ ಬೆಂಕಿ ಹಾಕಿ ಸುಟ್ಟುಬಿಡುತ್ತಾರೆ. ಆ ಬೂದಿ ನೆಲಕ್ಕೆ ಸೇರಿ ಗೊಬ್ಬರವಾಗುತ್ತೆ.

ಉದಾ: ಕೂಳೆರಾಶಿಗೆ ನಾಳೆ ಬೆಂಕಿಹಾಕಬೇಕು.

<koole> (-) Stump remaining after harvesting - After cutting out the ears of paddy, ragi and sugarcane, the remaining

bottom portion is called Koole. Generally, Koole is not plucked. They burn with fire. That ash gets mixed into earth and converts as manure.

Eg: Tomorrow must put fire to the heaps of Koole.

292. ಕೃಷ್ಣತುಳಸಿ: ನೋಡಿ: ತುಳಸಿಕಟ್ಟೆ, ಶ್ರೀತುಳಸಿ

<krishnathulasi> See: Thulasikatte, Sreethulasi

293. ಕೃಷ್ಣಾಜಿನ: ಜಿಂಕೆಯ ಚರ್ಮಕ್ಕೆ **ಕೃಷ್ಣಾಜಿನ** ಎಂದು ಹೆಸರು. ಹಿರಿಯ ವ್ಯಕ್ತಿಗಳು ಸಂಧ್ಯಾವಂದನೆ, ದೇವರಪೂಜೆ ಮಾಡುವಾಗ ಕೃಷ್ಣಾಜಿನವನ್ನು ಪವಿತ್ರಮಣಿ ಎಂದು ಆಸನವಾಗಿ ಬಳಸುತ್ತಾರೆ.

ಉದಾ: ತಾತ ಸ್ನಾನಮುಗಿಸಿ ಬಂದರು, ಅವರ ಸಂಧ್ಯಾವಂದನೆಗೆ ಕೃಷ್ಣಾಜಿನ ಹಾಸು.

<krishnaajina> Skin of deer - Elderly people while performing Sandhyavandana and worshipping, they use Krishnajina as religious seat.

Eg: Grandpa came after bathing. For his Sandhyavandana, spread the Krishnajina.

294. ಕೆಂಜುಗ: ಕೆಂಜುಗ ಒಂದು ಜಾತಿಯ ಕೆಂಪು ಇರುವೆ. ಇದು ಕಡಿದರೆ ಮೈಯೆಲ್ಲ ಕೆಂಪಾಗಿ ಗಂದೆಯಾಗುತ್ತೆ.

ಉದಾ: ತೆಂಗಿನಮರಕ್ಕೆ ಕೆಂಜುಗ ಹತ್ತಿದೆ, ಸೋಗೆಉರಿ ಹಾಕು ಸಾಯುತ್ತೆ.

<kenjuga> Red ant - Kenjuga is a type of red ant. If it bites, skin becomes red and the whole body will be rash.

Eg: Kenjuga has affected to coconut tree. Burn coconut leaf at bottom, it will die.

295. ಕೆಂಡಹಾಯಿಸುವುದು: ರಸ್ತೆಯ ಮೇಲೆ ಅಡ್ಡಡ್ಡಲಾಗಿ ಒಣಗಿದ ಹುಲ್ಲನ್ನು ಇಟ್ಟು ಅದಕ್ಕೆ ಬೆಂಕಿ ಹಾಕುತ್ತಾರೆ. ಬೆಂಕಿಯನ್ನು ದಾಟಿಕೊಂಡು ಹಸುಗಳು ಓಡುವಂತೆ ಅಟ್ಟುತ್ತಾರೆ. ಇದಕ್ಕೆ **ಕೆಂಡಹಾಯಿಸುವುದು** ಎಂದು ಹೆಸರು.

ಉದಾ: ದಸರಾಹಬ್ಬದಲ್ಲಿ ಮೈಸೂರು ಅರಮನೆಯ ಮುಂದೆ ಕೆಂಡಹಾಯಿಸುತ್ತಾರೆ. [ನೋಡಿ: ಕೊಂಡಹಾಯಿಸುವುದು]

<kendahaayisuvudu> (-) Across the road they put dried grass in heaps and burn with fire. They push the cows to cross the fire and run. It is known as Kendahayisuvudu.

Eg: During Duserha festival, in front of the palace in Mysore they perform kendahayisuvudu.

See: Kondahaayisuvudu.

296. ಕೆಂಡರೊಟ್ಟಿ: ನೋಡಿ: ತಾಲಿಪಿಟ್ಟು, ಅಕ್ಕಿರೊಟ್ಟಿ

<kendarotti> See: Thalipittu, Akkirotti.

297. ಕೆಸರುಗದ್ದೆ: ಭತ್ತದ ಸೊಸಿಗಳನ್ನು ಗದ್ದೆಗೆ ಹಾಕುವ ಮೊದಲು ಒಂದೇ ಕಡೆ ನೀರು ಬಿಟ್ಟು ಕೆಸರುಮಾಡಿ ಭತ್ತವನ್ನು ಒಟ್ಟಿಗೆ ಚೆಲ್ಲುತ್ತಾರೆ. ಅದು ಕೆಸರುಗದ್ದೆ. ಭತ್ತ ಮೊಳಕೆ ಒಡೆದು ಎರಡು ಮೂರು ಅಂಗುಲದಷ್ಟು ಎತ್ತರದ ಸೊಸಿಯಾದ ನಂತರ, ಒಂದೊಂದೇ ಸೊಸಿಯನ್ನು ಬೇರೆಮಾಡಿ ಗದ್ದೆಯಲ್ಲಿ ನೆಡುತ್ತಾರೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಹೆಂಗಸರೇ ಈ ಕೆಲಸವನ್ನು ರೂಢಿಸಿಕೊಂಡಿರುವವರು. ಇದು ಹೆಚ್ಚು ಕಷ್ಟದ ಕೆಲಸವಲ್ಲವಾದರೂ ಮುತುವರ್ಜಿಯಿಂದ ಮಾಡಬೇಕು. ಇದನ್ನು ನಾಟಿಹಾಕುವುದು ಎನ್ನುತ್ತಾರೆ, ಪಾತಿಮಾಡುವುದು ಎಂದೂ ಹೇಳುತ್ತಾರೆ.



ಉದಾ: ನಾಳೆ ನಾಡಿದ್ದರಲ್ಲಿ ಕೆಸರುಗದ್ದೆಮಾಡಿ ಭತ್ತ ನಾಟಿಹಾಕಿಬಿಟ್ಟರೆ ಉತ್ತಮ. ನೋಡಿ: ನಾಟಿಹಾಕು, ಕಳೆಕೀಳು.

<kesarugadde> Wet Soil - Before planting paddy, they put more water in one place, make it muddy and spread paddy. After it sprouts and grow two or three inches, they will shift one by one plant to the field. Generally, in villages women only are accustomed to do this job. Though it is not a difficult task must do it with vigilant care. They call it as transplanting. It is also called as pit for sowing seeds.

Eg: It is better if we do kesarugadde in a day or two and replant paddy sprouts.

See: Natihaku, kalekeelu.

298. ಕೆಯ್ಮಸಕ: ಇನ್ನೊಬ್ಬರಿಗೆ ಏನಾದರೂ ತಿಂಡಿ ತೀರ್ಥ ಕೊಡುವಾಗ ಅವರಿಗೆ ಗೊತ್ತಿಲ್ಲದಂತೆ ವಿಷ ಪದಾರ್ಥವನ್ನು ಬೆರೆಸುವುದಕ್ಕೆ **ಕೆಯ್ಮಸಕ** ಎಂದು ಹೇಳುತ್ತಾರೆ. ಕೆಯ್ಮಸಕ ಮಾಡುವವರು ಇನ್ನೊಬ್ಬರೊಡನೆ ಸಹಪಂಕ್ತಿಯಲ್ಲಿ ಊಟಕ್ಕೆ ಕೂರುವುದಿಲ್ಲ.

ಉದಾ: ಆ ಕೃಷ್ಣಪ್ಪನ ಜೊತೆ ಹೋಗ್ಬ್ಯಾಡ, ಅವನು ಕೆಯ್ಮಸಕ ಮಾಡ್ತಾನೆ. ಸಮಾನಾರ್ಥಕ: ಕೈಮದ್ದು, ಮದ್ದುಹಾಕುವುದು.

<kaimasaka> (-) A kind of slowly killing poison - When you offer food to anybody, without their knowledge if you mix poison, they call it as Kaimasaka. People who do kaimasaka do not sit with others while taking food.

Eg: Do not go with that Krishnappa. He does kaimasaka.
Equivalent: Kaimaddu, Madduhakuvudu.

299. ಕೇಣಿ: ನೋಡಿ: ಅಡಕೆಮಣೆ

<keni> See: Adakemane


300. ಕೇರಿ: ಒಂದೊಂದು ಹಳ್ಳಿಯಲ್ಲೂ ಕೇರಿಗಳಿರುತ್ತವೆ. ಪ್ರತಿಯೊಂದು ಕಸುಬಿನವರಿಗೂ ಅವರವರ ಮನೆಗಳೇ ಸಾಲುಸಾಲಾಗಿರುತ್ತವೆ, ಬ್ರಾಹ್ಮಣರಕೇರಿ, ಕುಂಬಾರಕೇರಿ, ಅಗಸರಕೇರಿ ಇತ್ಯಾದಿ.

ಉದಾ: ಅಗಸರಕೇರೀಗೆ ಹೋಗಿ ತಿಮ್ಮನ್ನ ಮನೆಹತ್ರಕ್ಕೆ ಬಾ ಅಂತ ಹೇಳು, ಬಟ್ಟೇನೆಲ್ಲ ಒಕ್ಕಂಬರಲಿ.

<keri> Street in between houses - All villages will have Keris. For every professional, a line of houses will be there. Brahmins, Potters, Laundry men etc.

Eg: Go to Agasarakeri (Laundry people) and ask Thimma to come here. Let him wash all clothes.

301. ಕೇರುವಮೊರ: ಕೇರುವಮೊರವನ್ನು ಮಾಡುವುದಕ್ಕೆ ಬಿದಿರನ್ನು ತೆಳ್ಳಗೆ ಸೀಳಿ, 6–7 ಅಂಗುಲದಷ್ಟು ಉದ್ದದ ಪಟ್ಟಿಗಳನ್ನು ಬಳಸುತ್ತಾರೆ. ಅವುಗಳನ್ನು ಒಂದರೊಳಗೊಂದು ಹೋಗುವಂತೆ ಚಾಪೆಯಂತೆ ಹೆಣೆದು, ಒಂದು ಒಂದೂವರೆ ಅಡಿ ಅಗಲದ ಚಚ್ಚೌಕವಾದ ಆಕಾರದಲ್ಲಿ ಹೆಣೆಯುತ್ತಾರೆ. ಅದರ ಮೂರು ಕಡೆಯು







ಸ್ವಲ್ಪ ಎತ್ತರಕ್ಕೆ ಮಡಿಸಿರುವುದರಿಂದ ಪದಾರ್ಥಗಳು ಹೊರಗೆ ಚೆಲ್ಲುವುದಿಲ್ಲ. ನಂತರ ಕಾಗದಗಳನ್ನು ನೆನೆಸಿ, ಒರಳಿನಲ್ಲಿ ತಿರುವಿ, ಬಂದದ್ದನ್ನು ಮೊರಕ್ಕೆ ಬಳಿದು ಬಿಸಿಲಿನಲ್ಲಿ ಒಣಗಿಸಿದಾಗ ಸಣ್ಣಸಣ್ಣ ತೂತುಗಳು ಮುಚ್ಚಿ ಹೋಗುತ್ತವೆ. ಅಕ್ಕಿ ಕೇರಲು, ಕಡಲೇಕಾಯಿಬೀಜದ ಹೊಟ್ಟನ್ನು ಬೇರ್ಪಡಿಸಲು ಉಪಯೋಗವಾಗುತ್ತೆ.

ಭತ್ತವನ್ನು ಒಡೇಕಲ್ಲಿನಲ್ಲಿ ಬೀಸಿದ ನಂತರ ಹೊಟ್ಟನ್ನು ಬೇರೆ ಮಾಡಲು ಕೇರುವಮೊರದಲ್ಲಿ ಹಾಕಿ ಮೇಲಿನಿಂದ ಕೆಳಕ್ಕೆ ಸ್ವಲ್ಪಸ್ವಲ್ಪವಾಗಿ ಚೆಲ್ಲುತ್ತಾರೆ. ಆಗ ಹೊಟ್ಟು ಗಾಳಿಗೆ ಹಾರಿಹೋಗಿ ಅಕ್ಕಿ ಮಾತ್ರ ಕೆಳಕ್ಕೆ ಬೀಳುತ್ತೆ.

ಉದಾ: ಕೇರುವ ಮೊರದಲ್ಲಿ ದಾಸಯ್ಯನಿಗೆ ದವಸ ಹಾಕಿದರು.

<keruvamora> Bamboo fan - For preparing bamboo fan, they split bamboo thinly and make six to seven inches length stripes. Then they are attached to one another like a mat and made into a square. Since all the three sides are folded to a little height, corns will not spill out. Papers are soaked in water and grinded. That paste is smeared to the fan all over and dried in the sun so that the small holes will be covered. It is used for winnowing rice, skin of peanut.

After grinding paddy in the grinding stone, to separate the skin, they put that mixture in the winnowing fan and spill from top little by little. Then the skin will fall out with wind and rice only will fall.

Eg: They put rice in the winnowing fan for Dasayya

302. ಕೈಔಷಧಿ: ಹಳ್ಳಿಗಾಡುಗಳಲ್ಲಿ ಸಣ್ಣಪುಟ್ಟ ಕಾಯಿಲೆಗಳಿಗೆ ಯಾರೂ ಆಸ್ಪತ್ರೆಗೆ ಹೋಗುವುದಿಲ್ಲ. ಸಾಮಾನ್ಯವಾಗಿ ದಿನಂಪ್ರತಿ ಮನೆಯಲ್ಲಿ ದೊರಕುವ ಮೆಣಸು, ಶುಂಠಿ, ಜೀರಿಗೆ, ಗಸಗಸೆ, ಜೇನುತುಪ್ಪ ಮುಂತಾದ ಪದಾರ್ಥಗಳನ್ನು ಮತ್ತು ಒಂದೆಲಗ, ದೊಡ್ಡಪತ್ರೆ, ತುಳಸಿ, ಎಕ್ಕದಎಲೆ, ನುಗ್ಗೆ ಮತ್ತು ಬೇವಿನಎಲೆಗಳನ್ನು ಉಪಯೋಗಿಸಿ ಕೈಔಷಧಿ ಮಾಡುತ್ತಿದ್ದರು. ಕೈಔಷಧಿಗೆ **ಹಸಿರೌಷಧಿ, ನಾಟಿಔಷಧಿ** ಎಂದೂ ಕರೆಯುತ್ತಾರೆ.

ಉದಾ: ಮಗುವಿಗೆ ಕೆಮ್ಮುಬಂದಿದೆ, ಅಜ್ಜಿಗೆ ಹಸಿರೌಷಧಿ ಮಾಡಲು ಹೇಳು.

ನೋಡಿ: ನಾಟಿಔಷಧಿ, ಹಿತ್ತಿಲಮದ್ದು, ಮನೆವೈದ್ಯ

<kaioushadhi> Native Medicine - In villages for small ailments, nobody will go to hospital. Generally, daily required items in the house, Pepper, Ginger, poppy seed, honey etc. and leaves like Ondelaga, doddapatre, Thulasi, Ekkadele, nugge and neem are used and made medicine. They also call hasiroushadhi, Natioushadhi for Kaioushadhi.

Eg: Child is having cough. Tell grandma to prepare hasiroushadhi.

See: Natioushadhi, Hittilamaddu, manevaidya.

303. ಕೈಗಡ: ಬಡ್ಡಿ ಇಲ್ಲದೆ ಸ್ವಲ್ಪ ಹಣವನ್ನು ಸಾಲವಾಗಿ ಪಡೆಯುವುದಕ್ಕೆ ಕೈಗಡ (ಕೈಸಾಲ) ಎಂದು ಹೇಳುತ್ತಾರೆ.

ಉದಾ: ಮನೆ ಮೇಲ್ಛಾವಣಿ ರಿಪೇರಿ ಮಾಡಿಸ್ಬೇಕು, ಸಾವುಕಾರರ ಹತ್ತಿರ ಹೋಗಿ ಐನೂರು ರೂಪಾಯಿ ಕೈಗಡ ತಂದೆ.

ನೋಡಿ: ಕೈಸಾಲ, ಬಡ್ಡಿರಹಿತಸಾಲ, ಚಿಕ್ಕಸಾಲ

<keigaDa> Temporary loan - Without interest to get little amount as loan is called kaigada.

Eg: Must get repaired the terrace of the house. I approached the landlord and got five hundred rupees as kaigada.

See: Kaisala, Baddirahithasala, Chikkasala.

304. ಕೈದೋಟ: ಮನೆಯ ಮುಂಭಾಗದಲ್ಲಿ ಅಥವಾ ಹಿಂಭಾಗದಲ್ಲಿ ಮಾಡಿಕೊಂಡಿರುವ ಸಣ್ಣ ಪ್ರಮಾಣದ ತೋಟಕ್ಕೆ ಕೈದೋಟ ಎನ್ನುತ್ತಾರೆ. ದಿನನಿತ್ಯದ ಬಳಕೆಗೆ ಬೇಕಾಗುವ ಕೊತ್ತುಂಬರಿ ಸೊಪ್ಪು, ದಂಟು, ಹಸಿ ಮೆಣಸಿನಕಾಯಿ ಮುಂತಾದ ತರಕಾರಿಗಳನ್ನು ಕೈದೋಟಗಳಲ್ಲಿ ಬೆಳೆಸುತ್ತಾರೆ.




ಉದಾ: ಈ ಸಲ ನಮ್ಮ ಕೈದೋಟದಲ್ಲಿ ರಾಶಿರಾಶಿ ಹಸಿಮೆಣಸಿನಕಾಯಿ ಬಿಟ್ಟಿದೆ.

ನೋಡಿ: ಹಿತ್ತಿಲು

<kaidota> Kitchen Garden - In front or back of the house, the small scale garden is known as kaidota (kitchen garden). They grow daily required vegetables like coriander leaves, greens, green chilly etc.

Eg: This time in our kitchen garden, plenty of green chilly are grown.

See: Hittilu



305. ಕೈಗುದ್ದಲಿ: ಒಂದೇ ಕೈಯ್ಯಲ್ಲಿ ಕೈಗುದ್ದಲಿಯನ್ನು ಹಿಡಿದುಕೊಂಡು ನೆಲವನ್ನು ಕೆತ್ತಬಹುದು. ಕೈಗುದ್ದಲಿ ಸುಮಾರು ಒಂದು ಮೊಳದಷ್ಟು ಉದ್ದವಿರುತ್ತೆ. ಪಾತಿಮಾಡುವುದು ಇತ್ಯಾದಿ ಸಣ್ಣಪುಟ್ಟ ಕೆಲಸಗಳಿಗೆ ನೆಲ ಅಗೆಯಲು ಕೈಗುದ್ದಲಿ ಬಳಸುತ್ತಾರೆ.

ಉದಾ: ಬೋರಾ ಆ ಕೈಗುದ್ದಲಿ ತಗಂಬಾ.

<keiguddali> Hand Spade - We can dig the earth with one hand using kaiguddali. Generally, kaiguddali will be one-and-a-half-foot length. They use kaiguddali for making pits around plants etc.

Eg: Bora bring that Kaiguddali

306. ಕೈಗುಣ: ಏನೂ ಕೆಡುಕಾಗದಂತೆ ಮಾಡುವ ಕೆಲಸಕ್ಕೆ **ಕೈಗುಣ** ಎನ್ನುತ್ತಾರೆ. ಹಸ್ತಗುಣ ಎಂದೂ ಹೇಳುವರು.

ಉದಾ: ರಾಮಾಪಂಡಿತರಹತ್ತಿರ ಔಷಧಿ ತೆಗೆದುಕೊ, ಅವರ ಕೈಗುಣ ಬಹಳ ಒಳ್ಳೆಯದು.

<kaiguna> Magical touch - For doing work without harming is called kaiguna. They call it as Hasthaguna also.

Eg: Get medicine from Rama Pandit. His kaiguna is very good.

307. ಕೈಸಾಲ: ನೋಡಿ: ಕೈಗಡ

<kaisala> See: Kaigada

308. ಕೊಂಪೆ: ಯಾವ ಸಹಾಯವೂ ಒದಗದೆ ಇರುವಂತಹ ಜಾಗಕ್ಕೆ **ಕೊಂಪೆ** ಎಂದು ಹೇಳುತ್ತಾರೆ. ಹಾಳುಬಿದ್ದ ಜಾಗಕ್ಕೂ ಕೊಂಪೆ ಎನ್ನುತ್ತಾರೆ.

ಉದಾ: ಆ ಹಾಳು ಕೊಂಪೇಲಿ ಹ್ಯಾಗ್‌ತಾನೆ ಜೀವನಮಾಡುಕ್ಕಾಗುತ್ತೇ?

ಉದಾ: ಆ ಹಾಳುಕೊಂಪೆಗೆ ಯಾರು ಬರ್ತಾರೆ ಹೇಳಿ?

<kompe> Dirty Village - The place which is devoid of any help is called as Kompe (hamlet). Even the waste land is also called as Kompe.

Eg: How to live in that Kompe (dirty village)?

Eg: Tell me who will come to that halukompe.

309. ಕೊಟ್ಟಿಗೆ: ದನ, ಕರು, ಎಮ್ಮೆಗಳನ್ನು ಕಟ್ಟುವ ಜಾಗಕ್ಕೆ ಕೊಟ್ಟಿಗೆ ಎಂದು ಹೆಸರು. ಹುಲ್ಲು ಇತ್ಯಾದಿ ಹಾಕಲು ಗೋಡೆಕಡೆ ಅಡ್ಡವಾಗಿ ಸಣ್ಣ ತಡೆ ಕಟ್ಟಿರುತ್ತಾರೆ. ಅದೇ ಬಾನಿ. ಬಾನಿಯ ಎರಡು ಪಕ್ಕಕ್ಕೂ ದನ ಕರುಗಳನ್ನು ಕಟ್ಟಿರುತ್ತಾರೆ. ಬಾನಿಯಲ್ಲಿರುವ ಆಹಾರವನ್ನು ಅವುಗಳು ತಮಗೆ ಬೇಕಾದಾಗ ತಿನ್ನುತ್ತವೆ. ಕೊಟ್ಟಿಗೆಯಲ್ಲಿ ದನ ಕಟ್ಟುವ ಜಾಗದಲ್ಲಿ ನಾಲ್ಕಾರು ಸಣ್ಣ ಗುಂಡಿಗಳಿರುತ್ತವೆ. ಇದನ್ನು ಗಂಜಲಗುಂಡಿ ಎನ್ನುತ್ತಾರೆ. ಪ್ರತಿದಿನವು ಬೆಳಿಗ್ಗೆ ಅವುಗಳು ಹಾಕಿರುವ ಸಗಣಿ ಗಂಜಲ ಆ ಗುಂಡಿಗಳಲ್ಲಿ ಶೇಖರವಾಗಿರುವುದನ್ನು ತೆಗೆದು ಜಾಗವನ್ನು ಸ್ವಚ್ಛಮಾಡಬೇಕು. ಹಾಗೆ ತೆಗೆದ ಸಗಣಿ ಗಂಜಲವನ್ನು ಹೊರಗಡೆ ಗೊಬ್ಬರದ ಗುಂಡಿಗೆ ಹಾಕುತ್ತಾರೆ. ಗೊಬ್ಬರದ ಗುಂಡಿಗೆ ಗಿಡದ ಸಿಪ್ಪೆಗಳು, ಹುಲ್ಲು ಮುಂತಾದುವನ್ನು ಬೆರೆಸುತ್ತಾರೆ. ಕೆಲವಾರು ತಿಂಗಳ ನಂತರ ಅದು ಒಳ್ಳೆಯ ಗೊಬ್ಬರವಾಗುತ್ತೆ. ಇದಕ್ಕೆ ಕೊಟ್ಟಿಗೆಗೊಬ್ಬರ ಎನ್ನುತ್ತಾರೆ. ಹಳ್ಳಿಗಳಲ್ಲಿ ಮನೆಗೆ ಅಂಟಿಕೊಂಡಂತೆಯೇ ದನದಕೊಟ್ಟಿಗೆಗಳಿರುತ್ತವೆ.

ಉದಾ: ದನದಕೊಟ್ಟಿಗೇಲಿ ತುಂಬ ಗಂಜಲ ಬಿದ್ದಿದೆ, ಎತ್ತಿಹಾಕಬೇಕು.

ನೋಡಿ: ಬಾನಿ, ಗಂಜಲಗುಂಡಿ, ಕೊಟ್ಟಿಗೆಗೊಬ್ಬರ

<kottige> Cow shed - The place where cow, calf, buffalo are placed is called Kottige. To feed grass etc. attached to the wall they construct with long wooden planks. They will have tied cows on both sides. Cows eat food put in that when required. In the cowshed there will be four to five pits. It is called Ganjalagundi (cow urine pit). Everyday cow dung and

urine collected in the pit must be cleared and kept clean. That will be shifted to manure pit outside. They mix leaves, grass etc. It converts as good manure. It is called Kottigegobbara (cowshed manure). In villages, as part of the house cowsheds will be there.

Eg: In cowshed lot of dung is collected. Must be taken out.

See: Bani, Ganjalagundi, Kottige gobbara.

310. ಕೊಟ್ಟಿಗೆಗೊಬ್ಬರ: ನೋಡಿ: ಕೊಟ್ಟಿಗೆ

<kottigegobbara> See: Kottige (cow shed)

311. ಕೊಟ್ಟುಉಣ್ಣು ಪದ್ಧತಿ: ತರಕಾರಿ ಅಥವಾ ಹೂವಿನ ಗಿಡದಲ್ಲಿ ಮೊದಲು ಬಿಟ್ಟ ತರಕಾರಿಯನ್ನಾಗಲಿ, ಹೂವನ್ನಾಗಲಿ ಇನ್ನೊಬ್ಬರಿಗೆ ಕೊಟ್ಟು ನಂತರ ತಾವು ಉಪಯೋಗಿಸುವ ವಾಡಿಕೆ ಹಳ್ಳಿಗಳಲ್ಲಿ ಕಾಣಬರುವ ವಿಶೇಷ ಸಂಗತಿ.

ಉದಾ: ಹೂವು ಕೊಟ್ಟು ಮುಡಿ, ಹಣ್ಣು ಹಂಚಿ ತಿನ್ನು (ಗಾದೆ).


<kottuunnu padhhathi> (-) The system of offering and then eat. The system of offering the first grown vegetable or flowers to others and then consume is a special feature in villages.

Eg: Offer the flower first and wear, distribute fruits and then eat (proverb)

312. ಕೊಡ: ನೋಡಿ: ಬಿಂದಿಗೆ

<koda> See: Bindige (round metal vessel)

313. ಕೊಡತಿ: ಕಬ್ಬಿಣದಿಂದ ಅಥವಾ ಮರದಿಂದ ಮಾಡಿದ ಸುಮಾರು ಒಂದು ಅಡಿ ಉದ್ದವಿರುವ ಸಲಕರಣೆ. ಕಬ್ಬಿಣದ ಕೊಡತಿಯಿಂದ ಯಾವ ಪದಾರ್ಥಗಳನ್ನಾದರು ಜಜ್ಜಬಹುದು. ಮರದ ಕೊಡತಿಯಿಂದ ಹುಣಸೆಹಣ್ಣನ್ನು ಜಜ್ಜಿ ಬೀಜವನ್ನು ಬೇರೆಮಾಡುತ್ತಾರೆ.



ಉದಾ: ಸುಮ್ನೆ ಕುಂತ್ಕಂಡ್ ಮಾಡುದೇನು, ಆ ಕೊಡತಿ ಕೊಡು ಹುಣಸೆಹಣ್ಣು ಜಜ್ತೀನಿ.

<kodathi> (-) An equipment (hammer) made of iron or wood, about one-foot length. With iron hammer anything can be crushed. With wooden hammer they crush tamarind and separate the seeds.

Eg: Why simply sitting, bring that hammer, will crush tamarind.



314. ಕೊಡಲಿ: ಸೌದೇ ಕಡಿಯುವುದಕ್ಕೆ ಬೇಕಾದ ಸಾಧನ **ಕೊಡಲಿ**. ಕೊಡಲಿಯನ್ನು ಕಬ್ಬಿಣದಲ್ಲಿ ಮಾಡುತ್ತಾರೆ.

ಉದಾ: ಕೊಡಲಿ ಕಬ್ಬಿಣದ್ದಾದರೂ, ಮರದಕಾವಿಲ್ದೆ ಸೌದೇ ಕಡಿಯುಕ್ಕಾಗ್ತದಾ?

<kodali> Axe - The equipment required to cut wood is Kodali. It is made of iron.

Eg: Though kodali (axe) is made of iron, without wooden stick, can you cut wood?




315. ಕೊನೆಗತ್ತಿ: 15–20 ಅಡಿ ಉದ್ದದ ಬಿದಿರಿನ ಕೋಲಿಗೆ ಒಂದು ತುದಿಯಲ್ಲಿ ಕಬ್ಬಿಣದ ಕೊನೆಗತ್ತಿಯನ್ನು ಕಟ್ಟಿರುತ್ತಾರೆ. ಇದನ್ನು **ದೋಟಿ** ಎಂದು ಕರೆಯುತ್ತಾರೆ. ಅದರ ಸಹಾಯದಿಂದ ತೆಂಗಿನಮರದ ಮೇಲಕ್ಕೆ ಹತ್ತದೆ, ಕೆಳಗಡೆ ನಿಂತುಕೊಂಡು ತೆಂಗಿನಕಾಯನ್ನು ಕೆಡವಬಹುದು. ಮಾವಿನಕಾಯನ್ನು ಕೀಳಬೇಕಾದರೆ, ಬಿದಿರಿನ ಕೋಲಿನ ತುದಿಯಲ್ಲಿ ಒಂದು ಸಣ್ಣ ಕಬ್ಬಿಣದ ಕೊಳವೆಯನ್ನು ಬಗ್ಗಿಸಿ ಸೆಕ್ಕಿಸಿರುತ್ತಾರೆ, ಅದರ ಜೊತೆಗೆ ಒಂದು ಚೀಲವನ್ನೂ ಸೇರಿಸುತ್ತಾರೆ. ಮಾವಿನಕಾಯಿನ ತೊಟ್ಟಿಗೆ ಕಬ್ಬಿಣದ ಕೊಳವೆಯನ್ನು ಸೇರಿಸಿ ಕೆಳಕ್ಕೆ ಎಳೆದಾಗ ಮಾವಿನಕಾಯಿ ಚೀಲದೊಳಕ್ಕೆ ಬೀಳುತ್ತೆ. ಕಾಯಿ ನೆಲದಮೇಲೆ ಬಿದ್ದರೆ ಜಜ್ಜಿಹೋಗುವುದರಿಂದ, ಅದು ಒಳ್ಳೆಯ ಹಣ್ಣಾಗುವುದಿಲ್ಲ. ಚೀಲದೊಳಕ್ಕೆ ಬಿದ್ದ ಕಾಯಿಗಳನ್ನು ಮೆತ್ತಗೆ ಕೆಳಗೆ ಇಳಿಸಿಕೊಂಡು, ಒಣಗಿದ ಹುಲ್ಲಿನಮೇಲೆ ಸಾಲಾಗಿ ಜೋಡಿಸುತ್ತಾರೆ. ನಂತರ ಮೇಲ್ಭಾಗಕ್ಕೂ ಒಣಗಿದ ಹುಲ್ಲಿನಿಂದ ಮುಚ್ಚಿ ಒಂದು ವಾರದವರೆಗು ಬಿಟ್ಟರೆ, ಸೊಗಸಾದ ಮಾವಿನಹಣ್ಣು ದೊರಕುತ್ತೆ.

ಉದಾ: ದೋಟಿಯ ಕೊನೆಗತ್ತಿಯಿಂದ ಆ ಕೊಂಬೆಯ ಮಾವಿನಹಣ್ಣುಗಳನ್ನು ಉದುರಿಸಿ ತಾ.

<konegathhi> (-) For 15-20 feet bamboo stick is attached at one end a curved iron axe. It is called as Doti. With the help of that, without climbing the coconut tree, we can pluck coconuts. While plucking mangos, at the edge of bamboo stick is attached a piece of iron hook bent. Also, a bag is attached. When you pull the mango, it will fall into the bag. If it falls on the floor, it will not ripe. The collected mangos in the bag are brought down slowly and spread on dried grass in line. Then covered with dried grass on top and left for a week, will get fine mangos.

Eg: Bring down the mangos on that branch with Doti.



316. ಕೊಪ್ಪರಿಗೆ: ಕೊಪ್ಪರಿಗೆ ಕಬ್ಬಿಣದಿಂದ ತಯಾರಿಸಿದ, 10–15 ಅಡಿ ಸುತ್ತಳತೆಯುಳ್ಳ, ದೊಡ್ಡ ಬಾಣಲೆ. ಇದರೊಳಕ್ಕೆ ಕಬ್ಬಿನಹಾಲನ್ನು ಹಾಕಿ ಕಾಯಿಸುತ್ತಾರೆ. ಅದರ ಒಲೆ ಮಣ್ಣಿನಿಂದ ಮಾಡಿರುವುದು. ಒಲೆಗೆ ಮರದ ಸೌದೆಗಳನ್ನು ಉಪಯೋಗಿಸುತ್ತಾರೆ. ಸುಮಾರು 20–30 ಕೊಡದಷ್ಟು ಕಬ್ಬಿನ ಹಾಲನ್ನು ಹಾಕಬೇಕು. ಚೆನ್ನಾಗಿ ಕಾಯಿಸಿದ ನಂತರ, ಹಾಲಿನಲ್ಲಿದ್ದ ನೀರಿನ ಅಂಶವೆಲ್ಲ ಹೋಗಿ, ಬೆಲ್ಲದ ಪಾಕವಾಗುತ್ತೆ. ನಂತರ ಸ್ವಲ್ಪ ಸುಣ್ಣವನ್ನು ಬೆರೆಸುತ್ತಾರೆ. ಒಂದು ಹದಕ್ಕೆ ಬಂದ ನಂತರ ಆ ಪಾಕವನ್ನು ಮರದ ಅಚ್ಚುಗಳಿಗೆ ಹೊಯ್ದು ಆರಿದ ಮೇಲೆ ಬೆಲ್ಲವನ್ನು ಹೊರಕ್ಕೆ ತೆಗೆಯುತ್ತಾರೆ. ಕೆಲವು ಹಳ್ಳಿಗಳಲ್ಲಿ ಅಚ್ಚುಗಳಿಗೆ ಹಾಕದೆ, ಉಂಡೆಯಂತೆ ಬೆಲ್ಲವನ್ನು ಕಟ್ಟುತ್ತಾರೆ. ಅದನ್ನು **ಉಂಡೆ ಬೆಲ್ಲ** ಎಂದೆ ಕರೆಯುತ್ತಾರೆ. ಸುಣ್ಣದ ಅಂಶ ಸ್ವಲ್ಪ ಹೆಚ್ಚಾದರೆ ಬೆಲ್ಲದ ಬಣ್ಣ ಕಪ್ಪಾಗುತ್ತೆ. ಬಣ್ಣ ಕಪ್ಪಾದರೂ ಬೆಲ್ಲ ಹೆಚ್ಚು ದಿನ ಇಟ್ಟರೂ ಕೆಡುವುದಿಲ್ಲ. ಸುಣ್ಣದ ಅಂಶ ಕಮ್ಮಿಯಾದಾಗ ನೋಡಲು ಬೆಲ್ಲ ಚೆನ್ನಾಗಿರುತ್ತೆ. ಹೆಚ್ಚು ದಿನಗಳಾದ ನಂತರ ಗಟ್ಟಿಯಾಗಿರುವ ಬೆಲ್ಲ ನೀರು ನೀರಾಗಿ ಉಪಯೋಗಕ್ಕೆ ಬರುವುದಿಲ್ಲ. ರಾಗೀರೊಟ್ಟಿಯನ್ನು ಜೋನಿಬೆಲ್ಲದೊಂದಿಗೆ ತಿಂದರೆ ಬಹಳ ರುಚಿ.

ಉದಾ: ನಮ್ಮೂರು ಆಲೆಮನೆಗಳಲ್ಲಿ ತುಂಬಾ ಹಳೆಯದಾದ ಕೊಪ್ಪರಿಗೆಗಳಿವೆ.

ನೋಡಿ: ಜೋನಿಬೆಲ್ಲ, ಅಚ್ಚುಬೆಲ್ಲ, ಕಾಫಿಬೆಲ್ಲ, ಕಡಾಯಿ, ಉಜ್ಜುಬೆಲ್ಲ

<kopparige> Large metal boiler - Kopparige is a big pan made of iron, ten to fifteen feet circumference. They put

sugarcane juice into it and boil. The oven is built with mud. They use firewood. Must put sugarcane juice about 20-30 metal pitcher. After boiling, the water portion will evaporate and turns as jaggery paste. Then they add a little lime. When it comes to a stage, the paste is poured into a wooden mold. After it is cooled, jaggery is taken out. In some villages without putting into mold, they make it as round ball. It is called as Undebella. If more lime is added, jaggery becomes black. If lime portion is less, jaggery looks nice, but after a few days the hard jaggery becomes watery and cannot be used. If ragi roti is eaten with jaggery paste, it tastes nice.

Eg: In our village, we have old cauldrons.

See: Jonibella, Achhubella, Coffeebella, Ujjubella, Kadayi.

317. ಕೊರಕಲು: ಹಳ್ಳಿಯ ರಸ್ತೆಗಳಲ್ಲಿ ಊರಿಂದೂರಿಗೆ ಹೋಗುವಾಗ ಕೆಲವುಕಡೆ ನೀರು ಹರಿದು ರಸ್ತೆ ಕೊರಕಲುಬಿದ್ದಿರುತ್ತೆ. ಹಳ್ಳವಾಗಿರುತ್ತೆ. ಅಂತಹಕಡೆ ಇಬ್ಬರು ಗಾಡಿಯ ಮೂಕಿಹಿಡಿದು ಹಿಂದಕ್ಕೆ ಎಳೆಯಬೇಕು, ಇನ್ನಿಬ್ಬರು ಹಿಂದಿನಿಂದ ಗಾಡಿಯ ಚಕ್ರವನ್ನು ಮುಂದಕ್ಕೆ ದಬ್ಬಬೇಕು. ಆ ಜಾಗಕ್ಕೆ ಕೊರಕಲು ಎಂದು ಹೇಳುತ್ತಾರೆ.

ಉದಾ: ಹುಷಾರಾಗಿ ಗಾಡಿಬಿಡು, ಮುಂದೆ ಕೊರಕಲಿದೆ.

<korakalu> (-) Channel formed by flood of water - In village roads when going from place, water flows and makes it as channel. In such places two people must pull the cart and two people push the wheels from behind. That place is called Korakalu.

Eg: Be careful while driving the cart. Front there is korakalu (channel).

318. ಕೊರಡು: ನೋಡಿ: ಮರಹೊಡೆಯುವುದು, ತೋಪಡಾ, ಉಜ್ಜುಕೊರಡು

<koradu> See: Marahodeyuvudu, Thopada, Ujjukoradu.

319. ಕೊರವಂಜಿ: ನೋಡಿ: ಕಣಿಕೇಳುವುದು

<koravanji> See: Kanikeluvudu

320. ಕೊಲ್ಲಾರದಬಂಡಿ: ನೋಡಿ: ಕಮಾನುಗಾಡಿ

<kollaaradabandi> See: Kamanugadi


321. ಕೊಸರು: ಯಾವುದಾದರೂ ಸಾಮಾನನ್ನು ಕೊಂಡುಕೊಂಡಾಗ ಇನ್ನೊಂದಷ್ಟನ್ನು/ಒಂದನ್ನು ಪುಗಸಟ್ಟೆಯಾಗಿ ಕೊಡುವ ಪದ್ಧತಿಗೆ ಕೊಸರು ಎನ್ನುತ್ತಾರೆ. ಆಧುನಿಕಕಾಲದಲ್ಲಿ, ಎರಡು ಕೊಂಡರೆ ಒಂದು ಉಚಿತ ಎಂಬುದೂ ಒಂದು ರೀತಿ ಕೊಸರೇ ಆಗಿದೆ.

ಉದಾ: ಏನವ್ವಾ ನಾಲ್ಕು ಸೇರು ಹಾಲು ಕೊಂಡಿವ್ನೀ ಕೊಸರು ಹಾಕಾಕಿಲ್ವ?

<kosaru> Bargaining - When you buy anything, the system of giving one/little more is called Kosaru (bargain). In recent days, buy two, get one free is in a way Kosaru only.

Eg: Bought four seers of milk, don't you put kosaru?

322. ಕೋಡ್ಲೊಲೆ: ಕೋಡ್ಲೊಲೆ ಮಣ್ಣಿನಿಂದ ಮಾಡಿದುದು. ಒಂದು ಭಾಗಕ್ಕೆ ಉರಿ ಹಾಕಿದರೆ, ಉರಿ ಪಕ್ಕದ ಕಡೆ ಇರುವ ರಂಧ್ರದಿಂದಲೂ ಹೊರಬರುತ್ತೆ. ಅದರ ಮೇಲೆ ಇನ್ನೊಂದು ಪಾತ್ರೆಯನ್ನಿಟ್ಟು ಏನನ್ನಾದರು ಬೇಯಿಸಬಹುದು. ಈ ಕಾಲದ ಸ್ಟೌ ಇದ್ದಹಾಗೆ. ಮರದ ಹೊಟ್ಟಿನ ಒಲೆಯನ್ನು ದಪ್ಪವಾದ ಕಬ್ಬಿಣದ ತಗಡಿನಿಂದ ಮಾಡುತ್ತಾರೆ. ಒಲೆಯ ಮಧ್ಯ ಭಾಗಕ್ಕೆ ದುಂಡಾಗಿರುವ ಮರದ ಕೋಲನ್ನಿಟ್ಟು ಅದರ ಸುತ್ತಲು ಮರದ ಹೊಟ್ಟನ್ನು ತುಂಬಿ ಬಿಗಿಯಾಗಿ ಅದುಮಿ, ನಂತರ ಮರದ ಕೋಲನ್ನು ನಿಧಾನವಾಗಿ ತೆಗೆಯಬೇಕು. ಆ ತೂತಿನೊಳಕ್ಕೆ ಸಣ್ಣ ಕೆಂಡವನ್ನು ಹಾಕಿದರೆ ಹೊಟ್ಟು ಸ್ವಲ್ಪಸ್ವಲ್ಪವಾಗಿ ಉರಿಯುತ್ತೆ. ಆ ಒಲೆಯ ಮೇಲೆ ಅನ್ನ, ಸಾರು ಮುಂತಾದುವನ್ನು ಮಾಡಿದರೆ ಬಹಳ ಹೊತ್ತಿನವರೆಗೆ ಮಾಡಿದ ಅಡಿಗೆ ತಣ್ಣಗಾಗದೆ ಬಿಸಿಯಾಗಿಯೇ ಇರುತ್ತೆ. ಕಬ್ಬಿಣದ ಒಲೆಯನ್ನು ಎಲ್ಲಿ ಬೇಕಾದರು ಅಲ್ಲಿಗೆ ತೆಗೆದುಕೊಂಡು ಹೋಗಬಹುದು. ಕಬ್ಬಿಣದ ಒಲೆಗೆ ಸೌದೆಯನ್ನು ಉಪಯೋಗಿಸಬೇಕು.



ಉದಾ: ಕೋಡ್ಲೊಲೆಮೇಲೆ ಸಾರಿಗೆ ಕೂಡ್ಸಿಟ್ಟಿದೀನಿ. ಇನ್ನೊಂದರಮೇಲೆ ಅನ್ನಕ್ಕಿಟ್ಟಿಡು.

ನೋಡಿ: ಕುಮ್ಮಟಿಗೆ, ಜೋಡಿಒಲೆ

<kodlole> A kind of fire place - Kodlole is made of mud. If fire is put on one side, the flames will ooze out from the side

hole also. We can put another vessel on that and cook. Just like stove of these days. The stove of sawdust is made of thick iron sheet. Putting a round wooden stick in the center of stove, around the stick they fill sawdust up to the top and take out the wooden stick slowly. In the hole if we put a piece of burning ember, sawdust burns slowly. By cooking on that stove, the cooked items remain hot for a long time. The iron stove can be taken to any place. For iron stove must use firewood.

Eg: I have put rasam vessel on Kodlole. Put rice vessel on another side.

See: Kumatige, Jodiole.


323. ಕೋಡಿ: ಮಳೆಗಾಲದಲ್ಲಿ ಕೆರೆ, ಕಟ್ಟೆಗಳಿಗೆ ಹೆಚ್ಚಿನ ನೀರು ಬಂದು ಹೊರಗೆ ಹರಿಯುತ್ತದೆ. ಕೆರೆ ಭರ್ತಿಯಾಗಿ ಕೋಡಿ ಬಿದ್ದಿದೆ ಎನ್ನುತ್ತಾರೆ. ಹೆಚ್ಚಿನ ನೀರು ಹರಿದುಹೋಗಲು ಮಾಡಿರುವ ದಾರಿಯೇ ಕೋಡಿ.

ಉದಾ: ಈ ವರ್ಷ ಭಾರಿ ಮಳೆ ಆಗಿ ಬುಕ್ಕಾಂಬುಧಿಕೆರೆ ಕೋಡಿಬಿದ್ದಿದೆ.

<kodi> (-) Flow of water through the outlet of a tank - During rainy season tanks and ponds will get more water and flows out. Tank is full and water is coming out. That is Kodi. The place where that excess water flows out is called Kodi.

Eg: This year heavy rain fell. Bukkambudhi tank is overflowed.

324. ಕೋಣ: ಗಂಡು ಎಮ್ಮೆಗೆ ಕೋಣ ಎಂದು ಹೆಸರು. ಸಾಮಾನ್ಯವಾಗಿ ಒಡ್ಡರ ಬಂಡಿಯನ್ನು ಎಳೆಯುವುದಕ್ಕೆ ಮತ್ತು ಎಣ್ಣೆಗಾಣಕ್ಕೆ ಕೋಣವನ್ನು ಉಪಯೋಗಿಸುತ್ತಾರೆ.



ಉದಾ: ತಿಮ್ಮ ಅವನ ಎಣ್ಣೆಗಾಣಕ್ಕೆ ಒಂದು ಜೊತೆ ಹೊಸ ಕೋಣ ಖರೀದಿಮಾಡ್ದ.

ನೋಡಿ: ಹೋರಿ

<kona> Male buffalo - Generally, for pulling Oddarabandi (wooden cart) and for oil crusher they use Kona.

Eg: Thimma bought a new Kona for his Oil Crusher.

See: Hori (young ox)



325. ಕೋತಿಆಡಿಸುವುದು: ನಮ್ಮ ಹಳ್ಳಿಯಲ್ಲಿ ಹೊರಗಿನಿಂದ ಬಂದು ಆಟ ಆಡಿಸುವವರೆಂದರೆ, ಕೋತಿ ಆಡಿಸುವವರು. ಕೋತಿಗೆ ಕೆಂಪು ಬಣ್ಣದ ಅಂಗಿಯನ್ನು ತೊಡಿಸಿ ಕೆಲವಾರು ಆಟಗಳನ್ನು ಅದರಿಂದ ಮಾಡಿಸುತ್ತಿದ್ದ. ಎರಡು ಕಾಲಿನಲ್ಲಿ ನಡೆಯುವುದು, ಪಲ್ಟಿಹೊಡೆಸುವುದು, ಕೋಲನ್ನು ಅಡ್ಡಲಾಗಿ ಹಿಡಿದು ಅದರ ಮೇಲಿಂದ ನೆಗೆಸುವುದು ಮುಂತಾದುವು.

ಉದಾ: ದೊಂಬರಚೆನ್ನ ಕೋತಿಯಾಟ ಚೆನ್ನಾಗಿ ಆಡಿಸುತ್ತಾನೆ.

ನೋಡಿ: ದೊಂಬರಾಟ

<kothiaadisuvudu> Monkey play - In our village, people coming from outside and arrange play means, it is the people who play with monkey. He was putting a red clothe to the monkey and playing. Walking with two legs, turning a somersault, putting across a wooden stick and jump on that etc.

Eg: Dombara Channa plays well with monkey.

See: Dombarata



326. ಕೋಲಾಟ: ಸಣ್ಣಸಣ್ಣ ಬಣ್ಣದ ಕೋಲಿನಿಂದ ಆಡುವ ಆಟ. ಏಳೆಂಟು ಜನ ಎರಡು ಕೈಯ್ಯಲ್ಲೂ ಬಣ್ಣದ ಕೋಲುಗಳನ್ನು ಹಿಡಿದುಕೊಂಡು ಇನ್ನೊಬ್ಬರ ಕೈಲಿರುವ ಕೋಲಿಗೆ ಬಡಿಯುತ್ತ, ಕೋಲಾಟದ ಹಾಡುಗಳನ್ನು (ಕೋಲುಕೋಲನ್ನ ಕೋಲೇ, ಚಿನ್ನದ ಬಣ್ಣದ ಕೋಲುಕೋಲನ್ನ ಕೋಲೇ ತಾನಿ ತಂದಾನೋ ತಾನೀ ತಂದಾನೋ, ತಾನೀ ತಾನೀ ತಾನೀ ತಾನಿತಂದಾನೋ) ಎಂದು ಹೇಳುತ್ತ ಸುತ್ತಲೂ ತಿರುಗುತ್ತಾರೆ. ಕೋಲು ಹಾಕುವುದರಲ್ಲಿ ಹಲವು ವಿಧಗಳಿವೆ. ಕೆಲವು ಕಡೆ ಕೋಲಾಟದ ಪದಗಳನ್ನು ಹೇಳುವವನೇ ಬೇರೆ ಇರುತ್ತಾನೆ. ನಮ್ಮ ಹಳ್ಳಿಗಳಲ್ಲಿ ಮಾನೌಮಿಪದಗಳನ್ನು ಹೇಳುವಾಗ ಕೋಲಾಟವಾಡುತ್ತಾರೆ.

ಕೋಲಾಟದಲ್ಲಿ ಬಳಸುವ ಹಾಡುಗಳನ್ನು **ಕೋಲುಪದಗಳು** (ಕೋಲಾಟದ ಪದಗಳು) ಎಂದು ಕರೆಯುತ್ತಾರೆ. ಕೋಲಾಟಕ್ಕಾಗಿಯೇ ಕಟ್ಟಿದ ಹಾಡುಗಳನ್ನು ಹಳ್ಳಿಗರು ಹಾಡಿಕೊಂಡು ಕೋಲುಹಾಕುತ್ತಾರೆ. ಜಡೆಕೋಲಾಟಕ್ಕೆ ಜಾನಪದ ಕಥನಕವನ ಬಳಸುತ್ತಾರೆ. ಬಹುತೇಕ ಕೋಲಾಟದ ಹಾಡುಗಳೆಲ್ಲ ಜಾನಪದ ಸಾಹಿತ್ಯವೇ ಆಗಿದೆ.

ಉದಾ: ನಮ್ಮೂರು ಕೃಷ್ಣಪ್ಪ ಕೋಲುಪದ ಹೇಳುವುದರಲ್ಲಿ ಗಟ್ಟಿಗ.

ಉದಾ: ಪಕ್ಕದ ಹಳ್ಳಿಯಿಂದ ಕೋಲಾಟ ಆಡೋರು ಬಂದಿದಾರೆ.

<kolaata> (-) Play with small colored sticks. Holding colored sticks in both hands and hitting the stick of another player with songs (Koloo kolannakole, Chinnadaa bannadaa koloo kolannakole, thani thandano, thani thandano. Thani thanithandano) they go around. There are several ways of hitting the sticks. In some places there will be a separate person to sing the song. In our villages during Duserrha they play Kolata. Songs used in Kolata are called Kolupadagalu (kolatada padagalu). Songs written for Kolata only are sung by villagers and played. For Jadekolata songs related to common people are used. Overall, all songs written are related to the common people.

Eg: Krishnappa of our village is famous in Kolupada songs.

Eg: From the neighboring village, players of Kolata have come.



327. ಕೋಲೇಬಸವ: ಗೂಳಿ ಎತ್ತುಗಳಿಗೆ ಅಲಂಕಾರ ಮಾಡಿ ಮನೆ ಮನೆಗಳ ಮುಂದೆ ಆಟ ಆಡಿಸುತ್ತಾರೆ. ಆ ಎತ್ತನ್ನು **ಕೋಲೆಬಸವ** ಎಂದು ಕರೆಯುತ್ತಾರೆ. ಆಟ ಆಡಿಸುವವನು ಓಲಗ ಊದುತ್ತಿರುತ್ತಾನೆ. ಸೀತಾದೇವಿಗೆ ಸರಿಯಾದ ಉಡುಗೊರೆ ಕೊಟ್ಟಿಲ್ಲವೆಂದು ಆ ಬಸವ ಮುನಿಸಿಕೊಂಡು ಬೇರೆ ಕಡೆ ತಿರುಗುತ್ತೆ. ರಾಮದೇವರು ಅವಳನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಿ ಸೀತಾದೇವಿ ಅನ್ನುವ ಬಸವನ ಮೇಲೆ ಒಂದು ಜರತಾರಿ

ಸೀರೆಯನ್ನು ಹೊದಿಸುತ್ತಾನೆ. ಆಗ ಆ ಬಸವ ರಾಮದೇವರ ಪಕ್ಕಕ್ಕೆ ಬಂದು ತಲೆ ತಗ್ಗಿಸಿಕೊಂಡು ನಿಲ್ಲುತ್ತೆ. ಆಟ ಆಡಿಸುವವನು ಹೂವಿನ ಹಾರಗಳನ್ನು ತಂದು ಅವುಗಳ ಕೊರಳಿಗೆ ಹಾಕಿ ಓಲಗ ಊದಿ ಮದುವೆ ನಾಟಕ ಮುಗಿಸುತ್ತಾನೆ. ಆಟದ ಕೊನೆಯಲ್ಲಿ, ಗಂಡು ಬಸವನಿಗೆ ಒಂದು ಹಳೆಯ ಪಂಚೆ, ಹೆಣ್ಣು ಬಸವನಿಗೆ ಹಳೆಯ ಸೀರೆ ಕೊಡಬೇಕೆಂದು ಬೇಡಿಕೊಳ್ಳುತ್ತಾನೆ.

ಉದಾ: ಕೋಲೆಬಸವ ತಲೆಯಾಡಿಸಿದರೆ ನೋಡಲು ಚಂದ.

<kolebasava> (-) Decorating bulls, play in front of every house. That bull is called Kolebasava. The player will be blowing the pipe. One bull feels bad since a fitting present is not given to Sitadevi and turns to the other side. Rama will not let her go and puts on one silk saree. Then that bull comes back and stands near to Rama with head down. The player garlands on both, blowing the pipe, ends the marriage drama. At the end of the play, he requests the audience to offer an old dhothi for male bull and an old saree for female bull.

Eg: It is nice to see a Kolebasava nodding his head.

328. ಕೋಲ್ಕಳ್ಳಿ: ನೋಡಿ: ಕಳ್ಳಿರೆಂಬೆ

<kolkalli> See: Kallirembe (Kalli branch)

329. ಕೋಸುಂಬರಿ: ಕೋಸುಂಬರಿಯನ್ನು ಹೆಸರುಬೇಳೆ, ಕಡಲೇಬೇಳೆ, ಹೆಸರುಕಾಳು, ಸೌತೇಕಾಯಿ ಮುಂತಾದುವುಗಳಿಂದ ಮಾಡುತ್ತಾರೆ. ಬೇಳೆ, ಕಾಳುಗಳನ್ನು ನೀರಿನಲ್ಲಿ ನೆನೆಸಿ ನೀರನ್ನು ಬಸಿದು, ಉಪ್ಪು, ಮೆಣಸಿನಕಾಯಿ ಒಗ್ಗರಣೆ ಹಾಕುತ್ತಾರೆ. ತಿನ್ನಲು ಬಹುರುಚಿ.

ಉದಾ: ರಾಮನವಮಿಯದಿನ ದೇವಸ್ಥಾನದಲ್ಲಿ ರಸಾಯನ, ಕೋಸುಂಬರಿ, ಪಾನಕ ಹಂಚಿದರು.

<kosumbari> (-) Salad made of split dal - Kosumbari is made of Moong dal, Gram, Moong whole, Cucumber etc. Gram and corns are soaked in water for some time and water taken out and added with salt and green chilly and vagar. It is nice to eat.

Eg: On Ramanavami day, they distributed Rasayana, Kosumbari and juice.

330. ಕೌದಿ: ನೋಡಿ: ದಟ್ಟ

<koudi> See: Datta

331. ಕ್ರಯಚೀಟಿ: ಹೊಲ ಗದ್ದೆಗಳನ್ನು ಕೊಳ್ಳುವಾಗ ಅದರ ವ್ಯವಹಾರವನ್ನು ನಿಗದಿ ಮಾಡುವುದಕ್ಕೆ ಕರಾರುಪತ್ರವನ್ನು ಶ್ಯಾನುಭೋಗರ ಮೂಲಕ ಬರೆಸುತ್ತಾರೆ. ಅದಕ್ಕೆ **ಕ್ರಯಚೀಟಿ** ಎಂದು ಹೇಳುವುದು ರೂಢಿ. ಕ್ರಯಚೀಟಿಗೆ **ಖರೀದಿಪತ್ರ** ಎಂಬುದು ಇನ್ನೊಂದು ಹೆಸರು. **ಒಪ್ಪಂದಪತ್ರ** ಎಂದೂ ಹೇಳುತ್ತಾರೆ.

ಉದಾ: ಆ ತೋಟದ ಹಿಂಭಾಗದ ಒಂದು ಎಕರೆ ಹೊಲ ಮಾರಾಟಕ್ಕಿದೆಯಂತೆ, ಕ್ರಯಚೀಟಿ ಮಾಡಿಸಿದೀಯ.

ನೋಡಿ: ಕರಾರುಪತ್ರ, ಒಪ್ಪಂದಪತ್ರ

<krayacheeti> Sale Agreement - When buying agricultural land, to make sure the relevant transaction, the agreement is written by the Shanbhog. It is common to say that as Krayacheeti (Agreement). Khareedi patra is another name for Krayacheeti. Also say Oppanda Patra.

Eg: It seems an acre of land behind the garden is for sale. Have you got done the agreement?

See: Kararupatra, Oppanda Patra.

332. ಕ್ಷಾಮ: ಕ್ಷಾಮ ಎಂದರೆ ಬರಗಾಲ. ಮಳೆ ಇಲ್ಲದೆ ನೀರಿಗೆ ಬರಬಂದು ಬೆಳೆಗಳೆಲ್ಲ ಒಣಗುತ್ತವೆ. ಹೊಟ್ಟಿಗಿಲ್ಲದೆ ಜನ ಹಸಿವಿನಿಂದ ಸಾಯುವುದುಂಟು. ಹೋದ ಶತಮಾನದ ಪ್ರಾರಂಭದಲ್ಲಿ ವೀರಕ್ಷಾಮಬಂದು ಸಾವಿರಾರು ಜನ ಸತ್ತರು. ಬಂಗಾಳದಲ್ಲಿ ಘೋರಕ್ಷಾಮಬಂದು ಲಕ್ಷಾಂತರ ಜನರು ಸತ್ತರು. ಆದ್ದರಿಂದ ಇದನ್ನು ಬರಗಾಲಕ್ಷಾಮ ಎಂದೂ ಕರೆಯುವುದುಂಟು.

ಉದಾ: ಈಟು ದಿನವಾದರೂ ಮಳೆಹನಿ ಲಕ್ಷಣವೇ ಕಾಣಿಸ್ತಿಲ್ಲ. ತೋಟದಲ್ಲಿ ಮರಗಳೆಲ್ಲ ಸುರಟಿಕೊಂಡು ಹೋಗಿವೆ. ಏನು ಕ್ಷಾಮ ಬಂದು ಬಿಡ್ತು ನಮ್ಮ ಹಳ್ಳಿಗೆ ಅಂತ ಮಾತಾಡ್ತಾರೆ.

ಉದಾ: ನಮ್ಮಕಾಲದಲ್ಲಿ ವೀರಕ್ಷಾಮಬಂದು ಸಾವಿರಾರು ಜನ ಸತ್ತರುಕಣಯ್ಯ. ಗೊತ್ತೇ?

<kshaama> Famine - Without rain, for shortage of water crops will dry. Without food people may also die. In the beginning of last century thousands of people died due to

famine. In Bengal, due to severe famine lakhs of people died. Therefore, it is also called as Baragala Kshama (period of drought).

Eg: Even after so many days there is no sign of rain. In the garden trees have shrieked. They are talking about what a severe famine has attacked to our village.

Eg: In our times, due to severe famine thousands of people died, do you know?

333. ಕ್ಷೌರ: ಹೆಚ್ಚಿಗೆ ಬೆಳೆದ ತಲೆಗೂದಲನ್ನು ಕತ್ತರಿಸುವುದಕ್ಕೆ **ಕ್ಷೌರ** ಎನ್ನುತ್ತಾರೆ. ಹಜಾಮತ್ ಎಂದೂ ಕರೆಯುತ್ತಾರೆ. ಕೂದಲನ್ನು ಕತ್ತರಿಸುವವನು **ಕ್ಷೌರಿಕ**. ನಮ್ಮ ಹಳ್ಳಿಯಲ್ಲಿ ಕೂದಲನ್ನು ಕತ್ತರಿಸುವುದಕ್ಕೆ ಬೇಕಾದ ಕತ್ತರಿ, ಬಾಚಣಿಗೆ, ಚಾಕು ಮುಂತಾದ ಸಲಕರಣೆಗಳನ್ನು ಒಂದು ಸಣ್ಣ ಪೆಟ್ಟಿಗೆಯಲ್ಲಿಟ್ಟುಕೊಂಡು ಬೀದಿಯ ಒಂದು ಮೂಲೆಯಲ್ಲಿ ನಿಂತುಕೊಂಡಿರುತ್ತಾನೆ. ಅವನನ್ನು ನೋಡಿದಕೂಡಲೆ ಕೈಸನ್ನೆಮಾಡಿ ಕರೆದರೆ ಮನೆಯ ಹತ್ತಿರಕ್ಕೆ ಬಂದು, ಜಗುಲಿಯಮೇಲೆ ಕುಳಿತುಕೊಂಡು ತಲೆಯಕೂದಲನ್ನು ಕತ್ತರಿಸುತ್ತಾನೆ. ಕತ್ತರಿಸಿಕೊಳ್ಳಬೇಕಾದವನು (ಮಡಿಪಂಚೆ) ಭೋಟಾಪಂಚೆಯನ್ನುಟ್ಟುಕೊಂಡು, ಅವನ ಎದುರಿಗೆ ಕುಳಿತುಕೊಳ್ಳುತ್ತಾನೆ. ಕ್ಷೌರಿಕನಿಗೆ ಸಂಭಾವನೆಯಾಗಿ ಹಣವನ್ನು ಕೊಡುವುದಿಲ್ಲ. ಅದಕ್ಕಾಗಿ ಬದಲಾಗಿ, ವರ್ಷಕ್ಕೊಂದಾವರ್ತಿ ಅವನ ಸಂಸಾರಕ್ಕೆ ಬೇಕಾಗುವ ಅಕ್ಕಿ, ರಾಗಿ ಮುಂತಾದ ಧಾನ್ಯಗಳನ್ನು ಹಳ್ಳಿಯಿಂದ ಒದಗಿಸುತ್ತಾರೆ.

ಉದಾ: ಹಜಾಮ ನಿಂಗನೇ ಬರಬೇಕು ನಮ್ಮ ತಾತನ ಕ್ಷೌರಕ್ಕೆ ಬೇರೆಯವರು ಸರಿಹೋಗಲ್ಲ.

ಉಚ್ಚಾರಣವ್ಯತ್ಯಾಸ: ಕ್ಷೌರ>ಚೌರ

ನೋಡಿ: ಚೌರಪದ್ಧತಿ

<kshoura> Haircut - To cut the excessively grown head hair is called Kshoura. They also call it as Hajamath. The person who cuts hair is Kshourika (barber). In our village, putting the required items to cut hair, like scissor, comb, knife etc. in a small box, the barber will be standing in a corner of the street. Seeing him if we make a sign and call, he comes near the house, sitting on the step he cuts hair. The person who wants his hair cut, wearing a small dhoti (Chotapanche) sits before him.

Barber does not get money. Instead, he gets the required items for his family like rice, ragi etc. for the whole year from the village.

Eg: Barber Ninga only must come to cut hair for grandpa. Any others will not suit.

Different pronunciation: Kshoura>Choura

See: Chourapadhhathi.

❑

ಖ / Kha



334. ಖಂಜರಿ: ಖಂಜರಿ ಝಾಗಟೆಯ ಆಕಾರದಲ್ಲಿದ್ದು, ಒಂದು ಭಾಗಕ್ಕೆ ಮೃಗದ ಚರ್ಮವನ್ನು ಬಿಗಿದಿರುತ್ತಾರೆ. ಖಂಜರಿಯ ಸುತ್ತಲೂ ನಾಲ್ಕು ಹಿತ್ತಾಳೆಯ ತಗಡಿನ ಬಿಲ್ಲೆಗಳನ್ನು ಸೇರಿಸಿರುತ್ತಾರೆ. ಚರ್ಮದಮೇಲೆ ಕೈಯಿಂದ ಹೊಡೆದರೆ ಬಿಲ್ಲೆಗಳು ಒಂದಕ್ಕೊಂದು ತಗುಲಿ ಝಲ್‌ಝಲ್ ಅಂತ ಶಬ್ದವಾಗುತ್ತೆ. ದೇವಸ್ಥಾನಗಳಲ್ಲಿ ಭಜನೆ ಮಾಡುವಾಗ, ಹರಿಕಥೆಗಳಲ್ಲಿ ಖಂಜರಿಯನ್ನು ಒಂದು ವಾದ್ಯವಾಗಿ ಉಪಯೋಗಿಸುತ್ತಾರೆ.

ಉದಾ: ಖಂಜರಿ ಶಂಕ್ರಜ್ಜ ನಮ್ಮೂರ ರಾಮಮಂದಿರದಲ್ಲಿ ಖಂಜರಿ ಬಾರಿಸುವುದರಲ್ಲಿ ಎತ್ತಿದ ಕೈ.

<khanjari> (-) Khanjari (a small musical instrument) in the form of jhagate is made of leather. Around the Khanjari four thin brass plates (a circular shaped object) are attached. When you hit on the leather, the plates touch one to another and makes jingling sound. While doing bhajan in the temple and during Harikathas, Khanjari is used as an instrument.

Eg: Khanjari Shankrajja is famous in playing Khanjari in Ramamandir.

335. ಖಂಡುಗ: ದವಸಧಾನ್ಯಗಳನ್ನು ಅಳೆಯುವ ಅಳತೆಯಪಾತ್ರೆಗೆ 20 ಸೇರಿನ ಅಳತೆಗೆ **ಖಂಡುಗ** ಎಂದು ಹೆಸರು.

ಉದಾ: ಕಡೇಮನೆ ಮುರುಗೇಂದ್ರಪ್ಪನಿಗೆ ಈಸಲ ನೂರು ಖಂಡುಗ ಭತ್ತ ಆಯ್ತಂತೆ.

<khanduga> (-) The vessel for measuring corns is called as Khanduga (twenty measures).

Eg: Last house Murugendrappa got hundred khandugas of paddy this season

336. ಖರ್ಚು: ವ್ಯವಹಾರದಲ್ಲಿ ಎಷ್ಟೆಷ್ಟು ಹಣ ಯಾವ ಬಾಬತ್ತಿಗೆ ಕೊಟ್ಟಿರುವುದೆಂಬ ಬಗ್ಗೆ ತಿಳಿಸುವುದಕ್ಕೆ **ಖರ್ಚು** ಎಂಬ ಪದವನ್ನು ಬಳಸುತ್ತಾರೆ.

ಉದಾ: ಮಗಾ ಏನೇನು ಖರ್ಚುಮಾಡಿದೀಯ ಅನ್ನುವುದನ್ನು ಪಟ್ಟಿಮಾಡಿ ಬರೆದಿಟ್ಟರೆ ಉತ್ತಮಕಣಪ್ಪಾ.

<kharchu> Expenditure - During transaction, to make known how much amount is paid for each item, the word kharchu is in vogue.

Eg: Son, it is better to make a statement of expenditure.

337. ಖರೀದಿಪತ್ರ: ನೋಡಿ: ಕ್ರಯಚೀಟಿ

<khareedipathra> Sale Deed, See: Krayacheeti

338. ಖಾಜೀನ್ಯಾಯ: ಯಾವುದಾದರೂ ಕಾರಣದಿಂದಾಗಿ ಇಬ್ಬರು ಜಗಳವಾಡಿದಾಗ, ತೀರ್ಮಾನ ಮಾಡುವುದು ಬಹಳ ಕಷ್ಟ. ಜಾಣತನದಿಂದ ಇಬ್ಬರಿಗೂ ಬೆಂಬಲ ನೀಡಿದಾಗ ಖಾಜೀನ್ಯಾಯ ಎನ್ನುತ್ತಾರೆ.

ಉದಾ: ಅವರು ಹೇಳೋದೂ ಬರಾಬ್ಬರ್, ನೀವು ಹೇಳೋದೂ ಬರಾಬ್ಬರ್ ಮತ್ಯಾಕೆ ಝಗಡಾ?

<khajeenyaaya> (-) It is difficult to make a final decision when two people quarrel for any reason. Cleverly if you support both, they say it is Khajee nyaya.

Eg: What you are saying is correct, what he is saying is also correct, then why quarrel?

339. ಖಾತೆ: ಹಳ್ಳಿಯ ಪ್ರತಿಯೊಬ್ಬರಿಗೂ ಅವರ ಸಂಸಾರದ ವಿವರಗಳನ್ನು ಬರೆದಿಡಲು ಒಂದು ಪುಸ್ತಕದಲ್ಲಿ ಪ್ರತ್ಯೇಕ ಹಾಳೆಯನ್ನು ಶ್ಯಾನುಭೋಗರು ಇಟ್ಟಿರುತ್ತಾರೆ. ಅದರಲ್ಲಿ ರೈತನು ಅನುಭೋಗಿಸುತ್ತಿರುವ ಜಮೀನಿನ ಅಳತೆ, ಏನು ಬೆಳೆ ಬೆಳೆಯುತ್ತಾನೆ, ಅವನ ಸಂಸಾರದಲ್ಲಿ ಎಷ್ಟು ಜನ ಇದ್ದಾರೆ, ಎಷ್ಟು ಕಂದಾಯ ಸರ್ಕಾರಕ್ಕೆ ಕಟ್ಟುತ್ತಾನೆ ಎಂಬ ಬಗ್ಗೆ ವಿವರಗಳೆಲ್ಲ ಅದರಲ್ಲಿ ನಮೂದಿಸಿರುತ್ತೆ. ಆ ಪುಸ್ತಕಕ್ಕೆ **ಖಾತೆಪುಸ್ತಕ** ಎಂದು ಹೆಸರು.

ಉದಾ: ಶೀನಪ್ಪ ಈ ಸಲದ ನಿನ್ನ ಬೆಳೆಯನ್ನು ಖಾತೆಗೆ ಶಾನುಭೋಗರು ಬರೆದಿದ್ದಾರಾ?

<khaathe> Account book - Shanbhog keeps a separate sheet in a book for writing details of everyone in the village. In that how much land he owns, what crop he grows, how many people are in his family, how much tax he pays to the government, all details are written in that sheet. It is called Khathepusthaka.

Eg: Sheenappa, has Shanbhog written this season's crop in Khathe?

340. ಖಾನೇಶುಮಾರಿ: ಹಳ್ಳಿಯಲ್ಲಿ ಯಾರ ಯಾರ ಮನೆಯಲ್ಲಿ ಎಷ್ಟೆಷ್ಟು ಜನಗಳಿದ್ದಾರೆ ಎಂದು ಎಣಿಸುವುದಕ್ಕೆ ಶ್ಯಾನುಭೋಗರು **ಖಾನೇಶುಮಾರಿ** ಎನ್ನುತ್ತಾರೆ, ಒಬ್ಬೊಬ್ಬ ರೈತನಿಗೂ ಪ್ರತ್ಯೇಕವಾದ ಪುಸ್ತಕವಿರುತ್ತೆ. ಅದರಲ್ಲಿ ಅವನ ಬಗ್ಗೆ ಎಲ್ಲ ವಿಷಯಗಳನ್ನೂ ಬರೆದಿರುತ್ತಾರೆ.

ಉದಾ: ನೆನ್ನೆ ಅಮಲ್ದಾರರು ಖಾನೇಶುಮಾರಿ ಮಾಡಿದೀರಾ ಅಂತ ಶ್ಯಾನುಭೋಗರನ್ನ ಕೇಳ್ತಿದ್ದರು.

<khaaneshumaari> (-) Enumerating the house etc. - To count how many people are there in each house of the village, Shanbhog call it as Khaneshumari. Each farmer is allotted a separate book. Every detail will be written in that.

Eg: Yesterday, the Amaldar was enquiring the Shanbhog whether he has done Khaneshumari.

341. ಖುಲಾಯಿಸು: ಅನಿರೀಕ್ಷಿತವಾಗಿ ಒದಗಿ ಬರುವ ಅನುಕೂಲಗಳನ್ನು ತಿಳಿಸುವಾಗ **ಖುಲಾಯಿಸಿದೆ** ಎನ್ನುತ್ತಾರೆ.

ಉದಾ: ಈ ಊರಿಗೆ ಅವ ಬಂದದ್ದೇ ತಡ ಅವನ ಅದೃಷ್ಟ ಹ್ಯಾಗೆ ಖುಲಾಯಿಸಿತು ನೋಡು. ಮದುವೆಯಾದ ಹುಡುಗಿಯ ಕಾಲ್ಗುಣ ಒಳ್ಳೆಯದು. ಇವನ ಅದೃಷ್ಟ ಖುಲಾಯಿಸಿತು.

<khulaayisu> (-) To get the facilities unexpectedly - To express the facilities provided unexpectedly, they say Khulayiside.

Eg: The very moment he came to this place, see how his fortune opened. The arrival of the married girl is good. His fortune blossomed.

❑

ಗ / Ga

342. ಗಂಗಮ್ಮನ ಪೂಜೆ: ಗಂಗಮ್ಮನ ಪೂಜೆ ಕೂಡ ಕೆಲವು ಮನೆತನದವರಲ್ಲಿ ಮಾತ್ರ ಅನುಸರಣೆ ಇದೆ. ಆ ದಿನ ಹಳ್ಳಿಯ ಮುತ್ತೈದೆಯರನ್ನೆಲ್ಲ ಕರೆದು, ಕಾಲು ತೊಳೆದು ಒಬ್ಬೊಬ್ಬರಿಗೂ ಒಂದು ಕಂಚಿನ ತಂಬಿಗೆಯನ್ನು ಕೊಡುತ್ತಾರೆ. ನಂತರ ಎಲ್ಲರೂ ಕೆರೆಗೆ ಹೋಗಿ ನೀರು ತುಂಬಿಕೊಂಡು ಅದರ ಮೇಲೆ ತೆಂಗಿನಹೂವನ್ನಿಟ್ಟು ತಂಬಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಮನೆಗೆ ತರುತ್ತಾರೆ. ಎಲ್ಲ ತಂಬಿಗೆಗಳನ್ನು ಸಾಲಾಗಿಟ್ಟು ಪೂಜೆ ಮಾಡಿ ಆರತಿ ಎತ್ತುತ್ತಾರೆ. ಮುತ್ತೈದೆಯರಿಗೆಲ್ಲ ಅರಿಶಿನ ಕುಂಕುಮ ಹೂವನ್ನು ಕೊಟ್ಟು ಎಲ್ಲರಿಗು ಹೊಸ ಸೀರೆ ಕುಬುಸ ಕೊಡುತ್ತಾರೆ. ಅವರುಗಳು ಅದೇ ಸೀರೆಯನ್ನುಟ್ಟು ಕುಬುಸ ತೊಟ್ಟು ಬಂದನಂತರ ಊಟಕ್ಕೆ ಬಡಿಸುತ್ತಾರೆ.

ಉದಾ: ನಾಳೆ ನಮ್ಮ ಮನೆಯಲ್ಲಿ ಗಂಗಮ್ಮನ ಪೂಜೆ ಇಟ್ಟಿದೀವಿ ತಪ್ಪದೇ ಬರಬೇಕು.

ನೋಡಿ: ಗಂಗಾಸಮಾರಾಧನೆ

<gangammanapooje> (-) Gangammanapuje is also in vogue in a few families. That day they invite all the married women of the village, wash their legs and give each a small brass vessel. Then they go to the tank, fill water in it, put a coconut flower on top, carrying on their head and bring home.

They keep all vessels in a line, worship and perform the arathi by waving a ritualistic burning lamp. They offer to everyone turmeric powder, kunkum and flower, give a new saree and blouse. After they wear and come, they offer food.

Eg: We are performing Gangammanapuje in our house. Without fail you must come.

See: Gangasamaradhane.

343. ಗಂಗಾ ಸಮಾರಾಧನೆ: ಗಂಗಮ್ಮನ ಪೂಜೆ ಮಾಡಿದ ದಿನ ಬಂದ ಮುತ್ತೈದೆಯರನ್ನು ಕರೆದು ಏರ್ಪಡಿಸುವ ಭೋಜನಕ್ಕೆ **ಗಂಗಾ ಸಮಾರಾಧನೆ** ಎಂದು ಹೇಳುತ್ತಾರೆ.

<gangaasamaaraadhane> (-) Mass feeding by people after returning from piligrimage - Arranging lunch to all married women on the day of Gangammanapuje is called Gangasamaradhane.

344. ಗಂಗಾಳ: ನೋಡಿ: ಕಂಚು

<gangaala> See: Kanchu

345. ಗಂಗೆ ತರುವುದು: ಮದುವೆ ಕಾರ್ಯಕ್ರಮಗಳು ಪ್ರಾರಂಭವಾಗುವುದಕ್ಕೆ ಮುಂಚೆ ಏಳು ಜನ ಮುತ್ತೈದೆಯರು ಮಡಿಯಲ್ಲಿ ಕೆರೆಗೆ ಹೋಗಿ ಹಿತ್ತಾಳೆಯ ಕೊಡದಲ್ಲಿ ನೀರು ತುಂಬಿಕೊಂಡು ತಲೆಯ ಮೇಲೆ ಹೊತ್ತು ಬರುತ್ತಾರೆ. ಆ ಕಾರ್ಯಕ್ರಮಕ್ಕೆ ಗಂಗೆತರುವುದು ಎಂದು ಹೇಳುತ್ತಾರೆ. ಗಂಗೆ ತರುವಾಗ ವಾದ್ಯದವರು ಓಲಗ ಊದಿಕೊಂಡು ಬರುತ್ತಾರೆ.



ಉದಾ: ನನ್ನ ಮಗನ ಮದುವೆಯಲ್ಲಿ ರಾಮಕ್ಕ, ಭೀಮಕ್ಕ, ಲಲಿತ, ವನಿತ, ಸುಬ್ಬಿ, ರಂಗಿ, ವಿಜಯ ಏಳು ಜನ ಮುತ್ತೈದೆಯರು ಶಿವನಕೆರೆಯಿಂದ ಗಂಗೆ ತಂದರು.

<gangetharuvudu> (-) Bring sacred water from the tank - Before the commencement of marriage rituals seven married women go to the tank auspiciously, filling water in brass vessel,

come carrying on their head. They say for this program as Gangetharuvudu. While bringing the water, the group people will blow pipe.

Eg: During my son's marriage, Ramakka, Bheemakka, Lalitha, Vanitha, Subbi, Rangi and Vijaya seven married women brought gange from Shivanakere.

346. ಗಂಜಿಯೂಟ: ನೋಡಿ: ಅಂಬಲಿ

<ganjiyoota> Gruel - See: Ambali

347. ಗಂಟುಬೀಳು: ಪ್ರತಿಯೊಂದಕ್ಕು ಅವಲಂಬಿಸುವುದು ಮತ್ತು ಬೆನ್ನುಹತ್ತಿ ಬರುವುದಕ್ಕೆ **ಗಂಟುಬೀಳುವುದು** ಎನ್ನುತ್ತಾರೆ.

ಉದಾ: ಗೌಡರ ತಮ್ಮ ನನಗೆ ಗಂಟುಬಿದ್ದಿದ್ದಾನೆ, ಎಷ್ಟೂಂತ ಸಹಾಯ ಮಾಡುಕ್ಕಾಗುತ್ತೆ.

ನೋಡಿ: ಗಂಟುಹಾಕು

<gantubeelu> Get entangled - Depending for everything and pursuing is called gantubeeluvudu.

Eg*: Gowda's brother is pursuing me. How much I can help.*

See: Gantuhaku.

348. ಗಂಟುಹಾಕುವುದು: ಹಣವನ್ನು ಕೂಡಿಡುವುದಕ್ಕೆ **ಗಂಟುಹಾಕುವುದು** ಅಥವಾ ಗಂಟುಮಾಡಿಡುವುದು ಎನ್ನುವ ಪದ ಬಳಕೆಯಲ್ಲಿದೆ. ತಾಳಿಕಟ್ಟುವುದನ್ನು ತಾಳಿ ಗಂಟುಹಾಕುವುದು ಎನ್ನುತ್ತಾರೆ. ಬಿಡಲಾಗದ ಸಂದರ್ಭವನ್ನು ಗಂಟುಹಾಕಿಕೊಳ್ಳುವುದು ಎನ್ನುತ್ತಾರೆ.

ಉದಾ: ಸುಬ್ಬಯ್ಯಂಗೆ ಮಕ್ಕಳು ಮರಿ ಇಲ್ಲ. ಸುಮ್ಮನೆ ಹಣವನ್ನೆಲ್ಲ ಗಂಟುಹಾಕಿ (ಗಂಟು ಮಾಡಿ) ಕೂಡಿಡ್ತಾ ಇದಾನೆ.

ನೋಡಿ: ಗಂಟುಬೀಳು

<gantuhaakuvudu> Hoarding - For amassing money, the word gantuhakuvudu is in vogue. To tie mangalya, they say Thaligantuhakuvudu. The time of action which cannot be avoided is called gantuhakikolluvudu.

Eg: Subbayya has no children. Simply amassing wealth.

See: Gantubeelu

349. ಗಂಡಾಂತರ: ಮಾಡುವ ಕೆಲಸಗಳಲ್ಲಿ ಏನಾದರೂ ಭಾರಿ ತೊಂದರೆ ಉಂಟಾಗುವಾಗ ಯಾವುದೋ **ಗಂಡಾಂತರ** ಕಾದಿದೆ ಎನ್ನುತ್ತಾರೆ.

ಉದಾ: ರಾಮಪ್ಪ ಏನೋ ಅಂತೂ ಒಂದು ಗಂಡಾಂತರ ಕಳೀತು, ಸಮಾಧಾನ ಮಾಡ್ಕೊ.

<gandaanthara> Great danger - While doing work if any serious trouble occurs, they say some gandanthara is awaited.

Eg: Ramappa, somehow one great danger is over. Console yourself.

350. ಗಂಡಾಳು: ಗದ್ದೆ ಹೊಲಗಳಲ್ಲಿ ಬೇಸಾಯದ ಕೆಲಸ ಮಾಡಿಸುವುದಕ್ಕೆ ಬರುವ ಕೂಲಿಯವನಿಗೆ ಗಂಡಾಳು, ಕೂಲಿಯವಳಿಗೆ ಹೆಣ್ಣಾಳು ಎನ್ನುತ್ತಾರೆ. ಹೆಣ್ಣಾಳಿಗೆ ಗಂಡಾಳಿಗಿಂತ ಕಡಿಮೆ ಕೂಲಿ ಕೊಡ್ತಾರೆ.

ಉದಾ: ಗಂಡಾಳಿಗೆ ದಿನಕ್ಕೆ ಎಷ್ಟು ಕೂಲಿ ನಿಗದಿ ಮಾಡಿದೀರಿ. ನಮ್ಮ ಗದ್ದೆಹೊಡೆಯುವುದಕ್ಕೆ ಹತ್ತು ಗಂಡಾಳುಗಳನ್ನು ಕರೆಸಿದೀನಿ. ಜತೆಗೆ ತೋಟದ ಕೆಲಸಕ್ಕೆ 6 ಜನ ಹೆಣ್ಣಾಳನ್ನು ಕರೆಸಿ.

<gandaalu> Male Person - The people who come to do work in agricultural land, man-laborer is called gandalu, woman laborer is called hennalu. For woman laborer they pay less wages than man laborer.

Eg: How much wage you have decided for man laborer? For work in our land I have called ten men laborers. Side by side, for garden work, I have called six women laborers.

351. ಗಂಜಲ: ಹಸುವಿನ ಮೂತ್ರವನ್ನು **ಗಂಜಲ** ಎನ್ನುತ್ತಾರೆ. ಹಸುಗಳನ್ನು ಕಟ್ಟುವ ಜಾಗದಲ್ಲಿ, ನಾಲ್ಕಾರು ಸಣ್ಣ ಗುಂಡಿಗಳನ್ನು ತೋಡಿರುತ್ತಾರೆ. ಹಸುಗಳು ಮೂತ್ರ ಹೊಯ್ದಾಗ ಅದು ಆ ಗುಂಡಿಗಳಲ್ಲಿ ಶೇಖರವಾಗಿರುತ್ತೆ. ಪ್ರತಿದಿನ ಬೆಳಿಗ್ಗೆ ಮೂತ್ರವನ್ನು ಗುಂಡಿಗಳಿಂದ ಎತ್ತಿ ಗೊಬ್ಬರದ ಜೊತೆಗೆ ಸೇರಿಸುತ್ತಾರೆ.

ಉದಾ: ದನದಕೊಟ್ಟಿಗೇಲಿ ಎಲ್ಲ ಗುಂಡಿಲು ಗಂಜಲ ತುಂಬಿದೆ. ಎತ್‌ಹಾಕು.

ಉಚ್ಚಾರಣಾ ವ್ಯತ್ಯಾಸ; ಗಂಜಳ (ಗಂಜಲ)

ನೋಡಿ: ಕೊಟ್ಟಿಗೆ

<ganjala> Urine of cattle - Cow's urine is called ganjala. In the cowshed there will be four to six pits dug. When cows pass urine, it will be collected in those pits. Everyday morning, they shift the urine and mix with the manure.

Eg: In the cowshed all the pits are full of urine. Take it out.
Different pronunciation: GanjaLa (gangala)

See: Kottige (cowshed)

352. ಗಂಜಲಗುಂಡಿ: ನೋಡಿ: ಕೊಟ್ಟಿಗೆ

<ganjalagundi> Urine pit - See Kottige

353. ಗಂಧಾಕ್ಷತೆ: ಗಂಧದಕೊರಡನ್ನು ಸಾಣೇಕಲ್ಲಿನ ಮೇಲೆ ನೀರುಹಾಕಿ ತೇಯ್ದರೆ ಗಂಧ ಬರುತ್ತೆ. ಅದಕ್ಕೆ ಒಣಗಿದ ಬಾಳೆಹಣ್ಣಿನ ಸಿಪ್ಪೆಯನ್ನು ಬೆಂಕಿಯಲ್ಲಿ ಸುಟ್ಟು ಬರುವ ಕರಿಕನ್ನು ಬೆರೆಸಿ ಕೈಯಲ್ಲಿ ತಿಕ್ಕುತ್ತಾರೆ. ಅದೇ ಅಕ್ಷತೆ. ಶುಭಕಾರ್ಯಗಳಲ್ಲಿ ಊಟಕ್ಕೆ ಮುಂಚೆ ಪ್ರತಿಯೊಬ್ಬರಿಗೂ ಗಂಧ ಮತ್ತು ಅಕ್ಷತೆಯನ್ನು ಕೊಡುತ್ತಾರೆ. ಗಂಧವನ್ನು ಕಿರುಬೆರಳಿನಿಂದ ರೈಲುಕಂಬಿಯಂತೆ ಹಣೆಯುದ್ದಕ್ಕೂ ಎಳೆದು, ಮಧ್ಯಕ್ಕೆ ಅಕ್ಷತೆಯನ್ನು ತೋರುಬೆರಳಿನಿಂದ ಒಂದು ಬಟ್ಟನ್ನು ಇಟ್ಟುಕೊಳ್ಳುತ್ತಾರೆ.

ಉದಾ: ಎಲ್ಲಾ ಬಡಿಸಿಯಾಗಿದೆ, ಗಂಧಾಕ್ಷತೆ ಕೊಟ್ಟಿಡಿ.

<gandhaakshathe> (-) Rice mixed with sandal paste and turmeric powder - If the sandal piece is rubbed on the grinding stone, sandal paste comes out. For that dry banana skin burnt in fire is added and rubbed by hand. That is Akshathe. In all auspicious occasions, before lunch, sandal paste and akshathe is given to everyone. Along the forehead, sandal paste is put with little finger like railway track. In the center, akshathe is put with forefinger.

Eg: All items are served on the leaf. Give gandhakshathe.

354. ಗದ್ದೆಮಾರು: **ಗದ್ದೆಮಾರು** ಬಹಳ ದಪ್ಪವಾದ ಮಾವಿನಕಾಯಾದರೆ, ಮಿಡಿಮಾವು ಅತ್ಯಂತ ಸಣ್ಣದು. ಎರಡನ್ನೂ ಉಪ್ಪಿನಕಾಯಿ ಮಾಡುವುದಕ್ಕೆ



ಬಳಸುತ್ತಾರೆ. ಗದ್ದೆಮಾರು ಕಾಯಿಯನ್ನು ಹೆಚ್ಚಿಹಾಕಬೇಕು, ಮಿಡಿಕಾಯನ್ನು ಮಾತ್ರ ಉಂಡೆ ಉಂಡೆಯಾಗಿಯೆ ಉಪ್ಪಿನಕಾಯಿ ಮಾಡಲು ಬಳಸುತ್ತಾರೆ.

ಉದಾ: ತಿಮ್ಮಯ್ಯ ಹತ್ತು ಗದ್ದೆಮಾರುಕಾಯಿ ತಂದ್ಕೊಟ್ಟಿದಾನೆ, ಉಪ್ಪಿನಕಾಯಿ ಹಾಕ್ಬಿಡಿ.

<gaddemaaru> A kind of mango - If gaddemaru is a big size mango, miDimavu is very small. Both are used for making pickle. Gaddemaru mango should be cut, midi is used as it is.


Eg: Thimmayya has brought ten gaddemaru mangos. Make pickle.

355. ಗಟ್ಟಿಕುಳ: ಹಳ್ಳಿಯ ಶ್ರೀಮಂತರಾದ ಅನುಕೂಲಸ್ಥರನ್ನು **ಗಟ್ಟಿಕುಳ** ಎಂದು ಕರೆಯುತ್ತಾರೆ.

ಉದಾ: ಬೋರೇಗೌಡ್ರಿಗೇನು ಕೆರೆ ತಾವ 50 ಎಕರೆ ಜಮೀನ್ಯೆತೆ, ಲೇವಾದೇವೀನೂ ಮಾಡ್ತಾರೆ, ಬಹಳ ಗಟ್ಟಿಕುಳ.

<gaTTikula> Rich man - The rich people of the village are called gaTTikula.

Eg: Boregowda owns 50 acres of land near the tank. He does money transaction also. Very rich man.



356. ಗಡಪಾರಿ: ದೊಡ್ಡ ಮರದ ತುಂಡುಗಳು ಅಥವಾ ಕಲ್ಲುಚಪ್ಪಡಿ ಮುಂತಾದುವನ್ನು ಕೈಯ್ಯಲ್ಲಿ ನೂಕುವುದು ಸಾಧ್ಯವಾಗದೆ ಇದ್ದಾಗ **ಗಡಪಾರಿ** ಅಂದರೆ ದೊಡ್ಡ ಕಬ್ಬಿಣದ ಹಾರೆಯ ತುದಿಯನ್ನು ಚಪ್ಪಡಿಯ ಕೆಳಗೆ ಸೇರಿಸಿ ಮೀಟಿದರೆ ಕಲ್ಲು ಸುಲಭವಾಗಿ ಮುಂದಕ್ಕೆ ಚಲಿಸುತ್ತೆ.

ಉದಾ: ಸ್ವಲ್ಪ ಗಡಪಾರಿ ತಗಂಡ್ಬಾ, ಈ ಕಲ್ಲುಚಪ್ಪಡಿ ಜರುಗಿಸ್ಬೇಕು.

ಪದರೂಪ: ಗಢಾರಿ, ಗಡಾರಿ (ಗಡಪಾರಿ)

<gadapaari> Crowbar - Big wooden planks or stone slabs,

when it is not possible to move with hand, if edge of gadapari (big crowbar) is put under the stone and pushed, the stone moves easily.

Eg: Just bring gadapari. Must move this stone slab.

See: Gadhari, Gadari (gadapari)

357. ಗಡಿಗೆ: ನದಿ, ಕೆರೆಯಿಂದ ನೀರು ತರಲು ಉಪಯೋಗಿಸುವ ಮಣ್ಣಿನ ಪಾತ್ರೆಯೆ **ಗಡಿಗೆ**. ಸ್ವಲ್ಪ ಅಗಲವಾದ ಬಾಯುಳ್ಳ **ಮಣ್ಣಿನಗಡಿಗೆ**ಯಲ್ಲಿ ಮೊಸರನ್ನು, ಸಣ್ಣ ಚೊಂಬಿನಗಾತ್ರದ ಗಡಿಗೆಯಲ್ಲಿ ಹಾಲನ್ನು ತುಂಬಿಕೊಂಡು ಮಾರುವುದಕ್ಕೆ ಬರುತ್ತಾರೆ.



ಉದಾ: ಈ ವಾರ ಒಂದು ಗಡಿಗೆ ಮೊಸರು ಬೇಕಾಗುತ್ತೆ.

ನೋಡಿ: ಮಡಕೆ

<gadige> Mud pot - The mud pot used for bringing water from the river or tank, is Gadige. In mud pot with a little wider mouth curds, in little pot filled with milk they bring to sell.

Eg: This week one gadigefull curds is required.

See: Madake

358. ಗಡಗ: ನೋಡಿ: ರಾಟೆ, ಪಾತಾಳಗರಡಿ

<gadaga> See: Rate, Pathalagaradi

359. ಗಡು: ಸಾಲವಾಗಿ ಪಡೆದ ಹಣವನ್ನು ಹಿಂತಿರುಗಿಸಿ ಕೊಡುವುದಕ್ಕೆ ನಿಗದಿ ಮಾಡುವ ಕಾಲವನ್ನು (ಅವಧಿಯನ್ನು) **ಗಡು (ಗಡುವು)** ಎಂದು ಹೇಳುವುದು ರೂಢಿ.

ಉದಾ: ಈ ಸಲದ ಗದ್ದೆ ಕೊಯ್ಲಾಗುವ ಹೊತ್ತಿಗೆ ಸಾಲದ ಗಡು ತೀರುತ್ತೆ. ಸಾಲ ತೀರಿಸಬೇಕು. ಇಲ್ಲದಿದ್ದರೆ ಆಗಿರುವ ಬಡ್ಡಿ ಕೊಟ್ಟು, ಗಡು ಮುಂದುವರಿಸುವುದಕ್ಕೆ ಕೇಳಬೇಕು.

<gadu> Term / Period - It is common to say the time fixed for returning the loan amount as Gadu (gaduvu).

Eg: By the time of harvesting this season, the time fixed

for returning the loan will be over. Must return the loan. Otherwise, we must pay the interest till now and ask for extension of time.



361. ಗಣಪತಿವ್ರತ: ಗಣಪತಿವ್ರತ ಪ್ರತಿಯೊಬ್ಬ ಗಂಡಸರೂ ಅವರವರ ಮನೆಯಲ್ಲಿ ಮಣ್ಣಿನಿಂದ ಮಾಡಿದ ಗಣಪತಿಯನ್ನಿಟ್ಟು ಪೂಜಿಸಿ ನಾಲ್ಕೈದು ದಿವಸಗಳ ನಂತರ ಗಣಪತಿಯನ್ನು ವಿಸರ್ಜನೆ ಮಾಡಿ ಗಣಪತಿಯ ಮೇಲಿನ ಭಜನೆ ಮಾಡುತ್ತ ಕೆರೆಗೆ ತೆಗೆದುಕೊಂಡು ಹೋಗಿ ನೀರಿನಲ್ಲಿ ಮುಳುಗಿಸುತ್ತಾರೆ. ಗಣಪತಿಯ ನೈವೇದ್ಯಕ್ಕೆ ಕರಿಗಡುಬು ಮತ್ತು ಮೋದಕ ಬಹಳ ಶ್ರೇಷ್ಠ. ಗಣಪತಿ ಹಬ್ಬದ ದಿನ ರಾತ್ರೆ ಚಂದ್ರನನ್ನು ನೋಡಬಾರದೆಂದು ಪ್ರತೀತಿ ಇದೆ. ನೋಡಿದರೆ ಸ್ಯಮಂತಕೋಪಾಖ್ಯಾನ ಎಂಬ ಪುರಾಣಕಥೆಯನ್ನು ಓದುತ್ತಾರೆ.

ಸಮಾನಾರ್ಥಕ: ಗಣೇಶ (ಗಣಪತಿ)

<ganapatheevratha> (-) Ganapathivratha every male person worships in his house the idol of Ganesha made of mud and after four or five days, reciting Ganapathi bhajan go to the tank, immerse into water. To offer Ganesha, Karigadubu and Modaka are the best. On the night of Ganesha festival it is forbidden to see the moon. If seen, they read Syamanthakopakhyana, a pouranic story.

Equivalent: Ganesha (Ganapathi)



361. ಗಣೇಶ (ಗಣಪತಿ): ನೋಡಿ: ಗಣಪತಿವ್ರತ

<ganesha> (Ganapathi) See: Ganapathivratha

362. ಗರಡಿಮನೆ: ವ್ಯಾಯಾಮ–ಕಸರತ್ತು ಮಾಡುವ ಜಾಗಕ್ಕೆ **ಗರಡಿಮನೆ** ಎಂದು ಹೆಸರು. ಗರಡಿಮನೆಯ ಒಳಭಾಗದಲ್ಲೆಲ್ಲ ಕೆಮ್ಮಣ್ಣು ಹರಡಿರುತ್ತೆ. ಗರಡಿಯ ಮುಖ್ಯಸ್ಥನನ್ನು ಜಟ್ಟಿ ಅಥವಾ **ಪೈಲ್ವಾನ್** ಎಂದು ಸಂಬೋಧಿಸುತ್ತಾರೆ. ಹಳ್ಳಿಯ ಹುಡುಗರಿಗೆ ವ್ಯಾಯಾಮ ಮಾಡುವುದನ್ನು ಕ್ರಮವಾಗಿ ಹೇಳಿಕೊಟ್ಟು ತರಬೇತಿ ಕೊಡುವುದೇ ಪೈಲ್ವಾನರ ಕರ್ತವ್ಯ. ಹಳ್ಳಿಗೊಂದು ಗರಡಿಮನೆ ಇದ್ದೇ ಇರುತ್ತೆ. ಇದನ್ನು ಅಖಾಡ ಎಂದೂ ಹೇಳುತ್ತಾರೆ. ಪೈಲ್ವಾನರು ಎಲ್ಲಿ ಹೋದರೂ ಅವರನ್ನು ಬಹಳ

ಗೌರವದಿಂದ ಕಾಣುತ್ತಾರೆ, ಮರ್ಯಾದೆಯಿಂದಲೋ ಅಥವಾ ಭಯದಿಂದಲೋ ಗೊತ್ತಿಲ್ಲ! ಪೈಲ್ವಾನರನ್ನು ಉಸ್ತಾದ್ ಎಂದೂ ಕರೆಯುತ್ತಾರೆ.

ಉದಾ: ಪೈಲ್ವಾನ್ ರಂಗಪ್ಪ ಗರಡಿಮನೆಲಿ ಇದ್ದಾನೊ ನೋಡ್ಕಂಡ್ಬಾ.

ನೋಡಿ: ಜಟ್ಟಿ, ಪೈಲ್ವಾನ್

<garadeemane> Gymnasium - The place where physical exercise is done, is called garadimane. Inside red soft soil is spread. The main person of garadi is addressed as Jatti or Pailwan (Wrestler). It is the duty of Pailwan to train boys of the village by giving regular exercise. There will always be a garadimane in the village. It is also called Akhada. Pailwans wherever they go, they are respected. Whether it is due to regard or fear is not known! Pailwans are addressed as Ustad.

Eg: Just look for Pailwan Rangappa in Garadimane.

See: Jatti, Pailwan

363. ಗರಿಕೆ: ಒಂದು ತೆರನಾದ ಹುಲ್ಲಿಗೆ ಗರಿಕೆ ಎನ್ನುತ್ತಾರೆ. ಗರಿಕೆಗೆ ದೂರ್ವೆ ಎಂದೂ ಹೇಳುವರು. ಗಣಪತಿಹಬ್ಬದ ದಿನ ಗಣಪತಿಗೆ 21 ದೂರ್ವೆಯನ್ನು ಪೂಜಿಸುತ್ತಾರೆ. ದೂರ್ವೆಯನ್ನು ಗರಿಕೆಹುಲ್ಲು ಎಂದು ಕರೆಯುತ್ತಾರೆ. ಗರಿಕೆಹುಲ್ಲಿಗೆ 3 ಎಸಳು ಇರುತ್ತದೆ.

ಉದಾ: ಬೆಳಿಗ್ಗೆ ಮುಂಚೆ ಎದ್ದು ದೂರ್ವೆ ಕಿತ್ತಿಡು ಪೂಜೆಗೆ.

<garike> (-) A type of grass is known as garike. Also called as Dharbe. On Ganesha festival day they worship with 21 doorve. They also call as garikehullu. For garikehullu there wil be three petals.

Eg: Get up early in the morning and pluck doorve for pooja.

364. ಗಲ್ಲಿ: ಇಕ್ಕಟ್ಟಾದ ರಸ್ತೆಯನ್ನು, ಸಾಮಾನ್ಯವಾಗಿ ಮನೆಗಳ ಸಾಲುಗಳ ನಡುವೆ ಇರುವ ರಸ್ತೆಗೆ ಸೇರುವ ಓಣಿರಸ್ತೆಗಳನ್ನು ಗಲ್ಲಿಗಳೆಂದು ಕರೆಯುತ್ತಾರೆ. ಬೆಂಗಳೂರಿನಲ್ಲಿ ಸಾಕಷ್ಟು ಹಳೆಯ ಗಲ್ಲಿರಸ್ತೆಗಳಿವೆ.

ಉದಾ: ರಾಣೋಜಿರಾವ್ ಗಲ್ಲಿಯಲ್ಲಿ ನಮ್ಮನೆ ಇದೆ.

ನೋಡಿ: ಓಣಿ

<galli> Lane - Narrow road, generally the road in between houses which joins the main road is called galli. In Bangalore there are enough old lanes.

Eg: Our house is in Ranojirao's lane.

See: Lane

365. ಗವಳಿಗಿತ್ತಿ: ಹಳ್ಳಿಗಳಲ್ಲಿ ಹಾಲು, ಮೊಸರು ಮಾರಾಟಮಾಡುವ ಹೆಂಗಸಿಗೆ **ಗವಳಿಗಿತ್ತಿ** ಎನ್ನುತ್ತಾರೆ. ಮನೆಯಲ್ಲಿ ಹಸು ಕರುಗಳು ಇಲ್ಲದೆ ಇರುವವರು ಗವಳಿಗಿತ್ತಿಯಿಂದ ಹಾಲು, ಮೊಸರನ್ನು ಕೊಳ್ಳುತ್ತಾರೆ. ಗವಳಿಗಿತ್ತಿ, ಹಾಲು, ಮೊಸರಿನ ಮಡಕೆಗಳನ್ನು ಮಂಕರಿಯಲ್ಲಿಟ್ಟುಕೊಂಡು ಮನೆಮನೆಗೂ ಬರುತ್ತಾಳೆ.

ಉದಾ: ಮೊಸರ್‌ಬೇಕೇ ಮೊಸರು ಅಂತ ಕೂಗುತ್ತಾ ಬಂದಳು ಗವಳಿಗಿತ್ತಿ ಮಂಗಮ್ಮ.

<gavaligithhi> Woman cowherd - The woman who sells milk, curds in villages is called gavaligithhi. Those who do not own cows or buffalos buy milk, curds from gavalagithhi. Gavalagithhi keeping the pots of milk, curds in a basket comes to every house.

Eg: Shouting mosarbeke mosaru, came Gavalagithhi Mangamma.

366. ಗಷ್ಟು: ಬೆಣ್ಣೆ ಕಾಯಿಸಿ ತುಪ್ಪ ಮಾಡುವಾಗ ತಳಭಾಗದಲ್ಲಿ ನಿಲ್ಲುವ ಪದಾರ್ಥಕ್ಕೆ ಗಷ್ಟು ಎಂದು ಹೆಸರು. ಎಣ್ಣೆಯಲ್ಲಿ ಬೋಂಡ, ವಡೆ ಮುಂತಾದುವುಗಳನ್ನು ಕರಿದಾಗ ತಳದಲ್ಲಿ ಉಳಿಯುವ ತೊಟ್ಟು ಎಣ್ಣೆಗೂ ಗಷ್ಟು ಎನ್ನುತ್ತಾರೆ. ಗಷ್ಟು ಎಂಬುದಕ್ಕೆ ಚರಟ ಎನ್ನುವುದು ಇನ್ನೊಂದು ಪದವಾಗಿದೆ.

ಉದಾ: ಬಾಣಲೆ ಚೆನ್ನಾಗಿ ತೊಳಕೊಡು, ತುಂಬ ಗಷ್ಟಿದೆ.

ನೋಡಿ: ಚರಟ

<gashtu> Sediment - While boiling butter for making ghee, the remnant part is known as gashtu. When frying bonda or vada in oil, the remaining little oil is also called as gashtu. Charata is another name for gashtu.

Eg: Clean the pan well There is plenty of sediment.


See: Charata

367. ಗಳಿಗೆಮುರಿ: ಅಂಗಡಿಯಿಂದ ತಂದ ಹೊಸ ಪಂಚೆ ಅಥವಾ ಮಗುಟದ ಮಡಿಕೆಯನ್ನು ಬಿಚ್ಚುವುದಕ್ಕೆ **ಗಳಿಗೆಮುರಿ**ಯುವುದು ಎನ್ನುತ್ತಾರೆ. ಹೊಸ ಬಟ್ಟೆಯನ್ನು ತಂದ ಹಾಗೆ ಉಡಬಾರದು. ಗಳಿಗೆ ಮುರಿದು, ಕುಂಕುಮ ಹಚ್ಚಿ ದೇವರ ಮುಂದಿಟ್ಟು ನಂತರ ಉಡಬೇಕು ಎಂಬುದು ಸಂಪ್ರದಾಯ. **ಗಳಿಗೆಮುರಿ** ಎನ್ನುವುದಕ್ಕೆ **ಮಡಿಕೆಬಿಚ್ಚು** ಎಂದೂ ಹೇಳುತ್ತಾರೆ.

ಉದಾ: ಹೊಸಾ ಪಂಚೆ, ಗಳಿಗೆಮುರಿದು ಉಟ್ಟುಕೊ.

<galigemuri> Unfolding the new clothes - To unfold the new dhothi or silk cloth brought from shop they call galigemuriyuvudu. We should not wear as it is brought from shop. It is the custom to unfold the cloth, smear kunkum, place before god and then wear. They also say as madikebichhu for galigemuri.

Eg: New dhothi, wear it after unfolding.



368. ಗಾಣ: ಕಡಲೆಕಾಯಿ, ಹರಳು ಮತ್ತು ಎಳ್ಳು ಮುಂತಾದ ಧಾನ್ಯಗಳಿಂದ ಎಣ್ಣೆಯನ್ನು ತೆಗೆಯಲು ಗಾಣ ಅವಶ್ಯವಾಗಿ ಬೇಕು. ದಪ್ಪವಾದ ಮರದ ತುಂಡನ್ನು ಕೊರೆದು ಒರಳಿನಂತೆ ಮಾಡುತ್ತಾರೆ. ಇನ್ನೊಂದು ಭಾರವಾದ ಮರದ ತುಂಡನ್ನು ಗುಂಡುಕಲ್ಲಿನಂತೆ ಅದರೊಳಗೆ ಇಡುತ್ತಾರೆ. ಧಾನ್ಯವನ್ನು ಒರಳೊಳಕ್ಕೆ ಸುರಿದು, ಎತ್ತು ಅಥವಾ ಎಮ್ಮೆ ಕೋಣದ ಸಹಾಯದಿಂದ ತಿರುವುದರ ಮೂಲಕ ಬೇಯಿಸಿದ ಧಾನ್ಯವು ಎಣ್ಣೆಯಾಗಿ ಬರುತ್ತೆ. ನಂತರ ಅದನ್ನು ಶೋಧಿಸಿ ಎಣ್ಣೆ ಮತ್ತು ಹಿಂಡಿಯನ್ನು ಬೇರ್ಪಡಿಸುತ್ತಾರೆ. ಕೆಲವೊಮ್ಮೆ ಜನರೇ ಗಾಣವನ್ನು ತಿರುಗಿಸುತ್ತಾರೆ. ಹಿಂಡಿಯನ್ನು ದನಕರುಗಳ ಆಹಾರವಾಗಿಯೂ, ಗೊಬ್ಬರವಾಗಿಯೂ ಉಪಯೋಗಿಸಬಹುದು. ಬೆಳಗಿನಿಂದ ಸಂಜೆಯವರೆಗೂ ಗಾಣದ ಎತ್ತಿನಂತೆ ದುಡಿಯುವುದೊಂದೇ ಕೆಲಸ ಅನ್ನೋ ಗಾದೆಯೂ ರೂಢಿಯಲ್ಲಿದೆ. ಎಣ್ಣೆಗಾಣ ಎಂದೂ ಗಾಣವನ್ನು ಕರೆಯುತ್ತಾರೆ.

ಉದಾ: ಗಾಣಕ್ಕೆ ಹೋಗಿ ಒಂದು ಡಬ್ಬ ಒಳ್ಳೆಣ್ಣೆ ತಗಂಬಾ.

<gaana> Oil crusher - To extract oil from groundnut, haralu and sesame etc. gaana is essentially required. Drilling a thick wooden piece make like grinding stone. They put another

heavy wooden piece into it. Pouring the baked crop into it with the help of an ox or buffalo they turn. The crop comes out as oil. Then they clean up and separate oil and residue. Sometime, people only turn the gaana. The residue can be used as food for cattle, also as manure. Work from morning to evening like an ox of gaana is a proverb which is in vogue. Also gaana is called as Oilgaana.

Eg: Go to gaana and bring a tin of sesame oil.

369. ಗಾಣಿಗ: ಎಳ್ಳೆಣ್ಣೆ, ಹರಳೆಣ್ಣೆ, ಕೊಬ್ಬರಿಎಣ್ಣೆ ಮುಂತಾದುವುಗಳನ್ನು ಗಾಣದಲ್ಲಿ ತಯಾರು ಮಾಡಿ ಮಾರಾಟ ಮಾಡುವವನನ್ನು **ಗಾಣಿಗ** ಎನ್ನುತ್ತಾರೆ. ಅದೇ ಅವನ ಜೀವನೋಪಾಯದ ವೃತ್ತಿ.

ಉದಾ: ಗಾಣಿಗ ಬಂದವ್ನೆ ನೋಡು, ಎರಡು ಕುಡಿಕೆ ಕೊಬರಿಎಣ್ಣೆ ಕೊಂಡುಕೊ.

<gaaniga> Oil miller - The person who prepares thil oil, castor oil, coconut oil etc. from oil mill is called Ganiga. That is his livelihood.

Eg: See Ganiga has come. Buy two pots of coconut oil.

370. ಗಾಣಿಗಿತ್ತಿ: ಗಾಣಿಗಿತ್ತಿ ಎಂದರೆ ಗಾಣಿಗನ ಹೆಂಡತಿ. ಗಾಣದೆಣ್ಣೆ ಮಾರುವವಳನ್ನು ಗಾಣಗಿತ್ತಿ ಎನ್ನುತ್ತಾರೆ.

ಉದಾ: ಗಾಣಿಗಿತ್ತಿ ಅಯ್ಯೋ ಎಂದರೆ ನೆತ್ತಿ ತಂಪಾದೀತೇ? (ಗಾದೆ)

<gaanigithhi> Wife of oil miller - Ganigithhi means, wife of Ganiga. The person who sells oil is called ganagithhi.

Eg: If ganagithhi says 'Ayyo' can head become cool (proverb)

371. ಗಾರೆಗಾಣ: ನೋಡಿ: ರೋಣುಗಲ್ಲು

<gaaregaaNa> See: **Ronugallu**

372. ಗಿಡ್ಡನಾಮ: ಉದ್ದನೆ ಹೆಸರುಗಳನ್ನು ಕರೆಯಲು ಅನುಕೂಲವಾಗಲು ನಿಜವಾದ ಹೆಸರನ್ನು ಮೊಟಕುಮಾಡಿ ಕರೆಯುವುದನ್ನು ಕಾಣುತ್ತೇವೆ.

ಉದಾ: ನಮ್ಮ ಕೃಷ್ಣಮೂರ್ತಿಯನ್ನು ಕಿಟ್ಟಿ ಎಂದೋ, ಪದ್ಮಾವತಿಯನ್ನು ಪದ್ದಿ

ಎಂದೋ, ಅದೇ ಇದ್ದಾಳಲ್ಲ ನಮ್ಮ ಮಗಳು ಅವಳ ಜೊತೆಯವಳೇ ಲಕ್ಷ್ಮೀದೇವಿಯನ್ನು ಲಚ್ಚಿ ಎಂದೋ ಕರೆಯುತ್ತಾರೆ.

<giddanaama> Nick name - To make it easy to call big names, we see by shortening the real names and call.

Eg: Calling our Krishnamurthy as Kitti, Padmavathi as Paddi or her friend, my daughter Lakshmidevi as Lachhi.



373. ಗಿಣಿಶಾಸ್ತ್ರ: ಗಿಣಿಶಾಸ್ತ್ರ ಹೇಳುವವನು ಪಂಜರದಲ್ಲಿ ಗಿಣಿಯನ್ನು ಇಟ್ಟುಕೊಂಡು ಬೀದಿಯ ಮೇಲೆ ಗಿಣಿಶಾಸ್ತ್ರ ಹೇಳೋನೂ ಅಂತ ಕೂಗುತ್ತ ಬರುತ್ತಾನೆ. ಯಾರಾದರೂ ಕೇಳುವುದಾದರೆ, ಗಿಣಿಯನ್ನು ಪಂಜರದಿಂದ ಹೊರಕ್ಕೆ ಬಿಟ್ಟು ಅದರ ಮುಂದೆ ಶಾಸ್ತ್ರಗಳನ್ನು ಬರೆದಿರುವ ಹತ್ತಾರು ತಾಳೇಗರಿಗಳನ್ನು ಹರಡುತ್ತಾನೆ. ಗಿಣಿ ಕೊಕ್ಕಿನಿಂದ ಆರಿಸಿದ ತಾಳೇಗರಿಯ ಮೇಲೆ ಬರೆದಿರುವುದನ್ನು ಶಾಸ್ತ್ರಕೇಳುವವರಿಗೆ ತಿಳಿಸುತ್ತಾನೆ. ಅದರಂತೆಯೆ ಆಗುತ್ತೆಂತ ಅವರ ನಂಬಿಕೆ.

ಉದಾ: ಗಿಣಿಶಾಸ್ತ್ರದವನು ಬಂದ ಅಣ್ಣಯ್ಯನನ್ನು ಕರೆ.

ನೋಡಿ: ಜ್ಯೋತಿಷ್ಯ

<ginishaasthra> (-) A type of Prediction - The person who tells ginishastra, keeping the parrot in a cage, shouting fortune teller comes. If anybody wants to listen, he will take the parrot out of cage and spreads about ten or twelve leaves on which shastra is written. The shastra written on one leaf picked by parrot with its beak, he will tell the person who has asked. It is their belief that it happens as per the shastra.

Eg: Fortune teller has come, call Annayya.

See: Astrology

374. ಗಿಟುಕು: ಸಿಪ್ಪೆ ಸಮೇತ ಇರುವ ತೆಂಗಿನ ಕಾಯನ್ನು ಚೆನ್ನಾಗಿ ಬಲಿತ ಮೇಲೆ ಕೆಲವಾರು ತಿಂಗಳುಗಳು ಹಾಗೆಯೆ ಇಟ್ಟರೆ ಅದರಲ್ಲಿರುವ ನೀರೆಲ್ಲ ಬತ್ತಿಹೋಗಿ ಕರಟದಿಂದ ಬೇರೆಯಾಗುತ್ತೆ. ಅದನ್ನು **ಗಿಟುಕು** ಎಂದು ಹೇಳುತ್ತಾರೆ. ನಂತರ ಮೇಲಿನ ಸಿಪ್ಪೆಯನ್ನು ಮಚ್ಚಿನಿಂದ ಸುಲಿದು ಕರಟವನ್ನು ಒಡೆದು ಗಿಟುಕನ್ನು ಬೇರೆ

ಮಾಡುತ್ತಾರೆ. ಕೆಲವು ತೋಟದ ಮಾಲಿಕರು ಗಿಟುಕು ಮಾಡುವುದಕ್ಕೆ ಒಂದು ಕೋಣೆಯನ್ನು ಪ್ರತ್ಯೇಕವಾಗಿ ಇಟ್ಟಿರುತ್ತಾರೆ. ಒಟ್ಟಿಗೆ ಮಾರಾಟ ಮಾಡುವವರು ಗಿಟುಕನ್ನು ಕಬ್ಬಿಣದ ದಸಿಯಿಂದ ಸುಲಿಸುತ್ತಾರೆ. ಮೇಲಿನ ಸಿಪ್ಪೆಯ ಸಮೇತ ಸುಲಿಯಬಹುದು. ಒಣಕೊಬ್ಬರಿ ಎಂದು ಗಿಟುಕಿಗೆ ಹೇಳುತ್ತಾರೆ.

ಉದಾ: ಅಟ್ಟದಮೇಲೆ ಹಾಕಿರುವ ತೆಂಗಿನಕಾಯಿಗಳೆಲ್ಲ ಗಿಟುಕಾಗಿರಬೇಕು. ನಾಲ್ಕು ಗಿಟುಕು ಸುಲದಾಕು.

ನೋಡಿ: ಕಬ್ಬಿಣದ ದಸಿ

<gituku> Dry coconut - Keeping the well grown coconut with outer skin for a few months, the water inside evaporates and coconut will get separated from the shell. It is called gituku. Then they peel out the outer skin and shell and separate it. Some garden owners will keep a separate room for piling up dry coconuts. Those who sell wholesale, they get dry coconuts separated with iron axe. It is possible to peel out together with outer skin.

Eg: Coconuts on altar must have become dry. Peel out four dry coconuts.


375. ಗುಂಟೆ: ತೋಟ, ಗದ್ದೆ, ಜಮೀನುಗಳ ವಿಸ್ತಾರವನ್ನು ಅಳತೆಮಾಡುವಾಗ ಎಕರೆ, ಗುಂಟೆ ಪದಗಳು ರೂಢಿಯಲ್ಲಿವೆ. ಹಿಂದಿನಕಾಲದಲ್ಲಿ ಅಳತೆಗೆ ನಿರ್ದಿಷ್ಟ ಅಳತೆಯ ಕೋಲನ್ನು ಬಳಸುತ್ತಿದ್ದರು. 40 ಗುಂಟೆ ಪ್ರದೇಶಕ್ಕೆ ಒಂದು ಎಕರೆ. ಒಂದು ಗುಂಟೆ ಎಂದರೆ 33 ಅಡಿ ಅಥವಾ 11 ಗಜ.


ಉದಾ: ನನಗೆ ಎರಡು ಗುಂಟೆ ಹೋದರೂ ಚಿಂತಿಲ್ಲಪ್ಪ ಅವನು ಚೆನ್ನಾಗಿರಲಿ.

<gunta> A measure - When measuring the area of garden, land etc. Acre, Gunta are the words in vogue. In olden days for measuring, they were using a yard stick. Area of 40 guntas is one acre. One gunta means 33 feet or 11 yards.

Eg: I do not mind losing two guntas, let him be well.

376. ಗುಂಡುಕಲ್ಲು: ಸುಮಾರು ಎರಡು ಅಡಿ ಎತ್ತರವಾದ ಕಲ್ಲಿನಲ್ಲಿ ಮಧ್ಯೆ ಐದಾರು ಅಂಗುಲ ಆಳದಷ್ಟು ರಂಧ್ರವನ್ನು ಕೊರೆದು ಮಾಡಿರುವುದು. ಅದರೊಳಗೆ ನೀರಿನಲ್ಲಿ ನೆನೆಸಿದ ಅಕ್ಕಿ, ಬೇಳೆ ಮುಂತಾದುವನ್ನು ಹಾಕಿ, ಗುಂಡುಕಲ್ಲಿನಿಂದ ತಿರುವುತ್ತಾರೆ.





ಗುಂಡುಕಲ್ಲು ರಂಧ್ರದ ವ್ಯಾಸಕ್ಕಿಂತ ಸ್ವಲ್ಪ ಕಡಮೆ ದಪ್ಪವಾಗಿರುತ್ತೆ. ಒರಳಿಗೂ, ಗುಂಡುಕಲ್ಲಿಗೂ ಮಧ್ಯೆ ಅಕ್ಕಿ, ಬೇಳೆ ಹಾಕಿ ತಿರುವಿದಾಗ ಅದು ನುಣ್ಣಗಾಗುತ್ತದೆ. ಹುಟ್ಟಿದ ಮಗುವನ್ನು ತೊಟ್ಟಿಲಿಗೆ ಹಾಕುವಾಗ ಕೆಳಗಡೆ ಗುಂಡುಕಲ್ಲಿಗೆ ಬೇವಿನಸೊಪ್ಪನ್ನು ಕಟ್ಟಿ ಗುಂಡಪ್ಪ ಎಂದು ಹೆಸರು ಹೇಳಿ ಪೂಜಿಸುತ್ತಾರೆ. ಮಗು ಗುಂಡ್ಕಲ್ಲಿನ ಹಾಗೆ ಬೆಳೆಯಲಿ ಎಂಬ ಭಾವನೆ. ಕೆಲವು ಪಂಗಡದವರು ಒರಳಿನ ಬದಲು, ದಪ್ಪವಾದ ಕಲ್ಲಿನಮೇಲೆ ಇನ್ನೊಂದು ಕಲ್ಲಿನಿಂದ ಅರೆಯುತ್ತಾರೆ. ಈ ರೀತಿ ಮಾಡಿದ ಪದಾರ್ಥದ ರುಚಿ ಯಂತ್ರದ ಸಲಕರಣೆಯಿಂದ ಮಾಡಿದ್ದಕ್ಕಿಂತ ರುಚಿಯಾಗಿರುತ್ತೆ. ಅರೆಕಲ್ಲು ಸುಮಾರು ಒಂದು ಅಡಿ ಚಚ್ಚೌಕವಾಗಿದ್ದು ಎರಡು ಮೂರು ಅಂಗುಲ ದಪ್ಪವಾಗಿರುತ್ತೆ.

ಉದಾ: ಅವನಿಗೇನು ಧಾಡಿ, ಗುಂಡಕಲ್ಲಿನ ಹಾಗಿದ್ದಾನೆ.

ನೋಡಿ: ಅರೆಕಲ್ಲು, ರೋಣುಗಲ್ಲು

<gundakallu> Round Stone - Drilling in the center five to six inches depth on two feet height stone is stone mortar. In that putting soaked rice, corn etc. they grind with round stone. Round stone will be a little smaller than the mortar. When grinding, putting rice, corn etc. in between mortar and round stone, it becomes nice.

When a newly born baby is put in the cradle, below that they place a round stone tying the neem leaf worship calling it as Gundappa. Belief is the child should grow as stone.

Some people instead of stone mortar, putting corn on a stone slab, grind with round stone. The items prepared in this method will be tastier than by machinery. The stone slab will be about one square foot.

Eg: What if, he is like a round stone.

See: Arekallu (Stone slab)

See: Ronugallu (Grinding machine fitted with a round


stone)

377. ಗಿಣ್ಣು: ಹಸು ಕರು ಹಾಕಿದ ನಂತರ ಮೊದಲ ಮೂರು ದಿನಗಳವರೆಗೆ ಕೊಡುವ ಹಾಲನ್ನು ಬಿಳಿಯ ಬಟ್ಟೆಯಿಂದ ಶೋಧಿಸಿ, ಸ್ವಲ್ಪ ಒಳ್ಳೆಯ ಹಾಲು, ಅವಲಕ್ಕಿಯನ್ನು ಬೆರೆಸಿ ಒಲೆಯ ಮೇಲಿಟ್ಟು ಕುದಿಸುತ್ತಾರೆ. ನಂತರ ಬೆಲ್ಲವನ್ನು ಹಾಕಿ ಕೂಡಿಸಿದರೆ ಅದು ಹಲ್ವದಂತೆ ಗಟ್ಟಿಯಾಗುತ್ತೆ. ಅದನ್ನು ತಟ್ಟೆಗೆ ಸುರಿದು, ಆರಿದ ನಂತರ ಚಾಕುವಿನಿಂದ ಕತ್ತರಿಸಬಹುದು. **ಗಿಣ್ಣು** ತಿನ್ನಲು ಬಹಳ ರುಚಿಯಾಗಿರುತ್ತೆ. ಕೆಲವರ ಅಭಿಪ್ರಾಯದಲ್ಲಿ ಅದು ತಿನ್ನಲು ಒಳ್ಳೆಯದಲ್ಲವೆಂದು ಹೇಳುತ್ತಾರೆ. ಆದರೆ ಅದನ್ನು ನೋಡಿದಕೂಡಲೆ ಮನಸ್ಸು ಬದಲಾಯಿಸಿ ಅವರೂ ತಿನ್ನುತ್ತಾರೆ!

ಉದಾ: ಪಕ್ಕದ ಮನೆಲಿ ಹಸು ಕರುಹಾಕಿದೆ. ಎರಡು ಬಟ್ಟಲಿನಷ್ಟು ಹಾಲು ಇಸ್ಕಂಬಾ, ಗಿಣ್ಣು ಮಾಡಾವ.

<giNNu> (-) Milk of cow which has recently calved - When the cow or buffalo calves the milk given by them for first three days is cleaned with white cloth, mix a little good milk and beaten rice, and boiled on the stove. Then if a little jaggery is added it becomes like halva (sweet dish made of ghee, milk and jaggery). It is poured on a plate, after becoming cold, it is cut with knife. It is very tasty to eat. Some people's opinion, it is not good to eat. But when they see, they change their mind and eat!

Eg: In neighbor house cow has calved. Bring two cups of milk, let us make ginnu.



378. ಗಿಲಗಚ್ಚಿ: ಗಿಲಗಚ್ಚಿ ಚಿಕ್ಕಮಕ್ಕಳಿಗೆ ಒಂದು ಆಟದ ವಸ್ತು. ಕರ್ನಾಟಕದ ಚನ್ನಪಟ್ಟಣದಲ್ಲಿ ಗಿಲಗಚ್ಚಿಯನ್ನು ವಿಶೇಷವಾಗಿ ತಯಾರುಮಾಡುತ್ತಾರೆ. ಗಿಲಗಚ್ಚಿ ತೆಳುವಾದ ಮರದಿಂದ ಅಥವಾ ತೆಳ್ಳನೆಯ ತಗಡಿನಿಂದ ಮಾಡಿರುವುದು. ಒಳಗೆ ಸಣ್ಣ ಹರಳುಕಲ್ಲುಗಳನ್ನು ಹಾಕಿರುವುದರಿಂದ ಗಿಲಗಚ್ಚಿಯನ್ನು ಅಲ್ಲಾಡಿಸಿದಾಗ ಶಬ್ದವಾಗಿ ಮಕ್ಕಳು ನಗುತ್ತವೆ. ಇದನ್ನು ಗಿಲಿಕೆ ಎಂದೂ ಹೇಳುತ್ತಾರೆ.

ಉದಾ: ರಾಮೂ ಹೇಗೂ ಸಂತೇಗೆ ಹೋಗ್ತೀಯಲ್ಲ, ಒಂದು ಗಿಲಗಚ್ಚಿ ತಗಂಬಾ.

<gilagachhi> Rattle box - A plaything for children. In Channapatna (Karnataka) they specially manufacture gilagachhi. Gilagachhi is made of thin wood or a sheet of metal. Since small stones are put inside when gilagachhi is shaken it makes sound and children laugh. They also say as Gilike.

Eg: Ramu, anyway you are going to flea market. Bring a Gilagachhi.

379. ಗುಂಗೆಮಾವು: ಇದು ಒಂದು ಜಾತಿಯ ವಿಶೇಷವಾದ ಮಾವು. ಮರದಲ್ಲಿ ಹೂವಾಗಿ ಮಾವಿನಕಾಯಿ ಬಿಡುವ ಹೊತ್ತಿಗೆ ಗುಂಗೆಹುಳು ಮಾವಿನ ಓಟೆಯಲ್ಲಿ ಸೇರಿರುತ್ತದೆ. ಮಾವಿನಕಾಯಿ ಹಣ್ಣಾದ ನಂತರ ಹೆಚ್ಚಿದಾಗ ಹುಳು ಓಟೆಯಿಂದ ಹೊರಗೆ ಬಂದು ಹಾರಿಹೋಗುತ್ತದೆ. **ಗುಂಗೆಮಾವು** ತಿನ್ನಲು ಬಹಳ ರುಚಿಯಾಗಿರುತ್ತೆ.

ಉದಾ: ಗುಂಗೆಮಾವಿನಹಣ್ಣನ್ನು ನೀನು ತಿಂದಿದೀಯಾ?

<gungemaavu> A variety of mango - This is a special type of mango. By the time, after blossoming, inside mango, the large black bee will have entered. When mango ripens and cut, the bee comes out of the shell and fly. Gungemavu is very tasty to eat.

Eg: Have you eaten Gungemavu?

380. ಗುಂಭದಮರ: ಎತ್ತಿನಗಾಡಿಯ ಎರಡು ಚಕ್ರಗಳನ್ನು ಜೋಡಿಸುವಾಗ ಒಂದು ಕಬ್ಬಿಣದ ಸಲಾಕಿಯನ್ನು ಬಳಸುತ್ತಾರೆ. ಅದರಮೇಲೆ ಗಾಡಿಯ ಅಗಲದಷ್ಟು ಇರುವಂತೆ ಮರದದಿಮ್ಮಿಯನ್ನು ಇಡುತ್ತಾರೆ. ಇದು ಸುಮಾರು ಒಂದು ಅಡಿ ಅಗಲ, ಒಂದು ಅಡಿ ಎತ್ತರವಿರುತ್ತೆ. ಅದಕ್ಕೆ **ಗುಂಭದಮರ** ಎಂದು ಹೆಸರು. ಗುಂಭದಮರವನ್ನು ಬಾದರಾಯಣವೃಕ್ಷದ ಕಾಂಡದಿಂದ ತಯಾರಿಸುತ್ತಾರೆ.

ಉದಾ: ನಮ್ಮ ಗಾಡಿಯ ಗುಂಭದಮರ ಸವೆದುಹೋಗಿದೆ, ಬಡಗಿ ಬಂದರೆ ಹೇಳಿ ಹೊಸ ಗುಂಭದಮರ ಮಾಡಿಸಬೇಕು.

ನೋಡಿ: ಬಾದರಾಯಣಸಂಬಂಧ

<gumbhadamara> Hub of wheel - When attaching the two wheels of bullock cart they use an iron rod. On that equal to the width of the cart, they put a wooden log. This will be of one-

foot width and one-foot height. It is called gumbhadamara (hub of a wheel). Hub is prepared with the stem of Badarayana Tree.

Eg: Hub of our cart has become weak. If carpenter comes, we must get a new one done.

See: Badarayanasambandha.


381. ಗುಗ್ಗರಿ: ಹೆಸರುಕಾಳು ಅಥವಾ ಕಡಲೆಕಾಳನ್ನು ನೀರಿನಲ್ಲಿ ಎರಡು ಗಂಟೆಗಳ ಕಾಲ ನೆನೆಸಿ, ನೀರನ್ನು ಬಸಿದು ಬೇಯಿಸಿ ಮಾಡುವ ತಿಂಡಿಯೆ ಗುಗ್ಗರಿ. ತೆಂಗಿನಕಾಯಿತುರಿ, ಉಪ್ಪು ಬೆರೆಸಿ ಸಾಸಿವೆಕಾಳಿನ ಒಗ್ಗರಣೆಯನ್ನು ಹಾಕುತ್ತಾರೆ. ಸ್ವಲ್ಪ ನಿಂಬೆಹಣ್ಣಿನ ರಸವನ್ನು ಹಾಕಿದರೆ ಇನ್ನೂ ರುಚಿ. ಕಾರ್ತಿಕಮಾಸದಲ್ಲಿ ಪ್ರತಿ ಸೋಮವಾರ ದೇವಸ್ಥಾನಗಳಲ್ಲಿ ನಡೆಯುವ ವಿಶೇಷ ಪೂಜೆಗೆ ದೇವರ ನೈವೇದ್ಯಕ್ಕಾಗಿ ಗುಗ್ಗರಿಯನ್ನು ಮಾಡಿ ಬಂದ ಭಕ್ತಾದಿಗಳಿಗೆ ಚರುಪಾಗಿ ಹಂಚುತ್ತಾರೆ.

ಉದಾ: ನಾಳೆ ದೇವಸ್ಥಾನದಲ್ಲಿ ನಮ್ಮ ಸೇವೆ ಇದೆ, ಹೆಸರುಕಾಳು ಗುಗ್ಗರಿ ಮಾಡಿಸ್ಬಿಡೋಣ.

<guggari> (-) Eatable prepared out of boiled and seasoned gram - Soaking greengram (moong dal) or gram in water for two hours, taking out water, bake it. That is guggari. Add coconut powder, salt, and put fried mustard seed in oil. If added a little lemon juice, it will be tastier. They distribute guggari to the devotees on every Monday in temple during Kartik month.

Eg: Tomorrow in temple our Seva (Service). Let us get moong dal guggari prepared.

382. ಗುಡಾಣ: ಗುಡಾಣ ಕೆರೆಯ ಅಂಗಳದಲ್ಲಿ ದೊರಕುವ ಕರೀಮಣ್ಣಿನಿಂದ ತಯಾರಾದುದು. 3–4 ಅಡಿ ಎತ್ತರವಿರುವ ಮಡಕೆ ಎನ್ನಬಹುದು. ಇದರಲ್ಲಿ ಅಕ್ಕಿ, ರಾಗಿ ಮುಂತಾದ ದವಸ ಧಾನ್ಯಗಳನ್ನು ಶೇಖರಿಸಿಡಲು ಉಪಯೋಗಿಸುತ್ತಿದ್ದರು. ಇದನ್ನು ವಾಡೆ ಎಂದೂ ಹೇಳುತ್ತಾರೆ. ಬಾಳೆಯಕಾಯನ್ನು ಹಣ್ಣು ಮಾಡಲು, ಗುಡಾಣದೊಳಗೆ, ಬಾಳೆಯಕಾಯಿನ ಚಿಪ್ಪುಗಳನ್ನು ಒಂದರ ಮೇಲೊಂದರಂತೆ ಇಟ್ಟು, ಆವರಿಕೆ ಗಿಡದ ಸೊಪ್ಪನ್ನು ಹಾಕಿ, ಗುಡಾಣದ ಮೇಲ್ಭಾಗವನ್ನು ಮಣ್ಣಿನಿಂದ ತಯಾರಾದ





ತಟ್ಟೆಯನ್ನು ಮುಚ್ಚಿ, 5–6 ದಿವಸಗಳು ಇಟ್ಟರೆ, ಹಸಿರಾಗಿರುವ ಬಾಳೆಯಕಾಯಿ ಹಳದಿಬಣ್ಣಕ್ಕೆ ತಿರುಗಿ ಹಣ್ಣಾಗುತ್ತದೆ. ಭಾರೀ ಆಕಾರದ ದೊಡ್ಡ ಬಿದಿರಿನ ಹಂಡೆಗಳನ್ನು ಮನೆಗಳಲ್ಲಿ ದವಸ ತುಂಬಿ ಮೂಲೆಯಲ್ಲಿಟ್ಟಿರುತ್ತಾರೆ. ಕೆಳಗಡೆ ಒಂದು ಮುಚ್ಚಳದ ರಂಧ್ರವಿರುತ್ತದೆ. ದವಸ ಬೇಕಾದಾಗ ಮುಚ್ಚಳ ತೆರೆದು ಮೊರದಲ್ಲಿ ತುಂಬಿಕೊಳ್ಳುತ್ತಾರೆ.

ಉದಾ: ರಾಗಿ ಆಗಿಹೋಗಿದೆ ಗುಡಾಣದಿಂದ ತಾ.

ಉದಾ: ಗುಡಾಣದಲ್ಲಿ ಬಾಳೆಕಾಯೆಲ್ಲ ಹಣ್ಣಾಗಿರಬೇಕು. ಎರಡು ಚಿಪ್ಪು ಹಣ್ಣು ತಂದು ದೇವರಮನೇಲಿ ಇಡು.

ನೋಡಿ: ಕಣಜ

<gudaaNa> Large earthen pot - Gudana is made of black soil collected from tank bed. Say, a 3-4 feet height pot. They were using to store rice, ragi etc. It is also called as Vade. To ripen the raw banana, inside the pot, they spread layer by layer raw bananas and put avarike (a kind of plant) and cover the top with a mud plate. If kept for 5-6 days, the green color bananas will turn yellow.

A big size bamboo pots are kept in a corner of the house to store corns. At the bottom of the pot there will be a hole. When corn is required, they will uncover the lid and take-out corn in bamboo fan.

Eg: Ragi is exhausted. Bring some from gudana.

Eg: Bananas must be ripened in gudana. Bring two bunches of bananas and keep it in pooja room.

See: Kanaja

383. ಗುಡಿಸಿಲು: ಗುಡಿಸಿಲನ್ನು ಅಡಕೆ ಮರದ ಕಾಂಡವನ್ನು ನಾಲ್ಕು ಮೂಲೆಗಳಿಗೂ ಕಂಬದಂತೆ ನೆಟ್ಟು ಸುತ್ತಲೂ ಬಿದಿರನ ತಡಿಕೆಯನ್ನು ಕಟ್ಟುತ್ತಾರೆ. ಮೇಲ್ಭಾಗಕ್ಕೆ ಗಳುಗಳನ್ನಿಟ್ಟು ಅದರ ಮೇಲೆ ತೆಂಗಿನಗರಿ ಅಥವಾ ಒಣಹುಲ್ಲನ್ನು ಮುಚ್ಚುತ್ತಾರೆ. ಹಳ್ಳಿಗಳಲ್ಲಿ ಸಣ್ಣ ಪುಟ್ಟ ಕೆಲಸಗಾರರು ಗುಡಿಸಿಲಿನಲ್ಲಿ ವಾಸಮಾಡುತ್ತಾರೆ.



ಉದಾ: ಬಡವರ ಹಳ್ಳಿಗುಡಿಸಲೇ ಬೇರೆ, ಶ್ರೀಮಂತರ ಪೇಟೆಮನೆಯೇ ಬೇರೆ.

<gudisilu> Hut - Fixing the stem of Arecanut tree in four corners like poles, they attach around bamboo mats. For the top they put bamboo sticks and cover with coconut leaves or dried straw. In villages small laborers live in gudisilu.

Eg: Village gudisilu of poor people is separate and bungalow of rich people is separate.

384. ಗುಣಿ: ಸಮನಾದ ನೆಲದಲ್ಲಿ ಹುರುಳೀಕಾಯಿ ಬೀಜ, ಅವರೆ ಮುಂತಾದುವನ್ನು ನೆಡುವಾಗ ನೆಲವನ್ನು ಅಲ್ಲಲ್ಲೆ ತಗ್ಗುಮಾಡುವುದಕ್ಕೆ ಗುಣಿ ಎನ್ನುತ್ತಾರೆ. ಗುಣಿಯಲ್ಲಿ ಬೀಜವನ್ನಿಟ್ಟು ಮಣ್ಣು ಮುಚ್ಚಿದ ಮೇಲೆ ಸ್ವಲ್ಪ ದಿವಸಗಳಾದನಂತರ, ಬೀಜ ಮೊಳಕೆಯಾಗಿ ಗುಣಿಯಿಂದ ಮೇಲಕ್ಕೆ ಬರುತ್ತದೆ.

ಉದಾ: ಹಿತ್ತಲಿನಲ್ಲಿ ತೆಂಗಿನಸೊಸಿ ಪಕ್ಕಕ್ಕೆ ಅರವತ್ತು ಗುಣಿಮಾಡಿ ತಿಂಗಳುಹುರುಳಿ ಬೀಜ ಹಾಕು.

ನೋಡಿ: ಪಾತಿ

<guni> Pit - When sowing seeds of beans etc. on the level ground, to make here and there a little lower level is called as guni (pit). Putting the seed in the pit, cover with soil. After a few days, the seeds will sprout and come out to the top.

Eg: In back garden, next to coconut buddings, make sixty pits and plant beans.

385. ಗುತ್ತಿಗೆ: ಗುತ್ತಿಗೆಯೂ ಕೇಣಿಯಂತೆಯೆ. ಮಾವು ಮತ್ತು ಬಾಳೆಯಕಾಯನ್ನು ಮಾರುವುದಕ್ಕೆ ಯಾರಿಗಾದರು ಗುತ್ತಿಗೆಕೊಡುತ್ತಾರೆ. ಕೊಳ್ಳುವವರು ಅವುಗಳ ಜವಾಬ್ದಾರಿ ತೆಗೆದುಕೊಳ್ಳಬೇಕು. ನಿಷ್ಕರ್ಷೆಯಾದ ಹಣವನ್ನು ಕೊಟ್ಟು, ಮಾವು ಮತ್ತು ಬಾಳೆಯ ವಿಲೇವಾರಿಯನ್ನು ಅವರು ವಹಿಸುತ್ತಾರೆ. ತೋಟದ ಅಗತೆ ಮಾಡುವ ಜವಾಬ್ದಾರಿಯು ಅವರದೇ. ಒಪ್ಪಂದ ಮಾಡಿಕೊಂಡಂತೆ ನೂರು–ಇನ್ನೂರು ಮಾವಿನಹಣ್ಣುಗಳನ್ನು ತೋಟದ ಮಾಲಿಕರಿಗೆ ಕೊಡುತ್ತಾರೆ.

ಉದಾ: ಈ ಸಲ ನಮ್ಮ ತೋಟದ ಬಾಳೆಗಿಡಗಳನ್ನೆಲ್ಲ ಗುತ್ತಿಗೆ ಕೊಟ್ಟಿದೀವಿ.

ನೋಡಿ: ಕೇಣಿ, ಅಡಕೆಮಣೆ

<guthhige> Agreement for taking responsibility of other's land - Guthhige is also like Keni (agreement). They give contract to anyone to sell mango or banana. The buyers should

take responsibility. Paying the agreed amount, they will arrange for disposal of mango and banana. It is their duty to get the garden excavated. As per agreement, they give hundred to two hundred mangos to the garden owner.

Eg: This time, we have given contract for bananas of our garden.

See: Keni, Adakemane

386. ಗುನ್ನಂಪಟ್ಟೆ: ಹೊಳೆಯುವ ಬಣ್ಣದ ಕಾಗದಕ್ಕೆ **ಗುನ್ನಂಪಟ್ಟೆ** ಎಂದು ಹೆಸರು. ಇದು ಬಹಳ ತೆಳುವಾದ ತಗಡಿನಂತಿರುತ್ತೆ. ಗೌರಿ, ಗಣಪತಿ ಹಬ್ಬದ ದಿನ ದೇವರಿಗೆ ಏರಿಸುವುದಕ್ಕೆ ಹತ್ತಿಯಿಂದ ಮಾಡಿದ ಗೆಜ್ಜೆವಸ್ತ್ರಗಳಿಗೆ ಗುನ್ನಂಪಟ್ಟೆಯ ಕಾಗದವನ್ನು ಅಂದವಾಗಿ ಕತ್ತರಿಸಿ ಅಂಟಿಸುತ್ತಾರೆ. ಗುನ್ನಂಪಟ್ಟೆ ನಾಲ್ಕಾರು ಬಣ್ಣಗಳಲ್ಲಿ ದೊರೆಯುತ್ತೆ. ಗುನ್ನಂಪಟ್ಟೆಕಾಗದವನ್ನು **ನವಿರುಕಾಗದ** ಎಂದೂ ಕರೆಯುತ್ತಾರೆ.

ಉದಾ: ನಾಳೆ ಗಣಪತಿಹಬ್ಬ. ಮಂಟಪದ ಅಲಂಕಾರಕ್ಕೆ ಗುನ್ನಂಪಟ್ಟೆ ತಾ.

<gunnampatte> Shining colored paper is gunnampatte. It will be like thin metal. On Gowri, Ganesha festival, to worship, they attach decoratively cut gunnampatte to cotton balls. It is available in four different colors. They also call it as Navirukagada.

Eg: Tomorrow is Ganesha festival, to decorate pandal, bring gnnampatte.

387. ಗುರಿಮುಟ್ಟುವುದು: ಕೈಗೊಂಡ ಕೆಲಸವನ್ನು ಸಾಧನೆಮಾಡಿ ಜಯಿಸುವುದಕ್ಕೆ ಗುರಿಮುಟ್ಟುವುದು ಎನ್ನುತ್ತಾರೆ.

ಉದಾ: ಈ ಬಾರಿ ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸಮಾಡಿ ನಾವು ಗುರಿಮುಟ್ಟಿದರೆ, ಹಳ್ಳಿಗೆ ಒಳ್ಳೆಯ ಹೆಸರು ಬರುತ್ತೆ.

<gurimuttuvudu> Reach a destination - To finish the taken-up work with pride is called as gurimuttuvudu.

Eg: This time we have arranged the program in a large scale. If we work cooperatively and achieve success, village will get a good name.

388. ಗುರುಕಾಯಿಸು: ಕೋಪದಿಂದ ಇನ್ನೊಬ್ಬರ ಮೇಲೆ ರೇಗಾಡುವುದನ್ನು **ಗುರುಕಾಯಿಸುವುದು** ಎನ್ನುವುದು ರೂಢಿ.

ಉದಾ: ಏನು ಅವನು ಗುರುಕಾಯಿಸಿಬಿಟ್ಟರೆ ನಾವೆಲ್ಲ ಹೆದರಿಕೊಂಡು ಬಿಡ್ತೀವಿ ಅಂತ ತಿಳಿದಿದ್ದಾನೆ ಆ ಮೂಳ. ನಾವೇನು ಕೈಗೆ ಬಳೆ ತೊಟ್ಕಂಡು ಕುಂತಿಲ್ಲ. ಅವನು ಗುರುಕಾಯಿಸಿದರೆ ಅವನ ಹತ್ತರಷ್ಟು ಗುರುಕಾಯಿಸುವುದಕ್ಕೆ ನಮಗೂ ಗೊತ್ತಿದೆ.

<gurukaayisuvudu> (-) Cry aloud like a dog - To scream at others with anger, the word gurukayisuvudu is in vogue.


Eg: He is under the impression, if he screams at us, we get afraid. We are not sitting wearing bangles on hand. If he screams, we also know we can scream ten times.

389. ಗೂಡು: ಗೋಡೆಯನ್ನು ಕೊರೆದು ಸಾಮಾನುಗಳನ್ನಿಡಲು ಮಾಡಿರುವ ಜಾಗಕ್ಕೆ ಗೂಡು ಎಂದು ಹೆಸರು. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಮೂರು ಅಡಿ ದಪ್ಪದ ಮಣ್ಣಿನ ಗೋಡೆಯನ್ನು ಹಾಕುತ್ತಿದ್ದರು. ದೊಡ್ಡ ಡಬ್ಬವನ್ನು ಇಡುವಂತೆ ಗೂಡುಗಳನ್ನು ಮಾಡುತ್ತಿದ್ದರು.

ಉದಾ: ಎಣ್ಣೆಡಬ್ಬ ಗೂಡಲ್ಲಿಟ್ಟಿದೆ ನೋಡು.

<goodu> Shelf - The place, drilling the wall, to keep things is called goodu. In villages generally, they were building the mud wall of three feet. They were making shelves to keep big tins.

Eg: See the oil tin is kept in the shelf.




390. ಗೂಬೆಶಕುನ: ಗೂಬೆ ಸಾಮಾನ್ಯವಾಗಿ ಮನೆಯಮೇಲೆ ಕೂರುವುದಿಲ್ಲ. ಗೂಬೆ ಕೂತರೆ ಆ ಮನೆಯವರಿಗೆ ಕೆಟ್ಟದ್ದಾಗುತ್ತೆ ಅಂತ ನಂಬಿಕೆ. ನಾನು ತಿಳಿದಂತೆ ನಮ್ಮ ಸ್ನೇಹಿತರೊಬ್ಬರು ಮನೆಯಲ್ಲೆ ಗೂಬೆಯನ್ನು ಸಾಕಿದ್ದರು. ಇದಕ್ಕೇನಂತೀರಿ!! ಬೈಗುಳಗಳಲ್ಲಿ ಗೂಬೆಯನ್ನು ಕೆಟ್ಟರ್ಥದಲ್ಲಿ ಬಳಸುತ್ತಾರೆ. ಯಾರನ್ನಾದರು ಅವಹೇಳನಮಾಡುವಾಗ, ಅವನೊಬ್ಬ ಎಲ್ಲೊ **ಗೂಬೆನನ್ಮಗ** ಎಂದು ಬಯ್ಯುತ್ತಾರೆ.

ಉದಾ: ಆ ಗೂಬೆ ನನ್ಮಗನ ಬಳಿ ಯಾರೂ ಹೋಗೊದಿಲ್ಲ.

<goobeshakuna> Owl Omen - The owl generally does not sit on top of the house. If it sits, they believe that something bad happens to that house people. As I know one of my friends had reared an owl in his house. What do you say for this!!

Owl is used in a bad way while taunting. When one abuses anybody, he tells as goobenanmaga (impute blame to a person).

Eg: No one will go to that Goobenanmaga.



391. ಗೆಜ್ಜೆವಸ್ತ್ರ: ಗೆಜ್ಜೆವಸ್ತ್ರವನ್ನು ಹತ್ತಿಯಿಂದ ಮಾಡುವುದು. ಮೊಳದುದ್ದ ದಾರದಂತೆ ಮಾಡಿ ಮಧ್ಯೆ ಮಧ್ಯೆ ಗೆಜ್ಜೆಯಾಕಾರದಲ್ಲಿ ಹೊಸೆಯುತ್ತಾರೆ. ಅದರ ಜೊತೆಗೆ ಬಿಲ್ಲೆಯಾಕಾರದಲ್ಲಿ ಹತ್ತಿಯನ್ನು ಹೊಸೆದು ಎರಡಕ್ಕೂ ಕುಂಕುಮ ಅಥವಾ ಅರಿಶಿನವನ್ನು ಹಚ್ಚಿ ದೇವರಿಗೆ ಪೂಜಿಸುತ್ತಾರೆ. ಗೌರಿ ಗಣಪತಿ ಹಬ್ಬಗಳಲ್ಲಿ ಗೆಜ್ಜೆವಸ್ತ್ರ ಬಹಳ ದೊಡ್ಡ ಪ್ರಮಾಣದಲ್ಲಿರುತ್ತೆ. ಕುಂಕುಮಕ್ಕೆ ಬದಲಾಗಿ ಹಸಿರು ಕೆಂಪುಬಣ್ಣದ ವರ್ತೆಕಾಗದವನ್ನು ಅಂಟಿಸಿ ಪೂಜಿಸುತ್ತಾರೆ.

ಉದಾ: ಹಬ್ಬ ಬಂತು, ಗೆಜ್ಜೆವಸ್ತ್ರ ಮಾಡಿಡಬೇಕು.

<gejjevasthra> (-) Garland made of cotton balls - Gejjevasthra is made of cotton. Making it as thread of one-and-a-half-foot in between they twist like tiny cotton balls Added to that, they make like small round plate and smear Kunkum or turmeric powder and worship to god. During Gowri, Ganesha festival the gejjevasthra will be of bigger size. Instead of Kunkum, they join colored thin paper and worship.

Eg: Festival is approaching. Must get it done gejjevasthra.

392. ಗೇರಾಯಿಸು: ಜನಗಳು ಗುಂಪು ಗುಂಪಾಗಿ ಒಂದು ಕಡೆ ಸೇರುವುದಕ್ಕೆ ಗೇರಾಯಿಸುವುದು ಅಥವಾ ಠಿಕಾಣಿ ಹೂಡಿದ್ದಾರೆ ಎಂದು ಹೇಳುತ್ತಾರೆ.


ಉದಾ: ಯಾವುದೋ ಹಳ್ಳಿಯಿಂದ ಸುಗ್ಗಿಕುಣಿತದವರು ಬಂದಾರೆ ಅಂತ ನಮ್ಮ ಹಳ್ಳಿ ರೈತರೆಲ್ಲ ತೋಟದ್‌ತಾವ ಗೇರಾಯಿಸಿದ್ದಾರೆ.

ಭಿನ್ನಶಬ್ದರೂಪ: ಘೇರಾವ್ (ಗೇರಾವ್)

<geraayisu> (-) People assembling in groups is called as gerayisuvudu.

Eg: All farmers of our village have assembled near garden, since some dancing batch have come from a village.

Different version: Gheraav (Gerav)



393. ಗೇರುಕುಕ್ಕೆ: ಕುಕ್ಕೆಯನ್ನು ಸಣ್ಣ ಬಿದಿರಿನಿಂದ ಮಾಡಿ, ಅದಕ್ಕೆ ಗೇರುಬೀಜದ ಎಣ್ಣೆಯನ್ನು ಬಳಿದು ಬಿಸಿಲಿನಲ್ಲಿ ಒಣಗಿಸಿ ಅಡುಗೆ ಪದಾರ್ಥಗಳನ್ನು ಮಾಡುತ್ತಾರೆ. ಅದಕ್ಕೆ **ಗೇರುಕುಕ್ಕೆ** ಎಂದು ಹೆಸರು. ಗೇರುಕುಕ್ಕೆ ನಮ್ಮ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳಿಗಿಂತ ಚೆನ್ನಾಗಿರುತ್ತೆ. ಒಲೆಯ ಮೇಲೆ ಇಡುವುದಕ್ಕಾಗುವುದಿಲ್ಲ ಅಷ್ಟೆ. ಗೇರುಕುಕ್ಕೆಯಲ್ಲಿ ಯಾವ ಪದಾರ್ಥಗಳನ್ನು ಬೇಕಾದರೂ ಹಸಿಯಾಗಲಿ ಅಥವ ಬಿಸಿಯಾಗಲಿ ಇಡಬಹುದು.

ಉದಾ: ಉಗ್ರಾಣದಲ್ಲಿಟ್ಟಿರುವ ಗೇರುಕುಕ್ಕೆ ತಂದು ಅದರಲ್ಲಿ ಗೊಜ್ಜವಲಕ್ಕಿ ಮಾಡು.

<gerukukke> (-) Basket made unleakable by smearing cashew oil - The basket is made of thin bamboo stalk, smeared with cashew oil, and dried in sunlight, and prepare food items. It is called gerukukke. It is better than stainless steel. Just it cannot be put on oven. We can keep any food item wet or hot.

Eg: Bring gerukukke from store and make gojjavalakki (made of beaten rice).

394. ಗೊಂತು: ಕೊಟ್ಟಿಗೆಯಲ್ಲಿ ಹಸು, ಕರು, ಎತ್ತು, ಎಮ್ಮೆಗಳನ್ನು ಕಟ್ಟಿ ಮೇಯುವುದಕ್ಕೆ ಸುತ್ತಲೂ ಹುಲ್ಲು ಹಾಕಿರುವ ಜಾಗಕ್ಕೆ **ಗೊಂತು** ಎಂದು ಹೇಳುತ್ತಾರೆ. ಒಂದೊಂದು ಹಸುವಿಗೂ ಪ್ರತ್ಯೇಕವಾಗಿ ಮರದ ಗೂಟವನ್ನು ನೆಟ್ಟಿರುತ್ತಾರೆ.

ಉದಾ: ಎರಡು ಕರುಗಳನ್ನೂ ಬೇರೆಬೇರೆ ಗೊಂತಿಗೆ ಕಟ್ಟು.

ನೋಡಿ: ಕೊಟ್ಟಿಗೆ, ಬಾನಿ

<gonthu> Crib for cattle - The place where grass is spread around to tie cow, calf, ox and buffalo in cowshed is called Gonthu, For each cow a separate wooden pole is fixed.

Eg: Tie both the calves to separate gonthu.



395. ಗೊಂಬೆಕೂರಿಸುವುದು: ನವರಾತ್ರಿಯಲ್ಲಿ ಪ್ರತಿಯೊಬ್ಬರ ಮನೆಯಲ್ಲು **ಗೊಂಬೆಗಳನ್ನು ಕೂರಿಸುವುದು** ಸಂಪ್ರದಾಯವಾಗಿ ಬಂದಿರುವ ಆಚರಣೆ. ತರಹಾವಾರಿ ಬಣ್ಣಬಣ್ಣದ ಗೊಂಬೆಗಳು, ಚಂದನದ ಬೊಂಬೆಗಳು, ಸಣ್ಣ ಕವಡೆ ಶಂಖಿಗಳನ್ನು ಸಾಲಾಗಿ ಜೋಡಿಸುವುದು ಎಲ್ಲವನ್ನು ಸಡಗರದಿಂದ ಮಾಡುತ್ತಾರೆ. ಚಂದನದ ಗೊಂಬೆಗಳಿಗೆ ಒಂದಕ್ಕೆ ಹೆಣ್ಣಿನ ವೇಷ, ಇನ್ನೊಂದಕ್ಕೆ ಗಂಡಿನ ವೇಷ ಹಾಕಿ ಕೂರಿಸುತ್ತಾರೆ. ಬೊಂಬೆಗಳನ್ನು ಜೋಡಿಸುವ ಜಾಗ ಮೆಟ್ಟಲು ಮೆಟ್ಟಲಾಗಿರುತ್ತೆ. ಮೇಲಿನ ಮೆಟ್ಟಲಮೇಲೆ ರಾಜ ರಾಣಿಯರ ವೇಷದಲ್ಲಿರುವ ಚಂದನದ ಬೊಂಬೆಗಳು, ಅವಕ್ಕೆ ಹಸಿರು, ಕೆಂಪುಬಣ್ಣದ ಬಟ್ಟೆಗಳಿಂದ ಅಲಂಕಾರ ಮಾಡುತ್ತಾರೆ. ಬೊಂಬೆನೋಡಲು ಮನೆಮನೆಗೆ ಮಕ್ಕಳು ಗುಂಪುಗುಂಪಾಗಿ ಬಂದು ಕೋಲಾಟವಾಡುತ್ತಾರೆ. ಅವರಿಗೆ ಚರುಪುಕೊಟ್ಟು ಕಳುಹಿಸುತ್ತಾರೆ. ಎಲ್ಲ ಮಕ್ಕಳಬಳಿ ಕೋಲುಗಳಜತೆಗೆ ಪುಟ್ಟ ಚರುಪಿನಚೀಲ ಇರುತ್ತೆ ಚರುಪು ಹಾಕಿಕೊಳ್ಳಲು.


<gombekoorisuvudu> (-) Arranging decorated dolls during Navarathri - It is an age long custom to arrange dolls in every house during Navarathri. They do it with all enthusiasm to arrange dolls in lines, colored dolls, Chandana dolls, small kavade and shankha (a kind of shell available in ocean). For Chandana dolls, they decorate with woman dress and for another with men dress. The place where they are arranged will be step by step. On the upper row it is filled with decorated dolls with dress of King and Queen. They decorate with green and red colored cloth. To see the dolls, children will come in groups and play kolata. The house owners offer them eatables and send. All the children will have a bag to put eatables.

396. ಗೊಜ್ಜು: ತರಕಾರಿಗಳಿಂದ (ಬೆಂಡೆಕಾಯಿ, ಬಾಳೆಕಾಯಿ, ಬದನೆ, ಸೀಮೆಬದನೆಕಾಯಿ, ಈರುಳ್ಳಿ) ನಂಚಿಕೊಳ್ಳಲು ಮಾಡುವ ಮೇಲೋಗರಕ್ಕೆ **ಗೊಜ್ಜು** ಎಂದು ಹೆಸರು. ರಾಗಿಮುದ್ದೆ ತಿನ್ನುವುದಕ್ಕೆ ಈರುಳ್ಳಿ ಅಥವಾ ಬೆಂಡೆಕಾಯಿ ಗೊಜ್ಜು ಬಹಳ ಹಿತವಾಗಿರುತ್ತೆ.

ಉದಾ: ನಮ್ಮಜ್ಜಿ ಗೊಜ್ಜಿನರುಚಿ ಯಾರು ಮಾಡಿದರೂ ಬರೋಲ್ಲ.

<gojju> Side Dish - The side dish prepared by using vegetables like lady's finger (bendi), raw banana, baigan, seemebadane, onion, is known as Gojju. To eat ragi bowl, onion or bendi side dish is very suitable.

Eg: Nobody can do gojju like our grandmother.



397. ಗೊಟ್ಟ: ಹಸು ಕರುಗಳಿಗೆ ಏನಾದರೂ ಔಷಧಿ ಕುಡಿಸಬೇಕಾದರೆ ಒಂದು ಸಣ್ಣ ಬಿದಿರಿನ ಕೊಳವೆಯೊಳಕ್ಕೆ ಔಷಧಿಯನ್ನು ಹಾಕಿ, ಕೊಳವೆಯ ಒಂದು ತುದಿಯನ್ನು ಹಸುವಿನ ಗಂಟಲಿನವರೆಗೂ ಬಿಟ್ಟು ಕುಡಿಸುತ್ತಾರೆ. ಆ ಬಿದಿರಿನ ಕೊಳವೆಗೆ **ಗೊಟ್ಟ** ಎನ್ನುತ್ತಾರೆ. **ನಳಿಗೆ** ಎಂದೂ ಕರೆಯುತ್ತಾರೆ.

ಉದಾ: ಕರು ಬೆಳಗ್ನಿಂದ ಒರಲ್ತಾ ಇದೆ. ಗೊಟ್ಟ ತಗಂಬಾ ಔಷಧಿ ಹಾಕಾವ.

<gotta> Bamboo tube for administrating medicine for cattle - To make drink any medicine to cow and calf, they put medicine into a small bamboo tube and put the one edge up to the throat of cow and make it drink. That bamboo tube is called gotta. They also call it as Nalike.

Eg: Calf is screaming since morning. Bring gotta, let us feed medicine.

398. ಗೊಡ್ಡುಸಾರು: ಅವಸರ ಅವಸರಕ್ಕೆ ಅಡುಗೆ ಮಾಡಬೇಕಾದರೆ, ಬೇಳೆ, ತರಕಾರಿಗಳನ್ನು ಬೇಯಿಸದೆ, ಹುಣಸೇಹಣ್ಣಿನ ನೀರಿಗೆ ಉಪ್ಪು, ಮೆಣಸಿನಪುಡಿ ಹಾಕಿ ಕುದಿಸಿ, ಒಗ್ಗರಣೆ ಹಾಕಿ ಮಾಡಿದ ಸಾರಿಗೆ **ಗೊಡ್ಡುಸಾರು** ಅಥವಾ ಹುಣಿಸೆಸಾರು ಎಂದು ಹೇಳುವುದು ರೂಢಿ.

ಉದಾ: ರಾತ್ರೆ ಊಟಕ್ಕೆ ಸ್ವಲ್ಪ ಗೊಡ್ಡುಸಾರು ಮಾಡಿದರೆ ಸಾಕು.


<goDDusaaru> (-) Soup made of tamrind without pulses - If cooking is to be done quickly, without baking dal and vegetables, for tamarind water mixing salt and chili powder and boil and adding vagar is called as tamarind rasam or goddusaru.

Eg: For night dinner, it is enough to prepare goddusaru.

399. ಗೊಡ್ಡೆಮ್ಮೆ: ನೋಡಿ: ಕೋಣ

<goddemme> See: Koona

400. ಗೊಪ್ಪೆ: ರೈತರು ಮಳೆಗಾಲದಲ್ಲಿ ಹೊಲ ಗದ್ದೆಗಳ ಕೆಲಸಮಾಡುವಾಗ ತಲೆ ಮತ್ತು ಬೆನ್ನನ್ನು ಮುಚ್ಚಲು ಉಪಯೋಗಿಸುವ ಸಾಧನಕ್ಕೆ **ಗೊಪ್ಪೆ** ಎನ್ನುತ್ತಾರೆ. ಬಿದಿರನ್ನು ಸೀಳಿ ಒತ್ತೊತ್ತಾಗಿ ಹೆಣೆದು ಒಳಗೆ ನೀರು ಹೋಗದಂತೆ ಮಾಡಿರುತ್ತಾರೆ.



ಉದಾ: ಸೋನೆಮಳೆ ಬರ್ತಾಇದೆ. ಗೊಪ್ಪೆ ಹಾಕ್ಕಂಡು ಹೋಗು ಹೊಲಕ್ಕೆ.

<goppe> Hood - Farmers when they work in fields during rainy season, to cover head and back, the equipment they use is known as goppe. Peeling bamboo, stitch side by side to see that water does not enter inside.

Eg: It is drizzling. Go to field wearing goppe (hood).

401. ಗೊಲ್ಲ: ಹಳ್ಳಿಯ ದನಕರುಗಳನ್ನು ಕಾಯುವವನಿಗೆ **ಗೊಲ್ಲ** ಎಂದು ಹೆಸರು. ಅವನು ಎಲ್ಲರ ಮನೆಯ ದನಗಳನ್ನು ಬೆಳಿಗ್ಗೆ ಕರೆದುಕೊಂಡು ಹೋಗಿ ಹುಲ್ಲುಗಾವಲಿನಲ್ಲಿ ಮೇಯಿಸಿ ಸಂಜೆಯ ಹೊತ್ತಿಗೆ ಅವರವರ ಮನೆಗೆ ಅವುಗಳನ್ನು ತಲುಪಿಸಿ ಮನೆಗೆ ಹೋಗುತ್ತಾನೆ.



ಉದಾ: ಗೊಲ್ಲರಹಟ್ಟೀಲಿ ನೋಡ್ಕಂಬಾ ನಿಂಗ ಅದಾನೋ ಅಂತ.

<golla> Cowherd - The person who grazes cows in village is known as golla. He takes out cows of every house in the morning, graze them in field and by evening returns them to their houses and go home.


Eg: See whether Ninga is there in gollarahatti.

402. ಗೋಂದು: ನೋಡಿ: ಅಂಟು

ಉದಾ: ಕವರನ್ನು ಅಂಟಿಸಬೇಕು, ಗೋಂದಿನಬಾಟಲು ತಗೊಂಬಾ.

<gondu> Gum - See: Antu

Eg: Must close cover. Bring gumbottle.



403. ಗೋಧಿಕಲ್ಲುಶಾಸ್ತ್ರ: ಮದುವೆಯ ಕಾರ್ಯಕ್ರಮಗಳಲ್ಲಿ ಗೋಧಿಕಲ್ಲುಶಾಸ್ತ್ರದಲ್ಲಿ ರಾಗಿಕಲ್ಲು ಬೀಸುವುದು. ಇದನ್ನು **ಗೋರ್ಕಲ್ ಶಾಸ್ತ್ರ** ಎಂದು ಹೇಳುವುದು ರೂಢಿ. ಒರಳಲ್ಲಿ ಒನಕೆ ಕುಟ್ಟುವ ಶಾಸ್ತ್ರ ಮಾಡುತ್ತಾರೆ.

ಉದಾ: ನಾಳೆ ಗೋರ್ಕಲ್‌ಶಾಸ್ತ್ರ ಇರುತ್ತೆ ಬೀಸುವಕಲ್ಲು ತಂದಿಟ್ಟಿರು.

<godhikallushaasthra> (-) A program of marriage function - During marriage functions in Godhikallushastra, grinding ragi from grinding stone is called Gorkallshastra. In the grinding stone, they grind with wooden stick, calling Onakekuttuva shastra.


Eg: Tomorrow there will be Gorkallshastra. Bring grinding stone.

404. ಗೋಟಡಿಕೆ: ಕೆಲವು ಅಡಿಕೆ ಕಾಯಿಗಳನ್ನು ಸುಲಿಯುವುದಕ್ಕಾಗುವುದಿಲ್ಲ. ಅಂತಹ ಕಾಯಿಗಳನ್ನು ಹಾಗೆಯೆ ಒಣಗಿಸಿ ಸಿಪ್ಪೆಯನ್ನು ಸುಲಿದು ಮಾರುತ್ತಾರೆ. ಅದಕ್ಕೆ **ಗೋಟಡಿಕೆ** ಎಂದು ಹೇಳುತ್ತಾರೆ.

ಉದಾ: ಈ ಸಲ ನಮ್ಮ ತೋಟದಲ್ಲಿ ಗೋಟಡಿಕೇನೆ ಜಾಸ್ತಿ ಬಂದ್ಬಿಡ್ತು.

<gotadike> Full ripe hard arecanut - Few arecanuts cannot be peeled. Such nuts are dried and peeling the skin, they sell. It is called gotadike.

Eg: This time, in our garden, we got more of gotadike.



405. ಗೋಡೆದೀಪ: ಈ ದೀಪಕ್ಕೂ ಸೀಮೇಎಣ್ಣೆಯೆ ಗತಿ. ಇದನ್ನು ಅಲ್ಲಿ ಇಲ್ಲಿ ಹಿಡಿದುಕೊಂಡು ಓಡಾಡಬೇಕಾಗಿಲ್ಲ. ಗೋಡೆಗೆ ಒಂದು ಕಬ್ಬಿಣದ ಮೊಳೆ ಹೊಡೆದು ಅದಕ್ಕೆ ಸೆಕ್ಕಿಸಬಹುದು. ಚಿಮಣಿಯನ್ನು ಬೆರಣಿಬೂದಿಯಿಂದ ಒರೆಸಿದರೆ ಅದರ ಕಪ್ಪು ಹೋಗಿ ಬೆಳಕು ಚೆನ್ನಾಗಿ ಕಾಣುತ್ತದೆ. ಅದರ ಬತ್ತಿಯನ್ನು ಚಿಕ್ಕದಾಗಿ ಅಥವಾ ದೊಡ್ಡದಾಗಿ

ಮಾಡಲು ಬತ್ತಿಗೆ ಅಂಟಿಕೊಂಡಂತೆ ಒಂದು ತಿರುಪು ಇರುತ್ತೆ. ಗೋಡೆದೀಪವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬದಲಾಯಿಸುತ್ತಿರಬಹುದು. ಗಾಜಿನ ಚಿಮಣಿಯಾದ್ದರಿಂದ ಒರೆಸುವಾಗ ಬಹಳ ಎಚ್ಚರಿಕೆಯಿಂದಿರಬೇಕು.

ಉದಾ: ಕತ್ತಲಾಗ್ತಾ ಬಂತು, ಗೋಡೆದೀಪ ತತ್ತಾ ಇಲ್ಲಿ.

ನೋಡಿ: ಹಣತೆದೀಪ, ಚಿಮಣಿ

<godedeepa> Wall lamp - For this lamp also kerosene oil only required. We need not carry this here and there. By fixing an iron nail on the wall, can attach this lamp. If the glass is rubbed with ash of cow dung, the black color gets cleaned, and brightness will be seen. To make the wick big or small, there will be a round metal attached to wick. We can shift the lamp from one side to another. Since it is glass while cleaning, must be careful.

Eg: It is getting dark. Bring the lamp here.

See: Hanathedeepa, Chimani.

406. ಗೋಣಿತಾಟು: ಸೆಣಬಿನ ನಾರಿನಿಂದ ಮಾಡಿದ ಒರಟಾದ ಬಟ್ಟೆಗೆ **ಗೋಣಿತಟ್ಟು (ಗೋಣಿತಾಟು)** ಎಂದು ಹೆಸರು. ಬಹಳ ಒತ್ತೊತ್ತಾಗಿ ಹೆಣೆದು ಮಾಡಿದ ಬಟ್ಟೆಯಿಂದ ಚೀಲಗಳನ್ನು ತಯಾರುಮಾಡಿದರೆ ಅದರಲ್ಲಿ ರಾಗಿ, ಭತ್ತ, ಬೇಳೆ ಮುಂತಾದ ಧಾನ್ಯಗಳನ್ನು ತುಂಬಿಡಬಹುದು. ಜಾಳುಜಾಳಾಗಿ ಹೆಣೆದು ಮಾಡಿದ ಚೀಲದಲ್ಲಿ ಆಲೂಗೆಡ್ಡೆ, ಈರುಳ್ಳಿ ಮುಂತಾದುವುಗಳನ್ನು ತುಂಬಿಡುತ್ತಾರೆ. ಜಾಳುಜಾಳಾಗಿರುವ ಗೋಣಿತಟ್ಟನ್ನು ದೊಡ್ಡ ಪಾತ್ರೆಗಳಲ್ಲಿ ಅನ್ನ ಬೇಯಿಸಿದಾಗ ಪಾತ್ರೆಯ ಬಾಯಿಗೆ ಕಟ್ಟಿ ಅನ್ನದ ಗಂಜಿಯನ್ನು ಪ್ರತ್ಯೇಕಮಾಡಲು ಬಳಸುತ್ತಾರೆ. ಮದುವೆ, ಮುಂಜಿ ಸಮಾರಂಭಗಳಲ್ಲಿ ಮತ್ತು ದೊಡ್ಡ ಅನ್ನಸಂತರ್ಪಣೆಗಳಾದಾಗ ಅಡಿಗೆಪಾಕಶಾಲೆಗಳಲ್ಲಿ ಗೋಣಿತಾಟನ್ನು ಬಹಳವಾಗಿ ಉಪಯೋಗಿಸುತ್ತಾರೆ.

ಉದಾ: 50 ಗೋಣಿತಾಟು ತರಬೇಕು ಆಲೂಗೆಡ್ಡೆ ಈರುಳ್ಳಿ ಎಲ್ಲ ಸಂತೆಗೆ ಒಯ್ಯುಕ್ಕೆ.

<gonithaaTu> Coarse cloth made of jute - Rough cloth made of a kind of fiber, is known as gonithatu. The bags made by stitching side by side can be used for storing ragi, paddy, dal etc. If it is stitched loosely, potato and onion are stored. The

loosely stitched gonithatu is used tying it to the mouth of vessel to separate rice and essence taken out by straining the cooked rice. During the marriage and brahmopadesha functions, and big feeding occasions, gonithatu is used in abundance in kitchen.

Eg: Must bring 50 gonithatus to shift potato and onion to flea market.

407. ಗೋಣಿದಾರ: ನೋಡಿ: ಪುಂಡೀಹುರಿ

<gooNidaara> See: Pundihuri

408. ಗೋಪಾಳಬುಟ್ಟಿ: ನೋಡಿ: ಬವನಾಸಿ

<gopaalabutti> See: Bavanasi

409. ಗೋಪಿಚಂದನ: ಮಾಧ್ವ ಸಂಪ್ರದಾಯದವರು ಸ್ನಾನವಾದ ನಂತರ ಹಣೆ, ಭುಜ, ಎದೆ, ಕೈಗಳಿಗೆ ಹಚ್ಚಿಕೊಳ್ಳುವ ಒಂದು ವಿಧವಾದ ಮಣ್ಣು. ಸ್ಮಾರ್ತರೂ ಕೂಡ ಮುಂಜಿಯಾಗುವ ವಟುವಿಗೆ ಹಣೆಗೆ **ಗೋಪಿಚಂದನ**ವನ್ನು ಹಚ್ಚುತ್ತಾರೆ. ಮುಂಜಿಯ ದಿನ ನಾಲ್ಕಾರು ಬ್ರಹ್ಮಚಾರಿಗಳಿಗೆ ಗೋಪಿ ಚಂದನ ಮತ್ತು ಒಂದು ಜನಿವಾರವನ್ನು ವಟುವಿನ ಕೈಯ್ಯಿಂದ ಕೊಡಿಸುತ್ತಾರೆ.

ಉದಾ: ರಾಮೂ ಮುಂಜಿಗೆ ಗೋಪಿಚಂದನ, ಜನಿವಾರದ ಕಟ್ಟು ತರಬೇಕು.

<goopeechandana> (-) A kind of yellow clay used for smearing on forehead, shoulder, breast, and hand by Madhwa community. Smarthas also smear gopichandana to the forehead of boy who is becoming brahmachari on the day of brahmopadesha, they offer gopichandana and a ritual thread (janivara) through the hand of Vatu, to four to five brahmacharis.

Eg: For Ramu's brahmopadesha, must bring a bundle of janivara.

410. ಗೋಮೆ: ಹಸುವಿನ ಸಗಣಿಗೆ **ಗೋಮಯ (ಗೋಮೆ)** ಎಂದು ಹೆಸರು. ಗೋಮಯವನ್ನು ಹಾಕಿ ಮಣ್ಣಿನ ನೆಲವನ್ನು ಸಾರಿಸಿದರೆ ಧೂಳು ಏಳುವುದಿಲ್ಲ. ಊಟಮಾಡಿದ ಜಾಗವನ್ನು ಗೋಮಯದಿಂದ ಸಾರಿಸಿ ಶುದ್ಧಿಮಾಡುತ್ತಾರೆ. ಪ್ರತಿದಿನ ಬೆಳಿಗ್ಗೆ ಮನೆಯ ಮುಂದೆ ಗೋಮಯವನ್ನು ನೀರಿನಲ್ಲಿ ಕದರಿ ಚುಮುಕಿಸುತ್ತಾರೆ.

ಆಮೇಲೆ ರಂಗೋಲಿ ಹಾಕುತ್ತಾರೆ.

ಉದಾ: ಎಲೆ ತೆಗೆದು ಗೋಮೆ ಹಾಕಿ ಸಾರಿಸು.

<goome> (-) Cleaning with cowdung - Cow dung is called Gomaya (gome). If the mud floor is smeared with cow dung, dust will not come up. They clean the place of lunch with cow dung. They sprinkle water with gomaya in front of house in the morning. Then they put rangoli.

Eg: Remove the leaf and clean with gomaya.

411. ಗೋಮಾಳ: ಹಳ್ಳಿಯ ಹಸು ಕರುಗಳು ಹುಲ್ಲು ಮೇಯುವುದಕ್ಕಾಗಿ ಸ್ವಲ್ಪ ಜಮೀನನ್ನು ಮೀಸಲಾಗಿಟ್ಟಿರುತ್ತಾರೆ. ಆ ಜಾಗಕ್ಕೆ ಗೋಮಾಳ ಎಂದು ಹೆಸರು. ಹಳ್ಳಿಯ ಯಾವ ದನಕರುಗಳನ್ನು ಬೇಕಾದರೂ ಅಲ್ಲಿ ಹುಲ್ಲು ಮೇಯಲು ಬಿಡಬಹುದು. ಗೋಮಾಳದ ಪ್ರದೇಶದಲ್ಲಿ ಸಂತೆ ನಡೆಯುವ ಜಾಗಕ್ಕೆ ಸಂತೆಗೋಮಾಳ ಎಂದು ಕರೆಯುತ್ತಾರೆ.

ಉದಾ: ಸಂತೆಗೋಮಾಳದಲ್ಲಿ ಈ ವಾರ ಸಂತೆ ಸೇರಕೂಡದು ಅಂತ ಡಂಗೂರ ಹೊಡೆಸಿದಾರೆ.

<goomaaLLa> Place for grazing - They will have reserved a small piece of land to graze the village cows. That place is called gomala. We can leave any village cow to graze there. The gomala where flea market functions, is called santhegomala.

Eg: They have announced that flea market should not function in Santhegomala this week.

412. ಗೋಸುಂಬೆ: ಗೋಸುಂಬೆ ದೇಹದ ಬಣ್ಣವನ್ನು ಕ್ಷಣಕ್ಷಣಕ್ಕೂ ಬದಲಾಯಿಸುವ ಪ್ರಾಣಿ. ಗಾದೆಯಾಗಿ ಮನುಷ್ಯನಿಗೂ ಅದನ್ನು ಹೋಲಿಸುತ್ತಾರೆ. ಊಸರವಳ್ಳಿ ಎಂದು ಇದಕ್ಕೆ ಹೇಳುತ್ತಾರೆ.

ಉದಾ: ಆ ರಾಮಯ್ಯ ಇದಾನಲ್ಲ ಗೋಸುಂಬೆ ತರದವನು ಒಂದು ದಿನ ಇದ್ದಾಗೆ ಇನ್ನೊಂದು ದಿನ ಇರಲ್ಲ. ಅವನ ಸಹವಾಸದಲ್ಲಿ ಸ್ವಲ್ಪ ಎಚ್ಚರದಿಂದಿರು.

<goosumbe> Gosumbe is a creature which changes its color every now and then. As a proverb, it is compared to human being also. They call it as Oosaravalli.

Eg: That Ramayya is like gosumbe. He will not be on any day as he was on another day. Be careful with him.





413. ಗೌರೀಹಬ್ಬ: ಗೌರೀಹಬ್ಬ ಸಾಮಾನ್ಯವಾಗಿ ಹಳ್ಳಿಯ ಹೆಂಗಸರು ಪ್ರತಿವರ್ಷವೂ ಭಾದ್ರಪದ ಮಾಸದ ತದಿಗೆಯ ದಿನ ಆಚರಿಸುವ ವ್ರತ. ಗೌರಿಯನ್ನು ಹಳ್ಳಿಯ ಮುಖ್ಯ ಪುರೋಹಿತರ ಮನೆಯಲ್ಲಿ ಪ್ರತಿಷ್ಠಾಪನೆ ಮಾಡಿ ಹಳ್ಳಿಯ ಹೆಂಗಸರು ಅವರ ಮನೆಗೆ ಹೋಗಿ ಗೌರಿಯನ್ನು ಪೂಜಿಸುತ್ತಾರೆ. ನಂತರ ಒಬ್ಬೊಬ್ಬರೂ ಐದು ಜನ ಮುತ್ತೈದೆಯರಿಗೆ ಮರದ ಬಾಗಿನವನ್ನು ಕೊಟ್ಟು ಆಶೀರ್ವಾದ ಪಡೆಯುತ್ತಾರೆ. ಗೌರಿ ಹಬ್ಬದ ನಂತರ ಗಣೇಶ ಹಬ್ಬ ಬರುತ್ತೆ. ಮೊದಲು ತಾಯಿಯ ಆಗಮನ. ಆಮೇಲೆ ಮಗನ ಆಗಮನ.

ಉದಾ: ರಂಗಾಭಟ್ಟರ ಮನೆಯುಲ್ಲಿ ಈ ಸಲ ಗೌರಿ ಕೂರ್ಸಿದಾರೆ.

ಮದುವೆ ಕಾರ್ಯಕ್ರಮಗಳಲ್ಲಿ ಕಾಶೀ ಯಾತ್ರೆ ಆದ ನಂತರ ಪುಣ್ಯಾವರ್ಚನೆ, ಗಣಪತಿ ಪೂಜೆ, ಧಾರೆ ಮುಹೂರ್ತ. ಧಾರೆ ಮುಹೂರ್ತಕ್ಕೆ ಹೆಣ್ಣನ್ನು ಹಸೆಯ ಮೇಲಕ್ಕೆ ಕರೆಯುವವರೆಗೂ ಅವಳು, ಮೊದಲು ಗೌರೀ ಪೂಜೆಯನ್ನು ಮಾಡುತ್ತಿರುತ್ತಾಳೆ.

ಉದಾ: ಲಕ್ಷ್ಮೀ, ಲಲಿತಂಗೆ ಗೌರೀಪೂಜೆಗೆ ಎಲ್ಲಾ ಅಣಿಮಾಡಿಕೊಡು.

<goureehabba> Gouri festival, generally, in the village women every year performing on Thadige day in Bhadrapad month as a religious act. In the house of village main priest, gouri is installed and village women go to his house and worship. Then they give gift (to be given on the auspicious day) in the bamboo fan to five married women (whose husbands are alive) and receive their blessings. Ganesha festival is after gouri festival. First arrival of mother and then son's arrival.

Eg: In Rangabhattar's house, this year have installed gouri.

During marriage functions after Kashiyatra (a program where the bridegroom is welcomed) punyavarchane (religious

rites performed at the beginning), Ganeshapooja and mangalyadharana, till the bride is called to the pandal, she will be worshipping gouri.

Eg: Lakshmi arrange everything for gouripooja for Lalitha.

414. ಗೃಹಪ್ರವೇಶ: ನೋಡಿ: ಹಾಲುಕ್ಕಿಸುವುದು

<gruhapravesha> House warming - See: Halukkisuvudu

415. ಗೃಹಸ್ಥಾಶ್ರಮ: ಗೃಹಸ್ಥರಾದ ಗಂಡ ಹೆಂಡತಿಯರು ಮಕ್ಕಳ ಲಾಲನೆ ಪೋಷಣೆ ಮಾಡಿ ಅನೇಕ ವರ್ಷಗಳು ಜೀವನ ನಡೆಸುತ್ತಾರೆ. ಮಕ್ಕಳ ಅಭಿವೃದ್ಧಿಯೊಂದೇ ಅವರ ಗುರಿಯಾಗಿರುತ್ತೆ. ನಂತರ ಮನೆಯ ಜವಾಬ್ದಾರಿಯನ್ನು ಮಕ್ಕಳಿಗೆ ವಹಿಸಿ ಅವರ ವೈರಾಗ್ಯದ ಜೀವನಕ್ಕೆ ಮುಂದಿನ ದಾರಿಯನ್ನು ನೋಡುತ್ತಿರುತ್ತಾರೆ.

ಉದಾ: ಗೃಹಸ್ಥಾಶ್ರಮ ಧರ್ಮರಕ್ಷಣೆಗೆ ಆಧಾರವಾಗಿದೆ.

<gruhasthhaashrama> (-) The parents rear children spending several years. Their main aim is only the children's prosperity. Then they transfer the responsibility to children and look to their future.

Eg: Entering Gruhasthashrama is the foundation for keeping up religious merit.

416. ಗ್ಯಾಪಕ: ನೆನಪು ಮಾಡುವುದಕ್ಕೆ **ಗ್ಯಾಪಕ** ಅನ್ನುವ ಪದವನ್ನು ಹೇಳುವುದು ರೂಢಿ.

ಉದಾ: ನಾಳೆ ಮನೆಗೆ ಸ್ವಾಮಿಗಳು ಬರ್ತಾರೆ. ಅಣ್ಣು, ಊವು ತರಬೇಕು. ಸ್ವಲ್ಪ ಗ್ಯಾಪಕ ಮಾಡು.

ಪದರೂಪ: ಗ್ಯಾಪಕ (ಜ್ಞಾಪಕ)

<gyaapaka> Remembrance - To remember anything, it is common to use the word, gyapaka.

Eg: Tomorrow Swamiji is coming. Must bring fruits and flowers. Remember me a little.

Different version: Gyapaka (Gnapaka)

417. ಗ್ರಾಮ ದೇವತೆಗಳು: ಅಣ್ಣಮ್ಮ, ಕದಿರಮ್ಮ, ಅಂಕಾಳಮ್ಮ, ಮಾರಮ್ಮ, ಕೊಲ್ಲಾಪುರದಮ್ಮ, ಬದಿಗೇರಮ್ಮ, ಅಂತರಗಟ್ಯಮ್ಮ ಇವೆಲ್ಲ **ಗ್ರಾಮ ದೇವತೆಗಳು**. ಒಂದೊಂದು ಮನೆಯವರೂ ಒಂದೊಂದು ಗ್ರಾಮ ದೇವತೆಗೆ, ವರ್ಷಕ್ಕೊಂದಾವರ್ತಿ ನೇಮದಿಂದ ನಡೆದುಕೊಳ್ಳುವುದು ರೂಢಿ. ಮಾರಮ್ಮ ಮುಂತಾದ ದೇವತೆಗಳಿಗೆ ಕುರಿ, ಕೋಣ ಮತ್ತು ಮೇಕೆಯನ್ನು ಬಲಿಕೊಡುತ್ತಿದ್ದರು. ಬಲಿಕೊಡುವ ಪ್ರಾಣಿಯ ಕೊರಳಿಗೆ ಹೂವಿನಹಾರ ಹಾಕಿ ಊರಲ್ಲೆಲ್ಲ ಮೆರವಣಿಗೆ ಮಾಡಿ ದೇವಸ್ಥಾನದ ಮುಂದೆ ಕಡಿಯುತ್ತಿದ್ದರು!

ಉದಾ: ಮುಂದಿನವಾರ ನಮ್ಮೂರಲ್ಲಿ ಗ್ರಾಮದೇವತೆ ಅಂಕಾಳಮ್ಮನ ಉತ್ಸವವಿದೆ.

<graamadevathegaLu> Village Deities - Annamma, Kadiramma, Ankalamma, Maramma, Kollapuradamma, Badigeramma, Antharagatyamma, all these are gramadevathegalu (village deities). It is common each family worship once a year to particular deity. They were offering sheep, buffalo, lamb to the deity. The animal to be offered was garlanded and taken out in procession throughout and killing in front of temple.

Eg: Next week in our village, village deity Ankalamma festival is there.

418. ಗ್ರಾಮಪಂಚಾಯಿತಿ: ಹಳ್ಳಿಗೆ ಸಂಬಂಧಪಟ್ಟ ವ್ಯವಹಾರಗಳನ್ನೆಲ್ಲ ವಿಮರ್ಶೆಮಾಡಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗಿ ಏಳೆಂಟು ಜನ ಮುಖ್ಯಸ್ಥರಾದವರನ್ನು ಚುನಾಯಿಸುತ್ತಾರೆ. ಆ ಗುಂಪಿಗೆ **ಗ್ರಾಮಪಂಚಾಯಿತಿ** ಎಂದು ಹೆಸರು. ಗ್ರಾಮಪಂಚಾಯಿತಿ ಮಾಡಿದ ತೀರ್ಮಾನಕ್ಕೆ ಹಳ್ಳಿಯವರು ಬದ್ಧರಾಗಿರಬೇಕು.

ಉದಾ: ನಾಳೆ ಗ್ರಾಮಪಂಚಾಯಿತಿ ಸೇರುತ್ತಂತೆ. ಸಿದ್ದಣ್ಣನ ಅರ್ಜಿಗೆ ಏನಾದರೂ ತೀರ್ಮಾನ ಆಗಬಹುದು.

ನೋಡಿ: ಚಾವಡಿಕಟ್ಟೆ

<graamapanchaayithi> (-) An association of elected members - They elect seven to eight important people to verify

and take decision on transaction, connected to the village. That group is called Gramapanchayithi (Village Panchayat to administer the village activities). The decision taken by Village Panchayat should be accepted by villagers.

Eg: Tomorrow it seems Village Panchayat is assembling. There may be some decision for Siddanna's appeal.

See: Chavadikatte (Village Office)

❑

ಚ / Cha

419. ಚಂದ್ರಿಕೆ: ಚಂದ್ರಿಕೆ ಎಂದರೆ ಬೆಳದಿಂಗಳು ಎಂದು ಅರ್ಥವಿದೆ. ಆದರೆ ಬಳಕೆಯಲ್ಲಿ ಉಂಡಿಗೆಗೆ ಚಂದ್ರಿಕೆ ಎಂದು ಕರೆಯುತ್ತಾರೆ.

ನೋಡಿ: ಉಂಡಿಗೆ

<Chandrike> Slit made on a fruit - Chandrike means moonlight. But in usage Undige is called Chandrike.

See: Undige

420. ಚಕ್ಕಂದ: ಸುಮ್ಮನೆ ಬಾಯಿಗೆ ಬಂದದ್ದನ್ನು ಹರಟೆ ಹೊಡೆಯುತ್ತ ಕೂತರೆ **ಚಕ್ಕಂದ** ಎಂದು ಹೇಳುವುದು ರೂಢಿ.


ಉದಾ: ಮದುವೆ ಎಂದರೆ ಸುಮ್ಮನೇನಾ, ನೂರಾಎಂಟು ಕೆಲಸಗಳಿವೆ. ಚಕ್ಕಂದ ಮಾಡ್ತಾ ಕುಂತುಬಿಡಬ್ಯಾಡ್ರಿ.

<chakkanda> (-) Simply sitting, chatting whatever occurs to mind, the word Chakkanda is common to say.

Eg: Is it so easy marriage means. Hundred and odd work is there. Do not sit doing chakkanda (idling).

421. ಚಕ್ರಬಡ್ಡಿ: ನೋಡಿ: ಸುಸ್ತಿಬಡ್ಡಿ

<chakrabaddi> See: Susthibaddi **(Penal interest)**



422. ಚಕ್ಕುಬಂದಿ: ಹಳ್ಳಿಯಲ್ಲಿ ವಾಸವಾಗಿರುವ ಪ್ರತಿಯೊಬ್ಬರ ಮನೆ, ತೋಟ, ಹೊಲ, ಗದ್ದೆಗಳ ಅಳತೆ ಪ್ರಮಾಣ. ಅದರ ಯಾವ ಯಾವ ದಿಕ್ಕಿನಲ್ಲಿ ಏನೇನಿದೆ ಎಂದು ಗುರ್ತಿಸಿ, ಒಂದು ಪುಸ್ತಕದಲ್ಲಿ ದಾಖಲೆ ಮಾಡುತ್ತಾರೆ. ಅದಕ್ಕೆ **ಚಕ್ಕುಬಂದಿ** ಎಂದು ಹೆಸರು. ಇದು ಹಳ್ಳಿಗೆ ಸಂಬಂಧಪಟ್ಟ ಶ್ಯಾನುಭೋಗರ ಕೆಲಸ. ಹಳ್ಳಿಯಲ್ಲಿರುವ ಪ್ರತಿಯೊಬ್ಬ ರೈತನಿಗೂ ಒಂದು ಪ್ರತ್ಯೇಕವಾದ ಪುಸ್ತಕವಿರುತ್ತೆ. ಅದರಲ್ಲಿ ಆಯಾಯ ರೈತನಿಗೆ ಸೇರಿದ ಆಸ್ತಿಪಾಸ್ತಿಗಳ ಪ್ರತಿಯೊಂದು ವಿಷಯವೂ ಉಲ್ಲೇಖವಾಗಿರುತ್ತೆ.

ಉದಾ: ರಾಮಪ್ಪನ ಮನೆ ಚಕ್ಕುಬಂದಿ ಪ್ರಕಾರ ಪೂರ್ವಕ್ಕೆ ಹೊಲ, ದಕ್ಷಿಣಕ್ಕೆ ತೋಟ, ಉತ್ತರಕ್ಕೆ ದೇವಸ್ಥಾನ, ಪಶ್ಚಿಮಕ್ಕೆ ಕೋಟೆ ಇದೆ.

<chakkubandi> Demarcation of house or land - They will record in the village of each person, house, garden, agricultural land, their measurement, what is there on each side of land. It is called Chakkubandi. This is the duty of Shanbhog to record connected to the village. For each farmer, there will be a separate book. It will have been recorded everything about his property.

Eg: According to Chakkubandi, Ramappa's house, East: land, South: garden, North: Temple, West: Fort.

423. ಚನ್ನಾಮಣೆ: ನೋಡಿ: ಅಳಿಗುಳಿಮಣೆ

<channaamaNe> See: Aligulimane.

424. ಚನ್ನಂಗಿಬೇಳೆ: ಇದು ಒಂದು ವಿಶೇಷ ತರಹದ ತೊಗರಿಬೇಳೆ. ನಾವು ನಿತ್ಯವೂ ಬಳಸುವ ತೊಗರಿಬೇಳೆಯ ಅರ್ಧದಷ್ಟು ಗಾತ್ರವಿದ್ದು, ಬಣ್ಣ ಕೆಂಪಾಗಿರುತ್ತೆ. ಚನ್ನಂಗಿಬೇಳೆ ಹಾಕಿ ಮಾಡಿದ ಸಾರು ಬಹಳ ರುಚಿ.

ಉದಾ: ನಾಳೆ ನೆಂಟರು ಬಂದಾಗ ಚನ್ನಂಗಿಬೇಳೆ ಹಾಕಿ ಸಾರುಮಾಡ್ಬಿಡಿ.

ನೋಡಿ: ಸಾರು

<channangibeeLe> Type of dal - This is a special type of Tur dal. It is half the size of what we use every day. Color will be red. The rasam made of channangibeele is tastier.

Eg: When relatives come tomorrow, make rasam with channangibeele.

See: Saaru



425. ಚಟ್ಟ: ಮನುಷ್ಯ ಸತ್ತಾಗಲೂ ಅನೇಕ ವಿಧಿಗಳಿರುತ್ತವೆ. ಹೆಣಗಳನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಲು ಅನುಕೂಲ ವಾಗುವಂತೆ ಬೊಂಬಿನಿಂದ ಮಾಡಿರುವ ಏಣಿಯಾಕಾರದ ಒಂದು ಸಾಧನ. ಆರು ಅಡಿ ಉದ್ದದ ಎರಡು ಬೊಂಬುಗಳನ್ನಿಟ್ಟು ಮಧ್ಯೆ ಸುಮಾರು ಎರಡೂವರೆ ಅಡಿ ಉದ್ದದ ಬೊಂಬಿನ ಸೀಳುಗಳನ್ನು ಅಡ್ಡಡ್ಡಲಾಗಿ ಇಟ್ಟು ಹುರಿಯಿಂದ ಕಟ್ಟುತ್ತಾರೆ. ಅದರ ಮೇಲೆ ಹೆಣವನ್ನು ಮಲಗಿಸಿ ಕೆಳಕ್ಕೆ ಬೀಳದಂತೆ ತೆಂಗಿನ ಹುರಿಯಿಂದ ಬಿಗಿಯುತ್ತಾರೆ. ಅದಕ್ಕೆ **ಚಟ್ಟ** ಎಂದುಹೇಳುವುದು. ನಾಲ್ಕು ಜನಗಳು ಚಟ್ಟವನ್ನು ಹೆಗಲಮೇಲೆ ಇಟ್ಟುಕೊಂಡು ಸ್ಮಶಾನಕ್ಕೆ ಸಾಗಿಸುತ್ತಾರೆ. ಚಟ್ಟವನ್ನು **ದಬ್ಬೆ ಕಟ್ಟುವುದು** ಎಂದು ಹೇಳುವುದೂ ರೂಢಿ. ಈ ಸಂಪ್ರದಾಯ ಕೆಲವು ಜನಾಂಗಗಳಿಗೆ ಮಾತ್ರ. ಇತರೆ ಜನಗಳು ಹೆಣವನ್ನು ಭೂಮಿಯಲ್ಲಿ ಹೂಳುತ್ತಾರೆ. ತಂದೆತಾಯಿಗಳು ಸತ್ತಾಗ ಗಂಡುಮಕ್ಕಳು ತಲೆಕೂದಲನ್ನೆಲ್ಲ ತೆಗೆಸುತ್ತಾರೆ. ಅವರು ಸ್ಮಶಾನದಲ್ಲಿ ಮಾಡುವ ವಿಧಿಗಳಿಗೆ ಅನೇಕಬಾರಿ ತಣ್ಣೀರಿನಲ್ಲಿ ಸ್ನಾನಮಾಡಬೇಕಾಗಿರುವುದರಿಂದ ಈ ಸಂಪ್ರದಾಯವನ್ನು ಅನುಸರಿಸಿರಬಹುದು.

ಉದಾ: ಇನ್ನೇನು ಎಲ್ಲ ಮುಗಿದಂಗಾಯ್ತು, ದಬ್ಬೆ ಕಟ್ರಪ್ಪ. ಚಟ್ಟಕಟ್ಟಲು ತಿಮ್ಮಪ್ಪ ಬಂದಿದ್ದಾನೆ.

ಉದಾ: ಅಪ್ಪನವರಿಗೆ ಚಟ್ಟ, ಅಮ್ಮನವರಿಗೆ ಪಟ್ಟ ಗಾದೆ.

<chaTTa> Bier to carry dead body - When a man dies also there are so many rituals. To make it convenient to take dead bodies to cremation ground, an equipment like a ladder made of bamboo. Putting two bamboo pieces of six feet, across attaching two-and-a-half-foot bamboo pieces, tie with thin rope. Placing the dead body on that, tie with rope so that it will not fall. It is called Chatta (Bier to carry corpse). Four people will carry on their shoulders and shift to cremation ground. Chatta is also called Dabbekattuvudu. This method is only for certain communities. Other people will bury into the earth.

When parents die, sons will get hair removed. Perhaps they follow this ritual since they have to take bath in cold water several times in cremation ground according to rituals.

Eg: It is almost over, tie dabbe. For making Chatta Thimmappa has come.

Eg: For father Chatta, for mother Patta (Proverb)



426. ಚಟ್ಟಿ: ತಾಮ್ರದ ಸಣ್ಣಪಾತ್ರೆಗೆ **ಚಟ್ಟಿ** ಎನ್ನುತ್ತಾರೆ. ನೀರು ಕಾಯಿಸುವ ಹಂಡೆಯಿಂದ ಸ್ನಾನಮಾಡುವ ನೀರನ್ನು ತುಂಬಿಕೊಳ್ಳಲು ಚಟ್ಟಿಯನ್ನು ಉಪಯೋಗಿಸುತ್ತಾರೆ. ಚಟ್ಟಿಯ ಬಾಯಿ ಸಣ್ಣದಾಗಿರುತ್ತೆ.

ಉದಾ: ಎರಡು ಬಚ್ಚಲುಮನೇಲು ಬೇರೆಬೇರೆ ಚಟ್ಟಿ ಇಡಿ.

ನೋಡಿ: ಚೊಂಬು, ತಂಬಿಗೆ

<chaTTi> For small copper vessel they say Chatti. From big vessel (to heat water), to take out water for bathing they use Chatti. Mouth of Chatti will be small.

Eg: Keep Chatti separately in both bathrooms.

See: Chombu, Thambige



427. ಚಟ್ಟುಬಡಿಯುವುದು: ಚಟ್ಟುಬಡಿಯುವುದೂ ಮದುವೆಯ ಒಂದು ಅಂಗ. ಓಕುಳಿ ನೀರನ್ನು ಒಂದು ತಟ್ಟೆಯಲ್ಲಿ ಹಾಕಿ ವಧು ಕೈಯ್ಯನ್ನು ಅದರಲ್ಲಿ ಅದ್ದಿ ಮನೆಯ ಹೊರಗಡೆ ಗೋಡೆಯ ಮೇಲೆ ಹತ್ತಾರು ಕಡೆ ಒತ್ತುತ್ತಾಳೆ. ಅದು ಹೆಣ್ಣಿನಮನೆಯವರಿಗೆ ಮಾತ್ರ.

ಉದಾ: ನಿನ್ನೆ ಇದು ಚಟ್ಟುಬಡಿದ ಗುರ್ತುಗಳು.

<chaTTubaDiyuvudu> A part of marriage function - Chattubadiyuvudu is also a part of marriage function. Putting okuliwater (colored water) in a plate, the bride will soak her hand and press on the wall outside house in ten or twelve places. This is only for bride's house.

Eg: These are the marks of putting colored water yesterday.

428. ಚದರ: ಉದಾ: ರಾಮಪ್ಪನು ಹತ್ತು ಚದರದ ಮನೆಯನ್ನು ಕಟ್ಟಿಸುತ್ತಿದ್ದಾನೆ.

ನೋಡಿ: ಅಂಕಣ

<chadara> *Eg: Ramappa is getting built a house of ten squares.* See: Ankana

429. ಚಪ್ಪರಹಾಕುವುದು: ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳಲ್ಲಿ ಮತ್ತು ಹಳ್ಳಿಯಲ್ಲಿ ಸಾಮೂಹಿಕವಾಗಿ ನಡೆಸುವ ದೇವತಾಕಾರ್ಯಗಳಲ್ಲಿ ಚಪ್ಪರ ಹಾಕುತ್ತಾರೆ. ಬಾಳೇಕಂದು, ತೆಂಗಿನಸೋಗೆ ಮತ್ತು ಮಾವಿನ ಎಲೆಗಳಿಂದ ಚಪ್ಪರ ತಯಾರಿಸುತ್ತಾರೆ. ಮದುವೆಗೆ ಹಾಕಿದ ಚಪ್ಪರವನ್ನು ಮದುವೆಯ ಕಾರ್ಯಕಲಾಪಗಳೆಲ್ಲ ಮುಗಿದ ಮೇಲೆ ಅದಕ್ಕೆ ಪೂಜೆಮಾಡಿ ನಂತರ ಅದನ್ನು ತೆಗೆಯುತ್ತಾರೆ. ಬೊಂಬು ಮತ್ತು ಗಿಡಗಳ ರೆಂಬೆಗಳನ್ನು ಉಪಯೋಗಿಸಿ ಮಾಡಿದ ಚಪ್ಪರಕ್ಕೆ, ಹೀರೆಕಾಯಿ, ಸೌತೆಕಾಯಿ, ಸೀಮೆ ಬದನೆಕಾಯಿ, ಅವರೇಕಾಯಿ ಅಲ್ಲದೆ ಹೂವಿನ ಬಳ್ಳಿಗಳನ್ನು ಹಬ್ಬಿಸುತ್ತಾರೆ.

ಉದಾ: ನಾಡಿದ್ದು ದೇವರಸಮಾರಾಧನೆ, ಇವತ್ತೇ ಚಪ್ಪರ ಹಾಕಿಬಿಡಿ.

<chapparahaakuvudu> Erecting pendal - During marriage, brahmopadesha etc. the auspicious functions and during public functions of village in temples, they put pandals. They prepare pandals with banana plants, coconut leaves and mango leaves. For pandal put for marriage function will be removed after worshipping at the end of all ritual programs of marriage. For pandal made of bamboo and branches of plants, the creepers of heere, cucumber, seemebadane, beans and also flower creepers are spread.

Eg: Tomorrow Devarasamaradhane. Put pandal today itself.

430. ಚಪ್ಪರದವರೆ: ಅವರೆ ಬಳ್ಳಿಯನ್ನು ಚಪ್ಪರದ ಮೇಲೆ ಹಬ್ಬಿಸಿ ಬೆಳೆಸುತ್ತಾರೆ. ಇದು ಚಪ್ಪರದವರೆ. ಇನ್ನೊಂದು ವಿಧವಾದ ಅವರೆಯನ್ನು ಹೊಲದಲ್ಲಿ ಪಕ್ಕಪಕ್ಕಕ್ಕೆ ಬೀಜವನ್ನು ನೆಟ್ಟು ಬೆಳೆಸುತ್ತಾರೆ. ಹೊಲದವರೆ ಗಿಡ ಎತ್ತರಕ್ಕೆ ಬೆಳೆಯುವುದಿಲ್ಲ. ಇದು ಸಾಮಾನ್ಯವಾಗಿ ಮಾಗಿ ಕಾಲದಲ್ಲಿ ಹಿಮ ಬೀಳುವಾಗ ಮಾತ್ರ ಬೆಳೆಯುತ್ತೆ. ಈ ತರಹ

ಅವರೆಕಾಳನ್ನು ನೀರಿನಲ್ಲಿ ನೆನೆಸಿ ಹಿಚುಕಿದರೆ ಸಿಪ್ಪೆ ಬೇರೆಯಾಗಿ ಕಾಳು ಹೊರಕ್ಕೆ ಬರುತ್ತೆ. ಇದನ್ನು ಹಿಚಕವರೆ ಅಥವಾ **ಚಿಲಕವರೆ** ಎಂದು ಹೇಳುವುದು ರೂಢಿ. ಹಿಚಕವರೆಯನ್ನು ಬಳಸಿ ಇಡ್ಲಿ, ಉಪ್ಪಿಟ್ಟು, ಅಕ್ಕಿರೊಟ್ಟಿ ಮಾಡುತ್ತಾರೆ. ಹಿಚಕವರೆಯನ್ನು ಎಣ್ಣೆಯಲ್ಲಿ ಕರಿದು ಖಾರಹಾಕಿದರೆ ತಿನ್ನುವುದಕ್ಕೆ ರುಚಿಯಾಗಿರುತ್ತೆ.

ಉದಾ: ಚಪ್ಪರದವರೆಬಳ್ಳಿ ಬಾಡ್ತಾ ಇದೆ. ಅವರೆಕಾಯೆಲ್ಲ ಕಿತ್ತು ಒಣಗಿಸಬೇಕು.

ನೋಡಿ: ಚಿಲಕವರೆ, ಹಿಚಕವರೆ

<chapparadavare> (-) A kind of vegetable - The creepers of beans are grown on pandal. This is chapparadavare. Another variety of beans are grown in the field. Sowing seed side by side, this type of creeper will not grow big. It grows generally during cold season. When Beans are soaked in water and squeezed, the skin will get separated and the corn comes out. It is common to call this as hichakavare or Chilakavare. Using hichakavare, they prepare idli, upma and rice roti. If hichakavare is fried in oil and mixed masala it is tasty to eat.

Eg: Chapparadavare creeper is getting dried. Must pluck out beans and keep in sunlight.

See: Chilakavare, hichakavare.

431. ಚಪ್ಪರವಿಸರ್ಜನೆ: ಮದುವೆಯ ಎಲ್ಲ ಕಾರ್ಯಕ್ರಮಗಳು ಮುಗಿದಮೇಲೂ ಮಾರನೆಯ ದಿನ ಒಂದು ಕಾರ್ಯಕ್ರಮ – **ಚಪ್ಪರವಿಸರ್ಜನೆ.** ಚಪ್ಪರಕ್ಕೆ ಕಟ್ಟಿದ್ದ ಬಾಳೆಕಂದನ್ನು ಅಲುಗಿಸಿ ತೆಗೆಯುವುದು. ಇದು ಹೆಣ್ಣಿನ ಕಡೆಯವರಿಗೆ ಮಾತ್ರ. ಆ ದಿನವೂ ಪಾಯಸದೂಟವೆ!

ಉದಾ: ಇವತ್ತು ಚಪ್ಪರವಿಸರ್ಜನೆ, ಇಲ್ಲಿಗೇ ಬಂದುಬಿಡಿ ಭೋಜನಕ್ಕೆ.

<chapparavisarjane> Removal of pandal - Even after every item of marriage ritual is over, next day one program Chapparavisarjane. The banana plant attached to pandal will be shaken after pooja and removed. This is for bride's party only. On that day also, lunch with sweets.

Eg: Today is Chapparavisarjane. Come for lunch here only.

432. ಚರಂಡಿ: ರಸ್ತೆಯ ಮೇಲೆ ಬಿದ್ದ ನೀರು, ಮನೆಯ ಬಚ್ಚಲು ಮುಂತಾದ ಜಾಗಗಳಿಂದ ಹೊರಗಡೆ ಬರುವ ನೀರು ಹರಿದು ಹೋಗಲು, ರಸ್ತೆಯ ಅಂಚಿನಲ್ಲಿ ಮಾಡಿರುವ ಭಾಗಕ್ಕೆ ಚರಂಡಿ ಎನ್ನುತ್ತಾರೆ.

ಉದಾ: ಹುಲ್ಲು ಸೆತ್ತೆ ಎಲ್ಲ ಸೇರ್ಕಂಡು ನೀರುಕಟ್ಟಿದೆ. ಚರಂಡಿ ಸ್ವಲ್ಪ ಚೊಕ್ಕಟಮಾಡಬೇಕು.

<charanDi> Gutter - Water falling on road and water coming out of bathroom etc. of house to flow out called Charandi.

Eg: Grass, weeds are all piled up, water is stagnated. Must clean up the gutter.

433. ಚರಟ: ನೋಡಿ: ಗಷ್ಟು

<charata> See: Gashtu

434. ಚರುಪು: ದೇವಸ್ಥಾನಗಳಲ್ಲಿ ವಿಶೇಷ ಕಾರ್ಯಕ್ರಮಗಳ ದಿವಸ ಅಲ್ಲಿಗೆ ಬಂದಿರುವ ಭಕ್ತಾದಿಗಳಿಗೆ ದೇವರಿಗಾಗಿ ಮಾಡಿದ್ದ ಕೋಸುಂಬರಿ, ಕಡಲೆಕಾಳು ಅಥವಾ ಹೆಸರುಕಾಳಿನ ಉಸಲಿ, ಕಡಲೆಹಿಟ್ಟು, ರಸಾಯನ ಮುಂತಾದ ತಿಂಡಿಗಳನ್ನು ಮಂಗಳಾರತಿಯಾದ ಮೇಲೆ ಪ್ರಸಾದವಾಗಿ ಹಂಚುತ್ತಾರೆ. ಪ್ರಸಾದವನ್ನೇ ಚರುಪು ಎಂದು ಹೇಳುವುದು ವಾಡಿಕೆ.

ಉದಾ: ನಿನ್ನೆ ದೇವಸ್ಥಾನದಲ್ಲಿ ಗುಗ್ಗುರಿ ಚರುಪು ಹಂಚಿದರು.

<charupu> (-) Something that has been offered to God - In temples, on special occasions, for the coming devotees, the items like Kosumbari, gram or moong dal usali, flour of roasted gram, Rasayana etc. after Aarathi distribute as Prasada. That prasada is called charupu in usage.

Eg: Yesterday in temple they distributed gugguri charupu.

435. ಚಳಿಸುವುದು: ಒರಳಿನಲ್ಲಿ ಭತ್ತ, ತೊಗರಿಬೇಳೆ, ಹೆಸರುಕಾಳು, ಉದ್ದಿನಕಾಳನ್ನು ಒನಕೆಯಿಂದ ಕುಟ್ಟುವುದಕ್ಕೆ ಚಳಿಸುವುದು ಎಂದು ಹೇಳುತ್ತಾರೆ. ಹಾಗೆ ಚಳಿಸಿದಾಗ ಮೇಲಿನ ಹೊಟ್ಟು ಬೇರೆಯಾಗುತ್ತೆ.

ಉದಾ: ಪಕ್ಕದಮನೆಯಿಂದ ಎರಡು ಸೇರು ಹೆಸರುಕಾಳನ್ನು ಚಳಿಸಿಕೊಂಡು ಬಾ.

<chaLisuvudu> (-) Cause to shake - In the grinding stone putting paddy, tur dal, moong dal, urd dal, pounding with pounder is called chalisuvudu. When it is pounded like that the outer skin gets separated.

Eg: From neighbor house, get pounded two seers of moong dal.

436. ಚಾಕೊಲೇಟ್‌ಬೆಲ್ಲ: ನೋಡಿ: ಉಜ್ಜುಬೆಲ್ಲ

<chacoletebella> See: Ujju bella

437. ಚಾಟಿ: ನೋಡಿ: ಬಾರುಕೋಲು

<chaaTi> Whip - See: Barukolu



438. ಚಾಮರಸೇವೆ: ಚಮರಿಮೃಗದ ದೊಡ್ಡದೊಡ್ಡ ಕೂದಲನ್ನು ಒಟ್ಟಾಗಿ ಸೇರಿಸಿ ಒಂದು ತುದಿಯನ್ನು ಬೆಳ್ಳಿಯ ಕೊಳವೆಯೊಳಕ್ಕೆ ಕೂಡಿಸಿರುತ್ತಾರೆ. ಅದನ್ನು ಕೈಯ್ಯಲ್ಲಿ ಹಿಡಿದು ಸ್ವಾಮಿಗಳಿಗೆ ಗಾಳಿಬೀಸುವುದನ್ನು **ಚಾಮರಸೇವೆ** ಎಂದು ಹೇಳುವುದು ವಾಡಿಕೆ. ದೇವರಿಗೆ ಮಹಾಮಂಗಳಾರತಿಯಾಗುವ ವೇಳೆಯಲ್ಲಿ ಚಾಮರಸೇವೆ ಮಾಡುವುದು ಸಂಪ್ರದಾಯ.

ಉದಾ: ಈಗ ದೇವರಿಗೆ ಚಾಮರಸೇವೆ ಸಲ್ಲಿಸುತ್ತಾರೆ.

<chamaraseve> (-) Fan made of big hairs of Yak to use for Swamiji or God's idol - The big hairs of yak are attached together, and one edge is fixed into a silver tube. Holding that in hand to fan to Swamiji is known as chamaraseve. It is customary to do chamaraseve to deity when arati is done.

Eg: Now they do chamaraseve to the deity.

439. ಚಾವಡಿಕಟ್ಟೆ: ಮನೆಯ ಮುಂಭಾಗದ ಜಗುಲಿಗೆ **ಚಾವಡಿ** ಎನ್ನುತ್ತಾರೆ. ದೇವಸ್ಥಾನದ ಅಂಗಳ, ಅರಳಿಕಟ್ಟೆ ಮೆಟ್ಟಿಲು ಜಾಗವನ್ನು ಚಾವಡಿ ಅಂತ ಕರೆಯುತ್ತಾರೆ. ಹಳ್ಳಿಯ ಕುಂದುಕೊರತೆಗಳನ್ನು ವಿಚಾರ ಮಾಡುವುದು, ದೂರುಗಳ ಬಗ್ಗೆ ತನಿಖೆ ಮಾಡುವುದು ಎಲ್ಲವೂ ಊರ ಮುಂದಿನ ಚಾವಡಿಕಟ್ಟೆಯ ಮೇಲೆ. ಚಾವಡಿಕಟ್ಟೆಯ ಮೇಲೆ ಊರಿನ ಮುಖ್ಯಸ್ಥರೆಲ್ಲ ನೆರೆದಿರುತ್ತಾರೆ. ಶ್ಯಾನುಭೋಗರು

ಬಂದ ಕೂಡಲೆ ಕಾರ್ಯಕ್ರಮ ಆರಂಭವಾಗುತ್ತದೆ. ಗ್ರಾಮಪಂಚಾಯಿತಿಯ ಕಾರ್ಯಕ್ರಮಗಳನ್ನು ಚಾವಡಿಯಲ್ಲೆ ನಡೆಸುವುದು ಎಂದು ಡಂಗುರ ಹಾಕಿಸುತ್ತಾರೆ.

ಉದಾ: ಚಾವಡಿ ರಂಗಪ್ಪನವರು ನಿನ್ನೆ ಊರಿಗೆ ಬಂದರು. ನಾಳೆ ಚಾವಡಿಕಟ್ಟೆಯಲ್ಲಿ ಸಭೆ ಇದೆ.

<chaavaDikaTTe> Village office - Platform in front of a house is called chavadi. Veranda of temple, the steps of Aralikatte is also known as Chavadi. Enquiring the problems of village, investigating the appeals all are done on chavadikatte in front of the village. All the important people have assembled on chavadikatte. The programs may commence as soon as the Shanbhog arrives. All programs of village office will take place on chavadi, they have announced.

Eg: Chavadi Rangappa has returned yesterday. Tomorrow there will be meeting in Chavadikatte.

440. ಚಿಕ್ಕಸಾಲ: ನೋಡಿ: ಕೈಗಡ

<chikkasaala> See: Kaigada

441. ಚಿಕ್ಕಾಸು: ನೋಡಿ: ಕಿಗ್ಗಾಣಿ

<chikkaasu> See: Kiggani

442. ಚಿಗುರು: ಗಿಡ ಬಳ್ಳಿಗಳಲ್ಲಿ ಮೊಳಕೆ ಒಡೆಯುವುದನ್ನು **ಚಿಗುರು** ಅನ್ನುತ್ತಾರೆ. ಎಳೆಯದಾದ ಎಲೆಗಳನ್ನು ಚಿಗುರೆಲೆ ಎಂದು ಕರೆಯುತ್ತಾರೆ. ಉದಾಹರಣೆಗೆ ವೀಳ್ಳೇದೆಲೆಯಲ್ಲಿ ಚಿಗುರೆಲೆ ಬೇರೆ, ಕರ್ಚಿಎಲೆ ಬೇರೆ.

ಉದಾ: ಹಿತ್ತಲಲ್ಲಿ ಗುಲಾಬಿ, ಮಲ್ಲಿಗೆ ಬಳ್ಳಿಯಲ್ಲಿ ಚಿಗುರು ಒಡೆದಿದೆ. ಮೊಟ್ಟೆ ತೆಂಗಿನಕಾಯಿ ನೆಲಕ್ಕೆ ಹಾಕಿದ್ದುದು ಚಿಗುರು ಮೇಲಕ್ಕೆ ಬಂದಿದೆ.

ನೋಡಿ: ಕರ್ಚಿ ವೀಳ್ಳೇದೆಲೆ, ಚಿಗುರು ವೀಳ್ಳೇದೆಲೆ.

<chiguru> Sprout - Sprouting in plants or creepers is called chiguru (germinate). The tender leaves are called chigurele. For example, in beter leaf, chigurele is separate, Karchiele is separate.

Eg: In back garden, rose and jasmine creepers it has

sprouted. The coconut with skin, which was put into earth, the buds have come up.

See: Karchi veelledele, Chiguru veelledele.

443. ಚಿಗುರು ವೀಳ್ಳೇದೆಲೆ: ನೋಡಿ: ಚಿಗುರು

<chiguruveelledele> See: Chiguru

444. ಚಿಗುಳಿ: ಕರಿಯ ಎಳ್ಳನ್ನು ಹುರಿದು ಪುಡಿಮಾಡಿ, ಕೊಬ್ಬರಿತುರಿ, ಬೆಲ್ಲವನ್ನು ಬೆರೆಸಿ **ಚಿಗು**ಳಿಯನ್ನು ಉಂಡೆಯಾಗಿ ಮಾಡುತ್ತಾರೆ. ಉಂಡೆಯಾಗಿ ಮಾಡದೆ ಹಾಗೆಯೆ ಇದ್ದರೆ, ಅದನ್ನು ಎಳ್ಳುಸೂಸಲು ಎಂದು ಕರೆಯುವುದು. ದೇವಸ್ಥಾನಗಳಲ್ಲಿ ವಿಶೇಷಪೂಜೆಯ ದಿನ ಬಂದ ಭಕ್ತಾದಿಗಳಿಗೆ ಎಳ್ಳುಸೂಸಲನ್ನು ಪ್ರಸಾದವಾಗಿ ಹಂಚುವುದು ವಾಡಿಕೆಯಲ್ಲಿದೆ.

ಉದಾ: ನಾಳೆ ಶನಿವಾರದ ಸೇವೆಗೆ ದೇವಸ್ಥಾನಕ್ಕೆ ಎಳ್ಳುಸೂಸಲು ಮಾಡಿ ಕಳಿಸ್ಬಿಡಾವ.

ನೋಡಿ: ಎಳ್ಳುಸೂಸಲು

<chiguli> (-) A kind of dish made of fried sesame powder and jaggery - Frying black sesame and powdered, adding dry coconut powder, jaggery and make chiguli round balls. If it is not made as round balls, then they say it is ellususalu. It is in vogue to distribute ellususalu as Prasad to the devotees who come to the temple on special occasions.

Eg: Let us send ellususalu next Saturday for our seva in temple.

See: Ellususalu

445. ಚಿನಿವಾರ: ನೋಡಿ: ಅಕ್ಕಸಾಲೆ

<chinivaara> Goldsmith - See: Akkasale

446. ಚಿನ್ನಿದಾಂಡು: ಚಿನ್ನಿದಾಂಡು ಮರದ ಕೋಲಿನಿಂದ ಮಾಡುತ್ತಾರೆ. ಚಿನ್ನಿ ಸುಮಾರು ಮೂರು ಅಂಗುಲ ಉದ್ದವಿದ್ದು ಹೆಬ್ಬೆರಳಿನ ದಪ್ಪವಾಗಿರುತ್ತೆ. ದಾಂಡು ಒಂದು ಅಡಿ ಉದ್ದಕ್ಕಿರುತ್ತೆ. ಚಿನ್ನಿಯನ್ನು ನೆಲದ ಗುಣಿಯ ಮೇಲಿಟ್ಟು ದಾಂಡಿನಿಂದ ಹೊಡೆಯುತ್ತಾನೆ. ಚಿನ್ನಿ ಪಟಕ್ಕನೆ ಮೇಲಕ್ಕೆ ಹಾರಿದಾಗ



ನೆಲದ ಮೇಲೆ ಬೀಳುವುದಕ್ಕೆ ಮೊದಲೇ ದಾಂಡಿನಿಂದ ದೂರಕ್ಕೆ ಹೋಗುವಂತೆ ಹೊಡೆಯುತ್ತಾನೆ. ಉಳಿದ ಎರಡು ಮೂರು ಆಟಗಾರರು ಅವನು ಹೊಡೆದ ಚಿನ್ನಿಯನ್ನು ಕೆಳಕ್ಕೆ ಬೀಳುವ ಮೊದಲು ಕೈಲಿ (ಕ್ಯಾಚ್) ಹಿಡಿದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ. ಹಾಗೆ ಹಿಡಿದುಕೊಂಡರೆ ಅವನು ಸೋತಂತೆ. ನಂತರ ಬೇರೆಯವರು ಆಡುತ್ತಾರೆ.

<chinnidaanDu> Kind of play - Chinnidaandu is made of wooden piece. Chinni is about three inches length and thickness will be as main finger. Daandu will be of one-foot length. Putting chinni on floor, he strikes with daandu. When chinni flies above, before it falls on ground, he will hit to go far away. The rest of two or three players try to hold the chinni before it falls. If they hold, he will lose. Then the others will play.

447. ಚಿಟಿಕೆಹಾಕು: ಮಕ್ಕಳಿಗೆ ತುಂಬ ಶೀತವಾದಾಗ ಕುತ್ತಿಗೆ, ಹಣೆ ಮುಂತಾದ ಜಾಗಗಳಲ್ಲಿ ನರಗಳು ದುರ್ಬಲವಾಗಿ ಜ್ಞಾನತಪ್ಪುತ್ತದೆ. ಆ ನರಗಳನ್ನು ಚೇತನಗೊಳಿಸುವುದಕ್ಕೆ ಗಾಜಿನ ಬಳೆಯ ಚೂರನ್ನು ಬೆಂಕಿಯಲ್ಲಿ ಕಾಯಿಸಿ ಹಣೆಯ ಮಧ್ಯೆ, ಕಣ್ಣಿನ ಪಕ್ಕದಲ್ಲಿಟ್ಟರೆ, ಚಟ್ ಎಂದು ಶಬ್ದವಾಗಿ ನರಗಳು ಚಲಿಸುವಂತಾಗುತ್ತೆ. ಇದನ್ನು ಚಿಟಿಕೆ ಹಾಕುವುದು ಎಂದು ಹೇಳುತ್ತಾರೆ. ಆದರೆ ಬಳೆಯ ಚೂರನ್ನು ಸರಿಯಾದ ಜಾಗದಲ್ಲಿಡಬೇಕು! ಅದನ್ನು ಮಾಡುವವರು ಬಹಳ ಅನುಭವಸ್ಥರಾಗಿರಬೇಕು.

ಉದಾ: ಪಚ್ಚಿಗೆ ತುಂಬಾ ಶೀತವಾಗಿದೆ, ಚಿಟಿಕೆಹಾಕಬೇಕು.

<chiTikehaaku> Branding a child with a piece og glass bangle - Children get cold, nerves at neck and forehead will become weak and lose mental power. To make the nerves active if a piece of glass bangle is heated and put above eye brew and in between eyes, it will make a sound and nerves act. It is called as chitikehakuvudu. But that piece of bangle should be kept in the correct place! The person who does that must be an experienced person.

Eg: Pachhi is suffering too much of cold Must get chitike.

448. ಚಿಪ್ಪು: ತೆಂಗಿನಕಾಯಿನ ಅಥವಾ ಕೊಬ್ಬರಿಯ ಅರ್ಧ ಭಾಗಕ್ಕೆ ಚಿಪ್ಪು ಎನ್ನುತ್ತಾರೆ. ಚಿಪ್ಪು ಅನ್ನುವ ಶಬ್ದವನ್ನು ಮನುಷ್ಯನ ಕಾಲಿನ ಮಂಡಿಗೂ ಹೇಳುವುದು ರೂಢಿಯಲ್ಲಿದೆ. ಚಿಪ್ಪುಸಿಗೋದು ಅಂದರೆ ಭಿಕ್ಷೆಗೆ ಹೋಗಬೇಕು ಎಂದು ಅರ್ಥ. ಸಮುದ್ರದ ದಡದ ಮರಳಿನಲ್ಲಿ ಸಿಗುವ ಚಿಪ್ಪನ್ನು ಕಪ್ಪೆಚಿಪ್ಪು ಎಂದು ಕರೆಯುತ್ತಾರೆ. ತೆಂಗಿನಕರಟವನ್ನು ಚಿಪ್ಪು ಎಂದು ಕರೆಯುತ್ತಾರೆ.

ಉದಾ: ಅವನು ಹೀಗೆ ಹಣಾನೆಲ್ಲ ಕಳೀತಾ ಇದ್ದರೆ ಕೊನೆಗೆ ಚಿಪ್ಪೇ ಸಿಗೂದು. (ಗಾದೆ)

<chippu> Shell - The half of coconut or dry coconut is called as Chippu. The word Chipopu is also in vogue called as Knee of humanbeing. Getting chippu means go begging. Shell available in sand of sea bund is called Kappechippu (Bivalve shell). The shell of coconut is called Chippu.

Eg: If he spends money like this, in the end he gets chippu only (Proverb)

449. ಚಿಬ್ಬಲು: ಬಿದಿರನ್ನು ಹಂಚಿಕಡ್ಡಿಯ ಗಾತ್ರಕ್ಕೆ ಸೀಳಿ ತಟ್ಟೆಯ ಹಾಗೆ ಹೆಣೆದರೆ ಅದು **ಚಿಬ್ಬಲು** ಎನಿಸುತ್ತದೆ. ಹೂವು, ತರಕಾರಿಗಳನ್ನಿಡಲು ಚಿಬ್ಬಲನ್ನು ಬಳಸುತ್ತಾರೆ. ಬುಟ್ಟಿಯ ಮೇಲೆ ಮುಚ್ಚುವುದಕ್ಕೂ ಚಿಬ್ಬಲನ್ನು ಮುಚ್ಚಳವಾಗಿ ಉಪಯೋಗಿಸುತ್ತಾರೆ.



ಉದಾ: ಸಂತೇಗೆ ಹೋದಾಗ ನಾಲ್ಕು ಚಿಬ್ಬಲು ತಗಂಬಾ.

<chibbalu> Bamboo lid - If bamboo is split like stalk of hanci grass and joined, it is Chibbalu. To keep flowers and fruits, they use Chibbalu. To cover the basket also chibbalu is used as lid.

Eg: When you go to fair market, bring 4 Chibbalus.

450. ಚಿಮಣಿ: ಗೋಡೆಗೆ ತಗುಲಿಹಾಕುವ ಸೀಮೆಎಣ್ಣೆಯ ದೀಪಕ್ಕೆ ಮತ್ತು ಲಾಟೀನಿಗೆ ಹಾಕುವ ಗಾಜಿನ ಬುರುಡೆಗೆ ಚಿಮಣಿ ಎಂದು ಹೆಸರು. ಚಿಮಣಿ ಉರಿಯುವ ಬತ್ತಿಯಿಂದಾಗಿ ಆಗಾಗ್ಗೆ ಕಪ್ಪಾಗುತ್ತದೆ. ಅದನ್ನು ಬೆರಣಿಬೂದಿಯಿಂದ ಉಜ್ಜಿದರೆ ಕಪ್ಪು ಹೋಗಿ ಬೆಳಕು ಚೆನ್ನಾಗಿ ಕಾಣುತ್ತೆ. ಗಾಜಿನ ಪದಾರ್ಥವಾದ್ದರಿಂದ ಚಿಮಣಿಯನ್ನು ಒರೆಸುವಾಗ ಜಾಗ್ರತೆಯಿಂದ ಮಾಡಬೇಕು.



ಉದಾ: ಚಿಮಣಿ ಎಲ್ಲ ಚೆನ್ನಾಗಿ ಒರೆಸಿಡು.


ನೋಡಿ: ಬುಡ್ಡಿದೀಪ, ಗೋಡೆದೀಪ, ಹಣತೆ, ಲಾಟೀನು

<chimaNi> (-) Glass covering a lamp - The glass chimney put for kerosene wall lamp and lateen is called Chimani. Chimani becomes black often due to burning flame. If it is rubbed with ash of dry cow dung, the blackness clears, and light radiance will be brighter. Since it is glass, while rubbing must do it carefully.

Eg: Clean chimani neatly.

See: Buddideepa, Godedeepa, Hanathe, Lateenu

451. ಚಿಮುಟ: (ಚಿಮ್ಮಟ) ತೆಳ್ಳಗಿರುವ ಕಬ್ಬಿಣದ ಪಟ್ಟಿಯನ್ನು ಬಗ್ಗಿಸಿ ಮಾಡಿರುವ ಉಪಕರಣಕ್ಕೆ ಚಿಮುಟ ಎಂದು ಕರೆಯುತ್ತಾರೆ. ಇಜ್ಜಿಲಿನ ಕೆಂಡ ಮತ್ತು ಉರಿಯುತ್ತಿರುವ ಬೆರಣಿಯನ್ನು ಹಿಡಿಯುವುದಕ್ಕೆ ಚಿಮುಟವನ್ನು ಬಳಸುತ್ತಾರೆ. ಚಿಮುಟಕ್ಕೆ **ಚಿಕ್ಕಇಕ್ಕಳ** ಎಂದೂ ಹೇಳುತ್ತಾರೆ.



ಉದಾ: ಚಿಮುಟ ಕೊಡು, ಸುಟ್ಟ ಬೆರಣಿ ಎಲ್ಲ ತೆಗೆದು ಕರಿಕು ಮಾಡಿಡ್ತೀನಿ.

ನೋಡಿ: ಇಕ್ಕಳ

<chimuTa> Pincers - Equipment made by bending thin narrow and long piece of iron is called chimuta (pair of pincers). To hold charcoal fire and burning dry cake of cow dung, they use pincers. Pincers is also called as Chikkaikkala (small tongs).

Eg: Give pincers. I will remove all burnt dry cake and make Kariku (charred dry cake).

452. ಚಿಲಕವರೆ: ನೋಡಿ: ಚಪ್ಪರದವರೆ

<chilakavare> See: Chapparadavare

453. ಚೀಪುವುದು: ಬಾಯಲ್ಲಿ ಏನನ್ನಾದರೂ ಇಟ್ಟುಕೊಂಡು ಅದರ ಸಾರವನ್ನು ಹೀರುವುದಕ್ಕೆ **ಚೀಪುವುದು** ಎಂದು ಹೇಳುವುದು ರೂಢಿ. ಒಂದು ಜಾತಿಯ ಮಾವಿನಹಣ್ಣನ್ನು ಚಾಕುವಿನಿಂದ ಕತ್ತರಿಸುವುದಕ್ಕಾಗುವುದಿಲ್ಲ. ಬಹಳ

ನಾರುನಾರಾಗಿರುತ್ತೆ. ಅದನ್ನು ಒಂದು ಕಡೆ ರಂಧ್ರಮಾಡಿ ಬಾಯಲ್ಲಿಟ್ಟುಕೊಂಡು ಹಣ್ಣಿನ ರಸವನ್ನು ಚೀಪಬೇಕು. ಚಿಕ್ಕಮಕ್ಕಳು ಬಾಯಲ್ಲಿ ಬೆರಳಿಟ್ಟುಕೊಂಡು ಚೀಪುತ್ತವೆ.

ಉದಾ: ಮಗು ಎರಡುಬೆರಳನ್ನು ಬಾಯಲ್ಲಿಟ್ಕಂಡು ಹ್ಯಾಗೆ ಚೀಪ್ತಾ ಇದೆ ನೋಡು.

<cheepuvudu> Sucking - Putting something in the mouth and swallow the juice of that is called cheepuvudu. One variety of mango cannot be cut. It will be full of fibers. Making a hole on one side and keeping it in the mouth must suck the juice. Young children keep the finger in the mouth, suck.

Eg: See how the baby is sucking, keeping two fingers in the mouth.

454. ಚೆಜ್ಜ: ನೋಡಿ: ನಾಗೊಂದಿಗೆ

<cejja> See: Nagondige

455. ಚೆರು: ಹವನ, ಹೋಮ ಮಾಡುವಾಗ ಆಹುತಿಯಾಗಿ ಅರ್ಪಿಸಲು ಬೇಕಾಗುವ ಅನ್ನಕ್ಕೆ ಚೆರು ಎನ್ನುತ್ತಾರೆ. ಅಕ್ಕಿಯ ಜೊತೆಗೆ ಒಂದು ಚಮಚದಷ್ಟು ಅರಿಶಿನವನ್ನು ಬೆರೆಸಿ ಪ್ರತ್ಯೇಕವಾಗಿ ಅನ್ನ ಮಾಡಿರುತ್ತಾರೆ.

ಉದಾ: ಚಂಡಿಹೋಮಕ್ಕೆ ಎಲ್ಲ ಸಿದ್ಧವಾಗಿದೆ. ಸ್ವಲ್ಪ ಚೆರು ಮಾಡ್ಕೊಟ್ಬಿಡಿ.

<ceru> (-) Baked rice with turmeric powder - The baked rice required to offer as marcel during havan and homas is called Ceru. Mixing a spoon of turmeric powder to rice and bake separately.

Eg: Everything is ready for Chandihoma. Make some Ceru.

456. ಚೆಲ್ಲಾಪಿಲ್ಲಿ: ಮನೆಯ ಸಾಮಾನುಗಳು ಅಡ್ಡಾದಿಡ್ಡಿ ಹರಡಿದ್ದರೆ ಅದನ್ನು ಚೆಲ್ಲಾಪಿಲ್ಲಿ ಎನ್ನುವುದು ರೂಢಿ.

ಉದಾ: ಮೊನ್ನೆ ಬಂದ ಮಳೆ ಗಾಳಿಗೆ ಹೆಂಚುಗಳೆಲ್ಲ ಚೆಲ್ಲಾಪಿಲ್ಲಿಯಾಗಿವೆ, ಸರಿಪಡಿಸಬೇಕು.

<cellaapilli> Disorderliness - If household things are scattered here and there, it is common to say Cellapilli.

Eg: Due to rain and wind yesterday, all tiles have scattered. Must set right.

457. ಚೆಲ್ಲು: ಬಾಯಿಗೆ ಬಂದಹಾಗೆ ಟೊಳ್ಳುಟೊಳ್ಳಾಗಿ ಮಾತನಾಡುವುದನ್ನು **ಚೆಲ್ಲು** ಎನ್ನುತ್ತಾರೆ. ಪಾತ್ರೆಯಿಂದ ಕೆಳಕ್ಕೆ ಸುರಿಯುವುದಕ್ಕೂ ಚೆಲ್ಲು ಅನ್ನುವ ಪದ ಬಳಕೆಯಲ್ಲಿದೆ.

ಉದಾ: ಮದುವೆಮನೇಲಿ ಸ್ವಲ್ಪ ಗಂಭೀರವಾಗಿರುವುದನ್ನು ಕಲಿ. ಎಲ್ಲರೆದುರಿಗೂ ಚೆಲ್ಚೆಲ್ಲಾಗಿ ಆಡ್‌ಬ್ಯಾಡ.

<chellu> Mischieveousness - To talk in undignified way is called chellu. It is also in vogue to use the word chellu for pouring out from vessel.

Eg: Try to learn to be dignified in the marriage. Do not talk before others undignifying.

458. ಚೇಣಿಹುಲ್ಲು: ನೀರಿನ ಹೊಂಡದಲ್ಲಿ ಎರಡು ಮೂರು ಅಡಿ ಎತ್ತರಕ್ಕೆ ದಟ್ಟವಾಗಿ ಬೆಳೆಯುವ ಒಂದು ಜಾತಿಯ ಹುಲ್ಲು. ಗದ್ದೆಯ ಮಧ್ಯೆ ಸೀಳುಸೀಳಾಗಿ ಮಾಡುವ ಒಂದು ಅಡಿ ಎತ್ತರದ ದಿಬ್ಬಕ್ಕೆ ಚೇಣಿಹುಲ್ಲಿನ ಕಂತೆಗಳನ್ನಿಟ್ಟು ಮಣ್ಣು ಮುಚ್ಚುತ್ತಾರೆ. ಒಂದು ವಿಧವಾದ ಕಬ್ಬಿಗೂ ಚೇಣಿಕಬ್ಬು ಎಂದು ಹೆಸರು.

ಉದಾ: ಶೀನಪ್ಪ ಇನ್ನೆರಡು ಕಂತೆ ಚೇಣಿಹುಲ್ಲು ತಾ.

ಉದಾ: ಚೇಣಿಕಬ್ಬು ಬಹಳ ಗಡುಸಾಗಿದೆ.

<cheNihullu> (-) A type of grass grown two to three feet height in the water pond. To make partition in agricultural land, they put bundle of Chenihullu and cover with soil. A variety of sugarcane is also called as Chenikabbu.

Eg: Sheenapa, bring two more bundles of Chenihullu.

Eg: Chenikabbu is very coarse.

459. ಚಿಂದಿಉಡಾಯಿಸುವುದು: ಮನೆಯಲ್ಲಿ ಏನನ್ನೂ ಬಿಡದೆ ಕದ್ದುಕೊಂಡು ಹೋಗುವುದನ್ನು **ಚಿಂದಿಉಡಾಯಿಸುವುದು** ಎನ್ನುತ್ತಾರೆ.

ಉದಾ: ಮೊನ್ನೆ ಈರಯ್ಯನ ಮನೆಗೆ ಕನ್ನಹಾಕಿ ಕಳ್ಳರು ಚಿಂದಿಉಡಾಯಿಸಿ ಬಿಟ್ಟಿದ್ದಾರೆ. ಅಡುಗೆ ಮಾಡುವುದಕ್ಕೆ ಒಂದು ಪಾತ್ರೇನೂ ಬಿಟ್ಟಿಲ್ಲ.

<chindiuDaayisuvudu> Loot everything - Thieving

without leaving anything in the house, they say chindiudayisuvudu (loot completely).

Eg: Day before yesterday, thieves have looted completely, making hole in the wall. Have not left a single vessel for cooking.

460. ಚುಕ್ತಾ: ಸಾಲ ಪಡೆದ ಹಣವನ್ನು ಒಂದು ಕಾಸೂ ಬಿಡದಂತೆ ಹಿಂತಿರುಗಿಸಿ ಕೊಟ್ಟಾಗ ಅದನ್ನು **ಚುಕ್ತಾ** ಎನ್ನುತ್ತಾರೆ. ಸಾಲದಬಾಕಿ ಪೂರ್ತಿ ತೀರಿಸಿದರೆ ಚುಕ್ತಾಮಾಡಿದಂತೆ.

ಉದಾ: ಸಾವುಕಾರಂತಾವ ಎರಡು ವರ್ಷದ ಹಿಂದೆ ಸಾವಿರರುಪಾಯಿ ಸಾಲ ತಂದಿದ್ದೆ. ಬಡ್ಡಿ ಹಣ ಕೊಟ್ಟೂ ಕೊಟ್ಟೂ ಸಾಕಾಗಿತ್ತು. ಈ ಸಲದ ಬೆಳೆ ಚೆನ್ನಾಗಿ ಬಂತು. ಸಾಲದ ಹಣ ಬಡ್ಡಿ ಸಮೇತ ಚುಕ್ತಾ ಮಾಡಿಬಿಟ್ಟೆ.

<chukthaa> (-) Settling the loan without any balance - To return the loan amount to the last pie, they call it chuktha. If we clear the balance loan completely, chuktha madidante.

Eg: I had taken one thousand rupees loan two years back from a rich man. I was fed up paying interest. This time got good crop. I cleared loan amount with interest.

461. ಚೂಡಾಕರ್ಮ: ಗಂಡುಮಕ್ಕಳಿಗೆ ಮೊದಲನೆಬಾರಿ ತಲೆಕೂದಲನ್ನು ತೆಗೆಸುವುದಕ್ಕೆ **ಚೂಡಾಕರ್ಮ** ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಪುಣ್ಯಕ್ಷೇತ್ರಗಳಿಗೆ ಹೋಗಿ ಚೂಡಾಕರ್ಮದ ವಿಧಿಯನ್ನು ಆಚರಿಸುವುದು ರೂಢಿ. ಕೆಲವು ಪಂಗಡದವರು ಹೆಣ್ಣುಮಕ್ಕಳಿಗೂ ಕೂದಲನ್ನು ತೆಗೆಸುತ್ತಾರೆ. ಅದನ್ನು ದೇವರಿಗೆ **ಮುಡಿ ಒಪ್ಪಿಸುವುದು** ಎನ್ನುತ್ತಾರೆ.

ಉದಾ: ನಮ್ಮ ಮಗನ ಚೂಡಾಕರ್ಮ ಮುಂದಿನವಾರ ಇದೆ. ನೀವು ಖಂಡಿತ ಬರಬೇಕು.

ಉದಾ: ಮುಂದಿನ ವಾರ ನಂಜನಗೂಡಿಗೆ ಹೋಗಿ ಮೊಮ್ಮಗನ ಮುಡಿ ಕೊಡಬೇಕು.

<chooDaakarma> (-) A way of removing frontal hair of a child for the first time - For the first time to remove hairs for male children is called choodakarma (The rite of tonsure). It is in vogue to go to any place of pilgrimage and perform the rite.

People of some community get removed hairs of female children also. They call it as offering mudi to deity.

Eg: Next week, Choodakarma for my son. You must come without fail.

Eg: Next week going to Nanjangud and offer mudi of grandson.



462. ಚೊಂಬು: ಚೊಂಬನ್ನು ತಾಮ್ರ, ಹಿತ್ತಾಳೆ ಅಥವಾ ಕಂಚಿನ ಲೋಹದಿಂದ ಮಾಡುತ್ತಾರೆ. ಚೊಂಬಿನ ಬಾಯಿ ಸಣ್ಣಗಿದ್ದು, ಪಾತ್ರೆ ದುಂಡಾಗಿರುತ್ತದೆ. ಸಾಮಾನ್ಯವಾಗಿ ತಾಮ್ರದ ಚೊಂಬನ್ನು ಪೂಜೆ ಪುನಸ್ಕಾರಗಳಲ್ಲಿ ಬಳಸುತ್ತಾರೆ. ತಂಬಿಗೆ ಎಂದೂ ಚೊಂಬಿಗೆ ಹೇಳುತ್ತಾರೆ. ಮಾಧ್ವಸಂಪ್ರದಾಯದವರು ತಂಬಿಗೆ ಪದವನ್ನು, ಸ್ಮಾರ್ತ ಸಂಪ್ರದಾಯದವರು **ಚೊಂಬು** ಪದವನ್ನು ಬಳಸುವುದು ಹೆಚ್ಚು.

ಉದಾ: ತಾಮ್ರದಚೊಂಬನ್ನು ಶುಭ್ರವಾಗಿ ಬೆಳಗಿ ದೇವರಮನೆಲಿ ಇಡು.

ನೋಡಿ: ಗಂಗಾಳ, ತಂಬಿಗೆ

<chombu> Round vessel prepared of copper, brass, or bronze. Mouth of the vessel is small. Vessel is round. Generally, copper vessel is used for ritual ceremonies. Chombu is also called as Thambige. Madhva community as thambige, Smartha community as Chombu is very common to use.

Eg: Keep the copper vessel cleaned neatly in Pooja room.

See: Gangala, Thambige

463. ಚೋಡಿ: ಬಟ್ಟೆಯನ್ನು ಪದರಪದರವಾಗಿ ಜೋಡಿಸುವುದಕ್ಕೆ **ಚೋಡಿ** ಅನ್ನುವ ಪದ ರೂಢಿಯಲ್ಲಿದೆ. ಒಂಟಿ ಪಂಚೆಯನ್ನು ಸಾಮಾನ್ಯವಾಗಿ ಬ್ರಹ್ಮಚಾರಿಗಳಿಗೆ, ಜತೆ ಪಂಚೆಯನ್ನು ಗೃಹಸ್ಥರಿಗೆ ಉಡುಗೊರೆಯಾಗಿ ಕೊಡುವ ಪದ್ಧತಿಯಿತ್ತು. ಒಂಟಿ ಪಂಚೆಗಿಂತ ಉದ್ದದಲ್ಲಿ ಜತೆ ಪಂಚೆ ಅಳತೆ ಹೆಚ್ಚಿರುತ್ತೆ.

ಉದಾ: ವರಾಂಡಾದಲ್ಲಿ ತುಂಬ ಸಳಿ (ಚಳಿ) ಐತೆ, ದುಪ್ಪ ಎರಡು ಚೋಡಿ ಮಾಡಿ ಹೊದ್ಕಾ.

ಚೋಡಿ ಅನ್ನುವ ಪದಕ್ಕೆ ಜಗಳ ಎಂದೂ ಹೇಳುತ್ತಾರೆ.

ಉದಾ: ನೀನು ಎಷ್ಟೇ ಆಗಲಿ ದೊಡ್ಡವ, ಆ ಹುಡುಗನಮೇಲೆ ಚೋಡಿ

ಮಾಡ್ಬ್ಯಾಡ.

<choDi> Put the cloth layer by layer - It is in usage to tell chodi for joining cloth layer by layer. Generally, there was a system to give single dhoti to brahmacharis and pair of dhothi to married people as gift. Length of pair of dhothi is more than single dhothi.

Eg: In veranda there is so much of cold. Put on blanket folding two times.


The word chodi is called as quarrel also.

Eg: After all you are an elderly person. Do not quarrel with that boy.



464. ಚೋಮನ ಕುಣಿತ: (ಸೋಮನ ಕುಣಿತ) ಚೋಮನ ಕುಣಿತವನ್ನು ಎಲ್ಲರೂ ಮಾಡುವುದಿಲ್ಲ. ಕೆಲವು ಮನೆತನದವರಿಗೆ ವಂಶ ಪಾರಂಪರ್ಯವಾಗಿ ಬಂದಿರುವ ಧಾರ್ಮಿಕ ಆಚರಣೆ. ಮೂರು ನಾಲ್ಕು ಜನ ಕೆಂಪು ವಸ್ತ್ರವನ್ನುಟ್ಟು, ಅರ್ಧಚಂದ್ರಾಕೃತಿಯಲ್ಲಿ ಹಿತ್ತಾಳೆಯಿಂದ ಮಾಡಿರುವ ಚೋಮನ ಪ್ರತಿಮೆಯನ್ನು ತಲೆಯ ಮೇಲೆ ಕಟ್ಟಿಕೊಂಡು ಕುಣಿಯುತ್ತಾರೆ. ಸುತ್ತಲೂ ತಮಟೆಯ ವಾದ್ಯ. ಎಲ್ಲರೂ ಚೋಮನಿಗೆ ಅರಿಶಿನ ಕುಂಕುಮ ಏರಿಸಿ, ಹಣ್ಣು ಕಾಯಿಗಳನ್ನು ಅರ್ಪಿಸುತ್ತಾರೆ.

<chomanakuNitha> (Soomana Kunitha) A religious performance - All will not do chomanakunitha. It is a religious performance confined to some community as hereditary. Three to four people wearing red clothe, fixing the idol of Choma made of brass metal, dance. Around drum beating. Everyone offers turmeric powder and kunkum to Choma with fruits and coconut.



465. ಚೌಕಾಬಾರ: ಚೌಕಾಬಾರ–5 ಮನೆ: ಚೌಕಾಬಾರದ ಆಟದಲ್ಲಿ ಎರಡು ತರಹ – ಐದುಮನೆ, ಏಳುಮನೆ. ಮತ್ತು ನಾಲ್ಕುಮೂಲೆಯ ಮನೆಗಳು ಘಟ್ಟಗಳು. ಐದು ಅಥವಾ ಏಳು ಹುಣಸೆಬೀಜ ಅಥವಾ ಹಾಲುವಾಣದ ಬೀಜಗಳನ್ನು



ಇಟ್ಟು ನಾಲ್ಕು ಕವಡೆಗಳಿಂದ ಆಡುತ್ತಾರೆ. ಚೌಕಾಬಾರದ ಚಿತ್ರವನ್ನು ನೆಲದ ಮೇಲೆ ಸೀಮೇಸುಣ್ಣದಿಂದ ಬರೆಯಬಹುದು. ನಾಲ್ಕು ಕವಡೆಗಳನ್ನು ಕೈಮುಷ್ಟಿಯಲ್ಲಿ ಹಿಡಿದುಕೊಂಡು ನೆಲದ ಮೇಲೆ ಬೀಳಿಸಿದಾಗ ನಾಲ್ಕು ಕವಡೆಗಳೂ ಮೇಲ್ಮುಖವಾಗಿ ಬಿದ್ದರೆ ಅದಕ್ಕೆ ಎಂಟು ಅಂಕಗಳು. ಚಿತ್ರದಲ್ಲಿ ತೋರಿಸಿರುವಂತೆ ಎರಡು ಮಾತ್ರ ಮೇಲ್ಮುಖವಾಗಿ ಇನ್ನೆರಡು ಸೀಳಾಗಿರುವ ಭಾಗ ಕಾಣುತ್ತಿದ್ದರೆ ಅದಕ್ಕೆ ಎರಡು ಅಂಕಗಳು. ಅದರಂತೆ ಬೀಜವನ್ನು ನಡೆಸಬೇಕು.

<chowkaabaara> A play - In the game of chowkabara, two types, five houses, seven houses, four corner houses, phases. Keeping five or seven tamarind seeds or haluvana seeds, play with four bivalve shells. Figure of Chowkabara can be written on floor with chalk piece. Holding four shells in hand and make them fall on ground. If all the four, fall facing upwards it is counted as eight marks. As shown in figure, if two fall facing upwards and two partition portion are seen, two marks. Accordingly, must move the beads.

466. ಚೌಕಾಸಿ: ಪದಾರ್ಥಗಳನ್ನು ಕೊಳ್ಳುವಾಗ ಕಡಮೆ ಬೆಲೆಗೆ ಕೇಳುವುದನ್ನು **ಚೌಕಾಸಿ** ಎನ್ನುತ್ತಾರೆ. ಮಾರುವವನು ಹತ್ತು ರುಪಾಯಿ ಬೆಲೆ ಹೇಳಿದರೆ, ಎಂಟು ರುಪಾಯಿಗೆ ಕೊಡು ಎನ್ನುವುದು. ಏನಪ್ಪಾ ನಾಲ್ಕು ಮಾರು ಹೂವು ಕೊಂಡಿದೀವಿ, ಇನ್ನೊಂದು ಸ್ವಲ್ಪ ಬಿಡು ಅನ್ನುವುದು ಅದೂ ಚೌಕಾಸಿಯೆ.

ಉದಾ: ಬುದ್ದಿ, ಸುಮ್ಮನೆ ಚೌಕಾಸಿ ಮಾಡ್ಬೇಡಿ, ಕಡಮೆ ಬೆಲೆಗೆ ಕೊಡುಲ್ಲ.

<choukaasi> Bargaining - When buying things, if we ask for a lesser price, they say choukasi. If the seller says ten rupees, asking for eight rupees. What I have bought four length of flowers, give me a little more, is also choukasi.

Eg: Ayya, simply do not bargain. I do not give for lesser price.

467. ಚೌರಪದ್ಧತಿ: (ಕ್ಷೌರಪದ್ಧತಿ) ಹಳ್ಳಿಗಳಲ್ಲಿ ಓಲಗದವರಿಗೆ ಮತ್ತು ಕ್ಷೌರಿಕನಿಗೆ ವರ್ಷಕ್ಕಾಗುವಷ್ಟು ದವಸಧಾನ್ಯಗಳನ್ನು ಕೊಡುತ್ತಿದ್ದರು. ಹಜಾಮ ಬೆಳಿಗ್ಗೆ ಹೊತ್ತಿಗೆ ಮುಂಚೆ ಒಂದು ಸಣ್ಣ ಪೆಟ್ಟಿಗೆಯಲ್ಲಿ ಕ್ಷೌರದ ಕತ್ತಿ ಮತ್ತು ಕತ್ತರಿಯನ್ನು ಇಟ್ಟುಕೊಂಡು ರಸ್ತೆಯ ಅಂಚಿನಲ್ಲಿ ನಿಂತಿರುತ್ತಿದ್ದ. ಕ್ಷೌರ ಮಾಡಿಸಿಕೊಳ್ಳಬೇಕಾದವರು ಚಪ್ಪಾಳೆತಟ್ಟಿ

ಅವನನ್ನು ಕರೆಯುತ್ತಿದ್ದರು. ಕ್ಷೌರ ಮಾಡಿಸಿಕೊಂಡವರು ಹಂಡೆಯ ನೀರನ್ನು ಮುಟ್ಟುತ್ತಿರಲಿಲ್ಲ. ಅವರಿಗೆ ಮೈಲಿಗೆ. ಯಾರಾದರು ಮೂರು ನಾಲ್ಕು ಚೊಂಬು ನೀರನ್ನು ಅವರ ತಲೆಯ ಮೇಲೆ ಹಾಕಿದನಂತರ ಸ್ನಾನ ಮಾಡುತ್ತಿದ್ದರು. ತಲೆಗೆ ಬೃಂದಾವನದಲ್ಲಿರುವ ಒಂದು ಕಾಳಿನಷ್ಟು ಮಣ್ಣನ್ನು (ಅದಕ್ಕೆ ಮೃತ್ತಿಕೆ ಎಂದು ಹೆಸರು) ತಲೆಗೆ ಹಚ್ಚಿಕೊಂಡರೆ ಮೈಲಿಗೆ ಹೋಗುತ್ತೆಂತ ಅವರ ಭಾವನೆ.

ಭಿನ್ನರೂಪ: ಚೌರಪದ್ಧತಿ (ಕ್ಷೌರಪದ್ಧತಿ)

ನೋಡಿ: ಚೂಡಾಕರ್ಮ

<chourapadhhathi> Hair cutting system - In villages for players of pipe shaped instrument and barbers they were offering groceries enough for a year. Barber in the early morning keeping razor and scissors in a small box was standing on the road corner. Those who want hair cut used to clasp and call him. After getting haircut were not touching the water in the vessel. It is imopurity for them. Somebody should pour three or four thambige water on his head, then he was taking bath. For head they were smearing a pinch of soil from the pot (where basil plant is grown for worshipping, it is called mruthhige). It is their belief that impurity will be washed out.

Different version: Chourapadhhati (kshourapadhhati)

See: Choodakarma



468. ಚೌಲ: ಮೂರು ವರ್ಷ ತುಂಬುವುದರೊಳಗಾಗಿ ಹುಡುಗನಿಗೆ ಚೌಲ. ತಲೆಯ ಕೂದಲನ್ನು ಕತ್ತರಿಸುವುದು. ಬೆಳಿಗ್ಗೆ ಹಸೆಯ ಮೇಲೆ ಕೂರಿಸಿ ತಲೆಗೆ ಒಂದು ಬಟ್ಟು ಎಣ್ಣೆ ಹಚ್ಚಿ ಆರತಿ ಎತ್ತುತ್ತಾರೆ. ಹುಡುಗನ ತಂದೆಯು ಕೈಯ್ಯಲ್ಲಿ ದರ್ಭೆಯನ್ನು ಹಿಡಿದು ಅದರ ಜೊತೆಗೆ ಒಂದೆರಡು ಕೂದಲನ್ನು ಕತ್ತರಿಸುತ್ತಾನೆ. ನಂತರ ಕ್ಷೌರಿಕ ಬಂದು ತಲೆಯ ಮೇಲೆ ಅರ್ಧಚಂದ್ರಾಕಾರದಷ್ಟು ಕೂದಲನ್ನು ಕತ್ತರಿಸುತ್ತಾನೆ. ಕತ್ತರಿಸಿದ ಕೂದಲು ನೆಲದ ಮೇಲೆ ಬೀಳದಂತೆ ಒಂದು ಹೊಸ ಚೌಕದ ಮೇಲೆ ಗೋಧಿಹಿಟ್ಟಿನಿಂದ ಮಾಡಿದ ಹಾಳೆಯನ್ನಿಟ್ಟು ಅದರ ಮೇಲೆ ಬೀಳಿಸುತ್ತಾನೆ. ಆಮೇಲೆ ಹುಡುಗನ ತಲೆಗೆ ಅರಿಶಿನ ಎಣ್ಣೆಯನ್ನು ಹಚ್ಚಿ ತಾಂಬೂಲ ತೆಗೆದುಕೊಂಡು ಹೋಗುತ್ತಾನೆ. ನಂತರ ಹುಡುಗನಿಗೆ

ಸ್ನಾನಮಾಡಿಸಿ ಹೊಸಬಟ್ಟೆಯನ್ನುಡಿಸಿ ಹಸೆಯಮೇಲೆ ಕೂರಿಸಿ ಹೆಂಗಸರು ಆರತಿ ಎತ್ತುತ್ತಾರೆ.

ಉದಾ: ರಾಮೂಗೆ ನಿನ್ನೆ ಚೌಲ ಆಯಿತು.

<choula> Tonsure ceremony - Before completion of three years for the boy Choula, Cutting of head hair. Morning they will seat him on decorated wooden plank, smear a pinch of oil on his head and do arati. Boy's father holding two darbhas (a type of grass) along with that cut one or two hairs. Then the barber will cut his hair in a half circular way. So that the cut hair should not fall on the ground, he will keep a new towel and on that a sheet made of wheat flour and falls the hair on that. Then he smears turmeric powder with oil, taking gift returns. The boy will be given bath and wearing new clothe will sit on the plank. Women will do arati.

Eg: For Ramu yesterday was Choula.

❑

ಛ / Chha

469. **ಛತ್ರ:** ಊರಿನಲ್ಲಿ ಯಾವುದಾದರೂ ಅನ್ನ ಸಂತರ್ಪಣೆ ಆದಾಗ ಊಟಕ್ಕೆ ಏರ್ಪಾಡುಮಾಡುವುದು ಛತ್ರದಲ್ಲಿ. ಛತ್ರದಲ್ಲಿ ಮಧ್ಯೆ ಒಂದು ತೊಟ್ಟಿ ಇದ್ದು ಸುತ್ತ ನಾಲ್ಕು ಕಡೆಯೂ ಎರಡು ಸಾಲು ಎಲೆ ಹಾಕುವುದಕ್ಕೆ ಜಾಗವಿರುತ್ತೆ. ಮುಂಜಿ, ಮದುವೆ ಸಮಾರಂಭಗಳು ನಡೆಯುವುದು ಛತ್ರದಲ್ಲಿ. ಛತ್ರ ಸಾಮಾನ್ಯವಾಗಿ ಊರಿನ ದೇವಸ್ಥಾನಕ್ಕೆ ಹೊಂದಿಕೊಂಡಿರುತ್ತೆ. ತೊಟ್ಟಿ ಎಂದರೆ ಮನೆಯಲ್ಲಿ ಚಚ್ಚೌಕವಾದ ಒಳಅಂಗಳ.

ಉದಾ: ಛತ್ರದಲ್ಲಿ ಎಲೆ ಹಾಕಿದೆ, ಎಲ್ಲರೂ ಊಟಕ್ಕೆ ದಯಮಾಡಿಸಬೇಕು.

<chhaoThra> Choultry - In village any mass feeding is done, for arranging lunch is in Choultry. In the middle there will be a square open yard, around in all four sides there will be space for spreading leaves in two rows. Brahmopadesha, marriage functions take place in choultry. Choultry generally, attached to the village temple. Thotti means square open yard.

Eg: In choultry leaves are put, all are welcome for lunch.

470. ಛಾಪಾಕಾಗದ: ಆಸ್ತಿಪಾಸ್ತಿಗಳನ್ನು ಕೊಳ್ಳುವಾಗ ಅಥವಾ ಮಾರುವಾಗ ಮಧ್ಯೆ ನಡೆಯುವ ಒಪ್ಪಂದಗಳನ್ನು ಬರವಣಿಗೆಯಮೂಲಕ ಇಡುವುದಕ್ಕೆ ಬೇಕಾಗುವುದೇ **ಛಾಪಾಕಾಗದ**. ವ್ಯವಹಾರದ ಒಟ್ಟು ಬೆಲೆಯಮೇಲೆ ಛಾಪಾಕಾಗದದ ಬೆಲೆಯನ್ನೂ ಸರ್ಕಾರ ನಿರ್ಧರಿಸುತ್ತೆ.

ಉದಾ: ಗೌಡ್ರದ್ದು ಭಾರೀ ವ್ಯವಹಾರ, ಛಾಪಾಕಾಗದದ ಬೆಲೆಯೇ ಸಾವಿರರೂಪಾಯಂತೆ!

<cchaapaakaagada> Stamp paper - When buying or selling property, agreement which takes place in between, the details of which are explained are in chapakagada. On total value of transacted property, the government decides the value of stamp paper.

Eg: Gowda's transaction is huge. The value of stamp paper itself is one thousand rupees.

471. ಛೋಟಾಪಂಚೆ: ಸ್ನಾನ ಮಾಡುವಾಗ ಉಡುವ ಪಂಚೆಗೆ **ಛೋಟಾಪಂಚೆ** ಎಂದು ಹೆಸರು. ಎರಡೂವರೆ ಅಡಿ ಅಗಲ, ಆರು ಅಡಿ ಉದ್ದದ ಸಾಮಾನ್ಯವಾದ ಪಂಚೆ. ಅದನ್ನು ಉಟ್ಟುಕೊಂಡೆ ಸ್ನಾನ ಮಾಡುತ್ತಾರೆ. ಸುಮಾರಾದ ನೂಲಿನಿಂದ ತಯಾರಾದದ್ದು. ಒದ್ದೆಯಾದ ಪಂಚೆ ಗಾಳಿಯ ಸಹಾಯದಿಂದ ಬಹಳ ಬೇಗ ಒಣಗುತ್ತದೆ. ಛೋಟಾಪಂಚೆ ಉಡುವುದರಿಂದ, ಹೊಲಗದ್ದೆಗಳಲ್ಲಿ ಕೆಲಸಮಾಡುವುದು ಬಹಳ ಸುಲಭ. ಹಳ್ಳಿಯವರು ಊರಿನಿಂದ ಹೊರಗೆ ಹೋಗುವಾಗ ಮಾತ್ರ ದೊಡ್ಡ ಪಂಚೆಯನ್ನು ಉಡುತ್ತಾರೆ. ಅದಲ್ಲದೆ ಉಳಿದ ದಿನಗಳಲ್ಲಿ, ಉಡುವುದಕ್ಕು, ಹೊದಿಯುವುದಕ್ಕು ಛೋಟಾಪಂಚೆಯೆ ಗತಿ. ಛೋಟಾಪಂಚೆಯನ್ನು **ಮಡಿಪಂಚೆ, ಪಾಣಿಪಂಚೆ, ಅಂಗವಸ್ತ್ರ** ಎಂದೂ ಕರೆಯುತ್ತಾರೆ.

ನೋಡಿ: ಪಾಣಿಪಂಚೆ, ಅಂಗವಸ್ತ್ರ, ಮಡಿಪಂಚೆ

<cchooTaapanche> (-) A small dothi made of coarse cloth for using while bathing - The dhothi worn while bathing is called as Chotapanche. Two-and-half feet width, six feet length ordinary dhothi. They bathe wearing the dhothi. Made of ordinary thread. The wet dhothi quickly dries with wind. Wearing dhothi it is easy to work in fields. Villagers wear big

dhothi only when they go out of village. On other days the chotapanche is only required to wear. Chotapanche is also called as Madipanche, Panipanche, Angavasthra.

See: Panipanche, Angavasthra, Madipanche.

❑

ಜ / Ja

472. ಜಗುಲಿ: ಮನೆಯ ಮುಂಭಾಗದಲ್ಲಿ ಎರಡು ಪಕ್ಕಕ್ಕೂ ಸುಮಾರು ಎರಡು ಅಡಿ ಎತ್ತರಕ್ಕಿದ್ದು ನೆಲದಿಂದ ಎರಡೂವರೆ ಅಡಿ ಅಗಲವಾಗಿ ಕುಳಿತುಕೊಳ್ಳುವ ಜಾಗಕ್ಕೆ ಜಗುಲಿ ಎಂದು ಹೆಸರು. ಹೊರಗಿನಿಂದ ಬಂದ ಪ್ರಯಾಣಿಕರು ರಾತ್ರಿ ಆದಾಗ ಮನೆಜಗುಲಿಮೇಲೆ ಮಲಗಿದ್ದು ಬೆಳಿಗ್ಗೆ ಎದ್ದುಹೋಗುತ್ತಾರೆ.

ಉದಾ: ಮನೆಗೆ ತುಂಬಾ ಜನ ನೆಂಟರು ಬಂದವ್ರೆ, ಹುಡುಗರೆಲ್ಲ ಜಗುಲಿಯಮೇಲೆ ಮನಕ್ಕಳ್ರಿ.

<jaguli> Platform - In front of house, on both sides, approximately two-feet height from ground, two-and-half feet width, sitting place is called jaguli. The outcoming travelers sleep on jaguli and go in morning.

Eg: Many relatives have come to house. All children sleep on jaguli.

473. ಜನಿವಾರ: ಬ್ರಾಹ್ಮಣರು ಮುಂಜಿಯಾದ ದಿವಸದಿಂದ ಎದೆಯ ಮೇಲೆ ಹಾಕಿಕೊಳ್ಳುವುದು **ಜನಿವಾರ**. ಇದಕ್ಕೆ **ಯಜ್ಞೋಪವೀತ** ಎನ್ನುವುದು ಇನ್ನೊಂದು ಹೆಸರು. ಬ್ರಹ್ಮಚಾರಿಯಾದವನು ಒಂಟಿ ಜನಿವಾರ ಹಾಕಿಕೊಂಡರೆ, ಗೃಹಸ್ಥನಾದವನು ಎರಡು ಜನಿವಾರಗಳನ್ನು ಧರಿಸುತ್ತಾನೆ. ಕೆಲವರು ತಾವೇ ಜನಿವಾರಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಕೆಲವು ಧಾರ್ಮಿಕ ಸಂದರ್ಭಗಳಲ್ಲಿ ಜನಿವಾರಗಳನ್ನು ದಾನವಾಗಿ ನೀಡುತ್ತಾರೆ. ಈ ಕಾಲದಲ್ಲಿ ಜನಿವಾರಗಳನ್ನು ಮಠ, ದೇವಸ್ಥಾನ, ಅಂಗಡಿಗಳಲ್ಲಿ ಮಾರುತ್ತಾರೆ.

ಉದಾ: ಮುಂದಿನ ತಿಂಗಳು ಉಪಾಕರ್ಮ, ಜನಿವಾರಗಳನ್ನು ಮಾಡುವುದಕ್ಕೆ ಹತ್ತಿ ತಗಂಬಾ.

<janivaara> Sacred thread - Brahmins after brahmopadesha wearing on breast is Janivara - Another name for this is yagnopaveetha. If brahmachari wears single thread, married person wears two threads. Some people make janivara by themselves. In religious functions they offer janivara as dana (charity). Now-a-days they sell sacred threads in Mutt, temple, and shops.

474. ಜಟ್ಟಿ: ನೋಡಿ: ಗರಡಿಮನೆ

<jaTTi> See: Garadimane

475. ಜಡಿಮಳೆ: ಸಾಕಷ್ಟು ಜೋರಾಗಿ ಒಂದೇಸಮನೆ ಸುರಿಯುತ್ತಿದ್ದರೆ ಜಡಿಮಳೆ ಎನ್ನುತ್ತಾರೆ. ತುಂಬಾ ಜೋರಾಗೆ ಬಂದರೆ ಕುಂಭದ್ರೋಣಮಳೆ ಎನ್ನುತ್ತಾರೆ. ಮಲೆನಾಡಿನಲ್ಲಿ ಇಂಥ ಮಳೆಗಳು ಜಾಸ್ತಿ.

ಉದಾ: ನಿನ್ನೆಯಿಂದ ಜಡಿಮಳೆ ಬರ್ತಾ ಇದೆ, ಬಿಡ್ತಾಇಲ್ಲ.

<jaDimale> Heavy rain - If it is raining throughout briskly, they say as Jadimale. If it is still more brisk, they call it as Kumbhadronamale. There are more of this type of rain in Malnad.

Eg: Since yesterday, jadimale is coming, no stopping.

476. ಜಡೆಕೋಲಾಟ: 16, 24, 48, 100 ಹೀಗೆ ಸಮಸಂಖ್ಯೆಗಳ ಹಗ್ಗಗಳನ್ನು ಒಂದು ಕಂಬ ನಿಲ್ಲಿಸಿ ಅದರ ತುದಿಗೆ ರಾಟಣೆ ಹಾಕಿ ಅದಕ್ಕೆ ಸಿಗಿಸುತ್ತಾರೆ. ಒಂದೊಂದು ಜೋಡಿ ಹಗ್ಗವನ್ನು ಒಬ್ಬೊಬ್ಬರು ಸೊಂಟಕ್ಕೆ ಸುತ್ತಿಕೊಂಡು ಕಂಬದ ಸುತ್ತ ಹಿಂದೆ ಮುಂದೆ ತಿರುಗುತ್ತ ಜತೆಜತೆಯಾಗಿ ಕೋಲುಹಾಕುತ್ತಾರೆ. ಜಡೆಹಾಕುತ್ತ (ಆ ರೀತಿ ಸುತ್ತುತ್ತ) ಹಾಗೆ ತಿರುಗುತ್ತಾರೆ. ಜಡೆಯಾಗಿ ಹೆಣೆದುಕೊಂಡು ಎಲ್ಲರೂ ಕಂಬಕ್ಕೆ ಬಿಗಿದುಕೊಳ್ಳುತ್ತಾರೆ. ಆಮೇಲೆ ಬಿಡಿಸಿಕೊಂಡು ಕೋಲುಹಾಕುತ್ತಾ ಮೊದಲಿದ್ದ ಸ್ಥಳಕ್ಕೆ ಬರುತ್ತಾರೆ.

ಒಬ್ಬರು, ಇಬ್ಬರು ಗಾಯಕರು ಕಥೆಯನ್ನು ಕೋಲಾಟದ ಹಾಡಿನ ಧಾಟಿಯಲ್ಲಿ ಹಾಡುತ್ತಿರುತ್ತಾರೆ. ರಾಜಕುಮಾರನೋ, ರಾಜಕುಮಾರಿಯೋ ಸೆರೆಯಲ್ಲಿ ಸಿಕ್ಕಿಕೊಂಡರು ಎಂದು ಕಥೆ ಬರುವವೇಳೆಗೆ ಎಲ್ಲರೂ ಕಂಬಕ್ಕ ಬಂಧಿತರಾಗಿರುತ್ತಾರೆ. ಆಮೇಲೆ ಉಪಾಯದಿಂದ ಹೊರಬಂದರು ಎಂದು ಕಥೆ ಮುಂದುವರೆಯುವುದು. ಕೋಲಾಡುತ್ತ ಜಡೆ ಬಿಡಿಸಿಕೊಂಡು ಬರುತ್ತಾರೆ. ಜಡೆಹಾಕುವಾಗ ಎಲ್ಲರೂ

ಎಚ್ಚರಿಕೆಯಿಂದ ಕೋಲುಹಾಕಬೇಕು. ಯಾರೊಬ್ಬರು ತಪ್ಪಿದರೂ ಜಡೆ ಗಂಟುಬಿಟ್ಟು ಬಿಡಿಸಿಕೊಳ್ಳಲಾಗದು. ಜಡೆಕೋಲಾಟಕ್ಕೆ ಅಭ್ಯಾಸ, ನೈಪುಣ್ಯ ಬೇಕು. ಹೆಚ್ಚು ಜನ ನುರಿತ ಕೋಲಾಟಗಾರರೂ ಬೇಕು.

ಉದಾ: ನಾಳೆ ಸೋಮಪ್ಪನ ಜಾತ್ರೇಲಿ ಜಡೆಕೋಲಾಟ ಇದೆ ಹೋಗೋಣ ಬಾ.

<jaDekolaaTa> A kind of play - They fix to the edge of a pole, ropes of 16, 24, 48, 100 like even number. One person tying four ropes around his waist, turning around the pole, beat with stick. They turn around like that and attach to the pole. Then, they get released and come back to the original place. While they play, everyone must be alert. If anyone goes apart, difficult to get released. For jadekolata practice and experience essential. Many people with maximum training are required.

Eg: Tomorrow in Somappa festival there is jadekolata. Come let us go.

477. ಜಪಮಾಡುವುದು: ತದೇಕಚಿತ್ತದಿಂದ ಮಂತ್ರ ಹೇಳಿಕೊಂಡು ದೇವರಧ್ಯಾನ ಮಾಡುವುದಕ್ಕೆ **ಜಪಮಾಡುವುದು** ಎಂದು ಹೇಳುತ್ತಾರೆ.

ಉದಾ: ಉಪಾಕರ್ಮದ ಮಾರನೆಯದಿನ 108 ಗಾಯತ್ರಿ ಮಂತ್ರ ಜಪಮಾಡಬೇಕೆಂಬ ಸಂಪ್ರದಾಯವುಂಟು.

<japamaaDuvudu> Meditation - Reciting religious hymns with concentration meditating is called japamaduvudu.

Eg: It is customary to observe 108 Gayathri manthra on the next day of Upakarma.

478. ಜಪ್ತಿ: ಸಾಲ ಪಡೆದವನು ಕರಾರಿನಂತೆ ಹಣವನ್ನು ನಿಗದಿಯಾದ ಕಾಲದೊಳಗೆ ತೀರಿಸದಿದ್ದರೆ, ಸಾಲ ಕೊಟ್ಟವರು ಸರ್ಕಾರಕ್ಕೆ ದೂರುಕೊಟ್ಟು ಅವನ ಮನೆಯನ್ನು **ಜಪ್ತಿ**ಮಾಡಿಸುತ್ತಾರೆ.

ಉದಾ: ಇಬ್ಬರು ಪೋಲೀಸರು ಬಂದು ಶಿವಪ್ಪನ ಮನೆಯನ್ನು ಜಪ್ತಿಮಾಡಿದರು, ಒಂದು ಮಡಕೇನೂ ಬಿಟ್ಟಿಲ್ಲ.

<japthi> Confiscation - The person who had taken loan, if he does not pay back within the allotted time, the person who

had given loan will give an appeal to government and get his house confiscated.

Eg: Two Police Officers came and confiscated Shivappa's house. Not left a single pot.

479. ಜಮಾಬಂದಿ: ಹಳ್ಳಿಯ ಪ್ರತಿಯೊಬ್ಬ ರೈತನೂ ಸರ್ಕಾರಕ್ಕೆ ಕಟ್ಟುವ ಕಂದಾಯವನ್ನು ನಿಗದಿ ಮಾಡುವುದಕ್ಕೆ **ಜಮಾಬಂದಿ** ಎನ್ನುತ್ತಾರೆ. ಜಮಾಬಂದಿ ಯಾವಾಗಲೂ ಅಮಲ್ದಾರರ ಸಮ್ಮುಖದಲ್ಲಿ ನಡೆಯುತ್ತೆ

ಉದಾ: ಜಮಾಬಂದಿ ದಿನ ಸರ್ಕಾರದ ವತಿಯಿಂದ ಅಮಲ್ದಾರರು, ಹಳ್ಳಿಯ ಶ್ಯಾನುಭೋಗರು ಮತ್ತು ಪಟೇಲರು ಗ್ರಾಮಪಂಚಾಯಿತಿ ಕಾರ್ಯಾಲಯದಲ್ಲಿ ಕಂದಾಯವನ್ನು ನಿಗದಿ ಮಾಡುತ್ತಾರೆ.

<jamaabandi> (-) The amount of tax to be paid to government - To determine the amount of tax to be paid to government by every farmer of village is called jamabandi (fixing of annual tax payment). Jamabandi always takes place in the presence of Amaldar.

Eg: On the day of Jamabandi, on behalf of government, Amaldar, Shanbhog and Patel determine the annual tax payment.

480. ಜಮೀನ್‌ದಾರ: ಹೊಲ, ಗದ್ದೆ, ತೋಟಗಳಿಗೆ ಯಜಮಾನನಾದವನನ್ನು ಜಮೀನ್‌ದಾರ ಎನ್ನುತ್ತಾರೆ. ಒಂದು ಎಕರೆಯಾಗಿರಬಹುದು, ನೂರು ಎಕರೆಯಾಗಿರಬಹುದು ಅವನು ಜಮೀನ್‌ದಾರನೇ.

ಉದಾ: ಜಮೀನ್‌ದಾರ್ ರಂಗಪ್ಪನವರು ನಮ್ಮೂರಿಗೆ ಬರ್ತಾರಂತೆ.

<jameendaara> (-) The owner of agricultural land, field and garden is called jamindar. May be one acre, hundred acres, he is jamindar.

Eg: Jamindar Rangappa is coming to our village.

481. ಜರಡಿ: ಅಕ್ಕಿ, ಕಡಲೆಕಾಯಿಬೀಜ ಮುಂತಾದ ಪದಾರ್ಥಗಳನ್ನು ಹೊಟ್ಟಿನಿಂದ ಬೇರ್ಪಡಿಸಲು ಸಾರಣೆ ಉಪಯೋಗ. **ಸಾರಣೆ**ಯನ್ನು (ಜರಡಿಯನ್ನು) ದಪ್ಪವಾದ ತಗಡಿನಿಂದ ತಯಾರುಮಾಡುತ್ತಾರೆ, ಸುಮಾರು ನಾಲ್ಕೈದು ಅಡಿ ಸುತ್ತಳತೆ ಇರುತ್ತೆ. ಅದರೊಳಕ್ಕೆ ಭತ್ತ ಮಿಶ್ರಿತವಾದ ಅಕ್ಕಿ ಮತ್ತು ಹೊಟ್ಟು ಬೆರಕೆಯಾಗಿರುವ ಕಡಲೆ



ಕಾಯಿಬೀಜವನ್ನು ಹಾಕಿ ಅಲ್ಲಾಡಿಸಿದಾಗ ಮಧ್ಯೆ ಸಣ್ಣ ತೂತುಗಳಿರುವುದರಿಂದ ಅಕ್ಕಿ, ಕಡಲೆಕಾಯಿಬೀಜಗಳು ಅದರಲ್ಲೇ ಉಳಿದು, ಹೊಟ್ಟು ಮಾತ್ರ ಕೆಳಕ್ಕೆ ಬೀಳುತ್ತೆ. ಹುಣಸೆಹಣ್ಣಿನ ರಸವನ್ನು ಬೀಜದಿಂದ ಪ್ರತ್ಯೇಕ ಮಾಡಲು ಸಾರಣೆಯೊಳಕ್ಕೆ ಹಾಕಿ ಕೈಯಿಂದ ಉಜ್ಜಿದರೆ ಹುಣಸೆ ಬೀಜಗಳು ಸಾರಣೆಯಲ್ಲಿ ಉಳಿದು, ಅದರ ರಸ ಮಾತ್ರ ತೂತುಗಳಿಂದ ಹೊರಕ್ಕೆ ಬರುತ್ತೆ. ಜರಡಿಗಳಲ್ಲಿ ಸಣ್ಣತಂತಿಯಿಂದ ಮಾಡಿದವೂ ಇರುತ್ತವೆ. ಇದರಲ್ಲಿ ಹಿಟ್ಟನ್ನು ಜರಡಿಹಿಡಿಯುತ್ತಾರೆ.

ಉದಾ: ಜರಡಿ ಅಂಚೆಲ್ಲ ಒಡೆದುಹೋಗಿದೆ ಡಬ್ಬ ಮಾಡೋರು ಬಂದರೆ ಕೂಗು ಒಳ್ಳೆ ಜರಡಿ ಮಾಡಿಸೋಣ.

ನೋಡಿ: ಸಾರಣೆ, ಮೊರ

<jaraDi> Seive - To separate outer skin of rice, peanut etc. sieve is useful. It is made of thick sheet metal, which will be four to five feet circumference. When you put rice mixed with paddy skin and shake, since there are small holes in the sieve, skin gets separated and falls down. Only rice and peanut remain inside. To separate tamarind juice, if you put in the sieve and rub, juice comes out and seeds remain in the sieve. Sieves made of thin wire are also there. In this, they sieve flour.

Eg: Sieve edge completely broken. If tin makers come, call. Get a good sieve made.

See: Sarane, Mora (Bamboo fan)

482. ಜಲಸಮಾಧಿ: ನೀರಿನಲ್ಲಿ ಪ್ರದೇಶ, ಮನೆ, ವಸ್ತು, ವ್ಯಕ್ತಿ ಇತ್ಯಾದಿ ಮುಳುಗಿ ಹೋಗುವುದನ್ನು ಜಲಸಮಾಧಿ ಎನ್ನುತ್ತಾರೆ.

ಉದಾ: ತುಂಬಿದಕೆರೆ ದಂಡೆ ಒಡೆದು ಆನೆಗಾತ್ರ ನೀರು ನುಗ್ಗಿ ಹತ್ತಾರು ಮನೆ, ತೋಟ ಎಲ್ಲ ಜಲಸಮಾಧಿಯಾಗೋಯ್ತು.

<jalasamaadhi> (-) Drowning in water - Land, house, things, human beings drown in water, they say jalasamadhi.

Eg: Bund of tank with full of water, broke and an elephant size water rushed out. Ten to twelve houses, garden all drowned in water.

483. ಜಲ್ದಿ: ತಕ್ಷಣ, ಬೇಗನೆ ಅನ್ನುವುದನ್ನು ಸೂಚಿಸುವುದಕ್ಕೆ **ಜಲ್ದಿ** ಅನ್ನುವ ಪದ ರೂಢಿಯಲ್ಲಿದೆ.

ಉದಾ: ಚಾವಡಿಯಲ್ಲಿ ಅಮಲ್ದಾರರು, ಶ್ಯಾನುಭೋಗರು ಎಲ್ಲ ಬಂದಿದಾರೆ. ಜಲ್ದಿ ತ್ವಾಟಕ್ಕೆ ಹೋಗಿ 10–12 ಎಳನೀರನ್ನು ತಗಂಡ್ಬಾ.

<jaldi> Soon - To indicate immediately, quickly, use of word jaldi is in vogue.

Eg: In Chavadi (Platform), Amaldar, Shanbhog all have come. Quickly go to garden and bring 10-12 tender coconuts.

484. ಜಲ್ಲೆ: ಕಬ್ಬಿನ ಕೋಲಿಗೆ **ಜಲ್ಲೆ** ಎಂದು ಹೆಸರು. 15–20 ಕಬ್ಬಿನಜಲ್ಲೆಯನ್ನು ಒಬ್ಬನೆ ಹೆಗಲಮೇಲೆ ಹೊತ್ತು ತರಬಹುದು. **ಕಬ್ಬಿನಕೋಲು** ಎಂದೂ ಹೇಳುತ್ತಾರೆ.



ಉದಾ: ಗದ್ದೆ ಕಡೆ ಹೋದರೆ, ಬರ್ತಾ ನಾಲ್ಕು ಜಲ್ಲೆ ಕಬ್ಬು ತಗಂಬಾರೊ, ಹುಡುಗರು ತಿಂತಾವೆ.

<jalle> Large round sugarcane - The name of fully grown sugarcane is Jalle. One can bring 15-20 Jalles on his shoulder. They also call it as Kabbinakolu (sugarcane stick).

Eg: If you go to field bring four jalles of sugarcane. Children will eat.

485. ಜವಳಿ: ಸೀರೆ, ಪಂಚೆ ಮುಂತಾದ ಬಟ್ಟೆಗಳನ್ನು ಒಟ್ಟೊಟ್ಟಾಗಿ ತರುವುದಕ್ಕೆ ಜವಳಿ ಎಂದು ಕರೆಯುವುದು ರೂಢಿ. ನಮ್ಮ ಹಳ್ಳಿಯಲ್ಲಿ ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ ಹೆಣ್ಣು, ಗಂಡುಗಳಿಗೆ ಮತ್ತು ಬೀಗರಿಗೆ ಕೊಡುವ ಜವಳಿಯನ್ನು ಶಿವಮೊಗ್ಗ ಅಥವಾ ದಾವಣಗೆರೆಗೆ ಹೋಗಿ ಕೊಂಡುಕೊಂಡು, ಒಂದು ಹೊಸ ಟ್ರಂಕಿನಲ್ಲಿ ತುಂಬಿ ಬಸ್ ಪ್ರಯಾಣ ಮಾಡಿ ತರುತ್ತಿದ್ದರು. ಅಂಗಡಿಯವನು ಸೀರೆ, ಪಂಚೆಗಳನ್ನು ಬೇರೆಬೇರೆ ಗಂಟುಗಳಲ್ಲಿ ಭೋಟಾಪಂಚೆಯಲ್ಲಿ ಸುತ್ತಿ ಕೊಡುತ್ತಿದ್ದನು. ಆ ಹೊಸ ಭೋಟಾಪಂಚೆಯೆ ಮದುವೆಯ ಮಂಟಪದಲ್ಲಿ ಹಸೆಮಣೆಯ ಮೇಲೆ ಹಾಕುವ ಶಲ್ಯ!

ಉದಾ: ಲಲ್ಲೂ ಮದುವೆ ಇನ್ ಒಂದೇ ತಿಂಗಳು. ಶಿವಮೊಗ್ಗಕ್ಕೆ ಹೋಗಿ ಜವಳಿ ಎಲ್ಲ ತಂದ್ಬಿಡಿ.

<javali> Clothes in lot for marriage function - To bring saree, dhothi etc. clothes in lot, it is common to say javali. In our village, during marriage, brahmopadesha functions, the clothes to be offered to bride bridegroom and bridegroom's parents, they were going to Shimoga or Davangere and bringing in trunk through bus. The seller used to pack sarees, dhothis in different bundles in Chotapanche. That new Chotapanche is the cloth to put on decorated plank in marriage pandal as angavastra.

Eg: Only one month left for Lalithu's marriage, go to Shimoga and bring all javali.

486. ಜವಳಿ ವ್ಯಾಪಾರಿ: ನೋಡಿ: ಪಿಂಜು

<javaLi vyaapaari> Cloth seller - See: Pinju

487. ಜವಾಬು: ಕೇಳಿದ ಪ್ರಶ್ನೆಗೆ ಉತ್ತರಕೊಡುವುದಕ್ಕೆ ಜವಾಬು ಎನ್ನುವುದು. ಸವಾಲ್–ಜವಾಬ್ ಎಂಬುದು ಪ್ರಶ್ನೋತ್ತರ ಕಾರ್ಯಕ್ರಮವಾಗಿದೆ.

ಉದಾ: ನೀನು ಇಲ್ಲೀಗಂಟ ಏನೇನು ಮಾಡಿದೀಯ ಅಂತ ಹೇಳ್ತೀನಿ, ಅದಕ್ಕೆ ಮೊದಲು ಜವಾಬು ಕೊಡು, ಆಮೇಲೆ ಮುಂದಿನ ಮಾತು.

<javaabu> Answering - To give answer to the question asked is called javabu. Saval-Javab is Question and Answer program.

Eg: I will tell you what all you did till now. First answer, then further talk.

488. ಜಳಕ: ಸ್ನಾನ ಮಾಡುವುದನ್ನು **ಜಳಕ** ಎಂದು ಹೇಳುತ್ತಾರೆ.

ಉದಾ: ಇವತ್ತು ಮನೆಗೆ ಸ್ವಾಮಿಗಳು ದಯಮಾಡಿಸುತ್ತಾರೆ. ಎಲ್ಲರೂ ಬೇಗ ಬೇಗ ಜಳಕ ಮಾಡಿಕೊಂಡು ಮಡಿ ಬಟ್ಟೆ ಉಟ್ಟುಕೊಂಡು ಬನ್ನಿ.

ನೋಡಿ: ಅಭ್ಯಂಗನ, ಎಣ್ಣೆಶಾಸ್ತ್ರ

<jaLaka> (-) Bathing is called Jalaka.

Eg: Today Swamiji is visiting our house. Come all of you wearing clean washed clothes after bath.

489. ಜಾಗರಣೆ: ರಾತ್ರೆಯೆಲ್ಲ ನಿದ್ದೆಮಾಡದೆ ಎಚ್ಚರವಾಗಿರುವುದನ್ನು ಜಾಗರಣೆ ಎನ್ನುತ್ತಾರೆ. ಜಾಗರಣೆಗೆ ಶಿವರಾತ್ರಿ ಪ್ರಸಿದ್ಧವಾಗಿದೆ.

ಉದಾ: ಈ ದಿನ ಶಿವರಾತ್ರೆ, ಗುಡಿಯಲ್ಲಿ ಬಂದು ಎಲ್ಲರೂ ಜಾಗರಣೆ ಮಾಡಬೇಕು.

<jaagaraNe> (-) Remaining awake throughout the night - To be awake without sleeping throughout the night, they call it as jagarane. For Jagarane Shivarathri festival is famous.

Eg: Today is Shivarathri. All must come to the temple and observe Jagarane.

490. ಜಾದೂಗಾರ: ನೋಡಿ: ಮಂತ್ರವಾದಿ

<jaadoogaara> See: Manthravadi **(Magician)**

491. ಜಿಟಿಜಿಟಿಮಳೆ: ನೋಡಿ: ತುಂತುರುಮಳೆ, ಹನಿಮಳೆ, ಕುಂಭದ್ರೋಣಮಳೆ, ಸೋನೆಮಳೆ

<jaTijaTimale> See: Tunthurumale **(drizzling),** Hanimale, Kumbhadronamale, Sonemale.

492. ಜಿಡ್ಡಿ: ಎರಡು ತೆಂಗಿನ ಕಾಯಿಗಳನ್ನು ಅದರ ನಾರಿನಿಂದಲೆ ಒಂದಕ್ಕೊಂದನ್ನು ಗಂಟುಹಾಕುವುದಕ್ಕೆ **ಜಿಡ್ಡಿ** ಎಂದು ಹೇಳುತ್ತಾರೆ. ಹಾಗೆ ಜಿಡ್ಡಿ ಹಾಕಿದ ತೆಂಗಿನಕಾಯಿಗಳನ್ನು ಕೋಲಿನಮೇಲೆ ಆ ಪಕ್ಕ ಈ ಪಕ್ಕ ಬರುವಂತೆ ಇಟ್ಟುಕೊಂಡು ಹೆಗಲಮೇಲೆ ಹೊತ್ತುಕೊಂಡು ಬರುತ್ತಾರೆ. ಇಪ್ಪತ್ತು ಮುವ್ವತ್ತು ಕಾಯಿಗಳನ್ನು ಜಿಡ್ಡಿಹಾಕಿಕೊಂಡು ಒಟ್ಟಿಗೆ ತರಬಹುದು.

ಉದಾ: ನಾಲ್ಕು ಎಳನೀರು ಕೆತ್ತಿ ಜಿಡ್ಡಿ ಹಾಕ್ಕೊಡಪ್ಪ.

<jiDDi> (-) A pair of coconut tied together - To join two coconuts with its own fiber only, they call Jiddi. Putting jiddis on a stick keeping coconuts on either side of the stick, carrying on shoulder they come. Twenty to thirty coconuts can be brought putting jiddis.

Eg: Chap four tender coconuts and give putting jiddis.

493. ಜಿರಾಯುತು: ಬೇಸಾಯ ಮಾಡುವುದಕ್ಕೆ ಅನುಕೂಲವಾದ ಭೂಮಿಗೆ ಜಿರಾಯುತು ಎಂದು ಹೆಸರು. ತೋಟದ ಹಿಂಭಾಗಕ್ಕಿರುವ ಎರಡು ಎಕರೆ ಜಮೀನು

ಜಿರಾಯುತು ಭೂಮಿ.

ಉದಾ: ನಿಮ್ಮ ತ್ವಾಟದ ಹಿಂಭಾಗಕ್ಕಿರುವ ಒಂದು ಎಕರೆ ಜಿರಾಯುತು ಭೂಮಿ ನಿನ್ನ ಹೆಸರಿಗೆ ಮಾಡಿಸ್ಕೊ.

<jiraayithu> Cultivable land - The field suitable for agriculture is called Jirayithu. Two acres of land behind the garden is jirayithu land.

Eg: Behind your gardent the one acre jirayuthu land get it done to your name.

494. ಜೀರ್‌ಗಂಟು: ನೋಡಿ: ಸರಗುಣಿಕೆ

<jeerganTu> See: SaraguNike

495. ಜೀವನಾಂಶ: ನೋಡಿ: ಪೋಟಿಗೆ

<jeevanaamsha> See: PoTige

496. ಜೋನಿಬೆಲ್ಲ: ನೋಡಿ: ಕೊಪ್ಪರಿಗೆ

<jonibella> See: Kopparige

497. ಜೋಡಿಒಲೆ: ಎರಡು ಒಲೆ ಒಟ್ಟಾಗಿರುವುದು. ಮಣ್ಣಿನ ಒಲೆ ಇದು. ಎರಡು ಪಾತ್ರೆಯನ್ನು ಒಟ್ಟಾಗಿಡಬಹುದು ಒಲೆಮೇಲೆ.



ನೋಡಿ: ಕೋಡ್ಲೊಲೆ

<jodiole> Two ovens together. This is mud oven. Can keep two vessels together on the oven.

See: Kodlole

498. ಜೋಪಡಿ: ನೋಡಿ: ಗುಡಿಸಲು

<jooDadi> See: GuDisalu (hut)

499. ಜೋಯಿಸ: ಹಳ್ಳಿಯಲ್ಲಿ ಪ್ರತಿಯೊಂದು ಮನೆಯವರ ಶುಭ ಮತ್ತು ಅಶುಭಕಾರ್ಯಗಳಲ್ಲಿ ನೆರವಾಗಿ ಕೆಲಸಗಳನ್ನು ನಡೆಸಿಕೊಡುವವನನ್ನು **ಜೋಯಿಸ** ಎನ್ನುತ್ತಾರೆ. ಸಾಮಾನ್ಯವಾಗಿ ಜೋಯಿಸರು ವಂಶಪಾರಂಪರ್ಯವಾಗಿ ಅದೇ ವೃತ್ತಿಯನ್ನು ಅನುಸರಿಸಿಕೊಂಡು ಬರುತ್ತಾರೆ.

ಉದಾ: ಜೋಯಿಸರು ನಾಳೆ ಊರಿಗೆ ಬರುತ್ತಾರೆ. ನಾಳಿದ್ದು ಹಬ್ಬಕ್ಕೆ ನಮ್ಮನೆಗೆ ಬರ್ತಾರೆ.

ನೋಡಿ: ಜ್ಯೋತಿಷ್ಯ

<joyisa> Family priest - The person who arranges and helping in all auspicious and inauspicious ceremonies of each house of the village, they say Joyisa. Generally, Joyisa will be following the profession as heritage.

Eg: Priest is coming tomorrow. He is coming to our house for the festival.

See: Jyothishya **(Astrology)**

500. ಜೋಳಿಗೆ: ಬಿದಿರಿನ ತೊಟ್ಟಿಲಿಗೆ ಬದಲಾಗಿ ಸೀರೆ ಅಥವಾ ಪಂಚೆಯನ್ನು ತೂಗುಬಿಟ್ಟು ಮಕ್ಕಳನ್ನು ಅದರೊಳಗೆ ಮಲಗಿಸಿ ತೂಗುತ್ತಾರೆ. ಅದಕ್ಕೆ **ಜೋಳಿಗೆ** ಎಂದು ಹೆಸರು. ಹಳ್ಳಿಯಲ್ಲಿ ರಸ್ತೆ ಕೆಲಸ ಮಾಡುವವರು ಜೋಳಿಗೆಯನ್ನು ಮರಕ್ಕೆ ತೂಗುಹಾಕಿ ಮಗುವನ್ನು ಮಲಗಿಸುತ್ತಾರೆ. ಭಿಕ್ಷುಕರು ಭಿಕ್ಷೆಬೇಡಲು ಹೋಗುವಾಗ ಭುಜಕ್ಕೆ ಜೋಳಿಗೆ ಹಾಕಿಕೊಳ್ಳುತ್ತಾರೆ. ಹರಿದಾಸರು ಮಧುಕರಿವೃತ್ತಿಗೆ ಹೋದಾಗಲು ಜೋಳಿಗೆ ಹಾಕಿಕೊಂಡಿರುತ್ತಾರೆ.

ಉದಾ: ಏನ್ ಜೋಳಿಗೆ ಹಾಕ್ಕಂಡ್ ಎಲ್ಲೊ ಹೊರಟ್ಟಿಟ್ರಿ?

<joLige> (-) A swing made by cloth and hung from the roof - Instead of bamboo cradle, they tie saree or dhothi and swing putting the babies inside. It is called Jolige. In village, the working people on road, they swing jolige to a tree and lay the babies. Beggars while going for begging put Jolige on shoulders. When devotees of Vishnu (haridasa) go for collecting alms from different houses like a bee, put on a Jolige.

Eg: What, putting on Jolige, you are going somewhere.

501. ಜ್ಯೋತಿಷ್ಯ: ಜ್ಯೋತಿಷ್ಯ ಹೇಳುವುದು ಹಳ್ಳಿಯಲ್ಲಿ ಒಬ್ಬಿಬ್ಬರು ಶಾಸ್ತ್ರಿಗಳ ಮನೆತನದವರಿಗೆ ಮಾತ್ರ ಮೀಸಲಾಗಿರುತ್ತೆ. ಅವರು ಯಾವಾಗಲೂ ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದಿರುತ್ತಾರೆ. ಜನರು ಕಷ್ಟ ಬಂದಾಗ ಜ್ಯೋತಿಷ್ಯ ಕೇಳುತ್ತಾರೆ. ಲಗ್ನ ಇಡಿಸಲು ಕೇಳುತ್ತಾರೆ. ಶುಭಕಾರ್ಯಕ್ಕೆ ವೇಳೆ ಕೇಳಲೂ ಜ್ಯೋತಿಷ್ಯ ಕೇಳುತ್ತಾರೆ. ಜ್ಯೋತಿಷ್ಯಶಾಸ್ತ್ರ ಬಲ್ಲವರನ್ನು ಜೋಯಿಸರೆಂದು

ಕರೆಯುತ್ತಾರೆ. ಭವಿಷ್ಯ ಹೇಳುವುದು, ಕಣಿ ಕೇಳುವುದು, ಗಿಣಿಶಾಸ್ತ್ರ ಮೊದಲಾದವು ಜ್ಯೋತಿಷ್ಯದ ಹಲವು ವಿಧಗಳಾಗಿವೆ.

ಉದಾ: ಜ್ಯೋತಿಷ್ಯ ಹೇಳುವುದು ನಮ್ಮೂರಿನ ತಿಪ್ಪಾಭಟ್ಟರಿಗೆ ವಂಶಪಾರಂಪರ್ಯವಾಗಿ ಬಂದದ್ದು. ನೋಡಿ: ಜೋಯಿಸ

<jyothishya> Astrology: To predict astrology is confined to one or two priests of the community. They will always have followed traditional customs. People when they face any trouble ask astrology. Ask for fixing up auspicious days. For religious functions to know timings also ask astrology. One who knows astrology is called Joyisa. To predict astrology, ask fortune, ginishasthra are all different systems of astrology.

Eg: To predict Astrology has come as heritage to Thippabhattaru. See: Joyisa.

❑

ಡ / Da

502. ಡಬ್ಬ: ತೆಳುವಾದ ತಗಡಿನಿಂದ ಮಾಡಿರುವುದು **ಡಬ್ಬ**. ಡಬ್ಬದಲ್ಲಿ ಮೆಣಸಿನಕಾಯಿ, ಕೊತ್ತುಂಬರಿಬೀಜ ಮುಂತಾದ ಧಾನ್ಯಗಳನ್ನು ತುಂಬಿಡುತ್ತಾರೆ. ಚಿಲಕ ಹಾಕುವಂತೆ ಮುಚ್ಚಳ ಮಾಡಿ ಊರಿಂದೂರಿಗೆ ಹೋಗುವಾಗ ಅದರಲ್ಲಿ ಬಟ್ಟೆ ಬರೆಗಳನ್ನು ಇಟ್ಟುಕೊಂಡು ಹೋಗುತ್ತಿದ್ದರು.

ಉದಾ: ಡಬ್ಬದಲ್ಲಿ ಅಕ್ಕಿಹಿಟ್ಟು ಇದೆಯೆ ನೋಡಿ ತಗಂಬಾ ರೊಟ್ಟಿ ಮಾಡ್ತೀನಿ.

<Dabba> (-) Made of thin tin is dabba (small box made of thin metal sheet with lid). In the box they fill chilly, coriander seeds etc. When going from place to place, they were taking box with chain to fasten, putting clothes in that.

Eg: See whether rice flour is there in dabba and bring. Make roti.

503. ಡೋಲಾಯಮಾನ: ಹಾಗೂ ಇಲ್ಲ ಹೀಗೂ ಇಲ್ಲ, ಯಾವುದಾದರೂ ಒಂದು ತೀರ್ಮಾನಕ್ಕೆ ಬರದೇ ಇದ್ದಾಗ **ಡೋಲಾಯಮಾನ**ವಾಗಿದೆ ಎಂದು ಹೇಳುತ್ತಾರೆ.

ಉದಾ: ರಾಮಪ್ಪ ಊರು ಬಿಟ್ಟು ಹೋಗುವುದು ಇನ್ನೂ ಡೋಲಾಯಮಾನ ವಾಗಿದೆಯಂತೆ. ಪದರೂಪ: ಡೋಲಾಯಮಾನ (ದೋಲಾಯಮಾನ)

<Dolaayamaana> Wavering - Whether this way or that way, if cannot come to a decision, they say it has become dolayamana.

Eg: Ramappa's going out from village is still wavering.

Different version: dolayamana (dholayamana)

❑

ತ / Tha

504. ತಂಗಡಿಹೂ: ನೋಡಿ: ಆವರಿಕೆ

<thangaDihoovu> See: Avarike

505. ತಂಗಳು: ಬೆಳಿಗ್ಗೆ ಮಾಡಿದ ಅನ್ನವನ್ನು ರಾತ್ರೆ ಉಪಯೋಗಿಸಿದರೆ ಅದು **ತಂಗಳನ್ನವಾಗುತ್ತೆ**. ರಾತ್ರೆ ಮಾಡಿದ ಅನ್ನವನ್ನು ಮಾರನೆಯದಿನ ಬೆಳಿಗ್ಗೆ ಉಪಯೋಗಿಸಿದರೆ ಅದನ್ನೂ **ತಂಗಳು** ಎಂದೇ ಹೇಳುತ್ತಾರೆ.

ಉದಾ: ತಂಗಳನ್ನಕ್ಕೆ ಮೊಸರುಹಾಕಿ ಕಲಸಿ ಕಾದ ಬೆಣಚುಕಲ್ಲನ್ನು ಸ್ವಲ್ಪಹೊತ್ತು ಅದರ ಒಳಗೆ ಇಟ್ಟು ಸ್ವಲ್ಪ ಸಮಯದ ನಂತರ ತಿಂದರೆ ಆರೋಗ್ಯಕ್ಕೆ ಒಳ್ಳೆಯದು.

<thangaLu> Cold rice - If rice prepared in the morning is used in the night, it is thangalanna. Rice prepared in the night, if used next day morning, it is also called cold rice.

Eg: For cold rice mixing curds and putting a hot white stone for some time and eat, it is good for health.

506. ತಂಬಿಗೆ: ನೋಡಿ: ಚಟ್ಟಿ, ಚೊಂಬು

<thambige> See: Chatti, Chombu

507. ತಂಬಿಟ್ಟು: ಅಕ್ಕಿಹಿಟ್ಟು, ಬೆಲ್ಲ ಹಾಕಿ ಮಾಡಿದ ಒಂದು ಬಗೆಯ ತಿಂಡಿಗೆ **ತಂಬಿಟ್ಟು** ಎಂದು ಹೆಸರು. ತಂಬಿಟ್ಟನ್ನು ನಾಗರಪಂಚಮಿ ಹಬ್ಬದಂದು ದೇವರನೈವೇದ್ಯಕ್ಕೆ ಮಾಡುತ್ತಾರೆ. ಮದುವೆ, ಮುಂಜಿ ಕಾರ್ಯಕ್ರಮಗಳಿಗೆ ಮುಂಚಿತವಾಗಿ ನಡೆಸುವ ಹೂವೀಳ್ಯ ಕಾರ್ಯಕ್ರಮದಲ್ಲಿ, ತಂಬಿಟ್ಟು, ಕೋಸುಂಬರಿ, ಪಾನಕ ಮಾಡಿ ಮುತ್ತೈದೆಯರಿಗೆ ಕೊಡುತ್ತಾರೆ.

ಉದಾ: ನಾಳೆ ಹೂವೀಳ್ಯಕ್ಕೆ ತಂಬಿಟ್ಟು, ಚಿಗಳಿ ಎಲ್ಲ ಮಡಿಉಟ್ಕಂಡು ಮಾಡ್ಬೇಕು.

<thambiTTu> (-) An eatable made of rice flour and jaggery - A type of food made of rice flour and jaggery is thambittu. Thambittu is done to offer God on Nagarapanchami Day. For marriage, brahmopadesha functions, the hoovilya program observed earlier, they prepare Thambittu, Kosumbari and juice and offer to married women.

Eg: For tomorrow's Hoovilya must do thambittu, Chigali (made of black sesame) wearing washed clothes.


508. ತಕರಾರು ಅರ್ಜಿ: ಹೊಲ, ಗದ್ದೆಗಳ ಬಗ್ಗೆ ವಾದ ವಿವಾದಗಳಾದಾಗ ಒಬ್ಬ ರೈತ ಸರ್ಕಾರಕ್ಕೆ ಕೊಟ್ಟಿರುವ ಅರ್ಜಿಗೆ ವಿರುದ್ಧವಾಗಿ ಪಕ್ಕದ ಜಮೀನಿನವನು ಕೊಡುವ ಅರ್ಜಿಗೆ **ತಕರಾರುಅರ್ಜಿ** ಎನ್ನುತ್ತಾರೆ. ಒಂದು ನ್ಯಾಯಾಲಯವು ತೀರ್ಪು ಕೊಟ್ಟಿದ್ದರೂ ಮೇಲಿನ ನ್ಯಾಯಾಲಯಕ್ಕೆ ತಕರಾರು ಅರ್ಜಿ ಕೊಡಬಹುದು.

ಉದಾ: ಶಿವಪ್ಪ ಮತ್ತೆ ತಕರಾರುಅರ್ಜಿ ಕೊಟ್ಟವ್ನಂತೆ.

<thakaraaruarji> Counter petition - When arguments for and against take place regarding agricultural field for appeal given to government by one farmer, giving appeal against to that by neighbor farmer is called thakararuarji.

Eg: It seems Shivappa again submitted counter petition.

509. ತಕಲಿ: ಕಬ್ಬಿಣ ಅಥವಾ ಮರದ ತಗಡಿನ ದುಂಡಾಗಿರುವ ಬಿಲ್ಲೆಗೆ ಮಧ್ಯೆ ರಂಧ್ರವನ್ನು ಮಾಡಿ ಸುಮಾರು ಒಂದು ಗೇಣು ಉದ್ದದ ಕಡ್ಡಿಯನ್ನು ಸೇರಿಸಿರುವುದಕ್ಕೆ **ತಕಲಿ** ಎನ್ನುತ್ತಾರೆ. ಬ್ರಾಹ್ಮಣರು ಹಾಕಿಕೊಳ್ಳುವ ಜನಿವಾರವನ್ನು ಮಾಡಲು ಅವರೇ ಸ್ವತಃ ತಕಲಿಯಿಂದ ನೂಲನ್ನು ತೆಗೆಯುತ್ತಿದ್ದರು. ಸ್ವಲ್ಪ ಕಾಲದ



ನಂತರ ಚರಕ ಪ್ರಾರಂಭವಾಯಿತು. ಚರಕದಲ್ಲಿ ತಕಲಿಗಿಂತ ಬೇಗ ನೂಲನ್ನು ಮಾಡಬಹುದು.

ಉದಾ: ನಮ್ಮ ತಾತ ಬಿಡುವಿದ್ದಾಗಲೆಲ್ಲ ತಕಲಿ ಹಿಡ್ಕಂಡು ಕೂರ್ತಿದ್ದರು.



<thakali> (-) Hand spinning instrument made of wood or iron sheet, making a small hole in the center, attached with six inches length of stick. Brahmins used to make Janivara, were weaving the thread from thakali. After some time, the Charaka (Spinning wheel) came into existence. Can prepare thread quickly than thakali.

Eg: Our grandfather was always sitting with thakali when he was free.

510. ತಗಾದೆ: ಸಾಲ ಪಡೆದ ಹಣವನ್ನು ನಿಗದಿಯಾದ ಕಾಲಕ್ಕೆ ಹಿಂತಿರುಗಿಸದಿದ್ದರೆ ಹಣ ಕೊಟ್ಟವರು ಮಾಡುವ ಒತ್ತಾಯವನ್ನು **ತಗಾದೆ ಎನ್ನುತ್ತಾರೆ.**

ಉದಾ: ಸುಮ್ಮನೆ ತಗಾದೆ ಮಾಡ್‌ಬೇಡಿ, ಮುಂದಿನ ಫಸಲು ಬಂದ ಕೂಡಲೆ ನಿಮ್ಮ ಹಣ ಪೂರಾ ಚುಕ್ತಾ ಮಾಡ್ತೀನಿ.

<thagaade> Urging for payment - If the loan amount is not paid back within the time fixed, the pressure the person who had loaned does is thagade.

Eg: Simply do not do thagade (pressurize). When I get next crop, pay back the loan fully.

511. ತಟಗುಟ್ಟು: ಯಾರನ್ನಾದರೂ ಸಂಬೋಧಿಸದೆ ಒಬ್ಬರೆ ಗೊಣಗಿಕೊಂಡು ಮಾತನಾಡುವುದನ್ನು **ತಟಗುಟ್ಟುವುದು** ಎಂದು ಹೇಳುವುದು ರೂಢಿ.

ಉದಾ: ಒಂದೇ ಸಮ ಆಗಿನಿಂದಲು ತಟಗುಟ್ತಾನೆ ಇದೀಯ, ಅದೇನೂಂತ ಬಾಯಿಬಿಟ್ಟು ಬೊಗಳು.

ನೋಡಿ: ಪಿಸುಗುಡು, ಪಿಸುಮಾತು

<thaTaguTTu> Grumbling - Simply talking for himself without addressing anybody, it is common to say thataguttuvudu.

Eg: Simply you are grumbling throughout. Tell what exactly that is.


512. ತಟಾಯಿಸುವುದು ದಾಟಿಹೋಗುವುದನ್ನು **ತಟಾಯಿಸುವುದು** ಎನ್ನುತ್ತಾರೆ.

ಉದಾ: ಗಾಡಿ ಮುಂದಿನ ಹಳ್ಳ ತಟಾಯಿಸಿಬಿಟ್ಟರೆ ಅಲ್ಲಿಂದಾಚೆಗೆ ದಾರಿ ಸರಿಯಾಗಿದೆ. ಇದೊಂದು ಗಂಡಾಂತರ ತಟಾಯಿಸಬೇಕು, ಆಗಲೆ ಮನಸ್ಸಿಗೆ ನೆಮ್ಮದಿ.

<thaTaayisuvudu> Cause to cross - To cross is called thatayisuvudu.

Eg: If cart crosses the next channel, further road is all right. Must get over this hurdle. Then only the satisfaction.

513. ತಡಿಕೆ: ಬಿದಿರನ್ನು ತೆಳ್ಳಗೆ ಸೀಳಿ ಹೆಣೆದಿರುವ ಚಾಪೆಗೆ **ತಡಿಕೆ** ಎಂದು ಹೆಸರು. ಗುಡಿಸಲು ಹಾಕುವಾಗ ಮತ್ತು ಕಮಾನುಗಾಡಿಗೆ ತಡಿಕೆಯನ್ನು ಬಳಸುತ್ತಾರೆ.



ಉದಾ: ಒಂದು ಗಾಡಿಗಾದರೂ ತಡಿಕೆಹಾಕಿ ಕಮಾನುಮಾಡಿದರೆ ಊರಿಂದೂರಿಗೆ ಪ್ರಯಾಣಮಾಡಲು ಅನುಕೂಲವಾಗುತ್ತೆ.

<thaDike> Frame of slit bamboo - The carpet made of thin bamboo is Thadike. They use bamboo frame for constructing hut and covered cart.

Eg: If we make bamboo frame for one cart at least, it is easy to travel from place to place.

514. ತತ್ತಳಿಸು: ಹೆದರಿಕೊಂದು ನಡುಗುವುದನ್ನು **ತತ್ತಳಿಸುವುದು** ಅನ್ನುತ್ತಾರೆ.

ಉದಾ: ಆ ಕಡೇಮನೆ ಈರಪ್ಪ ನಮ್ಮತಾವ ಅವನ ಪೌರುಷ ಕೊಚ್ಚಿದ್ದೂ ಕೊಚ್ಚಿದ್ದೆ. ನೆನ್ನೆ ಶ್ಯಾನುಭೋಗರು, ಅಮಲ್ದಾರರ ಎದುರಿಗೆ ತತ್ತಳಿಸಿಬಿಟ್ಟ.

<tattaLisu> (-) To shiver with fear, they say thathhalisu.

Eg: That last house Eerappa boasted with us. Yesterday in front of Shanbhog and Amaldar, shivered!

515. ತದುಕು: ಇನ್ನೊಬ್ಬನನ್ನು ಹೊಡೆಯುವುದಕ್ಕೆ **ತದುಕು** ಅನ್ನುವ ಪದ ಬಳಕೆಯಲ್ಲಿದೆ. **ತದಿಕಿಬಿಡ್ತೀನಿ** ಎಂದೂ ಹೇಳುತ್ತಾರೆ.

ಉದಾ: ಇನ್ನೊಂದುಸಲ ಆ ಮಾತು ಬರಲಿ ನಿನ್ನ ಬಾಯಿಂದ ಅಲ್ಲೇ ತದಿಕಿಬಿಡ್ತೀನಿ.

ಉದಾ: ಆ ಸೋಮಯ್ಯ ಅವನ ಸಮಾನ ಯಾರೂ ಇಲ್ಲಾಂತ ಎಗರಾಡ್ತಾ ಇದಾನೆ. ನಾಲ್ಕು ಸಲ ತದುಕಿದರೆ ದಾರೀಗೆ ಬರ್ತಾನೆ.

<taduku> (-) To beat another person, the word thaduku is in vogue. They also say thadikibidtheeni.

Eg: That Somayya is shouting as if there is no equivalent to him. If we beat him four times, he will come around.



516. ತನಿಎರೆಯುವುದು: ನಾಗರಪಂಚಮಿಯ ದಿನ ಮಡಿಯನ್ನುಟ್ಟು ನಾಗರಕಲ್ಲಿಗೆ ಹಾಲು ಹಾಕುವುದನ್ನು **ತನಿಯೆರೆಯುವುದು** ಎಂದು ಹೇಳುತ್ತಾರೆ. ಆ ದಿನ ಅಕ್ಕ – ತಂಗಿಯರು, ಅಣ್ಣ – ತಮ್ಮಂದಿರನ್ನು ದೇವರ ಮುಂದೆ ಮಣೆಯ ಮೇಲೆ ಒಬ್ಬೊಬ್ಬರನ್ನು ಕೂರಿಸಿ ಹಾಲಿನಲ್ಲಿ ಹೂವನ್ನು ಅದ್ದಿ, ಅವರ ಬೆನ್ನಿನ ಮೇಲೆ ಚುಮುಕಿಸುತ್ತಾರೆ. ಒಬ್ಬರಿಗೊಬ್ಬರು ಹೊಂದಿಕೊಂಡು ಬಾಳಬೇಕೆಂಬುದನ್ನು ಸೂಚಿಸುವ ಒಂದು ಕ್ರಮ.

ಉದಾ: ನಾಳೆ ನಾಗರಪಂಚಮಿಹಬ್ಬ. ಹೊತ್ತಿಗ್ಮುಂಚೆ ಎದ್ದು ಮಡಿ ಉಟ್ಕಳಿ. ನಾಗಪ್ಪನಿಗೆ ತನಿಎರಿಬೇಕು.

ನೋಡಿ: ಅರಳಿಕಟ್ಟೆ

<taniereyuvudu> (-) Offering milk to snakes carved on stone - On the day of Nagarapanchami festival, wearing washed clothes and putting milk on Nagarakallu (Stone image of serpent) is told as Thaniereyuvudu. That day, sisters, brothers, sitting them each in front of God, dipping flower in milk, sprinkle on their back. It is an indication that they must live cooperating each other.

Eg: Tomorrow is Nagarapanchami festival. Get up early in the morning and take bath. For Nagappa (stone image) must sprinkle milk.

See: Aralikatte

517. ತಪ್ಪುಗಾಣಿಕೆ: ಗೊತ್ತಿದ್ದೊ ಅಥವಾ ಗೊತ್ತಿಲ್ಲದೆಯೊ ಏನಾದರೂ ತಪ್ಪು ಮಾಡಿದ್ದರೆ ದೇವರಿಗೆ ದಂಡವಾಗಿ ಒಪ್ಪಿಸುವ ಹಣವನ್ನು **ತಪ್ಪುಗಾಣಿಕೆ** ಎಂದು ಹೇಳುವುದು ರೂಢಿ.

ಉದಾ: ಮಾಡ್ಬಾರದ ಕೆಲಸ ಮಾಡ್ಬಿಟ್ಟ ಮಗ. ಮೊನ್ನೆ ಮಾರಮ್ಮನ ಜಾತ್ರೆಗೆ ಹೋದಾಗ ತಪ್ಪುಗಾಣಿಕೆ ಒಪ್ಪಿಸಿ ಬಂದೆವು.

ನೋಡಿ: ಮೀಸಲುಕಟ್ಟುವುದು

<tappugaaNike> (-) Money to be paid for our offence committed - Knowingly or unknowingly if we have done any mistake, to offer money to God as Penalty, it is common to say, thappuganike (Penalty).

Eg: Son did something one should not do. When we went to Maramma festival, we offered thappuganike.

See: Meesalukattuvudu**.**

518. ತಬ್ಬಲಿ: ಅಪ್ಪ ಅಮ್ಮನನ್ನು ಕಳೆದುಕೊಂಡವನಿಗೆ **ತಬ್ಬಲಿ** ಅನ್ನುವ ಪದ ರೂಢಿಯಲ್ಲಿದೆ. **ಅನಾಥ** ಎನ್ನುವುದು ಇನ್ನೊಂದು ಪದವಾಗಿದೆ.

ಉದಾ: ಅಯ್ಯೋ ತಬ್ಬಲಿಮುಂಡೇದೆ ನಾಲ್ಕುಜನನ್ನ ಕೇಳು ಏನಾರ ಸಹಾಯಮಾಡ್ತಾರೆ.

<tabbali> Orphan - One who has lost father and mother, the word tabbali is in vogue. Anatha is another word.

Eg: Ayyo thabbalimundede (what an orphan you are) enquire four people, something they help you.

519. ತಬ್ಬಿಬ್ಬು: ಇದ್ದಕ್ಕಿದ್ದ ಹಾಗೆ ಕಕ್ಕಾಬಿಕ್ಕಿಯಾಗುವುದನ್ನು **ತಬ್ಬಿಬ್ಬಾಗುವುದು** ಎಂದು ಹೇಳುತ್ತಾರೆ.

ಉದಾ: ಶಿವಪ್ಪ ತಬ್ಬಿಬ್ಬಾಗಿ ಮಾತುಗಳನ್ನು ಮರೆತುಬಿಟ್ಟ, ಜನಗಳೆಲ್ಲ ಗೊಳ್ ಅಂತ ನೆಗಾಡ್ತಿದ್ದರು.

<thabbibbu> Bewilderment - Suddenly to become bewildered, they say thabbibbu.

Eg: Shivappa bewildered and forgot words. People were laughing like anything.



520. ತಮಟೆ: ಪ್ರಾಣಿಯ ಚರ್ಮದಿಂದ ತಯಾರಿಸಿದ ಒಂದು ವಿಧವಾದ ವಾದ್ಯಕ್ಕೆ **ತಮಟೆ** ಎಂದು ಹೇಳುತ್ತಾರೆ. ಹಳ್ಳಿಯ ಶ್ಯಾನುಭೋಗರು ಯಾವುದಾದರೂ ವಿಶೇಷ ಸಂಗತಿಯನ್ನು ಹಳ್ಳಿಯ ನಿವಾಸಿಗಳಿಗೆಲ್ಲ ತಿಳಿಯಪಡಿಸಬೇಕಾದರೆ, ತಮಟೆಯನ್ನು ಟಾಂಟಾಂಹೊಡೆಸಿ ತಳವಾರನ ಮೂಲಕ ತಿಳಿಸುತ್ತಿದ್ದರು. ಅವನು ದಾರಿಯುದ್ದಕ್ಕೂ ತಮಟೆ ಬಾರಿಸಿಕೊಂಡು ವಿಷಯವನ್ನು ಹೇಳುತ್ತಾನೆ. ಅದನ್ನು ಡಂಗುರ ಸಾರುವುದು ಎಂದೂ ಹೇಳುತ್ತಾರೆ.

ಉದಾ: ಕೇಳ್ರಪ್ಪೋ ಕೇಳ್ರೀ. ಕೆರೆಯ ನೀರಿಗೆ ಒಂದೆರಡು ಪ್ರಾಣಿಗಳು ಬಿದ್ದು ಸತ್ತುಹೋಗಿವೆ. ಕೆರೆಯ ನೀರನ್ನು ಶುದ್ಧಿಮಾಡುವವರೆಗೂ ಯಾರೂ ಒಂದು ತಿಂಗಳವರೆಗೆ ಉಪಯೋಗಿಸಬಾರದು ಎಂದು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಹೇಳಿ ತಮಟೆ ಬಾರಿಸಿ ಡಂಗುರ ಸಾರುತ್ತಾನೆ.

<thamaTe> (-) A drum made of leather - An instrument made of skin of an animal is called Thamate. If Shanbhog wants to announce any special news to residents of the village, he used to get it done through beating of the instrument. The announcer will beat the thamate throughout the road and announce the news. They also say Dangura saruvudu (Announcing through drum beating.

Eg: Hear, hear, one or two animals have fallen into the tank and died, saying loudly. Till the tank water is cleaned nobody should use the water for one month, beats the drum and announce.

521. ತರಗು: ಒಣಗಿದ ಬಾಳೆಎಲೆಗೆ **ತರಗು** ಎನ್ನುತ್ತಾರೆ. ತರಗನ್ನು ತಿಂಗಳಾನುಗಟ್ಟಲೆ ಕೂತುಕೊಳ್ಳುವ ಮರದ ಮಣೆಯನ್ನು ಅದರ ಮೇಲೆ ಹೇರಿ ಇಟ್ಟಿರುತ್ತಾರೆ. ತರಗಿನಿಂದ ದೊನ್ನೆಯನ್ನು ಮಾಡುತ್ತಾರೆ. ದೊನ್ನೆ ತಯಾರು ಮಾಡುವುದು ಗ್ರಾಮ ಕೈಗಾರಿಕೆಗಳಲ್ಲೊಂದಾಗಿದೆ.

ಉದಾ: ತರಗೆಲ್ಲ ಮುಗಿದೋಗಿದೆ. ತ್ವಾಟದಿಂದ ಬರುವಾಗ ತರಗು ತಂದರೆ ದೊನ್ನೆ ಹಚ್ಚಬಹುದು.

<tharagu> Dried plantain leaf - They call it as tharagu for dried plantain leaf. They keep the leaves for months together putting a heavy wooden plank. Prepare donne (a kind of cup) made of plantain leaf. Preparing donne is one of the village craft.

Eg: Tharagu is fully exhausted. While coming from garden if you bring, can make donne.

522. ತಲೆಕೆಳಗಾಗು: ನಾವು ಊಹೆಮಾಡಿದಂತೆ ಕೆಲಸಕಾರ್ಯಗಳು ನಡೆಯದೇ ಹೋದಾಗ **ತಲೆಕೆಳಗಾಗು** ಎನ್ನುವ ಪದವನ್ನು ಬಳಸುತ್ತಾರೆ. **ತಿರುಗಮುರುಗ** ಎಂದೂ ಹೇಳುತ್ತಾರೆ.

ಉದಾ: ಏನಣ್ಣಾ ನಾವು ಯೋಚಿಸಿದ್ದೇ ಒಂದು ಅದು ಆದದ್ದೇ ಒಂದು. ಎಲ್ಲಾ ತಲೆಕೆಳಗಾಗೋಯ್ತು.

<thalekeLagaagu> If the work cannot come through as expected they use the word thalekelagagu.

They also say thirugamuruga (inverted order).

523. ತಲೆಗೆಡಿಸು: ಬುದ್ಧಿ ಭ್ರಮಣೆಯಾಗುವಂತೆ ಮಾಡುವುದನ್ನು **ತಲೆಗೆಡಿಸುವುದು** ಎನ್ನುತ್ತಾರೆ.

ಉದಾ: ಆ ಹುಡುಗನಿಗೆ ಸಿನೇಹಿತರೆಲ್ಲ ಸೇರಿಕೊಂಡು ಇಲ್ಲದ್‌ಸಲ್ಲದ್ ಹೇಳಿ ತಲೆಗೆಡಿಸಿದ್ದಾರೆ. ಪಾಪ, ಬೆಳಗಿಂದ ಸಂಜೇವರೆಗೂ ತ್ವಾಟದ ಮುಂದೆ ತಲೆಗೆಡಿಸಿಕೊಂಡು ಕುಂತಿರ್ತಾನೆ.

<thalegedisu> Inverted order - To cause to be agitated they say thalegedisu.

Eg: For that boy, all his friends together have told unnecessary things and have caused him to get agitated. Poor boy from morning to evening will be sitting in front of garden agitated.

524. ತಲೆಬಿಸಿ: ಯಾವುದಾದರೂ ಕಾರಣದಿಂದಾಗಿ ಯೋಚನೆಮಾಡುವುದಕ್ಕೆ ಶುರುಮಾಡಿದರೆ **ತಲೆಬಿಸಿಯಾಗಿದೆ** ಎನ್ನುತ್ತಾರೆ.

ಉದಾ: ಮಗಳಿಗೆ ವಯಸ್ಸಾಗ್ತಾಬಂತು, ಇನ್ನೂ ಯಾವುದೂ ಗಂಡು ಗೊತ್ತಾಗಿಲ್ಲ. ರಾಮಯ್ಯ ತಲೆಬಿಸಿಮಾಡ್ಕಂಡವ್ನೆ.

<thalebisi> Annoyance - If you start thinking for any reason, they say thalebisiyagide.

Eg: Daughter is getting aged. No boy is settled. Ramayya thalebisimadkandavne (worried).

525. ತವುಡು: ಭತ್ತದ ಸಿಪ್ಪೆಯನ್ನು ಬೇರೆ ಮಾಡಿದ ನಂತರ ಅಕ್ಕಿಯನ್ನು ಅನ್ನ ಮಾಡುವುದಕ್ಕೆ ಉಪಯೋಗಿಸಲು ಬಹಳ ಒರಟಾಗಿರುತ್ತೆ. ಅಕ್ಕಿಯನ್ನು ಒನಕೆಯಿಂದ ಇನ್ನೊಂದುಬಾರಿ ತಳಿಸಿದಾಗ ಬರುವ ಹೊಟ್ಟನ್ನು **ತವುಡು** ಎಂದು ಹೇಳುತ್ತಾರೆ. ಅಕ್ಕಿ, ಗೋಧಿ, ಹೆಸರುಕಾಳು ಮುಂತಾದುವುಗಳಿಂದ ಬರುವ ತವುಡನ್ನು ಕಲಗಚ್ಚಿನೊಂದಿಗೆ ಬೆರೆಸಿ ದನಕರುಗಳಿಗೆ ಆಹಾರವಾಗಿ ಕೊಡುತ್ತಾರೆ. **ಬೂಸ** ಎಂದೂ ತೌಡಿಗೆ ಹೇಳುತ್ತಾರೆ.

ಉದಾ: ದನಗಳಿಗೆ ತೌಡು ಹಾಕಬೇಕು.

ಪದರೂಪ: ತೌಡು (ತವುಡು)

<thavuDu> Husk of grains - After separating the paddy skin rice will be too rough to bake. When again pounding the rice with wooden stick, the powder we get is called thavudu. Powder we get out of rice, wheat, green gram etc. mixing with rice water (kalagachhu) they feed the cows as food. They call thavudu as boosa also.

Eg: Must put thavudu to cows.

Different version: Thoudu (thavudu)

526. ತಲಾತಟ್ಟಿ: ತಮಗೆ ತೋಚಿದಂತೆ ಒಬ್ಬೊಬ್ಬರು ಒಂದೊಂದು ಮಾತನ್ನು ಆಡುವುದಕ್ಕೆ **ತಲಾತಟ್ಟಿ ಮಾತಾಡ್ತಾನೆ** ಅಂತಾರೆ.

ನೋಡಿ: ಅಂತೆಕಂತೆ

<thalaathaTTi> Talk irrelavently - Each one to talk as he feels they say talatatti talks.

See: Anthekanthe

527. ತಳಮಳ: ನೋಡಿ: ತಬ್ಬಿಬ್ಬು

<thaLamaLa> See: Thabbibbu

528. ತಳಿಸು: ನೋಡಿ: ತವುಡು

<thaLisu> See: Thavudu




529. ತಾಟಿನಿಂಗು: ತಾಟಿನಿಂಗು ಎಳನೀರಿನ ಹಾಗೆಯೆ ಹೇರಳೆಹಣ್ಣಿನ ಗಾತ್ರವಾಗಿದ್ದು ಗೊಂಚಲು ಗೊಂಚಲಾಗಿ ಮರದಲ್ಲಿ ಬಿಡುತ್ತದೆ. ಹೆಚ್ಚಿದರೆ ಒಳಗೆ ಎಳೆಯ ತಿರುಳು ಎರಡು ಮೂರು ತೊಳೆ ಇರುತ್ತೆ. ತಿನ್ನಲು ಬಹಳ ರುಚಿ. ಬೇಸಿಗೆಯಲ್ಲಂತು ಇದರ ವ್ಯಾಪಾರ ಹೆಚ್ಚಿರುತ್ತೆ. ಇದರಿಂದ ಬೆಲ್ಲವನ್ನು ತಯಾರಿಸುತ್ತಾರೆ. ಇದಕ್ಕೆ **ತಾಟಿಬೆಲ್ಲ** ಎಂದು ಹೆಸರು.

ಉದಾ: ಕೊಪ್ಪರಿಗೆ ತುಂಬ ತಾಟಿಬೆಲ್ಲ ತುಂಬಿದೆ.

<thaaTiningu> Type of coconut - Thatiningu just like tender coconut, size of a herale fruit, grows in bunches. When cut there will be two or three tender pulps inside. It is tasty to eat. Sale of this will be more during summer. They prepare jaggery out of this. It is known as Thatibella (Jaggery made of palm sap).

Eg: Kopparige is full of Thatibella.



530. ತಾಯಿತ: ಮಕ್ಕಳು ಏನನ್ನಾದರು ನೋಡಿ ಹೆದರಿಕೊಂಡಾಗ ಶಾಸ್ತ್ರಿಗಳಿಂದ **ತಾಯಿತ**ವನ್ನು ಕಟ್ಟಿಸುತ್ತಾರೆ. ತೆಳ್ಳಗಿರುವ ತಾಮ್ರದ ತಗಡಿನ ಮೇಲೆ ಮಂತ್ರವನ್ನು ಬರೆದು, ದೇವರೆದುರಿಗಿಟ್ಟು, ಸಾಂಬ್ರಾಣಿ ಧೂಪವನ್ನು ಹಾಕಿ, ತಗಡನ್ನು ಸುರುಳಿಯಾಗಿ ಸುತ್ತಿ ತಾಮ್ರ ಅಥವಾ ಬೆಳ್ಳಿಯ ಕೊಳವೆಯೊಳಕ್ಕೆ ಸೇರಿಸಿ, ಮಕ್ಕಳ ಕೊರಳಿಗೆ ಅಥವಾ ಕೈಗೆ ಕಟ್ಟಿಸುತ್ತಾರೆ. ಅದಕ್ಕೆ **ತಾಯಿತ** ಎಂದು ಹೆಸರು. ಅನುಕೂಲಸ್ಥರು ಬೆಳ್ಳಿಯ ತಾಯಿತ ಬಳಸುತ್ತಾರೆ. ತಾಯಿತದ ಪ್ರಭಾವದಿಂದ ಮಕ್ಕಳ ಭಯ ದೂರವಾಗುತ್ತೆ.

ಉದಾ: ಮಗು ತುಂಬಾ ಹೆದರಿದೆ. ಶಾಸ್ತ್ರಿಗಳ ಮನೆಗೆ ಹೋಗಿ ತಾಯಿತ ಕಟ್ಟಿಸು.

<thaayitha> Amulet - If children are feared seeing something, they get tied thayitha from priest. Writing the auspicious hymns

on a thin copper sheet, putting before Deity, with fumes of a kind of fragrant substance, rolling the sheet as coil, put inside a tube of copper or silver, get it tied to the neck or hand of children. It is called Thayitha (coil made of copper or silver thin sheet). Rich people use silver coil. With influence of Thayitha, the children's fear will diminish.



531. ತಾಲಿಪಿಟ್ಟು: ಅಕ್ಕಿಹಿಟ್ಟನ್ನು ನೀರಿನಲ್ಲಿ ಕಲಸಿ, ಉಪ್ಪು, ಹಸಿ ಮೆಣಸಿನಕಾಯಿ, ಕೊತ್ತುಂಬರಿಸೊಪ್ಪು ಹಾಕಿ ಕಾವಲಿಯ ಮೇಲೆ ತಟ್ಟಿ ಬೇಯಿಸಿದರೆ ತಾಲಿಪಿಟ್ಟು ಆಗುತ್ತೆ. ಜೊತೆಗೆ ಹಸಿ ಅವರೆಕಾಳನ್ನು ಬೆರೆಸಿದರೆ ಇನ್ನೂ ರುಚಿ. ಕೆಲವು ವಯಸ್ಸಾದವರು ರಾತ್ರೆ ಊಟದ ಬದಲು ತಾಲಿಪಿಟ್ಟನ್ನು ಉಪಾಹಾರವಾಗಿ ತೆಗೆದುಕೊಳ್ಳುತ್ತಾರೆ. ಅಕ್ಕಿರೊಟ್ಟಿಯನ್ನು ಬಾಳೆ ಎಲೆ ಮೇಲೆ ತಟ್ಟಿ, ಮೇಲ್ಭಾಗಕ್ಕು ಬಾಳೆ ಎಲೆಯನ್ನು ಮುಚ್ಚಿ, ಇಜ್ಜಲು ಕೆಂಡದ ಮೇಲೆ ಸುಟ್ಟರೆ ಅದು ಕೆಂಡರೊಟ್ಟಿ ಎನಿಸುತ್ತದೆ. ಕೆಂಡರೊಟ್ಟಿ ಮಾಡುವಾಗ ಅಕ್ಕಿಹಿಟ್ಟಿನ ಜೊತೆಗೆ ಮೂಲಂಗಿ ತುರಿಯನ್ನು ಬೆರೆಸಿದರೆ ಒಳ್ಳೆಯ ರುಚಿ ಬರುತ್ತೆ.

ಉದಾ: ರಾತ್ರೆ ಫಲಹಾರಕ್ಕೆ ತಾಲಿಪಿಟ್ಟು ಮಾಡ್ಬಿಡಿ.

ನೋಡಿ: ಅಕ್ಕಿರೊಟ್ಟಿ, ಕೆಂಡರೊಟ್ಟಿ

<thaalipiTTu> Rice roti - Rice flour blended in water, mixing with salt, greenchilly, coriander leaf and baked on pan is Thalipittu. If added green papadi, it will be tasty. Some elderly people for night dinner they take thalipittu. If putting rice roti flour on plantain leaf, on top also covered with plantain leaf and burnt on charcoal fire, is called Kendarotti. While making kendarotti if grated radish is added to the flour it gives a better taste.

*Eg: For night phalahara, make thalipittu***.**

See: Rice roti, Kendarotti

532. ತಾಳ: ದಾಸರು ಹರಿಕಥೆ ಮಾಡುವಾಗ ಅಥವಾ ದೇವಸ್ಥಾನಗಳಲ್ಲಿ ಭಜನೆ ಮಾಡುವಾಗ ಹಾಡಿಗೆ ಶ್ರುತಿಗೂಡಿಸುವುದಕ್ಕಾಗಿ ಉಪಯೋಗಿಸುವ ಒಂದು ವಾದ್ಯಕ್ಕೆ



ತಾಳ ಎನ್ನುತ್ತಾರೆ. ಇದನ್ನು ಕಂಚಿನಲೋಹದಿಂದ ತಯಾರಿಸುವುದು. ಎರಡು ಕೈಗಳಿಂದಲೂ ತಾಳವನ್ನು ಒಂದಕ್ಕೊಂದು ತಗಲುವಂತೆ ಬಡಿದರೆ ಶಬ್ದವಾಗುತ್ತೆ. ಹಾಡಿಗೆ ಹೊಂದಿಕೊಳ್ಳುವಂತೆ ಅದರ ಶಬ್ದವನ್ನು ಸರಿಪಡಿಸಿಕೊಳ್ಳಬಹುದು.

ಉದಾ: ಹೊಟ್ಟೆ ತಾಳ ಹಾಕ್ತಿದೆ

ಉದಾ: ತಾಳ ಹಾಕುತ್ತಾ ಹಾಡು ಹಾಡುತ್ತಾ ದಾಸರು ಬರುತ್ತಾರೆ.

ನೋಡಿ: ಹರತಾಳ (ಹರಿತಾಳ)

<thaaLa> (-) An instrument used while reciting Harikathas - Vaisnava religious mendicant while reciting harikatha or in temples while doing bhajan, to add tune to the songs, the instrument used is called thala. This is made of bronze. If beaten with both hands it makes sound. That can be adjusted to coincide to the song.

Eg: Stomach is making thala.

Eg: Beating thala and singing song, dasar comes.

See: Hartala (haritala)

533. ತಾಳೆನೋಡು: ಒಂದರೊಡನೆ ಇನ್ನೊಂದನ್ನು ಹೋಲಿಸಿ ನೋಡುವುದಕ್ಕೆ ತಾಳೆನೋಡು ಅಥವಾ ತಾಳೆಹಾಕು ಎನ್ನುವುದು ರೂಢಿ.


ಉದಾ: ಮೂರು ನಾಲ್ಕನ್ನು ಒಟ್ಟಾಗಿ ಇಟ್ಕಂಡು ತಾಳೆಹಾಕು, ಪರಸ್ಪರ ಹೊಂದಾಣಿಕೆಯಾದರೆ, ಯಾವುದಾದರು ಇತ್ಯರ್ಥ ಮಾಡಬಹುದು.

<thaaLenoDu> Comparison - To compare with one another, thalenodu or thalehaku is in vogue.

Eg: Keep three or four together and compare. If concorded with each other, we can decide.

534. ತಾಳೇಗರಿ: ತಾಳೇಗರಿ ಒಂದು ವಿಧವಾದ ಮರದ ಎಲೆ. ಆ ಮರ ತೆಂಗಿನಮರದಂತೆಯೆ ಇರುತ್ತೆ. ಅದರ ಉದ್ದನೆ ಎಲೆಗಳನ್ನು ಒಣಗಿಸಿ ಕಾಗದದಂತೆ ಬರೆಯಲು ಉಪಯೋಗಿಸುತ್ತಿದ್ದರು. ಅದರ ಮೇಲೆ ಮಸಿಯಿಂದ ಗ್ರಂಥಗಳನ್ನು ಬರೆಯುತ್ತಿದ್ದರು. ಅದು ಸುಮಾರು ಮೂರು ಅಂಗುಲ ಅಗಲ, ಹನ್ನೆರಡು ಅಂಗುಲ ಉದ್ದದ ಎಲೆ. ಅದರ ಒಂದು ತುದಿಗೆ ರಂಧ್ರವನ್ನು ಮಾಡಿ ದಾರದಿಂದ ಇಪ್ಪತ್ತು

ಮುವ್ವತ್ತು ಎಲೆಗಳನ್ನು ಒಟ್ಟಿಗೆ ಕಟ್ಟುತ್ತಿದ್ದರು. ಅನಂತರ ರೇಷ್ಮೆ ಬಟ್ಟೆಯನ್ನು ಸುತ್ತಿ ಜೋಪಾನ ಮಾಡುತ್ತಿದ್ದರು. ವರ್ಷಾನುಗಟ್ಟಲೆ ಇಟ್ಟರೂ ತಾಳೇಗರಿ ಹಾಳಾಗುತ್ತಿರಲಿಲ್ಲ. ಬುಕ್ಕಾಂಬುಧಿಯಲ್ಲಿ ಉಪಾಧ್ಯಾಯರಾಗಿದ್ದ ಅನಂತಯ್ಯನವರ ಮನೆಯಲ್ಲಿ ಸಂಸ್ಕೃತಶ್ಲೋಕಗಳನ್ನು ಬರೆದ ತಾಳೇಗರಿಗಳು ಇದ್ದುವು.



ಉದಾ: ಕುಮಾರವ್ಯಾಸಭಾರತದ ತಾಳೇಗರಿ ಪ್ರತಿಗಳು ಹತ್ತಾರು ನಮ್ಮ ಹಳ್ಳಿಯಲ್ಲಿವೆ.

<thaaLegari> Palm leaf - Thalegari is a kind of tree leaf. That tree is just like coconut tree. Drying long leaves of that tree, they were using to write like paper. It is about three inches width and twelve inches length. Making a hole at one end they were tying twenty to thirty leaves together. Then rolling in silk cloth they were preserving. Keeping for years together, it was not spoiled. In Bukkambudhi, in teacher Ananthiah's house, there were thalegari written with Sanskrit Shlokas.

Eg: Ten or twelve thalegaris with Kumaravyasa Bharat are in our village.

535. ತಿಕ್ಕಲು: ಹುಚ್ಚುಹುಚ್ಚಾಗಿ ಮಾತನಾಡುವವನನ್ನು **ತಿಕ್ಕಲು** ಅನ್ನುತ್ತಾರೆ.

ಉದಾ: ಯಾಕಲಾ ಒಂದೇ ಸಮ ತಿಕ್ಕಲುತಿಕ್ಕಲಾಗಿ ಆಡ್ತಾ ಇದೀಯ, ಬುದ್ಧಿ ಸರಿಯಾಗಿಟ್ಕಂಡು ಕೆಲಸಮಾಡು.

<thikkalu> (-) Person who talks foolishly is called Thikkalu (Mad).

Eg: Why you are talking foolishly throughout. Keep your mind rightly and work.

536. ತಿಥಿಅಡಿಗೆ: ತಿಥಿದಿವಸದ ಊಟಕ್ಕೆ ಮಾತ್ರ ಅಡಿಗೆ ಬಹಳ ವ್ಯತ್ಯಾಸವಾಗಿರುತ್ತೆ. ಆ ದಿನದ ಅಡಿಗೆಗೆ ಬಾಳೆಕಾಯಿ, ಹಾಗಲಕಾಯಿ, ದಿಂಡು, ಬಾಳೆಹೂವು, ಕೆಸವು ಮುಂತಾದ ತರಕಾರಿಗಳನ್ನು ಬಳಸುವುದು ರೂಢಿ. ಇವನ್ನು ಹಬ್ಬಹರಿದಿನಗಳಲ್ಲಿ ಉಪಯೋಗಿಸುವುದಿಲ್ಲ. ಸಾಮಾನ್ಯವಾಗಿ ಲಾಡು, ಚಿರೋಟಿ ಸಿಹಿ ಅಡಿಗೆಯನ್ನು ತಿಥಿ ಊಟಕ್ಕೆ ಮಾಡುವುದಿಲ್ಲ. ತಿಥಿ ಊಟಕ್ಕೆ ಬಳಸುವ ತರಕಾರಿಗಳೆಲ್ಲ ನಮ್ಮ ದೇಶದ್ದು.

ಟೊಮ್ಯಾಟೊ, ಸೀಮೆಬದನೆ ಮೊದಲಾದ ತರಕಾರಿಗಳನ್ನು ಬಳಸುವುದಿಲ್ಲ. ತಿಥಿ ಊಟವೆಂದರೆ, ಉದ್ದಿನವಡೆ, ರವೆಉಂಡೆ ಗಂಡಸಿನ ತಿಥಿಗೆ, ಹೆಂಗಸಿನ ತಿಥಿಗೆ ಕಡಲೆಬೇಳೆ ಆಂಬೊಡೆ, ಕಾಯೊಬ್ಬಟ್ಟು.

ಉದಾ: ನಾಳೆ ತಿಥಿಗೆ ಬಾಳೆದಿಂಡು ಬೇಕು ಅಂತ ತೋಟರಾಮಪ್ಪನಿಗೆ ಹೇಳು.

<thitthiaDige> Dishes prepared on death ceremony - Food will be quite different for lunch on death ceremony day. For that day food, raw banana, bitter gourd, tender plantain stem and plantain flower etc. vegetables are commonly used. These are not used on auspicious ceremonies. Generally, sweets like laddu, Chiroti are not done for death ceremony lunch. All vegetables used for death ceremony lunch are from our country. Tomato, Simebadane etc. vegetables are not used. Death Ceremony lunch means, Urd dal vada, rava unde (made of fine soji) for death ceremony of male, gram dal vada and kayobbattu for female.

Eg: For tomorrow ceremony, tell Thota Ramappa tender plantain stem is required.

537. ತಿದಿ: ಕಮ್ಮಾರ ಕಬ್ಬಿಣಕಾಯಿಸಲು ಒಲೆಯಬೆಂಕಿಯನ್ನು ಉರಿಸಲು ಗಾಳಿ ಊದುವ ಚರ್ಮದ ಪದರಗಳ ಚೀಲ. ಇದನ್ನು **ತಿದಿ** ಎನ್ನುತ್ತಾರೆ. ಇದನ್ನು ಒತ್ತಿದಾಗ ಗಾಳಿ ಬಂದು ಕುಲುಮೆಯ ಬೆಂಕಿಯನ್ನು ಉಜ್ವಲಗೊಳಿಸುತ್ತದೆ.

ನೋಡಿ: ಅಡಿಪಾಯ

<thiDi> (-) Bag made of animal skin - The blacksmith for heating iron, to make fire to blow wind use the bag made of layers of animal skin is called Thidi. When it is pressed, it makes fire burning brightly.

See: Adipaya

538. ತಿಪ್ಪರಲಾಗ: ಕೆಲಸವನ್ನು ಶತಾಯಗತಾಯ ಸಾಧಿಸುವುದಕ್ಕಾಗಿ ಮಿತಿಮೀರಿದ ಪ್ರಯತ್ನ ಮಾಡುವುದನ್ನು ಅಥವಾ ಅದಕ್ಕಾಗಿ ಹೆಣಗುವುದನ್ನು ತಿಪ್ಪರಲಾಗ ಎನ್ನುವುದು ರೂಢಿ.ಉದಾ: ಅವನು ಎಷ್ಟೇ ತಿಪ್ಪರಲಾಗ ಹಾಕಿದರೂ ನಾನೇನು ಬೆದರುವ ಮನುಷ್ಯನಲ್ಲ.

<thiparalaaga> Strenuous effort - To work over hard to see that work is completed somehow, or to strive hard they say thipparalaga.

Eg: Whatever efforts he makes I am not a man to fear.

539. ತಿಪ್ಪೆಗುಂಡಿ: ದನಕರುಗಳ ಸಗಣಿ, ಗಂಜಲ, ಹುಲ್ಲು, ಕಸಕಡ್ಡಿಗಳನ್ನು ಒಂದು ಕಡೆ ಸೇರಿಸಿರುವ ಜಾಗಕ್ಕೆ ತಿಪ್ಪೆಗುಂಡಿ ಎನ್ನುತ್ತಾರೆ. ಇವೆಲ್ಲವೂ ಚೆನ್ನಾಗಿ ಕೊಳೆತು ಹಸನಾದ ಗೊಬ್ಬರವಾಗುತ್ತೆ. ತಿಪ್ಪೆಗುಂಡಿಯಿಂದ ಆರು–ಏಳು ತಿಂಗಳಿಗೊಮ್ಮೆ ಗೊಬ್ಬರವನ್ನು ಹೊರಕ್ಕೆ ತೆಗೆಯುತ್ತಾರೆ. ಸಗಣಿಯನ್ನು ಬಿದಿರಿನ ಮಂಕರಿಯಲ್ಲಿ ತುಂಬಿ ಹೊರಕ್ಕೆ ತೆಗೆದರೆ ಅದು ತೊಪ್ಪೆ ಎನಿಸುತ್ತದೆ.

ಉದಾ: ಆ ತರಕಾರಿಸಿಪ್ಪೆನೆಲ್ಲ ತಿಪ್ಪೆಗುಂಡಿಗೆ ಹಾಕು.

ನೋಡಿ: ಕುಳ್ಳು, ಬೆರಣಿ

<thippegunDi> Manure pit - The place where cow dung, urine, grass, all wastes are put is called thippegundi. All these get decayed and becomes proper manure. Once in six or seven months, they take out the manure from the pit. If filling cow dung in bamboo basket and take out it is called thoppe (lump of cow dung).

Eg: All that vegetable waste, put it into manure pit.

See: Kullu, Berani.

540. ತೀರ್ಥ: ನೋಡಿ: ಪ್ರಸಾದ

<theertha> See: Prasada

541. ತೀರಿಹೋಗು: ಎಲ್ಲ ಮುಗಿದುಹೋಗಿದೆ ಎಂದು ಹೇಳುವುದಕ್ಕೆ **ತೀರಿಹೋಗಿದೆ** ಎನ್ನುತ್ತಾರೆ. ಮನುಷ್ಯನ ಜೀವ ಹೋದಾಗಲೂ ತೀರಿಹೋದ ಎಂಬ ಪದವನ್ನೇ ಬಳಸುತ್ತಾರೆ.

ಉದಾ: ನಮ್ಮ ತಾತ ನಿನ್ನೆ ತೀರಿಕೊಂಡರು.

<theerihoogu> Die - To express all are finished, they say theerihogide (end). When man dies also, they use the word theerihoda.

Eg: Our grandfather died yesterday.

542. ತುಂತುರುಮಳೆ: ನೋಡಿ: ಹನಿಮಳೆ, ಸೋನೆಮಳೆ, ಕುಂಭದ್ರೋಣಮಳೆ, ಜಿಟಿಜಿಟಿಮಳೆ

<thunthurumaLe> See: Hanimale, Sonemale, Kumbhadrona male, jitijitimale.

543. ತುಂಬೆಗಿಡ: ಇದು ಒಂದು ಜಾತಿಯ ಚಿಕ್ಕ ಹೂವಿನ ಗಿಡ. ತುಂಬೆಹೂವು ಈಶ್ವರನಿಗೆ ಬಹಳ ಪ್ರೀತಿಯ ಹೂವೆಂದು ಜನರ ನಂಬಿಕೆ. ಬಿದ್ದು ಪೆಟ್ಟಾದಾಗ ಆಗುವ ರಕ್ತಸ್ರಾವವನ್ನು ನಿಲ್ಲಿಸಲು **ತುಂಬೆ**ಸೊಪ್ಪಿನ ರಸವನ್ನು ಹಚ್ಚುತ್ತಾರೆ.

ಉದಾ: ಎರಡುಹಿಡಿಯಷ್ಟು ತುಂಬೆಸೊಪ್ಪನ್ನು ತಂದರೆ ಒಂದೇ ನಿಮಿಷದಲ್ಲಿ ರಕ್ತವನ್ನು ನಿಲ್ಲಿಸಲು ಸಾಧ್ಯ.

<thumbegiDa> A kind of plant with small flowers - This is a kind of small flower plant. It is the belief of people that this flower is very much liked for Eashwara. To control blood when you fall, they smear the juice of leaves of this plant.

Eg: If you bring two handful of thumbe leaves, it is possible to control blood within a minute.

544. ತುಟ್ಟಿ: ದವಸ ಧಾನ್ಯಗಳ ಬೆಲೆ ಹೆಚ್ಚಾಗುವುದನ್ನು **ತುಟ್ಟಿ** ಎಂದು ಹೇಳುವ ಪದ ರೂಢಿಯಲ್ಲಿದೆ.

ಉದಾ: ಹೋದ ವಾರದ ಸಂತೇಲಿ ಎಲ್ಲ ಬೇಳೆಗಳ ಧಾರಣೆಯು ತುಟ್ಟಿಯಾಗಿತ್ತು. ಈ ವಾರ ಸ್ವಲ್ಪ ಸುಧಾರಿಸಿದೆ.

ನೋಡಿ: ದುಬಾರಿ

<thutti> Excess of price - For price rise of groceries, the word thutti is in vogue.

Eg: Last week in fair market, price of all dals was very high. This week slightly recovered.

545. ತುಳಸೀಕಟ್ಟೆ: ಮನೆಯ ಮುಂಭಾಗದಲ್ಲಿ ತುಳಸಿಗಿಡದ ಸುತ್ತ ಕಟ್ಟಿರುವ ಕಟ್ಟೆಯೆ ತುಳಸಿಕಟ್ಟೆ. ಹಳ್ಳಿಯ ಪ್ರತಿಯೊಂದು ಮನೆಯ ಮುಂದೆಯು ತುಳಸಿಕಟ್ಟೆ ಇರುತ್ತೆ. ತುಳಸಿಕಟ್ಟೆ ಇರುವ ಮನೆಯ ಜನಗಳು ಬಹಳ ಸೌಮ್ಯಸ್ವಭಾವದವರೆಂದು ಹಳ್ಳಿಯವರ ನಂಬಿಕೆ. ತುಳಸಿರಸವನ್ನು ಕೈಔಷಧಿ ಮಾಡುವಾಗ ಬಳಸುತ್ತಾರೆ. ನಗರಗಳಲ್ಲಿ ತುಳಸಿಗಿಡವನ್ನು ಬೃಂದಾವನದ ಆಕಾರದ ಹಿತ್ತಾಳೆ ಕಟ್ಟೆಗಳಲ್ಲಿ ಸಿಕ್ಕಿಸಿ



ಪೂಜಿಸುತ್ತಾರೆ. ಧಾರ್ಮಿಕ ಸಮಾರಂಭಗಳಲ್ಲಿ ಅದನ್ನು ತಂದಿಡುವುದು ಸುಲಭ. ಆದರೆ ಸಾಮಾನ್ಯವಾಗಿ ಕಟ್ಟೆಕಟ್ಟಿ ತುಳಸಿ ಬೆಳಸಿ ಪೂಜಿಸುತ್ತಾರೆ ತುಳಸಿಯಲ್ಲಿ ಕೃಷ್ಣತುಳಸಿ, ಶ್ರೀತುಳಸಿ ಎಂದು ಎರಡು ವಿಧ.

ಉದಾ: ಕಾರ್ತಿಕ ಮಾಸದಲ್ಲಿ ದಿನವೂ ತುಳಸೀಕಟ್ಟೆಯಲ್ಲಿ ದೀಪ ಹಚ್ಚಿಡು ಮಂಗಳಾ.

ನೋಡಿ: ಕೃಷ್ಣತುಳಸಿ, ಶ್ರೀತುಳಸಿ

<thuLasikaTTe> Square pedestal around basil plant - In front of the house, the platform built around the thulasi plant, is thulasikatte. There will be thulasikatte in front of every house in the village. It is the belief of villagers that people who live in houses where thulasikatte is there, are mild minded. In cities they attach thulasi plant in brass platform of a size of Brindavana and worship. It is easy to bring during auspicious occasions. But generally, building platform, growing thulasi plant they worship. Among thulasi, Krishna thulasi, Sree thulasi are two tpes.

Eg: Mangala, in Karthik month, every day put deepa in thulasikatte.


See: Krishna tulasi, Sree thulasi.

546. ತೂಬು: ಗದ್ದೆ, ತೋಟಗಳಿಗೆ ನೀರು ಹಾಯಿಸುವುದಕ್ಕೆ ಕೆರೆಯ ಒಂದು ಭಾಗದಲ್ಲಿ ಮಾಡಿರುವ ರಂಧ್ರಕ್ಕೆ **ತೂಬು** ಎನ್ನುತ್ತಾರೆ. ತೂಬುಗಲ್ಲನ್ನು ಎತ್ತಿ ನೀರನ್ನು ಹೊರಕ್ಕೆ ಬಿಡುವ ಜವಾಬ್ದಾರಿ ಹಳ್ಳಿಯ ನೀರುಗಂಟಿಗೆ ಸೇರಿದ್ದು. ಶ್ಯಾನುಭೋಗರು ಅವನಿಗೆ ಅನುಮತಿ ಕೊಡುತ್ತಾರೆ.

ಉದಾ: ನಮ್ಮ ಹಳ್ಳಿಯ ಕೆರೆಯ ತೂಬು ನೆಲಮಟ್ಟದಿಂದ ಮುವ್ವತ್ತು ಅಡಿ ಎತ್ತರವಾಗಿದೆ.

<thuubu> Sluce of a tank - For watering agricultural field and garden, the hole made at a place of tank is called thoobu. It is the responsibility of village Neeruganti (person appointed for that work) to lift the slab and provide water. Shanbhog will order him.

Eg: Sluce of tank of our village is thirty feet above ground level.



547. ತೇರು: ದೇವರ ಉತ್ಸವವನ್ನು ಮಾಡಲು ಗಟ್ಟಿಯಾದ ಮರದಿಂದ ತಯಾರಿಸಿರುವ ರಥಕ್ಕೆ **ತೇರು** ಎನ್ನುತ್ತಾರೆ. ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಹಳ್ಳಿಗಳಲ್ಲಿ ತೇರು ಮಾಡುವುದು ಪದ್ಧತಿ. ರಥ ಸುಮಾರು 20–25 ಅಡಿ ಎತ್ತರವಾಗಿದ್ದು ನಾಲ್ಕು ಚಕ್ರಗಳಿರುತ್ತವೆ. ದಪ್ಪವಾದ ಹಗ್ಗವನ್ನು ರಥದ ಮುಂಭಾಗದಲ್ಲಿ ಎರಡು ಕಡೆಗೂ ಕಟ್ಟಿ ಹಳ್ಳಿಯವರೆಲ್ಲರೂ ಎಳೆಯುತ್ತಾರೆ. ದೇವಸ್ಥಾನದ ಪಕ್ಕದಲ್ಲಿ ರಥವನ್ನು ಇಡುವುದಕ್ಕೆ ಪ್ರತ್ಯೇಕವಾದ ಜಾಗವಿರುತ್ತೆ. ಅದನ್ನು ತೇರುಮನೆ ಎಂದು ಹೇಳುತ್ತಾರೆ.

ಉದಾ: ನಮ್ಮೂರಲ್ಲಿ ಷಷ್ಟಿಗೆ ಬೆಳ್ಳಿತೇರು ಇದೆ, ಹೋಗೋಣ.

ನೋಡಿ: ಬೆಳ್ಳಿರಥ

<theeru> (-) Decorated chariot made of hard wood to carry an idol of Deity in procession is called Theru. Generally, it is customary to arrange car festival once a year in villages. The chariot will be 20-25 feet height with four wheels. Tying a thick rope on either side in front all the villagers will pull. To keep the chariot there will be a separate place by the side of temple., They say it is chariot house.

Eg: In our village on Shashti there is Silver car festival. Let us go.

See: Belli ratha (Silver chariot)

548. ತೇಪೆ: ಚಿಂದಿಚಿಂದಿಯಾಗಿ ಹರಿದು ಹೋಗಿರುವ ಬಟ್ಟೆಗಳ ಚೂರುಗಳನ್ನು ಒಂದಕ್ಕೊಂದು ಜೋಡಿಸಿ ಹೊಲಿಯುವುದಕ್ಕೆ ತ್ಯಾಪೆ ಎಂದು ಹೇಳುತ್ತಾರೆ. ಹಾಗೆ ತ್ಯಾಪೆಹಾಕಿರುವ ಬಟ್ಟೆಗೆ **ದಟ್ಟ** ಎಂದು ಹೆಸರು. ದಟ್ಟ ಸ್ವಲ್ಪ ದಪ್ಪವಾಗಿದ್ದು ಛಳಿಗಾಲದಲ್ಲಿ ಹೊದಿಯಲು ಬೆಚ್ಚಗಿರುತ್ತೆ. ಕೆಲಸವನ್ನು ಸರಿಯಾಗಿ ಮಾಡದಿದ್ದರೆ ಏನಲಾ ಬರೀ ತ್ಯಾಪೆ ಕೆಲಸ ಮಾಡಿದೀಯ ಅಂತಾರೆ (ಗಾದೆ)

ಉದಾ: ಹರಿದ ಹಳೇಬಟ್ಟೆ ಎಲ್ಲ ಇಟ್ಟಿರು, ತ್ಯಾಪೆಹಾಕ್ತೀನಿ.

ಪದರೂಪ: ತೇಪೆ (ತ್ಯಾಪೆ)

<theepe> Patch work - Pieces of cloth to join one with another and stitch is called Thyape. Like that, cloth put with thyape is called Datta. Datta is little thick, quite warm during winter. If work is not done properly, why simply you have done thyape work.

Different version: Thepe (Thyape)

549. ತೇವ: ಒದ್ದೆಯಾಗಿರುವುದಕ್ಕೆ **ತ್ಯಾವ** (ತೇವ) ಎಂದು ಹೇಳುವುದು ರೂಢಿ. ಮಳೆಬಿದ್ದು ತಕ್ಷಣ ಬಿಸಿಲು ಬಾರದೇ ಇದ್ದಾಗ ಜಾಗವೆಲ್ಲ ತುಂಬಾ ತ್ಯಾವವಾಗಿರುತ್ತೆ.

ಉದಾ: ಇರುಚಲು ಮಳೆ ಬಂದು ಗೋಡೆಯೆಲ್ಲ ತ್ಯಾವವಾಗಿದೆ. ಹೊಸಿಲಿನ ಬಳಿ ತುಂಬ ತ್ಯಾವ, ಗೋಣಿತಾಟು ಹಾಕು.

ಉಚ್ಚಾರರೂಪ: ತೇವ (ತ್ಯಾವ)

<theeva> Wet - That which is wet, it is common to say thyava (theva). After fall of rain if no sunlight is there, the place will be more wet.

Eg: With splashing rain walls are wet. Near steps fully wet. Put gonithatu (Coarse cloth).



550. ತೊಂಡೆ: ಕಬ್ಬಿನಲ್ಲಿ ಸಿಹಿಯಾದ ಹಾಲು ತುಂಬಿರುವ ಭಾಗ ಜನಗಳಿಗಾದರೆ, ನೀರು ತುಂಬಿರುವ ಮೇಲ್ಭಾಗ ದನಗಳಿಗಾಗುತ್ತೆ. ಅದಕ್ಕೆ **ತೊಂಡೆ** ಎಂದು ಹೇಳುತ್ತಾರೆ.

ಉದಾ: ಗದ್ದೆಯಿಂದ ಬರುವಾಗ ಎತ್ತುಗಳಿಗೆ ಒಂದು ಹೊರೆ ತೊಂಡೆ ತರಬೇಕು.

<thonDe> (-) Sapless upper part of sugarcane - In sugarcane if the part of sweat juice is for people, the upper part filled with water is for cows. It is called Thonde.

Eg: While coming from field, must bring a bundle of thonde for oxen.

551. ತೊಕ್ಕು: ಹುಣಸೆಕಾಯಿ, ನೆಲ್ಲಿ, ಮಾವಿನಕಾಯಿನಿಂದ ಮಾಡಿದ ಚಟ್ನಿಗೆ ತೊಕ್ಕು ಎಂದು ಹೆಸರು. ಇವುಗಳನ್ನು ಪ್ರತ್ಯೇಕವಾಗಿ ಹೆಚ್ಚಿ ನುಣ್ಣಗೆ ಅರೆದು ಉಪ್ಪು ಬೆರೆಸಿ ಸಣ್ಣ

ಬಿಲ್ಲೆಗಳಂತೆ ಮಾಡಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ತಿಂಗಳಾನುಗಟ್ಟಲೆ ಇಟ್ಟರೂ ಕೆಡುವುದಿಲ್ಲ. ಯಾವಾಗ ಬೇಕಾದರು ತೊಕ್ಕನ್ನು ಸ್ವಲ್ಪಸ್ವಲ್ಪವಾಗಿ ಬಳಸಬಹುದು. ಸ್ವಲ್ಪ ನೀರನ್ನು ಚುಮುಕಿಸಿ ಒಗ್ಗರಣೆ ಹಾಕಿದರೆ ಇನ್ನೂ ರುಚಿ.

ಉದಾ: ತೋಟದಿಂದ ಬರುವಾಗ ಹುಣಸೆಕಾಯಿ ತೊಗೊಂಡ್ಬಾ, ತೊಕ್ಕು ಮಾಡಿಡ್ತೀನಿ.

<thokku> Chutney - a kind of pungent condiment made of raw tamarind, gooseberry, raw mango is called Thokku. Cutting all these separately and grinded smoothly, mixing salt, make small circular shaped pieces, dry in sun. Does not spoil keeping for months together. Can be used little by little any time. If sprinkled a little water and put vagar it will be tasty.

Eg: While coming from garden bring raw tamarind. Keep ready the Thokku.

552. ತೊಟ್ಟಿಮನೆ: ಕೆಲವು ಮನೆಗಳಲ್ಲಿ ಮನೆಯ ಒಳಗೆ ಮಧ್ಯಭಾಗದಲ್ಲಿ ಚಚ್ಚೌಕವಾದ ಕಲ್ಲಿನ ತೊಟ್ಟಿಯನ್ನು ಕಟ್ಟಿಸಿರುತ್ತಾರೆ. ಅದು ಸುಮಾರು ಮೂರು–ನಾಲ್ಕು ಅಡಿ ಆಳವಿರುತ್ತೆ. ಅದರ ಮೇಲ್ಭಾಗಕ್ಕೆ ಛಾವಣಿ ಇರುವುದಿಲ್ಲವಾದ್ದರಿಂದ ಮಳೆಯ ನೀರು, ಬಿಸಿಲು ತೊಟ್ಟಿಗೆ ಬೀಳುತ್ತಿರುತ್ತೆ.

ಉದಾ: ಆ ಮನೆಯಲ್ಲಿ ವಾಸವಾಗಿರುವವರನ್ನು ಗುರ್ತಿಸಬೇಕಾದರೆ, ತೊಟ್ಟಿಮನೆ ಸುಬ್ಬರಾಯರು ಬಂದಿದ್ದಾರೆ ಎಂದು ಹೇಳುತ್ತಾರೆ.

<thoTTimane> (-) Building with a square open in the center - In some of the houses, inside they will have constructed squared stone open yard. It will be about three to four feet depth. Since there will not be ceiling, rainwater and sunlight will fall.

Eg: If you want to identify the persons living in that house, they say, Thottimane Subbaraya has come.

553. ತೊವ್ವೆ: ತೊವ್ವೆಯನ್ನು ತೊಗರಿಬೇಳೆಯನ್ನು ಬೇಯಿಸಿ ಯಾವ ಮಸಾಲ ಪದಾರ್ಥವನ್ನೂ ಹಾಕದೆ ಹಾಗೆಯೆ ಬಡಿಸುವುದು. ಆ ಬೆಂದ ಬೇಳೆಗೆ **ತೊವ್ವೆ** ಎಂದು ಕರೆಯುತ್ತಾರೆ. ಎಲ್ಲ ಊಟದ ಅಡುಗೆಯನ್ನು ಬಡಿಸಿ, ಅನ್ನದ ಮೇಲೆ ಒಂದು ಸೌಟು ತೊವ್ವೆ ಹಾಕಿ, ತುಪ್ಪವನ್ನು ಬಡಿಸಿದ ಮೇಲೆ ಊಟಕ್ಕೆ ಪ್ರಾರಂಭಿಸುತ್ತಾರೆ. ಆ ತುಪ್ಪಕ್ಕೆ ಅಭ್ಯಾರ ಎಂದು ಹೇಳುತ್ತಾರೆ. ಹಬ್ಬದಲ್ಲಿ ತೊವ್ವೆ ಪಾಯಸ ಮಾಡೇ ಮಾಡುತ್ತಾರೆ.

ಉದಾ: ಸಂತೇಲಿ ಹೀರೆಕಾಯಿ ಸಿಕ್ಕರೆ ತತ್ತಾ, ತೊವ್ವೆ ಮಾಡಾವ.

<thovve> (-) Dal prepared by boiled pulses - If you do bake, Tur dal without mixing any spices and serve is called Thovve. After serving all items, putting a pinch of thovve on rice, and pouring ghee, they start eating. That ghee is called Abghaara. During festivals, they do thovve and kheer.

Eg: In fair market if you get heerekai (a kind of vegetable) bring, let us do thovve.

554. ತೊಳಸಂಬಟ್ಟೆ: ಮಾಡುವ ಕೆಲಸ ಸರಿಯಾಗಿ ಆಗದೆ ಅಡ್ಡಾದಿಡ್ಡಿಯಾಗಿದ್ದರೆ, ತೊಳಸಂಬಟ್ಟೆಯಾಗಿದೆ ಎನ್ನುತ್ತಾರೆ.

ಉದಾ: ಏನ್ರಲಾ ಎಲ್ಲ ತೊಳಸಂಬಟ್ಟೆಯಾಗಿದೆ, ಯಾವ ಕಾಲಕ್ಕೆ ಇದನ್ನ ಒಪ್ಪ ಮಾಡೂದು?

ನೋಡಿ: ಅಡ್ಡಾದಿಡ್ಡಿ

<thoLasambaTTe> Mess - If the work is not done properly and becomes helter and skelter, they say tholasambatteyagide.

Eg: What I say, everything has become tholasambatte. When can it be set right?

See: Addadiddi

555. ತೋಟದ ಸಂತರ್ಪಣೆ: ಬಾಳೆ, ಅಡಕೆ, ತೆಂಗು ಮತ್ತು ಮಾವಿನ ತೋಟಗಳಲ್ಲಿ ವರ್ಷಕ್ಕೊಂದಾವರ್ತಿ ಪೂಜೆ ಮಾಡುತ್ತಾರೆ. ಆ ದಿನ ಎಲ್ಲರಿಗೂ ಊಟ. ಅದನ್ನು ತೋಟದ ಸಂತರ್ಪಣೆ ಎಂದು ಹೇಳುತ್ತಾರೆ. ಎಲ್ಲದರ ಉದ್ದೇಶವೂ ಒಂದೇ. ಬೆಳೆದ ದವಸ ಧಾನ್ಯಗಳನ್ನು ತಾನು ಉಪಯೋಗಿಸುವ ಮುಂಚೆ ಇನ್ನೊಬ್ಬರಿಗೆ ಸ್ವಲ್ಪ ಭಾಗವನ್ನು ಕೊಡಬೇಕು. ಇದು ಹಳ್ಳಿಗಾಡುಗಳಲ್ಲಿ ನಡೆದುಬಂದಿರುವ ಸಂಪ್ರದಾಯ. ಅಡಕೆ, ಬಾಳೆತೋಟಗಳಲ್ಲಿ ವರ್ಷದ ಮೊದಲು ಕುಯಿಲು ತೆಗೆದಾಗ ಆ ದಿನ ತೋಟದಲ್ಲಿಯೆ ಊಟಕ್ಕೆ ಏರ್ಪಾಡು ಮಾಡಿರುತ್ತಾರೆ. ಅದಕ್ಕೆ **ತೋಟದೂಟ** ಎಂದೂ ಹೇಳುತ್ತಾರೆ.

ಉದಾ: ಚಿಕ್ಕಂದಿನಲ್ಲಿ ಬುಕ್ಕಾಂಬುಧಿಯಲ್ಲಿ ತೋಟದೂಟ ಮಾಡುತ್ತಿದ್ದ ಸವಿನೆನಪು ಈಗಲೂ ಇದೆ.


<thoTada santharpaNe> Feeding all once a year in

garden - In gardens of Plantain, Areca, Coconut and Mango, they worship once a year. That day feeding for all. They say it is Thotada samaradhane. The aim of all is same. We must offer some groceries grown to others before we consume. This is the tradition followed in villages. In Areca and Plantain gardens, after the first crop is harvested, they will arrange for feeding on that day itself. It is also called thotadoota.

Eg: In my childhood, I still remember the eating of thotadoota.

556. ತೋಪಡಾ: ನೋಡಿ: ಉಜ್ಜುಗೊರಡು

<thopaDaa> See: Ujjugoradu



557. ತೋರಣ: ಮುಖ್ಯವಾದ ಹಬ್ಬಗಳಲ್ಲಿ ಮನೆಯ ಬಾಗಿಲಿಗೆ ಮಾವಿನಎಲೆಗಳನ್ನು ಉಪಯೋಗಿಸಿ **ತೋರಣ** ಕಟ್ಟುತ್ತಾರೆ. ಯಾರ ಮನೆಯಲ್ಲಾದರೂ ಬಾಗಿಲಮೇಲೆ ತೋರಣ ಕಂಡರೆ ಏನೋ ವಿಶೇಷವಿದೆಯೆಂದು ತಿಳಿಯುತ್ತೆ. ಯುಗಾದಿಹಬ್ಬದಲ್ಲಿ ಮಾವಿನತೋರಣದ ಜತೆಗೆ ಬೇವಿನಗೊಂಚಲನ್ನು ತೋರಣದ ಒಕಡೆ ಈಕಡೆ ತೂಗುಹಾಕುತ್ತಾರೆ.

ಉದಾ: ನಾಳೆ ಯುಗಾದಿಹಬ್ಬ, ತೋಟದಿಂದ ಬರುವಾಗ ಎರಡುಕೊಂಗೆ ಮಾವಿನಎಲೆ ತರಬೇಕು ತೋರಣಕಟ್ಟುವುದಕ್ಕೆ.

ನೋಡಿ: ಮಕರತೋರಣ

<thooraNa> (-) Garland of leaves tied in front of the main door - During important festivals they tie mango leaves across the door is Thorana. If you see Thorana on the door of any house, it is understood that there is some special occasion. On Ugadi festival along with mango leaves they hang on neem leaf bunch on either side.

Eg: Tomorrow Ugadi festival. While coming from garden must bring two bunches of mango leaves for tying Thorana.

See: Makarathorana

558. ತೌರುಮನೆ: ತಾಯಿ ಮನೆಗೆ, ಹುಟ್ಟಿದ ಮನೆಗೆ **ತೌರುಮನೆ** ಎಂದು ಹೇಳುವುದು ರೂಢಿ. ತೌರುಮನೆಗೆ ಹೋಗಿ ಬರುವುದೆಂದರೆ ಮದುವೆಯಾದ ಹೆಣ್ಣುಮಕ್ಕಳಿಗೆ ಇನ್ನಿಲ್ಲದ ಸಡಗರ.

ಉದಾ: ಲಲಿತಮ್ಮನಿಗೆ ಈಸಲ ಮೊದಲನೇ ಹೆರಿಗೆ, ತೌರುಮನೆಗೆ ಹೋಗಿದ್ದಾಳಂತೆ.

<thourumane> Native place - For mother's house, born house, it is common to say Thourumane. To go to Thourumane, for married females it is such an enthusiasm.

Eg: For Lalithamma, this is the first delivery. Has gone to Thourumane.

❑

ಥ / Tha

559. ಥಂಡಿ: ಹೊರಗಡೆ ತುಂಬಾ ಥಳಿ ಇದ್ದರೆ **ಥಂಡಿ ಹವಾ (ತಂಪುಹವೆ, ತಂಗಾಳಿ)** ಎಂದು ಹೇಳುತ್ತಾರೆ.

ಉದಾ: ತೋಟಕ್ಕೆ ಹೋಗುವಾಗ ದುಪ್ಪಟಿ ಹೊದ್ಕಂಡ್ ಹೋಗು, ಥಂಡಿ ಜಾಸ್ತಿ ಇದೆ.

<thhanDi> Cold - If there is too much of cold outside, they say thandi hava (thampuhave, thangali) cold weather.

Eg: While going to garden, wear duppati (blanket). Too much of cold.



560. ಥಾಲಿ: ಕಂಚು ಅಥವಾ ಹಿತ್ತಾಳೆಯ ಲೋಹದಿಂದ ಕುಡಿಕೆಯಾಕಾರದಲ್ಲಿ ಮಾಡಿರುವ ಸಣ್ಣ ಪಾತ್ರೆಗೆ **ಥಾಲಿ** ಎನ್ನುತ್ತಾರೆ. ದೇವಸ್ಥಾನದಿಂದ ತೀರ್ಥತರಲು, ದೇವರ ಪೂಜೆಮಾಡಿದಾಗ ತೀರ್ಥಕೊಡಲು ಥಾಲಿ ಬಳಸುತ್ತಾರೆ. ಗಂಗೆಯನ್ನು ಥಾಲಿಯಲ್ಲಿ ಸಂಗ್ರಹಿಸುತ್ತಾರೆ.

ಉದಾ: ಅಡುಗೆಮನೆ ಗೂಡಿನಲ್ಲಿ ಥಾಲಿ ಒಳಗೆ ಹಾಲಿದೆ, ತಗಂಬಾ.

<thaali> (-) Made of bronze or brass in size of a pot, the small vessel is called thali. To bring holy water from temple, to give holy water when worshipping they use Thali. They preserve ganga water in thali.

Eg: In kitchen, there is milk in thali. Bring. ❑

ದ / Da

561. ದಂಡಪಿಂಡ: ನೋಡಿ: ಬ್ರಾಹ್ಮಣರ ಬೈಗುಳ

<danDapindDa> Useless person - See: Brahmanara baigula (vulgar language)

562. ದಂಡೆ: ಬಿಡಿಹೂವನ್ನು ಸರಪಣಿಯಹಾಗೆ ಮಾಲೆಯನ್ನು ಕಟ್ಟುವುದಕ್ಕೆ **ದಂಡೆ** ಎಂದು ಹೇಳುತ್ತಾರೆ. ಮದುವೆ ಸಮಾರಂಭಗಳಲ್ಲಿ ವಧೂವರರ ಕೊರಳಿಗೆ ಹಾಕುವ ಹಾರವನ್ನು ಮಾಡುವುದಕ್ಕೆ ಮಲ್ಲಿಗೆಹೂವಿನ ದಂಡೆಗಳನ್ನು ಬಳಸುತ್ತಾರೆ.

ಉದಾ: ನಾಳೆ ಹೂವಿಳ್ಯ ಮಾಡಬೇಕು, ಸಂಜೆ ಬರುವಾಗ ಹತ್ತು ಮಲ್ಲಿಗೆಹೂವಿನ ದಂಡೆ ತನ್ನಿ.

<danDe> Bunch of flowers - To tie single flower like a garland, they say Dande. During marriage functions, to prepare garland for putting on neck of bride and bridegroom, they use jasmine flower bunches.

Eg: Tomorrow must do Hoovilya. While coming in the evening, bring ten jasmine bunches.

563. ದಫ್ಲ: ಇನ್ನೊಂದು ಬಾರಿ ಎಂದು ಹೇಳುವುದಕ್ಕೆ **ದಫ್ಲ** ಎಂದೂ ಹೇಳುತ್ತಾರೆ.

ಉದಾ: ಅವನೇನಾದರು ಇನ್ನೊಂದು ದಫ್ಲ ನಮ್ಮ ಹಟ್ಟೀಗೆ ಬರಲಿ, ಅವನ್ನ ಇಲ್ಲಾ ಅನ್ಸಿಬಿಡ್ತೀನಿ.

ನೋಡಿ: ಕಿತ

<dafa> One more time - To express one more time they also say DafaL.

Eg: If he comes to our hamlet once more, I will see he is finished.

564. ದಬ್ಬಳ: ಗೋಣಿ ಬಟ್ಟೆಯಿಂದ ಚೀಲಗಳನ್ನು ಹೊಲಿಯಬೇಕಾದರೆ ಅದಕ್ಕೆ ದಪ್ಪವಾಗಿರುವ ಸೂಜಿಯನ್ನು ಉಪಯೋಗಿಸಬೇಕು. ಅದಕ್ಕೆ **ದಬ್ಬಳ** ಎಂದು ಹೆಸರು. ದಬ್ಬಳವನ್ನು ಕಬ್ಬಿಣದ ತಂತಿ ಅಥವಾ ತಾಮ್ರದ ತಂತಿಯಿಂದ ಮಾಡುತ್ತಾರೆ.

ಉದಾ: ಗೋಣಿಚೀಲ ಹೊಲಿಯಬೇಕು, ದಬ್ಬಳ ಮತ್ತು ಹುರಿ ಎಲ್ಲಿದೆ?
ಪದರೂಪ: ದಬ್ಬಳ (ದಬ್ಬಣ)

<dabbala> Long needle - To stitch bags out of jute fibre, thick needle must be used. It is called Dabbala. Dabbala is made of thick iron wire or copper wire.

Eg: Jute bag is to be stitched. Where is Dabbala and thread?

Different version: Dabbala (dabbana)


565. ದಮಡಿ: ಹಿಂದಿನ ಕಾಲದಲ್ಲಿ ರುಪಾಯಿ, ಆಣೆ, ಕಾಸುಗಳಿದ್ದ ಕಾಲದಲ್ಲಿ ಚಲಾವಣೆಯಲ್ಲಿದ್ದ ಒಂದು ನಾಣ್ಯವೇ **ದಮಡಿ**. ದಮಡಿ ಒಂದು ಸಣ್ಣ ನಾಣ್ಯವಾಗಿತ್ತು. ಒಂದು ಗಂಡಾ ಎಂದರೆ ನಾಲ್ಕು ದಮಡಿ, ಒಂದು ದಮಡಿಗೆ ನಾಲ್ಕು ಟೋಲಿ. ಖಂಜರಿಯ ತರಹ ಚಿಕ್ಕ ತಮಟೆಯಂತೆ ಇರುವ ಚರ್ಮದ ವಾದ್ಯಕ್ಕೂ ದಮಡಿ ಎನ್ನುತ್ತಾರೆ. ಭಜನೆಯಾಗುವಾಗ ದಮಡಿಯನ್ನು ಬಳಸುತ್ತಾರೆ.

ಉದಾ: ನೀನು ಇಂಗೇ ಕೆಟ್ಟ ಕೆಲಸ ಮಾಡ್ತಿರು, ಒಂದು ದಮಡಿಯೂ ಕೈಯ್ಯಾಗೆ ಉಳಿಯಾಕಿಲ್ಲ. ನನ್ನ ದಮಡಿ ನಾನು ಖರ್ಚು ಮಾಡೋಕೆ ನಿಂದೇನಲಾ ಹಂಗು (ಗಾದೆ)

ಪದರೂಪ: ದಮ್ಮಡಿ, ದಂಬ್ಡಿ (ದಮಡಿ)

<damaDi> (-) An old coin of lowest value - In olden days when rupee, aane, kaasu was there, the only currency was Damadi. Damadi was a small coin. One ganda means four damadis. For one damadi four tolis. An instrument with skin like Khanjari is also called as Damadi. While doing bhajan, they use damadi.

Eg: If you go on doing this bad work, cannot save a damadi.



566. ದಮ್ಮಸ್ಸು: ಮನೆಗಳನ್ನು ಕಟ್ಟುವಾಗ ನೆಲವನ್ನು ಗಟ್ಟಿಮಾಡಲು ಜಲ್ಲಿ ಮತ್ತು ಗಾರೆಯನ್ನು ಹಾಕಿ ತಟ್ಟುವುದಕ್ಕೆ **ದಮ್ಮಸ್ಸು** ಎನ್ನುತ್ತಾರೆ. ಒಂದು ಅಡಿ ಚಚ್ಚೌಕವಾದ ಕಬ್ಬಿಣದ ಹಲಗೆಯ ಮಧ್ಯದಲ್ಲಿ ತೂತನ್ನು ಮಾಡಿ ಮರದ ಗೂಟವನ್ನು ಸೆಕ್ಕಿಸಿರುತ್ತಾರೆ. ಅದನ್ನು ಹಿಡಿದುಕೊಂಡು ಬಡಿಯುತ್ತಿದ್ದರೆ ನೆಲ ಗಟ್ಟಿಯಾಗುತ್ತೆ.

ಉದಾ: ಆ ಎರಡು ಕೊಠಡಿಯಲ್ಲೂ ದಮ್ಮಸ್ಸು ಮಾಡಬೇಕು.

<dammassu> Making the ground flat by stammering - While building houses to strengthen the floor, use small stones and sand mixed with lime and stamper. One square foot thick iron sheet making hole in center, attach a wooden stick. Holding that if you go on beating floor becomes hard.

Eg: Must do dammassu in those two rooms.

567. ದರಖಾಸ್ತು: ವಾಸ ಮಾಡಲು ಏನೂ ಆದಾಯವಿಲ್ಲದವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ, ಸಾಗುವಳಿ ಮಾಡಿಲ್ಲದೆ ಇರುವ ಜಮೀನನ್ನು ನಿಗದಿಯಾದ ಬೆಲೆಯನ್ನು ಕೊಟ್ಟು ಪಡೆಯುತ್ತಾರೆ. ಅಂತಹ ಅರ್ಜಿಗೆ **ದರಖಾಸ್ತು** ಎಂತಲೂ, ಆ ಜಮೀನಿಗೆ ದರಖಾಸ್ತು ಜಮೀನು ಎಂದೂ ಹೇಳುತ್ತಾರೆ. ಜಮೀನಿನ ಬೆಲೆ ಬಹಳ ಕಡಮೆ ಇರುತ್ತೆ.

ಉದಾ: ಓಣಿ ಮನೆ ಸುಬ್ಬಯ್ಯ ಸರ್ಕಾರಕ್ಕೆ ಅರ್ಜಿ ಹಾಕಿ ಎರಡು ಎಕರೆ ದರಖಾಸ್ತು ಜಮೀನನ್ನು ಗಿಟ್ಟಿಸಿದ.

<darakhaasthu> Application - Persons who have no income, submit appeal to the government, get uncultivated land paying the fixed amount. They say darakhastu for such appeal and for that land as darakhastu land. Price of that land will be very much less.

Eg: Subbayya of that lane house submitted application to government and got two acres darakhastu land.

568. ದರ್ಭೆ: ದರ್ಭೆ ಒಂದು ವಿಧವಾದ ಹುಲ್ಲು. ತುದಿ ಮೊನಚಾಗಿದ್ದು ಸುಮಾರು ಒಂದು ಮೊಳದಷ್ಟು ಉದ್ದವಾಗಿರುತ್ತೆ. ದರ್ಭೆಯನ್ನು ಶುಭ ಮತ್ತು ಅಶುಭ (ತಿಥಿ, ದಹನಕಾರ್ಯ) ಕಾರ್ಯಗಳಲ್ಲಿ ಉಪಯೋಗಿಸುತ್ತಾರೆ.



ಉದಾ: ಕೆರೆ ಏರಿ ಹಿಂಭಾಗದಲ್ಲಿ ದರ್ಭೆ ಹುಲ್ಲು ಚೆನ್ನಾಗಿ ಬೆಳೆದಿದೆ.

<darbhe> (-) Gruss having sharp edge - Darbhe is a kind of grass. Top will be sharp and about one-and-half foot length. They use darbhe in auspicious and inauspicious ceremonies.

Eg: In the back side of raised bank of tank, darbhe grass has grown well.

569. ದಸ್ಕತ್ತು: ರುಜು ಮಾಡುವುದಕ್ಕೆ **ದಸ್ಕತ್ತು (ಸಹಿ, ರುಜು)** ಎಂದು ಹೇಳುತ್ತಾರೆ. ಶ್ಯಾನುಭೋಗರು ರೈತರ ಪರವಾಗಿ ಅರ್ಜಿ, ಪ್ರಮಾಣಪತ್ರಗಳನ್ನು ಬರೆದು ಅವರ ದಸ್ಕತ್ತನ್ನು ಕಡೆಯಲ್ಲಿ ಹಾಕಿಸುತ್ತಾರೆ. ದಸ್ಕತ್ತು ಹಾಕಲು ಬರದೆ ಇದ್ದರೆ ಅವರ ಎಡಗೈ ಹೆಬ್ಬೆಟ್ಟಿಗೆ ಕಪ್ಪು ಮಸಿ ಹಚ್ಚಿ ಹಾಳೆ ಮೇಲೆ ಒತ್ತಿಸುತ್ತಾರೆ. ಶ್ಯಾನುಭೋಗರೆ ಹೆಬ್ಬೆಟ್ಟಿನ ಗುರುತಿನ ಕೆಳಗೆ ರೈತನ ಹೆಸರನ್ನು ಬರೆಯುತ್ತಾರೆ.

ಉದಾ: ರಾಮಪ್ಪ ನಿನಗೆ ದಸ್ಕತ್ತು ಹಾಕಾಕೆ ಬರೋದಿಲ್ಲ, ಹೆಬ್ಬೆಟ್ಟೊತ್ತು.

ಉದಾ: ಶಾಮಾಚಾರ್ರೇ ನಿಮ್ಮದೊಂದು ದಸ್ಕತ್ ಹಾಕಿ

ನೋಡಿ: ಹೆಬ್ಬೆಟ್ಟೊತ್ತು

<daskathhu> Signature - For signing they say daskathhu. Shanbhog on behalf of farmers writes application, certified documents and get their signature in the end. If it is not possible to sign, smearing black ink for his left thumb and get pressed on the paper. Shanbhog himself writes his name below the thumb mark.

Eg: Ramappa, you do not know how to sign. Press your thumb.

See: Hebbettothhu

570. ದಸಿ: ಮೂರು–ನಾಲ್ಕು ಅಡಿ ಉದ್ದದ ಚೂಪಾದ ಕಬ್ಬಿಣದ ಗೂಟಕ್ಕೆ **ದಸಿ** ಎಂದು ಹೇಳುತ್ತಾರೆ. ಸಾವಿರಾರು ತೆಂಗಿನ ಅಥವಾ ಕೊಬರಿಯ ಮೊಟ್ಟೆಯನ್ನು ಸುಲಿಯಲು ಉಪಯೋಗಿಸುತ್ತಾರೆ. ದಸಿಯ ಅರ್ಧಭಾಗವನ್ನು ನೆಲದೊಳಕ್ಕೆ ಹೋಗುವಂತೆ ಹೂಳಿ, ಮೇಲ್ಭಾಗದ ಚೂಪಾದ ಕಡೆಯಿಂದ ಮೊಟ್ಟೆಯನ್ನು



ಸುಲಭವಾಗಿ ಸುಲಿಯುತ್ತಾರೆ. ತೆಂಗು ಅಥವಾ ಅಡಕೆಯ ಮರಗಳಲ್ಲಿ ಹೊಂಬಾಳೆ ಹೊರಟಾಗ ಅದನ್ನು **ದಸಿ** ಎಂದೇ ಕರೆಯುತ್ತಾರೆ. ದಸಿ ಎಂದರೆ ಮರದಶೂಲ ಎಂಬರ್ಥದಲ್ಲಿ ಕನ್ನಡದ ಕಾವ್ಯಗಳಲ್ಲಿ ಬಳಕೆ ಆಗಿದೆ.

ಉದಾ: ಸುಮಾರು ಅರ್ಧಕರ್ಧ ಸೊಸಿಗಳಲ್ಲಿ ದಸಿ ಹೊರಟಿದೆ.

<dasi> (-) Pointed wooden or metal peg - Sharp iron rod of three to four feet length is called Dasi. To peel out skin of thousands of coconut or dry coconuts, they use. Half of that peg is pressed into the ground, from the sharp edge of top, they easily peel the skin. When hombale flower (sheath of coconut or Areca) is sprouted, it is also called dasi. Dasi means, in Kannada poems, it is in usage as sharp wooden peg.

Eg: Almost in half of plants dasi has come up.

571. ದಟ್ಟ: ಉಡುವ ಪಂಚೆ, ಸೀರೆ ಮುಂತಾದುವು ಹರಿದು ಹೋದಾಗ ಅವುಗಳನ್ನು ಒಂದಕ್ಕೊಂದು ಸೇರಿಸಿ ಮಧ್ಯೆ ಮಧ್ಯೆ ಹೊಲಿಗೆಗಳನ್ನು ಹಾಕಿ ಒತ್ತೊತ್ತಾಗಿ ದಪ್ಪವಾಗಿ ಮಾಡಿ ಹೊದಿಯಲು ಕೌದಿಯನ್ನಾಗಿಮಾಡಿ ಉಪಯೋಗಿಸುತ್ತಾರೆ. ಹಳೆಯ ಕಾಲದ ಜನ ಯಾವ ಪದಾರ್ಥವನ್ನೂ ಹಾಳಾಗಲು ಒಪ್ಪುವುದಿಲ್ಲ.

ಉದಾ: ಆ ಹಳೆಬಟ್ಟೆನೆಲ್ಲ ಇಲ್ಲಿ ತಂದ್‌ಹಾಕು, ದಟ್ಟ ಹೊಲ್ಕೊಡ್ತೀನಿ.

ನೋಡಿ: ಕೌದಿ, ಬೊಂತೆ

<daTTa> That which is thick - Dhothi or sarees etc. when torn, they join one to another and stitch in between close by and make thick and use as blanket. People of old tradition do not agree to waste anything.

Eg: Bring all old clothes, I will stitch datta.

See: Koudi, bonthe (cloth made of quilted rags).

572. ದಾಸಯ್ಯ: ದಾಸಯ್ಯ ದೇವರ ಭಕ್ತ. ಹಣೆಗೆ ನಾಮವನ್ನಿಟ್ಟುಕೊಂಡು, ಒಂದು ಕೈಯ್ಯಲ್ಲಿ ಶಂಖ, ಇನ್ನೊಂದು ಕೈಯ್ಯಲ್ಲಿ ಗರುಡಗಂಬ (ಎಣ್ಣೆ, ಬತ್ತಿ ಹಾಕಿ ಉರಿಯುತ್ತಿರುವುದು), ಭುಜಕ್ಕೆ ಜೋಳಿಗೆ, ಇನ್ನೊಂದು ಪಕ್ಕಕ್ಕೆ ಜಾಗಟೆ ಇದೆಲ್ಲವು



ದಾಸಯ್ಯನ ವೇಷಭೂಷಣ. ದಾಸಯ್ಯ ಮನೆಯಿಂದ ಮನೆಗೆ ಹೋಗಿ ಭಿಕ್ಷೆ ಬೇಡುತ್ತಾನೆ. ಕಚ್ಚೆಪಂಚೆ, ಕೋಟು ಧರಿಸಿರುತ್ತಾನೆ.

ಉದಾ: ದಾಸಯ್ಯ ಬಂದಿದಾನೆ ನೋಡು, ಅವನಿಗೆ ಒಂದಿಷ್ಟು ಅಕ್ಕಿ, ಬೆಲ್ಲ ಕೊಡು.

<daasayya> Devotee of Vishnu - Dasayya is devotee of God. Putting naama (a sectarian mark worn on forehead) in one hand Shankha (a kind of shell) in another hand garudagamba (a kind of lamp burning with oil and wick) bag for shoulder, and for the other side jhagate (an instrument), these are the costumes of dasayya. Dasayya goes from house to house and begs for alms, wearing a kaccepanche (hem of a dhothi tucked into the waist).

Eg: See Dasayya has come. Give him some rice and jaggery.


573. ದಾಸಯ್ಯನಿಗೆ ಇಕ್ಕುವುದು: ಮದುವೆ ಸಮಾರಂಭಗಳು ಆಗೆಲ್ಲ ಏಳೆಂಟು ದಿವಸಗಳು ನಡೆಯುತ್ತಿದ್ದವು. ಕೆಲವು ಮನೆತನಕ್ಕೆ ಪಾರಂಪರ್ಯವಾಗಿ ಬಂದ ಒಂದು ವಿಶೇಷ ಸಂಪ್ರದಾಯವೆಂದರೆ **ದಾಸಯ್ಯನಿಗೆ ಇಕ್ಕುವುದು**. ಮದುವೆಗೆ ಮುಂಚೆ ಇಬ್ಬರು ದಾಸಯ್ಯಗಳನ್ನು ಕರೆದುತಂದು ಅವರ ಬವನಾಶಿಯನ್ನು ಬಾಳೇ ಎಲೆಯ ಮೇಲೆ ಇಟ್ಟು ಪೂಜೆ ಮಾಡುತ್ತಾರೆ. ನಂತರ ದಾಸಯ್ಯಗಳು 'ತಿರುಪತಿ ವೆಂಕಟರಮಣಸ್ವಾಮಿ ಪಾದಕ್ಕೆ ಗೋವಿಂದಾ, ಗೋವಿಂದ' ಎಂದು ಹೇಳಿ, ಜಾಗಟೆ ಬಾರಿಸಿ, ಶಂಖವನ್ನು ಊದುತ್ತಾರೆ. ಅದಾದ ಮೇಲೆ ದಾಸಯ್ಯಗಳಿಗೆ ಊಟಕ್ಕೆ ಬಡಿಸಿ ನಂತರ ಮನೆಯವರು ಊಟ ಮಾಡುತ್ತಾರೆ. ಗಂಡಸರೆಲ್ಲರು ಹಣೆಗೆ ಬಿಳಿ ಮತ್ತು ಕೆಂಪು ನಾಮವನ್ನು ಹಚ್ಚಿಕೊಳ್ಳುತ್ತಾರೆ. ಈ ಪದ್ಧತಿಯನ್ನು **'ದಾಸಯ್ಯನಿಗೆ ಇಕ್ಕುವುದು'** ಎಂದು ಹೇಳುವುದು ವಾಡಿಕೆ. ಈ ಪದ್ಧತಿಯ ಎಲ್ಲ ಮನೆತನದಲ್ಲೂ ಇರುವುದಿಲ್ಲ.

ಉದಾ: ನಮ್ಮ ಊರಿನ ಹತ್ತಿರ ಇರುವ ಚಿಕ್ಕಾತೂರು ಮನೆತನದವರು ದಾಸಯ್ಯನಿಗೆ ಇಕ್ಕುವ ಸಂಪ್ರದಾಯವನ್ನು ಆಚರಣೆಯಲ್ಲಿಟ್ಟುಕೊಂಡಿದ್ದರು.

<daasayyanige ikkuvudu> Feeding Dasayya - Marriage functions used to take place then for seven to eight days. For some of the community, a system followed traditionally is Dasayyanige ikkuvudu. Before the marriage

function, inviting two dasayyas, putting their bavanasi (a kind of begging brass bowl) on plantain leaf and worship. Then the dasayyas reciting "thirupathi venkataramanaswami padakke govindaa, govinda" beating jhagate and blow Shankha (a kind of shell). Then the house people feed dasayyas and then take food. All males will smear white and red namas. It is common to say this system as Dasayyanige ikkuvudu. This tradition is not prevalent in all the communities.

Eg: Near our village, the Chikkatur community were following this tradition dasayyanige ikkuvudu.



574. ದಿಂಡು: ದಿಂಡು ಬಾಳೆಯ ಕಂಬದ ಮಧ್ಯ ಭಾಗದಲ್ಲಿರುತ್ತೆ. ಬಾಳೆಯ ಪಟ್ಟೆಯನ್ನು ನಾಲ್ಕಾರು ಪದರ ಸುಲಿದು ಮಧ್ಯೆ ಇರುವ ಎಳೆಯ ದಿಂಡನ್ನು ಉಪಯೋಗಿಸುತ್ತಾರೆ. ದಿಂಡಿನ ಪಲ್ಯ ಮತ್ತು ಕೋಸುಂಬರಿ ತಿನ್ನಲು ಬಹಳ ರುಚಿ. ದಿಂಡಿನ ಪದಾರ್ಥ ಮೂಲವ್ಯಾಧಿರೋಗಕ್ಕೆ ಒಳ್ಳೆಯ ಔಷಧಿ ಎಂದು ಹೇಳುತ್ತಾರೆ. ಸತ್ತವರ ತಿಥಿ ಮಾಡುವ ದಿನ ಬ್ರಾಹ್ಮಣರ ಊಟಕ್ಕೆ ದಿಂಡಿನ ಪಲ್ಯ, ಕೋಸುಂಬರಿಯನ್ನು ಮಾಡುತ್ತಾರೆ.

ಉದಾ: ನಾಡಿದ್ದು ನಿಮ್ಮ ಅಪ್ಪನ ತಿಥಿ, ಬಾಳೆದಿಂಡು, ಬಾಳೆಹೂವು ತರಬೇಕು.

ನೋಡಿ: ಬಾಳೆಪಟ್ಟೆ, ಬಾಳೆಎಲೆ, ಬಾಳೆಕಾಯಿ, ಬಾಳೆಹಣ್ಣು, ಮೋತೆ

<dinDu> (-) Tender portion inside the stem of plantain - Dindu will be in the center of plantain stem. They peel out four to six layers of outer skin and use the tender dindu in the center. The items Palya and Kosumbari made of dindu is tasty to eat. They say that dindu is a good medicine for piles. On the death ceremony day for feeding brahmins they prepare palya and kosumbari.

Eg: Tomorrow is your father's death ceremony. Must bring dind and plantain flower.

See: Balepatte, baleele, balekayi, balehannu, mothe.

575. ದಿಕ್ಕಾಪಾಲು: ಸಿಕ್ಕಸಿಕ್ಕ ಕಡೆಗೆ ಹೇಳಹೆಸರಿಲ್ಲದಂತೆ ಹೊರಟುಹೋಗುವುದನ್ನು **ದಿಕ್ಕಾಪಾಲು** ಎನ್ನುತ್ತಾರೆ.

ಉದಾ: ಸೀನಪ್ಪ ಇದ್ದಬದ್ದ ಆಸ್ತಿಯನ್ನೆಲ್ಲ ಹಾಳುಮಾಡಿ ದಿಕ್ಕಾಪಾಲಾಗಿ ಹೊರಟುಹೋದ. ಈಚೆಗೆ ಅವನ ಸುದ್ದಿಯೇ ಇಲ್ಲ.

<dikkaapaalu> Helter-skelter Going in all directions, without to name even, they call dikkapalu.

Eg: Seenappa squandering all properties went away. Of late no news about him

576. ದಿನಗೂಲಿ: ಕೂಲಿಕೆಲಸ ಮಾಡುವವರಿಗೆ ಆಯಾಯಾ ದಿನ ಮಾಡಿದ ಕೆಲಸಕ್ಕೆ ಕೊಡುವ ಹಣವನ್ನು ಆ ದಿನವೇ ಕೊಡುವುದಕ್ಕೆ **ದಿನಗೂಲಿ** ಎಂದು ಹೆಸರು.

ಉದಾ: ನಮ್ಮ ಗದ್ದೆಯಲ್ಲಿ ಹತ್ತು ಕೂಲಿಗಳು ದಿನಗೂಲಿಯ ಪ್ರಕಾರ ಕೆಲಸ ಮಾಡ್ತಿದಾರೆ. ಸಂಜೆ 6 ಗಂಟೆಗೆ ಮನೆತಾವ ಬಂದುಬಿಡ್ರಿ. ಯಜಮಾನರು ದಿನಗೂಲಿ ಬಟವಾಡೆಮಾಡ್ತವ್ರೆ.

<dinagooli> Daily wages - For paying wages to workers the same day for the work done is dinagooli.

Eg: In our field ten people are working on daily wages. Come to the house in the evening by six. Landlord will disburse daily wages.

577. ದಿನಸಿ ಅಂಗಡಿ: ನೋಡಿ: ಅಂಗಡಿ

<dinasiangaDi> Grocery shop - See: Angadi

578. ದಿಮ್ಮಗೆ: ಮಾಡುವ ಕೆಲಸಗಳು ಬೇಕಾದಷ್ಟಿದ್ದರೂ ಏನೂ ಮಾಡದೆ ಸುಮ್ಮನಿದ್ದರೆ **ದಿಮ್ಮಗೆ** ಎಂದು ಹೇಳುತ್ತಾರೆ.

ಉದಾ: ಏನ್ರಲಾ ಏನ್ ನೋಡ್ತಾ ಇದೀರಿ ದಿಮ್ಮಗೆ ನಿಂತ್ಕಂಡು?

<dimmage> Quietly - Even though there is plenty of work to be done, if you keep quiet without doing any work, they say dimmage.

Eg: What you fellows what are you looking quietly standing?





579. ದೀಪಾವಳಿ: **ದೀಪಾವಳಿ**ಹಬ್ಬದ ಸಡಗರ ಮೂರು ದಿವಸಗಳಿಂದಲೂ ನಡೆಯುತ್ತೆ. ಹಂಡೆಗೆ ನೀರು ತುಂಬುವುದರಿಂದ ಮೊದಲ್ಗೊಂಡು ಬಲಿಪಾಡ್ಯಮಿವರೆಗೆ ಮೂರುದಿನವೂ ಹಬ್ಬವೇ ಆಗಿರುತ್ತೆ. ಹುಡುಗರಿಗೆ ಪಟಾಕಿ ಹೊಡೆಯುವ ಸಂಭ್ರಮ. ಪಟಾಕಿ ಸಿಡಿಸುವುದು ದೀಪಾವಳಿ ವಿಶೇಷ.

ಉದಾ: ಈ ಸಲ ನಮ್ಮನೇಲಿ ಜಾಸ್ತಿ ಪಟಾಕಿ ತಂದಿದ್ದಾರೆ. ನಮ್ಮ ಭಾವ ಬಂದಿದ್ದಾರೆ.

ನೋಡಿ: ಬಲಿಪಾಡ್ಯಮಿ

<deepaavaLi> Row of lamps - The excitement of Deepavali will be for three days, almost. Beginning with filling water to the vessel till Balipadyami, all the three days will be festival. For children excitement of firing crackers. It is the specialty of Deepavali for firecrackers.

Eg: This time they have brought more crackers. Our brother in law has come.

580. ದೀವಟಿಗೆ: ನೋಡಿ: ಪಂಜು

<deevaTige> Torch - See: Panju

581. ದುಂಬಾಲುಬೀಳುವುದು: ಯಾರಾದರು ಬೆನ್ನುಹತ್ತಿ ಬರುತ್ತಿದ್ದರೆ **ದುಂಬಾಲುಬಿದ್ದಿದಾನೆ** ಅಂತ ಹೇಳುತ್ತಾರೆ.

ಉದಾ: ಆ ವಯ್ಯ ಎಲ್ಡು ದಿನದಿಂದ ನನ್ನ ಹಿಂದೆ ದುಂಬಾಲುಬಿದ್ದಾನೆ. ವಸಿ ಕಣ್ಣಿಟ್ಟಿರು.

<dumbaalubeeLuvudu> Persuading - If somebody is compelling, they say dumbalubiddidane.

Eg: That fellow is persuading me in the last two days. Keep an eye on him.

582. ದುಪಟಿ: ದಪ್ಪವಾದ ಎರಡು ಪದರವಾಗಿರುವ ಬಿಳಿಯ ಬಟ್ಟೆಗೆ **ದುಪಟಿ** ಎನ್ನುತ್ತಾರೆ. ಹಾಸುವುದಕ್ಕು, ಹೊದೆಯುವುದಕ್ಕು ದುಪಟಿಯನ್ನು ಉಪಯೋಗಿಸುತ್ತಾರೆ. ದುಪ್ಪಡಿ ಎಂದೂ ಹೇಳುತ್ತಾರೆ.

ಉದಾ: ಹೊರಗಡೆ ತುಂಬ ಕೊರತದ ಚಳಿ ಇದೆ, ತ್ವಾಟಕ್ಕೆ ಹೋಗುವಾಗ ದುಪಟಿ ಹೊದ್ಕಂಡು ಹೋಗು.

<dupaTi> Blanket - White thick cloth of two layers is called dupati. They use for spreading and covering. They also say duppadi.

Eg: Outside it is too much of cold. While going to garden wear dupati (blanket).

583. ದುಬಾರಿ: ನೋಡಿ: ತುಟ್ಟಿ

<dubaari> Exorbitant - See: Thutti

584. ದುರಸ್ತುಮಾಡುವುದು: ಹರಿದುಮುರಿದು ಹೋಗಿರುವುದನ್ನ ಸರಿಪಡಿಸುವುದಕ್ಕೆ **ದುರಸ್ತುಮಾಡುವುದು** ಎನ್ನುತ್ತಾರೆ.

ಉದಾ: ಮಗಳ ಮದುವೆ ಹತ್ತಿರಕ್ಕೆ ಬಂತು, ಮನೆ ಎಲ್ಲ ದುರಸ್ತುಮಾಡಬೇಕು.

<durasthumaaDuvudu> Renovation - To repair something which is destroyed, they say durasthumaduvudu.

Eg: Daughter's marriage is fast approaching. Must renovate the house.

585. ದುರುಗುಟ್ಟು: ಇನ್ನೊಬ್ಬರನ್ನು ಕೆಟ್ಟ ದೃಷ್ಟಿಯಿಂದ ನೋಡುವುದಕ್ಕೆ ದುರುಗುಟ್ಟು ಎಂಬ ಪದವನ್ನು ಬಳಸುತ್ತಾರೆ.

ಉದಾ: ಏನ್ ಹಾಗೆ ದುರುಗುಟ್ಟಿಕೊಂಡ್ ನೋಡ್ತಾ ಇದೀಯ, ನಾನೇನು ಹೆದರಾಕಿಲ್ಲ.

<dhuruguTTu> Staring - To see others with evil eye, they use the word duruguttu.

Eg: What you are staring at me. I do not fear.

586. ದುಷ್ಟ: ನೋಡಿ: ಪುಂಡ

<dushTa> Mischievous person - See: Punda

587. ದೂರ್ವೆ: ನೋಡಿ: ಗರಿಕೆ

<dhoorve> (-) A kind of grass - See: Garike

588. ದೃಷ್ಟಿತೆಗೆಯುವುದು: ಮಕ್ಕಳು ಹೆದರಿ ಬೆಚ್ಚಿಬಿದ್ದು ರಗಳೆ ಮಾಡುವುದನ್ನು ತಪ್ಪಿಸಲು ಕೆಲವಾರು ಕ್ರಮಗಳನ್ನು ಅನುಸರಿಸುತ್ತಾರೆ. ಅದಕ್ಕೆ ದೃಷ್ಟಿ ತೆಗೆಯುವುದು ಎಂದು ಹೆಸರು. ಐದಾರು ಹಂಚಿ ಕಡ್ಡಿಗಳನ್ನು ಪೊರಕೆಯಿಂದ ತೆಗೆದು ತುದಿಗೆ ಬೆಂಕಿ ಹಚ್ಚಿ ಮಗುವಿಗೆ 3 ಸಲ ನಿವಾಳಿಸಿ (ಎಡಗೈಲಿ) ದೃಷ್ಟಿತೆಗೆದು ಒಂದು ಮೂಲೆಯಲ್ಲಿ ಗೋಡೆಗೆ ಒರಗಿಸುತ್ತಾರೆ. ಅದು ಪಟಪಟ ಸದ್ದು ಮಾಡಿ ಉರಿದ ಮೇಲೆ ಅದರ ಮಸಿಯನ್ನು ಮಗುವಿನ ಹಣೆಗೆ ದೃಷ್ಟಿಬೊಟ್ಟಾಗಿ ಹಚ್ಚುತ್ತಾರೆ. ಮಗು ರಗಳೆ ಮಾಡುವುದನ್ನು ನಿಲ್ಲಿಸುತ್ತೆ. ಕೆಲವೊಮ್ಮೆ ಕಡ್ಡಿಗಳನ್ನು ಮುರಿದು ಹಚ್ಚಿ ಒಂದು ಬಟ್ಟಲಲ್ಲಿಟ್ಟು ದೃಷ್ಟಿತೆಗೆದು ಸಗಣಿನೀರಿನ ತಟ್ಟೆಯಲ್ಲಿ ಮಗುಚುತ್ತಾರೆ. ಇದು ಇನ್ನೊಂದುರೀತಿ ದೃಷ್ಟಿತೆಗೆಯುವ ವಿಧಾನ.

ಅಂತೆಯೆ ಉಪ್ಪು ಮೆಣಸಿನಕಾಯನ್ನು ನಿವಾಳಿಸಿ ಒಲೆಯೊಳಕ್ಕೆ ಹಾಕುತ್ತಾರೆ. ಸುಣ್ಣ, ಅರಿಶಿನವನ್ನು ನೀರಿನಲ್ಲಿ ಕದರಿ ಆರತಿ ಎತ್ತುವುದು, ಅನ್ನವನ್ನು ನಿವಾಳಿಸಿ ಬೀದಿಗೆ ಎಸೆಯುವುದು ಇವೆಲ್ಲ ದೃಷ್ಟಿತೆಗೆಯುವ ಕ್ರಮಗಳು. ಅದನ್ನು ನಿವಾಳಿಸುವಾಗ, ಯಾರದಾದರು ಕೆಟ್ಟದೃಷ್ಟಿ ಮಗುವಿನಮೇಲೆ ಬಿದ್ದಿದೆಯೆಂದು ನಂಬಿ, ತಾಯಿಕಣ್ಣು, ತಂದೆಕಣ್ಣು, ಹಾದಿಕಣ್ಣು, ಬೀದಿಕಣ್ಣು, ಮುಂಡೆಕಣ್ಣು, ರಂಡೆಕಣ್ಣು ಎಲ್ಲರ ಕಣ್ಣು ದಿಟ್ಟನೆ ಸೀಯಲಿ ಎಂದು ಯಾರಿಗೂ ಕೇಳದಂತೆ ಹೇಳಿ ಆರತಿಯ ನೀರನ್ನು ಮಗುವಿನ ಹಣೆಗೆ ಹಚ್ಚಿ ಮನೆಯ ಹೊರಗಡೆ ಚೆಲ್ಲುತ್ತಾರೆ. ಮಗುವಿನ ಮನಸ್ಸು ಬೇರೆಕಡೆಗೆ ಹರಿದು ರಗಳೆಮಾಡುವುದನ್ನು ನಿಲ್ಲಿಸುತ್ತೆ. ಮಕ್ಕಳು ಹೆದರಿದಾಗ ಕೆಲವರು ನಮ್ಮ ಹಳ್ಳಿಯ ಮುಸಲ್ಮಾನರ ಮಸೀದಿಗೆ ಕರೆದುಕೊಂಡು ಹೋಗಿ ಖಾಜಿಸಾಹೇಬರಿಂದ ನವಿಲುಗರಿ ತಲೆಯ ಮೇಲೆ ಸವರಿಸಿಕೊಂಡು ಬರುತ್ತಿದ್ದರು.

ಇದ್ದಕ್ಕಿದ್ದಂತೆ ಕಿರಿಚಿಕೊಂಡರೆ **ಚಿಟ್ಟನೆ** ಎಂದು ಹೇಳುತ್ತಾರೆ. ಮಗು ಬೆದರಿ ಚಿಟ್ಟನೆ ಕಿರಿಚಿಕೊಂಡಿತು, **ದೃಷ್ಟಿತೆಗೆಯಬೇಕು** ಎನ್ನುತ್ತಾರೆ.

ಮಗುವಿಗೆ ಅಲಂಕಾರ ಮಾಡಿದಾಗ, ಹುಟ್ಟುಹಬ್ಬ ಆಚರಿಸಿದಾಗ ಹತ್ತಾರುಜನರ ದೃಷ್ಟಿಬಿದ್ದು ದೃಷ್ಟಿಯಾಗಿರುತ್ತೆ ಎಂದು ಜನರ ನಂಬಿಕೆ. ಆಗ ಮಗುವಿಗೆ ದೃಷ್ಟಿತೆಗೆಯುತ್ತಾರೆ. ರಂಗದ ಮೇಲೆ ಅಭಿನಯ ಮಾಡಿದವರಿಗೂ ನಾಲ್ಕುಜನರ ಕಣ್ಣುಬಿದ್ದಿದೆಯೆಂದು ದೃಷ್ಟಿತೆಗೆಯುತ್ತಾರೆ.

ಉದಾ: ಮಗು ಬೆದರಿಬಿಟ್ಟಿದೆ, ಹಂಚಿಕಡ್ಡಿ ನಿವಾಳಿಸಿ ದೃಷ್ಟಿತೆಗೀಬೇಕು.

ಉದಾ: ಶಾಲಿನಿ ತುಂಬಾ ಚೆನ್ನಾಗಿ ನೃತ್ಯಮಾಡಿದ್ದಾಳೆ ಯಾರ ದೃಷ್ಟಿಬಿದ್ದಿದೆಯೇನೋ ಮೊದಲು ದೃಷ್ಟಿತೆಗೀಬೇಕು.

ನೋಡಿ: ಕಣ್ಣೆಸರು

<drushTithegeyuvudu> Removal of evil - To avoid scaring of children with fear, they follow certain methods. They

call it as drushti thegeyuvudu. They remove five or six hanchikaddis from broomstick, putting fire at one edge, waving three times holding in left hand, put in a corner of wall. When it burns making sound, they smear that ash on the forehead of child. Child stops bustling. Sometimes they cut sticks and burn and keep it in a cup, wave and put the cup inverted in a plate with cow dung. This is another type of removal of fear.

Like that they wave with salt and chilly and put into fire. Mixing lime and turmeric powder in water and do arati, waving baked rice and throwing on road, all these are different types of removal of fear. While waving believing that somebody's evil has fallen on the child, whispering Thayikannu, thandekannu, hadikannu, beedikannu, mundekannu, randekannu, let all evil eyes be destroyed, so that it should not be heard by anybody, smearing that arati water on the forehead of child they spill outside. Mind of child turns to different direction and stops commotion. When children feared, some people of our village were taking children to mosque of muslims and got touched softly by Khajisaheb (head of mosque) with peacock feather.

If suddenly screams they say chittane. Child with fear screamed. Must do drushti tegeyuvudu.

It is the belief of people that when putting on nice dress and observing birthday, several peoples' eyes will have fallen. They do drushti tegeyuvudu. For people who have acted on stage, they do drushti tegeyvudu.

Eg: Child has feared. Waving hanchikaddi remove drushti.

Eg: Shalini danced very well. Whose evil eye has fallen we do not know. First, we must remove drushti.

See: Kannesaru (Supposed injury of evil)

589. ದೇವರತೋಟ: ಹಿಂದಿನ ಕಾಲದಲ್ಲಿ ದೇವಸ್ಥಾನದಲ್ಲಿ ಪೂಜೆ ಮಾಡುವ ಅರ್ಚಕರಿಗೆ ಹೊಲ, ಗದ್ದೆ ಅಥವಾ ತೋಟದ ಒಂದು ಭಾಗವನ್ನು

ಬಿಟ್ಟುಕೊಡುತ್ತಿದ್ದರು. ಅದರಿಂದ ಬರುವ ಆದಾಯದಿಂದ ದೇವಸ್ಥಾನದ ಆಗುಹೋಗುಗಳನ್ನು ಸರಿತೂಗಿಸಿಕೊಂಡು ಹೋಗುವ ಜವಾಬ್ದಾರಿ ಅರ್ಚಕರದು. ಅಂತಹ ತೋಟ ತುಡಿಕೆಗೆ ದೇವರ ತೋಟ ಎಂದು ಕರೆಯುತ್ತಾರೆ.

ಉದಾ: ಬುಕ್ಕಾಂಬುಧಿಯಲ್ಲಿ ನಾರಾಯಣಭಟ್ಟ ಎಂಬುವವರಿಗೆ ಒಂದೂವರೆ ಎಕರೆ ತೋಟವನ್ನು ಕೊಟ್ಟಿದ್ದರು. ಅದನ್ನು ದೇವರತೋಟ ಎಂದೇ ಕರೆಯುತ್ತಿದ್ದರು.

<devarathoTa> (-) Garden meant for God - In olden days, the priests worshipping in temple, were allotted a portion of field or garden. It is the responsibility of the priests to maintain the temple out of income from such land or garden. For such garden they call it as devarathota.

Eg: In Bukkambudhi, they had given one-and-half-acre garden to Narayana Bhatta. They were calling it as devarathota.

590. ದೇವರಮನೆ: ನೋಡಿ: ಪಾಳು

<devaramane> Pooja room - See: Paalu

591. ದೇವರಸಮಾರಾಧನೆ: ಹೂವೀಳ್ಯ ನಡೆದ ಮೇಲೆ ಮದುವೆಯ ಹೆಣ್ಣು ಮತ್ತು ಹೆಣ್ಣಿನ ತಂದೆ ತಾಯಿಗಳನ್ನು ಹಸೆಯ ಮೇಲೆ ಕೂರಿಸಿ ಪುರೋಹಿತರು ಗಣಪತಿ ಪೂಜೆ ಮುಂತಾದ ಶಾಸ್ತ್ರಗಳನ್ನು ಮಾಡುತ್ತಾರೆ. ದೇವರ ಸಮಾರಾಧನೆಯಿಂದಾಗಿ ಆ ದಿನವೇ ಮದುವಣಿಗಶಾಸ್ತ್ರದ ಕಾರ್ಯಕ್ರಮಗಳು.

ಉದಾ: ದೇವರಸಮಾರಾಧನೆಗೆ ಕರೆದಿದ್ದಾರೆ ಹೋಗಬೇಕು.

ನೋಡಿ: ಎಣ್ಣೆಶಾಸ್ತ್ರ

<devarasamaaraadhane> Feeding in the name of God - After hoovilya the bride and her parents are seated on hasemane (decorated plank) and Shastriji will do ganapatipooja etc. auspicious rituals. With devarasamaradhane same day, marriage rituals.

592. ದೇವಸ್ಥಾನ: ಬುಕ್ಕಾಂಬುಧಿಯಲ್ಲಿ ಹಲವಾರು ದೇವಸ್ಥಾನಗಳಿವೆ. ಕೇಶವ ದೇವರು, ಚಂದ್ರಮೌಳೇಶ್ವರ, ವೀರಭದ್ರಸ್ವಾಮಿ ದೇವಸ್ಥಾನ, ಭೈರಾದೇವರು, ದೊಡ್ಡ ಗಣಪತಿ ಮುಂತಾದುವು. ದೊಡ್ಡಗಣಪತಿ ದೇವಸ್ತಾನ ಊರ ಹೊರಗಡೆ ಕೆರೆಯ

ಪಕ್ಕದಲ್ಲೆ ಇದೆ. ಅದನ್ನು ಉದ್ಭವಗಣಪತಿ ಎಂದು ಹೇಳುತ್ತಾರೆ. ಚಂದ್ರಮೌಳೇಶ್ವರ ದೇವಸ್ಥಾನ ಒಂದು ಮನೆತನಕ್ಕೆ ಸೇರಿದುದು. ಆ ದೇವಸ್ಥಾನದ ಅಭಿವೃದ್ಧಿಗಾಗಿ ಒಂದೆರಡು ಎಕರೆ ತೋಟವನ್ನು ಆ ವಂಶದವರು ಬಿಟ್ಟುಕೊಟ್ಟಿದ್ದಾರೆ. ಆ ಮನೆತನಕ್ಕೆ ಸೇರಿದವರಾದ ಚಂದ್ರಮೌಳಿ ಎಂಬುವವರು ಪರಿಶ್ರಮವಹಿಸಿ ದೇವಸ್ಥಾನವನ್ನು ಊರ್ಜಿತಗೊಳಿಸಿದ್ದಾರೆ. ಈಚೆಗೆ ಶೃಂಗೇರಿ ವಿದ್ಯಾಪೀಠದ ಸ್ವಾಮಿಗಳು ಬುಕ್ಕಾಂಬುಧಿಗೆ ಬಂದು ಚಂದ್ರಮೌಳೇಶ್ವರ ದೇವಸ್ಥಾನವನ್ನು ಉದ್ಘಾಟಿಸಿದರು.

ಉದಾ: ಪ್ರತಿ ವರ್ಷದ ಶ್ರಾವಣಮಾಸದಲ್ಲಿ ಚಂದ್ರಮೌಳೇಶ್ವರದೇವರಿಗೆ ವಿಶೇಷ ಸೇವೆ ಇಟ್ಟಿದ್ದಾರೆ.

<devasthaana> Temple - There are several temples in Bukkambudhi. Keshava, Chandramouleshwara, Veerabhadraswami, Bhairadevaru, Doddaganapathi etc. Doddaganapathi temple is outside the village by the side of tank. It is told as Udbhavaganapathi (which is born by itself). Chandramouleshwara temple belongs to one family. For improvement of that temple, one or two acres of garden is donated by that family. Chandramouli who belongs to that family has renovated that temple, taking full efforts. Recently Swamiji of Sringeri Vidyapeeta came to Bukkambudhi and inaugurated the temple.

Eg: In Shravana month every year, a special pooja for Chandramouleshwara is arranged.




593. ದೊಂಬರಾಟ: ದೊಂಬರಾಟ ಆಡುವವನೂ ಅಷ್ಟೆ. ಆ ತುದಿಗೊಂದು ಈ ತುದಿಗೊಂದು ಬೊಂಬನ್ನು ನೆಟ್ಟು ಎರಡು ಬೊಂಬಿಗೂ ಹಗ್ಗವನ್ನು ಕಟ್ಟುತ್ತಾನೆ. ಆ ಹಗ್ಗದಮೇಲೆ ದೊಡ್ಡ ಗಳುವನ್ನು ಹಿಡಿದುಕೊಂಡು ನಡೆಯುವುದು, ಪಲ್ಟಿ ಹೊಡೆಯುವುದು ಇತ್ಯಾದಿ. ಆಟಕ್ಕೆ ಮುಂಚೆ ಜನ ಸೇರಲು ಇನ್ನೊಬ್ಬನು ಡೋಲನ್ನು ಬಾರಿಸುತ್ತಿರುತ್ತಾನೆ. ಆಟದ ಕೊನೆಯಲ್ಲಿ ಎಲ್ಲರಿಂದಲು ಹಳೆಯ ಬಟ್ಟೆಬರೆಗಳನ್ನು ಅಥವಾ ದವಸಧಾನ್ಯಗಳನ್ನು ಬೇಡಿ ತೆಗೆದುಕೊಳ್ಳುತ್ತಿದ್ದ.

ಉದಾ: ಶಾಲೆ ಪಕ್ಕದ ಮೈದಾನದಲ್ಲಿ ದೊಂಬರಾಟ ಆಡೋರು ಬಂದಿದಾರಂತೆ.

<dombaraaTa> (-) A play of Acrobat - Who plays dombarata is same (one who plays gymnastic feats on poles). Fixing bamboo sticks to that end and this end, he ties rope to both. On that rope walking, holding a big bamboo, doing topsy-turvy etc. Before the play, another person will be beating the drum to make people assemble. At the end of the play, he was begging from people for old clothes or groceries.

Eg: In the adjoining field of school, players of dombarata have come



594. ದೊಡ್ಡಪತ್ರೆ: ದಪ್ಪವಾದ ಎಲೆಯುಳ್ಳ ಒಂದು ಜಾತಿಯ ಗಿಡ. **ದೊಡ್ಡಪತ್ರೆ** ಎಲೆಯನ್ನು ತಂಬುಳಿ ಮತ್ತು ಬೋಂಡಾ ಮಾಡಲು ಉಪಯೋಗಿಸುತ್ತಾರೆ. ಮೈಮೇಲೆ ಪಿತ್ತದ ಗಂದೆಯಾದರೆ ದೊಡ್ಡಪತ್ರೆ ಎಲೆಯ ರಸವನ್ನು ತುಳಸಿ ಎಲೆಯ ರಸದೊಂದಿಗೆ ಬೆರೆಸಿ ಮೈಮೇಲೆ ಹಚ್ಚಿದರೆ, ಗಂದೆಯ ಉರಿ ಕಮ್ಮಿಯಾಗುತ್ತೆ.

ಉದಾ: ನಮ್ಮನೆ ಹಿತ್ತಲಲ್ಲಿ ಸಾಕಷ್ಟು ದೊಡ್ಡಪತ್ರೆ ಬೆಳೆದಿದೆ, ನಿಮಗೆ ಬೇಕಾದಷ್ಟು ತೊಗೊಂಡು ಹೋಗಿ.

<doddapathre> (-) A kind of plant with thick leaves. They use the leaves for making thambuli (a side dish) and Bonda. If rashes occur on body, mixing juice of doddapatre with thulasi juice and smear, the burning sensation will reduce.

Eg: In our backyard plenty of doddapatre has grown. Take as much as you want.

595. ದೊಡ್ಡಿ: ದನ ಕರುಗಳನ್ನು ಕೂಡಿ ಹಾಕುವ ಜಾಗಕ್ಕೆ **ದೊಡ್ಡಿ** ಎಂದು ಹೆಸರು. ಹಳ್ಳಿಯಲ್ಲಿ ಪ್ರತಿಯೊಬ್ಬರು ಅವರವರ ಮನೆಯ ಹಸುಕರುಗಳನ್ನು ಹಳ್ಳಿಯ ದನಕಾಯುವವನಿಗೆ, ಬೆಳಿಗ್ಗೆ ಹಾಲು ಕರೆದ ನಂತರ ಒಪ್ಪಿಸಬೇಕು. ಅವನು ಹುಲ್ಲಿನ ಬಯಲಿಗೆ ಅವುಗಳನ್ನು ಕರೆದುಕೊಂಡು ಹೋಗಿ ಹುಲ್ಲು ಮೇಯಿಸಲು ಬಿಟ್ಟು ಸಂಜೆಯ ಹೊತ್ತಿಗೆ ವಾಪಸ್ ಕರೆದುಕೊಂಡು ಬರುತ್ತಾನೆ. ಅವನಿಗೆ ಒಪ್ಪಿಸದೆ ಅಲ್ಲಿ ಇಲ್ಲಿ ದನ ಕರುಗಳನ್ನು ಬಿಟ್ಟರೆ, ಅವುಗಳನ್ನು **ದೊಡ್ಡಿ**ಯಲ್ಲಿ ಕೂಡುತ್ತಾರೆ. ಅದಕ್ಕೆ ಗೊತ್ತಾದ ಹಣವನ್ನು ತೆತ್ತು ಬಿಡಿಸಿಕೊಂಡು ಬರಬೇಕು.

ಉದಾ: ನಮ್ಮನೆ ಹಸುವನ್ನು ದೊಡ್ಡಿಗೆ ಕೂಡಿದಾರಂತೆ, ಬಿಡಸ್ಕಂಡು ಬರಬೇಕು.

<doDDi> Cattle pound - The place where cows are impounded is called doddi. In the village everyone after milking in the morning should handover his cows to the person who grazes. He will take them to grazing field and leave them there and by evening returns the cows to their houses. Instead of handing over to him, leaves the cows here and there, they will be impounded in doddi. We must get them released paying the fixed amount.

Eg: It seems they have impounded our cow. Must get released.



596. ದೊನ್ನೆ: ಮುಂಜಿ, ಮದುವೆ ಮುಂತಾದ ಸಮಾರಂಭಗಳಲ್ಲಿ ಊಟದ ಎಲೆಯ ಪಕ್ಕದಲ್ಲಿ ದೊನ್ನೆಯನ್ನು ಸಾರು ಬಡಿಸಲು ಉಪಯೋಗಿಸುತ್ತಾರೆ. ಒಣಗಿದ ಬಾಳೆ ಎಲೆಯಿಂದ (ತರಗೆಲೆ) ದೊನ್ನೆಯನ್ನು ತಯಾರು ಮಾಡುತ್ತಾರೆ. ಎಂಟು – ಹತ್ತು ತರಗೆಲೆಗಳನ್ನು ಒಂದರ ಮೇಲೊಂದಿಟ್ಟು ಅದರ ಮೇಲೆ ಮರದ ಅಚ್ಚನ್ನು ಇಟ್ಟು ಹರಿತವಾದ ಚಾಕುವಿನಿಂದ ಅಚ್ಚಿನ ಸುತ್ತಲೂ ಕತ್ತರಿಸಿ, ಚಚ್ಚೌಕವಾದ ಬಟ್ಟಲಿನ ಆಕಾರಕ್ಕೆ ಮಡಿಸಿ, ಎರಡು ಪಕ್ಕಕ್ಕು ಹಂಚಿಕಡ್ಡಿ ಅಥವಾ ತೆಂಗಿನ ಕಡ್ಡಿಯಿಂದ ಹೆಚ್ಚಿ ದೊನ್ನೆಯನ್ನು ಮಾಡಿದರೆ ಎಲ್ಲವು ಒಂದೆ ಆಕಾರದಲ್ಲಿರುತ್ತೆ. ದೊನ್ನೆ ವ್ಯಾಪಾರ ಮಾಡುವವರು 25–50–100 ರಂತೆ ಒಂದರೊಳಗೊಂದು ದೊನ್ನೆಯನ್ನಿಟ್ಟು ಒಣಗಿದ ಬಾಳೆಪಟ್ಟೆಯಿಂದ ಸುತ್ತಿ ಕಟ್ಟುಗಳನ್ನು ಮಾಡಿ ಮಾರುತ್ತಾರೆ. ಸತ್ತವರ ತಿಥಿ ಮಾಡುವ ದಿನ ಬ್ರಾಹ್ಮಣರ ಊಟದ ಎಲೆಯ ಪಕ್ಕದಲ್ಲಿ ಮೂರು ದೊನ್ನೆಗಳನ್ನು ಇಟ್ಟಿರುತ್ತಾರೆ. ಈ ದೊನ್ನೆಗಳನ್ನು ಹಸಿರು ಬಾಳೆ ಎಲೆಯಿಂದ ಮಾಡುತ್ತಾರೆ. ಹಸಿರು ಬಾಳೆಎಲೆಯನ್ನು ಉರಿಯುವ ಕೆಂಡದಲ್ಲಿ ಅರ್ಧ ನಿಮಿಷ ಕಾಲ ಹಿಡಿದರೆ ಅದನ್ನು ಯಾವ ರೀತಿ ಬೇಕಾದರೂ ಮಡಿಸಬಹುದು. ದೊನ್ನೆಯಲ್ಲಿ ಪಾಯಸ, ತುಪ್ಪ, ಸಾರನ್ನು ಬಡಿಸಿರುತ್ತಾರೆ. ತುಪ್ಪದ ದೊನ್ನೆ ಉಳಿದ ಎರಡು ದೊನ್ನೆಗಳಿಗಿಂತ ಚಿಕ್ಕದಾಗಿರುತ್ತೆ.

ದೊಣೆ, ದೊಣ್ಣೆ, ದೊನ್ನೆ ಪದಗಳಲ್ಲಿ ಉಚ್ಚಾರಸಾಮ್ಯವಿದ್ದರೂ ಅರ್ಥ ಬೇರೆಬೇರೆ ಆಗಿದೆ.

ಉದಾ: ಇನ್ನೊಂದು ದೊನ್ನೆ ಪಾಯಸ ತೊಗೊಳ್ಳಿ.

<doNNe> (-) Container made of plantain bark - In Brahmopadesha, marriage etc. functions, by the side of plantain leaf, use donne for putting rasam. From dried plantain leaf, they prepare donne. Piling up eight to ten leaves one above the other, placing on that a shaped wooden plank, cut around with sharp knife folding squarely of a size of cup, and for both sides pinning hanchikaddi (a kind of thick grass) or coconut leaf stick. If donne is done like this all will be of same size. Sellers of donne putting one in another as 25-50-100 donne, packing with dried plantain outer skin, doing bundles and sell.

On death ceremony day, by the side of plantain leaf of brahmins, they will have put three donnes. These are made of green plantain leaf. If green leaf is held on burning charcoal for half-a-minute it can be folded in any type. In donne, kheer, ghee and rasam are served. The ghee donne will be smaller than the other two.

In words done, doNNe, donne, though the pronunciation is same, the meaning is different.

Eg: Take one more donne of payasa (kheer).

597. ದೋಟಿ: ನೋಡಿ: ಕೊನೆಗತ್ತಿ

<doTi> See: Konegathhi

598. ದೋರೆಗಾಯಿ: ಪೂರ್ತಿ ಹಣ್ಣಾಗದೆ ಇರುವ ಮಾವಿನ ಕಾಯಿ, ಪೇರಲೆ, ಸೀಬೆ ಮುಂತಾದ ಹಣ್ಣುಗಳನ್ನು **ದೋರೆಗಾಯಿ** ಎನ್ನುತ್ತಾರೆ.

ಉದಾ: ಇನ್ನೂ ದೋರೆಗಾಯಿ ಇರುವಾಗಲೆ ಮಾವಿನಕಾಯಿಗಳನ್ನು ಒತ್ತೆಹಾಕಿದಾನೆ, ಸ್ವಲ್ಪವೂ ಸಿಹಿಯಾಗಿಲ್ಲ.

<doregaayi> Half ripened fruit - Not fully ripened mango, perale, seebe (guava fruit) they call doregayi.

Eg: Even when it is half ripened, he has piled up. It is not at all sweat.



599. ದೌತಿ: ಈಗಿನ ಹಾಗೆ ತರಹಾವಾರಿ ಪೆನ್ನು, ಪೆನ್ಸಿಲ್‌ಗಳು ಹಳ್ಳಿಗಳಲ್ಲಿ ಇರಲಿಲ್ಲ. ಸಣ್ಣಮಟ್ಟ ಶಾಲೆಗಳಲ್ಲಿ ಬಳಪ, ಸೀಮೇಸುಣ್ಣ. ಹುಡುಗರು ಬರೆಯುವುದಕ್ಕೆ ಬಳಪ, ಉಪಾಧ್ಯಾಯರಿಗೆ ಸೀಮೇಸುಣ್ಣ. ಶ್ಯಾನುಭೋಗರು ಲೆಕ್ಕಪತ್ರಗಳನ್ನೆಲ್ಲ ಶಾಯಿಯಲ್ಲಿ ಬರೆಯುತ್ತಿದ್ದರು. ಶಾಯಿಯನ್ನು ಇಡುವ ಗಾಜಿನ ಶೀಷೆಗೆ **ದೌತಿ** ಎಂದು ಹೆಸರು. ಮಷಿಗುಳಿಗೆಯನ್ನು ನೀರಿಗೆ ಹಾಕಿ ಶಾಯಿ ಮಾಡುತ್ತಿದ್ದರು. ಮಷಿಗುಳಿಗೆ ಔಷಧಿಮಾತ್ರೆಯಂತೆ ಇರುತ್ತೆ. ಕೆಂಪು ಮತ್ತು ಕಪ್ಪು ಬಣ್ಣದ್ದು. ಎರಡಕ್ಕೂ ಬೇರೆಬೇರೆ ಲೇಖನಿಗಳನ್ನು ಉಪಯೋಗಿಸುತ್ತಿದ್ದರು.

ಉದಾ: ದೌತಿ ಶಾಯಿ ಚೆಲ್ಲೋಯ್ತು ಒತ್ತುಕಾಗದ (ಬ್ಲಾಟಿಂಗ್‌ಪೇಪರ್) ತಾ.

<douthi> Ink bottle - As in now-a-days varieties of pens, pencils were not there in villages. In small schools balapa (made of white clay), chalk piece. Students to write balapa, for teachers chalk piece. Shanbhogs were writing accounts and letters in ink. The glass bottle to keep ink is douti. Were preparing ink putting ink pills into water. Ink pill will be just like medicinal pill. Red and black color, were using different pens for both.

Eg: Ink bottle spilled out. Bring blotting paper

❑

ಧ / Dha

600. ಧನುರ್ಮಾಸ: ಧನುರ್ಮಾಸದಲ್ಲಿ ಪ್ರತಿ ನಿತ್ಯವೂ ದೇವಸ್ಥಾನಗಳಲ್ಲಿ ಬೆಳಗಿನ ಪೂಜೆಯಾದ ನಂತರ ಬಿಸಿಬಿಸಿ ಪೊಂಗಲನ್ನು ದೇವರಿಗೆ ನೈವೇದ್ಯ ಮಾಡಿ ಪ್ರಸಾದ ಹಂಚುತ್ತಾರೆ.

ಉದಾ: ದೇವಸ್ಥಾನದಲ್ಲಿ ಧನುರ್ಮಾಸದ ಪ್ರಯುಕ್ತ ತಿರುಪ್ಪಾವೈ ಪ್ರವಚನ ಏರ್ಪಾಟಾಗಿದೆ.

<dhanurmaasa> Ninth solar month - During Dhanurmasa in temples, after morning pooja, they offer hot Pongal to God and distribute as Prasad.

Eg: In temple on account of Dhanurmasa, discourse of Thiruppavai is arranged.

601. ಧಾರಾಗ್ನಿ: ಗೃಹಸ್ಥನಾದವನು ಮದುವೆ ಧಾರೆಯದಿನ ಮಾಡಿದ ಹೋಮದ ಅಗ್ನಿಯನ್ನು ಕಾಪಾಡಿಕೊಂಡು ಪ್ರತಿನಿತ್ಯವೂ ಔಪಾಸನೆ ಮಾಡಬೇಕೆಂಬ ನಿಯಮವಿದೆ. ಗಂಡ ಹೆಂಡಿರ ಪೈಕಿ ಯಾರು ಮೊದಲು ನಿಧನರಾಗುತ್ತಾರೋ ಅವರ ಶವಸಂಸ್ಕಾರಕ್ಕೆ ಆ ಅಗ್ನಿಯನ್ನು ಉಪಯೋಗಿಸುತ್ತಾರೆ. ಹೆಂಡತಿ ಮೊದಲು ಸತ್ತರೆ ಅಲ್ಲಿಂದ ಮುಂದೆಯೂ ಗಂಡನಾದವನು ಔಪಾಸನೆ ಮಾಡಬಹುದು.

ಉದಾ: ಶೃಂಗೇರಿಯ ಸಮೀಪದಲ್ಲಿರುವ ಆನೆಗುಂದ ಅಗ್ರಹಾರದಲ್ಲಿ ವಾಸಿಸುತ್ತಿದ್ದ ಶ್ರೀ ಗುಂಡಾಶಾಸ್ತ್ರಿಗಳು ಅವರ ಹೆಂಡತಿ ತೀರಿಕೊಂಡಾಗ ಧಾರಾಗ್ನಿಯಿಂದಲೇ ಶವಸಂಸ್ಕಾರ ಮಾಡಿದ್ದರು.

<dhaaraagni> (-) Fire kept throughout - There is a custom that married man who did Homa on the marriage day, saving that fire must perform Oupasana every day. Among husband and wife who dies first, for cremation they use that fire. If wife dies earlier, even after that husband can do Oupasana.

Eg: Gundashastri who was living in Anegunda Agrahara near Sringeri had done cremation of his wife when she died.

❑

ನ / Na


602. ನಂಜು: ನಾವು ಊಟ ಮಾಡುವ ಪದಾರ್ಥಗಳಲ್ಲಿ ಏನಾದರೂ ವ್ಯತ್ಯಾಸವಾಗಿ ಬಾಧೆಯಾದರೆ ಅದಕ್ಕೆ **ನಂಜಾಗಿದೆ** (ಅಲರ್ಜಿ) ಎನ್ನುತ್ತಾರೆ. ದೇಹದ ಮೇಲೆ ಏನಾದರೂ ಗಾಯಗಳಾಗಿ ಕೀವು ತುಂಬಿ ತೊಂದರೆಯಾದಾಗಲೂ ನಂಜು ಎನ್ನುವ ಪದವನ್ನು ಉಪಯೋಗಿಸುತ್ತಾರೆ.

ಉದಾ: ಮಗು ಬೈಗಿಂದ ನರಳ್ತಾನೇ ಇದೆ. ನಂಜಾಗಿರ್ಬೇಕು, ತುಳಸಿರಸ ಕುಡಿಸು.

<nanju> Allergy - In the items of food, we eat if anything is odd and troubled, they say nanjagide. On the body if troubled

with any wound with fuss also, they use the word Nanju.

Eg: Child is suffering since morning. Must be Nanju. Make it drink Tulasi juice.



603. ನಂದಿಕಂಬ: 10–15 ಅಡಿ ಎತ್ತರವಾಗಿರುವ ಕೊಳವೆಯಾಕಾರದ ಹಿತ್ತಾಳೆಯ ಕೋಲಿಗೆ ಮೇಲಿನಿಂದ ಕೆಳಗಿನವರೆಗು ರೇಷ್ಮೆದಾರದಲ್ಲಿ ಮಾಡಿರುವ ಕುಚ್ಚುಗಳನ್ನು ಕಟ್ಟಿರುತ್ತಾರೆ. ಅದಕ್ಕೆ ನಂದಿಕೋಲು ಅಥವಾ ನಂದಿಕಂಬ ಎಂದು ಹೆಸರು. ದೇವರ ಉತ್ಸವಗಳಲ್ಲಿ ಮುಂದುಗಡೆ ಒಬ್ಬರು ಬಿಳಿ ಮಡಿಬಟ್ಟೆಯನ್ನುಟ್ಟು ಸೊಂಟಕ್ಕೆ ಕೆಂಪುಬಣ್ಣದ ಪಟ್ಟಿಯನ್ನು ಸುತ್ತಿಕೊಂಡು ನಂದಿಕೋಲನ್ನು ಹಿಡಿದಿರುತ್ತಾರೆ.

ಉದಾ: ಯಾವ ಉತ್ಸವದಲ್ಲಾದರು ಶಿವಪ್ಪನೆ ನಂದಿಕೋಲು ಹಿಡಿಯೂದು.

<nandikamba> (-) A tall brass pole - For a tube-like brass pole of ten to fifteen feet height, from top to bottom they will have tied bunches of silk thread. It is called Nandikolu or Nandikamba. During procession of deity, in the front, one person wearing whitewashed clothe, putting red colored vasthra on the waist will be holding Nandikolu.

Eg: In any procession Shivappa only to hold Nandikolu.

604. ನಗೆಚಾಟಲು: ಅಸಂಬದ್ಧವಾಗಿ ಮಾತನಾಡುವುದನ್ನು **ನಗೆಚಾಟಲು** ಅನ್ನುತ್ತಾರೆ. ನಗೆಪಾಟಲು ಎಂದೂ ಹೇಳುವುದುಂಟು.

ಉದಾ: ಶಿವಪ್ಪನವರ ಮದುವೆಯಲ್ಲಿ ಅವರ ಅಣ್ಣನ ಮಗ ಪೆದ್‌ಪೆದ್ದಾಗಿ ಮಾತನಾಡಿ ನಗೆಚಾಟಲಾಯಿತು.


<nagechaaTalu> Laughing stock - To talk inconsistently, they say nagechatilu. Also say nagepatalu.

Eg: In the marriage of Shivappa, his brother's son talking foolishly became a laughingstock.

605. ನವಧಾನ್ಯ: ಮದುವೆ, ಮುಂಜಿ ಸಮಾರಂಭಗಳಲ್ಲಿ ನವಗ್ರಹ ಪೂಜೆ ಮಾಡಿ, **ನವಧಾನ್ಯ**ಗಳನ್ನು (ಕಡಲೆ, ಉದ್ದು, ಹೆಸರು, ತೊಗರಿ, ಅವರೆ ಬೇಳೆ, ಎಳ್ಳು, ಉಪ್ಪು, ಗೋಧಿ, ಅಕ್ಕಿ) ದೊನ್ನೆಯಲ್ಲಿ ತುಂಬಿ ದಾನವಾಗಿ ಕೊಡುತ್ತಾರೆ. ನವಗ್ರಹಪೂಜೆಗೆ

ನವಧಾನ್ಯ ಇಡುವುದು ಕ್ರಮ.

ಉದಾ: ನವಧಾನ್ಯ ದಾನಮಾಡಬೇಕು, ದೊನ್ನೆಗಳಲ್ಲಿ ನವಧಾನ್ಯ ತುಂಬು.



<navadhaanya> (-) Nine types of grams, corn, salt and rice - During brahmopadesha, marriage functions doing Navagrahapooja, navadhanya nine types of grams, corns, (Gram, Urd, Moong, Tur, Avare, Sesame, Salt, Wheat, Rice) they fill in donne and offer as Dana. It is customary to keep Navadhanya for Navagrahapooja.

Eg: Must offer navadhanya. Fill navadhanya in donnes.

606. **ನವರಾತ್ರಿ: ನವರಾತ್ರಿ**ಹಬ್ಬ ಆಶ್ವಯುಜ ಮಾಸದ ಪಾಡ್ಯಮಿಯ ದಿನದಿಂದ ಒಂಬತ್ತು ದಿವಸಗಳು ಆಚರಣೆ ನಡೆಸುತ್ತಾರೆ. ನವರಾತ್ರಿಯ ಸಪ್ತಮೀ ದಿನವೆ ಸರಸ್ವತಿ ಪೂಜೆ. ಆ ದಿನ ರಾಮಾಯಣ, ಮಹಾಭಾರತದ ಪುಸ್ತಕಗಳನ್ನಿಟ್ಟು ಪೂಜೆ ಮಾಡುತ್ತಾರೆ. ನವಮಿಯ ದಿನ ಆಯುಧಪೂಜೆ. ಕುಡುಗೋಲು, ಗುದ್ದಲಿ ಮುಂತಾದ ಆಯುಧಗಳನ್ನು ಪೂಜಿಸುತ್ತಾರೆ, ನಾವು ಉಪಯೋಗಿಸುವ ಆಯುಧಗಳಿಗೆ ವರ್ಷದಲ್ಲಿ ಒಂದು ದಿನವಾದರೂ ವಿಶ್ರಾಂತಿ ಇರಲೆಂದು! ಹತ್ತನೆಯ ದಿನವೇ ವಿಜಯದಶಮಿ. ಆ ದಿನ ಶ್ಯಾನುಭೋಗರು ಬನ್ನಿಯ ಮರಕ್ಕೆ ಪೂಜಿಸಿ ಅಲ್ಲಿ ಕಟ್ಟಿರುವ ಬಾಳೆಯಗೊನೆಗೆ ಅಂಬಿನಿಂದ ಹೊಡೆಯುತ್ತಾರೆ. ವಿಜಯದಶಮಿಯ ದಿನ ಬನ್ನೀಮರಕ್ಕೆ ಪೂಜೆ ಮಾಡುವುದು ತಲೆತಲಾಂತರದಿಂದ ನಡೆಸಿಕೊಂಡು ಬಂದಿರುವ ಆಚರಣೆ. ನವರಾತ್ರಿಯ ಒಂಬತ್ತುದಿವಸಗಳೂ ಮಕ್ಕಳನ್ನು ಕರೆದು ಆರತಿ ಮಾಡಿ ತಿಂಡಿಗಳನ್ನು ಹಂಚುತ್ತಾರೆ. ಅದಕ್ಕೆ ಬೊಂಬೆಬಾಗಿನ ಎಂದೇ ಹೆಸರು.

ಮೈಸೂರಿನಲ್ಲಿ ಮಹಾರಾಜರು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಮೆರವಣಿಗೆ ಹೋಗುತ್ತಿದ್ದರು (1933–34), ಆಗಿನ ಸೊಬಗೇ ಸೊಬಗು. ದಾರಿಯುದ್ದಕ್ಕೂ ಪುರಿ, ಬತ್ತಾಸುಗಳ ವ್ಯಾಪಾರ, ಎಲ್ಲ ಅನ್ನಸತ್ರಗಳಲ್ಲು ಹಳ್ಳಿಹಳ್ಳಿಗಳಿಂದ ಬಂದವರಿಗೆಲ್ಲ ಲಾಡು ಸಂತರ್ಪಣೆ. ಅರಮನೆಯ ಮುಂಭಾಗದ ಬಯಲಿನಲ್ಲಿ ತರಹೇವಾರಿ ವೇಷಭೂಷಣಗಳೊಂದಿಗೆ ಆಟಗಳು, ಕುಸ್ತಿ ಪಂದ್ಯ, ಸಂಗೀತ – ಒಂದೇ ಎರಡೇ, ಊರಿಗೆ ಊರೇ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿತ್ತು. ರಸ್ತೆಗಳಲ್ಲಿ ಕಾಲಿಡಲು ಜಾಗವಿಲ್ಲದ ಹಾಗೆ ಜನಸಮೂಹ ಇರುತ್ತಿತ್ತು.

ಉದಾ: ಈ ಸಲ ನವರಾತ್ರಿಗೆ ಚನ್ನಪಟ್ಟಣದಿಂದ ತುಂಬಾ ಬೊಂಬೆಗಳನ್ನು ತಂದಿದಾರೆ. ಬನ್ನಿ ರಂಗಪ್ಪನವರ ಮನೆಗೆ ಹೋಗಿ ಬೊಂಬೆ ನೋಡೋಣ.

ನೋಡಿ: ಮಾನೌಮಿಪದಗಳು

<navaraathri> (-) Nine days continuous festival - Navarathri festival they observe beginning from Padyami of Ashwayuj month for nine days. Seventh day of Navarathri is Saraswati Pooja. That day they keep books of Ramayan, Mahabharat and worship. On ninth day Ayudhapooja, worship implements like Knife, Axe, Spade etc. The implements we use should have rest for a day at least in a year!

Tenth day is Vijayadasami. That day the Shanbhog worshiping the Banni tree, shoot the plantain bunch tied there. To worship Banni tree is a traditional custom as heritage. All the nine days of Navarathri, invite children do arati and distribute food. It is known as Bombebagina only.

In Mysore, King sitting in howdah seat on elephant back was going in procession (1933-34). That was but charming. Throughout selling puri, bathhasu. For all who come from villages, distribution of food with laddus. In front of the palace with varieties of costumes, plays, wrestling contest, music, not one or two, the whole city used to participate in all programs. The crowd was so much, there was no place to stand.

Eg: For this year Navarathri, have brought plenty of dolls from Chennapattana. Come let us go to Rangappa's house to see dolls.

See: Manoumipadagalu (Songs of Marnavami)

607. ನಸುಗುನ್ನಿ: ಅನವಶ್ಯಕವಾಗಿ ಇನ್ನೊಬ್ಬರಿಗೆ ತೊಂದರೆ ಮಾಡುವವನನ್ನು **ನಸುಗುನ್ನಿ** ಎಂದು ಹೇಳುವುದು ರೂಢಿ.

ಉದಾ: ಅವನ ಮೇಲೆ ಒಂದು ಕಣ್ಣಿಟ್ಟಿರು, ಅವನೊಬ್ಬ ನಸುಗುನ್ನಿ, ಯಾವಾಗ ಏನು ಮಾಡ್ತಾನೆ ಅಂತ ಹೇಳುಕ್ಕಾಗುಲ್ಲ.

<nasugunni> Mischievous person - One who troubles others unnecessarily, it is common to say nasugunni.

Eg: Keep an eye on him. He is a nasugunni. Cannot say what he will do at what time.

608. ನಾಂದಿ: ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳು ಪ್ರಾರಂಭವಾಗುವುದಕ್ಕೆ ಮುಂಚೆ ಆಚರಿಸುವ ಸಾಂಪ್ರದಾಯಿಕವಾದ ವಿಧಿಗೆ **ನಾಂದಿ** ಎನ್ನುತ್ತಾರೆ. ನಾಂದಿಯೇ ಮೊದಲ ಕಾರ್ಯಕ್ರಮ. ನಾಟಕ ಶುರುವಾಗುವುದಕ್ಕೆ ಮುನ್ನ ಪಾತ್ರಧಾರಿಗಳು ಅಂಕಪರದೆಯ ಹಿಂದೆ ನಿಂತುಕೊಂಡು ಹಾಡುವುದನ್ನು **ನಾಂದೀಪದ್ಯ** ಎಂದು ಹೇಳುತ್ತಾರೆ.

ಉದಾ: ಶುಕ್ರವಾರ ಕೃಷ್ಣನಿಗೆ ಮುಂಜಿ. ನಾಳೆ ನಾಂದಿ ಮಾಡ್ತೀವಿ ಬೆಳಿಗ್ಗೆ ಮುಂಚೆ ಬಂದ್ಬಿಡಿ.

ನೋಡಿ: ನಾಂದೀಪದ್ಯ

<naandi> Ritual ceremony before marriage function - Before commencement of marriage, thread ceremony etc. auspicious programs, to perform the traditional ritual, they say Naandi. Naandi itself is the first program. Before commencement of drama the artistes standing behind the curtain, singing is called Naandipadya.

Eg: Friday brahmopadesha for Krishna. Tomorrow we do Naandi. Come early in the morning.

See: Naandipadya

609. ನಾಂದೀಪದ್ಯ: ನಾಟಕ ಪ್ರಾರಂಭವಾಗುವುದಕ್ಕೆ ಮುಂಚೆ ಸೂತ್ರಧಾರ ವೇದಿಕೆಯ ಮೇಲೆ ಬಂದು ದೇವರಪಟಕ್ಕೆ ಕೈಮುಗಿದು ನಾಂದೀಪದ್ಯವನ್ನು ಹಾಡುತ್ತಾನೆ. ನಂತರ ಸದ್ಯದಲ್ಲೆ ನಾಟಕ ಶುರುವಾಗುತ್ತೆ ಎಂದು ಹೇಳಿದ ನಂತರ ಮೊದಲ ದೃಶ್ಯ ಅಂಕಪರದೆ ತೆಗೆದಕೂಡಲೆ ಪ್ರೇಕ್ಷಕರಿಗೆ ಕಾಣಿಸುತ್ತೆ.

<naandeepadya> Song sung by narrator - Before commencement of drama, the narrator comes on the stage, with folding hands to the God's photo, sings naandipadya. Then after announcing that drama will commence shortly, removing the curtain, the first scene will be seen to the audience.

610. ನಾಗಪ್ಪಶಾಸ್ತ್ರಿ: ನಾಗಪ್ಪಶಾಸ್ತ್ರಿಗಳು ಬುಕ್ಕಾಂಬುಧಿಯಲ್ಲಿನ ಹಿರಿಯ ತಲೆಗಳಲ್ಲಿ ಒಬ್ಬರು. ಬಹಳ ಶಿಸ್ತಿನ ಮನುಷ್ಯ. ಯಾವ ಕೆಲಸವನ್ನಾದರೂ ಅಚ್ಚುಕಟ್ಟಾಗಿ ಮಾಡಬೇಕು ಅನ್ನುವ ಮನೋಭಾವದವರು. ತೋಟ ತುಡಿಕೆಗಳ ಕೆಲಸ ಕಾರ್ಯಗಳಲ್ಲಿ ಅವರು ಎತ್ತಿದ ಕೈ. ಜತೆಜತೆಗೆ ಹಾರ್ಮೋನಿಯಂ, ತಬಲಾ ವಾದ್ಯಗಳ

ಹವ್ಯಾಸವೂ ಇತ್ತು. ಮಹಾಭಾರತ, ರಾಮಾಯಣ ಗ್ರಂಥಗಳ ಕಥೆಗಳನ್ನು ಹಾಡಿನ ರೂಪವಾಗಿ ಎಲ್ಲರಿಗೂ ಅರ್ಥವಾಗುವಂತೆ ಹೇಳುತ್ತಿದ್ದರು.

ನೋಡಿ: ಊರಿನ ಕಲಾವಿದರು

<naagappashaasthri> Naagappashastri was one among elderly persons of Bukkaambudhi. Highly disciplined person. He was of the mind that any work should be done perfectly. He was the top man in gardening. Side by side he had a hobby of musical instruments like Harmonium (a kind of instrument), tabala (Drum made of skin). He was reciting Mahaabharat, Ramaayana stories through song, to be understood by one and all.

See: Oorinakalavidaru (Artistes of village)

611. ನಾಗರಕಟ್ಟೆ: ನೋಡಿ: ಅರಳಿಕಟ್ಟೆ

<naagarakaTTe> (-) Platform around piple tree - See: AralikaTTe

612. ನಾಗೊಂದಿಗೆ: ಹಳ್ಳಿಯ ಮನೆಯ ಕೋಣೆಗಳಲ್ಲಿ ನಾಲ್ಕು ಕಡೆಗೂ ಮೇಲ್ಭಾಗದಲ್ಲಿ ಒಂದು ಅಡಿ ಅಗಲದ ಉದ್ದದ ಮರದ ಹಲಗೆಯನ್ನು ಜೋಡಿಸಿರುತ್ತಾರೆ. ಅದಕ್ಕೆ **ನಾಗೊಂದಿಗೆ** ಎಂದು ಹೆಸರು. ಅದರ ಮೇಲೆ ಕುಡುಗೋಲು ಮುಂತಾದ ಸಣ್ಣಪುಟ್ಟ ಸಾಮಾನುಗಳನ್ನು ಇಡುತ್ತಿದ್ದರು. ಮನೆಗೆ ಬಂದ ಕೂಡಲೆ ಕೈ ಎಟುಕಿಸಿದರೆ ಸುಲಭವಾಗಿ ಸಿಗುವ ಜಾಗ ಅಂದರೆ ನಾಗೊಂದಿಗೆ.

ಉದಾ: ನಾಗೊಂದಿಗೆಮೇಲೆ ಪಂಚಾಂಗ ಇರಬೇಕು ತಂದ್ಕೊಡು.

<naagondige> Wooden plank fixed to the walls - In rooms of village house on all four sides at the top, will have attached wooden plank of size one-foot width. It is called Naagondige. On that knife etc. small things were being kept. As soon as you come home, if stretched hand easily accessible place means Naagondige.

Eg: On naagondige, Almanac must be there. Bring it.

613. ನಾಟಿಔಷಧಿ: ನೋಡಿ: ಕೈಔಷಧಿ

<naaTioushadhi> Native medicine - See: Kaioushadhi

614. ನಾಟಿವೈದ್ಯ: ಹಳ್ಳಿಯಲ್ಲಿ ಯಾವುದಾದರೂ ದೊಡ್ಡ ದೊಡ್ಡ ಖಾಯಿಲೆಗಳು ತಲೆದೋರಿದಾಗ ಮಾತ್ರ ಹಳ್ಳಿಯವರು ಆಸ್ಪತ್ರೆಗೆ ಹೋಗುತ್ತಿದ್ದರೇ ಹೊರತು, ಸಣ್ಣಪುಟ್ಟ ಖಾಯಿಲೆಗಳನ್ನು ಮನೆಗಳಲ್ಲೆ ದೊರಕುವ ಪದಾರ್ಥಗಳಿಂದ ನಾಟಿಔಷಧಿಗಳನ್ನು ಮಾಡಿ ನಿವಾರಿಸಿಕೊಳ್ಳುತ್ತಿದ್ದರು. ತುಳಸಿ, ಬೇವು, ಎಕ್ಕ, ಸೊಗಡೆಬೇರು, ವೀಳೆಎಲೆ, ಅರಿಶಿನ, ಮೆಂತ್ಯ, ಜೇನುತುಪ್ಪ ಇವುಗಳನ್ನೆಲ್ಲ ಔಷಧಿಗಾಗಿ ಉಪಯೋಗಿಸುತ್ತಿದ್ದರು.

ಕೆಲವು ನಾಟಿ ಔಷಧಿಗಳನ್ನು ನುಣ್ಣಗೆ ಅರೆದು ಸಾಣೇಕಲ್ಲಿನಮೇಲೆ ಒಂದು ಕೈಬೆಟ್ಟುದ್ದಕ್ಕೆ ಹಚ್ಚಿ ಒಣಗಿದನಂತರ ಕೊಡುತ್ತಿದ್ದರು. ಅದನ್ನು ಮನೆಗೆ ತಂದು ಒಂದು ಹೊತ್ತಿಗೆ ಒಂದು ಗೆರೆಯ ಔಷಧಿಯನ್ನು ಹಸುವಿನ ಹಾಲಿನಿಂದ ತೆಗೆದು ತುಳಸಿರಸದೊಂದಿಗೆ ಮಕ್ಕಳಿಗೆ ತಿನಿಸುತ್ತಿದ್ದರು. ಔಷಧಿ ಕೊಡುವ ವೈದ್ಯರಿಗೆ ನಾಟಿಪಂಡಿತರೆಂದು ಹೆಸರು.

ಉದಾ: ನಮ್ಮ ಅಜ್ಜಿ ನಾಟಿಔಷಧಿಗಳನ್ನು ಮಾಡುವ ಅಭ್ಯಾಸವನ್ನು ರೂಢಿಸಿಕೊಂಡಿದ್ದರು.

<naaTivaidya> Native medical treatment - In village if any extraordinary diseases occur, then only the villagers used to go to hospital. For ordinary diseases, out of ingredients available in the house, were preparing medicine using thulasi, neem, ekka, sogade roots, bete leaf, turmeric, methi, honey, all these for medicine. Some of the medicines, making nice powder on white stone, smearing about a finger length, used to give after dried. Bringing that to house for one time taking out one line of medicine with cow's milk, mixing with thulasi juice, were feeding to children. The doctor who gives medicine is called Natipandita (Native doctor)

Eg: My grandmother had developed making native medicine.

615. ನಾಟಿಹಾಕುವುದು: ಭತ್ತ ಮತ್ತು ರಾಗಿಯನ್ನು ಕೆಸರು ಗದ್ದೆಯಲ್ಲಿ ಒಟ್ಟಾಗಿ ಚೆಲ್ಲುತ್ತಾರೆ. ಅವು ಗುಡ್ಡೆಗುಡ್ಡೆಯಾಗಿ ಬೆಳೆಯುತ್ತವೆ. ಅವು ಸಣ್ಣ ಸೊಸಿಯಾದ ನಂತರ ತೆಗೆದು ಒಂದೊಂದನ್ನೆ ಬಿಡಿಸಿ ಬೇರೆ ಕಡೆ ನೆಲದಲ್ಲಿ ಸಾಲುಸಾಲಾಗಿ ಊರುವುದಕ್ಕೆ **ನಾಟಿಹಾಕುವುದು** ಎನ್ನುತ್ತಾರೆ.

ಉದಾ: ನಾಟಿಹಾಕಲು ಜನ ಪಕ್ಕದಹಳ್ಳಿಯಿಂದ ನಮ್ಮಲ್ಲಿ ಪ್ರತಿವರ್ಷ ಬರುತ್ತಾರೆ.

ನೋಡಿ: ಕೆಸರುಗದ್ದೆ

<naaTihaakuvudu> Transplanting saplings - Paddy and Ragi they spread in heap in the muddy field. They pile up and grow. After they become saplings separate each one by one and replant in line at other places. This replanting is called natihakuvudu.

Eg: For transplanting people come from neighbor village every year.

See: Kesarugadde (Muddy field)

616. ನಾಡಿಗ: ಒಂದು ಗ್ರಾಮದ ವ್ಯವಹಾರಗಳನ್ನು ನಿಭಾಯಿಸುವ ಅಧಿಕಾರಿಗೆ **ನಾಡಿಗ** ಎಂದು ಹೆಸರು. ಒಬ್ಬ ಗ್ರಾಮಾಧಿಕಾರಿಯಾಗಿದ್ದರೂ ಅವನ ಮನೆತನದವರೆಲ್ಲರಿಗು ಅವರವರ ಹೆಸರಿನ ಹಿಂದೆ ನಾಡಿಗ್ ಅನ್ನುವ ಪದವನ್ನು ಗೌರವಾರ್ಥವಾಗಿ ಸೇರಿಸುವ ಸಂಪ್ರದಾಯವಿದೆ.

ಉದಾ: ನಾಡಿಗ್ ಚಂದ್ರಯ್ಯ, ನಾಡಿಗ್ ಸೋಮಶೇಖರರಾಯ.

<naaDiga> Village Official - One who can manage the transactions of the village is called Nadiga. Even if one is Nadig, for every member of the family to prefix the word Nadiga before their name is the custom.

*Eg: Nadig Chandrayya, Nadig Somashekhararaya***.**

617. ನಾಡಹೆಂಚು: ನೋಡಿ: ಹೆಂಚು

<naaDahenchu> Local tile - See: Henchu (Tile)



618. ನಾಮಕರಣ: ಮಗುವನ್ನು ತೊಟ್ಟಿಲಿಗೆ ಹಾಕುವ ದಿನವೇ **ನಾಮಕರಣ** ಶಾಸ್ತ್ರವನ್ನು ಇಟ್ಟುಕೊಳ್ಳುತ್ತಾರೆ. ಪುರೋಹಿತರು ಬಂದು ಮಗುವಿನ ಜಾತಕವನ್ನು ಬರೆಯುತ್ತಾರೆ. ಪುಣ್ಯಾಹ, ಗಣಪತಿ ಪೂಜೆ, ನವಗ್ರಹ ಪೂಜೆಗಳು ನಡೆದ ನಂತರ ಮಗುವಿನ ಜಾತಕವನ್ನು ಓದಿ, ಮಗುವಿನ ತಂದೆ ಆ ಹೆಸರನ್ನು ಮಗುವಿನ ಕಿವಿಯಲ್ಲಿ ಮೂರುಬಾರಿ ಬೇರೆ

ಯಾರಿಗೂ ಕೇಳದಂತೆ ಹೇಳುತ್ತಾನೆ.

ನಾಮಕರಣ ಮಕ್ಕಳಿಗೆ ಹೆಸರಿಡುವ ಒಂದು ಸಂಸ್ಕಾರ. 16 ಹಿಂದೂ ಸಂಸ್ಕಾರಗಳಲ್ಲಿ ಒಂದು. ನಾಮಕರಣದಲ್ಲಿ ಕುಲದೈವದ ಹೆಸರು, ನಕ್ಷತ್ರದ ಹೆಸರು, ಹಿರಿಯರ ಹೆಸರುಗಳನ್ನು ಸಾಮಾನ್ಯವಾಗಿ ಇಡುತ್ತಾರೆ. ವಿನೀತಾ, ಮಾಧುರೀ, ವಿನಯ ಮೊದಲಾಗಿ ಮೊದಲು ಹೆಸರುಗಳಿಂದ ಸಾಮಾನ್ಯವಾಗಿ ಅವರವರ ಜಾತಿ, ಕುಲಗಳನ್ನು ಗುರುತಿಸಬಹುದಾಗಿತ್ತು. ರಾಮಯ್ಯಂಗಾರ್, ಕೃಷ್ಣಭಟ್ಟ, ಪುರೋಹಿತ ಶಾಮಣ್ಣ, ರಾಮಾಶಾಸ್ತ್ರಿ, ವೆಂಕಟೇಶ ಭಾಗವತ ಇತ್ಯಾದಿ.

ಉದಾ: (ನಕ್ಷತ್ರಗಳ ಹೆಸರುಗಳು) ಅನೂರಾಧಾ, ಕೃತ್ತಿಕಾ, ವಿಶಾಖಾ

(ಸಂವತ್ಸರಗಳ ಹೆಸರುಗಳು) ಜಯ, ಸರ್ವಜಿತ್

(ವೃತ್ತಿಗಳ ಹೆಸರುಗಳು) ಕೃಷ್ಣಮೂರ್ತಿ ಪುರಾಣಿಕ, ಪಂಡಿತರಾಮಾಶಾಸ್ತ್ರಿ, ಸೋಮಯಾಜಿ, ದೀವಟಿಗೆ ರಾಮಯ್ಯ, ಶಾಮಣ್ಣ ಮೇಶ್ಟ್ರು

ಉದಾ: ರಾಮಾಶಾಸ್ತ್ರಿಗಳ ಮೊಮ್ಮಗನ ನಾಮಕರಣವನ್ನು ಬುಕ್ಕಾಂಬುಧಿಯಲ್ಲಿ ಮಾಡ್ತಾರೆ, ನಾವು ಹೋಗಬೇಕು.

ನೋಡಿ: ಅಡ್ಡಹೆಸರು, ಗಿಡ್ಡನಾಮ

<naamakaraNa> (-) Child Naming Ceremony - On the day when child is put into cradle, they arrange Namakaranashastra. Priest will come and writes the horoscope of the child. Punyaha (religious rites), Ganapati pooja, Navagraha pooja, then reading the horoscope, the child's father whispering the name three times in the ear of the child, not to be heard by anybody.

Naming Ceremony is a religious christening of children. This is one amongst sixteen Hindu rituals. In naming ceremony generally, they adopt the name of elderly persons, name of star, family deity's name. Vineetha, Madhuri, Vinaya such names we could recognize their caste, community. Ramaiyengar, Krishnabhatta, Purohit Shamanna, Ramashastri, Venkatesha Bhagavatha etc.

Eg: (*Star names) Anuradha, Krithika, Vishakha. (Year's name) Jaya, Sarvajith.*

(Professions name) Krishnamurthy Puranik, Pandita

Ramashastri, Somayaji, Divatige Ramayya, Shamanna Meshtru.

Eg: Naming Ceremony of Ramashastri's Grandson they are doing in Bukkambudhi. We must go.

See: Addahesaru, Giddanama (Nick name)

619. ನಾದುವುದು: ಚಿರೋಟಿ ಮಾಡುವಾಗ ಸಣ್ಣರವೆಗೆ ಸ್ವಲ್ಪ ನೀರು ಬೆರೆಸಿ ಕುಟ್ಟಿ ಹದಮಾಡುವುದಕ್ಕೆ **ನಾದುವುದು** ಎನ್ನುತ್ತಾರೆ.

ಉದಾ: ಇನ್ನೂ ಸ್ವಲ್ಪಹೊತ್ತು ಹಿಟ್ಟನ್ನು ನಾದಿದರೆ ಚಿರೋಟಿ ಮೃದುವಾಗಿ ಬರುತ್ತೆ.

<naaduvudu> Kneading - While preparing Chiroti (a kind of sweet dish) for fine rava mixing water and pound to bring it to proper condition, they say naduvdu.

Eg: If you knead the flour for some more time, chiroti will come crisp.

620. ನಾಯಿಮುಂಡೇದೆ: ನೋಡಿ: ಬ್ರಾಹ್ಮಣರ ಬೈಗುಳ

<naayimunDede> Vulgar word - See: Brahmanara baigula (vulgar language)



621. ನಾರು: ಬಾಳೆ ಮತ್ತು ರಕ್ಕಸಪಟ್ಟೆಯಿಂದ **ನಾರನ್ನು** ತೆಗೆಯುತ್ತಾರೆ. ಬಾಳೆಯ ನಾರನ್ನು ಹೂವಿನದಂಡೆ ಮಾಡಲು ಉಪಯೋಗಿಸುತ್ತಾರೆ. ತೆಂಗಿನಮರಕ್ಕೆ ಹತ್ತುವಾಗ ಕಾಲಿಗೆ ಸಿಂಬೆಯಂತೆ ಹಾಕಿಕೊಳ್ಳಲು ದಪ್ಪವಾದ ಬಾಳೆಯನಾರು ಬೇಕು. ರಕ್ಕಸಪಟ್ಟೆಯ ನಾರಿನಿಂದ ಹುರಿ ಮತ್ತು ಬಟ್ಟೆಯನ್ನು ತಯಾರಿಸಬಹುದು. ಈ ನಾರನ್ನು ಕಿತ್ತಾನಾರೆಂದು ಕರೆಯುವುದು ರೂಢಿ. ರಕ್ಕಸಪಟ್ಟೆಯ ನಾರಿನಿಂದ ತಯಾರಿಸಿದ ಬಟ್ಟೆಯನ್ನು ಮಡಿಮಗುಟ ಎಂದು ಹೇಳುತ್ತಾರೆ. **ನಾರು** ಎನ್ನುವ ಪದವನ್ನು ಕೆಟ್ಟವಾಸನೆಯೆಂದು ಹೇಳುವಾಗ ಬಳಸುತ್ತಾರೆ.

ಉದಾ: ಆ ಕಡೆ ಹೋಗಬ್ಯಾಡ, ಇಲಿ ಸತ್ತುಬಿದ್ದು ಗಬ್ಬು ವಾಸನೆ ನಾರತಾ ಇದೆ.

ನೋಡಿ: ರಕ್ಕಸಪಟ್ಟೆ, ಬಾಳೆನಾರು, ಸಿಂಬೆ, ಕಿತ್ತಾನಾರು

<naaru> (-) Bark of Plantain Stem - They take out fiber of the bark of plantain and Rakkasapatte. Fiber of plantain they use for making flower bunch. While climbing coconut tree to tie to the leg like a roll, thick plantain fiber is required. From fiber of rakkasapatte, thread and cloth can be prepared. This fiber it is common to say Kithhaanaru. Cloth made of Kithhanaru they say madimaguta. The word naru is used when expressing bad smell.

Eg: Do not go that side. Rat has fallen dead, bad smell is coming out.

See: Rakkasapatte, Balenaru, Simbe, Kithhanaru.

622. ನಿರ್ಮಾಲ್ಯ: ದೇವರಿಗೆ ಪೂಜೆ ಮಾಡಿದ ಹೂವು ಬಾಡಿದ ಮೇಲೆ ಅದನ್ನು **ನಿರ್ಮಾಲ್ಯ** ಎನ್ನುವುದು ರೂಢಿ. ನಿರ್ಮಾಲ್ಯವನ್ನು ತೆಗೆದು ಯಾವುದಾದರೂ ಗಿಡದಬಡ್ಡೆಗೆ ಹಾಕುತ್ತಾರೆ.

ಉದಾ: ನಾನು ಸ್ನಾನಮುಗಿಸಿ ಬರೂದ್ರೊಳಗೆ ನಿರ್ಮಾಲ್ಯನೆಲ್ಲ ತೆಗೆದುಹಾಕು.

<nirmaalya> Faded flowers leftover on God's idol - It is common to say nirmalya for the flowers worshipped to God becoming dull. Such flowers are put at the bottom of any plant.

Eg: Before I come after bath, remove all nirmalya

623. ನಿವಾಳಿಸು: ನೋಡಿ: ದೃಷ್ಟಿತೆಗೆಯುವುದು

<nivaalisu> Waving - See: Drushtitegeyuvudu

624. ನಿಶ್ಚಿತಾರ್ಥ: ಮದುವೆ ನಿಶ್ಚಿತಾರ್ಥಗಳು ಈಗಿನ ಕಾಲಕ್ಕು ಆಗಿನ ಕಾಲಕ್ಕು ತದ್ವಿರುದ್ಧ. ಮಗಳಿಗೆ ತಕ್ಕ ವರನನ್ನು ಹುಡುಕುವ ಜವಾಬ್ದಾರಿ ತಂದೆ ತಾಯಿಗಳದ್ದು. ಗಂಡಿನ ಮನೆತನದವರ ಹಿನ್ನೆಲೆಯನ್ನು ತಿಳಿದು, ನಂತರ ಅವರನ್ನು ಭೇಟಿ ಮಾಡಿ ಗಂಡು ಹೆಣ್ಣಿನ ಜಾತಕಗಳನ್ನು ಪರಿಶೀಲಿಸಿದ ಮೇಲೆ ಗಂಡಿನ ಆಪ್ತ ನೆಂಟರಿಷ್ಟರು ಹೆಣ್ಣನ್ನು ನೋಡಲು ಬರುತ್ತಿದ್ದರು. ಎರಡು ಕಡೆಯವರಿಗೂ ಒಪ್ಪಿಗೆಯಾದ ನಂತರ ನಿಶ್ಚಿತಾರ್ಥಕ್ಕೆ ದಿನವನ್ನು ಗೊತ್ತು ಮಾಡಿ ಗಂಡಿನ ಮನೆಯವರನ್ನು ಕರೆಯುತ್ತಾರೆ. ಪುರೋಹಿತರು ಹೆಣ್ಣಿನ ತಂದೆ ತಾಯಿಗಳನ್ನು ಮತ್ತು ಗಂಡಿನ ತಂದೆ ತಾಯಿಗಳನ್ನು ಹಸೆಯ ಮೇಲೆ ಕೂರಿಸಿ, ಗಣಪತಿ ಪೂಜೆ ಮಾಡಿ, ಇಬ್ಬರ ಜಾತಕಗಳನ್ನು ಹೆಣ್ಣಿನ

ಜಾತಕವನ್ನು ಗಂಡಿನ ಕಡೆಯವರಿಗೂ ಗಂಡಿನ ಜಾತಕವನ್ನು ಹೆಣ್ಣಿನ ಕಡೆಯವರಿಗೂ ಬದಲಾಯಿಸುತ್ತಾರೆ. ಹೆಂಗಸರು ಆರತಿ ಮಾಡಿದ ನಂತರ ಕಲಾಪ ಪೂರ್ತಿಯಾಗುತ್ತೆ.

ಉದಾ: ನಾಳೆ ನಿಶ್ಚಿತಾರ್ಥಕ್ಕೆ ನೀವೆಲ್ಲಾ ಖಂಡಿತ ಬರಬೇಕು.

<nishchithaarttha> Engagement - Marriage engagements are quite opposite between this time and earlier days. To select a suitable boy for the daughter is the responsibility of parents. Knowing the background of the boy's family, then meeting them, tallying the horoscopes of boy and girl, close relatives of boy used to come to see the girl. After agreeing both sides fixing a date for engagement invite the family members of the boy. The priest seating the parents of girl and parents of boy on the Hase (decorated wooden plank) worshipping Ganapathi he exchanges both the horoscopes, horoscope of girl to parents of boy, horoscope of boy to parents of girl. After doing Arati the program concludes.

Eg: For engagement tomorrow, all of you must come.

625. ನಿಷೇಕ: ಮದುವೆಯಾದ ನಂತರ ನಡೆಸುವ ಮೊದಲ ಕಾರ್ಯಕ್ರಮ. ಹುಡುಗಿ ಋತುಮತಿಯಾದಾಗ **ನಿಷೇಕ** ಏರ್ಪಡಿಸುತ್ತಾರೆ. ಅವಳಿಗೆ ಆ ದಿನ ಕರಿಎಳ್ಳಿನಿಂದ ಮಾಡಿದ ಚಿಗುಳಿಯನ್ನು ಕೊಡುತ್ತಾರೆ. ಗಂಡ ಹೆಂಡತಿಯರು ಒಟ್ಟಿಗೆ ಸೇರುವ ಸಮಾರಂಭ. ವಂಶವನ್ನು ಬೆಳೆಸುವುದಕ್ಕೆ ಮಾಡಬೇಕಾದ ಒಂದು ಶಾಸ್ತ್ರವಿಧಿಗೆ ಗರ್ಭಾದಾನ ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಬಾಲ್ಯವಿವಾಹ ಪದ್ಧತಿ ಇದ್ದುದರಿಂದ ಮದುವೆ ಆದ ದಿನಕ್ಕೂ ನಿಷೇಕದ ದಿನಕ್ಕೂ ಸಾಕಷ್ಟು ಕಾಲಾವಧಿ ಇರುತ್ತಿತ್ತು.

ಉದಾ: ನಿಷೇಕಕ್ಕೆ ಬಿಟ್ಟಿರುವ ಕೊಠಡಿಯಲ್ಲಿ ಚೆನ್ನಾಗಿ ಅಲಂಕಾರಮಾಡಿ.

<nisheeka> Nuptial ceremony - The first program after the marriage. When the girl becomes pregnant, they arrange Nisheeka. On that day they give her Chiguli (made of black sesame). A function for husband and wife to join. For continuance of generation, the ritual to be done is called Garbhadana. In olden days since there was the system of child marriage, there was a gap of enough time in between the day of

marriage and engagement day.

Eg: In the room reserved for Nisheeka, do decoration neatly.

626. ನೀರ್‌ಗಂಟಿ: ನೋಡಿ: ಅಡ್ಡಗಟ್ಟು

<neerganTi> Village official - See: Addagattu

627. ನೀರಡಿಕೆ: ನೋಡಿ: ಬಾಯಾರಿಕೆ

<neeraDike> Thirsty - See: Bayarike

628. ನೀರುತುಂಬುವ ಹಬ್ಬ: ಕಾರ್ತಿಕ ಮಾಸದ ತ್ರಯೋದಶಿಯ ದಿನ **ನೀರುತುಂಬುವ ಹಬ್ಬ**. ನೀರು ಕಾಯಿಸುವ ಹಂಡೆ ಕೊಳದಪ್ಪಲೆಗಳನ್ನು ತೊಳೆದು, ಹಂಡೆಯ ಹೊರಭಾಗಕ್ಕೆ ಸುಣ್ಣಬಳಿದು ನೀರು ತುಂಬುತ್ತಾರೆ. ಮಾರನೆಯ ದಿವಸ ನರಕಚತುರ್ದಶಿ. ಎಲ್ಲರೂ ಬೆಳಿಗ್ಗೆ ಮುಂಚೆ ಎದ್ದು ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆಗಳನ್ನುಟ್ಟುಕೊಳ್ಳುವುದು ಸಂಪ್ರದಾಯ. ಹುಡುಗರು ಪಟಾಕಿ, ಸುರ್‌ಸುರ್‌ಬತ್ತಿಯನ್ನು ಹಚ್ಚುತ್ತಾರೆ.

ಉದಾ: ಬೆಳಿಗ್ಗೆ ಬೇಗ ಏಳಿ, ನೀರುಹಾಕಿಕೊಂಡು ಪಟಾಕಿ ಒಡೀಬೇಕು.

<neeruthumbuvahabba> (-) First day's festival of Deepavali - On Thrayodasi (thirteenth) day of Karthik month neeruthumbuvahabba. Cleaning Handa, big vessels for heating water for bathing, smear lime for outer part of Handa, fill water. Next day Narakachaturdasi. All getting up early take bath with smearing oil all over the body and wear new clothes is the tradition. Children light crackers.

Eg: Get up quickly in the morning. Taking bath must light crackers.

629. ನೀರುಮಜ್ಜಿಗೆ: ಮೊಸರನ್ನು ಕಡೆದು ಬೆಣ್ಣೆಯನ್ನು ಪ್ರತ್ಯೇಕ ಮಾಡಿದ ಮೇಲೆ ಉಳಿಯುವುದೇ **ನೀರುಮಜ್ಜಿಗೆ**. ಮಜ್ಜಿಗೆ ಆರೋಗ್ಯಕರವಾದದ್ದು. ಹಳ್ಳಿಗಳಲ್ಲಿ ವರ್ಷಕ್ಕೊಮ್ಮೆ ನಡೆಸುವ ಜಾತ್ರೆಯಲ್ಲಿ ಬೇರೆ ಹಳ್ಳಿಗಳಿಂದ ಬರುವವರಿಗೆಲ್ಲ ಅರವಟ್ಟಿಗೆಗಳಲ್ಲಿ ನೀರುಮಜ್ಜಿಗೆಯನ್ನಿಟ್ಟುಕೊಂಡು ಹಂಚುತ್ತಾರೆ. ನೀರುಮಜ್ಜಿಗೆಗೆ ಉಪ್ಪು, ಹಸೀಶುಂಠಿಯ ರಸವನ್ನು ಬೆರೆಸಿದರೆ ಇನ್ನೂ ರುಚಿ. ಕರಗದಲ್ಲಿ, ರಾಮನವಮಿ ಮೊದಲಾದ ಹಬ್ಬಗಳಲ್ಲಿ ಪಾನಕ, ಕೋಸುಂಬರಿಗಳ ಜತೆಗೆ

ನೀರುಮಜ್ಜಿಗೆ ಹಂಚುವುದು ಸರ್ವೇಸಾಮಾನ್ಯ.

ಉದಾ: ನಮ್ಮ ಚಿಕ್ಕಪ್ಪ ನೀರುಮಜ್ಜಿಗೆ ಅರವಟ್ಟಿಗೆ ಇಟ್ಟಿದ್ದಾರೆ.

<neerumajjige> Buttermilk - Stirring curds, after separating butter, the remnant is neerumajjige. Buttermilk is healthy. During festival observed in villages once a year, distribute buttermilk keeping in Aravattige to all incoming people from other villages. For buttermilk if salt, ginger juice mixed it will be tasty. It is common to distribute buttermilk along with juice and Kosumbari during Karaga, Ramanavami etc. festivals.

Eg: Our uncle has kept buttermilk Aravattige.

630. ನುಚ್ಚು: ಅಕ್ಕಿ ಅಥವಾ ಗೋಧಿಯನ್ನು ಸಣ್ಣ ಚೂರುಚೂರಾಗಿ ಒಡಕಲಿನ ತರಹ ಬೀಸಿದರೆ ಅದನ್ನು **ನುಚ್ಚು** ಎನ್ನುತ್ತಾರೆ.

ಉದಾ: ಅಕ್ಕಿಯ ನುಚ್ಚನ್ನು ಹಾಕಿ ಮಾಡಿದ ಅಂಬಲಿ, ಗೋಧಿಯ ನುಚ್ಚನ್ನು ಹಾಕಿ ಮಾಡಿದ ಅನ್ನ ಎರಡೂ ಬಹಳ ರುಚಿ.

ನೋಡಿ: ತರಿ, ರವೆ

<nuchhu> Grinded wheat or Rice - If rice or wheat is grinded as coarsely, they say it is nuchhu.

Eg: Ambali (rice gruel) made of rice nuchhu, rice made of wheat nuchhu both are tasty.

See: Thari, Rava

631. ನುಲಿ: ತಿರುಚುವುದಕ್ಕೆ **ನುಲಿ** ಎಂದು ಹೇಳುವುದು. ತೆಂಗಿನನಾರಿನ ಎಳೆಗಳನ್ನು ಒಂದಕ್ಕೊಂದು ಸೇರಿಸಿ ನುಲಿದರೆ ಹಗ್ಗವಾಗುತ್ತೆ. ಹಾಗೆಯೆ ಹತ್ತಿ ಅಥವಾ ಸೆಣಬಿನ ನಾಲ್ಕಾರು ದಾರಗಳನ್ನು ಒಟ್ಟಿಗೆ ನುಲಿದಾಗ ಅದು ಗಟ್ಟಿಯಾದ ಹುರಿಯಾಗುತ್ತದೆ. ಹೊಟ್ಟೆಯಲ್ಲಿ ತಿರುಚಿದಂತಾಗಿ ನೋವಾದರೆ, ಹೊಟ್ಟೆ ನುಲಿಯುತ್ತೆ ಎನ್ನುತ್ತಾರೆ.

ಉದಾ: ಬೆಳಗಿನಿಂದ ಹೊಟ್ಟ ನುಲೀತಾ ಇದೆ, ಒಂದು ಲೋಟ ಮಜ್ಜಿಗೆ ಕೊಡು.

<nuli> Squeezing - For twisting is called nuli. Fibers of coconut skin if twisted one with another it becomes rope.

Likewise, cotton or jute fibers twisted four or six threads, it becomes strong thread. In stomach by twisting if you get pain, they say stomach nuliyuttide (twisting).


Eg: Since morning stomach is twisting. Give me a cup of buttermilk.

632. ನೂಕುನುಗ್ಗಲು: ಜನಗಳು ಗುಂಪುಗುಂಪಾಗಿ ಒಬ್ಬರಿಗೊಬ್ಬರು ತಗುಲಿಕೊಂಡು ಓಡಾಡುತ್ತಿದ್ದರೆ ಆ ಜನಸಂದಣಿಯನ್ನು **ನೂಕುನುಗ್ಗಲು** ಅನ್ನುವುದು ರೂಢಿ.

ಉದಾ: ಮೊನ್ನೆ ಮಾರಮ್ಮನ ಜಾತ್ರೇಲಿ ಕಾಲಿಡುಕ್ಕೆ ಜಾಗವಿರಲಿಲ್ಲ. ಗುಡಿ ಒಳಗೂ ನೂಕುನುಗ್ಗಲು, ಹೊರಗೂ ನೂಕುನುಗ್ಗಲು.

<nuukunuggalu> Rushing crowd - If people are walking together in groups rubbing each other, for that crowd it is common to say nuukunuggalu (jammed).

Eg: Day before yesterday, in Maaramma festival there was no space to step in. Inside the temple also rushing crowd, outside also rushing crowd.



633. ನೆಲಬಾವಿ: ನೆಲವನ್ನು 30–40 ಅಡಿ ಆಳವಾಗಿ ಗುಂಡಿಯಂತೆ ಅಗೆದರೆ ಜಲ ಮೇಲಕ್ಕೆ ಬರುತ್ತೆ. ಆ ಗುಂಡಿಗೆ ನೆಲಬಾವಿ ಎಂದು ಹೆಸರು. ನೆಲಬಾವಿಗೆ ಸುತ್ತ ಕಟಕಟೆ ಇರುವುದಿಲ್ಲ. ಹಗ್ಗದಿಂದ ಕೊಡವನ್ನು ಕಟ್ಟಿ ಬಾವಿಯೊಳಕ್ಕೆ ಬಿಟ್ಟು ನೀರನ್ನು ಎತ್ತಬೇಕು.


ರಾಟೆಬಾವಿ ಅಥವಾ ಸೇದುವ ಬಾವಿಯಾದರೆ ಅದರ ಮೂಲಕ ಹಗ್ಗವನ್ನು ಎಳೆದು ನೀರನ್ನು ಎತ್ತಬಹುದು. ಕೆಲವು ಬಾವಿಗಳಲ್ಲಿ ಬರುವ ನೀರು ಅಡುಗೆಮಾಡಲು ಸರಿಹೋಗುವುದಿಲ್ಲ. ಹಳ್ಳಿಯಲ್ಲಿ ಸಿಹಿನೀರಿನಬಾವಿ ಎಂದೇ ಪ್ರತ್ಯೇಕವಾಗಿರುತ್ತೆ. ಆ ಬಾವಿಯಿಂದ ಯಾರು ಬೇಕಾದರೂ ನೀರನ್ನು ಸೇದಿ ತೆಗೆದುಕೊಳ್ಳಬಹುದು. ತೋಟಗಳಲ್ಲಿ 20–25 ಅಡಿ ಅಗಲದ ಬಾವಿಗಳೂ ಇರುತ್ತವೆ. ಅಡಕೆ, ತೆಂಗು ಮತ್ತು ಬಾಳೆ ಗಿಡಗಳಿಗೆ ನೀರು ಹಾಯಿಸಲು ಆ ತರಹ ಬಾವಿಗಳನ್ನು ತೋಡಿಸುತ್ತಾರೆ.

ಉದಾ: ಈ ವರ್ಷ ಮಳೆ ಕಮ್ಮಿಯಾಗಿ ಬಾವಿಗಳೆಲ್ಲ ಬತ್ತಿಹೋಗಿದೆ.

<nelabaavi> Well without platform - If you dig earth 30-40 feet depth like pit, water comes up. That pit is called Nelabavi (which is in the ground level without platform). For Nelabavi there will be no platform around. Tying the vessel with the rope, leaving inside the well, must lift water. If it is Well with spinning wheel or well with rope, we can lift water through them. Water in some of the wells will not suit for cooking. In the village there will be a well separately with sweat water. Anybody can take water from that well. In gardens wells are there with 20-25 feet width. They will have dug such wells for supplying water to Areca, Coconut, and banana plants.

Eg: This year less rain, all wells have dried up.

634. **ನೆಲುವು:** ಮೂರು ನೂಲಿನ ಹಗ್ಗವನ್ನು ಮೇಲಿನಿಂದ ಕಟ್ಟಿ, ಅದರ ಮಧ್ಯೆ ಬೆಣ್ಣೆ, ಮೊಸರು ಮುಂತಾದುವನ್ನು ಮಡಿಕೆಯಲ್ಲಿಟ್ಟು ತೂಗು ಹಾಕಿರುತ್ತಾರೆ. ಅದಕ್ಕೆ **ನೆಲುವು** ಎಂದು ಹೆಸರು. ಅದನ್ನು ತೆಗೆದುಕೊಳ್ಳುವಾಗ ಒಂದು ಎತ್ತರವಾದ ಹಲಗೆಯ ಮೇಲೆ ನಿಂತುಕೊಳ್ಳಬೇಕು. ಬೆಕ್ಕನ್ನು ಸಾಮಾನ್ಯವಾಗಿ ಎಲ್ಲರ ಮನೆಯಲ್ಲು ಸಾಕಿರುತ್ತಾರೆ. ಕೆಳಗಡೆ ಹಾಲು, ಮೊಸರು, ಬೆಣ್ಣೆಯನ್ನು ಇಟ್ಟರೆ ಏನೂ ಉಳಿದಿರುವುದಿಲ್ಲ.



ಉದಾ: ನೆಲುವಿನಮೇಲೆ ಬೆಣ್ಣೆಕುಡಿಕೆ ಇದೆ, ಕೆಳಕ್ಕಿಳಿಸು.

<neluvu> (-) Tying three ropes from top in between hang the pots, keeping butter, curds in pots. It is called Neluvu. While taking, you must stand on a height plank. Generally, they will have reared cat in every house. If you keep milk, curds, butter down, nothing will be left.

Eg: Butterpot is on Neluvu bring it down.

635. **ನೈವೇದ್ಯ:** ನಾವು ತಿನ್ನುವ ಪದಾರ್ಥವನ್ನು ಮೊದಲು ದೇವರ ಮುಂದಿಟ್ಟು ದೇವರಿಗೆ ಅರ್ಪಿಸುವುದನ್ನು **ನೈವೇದ್ಯ** ಎನ್ನುತ್ತಾರೆ. ದೇವರಿಗೆ ನೈವೇದ್ಯ ಮಾಡಿ ನಂತರ ಆ ಹಣ್ಣು, ಕಾಯಿ, ಭಕ್ಷ್ಯ, ಭೋಜ್ಯಗಳನ್ನು ಪ್ರಸಾದರೂಪವಾಗಿ ಸ್ವೀಕರಿಸಬೇಕು.



ಆಸ್ತಿಪಾಸ್ತಿಗಳನ್ನೆಲ್ಲ ಕಳೆದುಕೊಂಡಿರುವ ಸಮಯದಲ್ಲು **ನೈವೇದ್ಯ** ಅನ್ನುವ ಪದವನ್ನು ಉಪಯೋಗಿಸುವುದು ವಾಡಿಕೆಯಲ್ಲಿದೆ.

ಉದಾ: ಶಿವಪ್ಪ ಒಂದೊಂದಾಗಿ ಇದ್ದಬದ್ದ ಜಮೀನನ್ನೆಲ್ಲ ಹಾಳುಮಾಡಿಕೊಂಡ, ಈಗ ಕೈಲೇನು ಇಲ್ಲ, ಎಲ್ಲ ನೈವೇದ್ಯ.

<naiveedya> (-) Food offered to God - The food we eat, to offer before God, they say naiveedya. We must offer fruits, coconut, any eatables, then accept that as Prasad. In times of losing all properties also, it is in vogue to use the word naiveedya.

Eg: Shivappa lost all land one by one. Now nothing in his hand, all naiveedya.



636. ನೊಗ: ಬೇಸಾಯ ಮಾಡುವಾಗ ನೊಗವನ್ನು ಮಾತ್ರ ಎತ್ತುಗಳ ಹೆಗಲ ಮೇಲಿಟ್ಟು, ನೊಗದ ಮಧ್ಯಭಾಗಕ್ಕೆ ನೇಗಿಲು, ಕುಂಟೆ, ಕೂರಿಗೆಗಳನ್ನು ಜೋಡಿಸುತ್ತಾರೆ. ಗಾಡಿಗೆ ಎತ್ತುಗಳನ್ನು ಕಟ್ಟುವಾಗ ಎರಡು ಎತ್ತುಗಳ ಕೊರಳ ಮೇಲೂ ಮರದ **ನೊಗ**ವನ್ನಿಟ್ಟು ಹಗ್ಗದಿಂದ ಕತ್ತಿನ ಸುತ್ತಲೂ ಕಟ್ಟಿರುತ್ತಾರೆ. ಎತ್ತುಗಳು ಗಾಡಿ ಆಕಡೆ ಈಕಡೆ ವಾಲದಂತೆ ಒಂದೇ ಸಮನಾಗಿ ಎಳೆಯುತ್ತವೆ. ನೊಗವನ್ನು ಒಂದೇ ಮರದ ತುಂಡಿನಿಂದ ಮಾಡುತ್ತಾರೆ. ಸಾಮಾನುಗಳನ್ನು ಎಳೆಯುವ ಗಾಡಿಗೆ ನೊಗ ಹೊಂದಿಕೊಂಡೇ ಇರುತ್ತೆ. ಗದ್ದೆ ಹೊಲಗಳಲ್ಲಿ ಬೇಸಾಯ ಮಾಡುವಾಗ ನೊಗವನ್ನು ಮಾತ್ರ ಎತ್ತುಗಳ ಹೆಗಲ ಮೇಲಿಟ್ಟು, ನೊಗದ ಮಧ್ಯಭಾಗಕ್ಕೆ ನೇಗಿಲು, ಕುಂಟೆ, ಕೂರಿಗೆಗಳನ್ನು ಜೋಡಿಸುತ್ತಾರೆ.

ಉದಾ: ನೊಗ ಹೂಡು ಇವತ್ತು ನಾಲ್ಕು ಸೀಳಾದರು ಮುಗಿಸಬೇಕು.

<Noga> Yoke - While doing agriculture, putting the yoke on the neck of oxen, they attach in the center plough, kunte (an instrument of agriculture), koorige (seed drill). While tying oxen to the cart, putting yoke on neck of both the oxen, tie with rope around the neck, oxen will pull the cart, without wallowing on any side. Yoke is made of one whole wood. For cart which pulls things yoke is always attached. In field while doing agriculture they put yoke only on the neck of oxen and attach in

the center plough, kunte, koorige.

Eg: Arrange Noga, today we must complete at least four parts.



637. ನೊಜೆಹುಲ್ಲಿನ ಪರಕೆ: ಒಂದು ವಿಶೇಷವಾದ ಹುಲ್ಲಿನಿಂದ ತಯಾರಾದ ಕಸ ಗುಡಿಸುವ ಪರಕೆ. ಪರಕೆಯನ್ನು ಈಚಲುಮರ ಅಥವಾ ತೆಂಗಿನಮರದ ಸೋಗೆಯಿಂದಲೂ ಮಾಡುತ್ತಾರೆ. ಸಾಮಾನ್ಯವಾಗ ಹಳ್ಳಿಗಳಲ್ಲಿ, ಅಡುಗೆ ಮನೆಯಲ್ಲಿ ಕಸ ಗುಡಿಸಲು, **ನೊಜೆಹುಲ್ಲಿನ** ಪರಕೆಯೆ ಶ್ರೇಷ್ಠ. ಅದು ಒಂದು ಒಂದೂವರೆ ಅಡಿಯಷ್ಟು ಎತ್ತರವಿರುತ್ತೆ. ಬೇರೆಕಡೆ ಗುಡಿಸಲು ಈಚಲು ಪರಕೆ ಸಾಕು. ಮನೆಯ ಹೊರಗಡೆ ಗುಡಿಸುವುದಕ್ಕೆ ತೆಂಗಿನಮರದ ಸೋಗೆಯ ಕಡ್ಡಿಗಳಿಂದ ತಯಾರಾದ ಕಡ್ಡಿಪೊರಕೆ ಸರಿಯಾದುದು. ರಸ್ತೆಗಳಲ್ಲಿ ಕಸ ಗುಡಿಸಬೇಕಾದರೆ, ಅದಕ್ಕೆ ಪ್ರತ್ಯೇಕ ಕಸಬರಿಕೆಯೇ ಬೇಕು. ಅಂತಹ ಪೊರಕೆಯನ್ನು ಬಿದಿರಿನ ಕೋಲಿನಿಂದ ಮಾಡುತ್ತಾರೆ. 5–6 ಅಡಿ ಉದ್ದದ ಬಿದಿರಿನ ಕೋಲಿಗೆ ಕೆಳಭಾಗದಲ್ಲಿ ಸುಮಾರು ಎರಡು ಅಡಿ ಅಗಲದ ಬಿದಿರಿನ ಸಣ್ಣಕಡ್ಡಿಗಳಿಂದ ಮಾಡಿದ ಚಾಪೆಯನ್ನು ಸೆಗಿಸಿರುತ್ತಾರೆ. ಅದನ್ನು ನಿಂತುಕೊಂಡೆ ರಸ್ತೆಗಳಲ್ಲಿ ಬಿದ್ದಿರುವ ಕಸವನ್ನು ಗುಡಿಸಬಹುದು. ಕಸುಡಿಕೆ, ಕಸಪರಕೆಗಳು ಕಸಗುಡಿಸುವ ಸಾಧನಗಳಾಗಿವೆ.

ಉದಾ: ಅಡಿಗೆಮನೆ ಗುಡಿಸುವ ಪೊರಕೆ ಮೊಂಡಾಗ್ಬಿಟ್ಟಿದೆ, ಒಂದೆರಡು ನೊಜೆಹುಲ್ಲಿನ ಪರಕೆ ಮಾಡು.

ನೋಡಿ: ಮೊಂಡುಪರಕೆ, ದೃಷ್ಟಿತೆಗೆ, ಕಸಪೊರಕೆ, ಕುಚ್ಚುಮೊಟ್ಟೆ

ಶಬ್ದರೂಪ: ಪೊರಕೆ (ಪರಕೆ)

<nojehullinaporake> (-) Broom made of grass - A broomstick made of a special type of grass. They make broomstick with leaf of palm tree or coconut tree. Generally, in villages to sweep in kitchen nojehullinaporake is famous. It will be of one to one-and-half foot height. To sweep outside broomstick made of palm tree is enough. To sweep outside the house, broomstick made of coconut tree sticks is suitable. To sweep on roads a separate broomstick is required. Such type of broomstick is made of bamboo stick. Five to six feet length bamboo stick, at the bottom they will have attached a two feet

width carpet made of small sticks of bamboo. With that standing alone we can sweep the road. Kasudike, kasaparakes have become equipments.

Eg: Do one or two parakes.

See: Monduparake, Drushtitege, kasaporake, kuchhumotte.

Different version: Porake (parake)

❑

ಪ / Pa



638. ಪಂಚಕಜ್ಜಾಯ: ಅವಲಕ್ಕಿ, ಹುರಿಗಡಲೆ ಮತ್ತು ಎಳ್ಳನ್ನು ಪುಡಿಮಾಡಿ ಬೆಲ್ಲ, ಕೊಬ್ಬರಿಯೊಂದಿಗೆ ಬೆರೆಸಿ ಮಾಡಿದ ತಿಂಡಿಗೆ ಪಂಚಕಜ್ಜಾಯ ಎಂದು ಹೆಸರು. ಸಾಮಾನ್ಯವಾಗಿ ಕಾರ್ತಿಕಮಾಸದಲ್ಲಿ ಪ್ರತಿ ಸೋಮವಾರದ ದಿನ ಈಶ್ವರದೇವಾಲಯಗಳಲ್ಲಿ ವಿಶೇಷಪೂಜೆ. ಆ ದಿನ ದೇವರ ನೈವೇದ್ಯಕ್ಕಾಗಿ ಪಂಚಕಜ್ಜಾಯವನ್ನು ಮಾಡಿ, ಬಂದ ಭಕ್ತಾದಿಗಳಿಗೆ ಪ್ರಸಾದರೂಪವಾಗಿ ಹಂಚುತ್ತಾರೆ. ಇದಕ್ಕೆ ಚರುಪು ಎಂದೂ ಹೆಸರು.

ಉದಾ: ಮೊನ್ನೆ ಶನಿವಾರದಪೂಜೆಗೆ ಪಂಚಕಜ್ಜಾಯ ಮಾಡಿಸಿದ್ದರು.

<panchakajjaaya> (-) Mixture of Five ingredients - The dish making powder beaten rice, roasted gram and sesame, mixing jaggery and dry coconut, is called panchakajjaya (a kind of sweet dish mixing five items). Generally, during Karthik month every Monday, special pooja in Eashwara temples. On that day to offer God, they do panchakajjaya and distribute as Prasad to all devotees who come. For this it is also called charupu.

639. ಪಂಚಪಾತ್ರೆ: ಪಂಚಪಾತ್ರೆ – ಉದ್ಧರಣೆಯನ್ನು ವಿಶೇಷವಾಗಿ ತಾಮ್ರದ ಲೋಹದಿಂದ ತಯಾರುಮಾಡುತ್ತಾರೆ. ಬ್ರಾಹ್ಮಣರು ಸಂಧ್ಯಾವಂದನೆ ಮಾಡುವಾಗ ಈ ತರಹ ಪಾತ್ರೆಗಳನ್ನೇ ಉಪಯೋಗಿಸುವುದು. ಉದ್ಧರಣೆಯನ್ನು ದೇವರಪೂಜೆ



ಮಾಡುವಾಗ ತಾಮ್ರದ ಚೊಂಬಿನಿಂದ ನೀರು ತೆಗೆದುಕೊಳ್ಳಲು ಬಳಸುತ್ತಾರೆ.

ಉದಾ: ಇಬ್ರಿಗೂ ಒಂದೊಂದು ಪಂಚಪಾತ್ರೆ ಉದ್ಧರಣೆ ಇಟ್ಟಿಡಿ.

ನೋಡಿ: ಉದ್ಧರಣೆ

ಉದ್ಧರಣೆ, ಪಂಚಪಾತ್ರೆ, ತಟ್ಟೆ ಈ ಮೂರನ್ನು ಮುಂಜಿಯಲ್ಲಿ ವಟುವಿಗೆ ಓದಿಸುವವರು ಉಡುಗೊರೆಯಾಗಿ ನೀಡುತ್ತಾರೆ.

ನೋಡಿ: ಅರ್ಘ್ಯಪಾತ್ರೆ

<panchapaathre> Copper cup - Panchapaathre - UddharaNe is specially prepared out of copper. Brahmins while doing Sandhyaavandana, use this type of vessels only. UddharaNe while worshipping, use to take out water from the copper vessel.

UddharaNe, panchapaathre, plate all these three, those who want to give to VaTu during thread ceremony, offer as gift.

Eg: Keep one panchapaathre, uddharaNe each for both.

640. ಪಂಚಾಂಗಶ್ರವಣ: ಹೊಸವರ್ಷ ಪ್ರಾರಂಭವಾಗುವ ಮೊದಲನೆ ದಿನ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಆ ದಿನ ರಾತ್ರೆ ಹಳ್ಳಿಯ ಮುಖ್ಯ ದೇವಸ್ಥಾನದಲ್ಲಿ ಅರ್ಚಕರು ಹೊಸ ವರ್ಷದಲ್ಲಿ ನಡೆಯುವ ಶುಭ ಮತ್ತು ಅಶುಭ ಕಾರ್ಯಗಳ ಬಗ್ಗೆ ಜನಗಳಿಗೆ ತಿಳಿಯಪಡಿಸುವುದನ್ನು ಪಂಚಾಂಗಶ್ರವಣ ಎಂದು ಹೇಳುತ್ತಾರೆ. ಪಂಚಾಂಗದಲ್ಲಿ ಎಲ್ಲ ವಿವರಗಳು ನಿರೂಪವಾಗಿರುತ್ತವೆ. ಮುಖ್ಯವಾಗಿ ಆ ವರ್ಷದ ಮಳೆ ಬೆಳೆಗಳನ್ನು ಕುರಿತು ತಿಳಿಸುವುದು ಹಳ್ಳಿಯ ರೈತರಿಗೆ ಅದುತಾನೇ ಮುಖ್ಯವಾಗಿರುತ್ತೆ.

ಉದಾ: ಸಂಜೆ ದೇವಸ್ಥಾನದಲ್ಲಿ ಪಂಚಾಂಗಶ್ರವಣ ಇದೆ, ಹೋಗೋಣ ಬನ್ನಿ.

<panchaangashravana> (-) Reciting happenings as in Almanac - The first day before commencement of the New Year, observe Ugaadi festival. That day night in all main temples of the village, the priests to impart about good and bad things to the people, they say, Panchangashravana. In the almanac all the details will have been narrated. Mainly to tell

about the year's rain, crop etc. is the main thing for farmers.

Eg: This evening in the temple there is Panchanga shravana (the prediction of happenings of the whole year). Let us go.



641. ಪಂಚಾಮೃತ: ದೇವರಿಗೆ ಅಭಿಷೇಕ ಮಾಡುವುದಕ್ಕೆ ಬಳಸುವ ಹಾಲು, ಮೊಸರು, ತುಪ್ಪ, ಜೇನುತುಪ್ಪ ಮತ್ತು ಸಕ್ಕರೆಯನ್ನು ಒಂದೊಂದಾಗಿ ದೇವರ ತಲೆಯ ಮೇಲೆ ಮಂತ್ರಪೂರ್ವಕ ಅಭಿಷೇಕ ಮಾಡಿ ಅನಂತರ ಬಂದ ಮಿಶ್ರಣಕ್ಕೆ ಪಂಚಾಮೃತ ಎಂದು ಹೆಸರು. ಪಂಚಾಮೃತವನ್ನು ಭಕ್ತಾದಿಗಳಿಗೆ ಉದ್ಧರಣೆಯಿಂದ ಕೊಡುತ್ತಾರೆ.

ಉದಾ: ರಾಮು ಎಲ್ಲರಿಗೂ ಪಂಚಾಮೃತ ಕೊಡು.

ನೋಡಿ: ರುದ್ರಾಭಿಷೇಕ

<panchaamruTa> Ritual bath to an idol - For ritual bath given to an idol which are used milk, curds, ghee, honey, and sugar one by one pouring on god through rituals, then what you get the mixture is known as panchamruta. They give panchamruta to devotees from Uddharane.

Eg: Ramu, give panchamruta to everyone.

See: Rudraabhisheka



642. ಪಂಜು: ರಾತ್ರೆಯ ಹೊತ್ತು ದೇವರ ಉತ್ಸವ ಮೂರ್ತಿಯನ್ನು ನಾಲ್ಕುಜನ ಹೆಗಲ ಮೇಲೆ ಹೊತ್ತುಕೊಂಡು ಮೆರವಣಿಗೆ ಮಾಡುವಾಗ ಮುಂದುಗಡೆ ನಾಲ್ಕಾರುಜನ ಪಂಜನ್ನು ಹಿಡಿದುಕೊಂಡು ಹೋಗುತ್ತಾರೆ. ಸುಮಾರು ಎರಡು – ಮೂರು ಅಡಿ ಉದ್ದದ ಕೋಲಿನ ಒಂದುತುದಿಗೆ ಬಟ್ಟೆಯನ್ನು ದಪ್ಪವಾಗಿ ಕಟ್ಟಿ ಹರಳೆಣ್ಣೆಯಲ್ಲಿ ಅದ್ದಿ ಬೆಂಕಿ ಹೊತ್ತಿಸುತ್ತಾರೆ. ಅದಕ್ಕೆ **ಪಂಜು** ಎಂದು ಹೆಸರು. ಪಂಜು ನಿಧಾನವಾಗಿ ಉರಿಯುತ್ತೆ. ಉರಿ ಕಡಮೆಯಾಗುತ್ತಾ ಹೋದಾಗ ಪುನ: ಪಂಜಿನಮೇಲೆ ಎಣ್ಣೆಯನ್ನು ಸುರಿಯುತ್ತಾರೆ. ಪಂಜನ್ನು ದೀವಟಿಗೆ ಎಂದು ಹೇಳುವುದು ರೂಢಿ.

ಹಿಲಾಲು ಎಂದೂ ಕರೆಯುತ್ತಾರೆ. ದೀವಟಿಗೆ ಹಿಡಿಯುವ ಅಧಿಕಾರ ವಂಶಪಾರಂಪರ್ಯವಾಗಿ ಬಂದಿರುತ್ತದೆ.

ಉದಾ: ದೀವಟಿಗೆ ಮರ್ಯಾದೆ ರಾಮಯ್ಯನೋರು ಸಲ್ಲಿಸುತ್ತಾರೆ.

ನೋಡಿ: ಹಿಲಾಲು, ದೀವಟಿಗೆ

<punju> Torch - During night carrying the idol of God four people on shoulders, in front, four to six people go holding Punju. Approximately about two to three –foot length stick, tying cloth thickly to one end, dipping in castor oil fire. It is called Panju. Panju burns very slowly. When the fire becomes low, they pour oil on Panju. Panju is commonly called as Deevatige. Also called as Hilalu. The privilege of holding deevatige will have come traditionally.

Eg: Deevatige honour Ramayya will do.

See: Hilaalu, Diivatigi

643. ಪಂಚವಾಳ: ಪಂಚವಾಳವನ್ನು 4–5 ಅಂಗುಲ ಚಚ್ಚೌಕವಾದ ಒಂದೂವರೆ ಅಂಗುಲ ಎತ್ತರದ ಮರದ ಚೂರಿನಲ್ಲಿ, ಐದು ಸಣ್ಣಬಟ್ಟಲುಗಳಂತೆ ಕೊರೆದು ಮಾಡುತ್ತಾರೆ. ದೇವರಪೂಜೆಗೆ ಅಗತ್ಯವಾದ ಅರಿಶಿನ, ಕುಂಕುಮ, ಚಂದ್ರ, ಮಂತ್ರಾಕ್ಷತೆ ಮುಂತಾದುವನ್ನು ಒಂದೊಂದು ಬಟ್ಟಲಿಗೂ ತುಂಬಿರುತ್ತಾರೆ. ಬೆಳ್ಳಿ, ಹಿತ್ತಾಳೆ ಪಂಚವಾಳಗಳೂ ಇರುತ್ತವೆ.



ಉದಾ: ಪಂಚವಾಳದಲ್ಲಿ ಅರಿಶಿನ, ಕುಂಕುಮ ಖಾಲಿ ಆಗಿದೆ.

<panchavaaLa> Wooden or metal container - Panchavaala is made of four to five inches square, one-and-half inch height wooden piece drilling like five pieces, they do. The required items for worshipping god like turmeric powder, Kunkum, Chandra, the rice smeared with Kunkum etc. are filled in each cup. Silver, brass panchavalas also are there.

Eg: In Panchavala turmeric powder and Kunkum are empty.

644. ಪಗಡೆ ಆಟ: ಪಗಡೆಆಟಕ್ಕೆ ಪಗಡೆಹಾಸೇ ಬೇಕು. ನಾಲ್ಕು ಬಣ್ಣದ ಒಟ್ಟು ಹದಿನಾರು ಕಾಯಿಗಳು, ಒಂದು ಜೊತೆ ದಾಳ. ಇಬ್ಬರು ಅಥವಾ ನಾಲ್ಕು ಜನ ಒಂದು ಬಾರಿಗೆ ಆಟ ಆಡಬಹುದು. ಇಬ್ಬರೇ ಆಡಿದರೆ ಕಪ್ಪು ಕೆಂಪು ಕಾಯಿಗಳು ಒಬ್ಬರಿಗೆ, ಹಸಿರು ಹಳದಿ ಕಾಯಿಗಳು ಇನ್ನೊಬ್ಬರಿಗೆ. ನಾಲ್ಕು ಜನ ಆಡಿದಾಗ ಒಂದೊಂದು ಬಣ್ಣದ ನಾಲ್ಕು ಕಾಯಿಗಳನ್ನು ಇಟ್ಟುಕೊಳ್ಳುತ್ತಾರೆ. ಎರಡು ದಾಳಗಳನ್ನೂ ಅಂಗೈಯಲ್ಲಿ ಹಿಡಿದುಕೊಂಡು ನೆಲದ ಮೇಲೆ ಎಸೆದಾಗ ದಾಳಗಳ ಮೇಲೆ ಎಷ್ಟು ಚುಕ್ಕಿಗಳನ್ನು ತೋರಿಸುತ್ತದೋ ಅದರಂತೆ ಪಗಡೆಕಾಯನ್ನು ಅಷ್ಟುಮನೆಗಳನ್ನು ಪಗಡೆಹಾಸಿನ ಮೇಲೆ ಎಣಿಸಿಕೊಂಡು ನಡೆಸಬೇಕು. ಅದಕ್ಕೆ ಗರ ಎಂದು ಹೇಳುತ್ತಾರೆ. ಎದುರು ಆಟಗಾರನು ಆಡುವಾಗ ಅವನ ಕಾಯಿಗು ಇನ್ನೊಬ್ಬ ಆಟಗಾರನ ಕಾಯಿಗು ಮಧ್ಯೆ ಇರುವ ಮನೆಗಳ ಸಂಖ್ಯೆಯಂತೆ ದಾಳಹಾಕಿದಾಗ ಗರಬಿದ್ದರೆ ಆ ಕಾಯನ್ನು ಹೊಡೆದಂತೆ. ಎದುರು ಆಟಗಾರನು ಪುನಃ ಅವನ ಕಾಯನ್ನು ಅವನ ಕಡೆಯ ಹಾಸಿನ ಮೇಲೆ ಹೂಡಬೇಕು. ಕಾಯಿ ಹೊಡೆಸಿಕೊಳ್ಳದೆ ಗರಗಳನ್ನು ನಡೆಸಿ ಮೂರುಸುತ್ತುಗಳನ್ನೂ ದಾಟಿಸಿ ಒಳಕ್ಕೆ ನುಗ್ಗಿ ಹಾಸುಗಳ ಮಧ್ಯೆ ಇರುವ ಸಣ್ಣಚೌಕಕ್ಕೆ ಸೇರಿಸಿದರೆ ಅವನು ಗೆದ್ದಹಾಗೆ.




Fig. 1

ಉದಾ: ಚನ್ನಪಟ್ಟಣದಿಂದ ಬರುವಾಗ ಒಂದು ಸೆಟ್ ಪಗಡೆಕಾಯಿ, ಎರಡು ದಾಳವನ್ನು ತರಬೇಕು.

<pagaDeaaTa> Dice play - For playing dice, dice-cloth is only required. Totally sixteen pawns of four colors. If two only play, Black and Red for one, Green and Yellow for another. If four persons play, each one will keep four pawns. Holding two dies in palm when thrown on the ground, how many dots on dice it shows, accordingly must move that number of houses on dice cloth. For that they say Gara (Score). When the opposite player plays, if the score as per in between his pawn and another player's pawn the dice shows, that pawn is considered as struck. The opposite player again should begin afresh from his side of dice cloth. Without struck moving the score three rounds, pushing inside, if reached the small square in center of dice cloth, it is declared as winning.

Eg: While coming from Channapatna, must bring one set of pawns and two dice.

645. ಪತ್ರೊಡೆ: ಪತ್ರೊಡೆ ಒಂದು ಬಗೆಯ ತಿಂಡಿ. ಪತ್ರೊಡೆಯನ್ನು ಕೆಸವಿನ ಎಲೆಯಿಂದ ಮಾಡುತ್ತಾರೆ. ಕರ್ನಾಟಕದ ಉಡುಪಿ, ಮಂಗಳೂರು ಕಡೆಗಳಲ್ಲಿ ಬಹಳ ಮಂದಿ ಪತ್ರೊಡೆಯನ್ನು ಬೆಳಗಿನ ಉಪಹಾರಕ್ಕೆ ಮಾಡುತ್ತಾರೆ.

ಉದಾ: ಪತ್ರೊಡೆ ತಿಂದು ಬಹಳದಿನವಾಯ್ತು, ನಾಳೆ ಮಾಡಮ್ಮಾ.

<pathroDe> (-) A kind of snack made of green leaves - Patrode is a type of dish. Patrode is made of Kesavu (large leaves and thick tubers of plant used as vegetable). Many people of Udupi, Mangalore in Karnataka prepare Patrode for morning breakfast.

Eg: It is quite long, eating Patrode. Do it tomorrow.


646. ಪಟ್ಟುಹಾಕುವುದು: ತಲೆಸಿಡಿತ ಬಂದಾಗ ಹಣೆಯ ಮೇಲೆ ಚಂದನದ ಗಂಧವನ್ನು ತೇಯ್ದು ಹಸುವಿನ ಹಾಲಿನಿಂದ ತಯಾರಾದ ಬೆಣ್ಣೆಯನ್ನು ಬೆರೆಸಿ ಬಿಸಿಮಾಡಿ ಹಣೆಯ ಪೂರ್ತ ಬಳಿಯುತ್ತಾರೆ. ಅದನ್ನು **ಪಟ್ಟುಹಾಕುವುದು** ಎಂದು ಹೇಳುತ್ತಿದ್ದರು. ಪಟ್ಟುಹಾಕುವುದು ನಾಟಿಔಷಧಿಗಳಲ್ಲಿ ಒಂದು ಕ್ರಮ.

ಉದಾ: ಮಗುವಿಗೆ ತುಂಬಾ ಶೀತವಾಗಿದೆ, ಹಣೆಮೇಲೆ ಪಟ್ಟುಹಾಕಿಸಿಬಿಡಿ.

<paTTuhaakuvudu> Applying ointment - When you get terrible headache, mixing butter made of cow's milk with Chandan paste, heating smear on forehead fully. They were telling that PaTTuhakuvudu (apply ointment on swelling spot). PaTTuhakuvudu is a method in Native medicines.

Eg: Child has too much of cold. Gett Pattu on forehead.

647. ಪಟಾಪಟಿಕಬ್ಬು: ಇದು ಒಂದು ವಿಧವಾದ ಕಬ್ಬು, ತಿನ್ನಲು ಬಹಳ ರುಚಿಯಾಗಿರುತ್ತೆ. ಇದರ ಮೇಲಿನ ಪಟ್ಟೆಗಳು ಚಿತ್ರಕಾರನು ಕೈಯಿಂದ ಬರೆದಹಾಗಿರುತ್ತೆ. ರಸದಾಳೆಕಬ್ಬಿನಿಂದ ತಯಾರಿಸಿದ ಬೆಲ್ಲವೂ ರುಚಿ. ಇತ್ತೀಚೆಗೆ ಕರಡಿಯ ಕಾಟದಿಂದಾಗಿ **ಪಟಾಪಟಿಕಬ್ಬು** ಬೆಳೆಯುವುದನ್ನು



ಬಿಟ್ಟುಬಿಟ್ಟಿದ್ದಾರೆ. ಕರಡಿ ಕಬ್ಬಿನಗದ್ದೆಗೆ ನುಗ್ಗಿತೆಂದರೆ ಅರ್ಧಭಾಗ ರಸದಾಳೆಕಬ್ಬೆಲ್ಲ ಹಾಳಾಗಿರುತ್ತೆ. ಕರಿಕಬ್ಬು ಎಂದು ಕೆಲವರು ಹೇಳುತ್ತಾರೆ.

ಉದಾ: ನಮ್ಮ ಗದ್ದೇಲಿ ಈ ಸಲ ಪಟಾಪಟಿಕಬ್ಬು ಬಹಳ ಹುಲುಸಾಗಿದೆ.

ನೋಡಿ: ಕರಿಕಬ್ಬು

<paTaapaTikabbu> A type of sugarcane - It is very tasty to eat. The stripes on this are like written by an artiste. Jaggery made of Rasadaale sugarcane is also tasty. Of late, due to havoc of bear, they have given up growing patapaTi sugarcane. If bear rushes into the field of Rasadaale sugarcane, half of the crop will be destroyed. Some will say as Karikabbu (Black sugarcane).

Eg: In our field this time, patapaTikabbu is very fine.

See: Karikabbu

648. ಪಡಪೋಸಿ: ಗಮನವಿಟ್ಟು ಕೆಲಸ ಮಾಡದೇ ಇದ್ದರೆ **ಪಡಪೋಸಿ** ಅನ್ನುವುದು ರೂಢಿ. ಎಲ್ಲೊ ಅವನೊಬ್ಬ ಪಡಪೋಸಿ ಇರಬೇಕು ಎಂದು ಜನ ಮಾತಾಡಿಕೊಳ್ಳುತ್ತಾರೆ. ಪಡಪೋಸಿಕೆಲಸ ಎಂದರೆ ಬೇಕಾಬಿಟ್ಟಿ ಕೆಲಸ ಅಂತಾನೇ ಅರ್ಥ.

ಉದಾ: ತೋಟದಲ್ಲಿ ಕಳೆ ಸರಿಯಾಗಿ ತೆಗೆದೇ ಇಲ್ಲ, ಎಲ್ಲ ಪಡಪೋಸಿ ಕೆಲಸಮಾಡಿ ಹೋಗವ್ನೆ.

<paDaposi> Useless person - Working without concentration, it is common to say padaposi. People talk that he must be a Padaposi. Padaposi work means it is but irresponsible work.

Eg: In garden weeds are not removed properly. He has gone doing padaposi work.

649. ಪಡಸಾಲೆ: ಮನೆಯ ಹಜಾರ, ಕೋಣೆ, ಅಡುಗೆಮನೆಗಳ ಹಿಂಭಾಗಕ್ಕೆ ಏಳೆಂಟು ಅಡಿ ಅಗಲ, 20–25 ಅಡಿ ಉದ್ದವಿರುವ ಜಾಗಕ್ಕೆ **ಪಡಸಾಲೆ** ಎನ್ನುತ್ತಾರೆ. ಇದು ಮನೆಗೆ ಹೊಂದಿಕೊಂಡಂತೆಯೆ ಇರುತ್ತೆ. ಅಲ್ಲಿ ವ್ಯವಸಾಯಕ್ಕೆ ಬೇಕಾಗುವ ನೇಗಿಲು, ದನ ಕರುಗಳನ್ನು ಕಟ್ಟುವ ಹಗ್ಗ, ಮಂಕರಿಗಳು, ಬಾವಿಯಿಂದ ನೀರನ್ನು ಸೇದಲು ಬೇಕಾದ ಹಗ್ಗ ಮುಂತಾದ ಎಲ್ಲ ವಸ್ತುಗಳೂ ಅಲ್ಲಿ ಅಡಗಿರುತ್ತವೆ.

ಉದಾ: ನೀರುಸೇದುಹಗ್ಗ ಪಡಸಾಲೆಲಿದೆ ತಗಂಬಾ.

<paDasaale> Corridor - The place with seven to eight feet width, twenty to twenty-five feet length is called padasale. This will be as attached to the house. There, the required items plough for agriculture, rope for tying cows, baskets, rope for drawing water from well all things are stocked.

Eg: Rope for drawing water from well is in Padasale. Bring it

650. ಪಡಿಕೊಡುವುದು: ಪಡಿಕೊಡುವುದು ಒಂದು ಪದ್ಧತಿ. ಶ್ರೀಮಂತರು, ಜಮೀನ್ದಾರರು ಅವರ ಜೀತದಾಳುಗಳಿಗೆ ವರ್ಷಕ್ಕೊಂದಾವರ್ತಿ ದವಸಧಾನ್ಯಗಳನ್ನು, ಬಟ್ಟೆಬರೆಗಳನ್ನು ಕೊಡುತ್ತಿದ್ದರು. ಅದಕ್ಕೆ **ಪಡಿಕೊಡುವುದು** ಎಂದು ಹೆಸರು. ಪ್ರತಿನಿತ್ಯ ದೇವಸ್ಥಾನಗಳಲ್ಲಿ ಪೂಜೆಮಾಡುವ ಅರ್ಚಕರಿಗೆ ಮನೆ, ಸಂಸಾರಕ್ಕೆ ಬೇಕಾದ ದವಸಧಾನ್ಯ, ತರಕಾರಿ, ಹಾಲುಮೊಸರು ಎಲ್ಲವನ್ನು ಕೊಡುವ ಆಚರಣೆಯೂ ಪಡಿ.

ಮನೆಯಲ್ಲಿ ಯಾರಾದರೂ ತೀರಿಕೊಂಡಾಗ ಅವರ ಸಂಸ್ಕಾರವನ್ನು ಮೊದಲ ವರ್ಷದ ಪ್ರತಿ ತಿಂಗಳೂ ಮಾಡಲು ಅವಕಾಶವಿಲ್ಲದಿದ್ದರೆ ಒಬ್ಬ ಬ್ರಾಹ್ಮಣನಿಗೆ ಒಂದು ತಟ್ಟೆಯಲ್ಲಿ ಅಕ್ಕಿ, ಬೇಳೆ, ತರಕಾರಿ, ಹಾಲುಮೊಸರು, ತೆಂಗಿನಕಾಯಿ, ಹಣ್ಣುಗಳನ್ನು ವೀಳೆಎಲೆಯಲ್ಲಿ ದಕ್ಷಿಣೆಸಮೇತ ಕೊಡುವ ಪದ್ಧತಿಗೂ ಪಡಿ ಎಂದು ಹೇಳುತ್ತಾರೆ.

ಉದಾ: ರಂಗಾ, ಅರ್ಚಕರಿಗೆ ಪಡಿ ತೊಗೊಂಡು ಕೊಟ್ಟು ಬಾ.

<paDikoDuvudu> (-) To offer required items to workers or priests - Padikoduvudu is a custom. Landlords once a year used to give rice, ragi etc. and clothes to their servants. It is called Padikoduvudu. For priests who perform pooja in temples every day, giving required items of rice, vegetables, milk, curds etc. is also Padi.

If anyone died in the house if it is not possible to perform his ceremony every month, giving rice, dal, vegetables, milk, curds, coconut, fruits, veelyadele with dakshina (money) in a plate is also called as Padi.

Eg: Ranga, take Padi and give it to the priest.

651. ಪಣತ: ಬಿದಿರನ್ನು ತೆಳ್ಳಗೆ ಸೀಳಿ, ಚಾಪೆಯಂತೆ ಉದ್ದ–ಅಗಲಕ್ಕೆ ಒಂದರ ಮೇಲೊಂದು ಬರುವಂತೆ ಹೆಣೆದು ದಪ್ಪವಾದ ಕಂಬದ ಮಾದರಿಯಾಗಿ



ಹೆಣೆದಿರುವುದು. ಅದರ ಮೇಲೆ ದನದ ಸಗಣಿಯನ್ನು ಬಳಿದು ಒಣಗಿಸಿದರೆ ಸಣ್ಣ ತೂತುಗಳೆಲ್ಲ ಮುಚ್ಚುತ್ತವೆ. **ಪಣತ** ಸುಮಾರು 5–6 ಅಡಿ ಎತ್ತರವಿರುತ್ತೆ. ಅದರೊಳಕ್ಕೆ ಮೇಲಿನಿಂದ ಭತ್ತ, ರಾಗಿ ಮುಂತಾದ ಧಾನ್ಯಗಳನ್ನು ತುಂಬುತ್ತಾರೆ. ಕೆಳಭಾಗದಲ್ಲಿ ಒಂದು ಕಡೆ ಕೈ ತೂರುವಷ್ಟು ಜಾಗಕ್ಕೆ ರಂಧ್ರವಿರುತ್ತೆ. ನಮಗೆ ಬೇಕಾದಾಗ ಆ ರಂಧ್ರದಿಂದ ಸ್ವಲ್ಪಸ್ವಲ್ಪವಾಗಿ ದವಸವನ್ನು ಹೊರಕ್ಕೆ ತೆಗೆದುಕೊಳ್ಳಬಹುದು. ಆ ರಂಧ್ರವನ್ನು ಹಳೆಯ ಬಟ್ಟೆಯನ್ನು ಸಿಂಬೆಯಾಗಿ ಮಾಡಿ ಮುಚ್ಚಿರುತ್ತಾರೆ.

ಉದಾ: ಪಣತ ಬಾಯಿತೆಗೆದು ಒಂದು ಮೂಟೆಯಷ್ಟು ರಾಗಿ ಹೊರಕ್ಕೆ ತೆಗಿ.

<paNatha> Granary - Splitting bamboo thinly, like a carpet length and width one above the other, string together. On that if cow dung is smeared the small holes will be covered. PaNata will be of five to six feet height. From the top paddy, ragi etc. corns are filled. At the bottom there will be a small hole, a hand can be pushed. When required, little by little corns can be taken out from that hole. They will have closed the hole with simbe (coil made of old cloth)

Eg: Open the paNata and take out a bag of ragi.

652. ಪಣಿವಾರ: ನೋಡಿ: ಚರುಪು

<panivaara> Prasad given to devotees - See: Charupu

653. ಪರದೆ: ನೋಡಿ: ಅಂತರ್ಪಟ

<parade> Curtain - See: Antharpata

654. ಪರ್ಜನ್ಯಜಪ: ಸಕಾಲದಲ್ಲಿ ಮಳೆಯಾಗದಿದ್ದರೆ, ದೇವರಿಗೆ ಅಭಿಷೇಕ ಮಾಡಿ ಋತ್ವಿಕರು ಕೆರೆಯಲ್ಲಿ ನಿಂತು **ಪರ್ಜನ್ಯಜಪ** ಮಾಡುತ್ತಿದ್ದರು. ಅವರು ಹೇಳುವ ಮಂತ್ರಗಳು ಕಡೆಯ ಘಟ್ಟ ಮುಟ್ಟಿದಾಗ ಮೋಡ ಕವಿದು ಮಳೆಯಾಗಿದ್ದನ್ನು ನನ್ನೂರು ಬುಕ್ಕಾಂಬುಧಿಯಲ್ಲಿ ನೋಡಿದ್ದೆ.


ಉದಾ: ಬೆಳಗಿನಿಂದಲೇ ಪರ್ಜನ್ಯಜಪ ಪ್ರಾರಂಭವಾಗಿದೆ.

ನೋಡಿ: ಕತ್ತೆಮದುವೆ, ಕರಗ

<parjanyajapa> (-) Prayer to God to get rain - If it does not rain in the proper season, priests after performing abhisheka to God, standing in the tank were doing parjanyajapa I had witnessed in my native place Bukkambudhi when the ritual hymns by priests reached the climax, clouds developed and suddenly rained.

Eg: From morning itself parjanyajapa has commenced.

See: Kattemaduve (Donkey's marriage) Karaga



655. ಪರಾತ: ಪುಳಿಯೋಗರೆ, ಮೊಸರನ್ನ ಮುಂತಾದುವನ್ನು ಹೆಚ್ಚು ಪ್ರಮಾಣದಲ್ಲಿ ಕಲಸಲು ಬೇಕಾಗುವ ಅಗಲವಾದ ಪಾತ್ರೆಗೆ **ಪರಾತ** ಎನ್ನುತ್ತಾರೆ. ಸಾಮಾನ್ಯವಾಗಿ ಪರಾತ ಹಿತ್ತಾಳೆಯದಾಗಿದ್ದು ಕಲಾಯ ಮಾಡಿರುತ್ತಾರೆ. ಮದುವೆ, ಮುಂಜಿ ಸಮಾರಂಭಗಳಲ್ಲಿ ಇದರ ಉಪಯೋಗ ಬಹಳ. ಭಕ್ಷ್ಯಗಳನ್ನು ಇಡಲು ಪರಾಯಿತಗಳನ್ನು ಉಪಯೋಗಿಸುತ್ತಾರೆ.

ಉದಾ: ಭಟ್ಟರೇ ನಾಳೆ ಅಡಿಗೆಗೆ ಎಷ್ಟು ಪರಾತ ಬೇಕು?

ಶಬ್ದರೂಪ: ಪರಾಯಿತ (ಪರಾತ)

<paraatha> A large mouthed vessel - To mix tamarind rice, curds rice in large quantity, the required big vessel is called Paratha. Generally, the vessel will be of brass and tinkered. During marriage, munji (thread ceremony) functions using of this is very much. To keep sweet dishes, use Paratha.

Eg: Bhatji, for tomorrow's cooking how many parathas are required?

Different version: Paraayitha (paratha)

656. ಪರಾವಲಂಬಿ: ಇನ್ನೊಬ್ಬರ ಆಶ್ರಯ ಪಡೆದೆ ಜೀವಿಸುವವನನ್ನು **ಪರಾವಲಂಬಿ** ಎಂದು ಹೇಳುತ್ತಾರೆ.

ಉದಾ: ನನಗೂ ಈಗ ಹದಿನೈದು ವರ್ಷಗಳಿಂದ ಪರಾವಲಂಬಿ ಜೀವನಮಾಡಿ ಸಾಕಾಗಿದೆ. ನನ್ನ ಕಾಲಮೇಲೆ ನಿಂತು ಜೀವನಮಾಡುವುದಕ್ಕೆ ಏನಾದರೂ ದಾರಿ ಹುಡುಕಬೇಕಾಗಿದೆ.

ನೋಡಿ: ಪರಾಶ್ರಯ

<paraavalambi> Parasite - For person depending on others only taking shelter, they say Paraavalambi.

Eg: I am also fed up with living like a parasite for the past fifteen years. I must find a way to live on my own legs.

See: Parashraya (Depending on others)

657. ಪರಾಶ್ರಯ: ನೋಡಿ: ಪರಾವಲಂಬಿ

<paraashraya> Dependency - See: Paravalambi

658. ಪರಾರಿ: ಯಾರ ಕಣ್ಣಿಗೂ ಕಾಣದಂತೆ ಓಡಿಹೋಗುವುದನ್ನು **ಪರಾರಿ** ಅನ್ನುವುದು ರೂಢಿ.

ಉದಾ: ನೆನ್ನೆ ಮೊನ್ನೆಯವರೆಗು ಇಲ್ಲೇ ಓಡಾಡ್ಕಂಡಿದ್ದ. ಇವತ್ತು ನೋಡಿದರೆ ಎಲ್ಲೋ ಪರಾರಿಯಾಗ್ಬುಟ್ಟವನೆ.

<paraari> Escape - Running away without seen by others, it is common to say Parari.

Eg: From two days he was wandering here and there. If we see today, he has escaped somewhere.

659. ಪರಿಪಾಟಲು: ತುಂಬ ತೊಂದರೆಗೆ ಒಳಗಾದಾಗ **ಪರಿಪಾಟಲು** ಅನ್ನುವ ಪದವನ್ನು ಹೇಳುತ್ತಾರೆ.

ಉದಾ: ಸಂಸಾರಾನು ನಿಭಾಯಿಸಿಕೊಂಡು ಎರಡು ಹೆಣ್ಣುಮಕ್ಕಳ ಮದುವಿ ಮಾಡೋಕೆ ಅದೆಷ್ಟು ಪರಿಪಾಟಲು ಪಡತಾ ಇದೀನಿ ಅನ್ನೋದು ಆ ದೇವರಿಗೇ ಗೊತ್ತು.

<paripaaTalu> Struggling - When you are troubled too much, they use the word paripatalu.

Eg: Maintaining the family side by side, to arrange marriage of two daughters, god only knows how much I am struggling.

660. ಪರಿಷೆ: ಬುಕ್ಕಾಂಬುಧಿಗೆ ಸಮೀಪವಾಗಿರುವ ಸೋಂಪುರದಲ್ಲಿ ಪರಿಷೆ ನಡೆಯುತ್ತಿತ್ತು. ಆ ಪರಿಷೆ ಸಾಮಾನ್ಯವಾಗಿ ರಥೋತ್ಸವ ಕಾಲದಲ್ಲೇ ನಡೆಯುವುದು.



ಸುತ್ತಮುತ್ತಲ ಹಳ್ಳಿಯವರೆಲ್ಲ ಅಲ್ಲಿ ನೆರೆದಿರುತ್ತಾರೆ. ಎಲ್ಲೆಲ್ಲಿ ನೋಡಿದರೂ ಪುರಿ, ಬತ್ತಾಸುಗಳ ಅಂಗಡಿಗಳು ಕಾಣುತ್ತಿರುತ್ತವೆ. ಬೆಂಗಳೂರಿನ ಬಸವನಗುಡಿಯಲ್ಲಿ ನಡೆಯುವ ಕಡಲೇಕಾಯಿ ಪರಿಷೆ ಹೆಸರುವಾಸಿಯಾದದ್ದು. ಆ ದಿನ ಗಣಪತಿದೇವಸ್ಥಾನದ ಸುತ್ತಲೂ ಕಡಲೇಕಾಯಿನ ರಾಶಿಯೋ ರಾಶಿ.

ಉದಾ: ಕಡಲೆಕಾಯಿ ಪರಿಷೆಗಾಗಿ ವಿಶೇಷ ಬಸ್‌ಗಳನ್ನು ಹಾಕಿದ್ದಾರೆ.

<parishe> Fair - In Sompura near Bukkambudhi Fair was going on. That Fair generally, arranged during car festival. People from villages all around will join there. Wherever you see you find the shops selling Puri and Battasu. In Basavangudi of Bengaluru the Groundnut Fair is famous. That day around Ganapathi temple heaps and heaps of Groundnut.

Eg: For Groundnut Fair, have arranged special busses.



661. ಪಲ್ಲಕ್ಕಿ: ಪಲ್ಲಕ್ಕಿ ಒಂದು ತರಹ ಡೋಲಿ. ದೇವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಊರಲ್ಲೆಲ್ಲ ಮೆರವಣಿಗೆ ಮಾಡುತ್ತಿದ್ದರು. ಅದಕ್ಕೆ ಪಲ್ಲಕ್ಕಿ ಉತ್ಸವ ಎಂದು ಹೆಸರು. ಸ್ವಾಮಿಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಕರೆದುಕೊಂಡು ಹೋಗುತ್ತಿದ್ದರು. ಆನೆಯ ಮೇಲೆ ಪಲ್ಲಕ್ಕಿಯನ್ನು ಕಟ್ಟಿ ರಾಜಮಹಾರಾಜರುಗಳು ಅದರಲ್ಲಿ ಕುಳಿತು ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದರು.

<pallakki> Palanquin - It is a type of Doli. They were doing procession throughout the town, keeping the idol of God in Pallakki. It is called as Pallakki Utsava (Celebration). They were taking seating Swamiji in Pallakki. The kings used to sit in Palanquin on elephant's back and going in procession.

662. ಪಲ್ಲಕ್ಕಿಸೇವೆ: ಮಠದ ಸ್ವಾಮಿಗಳನ್ನು ಅಥವಾ ದೇವರ ದೊಡ್ಡ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಹೆಗಲಮೇಲೆ ಹೊತ್ತು ಉತ್ಸವ ಮಾಡುತ್ತಾರೆ. ಅದಕ್ಕೆ **ಅಡ್ಡಪಲ್ಲಕ್ಕಿ** ಉತ್ಸವ ಎಂದೇ ಹೆಸರು. ಪಲ್ಲಕ್ಕಿಯ ಎರಡು ಪಕ್ಕದಲ್ಲಿಯು ಇಬ್ಬರು ಕೈಯ್ಯಿಂದ ಚಾಮರ ಸೇವೆ ಮಾಡುತ್ತಿರುತ್ತಾರೆ. ಪಲ್ಲಕ್ಕಿ ಹೊರುವವರು

ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಆ ಸೇವೆ ಮಾಡುತ್ತಾರೆ. ಒಂದೆರಡು ದೇವಸ್ಥಾನಗಳಲ್ಲಿ ಸುಮಾರು ನೂರು ವರ್ಷಗಳ ಹಿಂದಿನಿಂದ ಬಳಸುತ್ತಿರುವ ಪಲ್ಲಕ್ಕಿಗಳು ಇವೆ. ಪಲ್ಲಕ್ಕಿಯ ಮೇಲೆ ಕಮಾನಿನಂತೆ ಬಾಗಿರುವ ಮರಕ್ಕೆ ರೇಷ್ಮೆದಾರದಿಂದ ಮಾಡಿರುವ ಕುಚ್ಚುಗಳನ್ನು ಕಟ್ಟಿರುತ್ತಾರೆ. ಪಲ್ಲಕ್ಕಿಯನ್ನು ಮುಂದಿಬ್ಬರು ಹಿಂದಿಬ್ಬರು ಹೆಗಲಿನ ಮೇಲೆ ಹೊರುತ್ತಾರೆ. ಉತ್ಸವ ನಡೆಸುವಾಗ ಮಧ್ಯೆ ಪಲ್ಲಕ್ಕಿಯನ್ನು ನಿಲ್ಲಿಸ ಬೇಕಾದರೆ ಹೆಗಲನ್ನು ಬಿಟ್ಟು ಪಲ್ಲಕ್ಕಿಯನ್ನು ಅಡ್ಡೆಯ ಮೇಲೆ ಇಡುತ್ತಾರೆ. ದೇವರನ್ನು, ಸ್ವಾಮಿಗಳನ್ನು ಹೊತ್ತು ಮೆರವಣಿಗೆಯಲ್ಲಿ ಬರುವ ಪಲ್ಲಕ್ಕಿ ಅಡ್ಡಡ್ಡವಾಗಿರುವುದರಿಂದ **ಅಡ್ಡಪಲ್ಲಕ್ಕಿ** ಎನ್ನುತ್ತಾರೆ. ಉದ್ದಕ್ಕಿರುವ ಅಡ್ಡಪಲ್ಲಕ್ಕಿ ಒಂದು ಭಾಗವನ್ನು ಒಬ್ಬರು, ಇನ್ನೊಂದು ಭಾಗವನ್ನು ಇನ್ನೊಬ್ಬರು ಹೊರುತ್ತಾರೆ.

ಉದಾ: ನಿನ್ನೆ ಶ್ರೀಮಠದಸ್ವಾಮಿಗಳು ಅಡ್ಡಪಲ್ಲಕ್ಕಿಯಲ್ಲಿ ಊರಿಗೆ ಬಂದರು.

<pallakkiseeve> (-) Doing service in Palanquin - Seating religious heads of Mutt or big idol of God in Pallakki carrying on shoulder do procession. It is called as addapallakki festival. On both sides of Pallakki two people will be doing chamaraseve by hand (fan made of the bushy tail of Yak). In one or two temples there are Pallakkis being used earlier to hundred years. On Pallakki for the wood above bent like kamanu (shape like half-moon) they will have tied bunches of silk thread. Two in the front and two in the back carry the Pallakki on shoulders. While performing the procession if they have to halt the Pallakki, leaving the shoulders they keep the Pallakki on Adde (a pole or bamboo strip placed across the shoulders with slings). Since the Pallakki carrying God, Swamiji in procession is horizontal they say addapallakki. Pallakki which is lengthwise, one for one part and the other man for another part will carry.

Eg: Yesterday Swamiji of Sreemutt came to the town in Addapallakki.

663. ಪಹಣಿ: ರೈತರು ಬೆಳೆಯುವ ಬೆಳೆಯನ್ನು ಹಳ್ಳಿಯ ಶ್ಯಾನುಭೋಗರು ಒಂದು ಪುಸ್ತಕದಲ್ಲಿ ಬರೆದಿಡುತ್ತಾರೆ. ಪ್ರತಿಯೊಬ್ಬ ರೈತನಿಗು ಪ್ರತ್ಯೇಕವಾದ ಪುಸ್ತಕವಿರುತ್ತೆ. ಅದನ್ನು ಪಹಣಿ ಎಂದು ಕರೆಯುತ್ತಾರೆ. ಒಬ್ಬೊಬ್ಬ ರೈತನಿಗೂ ಎಷ್ಟು ಎಕರೆ ಜಮೀನಿದೆ, ಅದರಲ್ಲಿ ಗದ್ದೆ ಎಷ್ಟು, ತೋಟ, ಹೊಲ ಅಲ್ಲಿ ಯಾವ ತರಹ ಬೆಳೆಯನ್ನು ಬೆಳೆಯುತ್ತಾರೆ, ಎಲ್ಲವೂ ಆ ಪುಸ್ತಕದಲ್ಲಿ ದಾಖಲಾಗಿರುತ್ತೆ. ಜನರ ಮಾತಿನಲ್ಲಿ ಪಹಣಿ

ಅನ್ನೋದು ಪಾಣಿ ಆಗಿದೆ.

ಉದಾ: ನನ್ನ ಪಹಣಿ ಎಲ್ಲಿದೆ ಶಾನುಭೋಗರೇ?

<pahaNi> Assessment of crops - The crops farmers grow, the village Shanbhog will write in a book. For each farmer there will be a separate book. That is they say Pahani. For each farmer, how much land he has, out of that, how much is field, how much is garden, what type of crop is grown, everything will have been documented there. In people's tone, Pahani has become Pani.

Eg: My pahaNi where is it Shanbhog?

664. ಪ್ರಸಾದ: ನೋಡಿ: ಚರುಪು, ನೈವೇದ್ಯ, ತೀರ್ಥ

<prasaada> See: Charupu, Naivedya, Theertha

665. ಪಾಚಿ: ಒದ್ದೆಒದ್ದೆಯಾಗಿರುವ ಕಲ್ಲುಬಂಡೆಗಳ ಮೇಲೆ ಬೆಳೆಯುವ ಒಂದು ವಿಧವಾದ ಸಸ್ಯಕ್ಕೆ **ಪಾಚಿ** ಎನ್ನುತ್ತಾರೆ. ಪಾಚಿ ಹಸಿರು ಶಾಲಿನಂತೆ ನಯವಾಗಿ ಹರಡಿರುತ್ತದೆ. ಪಾಚಿಗೆ **ಹಾವಸೆ** ಎಂದೂ ಕರೆಯುತ್ತಾರೆ.

ಉದಾ: ತುಂಬಾ ಪಾಚಿಕಟ್ಟಿ ಕಾಲುವೆ ನೀರೆಲ್ಲ ಕೊಳಕಾಗಿದೆ. ಮರದಮೇಲೆ ಪಾಚಿ ಬೆಳೆದಿದೆ, ಸ್ವಲ್ಪ ಹುಶಾರಾಗಿ ಹತ್ತು.

<paachi> Lichen - A type of green plant grown on wet rock is called Paachi. Paachi will have been spread like a nice green shawl. Paachi is also called Havase.

Eg: Due to paachi canal water has become dirty. Paachi is grown on tree. Climb carefully.

666. ಪಾಣಿಪಂಚೆ: ನೋಡಿ: ಧೋಟಾಪಂಚೆ, ಅಂಗವಸ್ತ್ರ, ಮಡಿಪಂಚೆ

<paaNipanche> Dhoti - See: Chotapanche, Angavasthra, Madipanche.

665. ಪಾತಾಳಗರಡಿ: ನೀರಿನ ಬಾವಿಯಲ್ಲಿ ಕೊಡ, ತಪ್ಪಲೆ ಮುಂತಾದ ಪಾತ್ರೆಗಳು ಬಿದ್ದುಹೋದರೆ, ಅವನ್ನು ಮೇಲಕ್ಕೆ ತೆಗೆಯುವುದಕ್ಕೆ ಬೇಕಾಗುವ ಸಲಕರಣೆಗೆ **ಪಾತಾಳಗರಡಿ** ಎಂದು ಹೆಸರು. ಪಾತಾಳಗರಡಿ ಕಬ್ಬಿಣದ್ದಾಗಿದ್ದು, ಕೊಕ್ಕೆಗಳಿರುತ್ತವೆ. ಅದನ್ನು ನೀರು ಸೇದುವ ಹಗ್ಗದ ಒಂದು ತುದಿಗೆ ಕಟ್ಟಿ ಬಾವಿಯೊಳಕ್ಕೆ ಬಿಟ್ಟಾಗ, ಕೊಡ



ಅದರ ಕೊಕ್ಕೆಗೆ ಸಿಕ್ಕಿಕೊಳ್ಳುತ್ತದೆ. ಹಗ್ಗವನ್ನು ಮೇಲಕ್ಕೆ ಎಳೆದರೆ, ಕೊಡ ತಾನಾಗಿಯೇ ಕೈಗೆ ಸಿಗುತ್ತದೆ.

ಉದಾ: ರಾಮಕ್ಕನ ಮನೆಯಿಂದ ಪಾತಾಳಗರಡಿ ತಾ.

<paataaLagaraDi> A device of iron with hooks - When round vessel etc. has fallen into the well, the equipment required to lift that vessel is called patalagaradi. It is made of iron with hooks. When it is tied to the rope for drawing water and pushed into well, vessel will get fixed to it and when pulled up, your hand can reach it.

Eg: Bring patalagaradi from Ramakka's house.

668. ಪಾತಿ: ಹೂವಿನ ಗಿಡಗಳು ಬತ್ತಿಹೋಗದಂತೆ ಸುತ್ತಲು ನೀರು ಕಟ್ಟಲು ಮೂರು ನಾಲ್ಕು ಅಂಗುಲ ಆಳವಾಗಿ ಕಟ್ಟೆಯನ್ನು ಕಟ್ಟಿರುವುದಕ್ಕೆ **ಪಾತಿ** ಎಂದು ಕರೆಯುತ್ತಾರೆ.

ಉದಾ: ಸೀಮೆಬದನೆ, ಚಪ್ಪರದವರೆ ಬಳ್ಳಿಗೆ ಪಾತಿಮಾಡಿ ನೀರು ಬಿಡು.

<paathi> (-) A bed for holding water round the plant - To see that flower plants do not dry, to stay water around, make a bed three to four inches depth is called Pathi.

Eg: Make a bed for Seemebadane, Chapparadavare and put water.

669. ಪಾದಪೂಜೆ: ಮಠದ ಸ್ವಾಮಿಗಳನ್ನು ಪಾದಪೂಜೆಗಾಗಿ ಕರೆಸಿದಾಗ ಆಹ್ವಾನಿತರಿಗೆಲ್ಲ ಸ್ವಾಮಿಗಳ ಕೈಯ್ಯಿಂದ ಕೆಂಪುಬಣ್ಣದ ಹೊದಿಯುವ ಪಂಚೆಯನ್ನು ಆಶೀರ್ವಾದದೊಂದಿಗೆ ಕೊಡಿಸುತ್ತಾರೆ. ಕೆಲವುಕಡೆ ಹಳದಿಬಣ್ಣದ ಪಂಚೆ ಕೊಡುತ್ತಾರೆ.

<paadapooje> Prostrating to Swamiji - When religious Heads of Mutt are invited for Padapuje, through Swamiji's hand, all the invitees are given red color covering dhothi. In some places yellow color dhothi is given.

670. ಪಾಪಾಸುಕಳ್ಳಿ: ತೋಟ, ಗದ್ದೆಗಳಿಗೆ ಮುಳ್ಳುತಂತಿಯ ಬದಲು **ಪಾಪಾಸುಕಳ್ಳಿ**ಗಿಡಗಳನ್ನು ಬೇಲಿಗಾಗಿ ಬೆಳೆಸುತ್ತಾರೆ. ಇದನ್ನು ಬೂತಾಳೆ ಎಂದೂ

ಕರೆಯುತ್ತಾರೆ. ಒಂದೊಂದು ಗಿಡವೂ ಸುಮಾರು ನಾಲ್ಕು ಅಡಿ ಅಗಲ ಹರಡುತ್ತದೆ. ಪಾಪಾಸುಕಳ್ಳಿ ಎಲೆ ದಪ್ಪವಾಗಿದ್ದು, ಅಂಚು ಗರಗಸದ ಹಾಗೆ ಮುಳ್ಳಾಗಿರುವುದರಿಂದ ದನಕರುಗಳು ತೋಟದೊಳಕ್ಕೆ ನುಗ್ಗಿ ಬರುವುದಿಲ್ಲ.

ಉದಾ: ನಮ್ಮ ತೋಟಕ್ಕೆ ಪಾಪಾಸುಕಳ್ಳಿಯನ್ನೇ ಬೇಲಿಗೆ ಹಾಕಿರೂದು.

ನೋಡಿ: ಕತ್ತಾಳೆ, ಕಿತ್ತಾನಾರು, ಬೂತಾಳೆ

<paapaasukaLLi> (-) A kind of cactus with thorny leaves. Papasukalli is grown as fence around fields and garden, instead of thorny wires. Since leaves are thick and edge is thorny like saw, cows cannot rush into the garden.

Eg: For our garden have put papasukalli only as fence.

See: Kathale, Kithhanaru, Boothale.

671. ಪಾಯ: ಮನೆ, ಗುಡಿಗಳನ್ನು ಕಟ್ಟುವಾಗ ಕಟ್ಟಡದ ಭದ್ರತೆಗಾಗಿ ನೆಲಮಟ್ಟದಿಂದ ನಾಲ್ಕಾರು ಅಡಿ ಕೆಳಕ್ಕೆ ಕಟ್ಟುವುದನ್ನು **ಪಾಯ** ಅಥವಾ **ಅಡಿಪಾಯ** ಎನ್ನುತ್ತಾರೆ.

ಉದಾ: ಪಾಯ ಹಾಕಿ ನೀರು ಕಟ್ಟಿದೀವಿ. ಮುಂದಿನ ವಾರ ಕಟ್ಟಡ ಎಬ್ಬಿಸಬೇಕು.

<paaya> Foundation - When constructing house, temples, for safety of the building, constructing four feet down wall from the ground level, they say, Paya or Adipaya.

Eg: Putting paya store water. Next week must raise the building

672. ಪಾರಾಯಣ: ರಾಮಾಯಣ, ಮಹಾಭಾರತ, ಗೀತೆ, ದುರ್ಗಾಸಪ್ತಶತಿ ಮುಂತಾದ ಗ್ರಂಥಗಳನ್ನು ಮೊದಲಿಂದ ಕಡೆಯವರೆಗೂ ಬಿಡದಂತೆ ಪಠಿಸುವುದಕ್ಕೆ **ಪಾರಾಯಣ** ಎಂದು ಹೇಳುತ್ತಾರೆ. ಈ ಗ್ರಂಥಗಳನ್ನು ಪಾರಾಯಣಗ್ರಂಥಗಳೆಂದು ಕರೆಯುತ್ತಾರೆ. ಸಂಗ್ರಹಭಾಗವನ್ನು ಸಪ್ತಾಹವಾಗಿ ಪಾರಾಯಣಮಾಡುತ್ತಾರೆ.

ಉದಾ: ಬರುವ ಪಾಡ್ಯಮಿಯಿಂದ ಪ್ರತಿನಿತ್ಯ ಸಂಜೆ ಏಳು ಗಂಟೆಯಿಂದ ಒಂದು ಗಂಟೆಯ ಕಾಲ ರಾಮದೇವರಗುಡಿಯಲ್ಲಿ ಶಾಸ್ತ್ರಿಗಳು ಗೀತಾಪಾರಾಯಣ ಮಾಡುತ್ತಾರೆ. ಭಕ್ತಾದಿಗಳು ತಪ್ಪದೆ ಬರಬೇಕು.

ನೋಡಿ: ಸಪ್ತಾಹ

<paaraayaNa> Discourse - To recite Ramayan, Mahabharat, Gita, Durgasapthashathi etc. books, from beginning to end is called parayana. These books are called parayanagrantha. The collected part is recited as a week's program.

Eg: Beginning next padyami, everyday evening one hour from seven o'clock in Rama Temple, Shastriji will recite Geethaparayana. Devotees must come without fail.

See: Sapthaha.

673. ಪಾರೀಖತ್ತು: ಒಂದು ಮನೆತನದಲ್ಲಿ ಅಣ್ಣ–ತಮ್ಮಂದಿರಿಗೆ ಮನಸ್ತಾಪವಾಗಿ ಬೇರೆ ಬೇರೆಯಾದಾಗ ಹಿರಿಯರು ಮಾಡಿಟ್ಟಿರುವ ಆಸ್ತಿಯನ್ನು ಭಾಗ ಮಾಡಿಕೊಳ್ಳುವುದಕ್ಕೆ **ಪಾರೀಖತ್ತು** ಎನ್ನುತ್ತಾರೆ. ಹಳ್ಳಿಯ ಮುಖ್ಯಸ್ಥರು, ಶ್ಯಾನುಭೋಗರು ಒಂದು ಕಡೆ ಸೇರಿ ಪತ್ರ ಮುಖೇನ ಆಸ್ತಿಯನ್ನು ಅವರವರ ಹೆಸರಿಗೆ ಬರೆದು ತಿಳಿಯಪಡಿಸುತ್ತಾರೆ.



ಉದಾ: ನಾಳೆ ಶಾನುಭೋಗರು ರಾಮಯ್ಯನೋರ ಆಸ್ತಿನೆಲ್ಲ ಮಕ್ಕಳಿಗೆ ಪಾರೀಖತ್ತು ಮಾಡ್ತಾರೆ.

<pareekhathhu> Share or portion - In a family, when brothers separate due to enmity, to divide the ancestral property, they call parikhattu. The elderly people of the village, Shanbhog, meet in one place and write as document the property in their names and make known.

Eg: Tomorrow Shanbhog will make Parikhattu the property of Ramayya to children

674. ಪಾವಲಿ: ರುಪಾಯಿಯ ನಾಲ್ಕನೇ ಒಂದು ಭಾಗದ ನಾಣ್ಯಕ್ಕೆ ಪಾವಲಿ (ನಾಕಾಣೆ) ಎನ್ನುತ್ತಿದ್ದರು. ಪಾವಲಿ ನಿಕ್ಕಲ್ ಮತ್ತು ಬೆಳ್ಳಿಯ ಲೋಹದಿಂದ ತಯಾರಾದದ್ದು. ಎರಡೂ ಬಳಕೆಯಲ್ಲಿದ್ದುವು. ಅಳತೆಯಲ್ಲಿ ನಾಲ್ಕನೇ ಒಂದು ಭಾಗದ ಅಳೆಯುವ ಕಬ್ಬಿಣದ ತಗಡಿನ ಸಾಧನಕ್ಕೆ **ಪಾವು** ಎಂದು ಹೆಸರು.

ಉದಾ: ತುಪ್ಪ ಬಹಳ ವೈನಾಗಿದೆ, ಎರಡು ಪಾವಲೀದು ತೊಗೊಂಬಿಡ್ರವ್ವ. ರುಪಾಯಿ, ಆಣೆ, ಕಾಸಿನ ವ್ಯವಹಾರದಲ್ಲಿ ಪಾವಲಿಯಾದರೆ, ಚಟಾಕು, ಅರಪಾವು,

ಪಾವು, ಸೇರು ಅಳತೆಯ ಪದಗಳು.

ನೋಡಿ: ಪೈಸಾ, ಕಾಸು, ವರಹ

<paavali> Four annas - They were telling Pavali for coin of one-fourth of rupee. Pavali is made of nickel or silver metal. Both were in usage. In measurement the measuring iron equipment of one-fourth is called Pavu.

Eg: Ghee is fine, Buy two pavalis ghee. Pavali in transaction of rupee, ana and paisa, Chataku, Arapavu, Pavu, Seru are words of measurement.

See: Paisa, Kaasu, Varaha

675. ಪಾಸಲೆ: ನಮ್ಮ ಗದ್ದೆ, ಹೊಲ, ತೋಟಗಳ ಆಚೆಗೆ ಸುತ್ತಮುತ್ತ ಇರುವ ಪ್ರದೇಶವನ್ನು **ಪಾಸಲೆ** ಎನ್ನುತ್ತಾರೆ.

ಉದಾ: ನಮ್ಮ ತ್ವಾಟದ ಆಚೆ ಪಾಸಲೆಯಲ್ಲಿ ಏನಾದರೂ ಜಾಗ ಸಿಕ್ಕರೆ, ಹುರುಳಿ ಬೆಳೆಯಬೇಕೂಂತ ಮನಸ್ಸಾಗೈತೆ. ಆ ಪಾಸಲೆಯಲ್ಲಿ ಅರ್ಧ ಎಕರೆ ಸಿಕ್ಕರೂ ಪರವಾಗಿಲ್ಲ.

<paasale> Surroundings - The place around our field, garden, they say Pasale.

Eg: In the place beyond our garden, if I get a little place, I have a mind to grow horse gram. Even if I get half acre it is enough.

676. ಪಾಳು: ಹಾಳಾಗಿರುವ ಜಮೀನನ್ನು **ಪಾಳುಜಮೀನು** ಎನ್ನುವುದು ರೂಢಿ. ಅಂತಹ ಜಮೀನಿನಲ್ಲಿ ಯಾವ ಬೆಳೆಯನ್ನೂ ಬೆಳೆಯುವುದಕ್ಕಾಗುವುದಿಲ್ಲ. ಪಾಳುಜಮೀನನ್ನು ಸರಿ ಪಡಿಸಬೇಕಾದರೆ, ಬೇರೆ ಕಡೆಯಿಂದ ಹೊಸ ಮಣ್ಣನ್ನು ತಂದು ಪಾಳುಜಮೀನಿನ ಮೇಲೆ ಹರಡಿ ಗೊಬ್ಬರ ಹಾಕಬೇಕು. ನಂತರ ಅದನ್ನು ಉಕ್ಕೆಹೊಡೆದು ತಳ ಮೇಲು ಮಾಡಿದರೆ, ಧಾನ್ಯವನ್ನು ಬೆಳೆಯಬಹುದು.

ಉದಾ: ರಭಸದ ಗಾಳಿಗೆ ಹೆಂಚುಗಳೆಲ್ಲ ಹಾರಿಹೋಗಿ ಪಕ್ಕದ ಗೋಡೆಯೂ ಬಿದ್ದು ಮನೆ ಪಾಳಾಗಿದೆ ಎನ್ನುತ್ತಾರೆ. ದೇವರಗುಡಿಯನ್ನು ಯಾರೂ ಸರಿಯಾಗಿ ನೋಡಿಕೊಳ್ಳದೆ ಪಾಳುಗುಡಿಯಾಗಿದೆ.

ನೋಡಿ: ದೆವ್ವದಮನೆ, ಹಾಳುಮನೆ, ಪಾಳುಗುಡಿ

<paaLu> Waste land - It is common to say palujameenu for the field which is uncultivated. In such field nothing can be grown. If you want to make it cultivable, must bring soil from outside and spread on the uncultivable land put manure. Then if you plough up and down, can grow crops.

Eg: Due to force of wind, tiles flew, and side wall also has fallen, and house has become waste they say. Without taking care of the temple, it has become Palugudi (ruined temple).

677. ಪಾಳುಗುಡಿ: ನೋಡಿ: ಪಾಳು

<paaLuguDi> See: Paalu.

678. ಪ್ರಾದೇಶಿಕ ಭಾಷೆ: ಕೆಲವು ವಿಶಿಷ್ಟ ಪದಗಳನ್ನು ವಿಶೇಷ ರೀತಿಯ ವರಸೆ ಪದಗಳನ್ನು ಪ್ರಾದೇಶಿಕವಾಗಿ ಜನರು ಬಳಸುತ್ತಾರೆ. ಇತರ ಕಡೆಗಳಲ್ಲೂ ಅವು ಬಳಕೆ ಇರಬಹುದು ಇಲ್ಲದೆ ಇರಬಹುದು. ಆದರೆ ಈ ಬಗೆ ಪದಗಳು ಆಯಾ ಪ್ರದೇಶದಲ್ಲಿ ವಿಶೇಷವಾಗಿ ಬಳಕೆ ಆಗುತ್ತದೆ. ಆಯಾ ಸ್ಥಳದವರ ಮಾತಿನ ಉಚ್ಚಾರದರೀತಿ, ಕೆಲವು ಸ್ಥಳೀಯ ಪದಗಳು, ತಮ್ಮದೇ ಆದ ಅರ್ಥಗಳು, ಪ್ರಾದೇಶಿಕಭಾಷೆಯ ಅಥವಾ ಸ್ಥಳೀಯ ಭಾಷೆಯ ವಿಶೇಷ ಲಕ್ಷಣವಾಗಿದೆ. ಈ ಹಿನ್ನೆಲೆಯಲ್ಲಿ ಚಿಗಟೇರಿಭಾಷೆ, ಮಂಡ್ಯಭಾಷೆ, ಬುಕ್ಕಾಂಬುಧಿಭಾಷೆ ಇತ್ಯಾದಿ ಕರೆಯುತ್ತಾರೆ.

ಉದಾ: ಏನ್ ಮಾರಾಯ್ರೇ (ದ.ಕ), ಏನ್ ಸ್ವಾಮಿ (ಬೆಂಗಳೂರು), ಮಾಸಾಮಿ (ಮಂಡ್ಯ)

<praadeshikabhaashe> Regional language - Some special words, special type of particular words, people use as a regional language. They may or may not be in usage in other places. But such words will be used in a particular place. The pronunciation of the particular people, some pertinent words, their meanings are the specialty of that regional language. In this background, they call Chigateri language, Mandya language, Bukkambudhi language etc.

Eg: Maaraayre (South Karnataka), En Svaami (Bengaluru), Maasaami (Mandya).

679. ಪ್ರಾರಬ್ಧ: ನೋಡಿ: ಬ್ರಾಹ್ಮಣರ ಬೈಗುಳ

<praarabdha> Vulgar word - See: Brahmanara Baigula

680. ಪಿಂಗಾಣಿ: ಬಿಳಿಯ ನಯವಾದ ಜೇಡಿಮಣ್ಣಿಗೆ ಪಿಂಗಾಣಿ ಎಂದು ಹೆಸರು. ಪಿಂಗಾಣಿಯಿಂದ ಮಾಡಿದ ಜಾಡಿಗಳಲ್ಲಿ ಉಪ್ಪು ತುಂಬಿಟ್ಟರೆ ನೀರಾಗುವುದಿಲ್ಲ. ನೆಲ್ಲಿ, ಅಮಟೆ, ನಿಂಬೆ, ಮಾವಿನ ಉಪ್ಪಿನಕಾಯನ್ನು ಪಿಂಗಾಣಿ ಜಾಡಿಯಲ್ಲಿಟ್ಟರೆ ತಿಂಗಳಾನುಗಟ್ಟಲೆಯಾದರು ಕೆಡುವುದಿಲ್ಲ.



ಉದಾ: ಪಿಂಗಾಣಿಜಾಡಿ ತೊಳೆದು ತಂದಿಡು, ಉಪ್ಪಿನಕಾಯಿ ಹಾಕ್ತೀನಿ.

<pingaaNi> Porcelain - White nice clay is called Pingani. In jars made of Pingani if salt is kept, it will not become watery. Pickle of gooseberry, Amate, Lemon, Mango, kept in Pingani jars for months together, it will not spoil.

Eg: Cleaning pingani jar keep here. I prepare pickle.

681. ಪಿಂಜಾರರು: ನೋಡಿ: ಪಿಂಜು

<pinjaararu> Cardors - See: Pinju

682. ಪಿಂಜು: ಹತ್ತಿಯನ್ನು ರಾಶಿರಾಶಿ ಹಾಕಿಕೊಂಡು ಗಂಟು ಗಂಟಾಗಿರುವುದನ್ನು ಹೆಕ್ಕಿ ಬಿಡಿಸುವುದಕ್ಕೆ **ಪಿಂಜುವುದು** ಎನ್ನುತ್ತಾರೆ. ಹತ್ತಿಯನ್ನು ಹೆಕ್ಕಿ ಹಾಸಿಗೆಯನ್ನು ಹೊಲಿಯುವವರಿಗೆ **ಪಿಂಜಾರರು** ಎಂದು ಹೆಸರು. ಪಿಂಜಾರರು ವರ್ಷಕ್ಕೆ ಎರಡು ಸಲ ಹಳ್ಳಿಯಿಂದ ಹಳ್ಳಿಗೆ ಹೋಗಿ ಬೀದಿಯಮೇಲೆ 'ಹಾಸಿಗೆ ಹೊಲಿಯೋರೂ' ಅಂತ ಕೂಗಿಕೊಂಡು ಬರುತ್ತಾರೆ. ಆಗಲೇ ಅವರ ವ್ಯಾಪಾರ.

ಉದಾ: ಪಿಂಜಾರರು ಬಂದಾಗ ನಮಗೊಂದ್‌ಸ್ವಲ್ಪ ಹೇಳ್ತೀರಾ?

ನೋಡಿ: ಪಿಂಜಾರರು, ಜವಳಿವ್ಯಾಪಾರಿ

<pinju> Separate - Cotton piled up in heaps, to separate the knots is called pinju (card the cotton). Persons carding the cotton to make bed, are called Pinjararu. Pinjars twice a year, go from village to village shouting bedmakers have come. Then only their business.

Eg: When bedmakers come, can you please tell us.

683. ಪಿಂಡಿ: ನೋಡಿ: ಕಟ್ಟು

<pinDi> Bundle - See: Kattu

684. ಪಿಸುಗುಡು: ಇನ್ನೊಬ್ಬರಿಗೆ ಕೇಳದಂತೆ ಕಿವಿಯಲ್ಲಿ ಮೆತ್ತಗೆ ಏನನ್ನಾದರೂ ಹೇಳಿದರೆ **ಪಿಸುಗುಡುವುದು** ಎಂದು ಹೇಳುತ್ತಾರೆ. ಊರಿಗೆಲ್ಲ ಸುದ್ದಿಕೊಡುಮುನ್ನ ಕಹಳೆ ಬಾಯಿಗೆ ಮುತ್ತುಕೊಟ್ಟಂತೆ ಎನ್ನುತ್ತಾರೆ.

ಉದಾ: ಅದು ಊರಿಗೆಲ್ಲಾ ಗೊತ್ತಿರುವ ವಿಷಯ, ಅದಕ್ಯಾಕೆ ಹಾಗೆ ಪಿಸುಗುಡ್ತಾ ಇದೀಯ.

ನೋಡಿ: ಪಿಸುಮಾತು, ತಟಗುಟ್ಟು

<pisuguDu> Whisper - Without heard by others, if you tell something in ear, they say pisuguduvudu. Before telling any news to the entire town, they say like kissing the Kahale mouth (an instrument like a horn shape) – a proverb.

Eg: That is known to the whole town, why you are whispering like that?

See: Pisumathu, Thataguttu.

685. ಪಿಸುಮಾತು: ನೋಡಿ: ಪಿಸುಗುಡು, ತಟಗುಟ್ಟು

<pisumaathu> Whispered word - See: Pisugudu, Thataguttu

686. ಪೀಚು: ಇನ್ನೂ ಎಳಕಾಗಿರುವ ಹಣ್ಣು ಕಾಯಿಗೆ **ಪೀಚು** ಎನ್ನುತ್ತಾರೆ.

ಉದಾ: ಸೀಬೇಕಾಯಿ ಇನ್ನೂ ಪೀಚಾಗಿದೆ, ಎರಡು ತಿಂಗಳು ಕಳೆಯಬೇಕು ಬಲಿಯುವುದಕ್ಕೆ.

ನೋಡಿ: ದೋರೆಕಾಯಿ, ಹಣ್ಣುಹಣ್ಣು

<piichu> Stunted growth - Still tender fruit, they say Piichu (state of not growing perfectly).

Eg: Guava fruit is still piichu. Requires two more months to ripe.

See: Dorekayi, Hannuhannu

687. ಪುಂಡ: ಕೆಟ್ಟ ನಡತೆಯುಳ್ಳವನಿಗೆ ಪುಂಡ ಎನ್ನುತ್ತಾರೆ. ಪೋಕರಿ, ದುಷ್ಟ ಎಂದು ಇವನನ್ನೇ ಕರೆಯುವುದು.

ಉದಾ: ಅವನೊಬ್ಬ ಪುಂಡ ಅವನ ಜೊತೆ ಹೋಗ್ಬ್ಯಾಡ.

<punDa> Mischievous Person - Person with bad character is called Punda. He is also called Pokari, Dushta.

Eg: He is just a Punda (of bad character). Do not go with him.

688. ಪುಂಡೀಹುರಿ: ಒಂದು ವಿಧವಾದ ಗಿಡದಿಂದ ತಯಾರಿಸಿರುವ ಹುರಿಯನ್ನು ಪುಂಡೀಹುರಿ ಎನ್ನುತ್ತಾರೆ. ಅಂಗಡಿಗಳಲ್ಲಿ ಪಾವು, ಅಚ್ಚೇರು ಧಾನ್ಯವನ್ನು ಕೊಂಡಾಗ ಕಾಗದದಲ್ಲಿ ಪೊಟ್ಟಣ ಮಾಡಿ ಅದರ ಮೇಲೆ ಪುಂಡೀಹುರಿಯಿಂದ ಕಟ್ಟಿಕೊಡುತ್ತಾರೆ. ನಾಲ್ಕೈದು ಪುಂಡೀಹುರಿಯನ್ನು ಹೊಸೆದು ಗೋಣಿ ಚೀಲಗಳನ್ನು ಹೊಲಿಯಲು ಉಪಯೋಗಿಸುತ್ತಾರೆ. ಅಂಗಡಿಗಳಲ್ಲಿ ಪುಂಡೀಹುರಿಯನ್ನು ದಪ್ಪವಾದ ಚೆಂಡಿನಂತೆ ಸುತ್ತಿ ಮೇಲಿಟ್ಟಿರುತ್ತಾರೆ. ಅದು ನಾವು ತೆಗೆದುಕೊಂಡ ಹಾಗೆಲ್ಲ ನಿಧಾನವಾಗಿ ಉಂಡೆ ಬಿಚ್ಚಿಕೊಳ್ಳುತ್ತಿರುತ್ತೆ. ಪುಂಡೀಹುರಿಯನ್ನು ಗೋಣಿದಾರವೆಂದು ಕರೆಯುತ್ತಾರೆ.

ಉದಾ: ಎರಡು ಉಂಡೆ ಪುಂಡೀಹುರಿ ಕೊಂಡ್ಕಂಡ್ಬಾ, ಗೋಣೀಚೀಲ ಹೊಲೀಬೇಕು.

ನೋಡಿ: ಗೋಣೀದಾರ

<punDeehuri> (-) Thread made of a type of plant is called pundihuri. In shops when bought a quantity of pavu, achheru corn, making packet of paper, tie with pundihuri. Rolling four to five threads, use for stitching gunny bags. In shops, they will have kept at the top making pundihuri as a ball. While we pull out, the ball spreads out. Pundihuri is called Gonidara (Jute thread).

Eg: Buy two bundles of pundihuri, must stitch guny bags.

689. ಪುಗಸಟ್ಟೆ: ನೋಡಿ: ಬೇಕಾಬಿಟ್ಟಿ

<pugasaTTe> Gratis - See: Bekabitti

690. ಪುಣ್ಯಾಹ: ಸತ್ತ ನಂತರ ಮಾಡುವ ಅಪರಕರ್ಮಗಳು ಮುಗಿದ ನಂತರ ಅಥವಾ ಜನನವಾದ ಮೇಲೆ ಬರುವ ಮೈಲಿಗೆ ಕಳೆದ ನಂತರ ಮೊದಲ ಶುಭಕಾರ್ಯವೇ **ಪುಣ್ಯಾಹ**. ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳಲ್ಲೂ ಪುಣ್ಯಾಹ ಮಾಡುವುದು ಮೊದಲ ಕಾರ್ಯಕ್ರಮ. ಮೈಲಿಗೆ ಮುಗಿಯಿತು ಇನ್ನು ಶುಭಕಾರ್ಯಮಾಡಲು ಅಡ್ಡಿಯಿಲ್ಲ ಎಂಬುದಕ್ಕೆ ಸಾಕ್ಷಿ ಪುಣ್ಯಾಹ.

ಉದಾ: ಶಾಸ್ತ್ರಿಗಳು ಬಂದೇಬಿಟ್ಟರು, ಪುಣ್ಯಾಹಕ್ಕೆ ಅಣಿಮಾಡಿ.

<punyaaha> Religious rites - The first auspicious ceremony is only after completion of the ceremonies of the deceased or completion of the period after birth, is Punyaha. Even during marriage, munji etc. auspicious programs, performing Punyaha is the first item. Punyaha is evidence that impurity is over, can commence to do auspicious ceremonies.

Eg: Shastriji has already arrived, arrange for Punyaha.

691. ಪುದುವಟ್ಟು: ದೇವಸ್ಥಾನಗಳಲ್ಲಿ ನಡೆಯುವ ವಿಶೇಷ ಪೂಜೆಗಳಿಗೆ ಕೆಲವು ಮನೆತನದವರು ಒಟ್ಟಾಗಿ ಸ್ವಲ್ಪ ಹಣವನ್ನು ಮುಡುಪಾಗಿಟ್ಟಿರುತ್ತಾರೆ. ಅದಕ್ಕೆ **ಪುದುವಟ್ಟು** ಎಂದು ಹೆಸರು.

ಉದಾ: ನಮ್ಮ ಮಾವನವರು ಕಾರ್ತೀಕಮಾಸದ ಕಡೇಸೋಮವಾರದ ವಿಶೇಷಪೂಜೆಗೆ ಪುದುವಟ್ಟು ಇಟ್ಟಿದಾರೆ.

ನೋಡಿ: ಸೇವಾಕರ್ತರು

<puduvaTTu> (-) Deposite of the donation - For special poojas conducted in the temple some families joining together, will have kept some money as reserve. It is called Puduvattu (Deposit of the money given as donation).

Eg: My father-in-law has kept some money as Puduvattu for the special pooja on last Monday of Karthik month.

See: Sevakartharu

691. ಪುರೋಹಿತ: ಊರಿನಲ್ಲಿ ನಡೆಯುವ ಮುಂಜಿ, ಮದುವೆ, ಸತ್ಯನಾರಾಯಣವ್ರತ, ಗಣಪತಿಪೂಜೆ ಮುಂತಾದ ಶುಭಕಾರ್ಯಗಳು ಮತ್ತು ಅಪರಕರ್ಮ, ಶ್ರಾದ್ಧ ಕರ್ಮಗಳನ್ನು ನೆರವೇರಿಸಿಕೊಡುವುದು ಊರಿನ **ಪುರೋಹಿತರ** ಜವಾಬ್ದಾರಿ. ಪುರೋಹಿತರು ಮಾಡುವ ವೃತ್ತಿಗೆ **ಪೌರೋಹಿತ್ಯ** ಎನ್ನುತ್ತಾರೆ.



ಕೆಲವುಕಡೆ ಅಪರಕರ್ಮ ಮಾಡಿಸುವ ಪುರೋಹಿತರೇ ಬೇರೆ, ಶುಭಕಾರ್ಯ ಮಾಡಿಸುವ ಪುರೋಹಿತರೇ ಬೇರೆ ಇರುತ್ತಾರೆ. ದರ್ಭೆ ಹಿಡಿಯುವ ಕೈ ಕಂಕಣ ಕಟ್ಟಿಸಬಾರದು ಅಂತ ಗಾದೆ. ದಾನವನ್ನು ಸಾಮಾನ್ಯವಾಗಿ ಪುರೋಹಿತರು (ಶಾಸ್ತ್ರಿಗಳು) ಸ್ವೀಕರಿಸುತ್ತಾರೆ.

ಉದಾ: ಬುಕ್ಕಾಂಬುಧಿಯಲ್ಲಿ ಯಾರಮನೆಯ ಶುಭ ಮತ್ತು ಅಶುಭಕಾರ್ಯಗಳಿಗೂ ಪುರೋಹಿತ ಪುಟ್ಟಣ್ಣನವರೇ ಇರಬೇಕಾಗಿತ್ತು.

<puroohitha> Family priest - It is the responsibility of the Purohit to arrange for auspicious and inauspicious ceremonies like marriage, munji, Satyanarayanavratha, Ganapathivratha and Shraddhakarmas. The profession done by Purohit is called as Pourohitya. In some places, Purohits performing inauspicious programs are different. Hand holding Darbha should not do tying Kankana (Proverb). Purohits generally, accept dana.

Eg: In Bukkambudhi, for any auspicious or inauspicious functions, Purohit Puttanna only was there.

693. ಪುಡಿಗಾಸು: ಚಿಲ್ಲರೆ ನಾಣ್ಯಕ್ಕೆ ಪುಡಿಗಾಸು ಎಂದು ಹೇಳುವುದು ರೂಢಿ. ಬಿಡಿಗಾಸು ಎಂಬುದು ಚಿಲ್ಲರೆ ನಾಣ್ಯವೇ, ಕನಿಷ್ಟ ಪ್ರಮಾಣದ ಹಣ ಅದು.

ಉದಾ: ಸುಮ್ಮನೆ ಮನೆ ಹತ್ತಿರ ಬಂದು ಗಲಾಟೆ ಮಾಡ್ಬೇಡ, ನಮ್ಮ ಹತ್ರ ಒಂದು ಪುಡಿಗಾಸೂ ಇಲ್ಲ.

ನೋಡಿ: ಚಿಕ್ಕಾಸು, ಬಿಡಿಗಾಸು, ದಮ್ಮಡಿ

<puDigaasu> Change coins - For change coins it is common to say Pudigasu. Bidigasu is also change coin. That is the smallest range of coin.

Eg: Do not create any trouble coming to house. We do not have any pudigasu.

See: Chikkasu, Bidigasu, Dammadi.

694. ಪುರುಡು: ಮನುಷ್ಯ ಹುಟ್ಟುವಾಗಲು, ಸಾಯುವಾಗಲು ಆ ದಿನದಿಂದ ಹನ್ನೊಂದು ದಿವಸಗಳು ಮೈಲಿಗೆ, ಅಂದರೆ ಅಶುಭ. ಹುಟ್ಟಿದ ಮೈಲಿಗೆಯನ್ನು ಪುರುಡು ಎಂದು ಕರೆಯುತ್ತಾರೆ.

ಉದಾ: ನಿನ್ನೆಯಿಂದ ನಮಗೆ ಪುರುಡುಬಂದಿದೆ.

ನೋಡಿ: ಸೂತಕ, ಮೈಲಿಗೆ

<puruDu> Impurity - Man, while born or dying, eleven days from that day is Mailige. Mailige means impurity. Impurity while born is called purudu.

Eg: Since yesterday, we have purudu.

See: Soothaka, Mailige.



695. ಪೂರ್ಣಾಹುತಿ: ಸುದರ್ಶನ ಹೋಮ, ಗಣಪತಿ ಹೋಮ ಮುಂತಾದುವುಗಳನ್ನು ಮಾಡುವಾಗ ಕೊನೆಯಲ್ಲಿ **ಪೂರ್ಣಾಹುತಿ** ಮಾಡುತ್ತಾರೆ. ಪೂರ್ಣಾಹುತಿಗೆ ಒಂದು ತಟ್ಟೆಯಲ್ಲಿ ಅರಿಶಿನ, ಕುಂಕುಮದೊಂದಿಗೆ, ಒಂದು ರೇಷ್ಮೆಯ ಖಣ, ಒಣ ಕೊಬರಿ ಬಟ್ಟಲು ಮತ್ತು ಒಂದು ನಾಣ್ಯವನ್ನು ಇಟ್ಟು ಮಂತ್ರೋಕ್ತವಾಗಿ ಹೋಮಕುಂಡಕ್ಕೆ ಹಾಕುತ್ತಾರೆ.

ಉದಾ: ಪೂರ್ಣಾಹುತಿ ಆಗುತ್ತೆ, ಎಲ್ಲರೂ ನಿಂತುಕೊಳ್ಳಬೇಕು.

<poorNaahuthi> Oblation - When performing Sudarshana Homa, Ganapathi Homa etc. at the end do Purnahuti. For purnahuti, in a plate, turmeric powder, kunkum, a silk cloth, half dry coconut and a coin, with ritualistic hymns put to the Homakunda.

Eg: They do Purnahuti, all must stand.

696. ಪೆಟ್ಟಿಗೆ ಅಂಗಡಿ: ಪೆಟ್ಟಿಗೆ ಅಂಗಡಿಯನ್ನು ಮರದ ಹಲಗೆಗಳಿಂದ ಜೋಡಿಸಿ ತಯಾರು ಮಾಡಿರುವುದು. ಅದನ್ನು ಎಲ್ಲಿಗೆ ಬೇಕಾದರೂ ಬದಲಾಯಿಸಬಹುದು. ಪೆಟ್ಟಿಗೆ ಅಂಗಡಿ ನೆಲದಿಂದ ಎರಡು ಮೂರು ಅಡಿ ಎತ್ತರಕ್ಕೆ ಇರುತ್ತೆ. ಮಾರಾಟ ಮಾಡುವವನು ಅಂಗಡಿಯ ಒಳಗೆ ಮುಂದುಗಡೆ ಕುಳಿತುಕೊಳ್ಳುತ್ತಾನೆ.

ಅಂಗಡಿ ಮಾಲೀಕರ ಹೆಸರಲ್ಲಿ ಅಂಗಡಿಯನ್ನು ಕರೆಯುವುದೂ ಉಂಟು.

ಉದಾ: ಶೆಟ್ಟರ ಅಂಗಡಿಗೆ ಹೋಗಿ ಎರಡು ಸೋಪು ತಾ.

ನೋಡಿ: ಅಂಗಡಿ

<peTTigeangaDi> Small shop - Pettigeangadi (a small shop) made of wooden planks. It can be shifted to any place. Pettigeangadi is at a height of two to three feet from ground level. The seller sits inside in the front. It is in vogue to call by the name of seller.

Eg: Go to Shetty's shop and bring two soaps.

See: Angadi

697. **ಪೆಟ್ಟು: ಪೆಟ್ಟು** ಸಣ್ಣ ಬಿದಿರಿನ ಕೊಳವೆಯಿಂದ ಮಾಡುತ್ತಾರೆ. ಸುಮಾರು ಹತ್ತು ಹನ್ನೆರಡು ಅಂಗುಲ ಉದ್ದದ ಬಿದಿರಿನ ಕೊಳವೆಗೆ ಇನ್ನೊಂದು ಬಿದಿರಿನ ಸಣ್ಣ ಕೋಲನ್ನು ನೂಕುವಂತೆ ಮಾಡಿ, ಅದರಲ್ಲಿ ಗೊಜ್ಜೆಕಾಯನ್ನು ಒಂದು ತುದಿಯಲ್ಲಿ ಇಟ್ಟು, ಸಣ್ಣ ಕೋಲಿನಿಂದ ಜೋರಾಗಿ ತಳ್ಳಿದರೆ, ಆ ಕಾಯಿ ಹೊರಕ್ಕೆ ಬರುವಾಗ ಠಪ್ ಎಂದು ಶಬ್ದ ಮಾಡುತ್ತೆ. ಬಿದಿರಿನ ಕೊಳವೆಯ ತೂತು ಚಿಕ್ಕದಾಗಿರುವುದರಿಂದ, ಗೊಜ್ಜೆಕಾಯಿ ಸುಲಭವಾಗಿ ಅದರೊಳಗಿಂದ ಹೊರಕ್ಕೆ ಬರುತ್ತೆ.

ಉದಾ: ಗಣಪತಿಹಬ್ಬ ಮುಗಿದಮೇಲೆ ಗಣಪತಿಯನ್ನು ಕೆರೆಗೆ ತೆಗೆದುಕೊಂಡು ಹೋಗಿ ಮುಳುಗಿಸಿ ಬರುತ್ತಾರೆ. ಆಗ ದಾರಿಯುದ್ದಕ್ಕೂ ಪೆಟ್ಟನ್ನು ಹೊಡೆಯುವುದು ಹುಡುಗರಿಗೆ ಒಂದು ಮೋಜು.

<petLu> (-) Petlu is made of small bamboo. About ten to twelve inches of bamboo pipe, making another bamboo stick to push inside, keeping gojjekayi (a kind of small round green fruit) if pushed from the small bamboo stick, that green fruit will make sound while coming out. The hole of bamboo tube is small, the fruit will come out easily.

Eg: After Ganapathi festival, taking Ganapathi to the tank and immerse and return. That time to blow the Petlu is a pleasure for boys.

698. **ಪೆಠಾರಿ:** ಬೆಲೆ ಬಾಳುವ ವಸ್ತುಗಳನ್ನು ಇಡುವ ಮರದ ಪೆಟ್ಟಿಗೆಗೆ **ಪೆಠಾರಿ** ಎಂದು ಕರೆಯುತ್ತಾರೆ. ಪೆಠಾರಿಯನ್ನು ದಪ್ಪವಾದ ಹಲಗೆಯಿಂದ ಮಾಡುತ್ತಾರೆ. ಅದಕ್ಕೆ ಹಾಕುವ ಕಬ್ಬಿಣದ ಬೀಗವೂ ದಪ್ಪವಾಗಿರುತ್ತೆ. ಸಾಮಾನ್ಯವಾಗಿ ಚಿನ್ನ, ಬೆಳ್ಳಿಯ ಸಾಮಾನುಗಳನ್ನು ಇಡುವುದಕ್ಕೆ ಪೆಠಾರಿಯನ್ನು ಬಳಸುತ್ತಾರೆ. ಇದನ್ನು ಜಾಕಾಯಿ

ಪೆಟ್ಟಿಗೆ ಎಂತಲೂ ಕರೆಯುತ್ತಾರೆ.

ನೋಡಿ: ಸಂದೂಕ

<petaari> Large wooden box - The large wooden box to keep costly items is called Petaari. They do petaari with thick wood The iron lock which is put is also thick. Generally, to keep gold, silver items they use Petaari.

See: Sandooka



699. ಪೆಂಡಿ: ಒಟ್ಟಿಗೆ ನೂರಾರು ಬಾಳೆಎಲೆ ಅಥವಾ ಬಾಳೆಕಾಯನ್ನು ಒಂದು ಕಡೆ ಇಟ್ಟಾಗ ಅದನ್ನು **ಪೆಂಡಿ** ಎನ್ನುವುದು ರೂಢಿ.

ಉದಾ: ಮುಂದಿನ ತಿಂಗಳು ಮನೆಯಲ್ಲಿ ಲಗ್ನವಿದೆ, ನಾಲ್ಕೈದು ಪೆಂಡಿ ಬಾಳೆಎಲೆ ಕಳಿಸು.

<penDi> Bundle - When keeping hundreds of plantain leaves or raw banana in one place, it is common to say pendi.

Eg: Next month there is marriage in the house. Send four or five pendis of plantain leaves.

700. ಪ್ಲೇಗಮ್ಮ: ಹಳ್ಳಿಯಲ್ಲಿ ಯಾರ ಮನೆಯಲ್ಲಾದರು ಇಲಿ ಸತ್ತುಬಿದ್ದಿದೆ ಎಂದರೆ, ಪ್ಲೇಗಿನ ಕಾಯಿಲೆ ಬರುವ ಸೂಚನೆಯೆಂದು ಹಳ್ಳಿಯವರೆಲ್ಲ ಮನೆಗೆ ಬೀಗ ಹಾಕಿಕೊಂಡು ಊರ ಹೊರಗೆ ಗುಡಿಸಲು ಹಾಕಿ ಅಲ್ಲಿ ಕೆಲವಾರು ತಿಂಗಳು ವಾಸ ಮಾಡುತ್ತಿದ್ದರು. ಪ್ಲೇಗು ಒಂದು ದೇವತೆಯ ಮೂಲಕ ಬರುತ್ತೆಂದು ಹಳ್ಳಿಯವರ ನಂಬಿಕೆ. ಪ್ಲೇಗಮ್ಮನನ್ನು ಪೂಜಿಸಿ ಕಾಯಿಲೆ ಬೇಗ ಹೋಗಲೆಂದು ಹರಕೆ ಹಾಕಿಕೊಳ್ಳುತ್ತಿದ್ದರು.

ಬುಕ್ಕಾಂಬುಧಿಯಲ್ಲಿ ಕೆಲವಾರು ವರ್ಷಗಳ ಹಿಂದೆ **ಪ್ಲೇಗ್‌ರೋಗ** ಬಂದು ಎಲ್ಲರೂ ಮನೆಗಳನ್ನು ಖಾಲಿ ಮಾಡಿ ಊರ ಹೊರಗಡೆ ಗುಡಿಸಿಲನ್ನು ಹಾಕಿಕೊಂಡು ಅಲ್ಲಿ ವಾಸಿಸುತ್ತಿದ್ದರು. ಪ್ಲೇಗ್‌ರೋಗ ಮೊದಲು ಇಲಿಗಳಿಗೆ ತಗಲುತ್ತೆ. ಇಲಿ ಮನೆಯಲ್ಲಿ ಸತ್ತುಬಿದ್ದಿದ್ದರೆ ಪ್ಲೇಗ್‌ರೋಗ ಬಂದಿದೆಯೆಂದೇ ಅರ್ಥ. ಆಗ ಎಲ್ಲ ಮನೆಯವರೂ ಗುಡಿಸಿಲಿನಲ್ಲಿ ವಾಸಿಸಿದರು. ಗುಡಿಸಿಲನ್ನು ಅಡಕೆಮರದ ತುಂಡುಗಳನ್ನು ಕಂಬವಾಗಿ ಮಾಡಿ ಮೇಲ್ಭಾಗಕ್ಕೆ ತೆಂಗಿನಸೋಗೆ, ಅಡಕೆಹಾಳೆಗಳಿಂದ ಮುಚ್ಚಿ, ಬಿಸಿಲು, ಮಳೆ, ಗಾಳಿಯನ್ನು ತಡೆಯುತ್ತಿದ್ದರು.

ವೈದ್ಯಕೀಯ ಇಲಾಖೆಯವರು ಪ್ರತಿಯೊಂದು ಮನೆಗೂ ಔಷಧಿಯನ್ನು

ಸಿಂಪಡಿಸಿ ಇನ್ನು ಯಾವ ತೊಂದರೆಯೂ ಇಲ್ಲವೆಂದು ಹೇಳಿದ ನಂತರ ಹಳ್ಳಿಯವರು ಗುಡಿಸಿಲನ್ನು ಬಿಟ್ಟು ಅವರವರ ಮನೆಗೆ ಪ್ರವೇಶಿಸಿದರು.

ಮಕ್ಕಳಿಗೆ ಸಾಮಾನ್ಯವಾಗಿ ಸಿಡುಬು ಏಳುವುದು ಸರ್ವೇಸಾಧಾರಣ. ಮುಖದ ಮೇಲೆಲ್ಲ ಗುಳ್ಳೆಗಳಾಗಿ ನೀರು ತುಂಬಿಕೊಂಡು ಕೀವಾಗುತ್ತೆ. ಕೆಲವಾರು ದಿವಸಗಳು ಅದರ ಯಾತನೆ ಅನುಭವಿಸುವುದು ಬಹಳ ಕಷ್ಟ. ಆಗ ಬೇವಿನಸೊಪ್ಪಿನಿಂದ ಮುಖದ ಮೇಲೆಲ್ಲ ಸವರುತ್ತಾರೆ. ಬೇರೆ ಮನೆಯ ಮಕ್ಕಳನ್ನು ಕರೆದು ಮೊಸರನ್ನ ಮಾಡಿ ಹಂಚುತ್ತಾರೆ. ಬೇವಿನ ಕಷಾಯ ಮಾಡಿ ಸಿಡುಬು ತಾಕಿರುವ ಮಕ್ಕಳಿಗೆ ಕುಡಿಸುತ್ತಾರೆ. ಬೇವಿನಸೊಪ್ಪನ್ನು ನುಣ್ಣಗೆ ಅರೆದು ಗಾಯಕ್ಕೆ ಹಚ್ಚಿದರೆ ಗಾಯ ಬೇಗ ಗುಣವಾಗುತ್ತೆ. ಇದು ನಾಟಿ ಔಷಧಿಗಳಲ್ಲಿ ಒಂದು.

ಉದಾ: ಈ ಸಾರಿ ಪ್ಲೇಗಿನ ಅವಾಂತರ ಬಹಳವಾಗ್ಬಿಟ್ಟಿದೆ. ಊರ್ನೋರೆಲ್ಲ ಸೇರಿ ಪ್ಲೇಗಮ್ಮನಪೂಜೆ ಮಾಡ್ಬೇಕು.

<pleegamma> Plague - If rat has fallen dead in any house in the village, it is a symptom of Plague affecting, all the villagers locking the house outside the village, they build huts and live for a few months. It is the belief of villagers, that plague comes through a deity. They worship Pleegamma and vow to see that disease must be recovered soon. In Bukkambudhi, a few years back, due to Plague, all vacating houses were living in huts outside the village. Plague affects rats first. If rat has fallen dead in the house means, it is a fact that Plague has affected. Then all the householders lived in huts. Making poles made of arecanut tree stems, for top cover coconut leaves, areca leaves, were stopping sunheat, wind and rain. Only after the Medical Officers sprinkling the medicine and declares there is no problem, villagers vacating the huts, entered their houses.

It is common that children get affected with smallpox. On the face pimples with water filled, turns puss. For a few days it is difficult to bear the torture. Then they smear all over the face with neem leaf. Inviting children from other houses, offer curd rice. Preparing neem decoction, they make the children affected to drink. Grinding nicely the neem leaf and smear to the affected part. It heals quickly. This is one of native medicines.

Eg: This time the plague havoc is too much. All villagers together must worship Plegamma.

701. ಪೊಗದಸ್ತು: ಲಕ್ಷಣವಾಗಿ ಗಟ್ಟಿಮುಟ್ಟಿಯಾಗಿರುವವನನ್ನು ಸೂಚಿಸುವುದಕ್ಕೆ **ಪೊಗದಸ್ತು** ಎಂದು ಹೇಳುವುದು ವಾಡಿಕೆ.

ಉದಾ: ಆ ರಾಮೇಗೌಡ ಇದಾನಲ್ಲ ಏನು ಪೊಗದಸ್ತಾಗಿದಾನೆ ಅಂತೀಯ, ಎಂತಹ ಕಷ್ಟವಾದ ಕೆಲಸವಾದರೂ ನಿಭಾಯಿಸ್ತಾನೆ.

<pogadasthu> (-) Man with sturdy body - To point out a man with sturdy body is called Pogadastu. *Eg: That Ramegowda, see how is pogadastu. He can manage any difficult task.*

702. ಪೊದೆ: ರಾಶಿರಾಶಿಯಾಗಿ ಬೆಳೆದಿರುವ ಹುಲ್ಲು, ಇತರೆ ಗಿಡಗಳ ಗುಂಪನ್ನು **ಪೊದೆ** ಎನ್ನುತ್ತಾರೆ.



ಉದಾ: ಆ ಪೊದೆ ಒಳಗೆ ಕೈ ಹಾಕಬೇಡ, ಹಾವು, ಚೇಳು ಇದ್ದೀತು.

<pode> Bush - Grass or any other plant grown in huge quantity, they say pode.

Eg: Do not put your hand inside that bush. There may be snake or scorpion.

703. ಪೋಕರಿ: ನೋಡಿ: ಪುಂಡ

<pookari> See: Punda (wicked)

704. ಪೋಟಿಗೆ: ಹಳ್ಳಿಯ ವ್ಯವಹಾರಗಳನ್ನೆಲ್ಲ ನಿರ್ವಹಿಸುವ ಪಟೇಲ ಮತ್ತು ಶ್ಯಾನುಭೋಗರಿಗೆ ಸರ್ಕಾರಕ್ಕೆ ರೈತರಿಂದ ಸಂದಾಯವಾದ ಕಂದಾಯದ ಹಣದಲ್ಲಿ ಸ್ವಲ್ಪ ಭಾಗವನ್ನು ಜೀವನಾಂಶವಾಗಿ ಕೊಡುತ್ತಿದ್ದರು. ಅದನ್ನು **ಪೋಟಿಗೆ** ಎಂದೂ ಹೇಳುತ್ತಾರೆ. ಸರ್ಕಾರದಲ್ಲಿ ಕೆಲಸಮಾಡಿ ನಿವೃತ್ತರಾದ ಕೆಲಸಗಾರರಿಗೆ ಅವರ ಜೀವನಕ್ಕಾಗಿ ಕೊಡುವ ಹಣಕ್ಕೆ ಜೀವನಾಂಶ (ಪೆನ್‌ಷನ್) ಎಂದು ಹೆಸರು.

ನೋಡಿ: ಜೀವನಾಂಶ

ಉದಾ: ಈ ವರ್ಷದ ಪೋಟಿಗೆ ಹಣ ಬರಲಿ, ನಿನ್ನ ಸಾಲವನ್ನೆಲ್ಲ ತೀರಿಸಿಬಿಡುತ್ತೇನೆ.

ಉದಾ: ಈ ಸಲ ಪೋಟಿಗೆಹಣ ಬಂದ ಕೂಡಲೆ ಮದುವೆ ಖರ್ಚಿಗೆ ಸ್ವಲ್ಪ ಮೀಸಲಾಗಿಟ್ಟಿಡ್ತೀನಿ.

<pooTige> Maintenance allowance - They were paying to Shanbhog and Patel of the village who were doing all transactions, a portion of tax collected from farmers, as maintenance allowance. They also call it as Potige. Working in Government and retired, the amount paid to them is called Pension.

See: Jeevanamsha

Eg: Let me get Potige amount of this year. I will clear all your loan.

Eg: Immediately I get Potige amount, I will keep reserve a portion for marriage expenses.

705. ಪೋಟ್ಲೀಸ್: ಈ ಪದ ಆಂಗ್ಲ ಭಾಷೆ ಪದ ಅಂತ ತಿಳೀಬೇಡಿ! **ಪೋಟ್ಲೀಸ್** ರಾಗೀ ಹಿಟ್ಟಿನಿಂದ ಮಾಡಿದುದು. ದೇಹದಲ್ಲಿ ರಕ್ತ ಕೆಟ್ಟು ಮೈಯಲ್ಲಿ ಬೊಕ್ಕೆಯಾಗುತ್ತೆ. ಅದು ಸಾಮಾನ್ಯವಾಗಿ ತೊಡೆಯ ಮೇಲೆ ಅಥವ ಕೊಂಕುಳಲ್ಲಿ ರಕ್ತ ಗಟ್ಟಿಯಾಗಿ ವಿಪರೀತ ನೋವು. ತಡೆಯುವುದಕ್ಕೇ ಸಾಧ್ಯವಿಲ್ಲ, ಉರಿ, ನೋವು. ಅಂತಹ ಸಂದರ್ಭದಲ್ಲಿ ಒಂದು ವಿಶೇಷ ರೀತಿಯ ಪ್ರಯೋಗ. ಅದು ಏನೆಂದರೆ, ಮೂರು ನಾಲ್ಕು ಚಮಚದಷ್ಟು ನೀರನ್ನು ಕುದಿಸಿ, ನಂತರ ರಾಗೀಹಿಟ್ಟನ್ನು ಅದಕ್ಕೆ ಹಾಕಿ ಒಂದು ಚಮಚದಷ್ಟು ಎಣ್ಣೆಯನ್ನು ಬೆರೆಸಿ, ಅದನ್ನು ಚೆನ್ನಾಗಿ ರಂಗಳಿಸಿ, ವೀಳ್ಯದೆಲೆಯ ಮೇಲೆ ಆ ಹಿಟ್ಟನ್ನು ಹಾಕಿ ಬೊಕ್ಕೆಯ ಮೇಲೆ ಕಟ್ಟಿ, ಒಂದು ದಿವಸ ಬಿಟ್ಟರೆ, ಬೊಕ್ಕೆ ಪಕ್ವವಾಗಿ, ಕೀವು ಹೊರಕ್ಕೆ ಬರುತ್ತೆ. ಆಗಲೇ ಒಂದು ಸಮಾಧಾನ, ನೋವು ಇರುವುದಿಲ್ಲ.

<pooTlees> A native medicine - Do not think that this word from English language! Potlees is made of ragi flour. Blood in body spoiled and becomes wound. It is generally, on thigh or armpit, blood becomes hard, terrible pain, cannot bear severe pain, burning. In such circumstances a special treatment. That is three or four spoons of water boiled, mix a little ragi flour and a spoon of oil, stir well, putting that paste on a betel leaf and tie on the wound. If left for a day, the wound becomes soft and puss comes out. Then only a relief, no pain.

Eg: Make potleese, keep it on the wound and tie a cloth. By dawn, it becomes soft.

706. ಪೈಲ್ವಾನ್: ನೋಡಿ: ಗರಡಿಮನೆ

<pailwaan> Gymnastic - See: Garadimane

707. ಪೈಸಾ: ನೋಡಿ: ಪಾವಲಿ

<paisaa> See: Pavali

❑

ಫ / Pha

708. ಫಜೀತಿ: ತೊಂದರೆಯನ್ನು ಅನುಭವಿಸುವುದಕ್ಕೆ **ಫಜೀತಿ** ಎನ್ನುವುದು ರೂಢಿ.

ಉದಾ: ಮೊನ್ನೆ ಬಂದ ಮಳೆಗೆ ಹಂಚೆಲ್ಲ ಹಾರಿ ನೀರು ನುಗ್ಗಿ ಫಜೀತಿಯಾಗ್ಬಿಟ್ಟಿದೆ. ನಾವೇ ಕಷ್ಟದಲ್ಲಿದೀವಿ, ನೀನು ಬಂದು ಮತ್ತೆಮತ್ತೆ ಫಜೀತಿ ಮಾಡ್ಬೇಡ.

<phajeethi> Dilemma - To experience the trouble, it is common to say Phajeethi.

Eg: Due to rain last day, tiles have flown away, water rushed in. We are experiencing the trouble. We ourselves are in a dilemma. Do not come again and again and trouble us.

709. ಫಲಪೂಜೆ: ಮದುವೆ ಕಾರ್ಯಕ್ರಮಗಳು ಪುಣ್ಯಾಹದಿಂದ ಪ್ರಾರಂಭವಾಗಿ ಅನಂತರ **ಫಲಪೂಜೆಗೆ** ಸಿದ್ಧವಾಗುತ್ತೆ. ಫಲಪೂಜೆ ನಡೆಸಿ, ಐದುಜನ ಹಿರಿಯವ್ಯಕ್ತಿಗಳಿಗೆ ಫಲತಾಂಬೂಲ ಕೊಟ್ಟು ಆಶೀರ್ವಾದ ಪಡೆದಮೇಲೆ ಉಳಿದ ಕಾರ್ಯಕ್ರಮಗಳು ಒಂದೊಂದಾಗಿ ಜರುಗುತ್ತವೆ.

ಉದಾ: ಫಲಪೂಜೆಗೆ ಐದು ತೆಂಗಿನಕಾಯಿ ತಂದುಕೊಡಿ.

<phalapooje> (-) Worship of coconut on auspicious occasions - Marriage programs commenced with Punyaha will be ready for Phalapuje. Performing Phalapuje offering phalatamboola to five elderly people and after receiving their blessings, rest of the programs starts one by one.

Eg: For Phalapuje, bring five coconuts.

ಬ / Ba

710. ಬಂಜರು: ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಗೆ **ಬಂಜರು** ಎನ್ನುತ್ತಾರೆ. ಬಂಜರು ಭೂಮಿಯನ್ನು ಸಾಗುವಳಿ ಮಾಡಲು ಸಜ್ಜುಗೊಳಿಸಬೇಕಾದರೆ, ಹೊಸ ಮಣ್ಣು, ಗೊಬ್ಬರ ಹಾಕಿ ಹುರುಳಿಯನ್ನು ಬಿತ್ತುತ್ತಾರೆ. ಅದು ಸ್ವಲ್ಪ ಬೆಳೆದನಂತರ ಪುನಃ ನೆಲದೊಳಕ್ಕೆ ಸೇರುವಂತೆ ಉತ್ತುತ್ತಾರೆ. ಕೆಲವಾರು ತಿಂಗಳು ಹಾಗೆಯೆ ಬಿಟ್ಟರೆ ಬಂಜರು ಭೂಮಿಯಲ್ಲಿ ಯಾವುದಾದರೂ ಬೇರೆ ಧಾನ್ಯವನ್ನು ಬೆಳೆಯಲು ಅನುಕೂಲವಾಗುತ್ತೆ.

ಉದಾ: ರಾಮೇಗೌಡ ಎರಡು ಎಕರೆ ಬಂಜರನ್ನು ಏನುಮಾಡಿದ?

<Banjaru> Cultivation - For land, which is not suitable for agriculture, they say banjaru (waste land). To make it fit for agriculture, spreading fresh soil, manure and grow huruli (horse gram). When the saplings come up, they plough again to see the saplings go inside. If left for a few months, can grow any crop in that land.

Eg: What Ramegowda did that two acres of waste land?

711. ಬಗಿ: ನೆಲವನ್ನು ತೋಡಿ ಗುಂಡಿಮಾಡುವುದಕ್ಕೆ **ಬಗಿ** ಅನ್ನುವ ಪದವನ್ನು ಬಳಸುತ್ತಾರೆ.

ಉದಾ: ಮನೆ ಪಾಯಹಾಕುವಾಗ ಮೂರು ಅಡಿ ಬಗೆದಾಗಲೇ ನೀರು ಬಂದ್ಬಿಡ್ತಂತೆ.

<bagi> Digging - To dig ground and make pit, they use the word bagi.

Eg: While putting three feet foundation itself, water oozed up.

712. ಬಗ್ಗಡ: ಕೊಚ್ಚೆಯಾಗಿರುವ ಜಾಗ. ಹೊಂಡಕ್ಕೆ ಎಮ್ಮೆಗಳು ನುಗ್ಗಿದಾಗ ನೀರೆಲ್ಲ **ಬಗ್ಗಡ**ವಾಗುತ್ತದೆ, ಒಂದು ದಿನ ಬಿಟ್ಟರೆ ನೀರು ತಿಳಿಯಾಗುತ್ತೆ.

ಉದಾ: ಚರಂಡಿಯಲ್ಲಿ ಗಿಡಗಳು ಬೆಳೆದು ನೀರು ಮುಂದಕ್ಕೆ ಹೋಗದೆ ಬಗ್ಗಡವಾಗಿದೆ.

<baggaDa> Mire, Slime. Place which is slush is baggada. When buffalos rushed into pond whole water becomes roddy. If left for a day, it becomes clear.

Eg: In the drainage weeds have grown, water does not flow and has become roddy.

713. ಬಚ್ಚಲುಮನೆ: ಸುಮಾರು ನಾಲ್ಕೈದು ಅಡಿ ಚಚ್ಚೌಕವಾದ ಕಲ್ಲಿನ ಚಪ್ಪಡಿಯಿಂದ ಕಟ್ಟಿರುವುದಕ್ಕೆ ಸ್ನಾನದ **ಬಚ್ಚಲು** ಎನ್ನುತ್ತಾರೆ. ಅದರ ತಳಭಾಗಕ್ಕು ಕಲ್ಲಿನ ಚಪ್ಪಡಿ ಇರುತ್ತೆ. ಒಂದು ಕಡೆ ಸ್ನಾನಮಾಡಿದ ನೀರು ಹೊರಕ್ಕೆ ಹರಿದು ಹೋಗುವಂತೆ ರಂಧ್ರವನ್ನು ಮಾಡಿರುತ್ತಾರೆ. ಬಚ್ಚಲಿನ ಒಂದು ಪಕ್ಕಕ್ಕೆ ನೀರು ಕಾಯಿಸುವ ತಾಮ್ರದ ಹಂಡೆ ಇದ್ದರೆ, ಇನ್ನೊಂದು ಪಕ್ಕಕ್ಕೆ ತಣ್ಣೀರನ್ನು ಇಡಲು ಒಂದು ಹಂಡೆ ಅಥವಾ ದೊಡ್ಡ ಕೊಳದಪ್ಪಲೆ ಇರುತ್ತೆ. ಹಳ್ಳಿಗಾಡುಗಳಲ್ಲಿ ಸ್ನಾನಕ್ಕೆ ನೀರು ಕಾಯಿಸಲು ತೆಂಗಿನಸೋಗೆ, ಕರಟ, ಬೆರಣಿ ಮತ್ತು ಅಡಕೆಕಾಯಿ ಸಿಪ್ಪೆ ಇವುಗಳನ್ನು ಬಹಳವಾಗಿ ಉಪಯೋಗಿಸುತ್ತಾರೆ. ಸೌದೆ ಅಥವಾ ಇಜ್ಜಲನ್ನು ಅಡುಗೆಮನೆಯ ಒಲೆಗೆ ಉಪಯೋಗಿಸುತ್ತಾರೆ. ಅಡಕೆಕಾಯಿನ ಸಿಪ್ಪೆಯನ್ನು ಬಳಸಿದಾಗ ಹಿಂದಿನರಾತ್ರಿಯೇ ಸಿಪ್ಪೆಯನ್ನು ಒಲೆಗೆ ತುಂಬಿ ಬೆಂಕಿ ಹಾಕಿರುತ್ತಾರೆ. ಬೆಳಗಾಗುವಹೊತ್ತಿಗೆ ಹಂಡೆಯಲ್ಲಿ ಬಿಸಿನೀರು ಕುದಿಯುವಮಟ್ಟಿಗೆ ಇರುತ್ತೆ.

ಉದಾ: ಬಚ್ಚಲುಮನೆಯಲ್ಲಿ ತಾಮ್ರದಚೆಟ್ಟಿ ಇದೆಯೊ ನೋಡು.

ನೋಡಿ: ಹಿತ್ತಲು

<bachhalumane> Bathroom - Room for taking bath in the house with a gutter. Made of about four to five feet square constructed with stone slab room is called bachhalumane. For bottom also there will be stone slab. The bathed water to flow out they will have made a hole. If for one side of that construction the copper hande (vessel) is there, for the other side there will be a big vessel to keep cold water. In village side to heat water for bathing, coconut leaves, shell, or dry cow dung and arecanut skin are used. Firewood or charcoal used for kitchen stove. When arecanut skin is used, they fill in the previous night only and put fire. By morning hot boiling water will be in hande.

Eg: See whether copper chetti (small vessel) is in

bathroom.

See: Hittilu.

714. ಬಟ್ಟಿಬೀಳುವುದು: ಹೊಟ್ಟೆಯಲ್ಲಿ ಗಾಳಿ ತುಂಬಿಕೊಂಡು ನೋವಾದಾಗ **ಬಟ್ಟಿಬಿದ್ದಿದೆ** ಎನ್ನುವುದು ರೂಢಿ. ಹೊಟ್ಟೆಯ ಹೊಕ್ಕಳಿನ ಸುತ್ತ ಎಣ್ಣೆಯನ್ನು ಸವರಿ ಅದರಮೇಲೆ ಹಸೀಮಣ್ಣಿನ ಹಣತೆಯಲ್ಲಿ ಎಣ್ಣೆ ಬತ್ತಿ ಹಾಕಿ ದೀಪ ಹಚ್ಚಿ ಒಂದು ಬಟ್ಟಲನ್ನು ಕವಿಚುತ್ತಾರೆ. ಬಟ್ಟಲು ಒಂದೆರಡು ನಿಮಿಷದಲ್ಲಿ ಹೊಟ್ಟೆಯ ಭಾಗಕ್ಕೆ ಬಿಗಿಯಾಗಿ ಹಿಡಿದುಕೊಂಡು ಸ್ವಲ್ಪ ಹೊತ್ತಾದ ನಂತರ ಸಡಿಲವಾಗಿ ಹೊಟ್ಟೆಯ ನೋವು ಸುಧಾರಿಸುತ್ತೆ. ಇದು ಹಳ್ಳಿಗಾಡುಗಳಲ್ಲಿ ಮಾಡುವ ಕೈಔಷಧಿ. ಸಣ್ಣಪುಟ್ಟ ಕಾಯಿಲೆಗಳಿಗೆ ಯಾರೂ ಆಸ್ಪತ್ರೆಗೆ ಹೋಗುವುದಿಲ್ಲ.

ಉದಾ: ಮಗೂಗೆ ಹೊಟ್ಟೆನೋವಾಗಿದೆ, ಬಟ್ಟಿಬಿದ್ದಿರಬೇಕು.


<baTTibeeLuvudu> (-) A kind of stomach disease - When pained with air filled in stomach, it is common to say, battibiddide. Around the navel of stomach smearing oil, on top of it put a small wet mud pot with oil and wick and fire, cover a cup. Within a minute or two cups will hold firmly and after some time it becomes loose, stomach pain reduces. This is the native medicine in villages. For small ailments nobody will go to hospitals.

Eg: Child is suffering from stomach pain. Must have rupture.

715. ಬಡ್ಡಿರಹಿತಸಾಲ: ನೋಡಿ: ಕೈಗಡ

<baDDirahithasaala> Loan without interest - See: Kaigada

716. ಬಣವೆ: ಒಣಗಿರುವ ಹುಲ್ಲನ್ನು ರಾಶಿರಾಶಿಯಾಗಿ ಗುಡ್ಡೆಮಾಡಿರುವುದಕ್ಕೆ **ಬಣವೆ** ಎನ್ನುತ್ತಾರೆ. ಹಾಗೆ ಗುಡ್ಡೆಮಾಡಿರುವ ಹುಲ್ಲು ತಿಂಗಳಾನುಗಟ್ಟಲೆ ಇಟ್ಟರೂ ಕೊಳೆಯುವುದಿಲ್ಲ. ಬೇಕಾದ ಸಮಯದಲ್ಲಿ ಸ್ವಲ್ಪ ಸ್ವಲ್ಪ ಹುಲ್ಲನ್ನು ತೆಗೆದು ಮೇಲ್ಭಾಗವನ್ನು ಮುಚ್ಚಿಬಿಡುತ್ತಾರೆ.



ಉದಾ: ಈ ಸಲ ನಮ್ಮ ಗದ್ದೇಲಿ ಎರಡು ಮೂರು ಬಣವೆ ಮಾಡ್ಬೇಕಾಗಿದೆ.

<baNave> Stack of hay - Piling up dry grass in heaps, they say baNave. Piled in such a way grass does not spoil for months together. When required they take little by little and cover the top.

Eg: This time in our field may have to make two to three baNaves of hay.

717. ಬದು: ಒಬ್ಬರ ಜಮೀನಿಗೂ ಪಕ್ಕದ ಜಮೀನಿಗೂ ಮಧ್ಯೆ ಅವರವರ ಜಮೀನನ್ನು ಗುರ್ತಿಸಲು ಜಮೀನಿನ ಉದ್ದಕ್ಕೂ ಒಂದು ಅಡಿ ಎತ್ತರಕ್ಕೆ ಮಣ್ಣನ್ನು ಗುಡ್ಡೆಯಾಗಿ ಹರಡುತ್ತಾರೆ. ಇದಕ್ಕೆ **ಬದು** ಎಂದು ಹೆಸರು. ಹಳ್ಳಿಗಳಲ್ಲಿ ಒಬ್ಬರಿಗೆ ಕಾಣದಂತೆ ಒಬ್ಬರು ಬದುವನ್ನು ಪಕ್ಕಕ್ಕೆ ಒತ್ತರಿಸಿ ಒಂದು–ಎರಡು ಅಡಿ ಜಮೀನನ್ನು ತಮ್ಮ ಜಮೀನಿಗೆ ಸೇರಿಸಿಕೊಳ್ಳುವುದು ಸರ್ವೇಸಾಮಾನ್ಯ. ಇದಕ್ಕಾಗಿ ಎಷ್ಟೋ ಬಾರಿ ಮಾರಮಾರಿ ಜಗಳಗಳಾಗುವ ಸಂದರ್ಭಗಳೂ ಉಂಟು. ಯಾರಿಗೆ ಅನ್ಯಾಯವಾಗಿದೆಯೊ ಅವರು ಸರ್ಕಾರಕ್ಕೆ ಮನವಿ ಮಾಡಿಕೊಂಡರೆ, ಸರ್ಕಾರಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಕಳುಹಿಸುತ್ತಾರೆ. ಅವರು ಬಂದು ಸಾಗುವಳಿ ಪತ್ರದಲ್ಲೆ ನಮೂದಿಸಿರುವ ಅಳತೆಯಂತೆ ಜಮೀನನ್ನು ಅಳೆದು ಅವರ ಸಮ್ಮುಖದಲ್ಲೆ ಬದುವನ್ನು ಬದಲಾಯಿಸುತ್ತಾರೆ.

ಉದಾ: ಸಿವಪ್ಪ ನಮ್ಮ ಜಮೀನಿನಲ್ಲಿ ಒಂದು ಅಡಿ ಒತ್ತಲಿಸಿ ಬದು ಹಾಕ್ಕಂಡಿದಾನೆ, ನಾನು ಸರ್ಕಾರಕ್ಕೆ ಅರ್ಜಿ ಕೊಟ್ಟಂದಿದೀನಿ.

<badu> Boundary - In between land of one person and neighbor land, to indicate their land, throughout the length of land they spread mud heap of one foot. This is called badu (boundary line). It is very common in villages, to encroach and move the boundary line unnoticed and acquire one to two feet of neighbor land to his land. For this, there will be quarrels so many times. One who is unjustified, if he appeals to Government, they will send the concerned person. He will come and measure the land as per the recorded document and in their presence only will set right the boundary.

Eg: Sivappa has shifted the boundary in our land by one foot. I have appealed to government.



718. ಬಯಲಾಟ: ಬಯಲಾಟ ಆಡುವವರು, ಯಕ್ಷಗಾನ ಮಾಡುವವರ ವೇಷ ಭೂಷಣಗಳೇ ಬೇರೆ. ಅವರು ಅಡ್ಡಾದಿಡ್ಡಿ ಬಣ್ಣಗಳನ್ನು ಬಳಿದುಕೊಳ್ಳುತ್ತಿದ್ದರು. ಕೈಯ್ಯಿಂದ ಮುಟ್ಟಿದರೆ ಮೆತ್ತಿಕೊಳ್ಳುವಷ್ಟು ಬಣ್ಣ ಇರುತ್ತಿತ್ತು. ಅವರಿಗೆ ಒಂದು ನಾಟಕ ವೇದಿಕೆ, ಅಂಕಪರದೆ ಇದ್ದರೆ ಸಾಕು. ಆಟ ಪ್ರಾರಂಭವಾಗುವುದಕ್ಕೆ ಮುಂಚೆ ಸೂತ್ರಧಾರ ವೇದಿಕೆಯ ಮೇಲೆ ಬಂದು ಮಂಗಳ ಹಾಡಿ ದೇವರಪಟಕ್ಕೆ ಮಂಗಳಾರತಿ ಮಾಡುತ್ತಿದ್ದ. ನೋಡುವ ಪ್ರೇಕ್ಷಕರಿಗೆಲ್ಲ ಈಚಲಚಾಪೆ ಅಥವಾ ಜಮಖಾನೆ ಕೂರುವುದಕ್ಕೆ. ವೇದಿಕೆಯ ಮೇಲೆ ಮಧ್ಯಭಾಗದಲ್ಲಿ ಎತ್ತರಕ್ಕೆ ಒಂದು ಪೆಟ್ರೊಮ್ಯಾಕ್ಸ್ ದೀಪ ಇರುತ್ತಿತ್ತು. ರಾಮಾಯಣ, ಭಾರತ, ಭಾಗವತ ಕಥೆಗಳಿಗೆ ಸಂಬಂಧಿಸಿದಂತ ಕಥೆಗಳ ನಾಟಕ ಆಡುತ್ತಾರೆ. ಜಾನಪದಕಥೆಗಳ ನಾಟಕವನ್ನು ಆಡುವುದುಂಟು.

ಉದಾ: ನಾಳೆ ರಂಗಪ್ಪನ ಮೈದಾನದಲ್ಲಿ ಹರಿಶ್ಚಂದ್ರ ಬಯಲಾಟ ಇದೆ.

<bayalaaTa> (-) Drama enacted in open space. The costumes of players enacting drama in open space and players of Yakshagaana (folk dance) are different. They were applying colors in such a way, if we touch by hand, to stick so much of color. For them one stage and curtain is enough. Before commencement of the play, the narrator coming on the stage reciting naandipadya and was doing aarati to God's photo. For the audience to sit palm leaf carpet or cotton carpet. In the center of stage there used to be a Petromax lamp at a height. Stories connected to Raamayana, Mahabharat, Bhagavatha dramas they play. Folk stories drama is also played.

Eg: Tomorrow in Rangappa's field Harischandra open stage drama is there.

719. ಬರಖಾಸ್ತು: ಕಾರ್ಯಕ್ರಮಗಳು ಮುಗಿದು ಕೊನೆಯಾಗುವುದನ್ನು **ಬರಖಾಸ್ತು** ಎಂದು ಹೇಳುವುದು ರೂಢಿ. ಬರಖಾಸ್ತು ಎಂದರೆ ಮುಕ್ತಾಯ.

ಉದಾ: ಅಮಲ್ದಾರರು, ಶ್ಯಾನುಭೋಗರು ಬಂದು ಪಂಚಾಯಿತಿಮಾಡಿ ತೀರ್ಮಾನ ಕೊಟ್ಟಮೇಲೆ ಸಭೆ ಬರಖಾಸ್ತಾಯಿತು.

<barakhaasthu> (-) The ending of all programs, it is common to say, barakhastu. Barakhastu means Conclusion.

Eg: After Amildar, Shanbhog verifying and giving the final decision, the meeting concluded.

720. ಬರಾವರ್ದು: ಹಳ್ಳಿಯ ಶ್ಯಾನುಭೋಗ, ಪಟೇಲ ಮೊದಲಾದ ವೃತ್ತಿಗಳನ್ನು ಅವರ ಮನೆತನಕ್ಕೆ ವಂಶಪಾರಂಪರ್ಯವಾಗಿ ನಡೆಸಿಕೊಂಡು ಹೋಗುವ ಹಕ್ಕನ್ನು **ಬರಾವರ್ದು** ಎಂದು ಹೇಳುತ್ತಾರೆ. ಒಂದು ಮನೆಯಲ್ಲಿ ಮುತ್ತಜ್ಜ ಶ್ಯಾನುಭೋಗನಾಗಿದ್ದರೆ, ಅವನ ಮಗ, ಮೊಮ್ಮಗ, ಮರಿಮಗನಿಗೂ ಶ್ಯಾನುಭೋಗಿಕೆ ಮಾಡುವ ಹಕ್ಕನ್ನು ಪಿತ್ರಾರ್ಜಿತವನ್ನಾಗಿ ಸರ್ಕಾರದವರು ನಿಗದಿಮಾಡುತ್ತಿದ್ದರು.

ಉದಾ: ಪಟೇಲ್ ಸೋಮಯ್ಯನೋರಿಗೆ ಇಪ್ಪತ್ತು ವರ್ಷದಿಂದ ಕೆಲಸ ಬರಾವರ್ದಾಗಿದೆ.

<baraavardu> Hereditary - To continue the hereditary rights of their family like profession of Shanbhog, Patel etc. they say Baraavardu. If the great grandfather was Shanbhog, his son, grandson, great grandson also will have the right of continuing as Shanbhog, the Government was reserving that right.

Eg: For Patel Somayya, the hereditary right is given for the past twenty years.

721. ಬಲಿಪಾಡ್ಯಮಿ: ಬಲಿಪಾಡ್ಯಮಿಯ ದಿನ ಮನೆಯ ಹೊರಬಾಗಿಲಿನ ಹೊಸಿಲಿನ ಮೇಲೆ ಎರಡು ಕಡೆಗೂ ಹಸುವಿನ ಸಗಣಿಯಲ್ಲಿ ಎರಡು ಅಂಗುಲ ಎತ್ತರದಷ್ಟು ಗೋಪುರಾಕಾರವಾಗಿ ಮಾಡಿ ಅದಕ್ಕೆ ಗರಿಕೆಹುಲ್ಲನ್ನು ಸಿಕ್ಕಿಸಿರುತ್ತಾರೆ. ಅದಕ್ಕೆ **ಕೆರಕ** ಎಂದು ಹೇಳುವುದು ರೂಢಿ.

ನೋಡಿ: ಕೆರಕ

<balipaaDyami> (-) On Balipadyami day at the bottom of main door, both sides making two inches height of cow dung like a cone shape, fix the thin grass It is common to say that Keraka.

See: Keraka



722. ಬವನಾಸಿ: ಬವನಾಸಿಯನ್ನು ಹಿತ್ತಾಳೆ ಅಥವಾ ತಾಮ್ರದ ಲೋಹದಿಂದ ಮಾಡುತ್ತಾರೆ. ದಾಸಯ್ಯಗಳು ಬವನಾಸಿಯನ್ನು ಹೆಗಲ ಮೇಲೆ ಹಾಕಿಕೊಂಡು ಭಿಕ್ಷೆ ಬೇಡುತ್ತಾರೆ. ಕೆಲವು ಮನೆಗಳ ಸಂಪ್ರದಾಯದಲ್ಲಿ ಯಾವುದಾದರು ಮುಂಜಿ ಅಥವಾ ಮದುವೆಯ ಶುಭಕಾರ್ಯಗಳು ನಡೆಯುವುದಕ್ಕೆ ಹಿಂದಿನ ದಿನ ಇಬ್ಬರು ದಾಸಯ್ಯಗಳಿಗೆ ಊಟ ಹಾಕುವುದು ರೂಢಿ. ಊಟಕ್ಕೆ ಮುಂಚಿತವಾಗಿ **ಬವನಾಸಿ**ಯನ್ನು ಶುಭ್ರವಾಗಿ ತೊಳೆದು ಅದಕ್ಕೆ ಪೂಜೆಮಾಡುತ್ತಾರೆ. ಆಗ ದಾಸಯ್ಯಗಳು ಶಂಖವನ್ನು ಊದಿ ಜಾಗಟೆ ಬಾರಿಸುತ್ತಾರೆ.

ಉದಾ: ದಾಸಯ್ಯ, ಬವನಾಸಿಪೂಜೆ ಮಾಡಾಯ್ತು, ಶಂಖ ಊದಪ್ಪ.

ನೋಡಿ: ಗೋಪಾಳಬುಟ್ಟು

ಭಿನ್ನರೂಪ: ಭವನಾಶಿ, ಬವನಾಶಿ, ಬೋನಾಸಿ, ಬೋಸಿ

<bavanaasi> (-) A kind of begging bowl - Make bavanasi of brass or copper. Daasayyas putting bavanasi on shoulders, beg. In some of the families as a custom, the previous day of auspicious functions like Thread Ceremony, Marriage etc. to offer food to two Daasayyas is common. Before lunch, cleaning the bavanaasi, worship it. Then Daasayyas blow the conch and jagate (a musical brass plate).

Eg: Daasayya worshipped bavanaasi. Blow the conch.

See: Gopalabuttu.

Different version: Bhavanasi, Bhavanashi, Bonasi, Bosi.


723. ಬಳಕೆವಾದ್ಯಗಳು: ವಾದ್ಯಗಳು ನಾನಾಬಗೆಯಲ್ಲಿವೆ. ಬಳಕೆವಾದ್ಯಗಳು, ವಿಶೇಷ ವಾದ್ಯಗಳು ಎಂದು ಎರಡು ಬಗೆ ವರ್ಗೀಕರಿಸಬಹುದು. ವಾದ್ಯಗಳನ್ನು ಬಳಸುವ ಸಂದರ್ಭಕ್ಕೆ ಅನುಗುಣವಾಗಿ ಪೂಜಾವಾದ್ಯಗಳು, ಹರಿಕಥೆ ವಾದ್ಯಗಳು, ಉತ್ಸವ ವಾದ್ಯಗಳು ಇತ್ಯಾದಿಯಾಗಿ ವರ್ಗೀಕರಿಸುತ್ತಾರೆ. ಬುಕ್ಕಾಂಬುಧಿಯಲ್ಲಿ ಬಳಸುತ್ತಿದ್ದ ಕೆಲವು ವಾದ್ಯಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

<balakevaadyagaLu> Musical instruments - Musical instruments are in many varieties. We can segregate in two types as, ones which are in vogue and the other Special

instruments. Instruments which are used to coincide with the circumstances, they classify as Poojavadyagalu (used while worshipping), Harikathe vadyagalu (suitable for Harikathas), Utsava vadyagalu (used for Processions) etc. Words which were used in Bukkambudhi for some musical instruments are narrated here.

724. ಪೂಜಾವಾದ್ಯಗಳು: ದೇವಸ್ಥಾನಗಳಲ್ಲಿ ದೇವರಿಗೆ ಮಂಗಳಾರತಿ ಮಾಡುವಾಗ ಅರ್ಚಕರ ಒಂದು ಕೈಯ್ಯಲ್ಲಿ ಗಂಟೆ, ಇನ್ನೊಂದು ಕೈಯ್ಯಲ್ಲಿ ಹಲಗಾರ್ತಿ. ಒಬ್ಬಿಬ್ಬರು ಜಾಗಟೆ ಬಾರಿಸುವುದು, ಶಂಖ ಊದುವುದು ಕಂಡುಬರುವ ಸಂಗತಿ.

ಉದಾ: ಮಹಾಮಂಗಳಾರತಿ ಆಗುತ್ತೆ ವಾದ್ಯಬಾರಿಸಿ.



Puja Instruments: (-) Instruments used while worshiping - In temples while doing Arati for God, in one hand of the priest Bell and in another halagarti (a small piece of brass metal plate on which wick or camphor placed burning), one or two persons beating jagate, blowing conch are seen.

Eg: Final arati (mahamangalarati) will be done. Blow the instrument.

725. ಹರಿಕಥೆವಾದ್ಯಗಳು: ಭಜನೆಮಾಡುವಾಗ ಮತ್ತು ಹರಿಕಥೆ ಮಾಡುವಾಗ ತಾಳ, ಖಂಜರಿ, ಹಾಡು ಹೇಳುವಾಗ ಹಾರ್ಮೋನಿಯಂ, ಸಂಗೀತ ಕಚೇರಿಯಲ್ಲಿ ಪಿಟೀಲು, ಮೃದಂಗ ಮತ್ತು ಕೊಳಲು, ನುಡಿಸುತ್ತಾರೆ. ಬುಕ್ಕಾಂಬುಧಿಯಲ್ಲಿದ್ದ ನಾಗಪ್ಪಶಾಸ್ತ್ರಿಗಳು ರಾಮಾಯಣ, ಮಹಾಭಾರತದ ಕಥೆಗಳನ್ನು ಹಾಡಿನರೂಪದಲ್ಲಿ ಹೇಳುತ್ತಿದ್ದರು.



ಅವರಿಗೆ ಹಾರ್ಮೋನಿಯಂ ಮತ್ತು ತಬಲ ಬಾರಿಸುವುದೂ ಒಂದು ಹವ್ಯಾಸವಾಗಿತ್ತು.

ಉದಾ: ಭಜನೆಸೀನಪ್ಪ ಹಾರ್ಮೋನಿಯಂಅನ್ನು ಸೊಗಸಾಗಿ ಬಾರಿಸುತ್ತಾನೆ.


ಉದಾ: ಕೇಶವದೇವರ ದೇವಸ್ಥಾನದಲ್ಲಿ ಭಜನೆಮಾಡುವಾಗ ಖಂಜರಿ ಬಾರಿಸುವುದು ಬಿಲ್ಲಹಳ್ಳಿ ಶಂಕ್ರಪ್ಪನಿಗೇ ಮೀಸಲು. ಅಂತೆಯೇ ತಬಲಕ್ಕೆ ಪಟ್ಟಾಭಿರಾಮಾಶಾಸ್ತ್ರಿ.

Harikathe instruments: (-) While doing Bhajan or Harikatha, they play Thala (pair of flat cymbals), Khanjari (small musical instrument made of leather), Harmonium (while singing song); In Music Concert, violin, Mridanga and flute they play. Nagappa Shastri in Bukkambudhi was reciting Raamayana and Mahabharat stories in the style of song. For him Harmonium and Drum beating was a hobby.

Eg: Bhajane Seenappa plays Harmonium beautifully.

Eg: While doing Bhajan in Keshavadevaru temple, playing of Khanjari was reserved for Billahalli Shankrappa. Likewise beating of drum for Pattabhirama Shastri.

726. ಉತ್ಸವವಾದ್ಯಗಳು: ಮದುವೆ ಚಪ್ಪರದಲ್ಲಿ, ಅಥವಾ ದೇವರ ಉತ್ಸವದ ಮುಂದೆ ಓಲಗ ಮತ್ತು ಡೋಲು, ನಾಗಸ್ವರ ನುಡಿಸುತ್ತಾರೆ.



ಉದಾ: ಗಟ್ಟಿಮೇಳ, ಗಟ್ಟಿಮೇಳ ಎಂದು ಶಾಸ್ತ್ರಿಗಳು ಕೂಗಿಕೊಂಡರು.

ಪಿಟೀಲು, ಡಮರುಗ, ನಗಾರಿ, ಶಂಖ, ಓಲಗ, ತಬಲ, ತಮಟೆ, ಏಕನಾದ, ತುತ್ತೂರಿ, ಪೀಪಿ ಇವುಗಳು ಸಾಮಾನ್ಯವಾಗಿ ಬಳಕೆಯಲ್ಲಿರುವ ವಾದ್ಯಗಳು.




Procession Instruments: (-) In marriage pandal or in front of procession of deity, Olaga and Dolu (large drum), Nagaswara (Pipe shaped musical instrument) they play.

Eg: Shastriji shouted Gattimela, gattimela (Beating drum with high sound).




727. ತಮಟೆ: ಮಾರಮ್ಮ ಮುಂತಾದ ಊರ ದೇವತೆಗಳನ್ನು ಬೀದಿಯಲ್ಲಿ ಕೊಂಡೊಯ್ಯುವಾಗ ತಮಟೆ ಬಾರಿಸುತ್ತಾರೆ. ಕೆಲವು ಜನಾಂಗದವರು ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗಲು ತಮಟೆಯನ್ನು ಬಾರಿಸುತ್ತಾರೆ.

TamaTe: (-) Maaramma etc. village deities while taken in procession, TamaTe. Some community people while taking dead body to cremation ground play TamaTe.



728 ಪುಂಗಿ: ಹಾವಾಡಿಸುವವನು ಯಾವಾಗಲೂ **ಪುಂಗಿ**ಯನ್ನೆ ಊದುವುದು. ಅವನು ಪುಂಗಿಯನ್ನು ಊದುತ್ತಿರುವಾಗ ಹಾವು ಹೆಡೆ ಬಿಟ್ಟು ತಲೆ ತೂಗುತ್ತಿರುತ್ತೆ. ಅದರಂತೆ ಅವನು ಹಾವಿಗೆ ತರಬೇತಿ ಕೊಟ್ಟಿರುತ್ತಾನೆ.

Pungi: **Musical pipe** made of bottle gourd - Snake charmers always play Pungi (Musical instrument made of bottle gourd scopped and dried). When he is playing Pungi, the snake will be swinging its head widely spread. Likewise, he will have trained the snake.



729 ಏಕನಾದ, ಕಿನ್ನರಿ: ಏಕನಾದವನ್ನು ಒಣಗಿದ ದೊಡ್ಡ ಸೋರೆಕಾಯಿಬುರುಡೆಗೆ ಕೋಲನ್ನು ಸೇರಿಸಿ ಒಂದೇ ತಾಮ್ರದ ತಂತಿಯನ್ನು ಕಟ್ಟುತ್ತಾರೆ. ತಂತಿಯನ್ನು ಬೆರಳಿನಿಂದ ಬಾರಿಸಿದಾಗ ಒಂದೇ ನಾದ ಹೊರಡುತ್ತೆ. ಆದ್ದರಿಂದ ಅದಕ್ಕೆ ಏಕನಾದ ಎಂದು ಹೆಸರು.

Ekanada, Kinnari (-) (a kind of stringed musical instrument). For Ekanada attaching a stick to the dried halusorekayi (a kind of pumpkin) tie with copper wire. When struck with finger, only one tune will come. Therefore, it is called Ekanada.



730. ಸಂಗೀತವಾದ್ಯಗಳು: ಸಂಗೀತ ಕಚೇರಿ ನಡೆಸುವಾಗ, ತಬಲ, ಮೃದಂಗ, ಪಿಟೀಲು, ಹಾರ್ಮೋನಿಯಂ, ಘಟಂ, ಖಂಜರಿ, ತಾಳ, ತಂಬೂರಿ, ವೀಣೆ ಮೊದಲಾದುವನ್ನು ಹಾಡುಗಾರಿಕೆಯೊಂದಿಗೆ ಬಳಸುತ್ತಾರೆ.

ಉದಾ: ನಮ್ಮೂರ ಚೌಡಯ್ಯ ತಬಲದಲ್ಲಿ ನಿಸ್ಸೀಮ.

Musical Instruments: (-) While performing Music Concerts, Tabala, Mridanga (Drum), Violin, Harmonium, Ghatam (large earthen pot used as an instrument), Khanjari, Thala, Thamburi (a kind of stringed musical instrument) etc. use while singing.

Eg: Chowdayya of our village is an expert in Tabala.



731. ಓಲಗವಾದನ: ಓಲಗದವರು ಯಾರ ಮನೆಯಲ್ಲಿ ಮುಂಜಿ, ಮದುವೆಗಳಾದರು ಕರೆದ ಕೂಡಲೆ ಬಂದು ಸಮಾರಂಭ ಮುಗಿಯುವವರೆಗೂ ಅಲ್ಲಿದ್ದು ವಾದ್ಯಗಳನ್ನು ಬಾರಿಸುತ್ತಿದ್ದರು. ವರ ವಧುವಿನ ಕೊರಳಿಗೆ ತಾಳಿ ಕಟ್ಟುವಾಗ ಓಲಗ ತಬಲಗಳ ಶಬ್ದ ಎಲ್ಲರ ಕಿವಿಯು ಕಿವುಡಾಗುವಂತೆ ಗಟ್ಟಿಯಾಗಿ ಬಾರಿಸುತ್ತಾರೆ. ಇದಕ್ಕೆ ಗಟ್ಟಿಮೇಳ ಎನ್ನುತ್ತಾರೆ. ಓಲಗವಾದನ ಮಾಡುವವರಿಗೂ ವರ್ಷದ ಪೂರಾ ದವಸ ಧಾನ್ಯಗಳನ್ನು ಕೊಡುತ್ತಿದ್ದರು.

Oolagavaadana (-) (a large pipe shaped instrument): Players of Olaga were coming immediately when invited during Thread Ceremony, Marriage in any house and were playing right from beginning to end. When the bridegroom ties Mangalya to bride, they play Olaga, doolu so loudly as to make deaf to everyone. For this they say Gattimela. For Olaga players also were offering ragi, rice etc. enough for the whole year.

732. ಬಳಕೆಹೆಸರು (ಗಿಡ್ಡಹೆಸರು): ನೋಡಿ: ಅಡ್ಡಹೆಸರು

<balakehesaru> (giDDahesaru) Nick name - See: Addahesaru



733. ಬಳ್ಳಿ: ಸೌತೆಕಾಯಿ, ಹೀರೆಕಾಯಿ, ಹಾಗಲಕಾಯಿ ಮುಂತಾದ ತರಕಾರಿಗಳು ಮತ್ತು ಮಲ್ಲಿಗೆ ಹೂವು **ಬಳ್ಳಿಯಲ್ಲಿ** ಬೆಳೆಯುತ್ತವೆ. ಬಳ್ಳಿಗೆ ಚಪ್ಪರದ ಆಸರೆ ಬೇಕೇಬೇಕು. ಕುಂಬಳಬಳ್ಳಿ ಮತ್ತು ಕಲ್ಲಂಗಡಿ, ಕರಬೂಜದ ಹಣ್ಣುಗಳ ಬಳ್ಳಿ ಮಾತ್ರ ನೆಲದ ಮೇಲೆ ಉದ್ದಕ್ಕೂ ಹರಡುತ್ತದೆ. ಇವುಗಳನ್ನು ಚಪ್ಪರದ ಮೇಲೆ ಹಬ್ಬಿಸುವುದಿಲ್ಲ. ಕಾರಣ ಇವುಗಳ ಗಾತ್ರ ಹೆಚ್ಚಾಗಿದ್ದು, ಭಾರವಾಗಿರುತ್ತೆ.

ಉದಾ: ಮಲ್ಲಿಗೆಬಳ್ಳಿ ನಮ್ಮ ಹಿತ್ತಲಲ್ಲಿ ಚೆನ್ನಾಗಿ ಹಬ್ಬಿದೆ.

<baLLi> Creeper - Cucumber, Heerekayi, Bitter Gourd etc. vegetables and jasmine flower grow in creepers. Creeper requires the support of pandal. Cucumber creeper, Watermelon, Karabooja (musk melon) spread on ground throughout. These cannot be grown on pandal. Reason, these are bigger in size.

Eg: Jasmine creeper has grown well in our back yard.



734. ಬಳೆಗಾರ: ಗೌರಿಹಬ್ಬಕ್ಕೆ ಒಂದು ವಾರದ ಮುಂಚೆ **ಬಳೆಗಾರ** ತರಹಾವಾರಿ ಬಣ್ಣದ ಗಾಜಿನ ಬಳೆಗಳನ್ನು ತಂದು ಮಾರುತ್ತಿದ್ದ. ಅವನಿಗೆ ಎಲೆ ಅಡಿಕೆ ತಾಂಬೂಲವನ್ನು ಕೊಟ್ಟ ನಂತರ ಕೈಗೆ ಬಳೆಗಳನ್ನು ತೊಡಿಸುತಿದ್ದ.

ಉದಾ: ಬಳೆಗಾರ ಚೆನ್ನಯ್ಯ ಬಂದಿದ್ದಾನೆ, ಗೌರಿಹಬ್ಬ ಬಂದಿದೆ.

<baLegaara> Bangle seller - A week earlier to Gowri Festival, Bangle seller bringing varieties of color glass bangles and was selling. After giving him veelyadele (betel leaves), arecanut, tamboola he was starting to put the bangles.

Eg: Bangle seller Channayya has come. Gowri festival has come.

735. ಬ್ರಹ್ಮಚಾರಿ: ನೋಡಿ: ಉಪನಯನ

<brahmacaari> Bachelor - See: Upanayana (Thread Ceremony)

736. ಬಾಗಿನಮೊರ: ಬಿದಿರನ ಮೊರಕ್ಕೆ ಅರಿಶಿನವನ್ನು ಬಳಿದು ಬಿಸಿಲಿನಲ್ಲಿ ಒಣಗಿಸಿ, ಅದರಲ್ಲಿ ಗೌರೀಹಬ್ಬದ ದಿನ ಹೆಂಗಸರು, ಮುತ್ತೈದೆಯರಿಗೆ ಅಕ್ಕಿ, ಕಡಲೆ, ತೊಗರಿ, ಉದ್ದು, ಹೆಸರುಬೇಳೆ, ಬೆಲ್ಲ, ರವೆ, ತೆಂಗಿನಕಾಯಿ ಮುಂತಾದ ಪದಾರ್ಥಗಳನ್ನಿಟ್ಟು ಇನ್ನೊಂದು ಕೇರುವಮೊರದಿಂದ ಮುಚ್ಚಿ ಬಾಗಿನ ಮುತ್ತೈದೆಯರಿಗೆ ಕೊಡುತ್ತಾರೆ. ಇದಕ್ಕೆ ಬಾಗಿನಮೊರ ಎಂದು ಹೆಸರು. ಯಾವ ದವಸ ಧಾನ್ಯಗಳನ್ನಾಗಲಿ ತಾವು ಉಪಯೋಗಿಸುವ ಮುನ್ನ ಮತ್ತೊಬ್ಬರಿಗೆ ಕೊಟ್ಟು ಉಳಿದುದನ್ನು ತಾವು ಉಪಯೋಗಿಸಬೇಕು ಅನ್ನುವ ಪದ್ಧತಿ ಇಂದಿಗೂ ಉಳಿದಿದೆ. ಅಂದರೆ ಇನ್ನೊಬ್ಬರಿಗೆ ಕೊಡುವ ಬುದ್ಧಿ ಇರಬೇಕು ಅಷ್ಟೆ!

ಉದಾ: ನಾಳೆ ಗೌರಿಹಬ್ಬಕ್ಕೆ ಹತ್ತು ಜೊತೆನಾದರೂ ಬಾಗಿನಮೊರ ಬೇಕಾಗುತ್ತೆ.

<baaginamora> Bamboo fan - For bamboo fan, smearing turmeric powder and dried in the sun, on Gowri festival, women putting in that rice, gram, tur dal, urd dal, moong dal, jaggery, rava, coconut etc. covering with another fan, offer to married women. This is called Baginamora. Whatever crop we use the custom of offering before to others and then use, has remained till today. Means, we must have that mind to offer others.

Eg: For tomorrow's Gowri festival, at least ten pairs of bamboo fans are required.

737. ಬಾಗಿಲು ತಡೆಯುವುದು: ಗಂಡು ಹೆಣ್ಣನ್ನು ಪ್ರಸ್ತಕ್ಕೆ ಕೊಠಡಿಯೊಳಕ್ಕೆ ಕಳುಹಿಸುವಾಗ ಇಬ್ಬರನ್ನೂ ಬಾಗಿಲಲ್ಲಿ ತಡೆದು ಒಬ್ಬರು ಇನ್ನೊಬ್ಬರ ಹೆಸರನ್ನು ಹೇಳಬೇಕೆಂದು ಸತಾಯಿಸುತ್ತಾರೆ. ಅವರು ಹೇಳುವವರೆಗೂ ಹುಡುಗಿಯರು ಬಾಗಿಲಲ್ಲಿ ಅಡ್ಡ ನಿಂತಿರುತ್ತಾರೆ. ಹಾಗುಹೀಗೂ ಗಂಡು ಹೆಂಡತಿಯ ಹೆಸರನ್ನು ಹೇಳುತ್ತಾನೆ. ಆದರೆ ಹೆಣ್ಣಿಗೆ ನಾಚಿಕೆ. ಕೊನೆಗೆ ತಲೆ ತಗ್ಗಿಸಿಕೊಂಡು ಮೆತ್ತಗೆ ಹೇಳುತ್ತಾಳೆ. ಹಿಂದಿನ ಕಾಲದಲ್ಲಿ ಇಬ್ಬರೂ ಪದ್ಯರೂಪದಲ್ಲಿ ಅಥವಾ ಒಗಟಿನರೂಪದಲ್ಲಿ ಹೆಸರನ್ನು ಕೇಳುತ್ತಿದ್ದರು. ಉತ್ತರವನ್ನು ಅದೇಧಾಟಿಯಲ್ಲಿ ತಿಳಿಸುತ್ತಿದ್ದರು.

ಉದಾ: ಕೊಲ್ಲಾಪುರ ಮಹಾಲಕ್ಷ್ಮಿ ಬಾಗಿಲಿಗೆ ಇರುವುದು ಥರಥರದ ತೋರಣ, ನಾರಾಯಣರಾಯರ ಹೆಸರು ಹೇಳುವೆನು ಆರತಿಮಾಡಿದ ಕಾರಣ.

ಉದಾ: ಸೀತಾಸ್ವಯಂವರದಲ್ಲಿ ಶ್ರೀರಾಮ ಮುರಿದದ್ದು ಶಿವಧನುಸ್ಸು, ಕೃಷ್ಣರಾಯರ ಹೆಸರು ಹೇಳುವೆನು ಇತ್ತ ಇಡಿರಿ ನಿಮ್ಮ ಮನಸ್ಸು.

<baagiluthaDeyuvudu> Obstructing the entrance - When bride and bridegroom are sent inside the room, cause to stop both at the door, pressurize them to tell each other's name. Till they tell, girl will be standing before them. Somehow the bridegroom will tell the name of his wife. But for bride, she is shy. Then bending her head tells gently. In olden days both were telling names in a poem style or proverb. Answer was also told in the same way.

Eg: Kollhapura Mahalakshmi is at the door, varieties of flower garlands. Will tell you the name of Narayanarayaru since Arati is done.

Eg: During Seethaswayamvara, Srirama broke the Shivadhanus. Tell you the name Krishnaraya, turn your mind this side.

738. ಬಾಣಂತಿ: ಮಗುವನ್ನು ಹೆತ್ತು ನಾಲ್ಕಾರು ತಿಂಗಳವರೆಗೆ ಆರೈಕೆ ಮಾಡಿಸಿಕೊಳ್ಳುವ ಹೆಂಗಸನ್ನು **ಬಾಣಂತಿ** ಎನ್ನುತ್ತಾರೆ. **ಬಾಣಂತಿ**ಗೆ ಪ್ರತ್ಯೇಕವಾದ ಕೋಣೆ ಬಿಟ್ಟಿರುತ್ತಾರೆ. ಮನೆಯವರೇ ಬಂದರೂ ಸಲೀಸಾಗಿ ಬಾಣಂತಿಯ ಕೋಣೆಗೆ ನುಗ್ಗಿ ಹೋಗಲು ಬಿಡುವುದಿಲ್ಲ. ಬಾಣಂತಿಗೆ ಕೊಡುವ ಆಹಾರ, ಅವಳಿಗೆ ಎಣ್ಣೆ ನೀರು ಹಾಕುವುದು ಎಲ್ಲವನ್ನು ಹೆಚ್ಚಿನ ನಿಗಾ ಕೊಟ್ಟು ನೋಡಿಕೊಳ್ಳುವುದನ್ನು **ಬಾಣಂತನ** ಎಂದು ಹೇಳುವುದು ವಾಡಿಕೆ.

ಉದಾ: ಮಗಳು ಈಗ ಬಾಣಂತಿ ಆಗಿದ್ದಾಳೆ ಬಾಣಂತನಕ್ಕೆ ಇಲ್ಲಿಗೇ ಬರ್ತಾಳೆ.

<baaNaNthi> Woman after delivery - Delivering the baby, the woman getting care for four to six months is called Bananthi. For bananthi a separate room will have been kept. Even the household people will not be allowed to enter easily. To her giving oil bath, food, to take extra care is called Bananthana (Nursing the woman who has delivered baby).

Eg: Daughter is bananthi now. She is coming here only for bananthana.



739. ಬಾಣಲೆ: (ಗಡುಗು) ಅಕ್ಕಿ, ರಾಗಿ ಮುಂತಾದ ಧಾನ್ಯಗಳನ್ನು ಹುರಿಯುವುದಕ್ಕೆ, ಎಣ್ಣೆಯಲ್ಲಿ ಕರಿಯುವ ತಿಂಡಿಗಳನ್ನು ಮಾಡುವುದಕ್ಕೆ ಉಪಯೋಗಿಸುವ ಕಬ್ಬಿಣದ ಪಾತ್ರೆಗೆ **ಬಾಣಲೆ** ಎಂದು ಹೆಸರು. ಹುರಿಯೋಮನೆಗಳಲ್ಲಿ ಪುರಿ, ಅರಳು ಮುಂತಾದುವನ್ನು ಹುರಿಯುವುದಕ್ಕೆ ಸುಮಾರು ನಾಲ್ಕು ಅಡಿ ಅಗಲದ ದೊಡ್ಡ ಬಾಣಲೆಯನ್ನು ಮಣ್ಣಿನ ಒಲೆಗೆ ಸೇರಿಸಿ ಅಲ್ಲೇ ಬಿಟ್ಟಿರುತ್ತಾರೆ. ಆ ಒಲೆಯನ್ನು ತೆಗೆಯುವುದೇ ಇಲ್ಲ. ಚಿಕ್ಕ ಬಾಣಲೆಗಳನ್ನು ನಿತ್ಯ ಮನೆಗಳಲ್ಲಿ ಅಡಿಗೆಗೆ ಬಳಸುತ್ತಾರೆ.

ಉದಾ: ಬಾಣಲೆ ಕಾದಿದೆ, ಎಣ್ಣೆಹಾಕು.

<baaNale> Frying pan - For frying rice, ragi etc. for frying snacks in oil the iron vessel used is called Banale (Pan). For frying Puri, Corn etc. about four feet width big pan is attached to mud oven. That oven will not be taken out.

Eg: Pan is heated put oil

740. ಬಾದರಾಯಣಸಂಬಂಧ: ಯಾವುದೋ ದೂರದ ಸಂಬಂಧವನ್ನು ಹೇಳಿಕೊಂಡು ಸಹಾಯ ಕೇಳುವುದಕ್ಕೆ ಬಂದಾಗ ಆ ಸಂದರ್ಭವನ್ನು **ಬಾದರಾಯಣಸಂಬಂಧ** ಎಂದು ಹೇಳುತ್ತಾರೆ.

ಉದಾ: ಯಾವುದೋ ಬಾದರಾಯಣಸಂಬಂಧ ಹೇಳ್ಕಂಡು ಬಂದವ್ನೆ ಅವನು ಯಾರು ಅಂತಾನೆ ಗೊತ್ತಿಲ್ಲ.

ನೋಡಿ: ಗುಂಭದಮರ

<baadaraayaNasambandha> Distant relationship - Telling some distant relationship coming to ask for help, that circumstance they say badarayanasambandha.

Eg: He has come telling some distant relationship. I do not know who he is.

See: Gumbhadamara.



741. ಬಾನಿ: ಬಾನಿ ಎಂದರೆ ದನಕರುಗಳಿಗೆ ಬೇಕಾದ ಆಹಾರ ಪದಾರ್ಥಗಳನ್ನು ಇಡುವ ಮರದ ಪಾತ್ರೆ ಎಂದು ಕರೆಯಬಹುದು. ಇದು

8–10 ಅಡಿ ಉದ್ದವಿರುವ ಮರದ ಕಾಲುವೆ. ಹಲಸಿನ ಮರದಿಂದ ತಯಾರಿಸಿದುದು. ಎರಡು ಮೂರು ಅಡಿ ಎತ್ತರವಿರುವ ಮರದ ತುಂಡಿನ ಮಧ್ಯಭಾಗವನ್ನು ಕೊರೆದು ಮಾಡುತ್ತಾರೆ. ಸಾಮಾನ್ಯವಾಗಿ ಮನೆಗಳಲ್ಲಿ ಮಾಡಿದ ಅಡುಗೆ ಪದಾರ್ಥಗಳು, ಊಟವಾದ ನಂತರ ಮಿಕ್ಕಿದ ಅನ್ನ, ಸಾರು, ಹುಳಿ, ಪಲ್ಯ, ಅಕ್ಕಿತೊಳೆದ ನೀರು, ತರಕಾರಿ ಸಿಪ್ಪೆಗಳು ಎಲ್ಲವನ್ನೂ ಆ ಬಾನಿಯೊಳಕ್ಕೆ ಹಾಕುತ್ತಿದ್ದರು. ದನಕರುಗಳಿಗೆ ಅದೇ ಆಹಾರ. ಬಾನಿಯ ಎರಡು ಪಕ್ಕಗಳಲ್ಲಿ ದನಕರುಗಳನ್ನು ಕಟ್ಟುತ್ತಾರೆ. ಮಲಗಿರುವ ದನಕರುಗಳು ಅವಕ್ಕೆ ಬೇಕಾದಾಗ ಎದ್ದು ಆಹಾರವನ್ನು ತಿನ್ನುತ್ತವೆ. ಎತ್ತು, ದನಕರುಗಳನ್ನು **ರಾಸು** ಎಂದು ಕರೆಯುತ್ತಾರೆ.

ಉದಾ: ಈ ತರಕಾರಿ ಸಿಪ್ಪೆನೆಲ್ಲ ಬಾನಿ ಒಳಕ್ಕೆ ಹಾಕ್ಬಾ.

ನೋಡಿ: ಕೊಟ್ಟಿಗೆ

<baani> Wooden long vessel - Bani means, the wooden vessel (to keep food items required for cows) we may call. This is eight to ten feet length wooden vessel with wide mouth, made of jackfruit tree stem. They make two to three feet height wooden piece grilled in the center. Generally, they were putting any food items, rice left over after dinner, rasam, sambar, subji, rice washed water, vegetable skin everything. That is the food for cows. They tie cows on both sides of bani. Sleeping cows get up and eat whenever required. Ox and cows, they say Raasu.

Eg: Go and put all these vegetable skin into baani.

See: Cowshed

742. ಬಾಯಾರಿಕೆ: ನೀರು ಕುಡಿಯಬೇಕೆನ್ನುವ ದಾಹಕ್ಕೆ **ಬಾಯಾರಿಕೆ** ಎಂದು ಹೇಳುತ್ತಾರೆ. ಮಲೆನಾಡು ಪ್ರದೇಶಗಳಲ್ಲಿ ವಾಸಿಸುವ ಜನರ ಮನೆಗೆ ಯಾರಾದರು ಬಂದ ಕೂಡಲೆ ಏನಾದರೂ ಕುಡಿಯುವುದಕ್ಕೆ ಬಾಯಾರಿಕೆ ಕೊಡಲೆ ಎಂದು ಹೇಳಿ ತಕ್ಷಣ ಒಂದು ದೊಡ್ಡ ಲೋಟದಲ್ಲಿ ನೀರು ಜೊತೆಗೆ ಬೆಲ್ಲದ ಚೂರನ್ನು ಕೊಡುತ್ತಾರೆ. ಬಾಯಾರಿಕೆ ಪದಕ್ಕೆ ಬದಲು **ನೀರಡಿಕೆ** ಎಂಬ ಮಾತನ್ನು ಬಳಸುತ್ತಾರೆ.

ಉದಾ: ರಾಮಪ್ಪಯ್ಯ ಬಂದಿದ್ದಾರೆ ಕಮಲೂ ಕುಡಿಯೋದಕ್ಕೆ ಕೊಡು.

ನೋಡಿ: ನೀರಡಿಕೆ


<baayaarike> Thirsty - Thirst to drink water, they say bayarike. To the house of people in Malnad region, if anybody comes, immediately they say, shall we give to drink water or

juice, and bring a big cup of water with a piece of jaggery. Instead of Bayarike, they use the word Neeradike.

Eg: Ramappayya has come. Kamalu give him to drink.

See: Neeradike

743. ಬಾಯಿಕುಕ್ಕೆ: ಸಣ್ಣ ಕರುಗಳು ಏನೇನಾದರು ಮೇಯದಂತೆ ತಡೆಗಟ್ಟಲು ಅವುಗಳ ಬಾಯಿಗೆ ಕುಕ್ಕೆಯನ್ನು ಕಟ್ಟುತ್ತಾರೆ. **ಬಾಯಿಕುಕ್ಕೆ**ಯನ್ನು ತೆಳುವಾದ ತೆಂಗಿನ ಹುರಿ ಅಥವಾ ಬಿದಿರಿನಿಂದ ಮಾಡುತ್ತಾರೆ. ಹಸುವಿನ ಮೊಲೆಹಾಲನ್ನು ಕರುಗಳು ಕುಡಿಯುವಾಗ ಮಾತ್ರ ಬಾಯಿಕುಕ್ಕೆಯನ್ನು ಬಿಚ್ಚಿರುತ್ತಾರೆ.



ಉದಾ: ಕರು ಹೊರಕ್‌ಹೋಗ್ತಾ ಇದೆ, ಬಾಯಿಕುಕ್ಕೆ ಹಾಕು.

<baayikukke> Muzzle - Young calves to stop that they do not graze anything, tie a small basket to their mouth. Bayikukke is made of thin coconut fiber or bamboo. Only when they drink cowmilk they will have removed bayikukke.

Eg: Calf is going out. Put bayikukke.

744. ಬಾಯಿಹಾಕು: ತನಗೆ ಸಂಬಂಧವಿಲ್ಲದಿರುವ ಇತರರ ವಿಷಯದಲ್ಲಿ ಅಧಿಕ ಪ್ರಸಂಗಿಯಾಗಿ ಮಾತನಾಡುವುದನ್ನು **ಬಾಯಿಹಾಕು**ವುದು ಎನ್ನುತ್ತಾರೆ.


ಉದಾ: ನಿಮ್ಮನೆ ವಿಚಾರ ನೋಡಿಕೊ, ನಮಗೇನು ಬುದ್ಧಿ ಹೇಳೂಕೆ ಬಾಯಿಹಾಕ್ಕಂಡು ಬರಬ್ಯಾಡ.

<baayihaaku> (-) Interfering in other's matters not relevant to him, they say baayihakuvudu.

Eg: See your house matters. Do not come to advise us and interfere.

745. ಬಾರುಕೋಲು: ಸುಮಾರು ಒಂದು ಮೊಳ ಉದ್ದದ ತೆಳ್ಳಗಿರುವ ಬಿದಿರಿಗೆ ಹೊಸೆದ ಹುರಿಯನ್ನು ಕಟ್ಟಿ **ಬಾರುಕೋಲನ್ನು** ಮಾಡುತ್ತಾರೆ. ಎತ್ತುಗಳು ಗಾಡಿಯನ್ನು ಎಳೆಯದೆ ಮೊಂಡಾಟ ಮಾಡಿದಾಗ, ಗಾಡಿ ಹೊಡೆಯುವವನು ಬಾರುಕೋಲಿನಿಂದ ಎತ್ತುಗಳ ಬೆನ್ನಿನ ಮೇಲೆ ಮೆತ್ತಗೆ ಹೊಡೆಯುತ್ತಾನೆ. ಆಗ ಎತ್ತುಗಳು ಚುರುಕಾಗಿ ಮುಂದೆ ಹೋಗುತ್ತವೆ. ಒಂದು ಎತ್ತಿಗೆ ಬಾರಿಸಿದಾಗ ಇನ್ನೊಂದು ಎತು ಅದರಷ್ಟಕ್ಕದೇ

ಚುರುಕಾಗುತ್ತೆ.



ಉದಾ: ಎತ್ತು ಗಾಡಿ ಎಳೀತಾ ಇಲ್ಲ ಮೆತ್ತಗೆ ಬಾರುಕೋಲಿಂದ ಬಾರಿಸು.

<baarukolu> Whip - About one and half foot length thin bamboo tied with twisted rope make barukolu. Without pulling the cart if oxen stop stubbornly the cartman beats with whip gently on back of oxen. Then oxen spiritedly move on. If one ox is beaten the other will get spirit on its own.

Eg: Ox is not pulling the cart, gently beat with whip.



746. ಬಾಸಿಂಗ: ಮದುವೆಯ ಗಂಡು ಹೆಣ್ಣಿಗೆ ಹಣೆಯ ಮೇಲೆ ಕಟ್ಟುವ ಅಲಂಕಾರ. **ಬಾಸಿಂಗ**ವನ್ನು ಬೆಂಡಿನಿಂದ ಮಾಡಿ ಕೆಂಪು ಹಸಿರು ಬಣ್ಣವನ್ನು ಹಚ್ಚುತ್ತಾರೆ. ಮದುವೆ ಕಾರ್ಯಕಲಾಪಗಳು ಮುಗಿಯುವವರೆಗೂ ಬಾಸಿಂಗ ವಧೂವರರ ತಲೆಯ ಮೇಲಿರುತ್ತೆ. ಕಂಕಣ ವಿಸರ್ಜನೆಯಾದ ಮೇಲೆ ಬಾಸಿಂಗವನ್ನು ಯಾವುದಾದರೂ ಮರಕ್ಕೆ ಕಟ್ಟಿ ಬರುತ್ತಾರೆ. ಎತ್ತು, ದನಗಳ ಕೋಡುಗಳಿಗೆ ಕಟ್ಟುವ ಕುಚ್ಚನ್ನು ಬಾಸಿಂಗವೆಂದೇ ಕರೆಯುವುದು ವಾಡಿಕೆ. ಇದನ್ನು ತೆಳುವಾದ ಬಣ್ಣದ ದಾರದಿಂದ ದಪ್ಪನಾದ ಕುಚ್ಚಿನಂತೆ ಹೆಣೆಯುತ್ತಾರೆ.


ಊರಿಂದೂರಿಗೆ ಗಾಡಿಯಲ್ಲಿ ಪ್ರಯಾಣ ಮಾಡುವಾಗ ಎತ್ತುಗಳ ಕೋಡುಗಳಿಗೆ ಬಾಸಿಂಗವನ್ನು, ಕೊರಳಿಗೆ ಚಿಕ್ಕ ಗಂಟೆಗಳ ಸರವನ್ನು ಹಾಕಿ ಅಲಂಕಾರಮಾಡುವುದು ವಾಡಿಕೆ.

ಉದಾ: ಕಂಕಣವಿಸರ್ಜನೆ ಆಯಿತು ಇನ್ಮೇಲೆ ಬಾಸಿಂಗಬಿಚ್ಚಿ ಯಾವುದಾದರೂ ಮರಕ್ಕೆ ಕಟ್ಟಿಬನ್ನಿ.

<baasinga> (-) Decorated ornament made of corky wood - For marriage boy and girl to be tied on forehead as decoration ornament. Making basinga with white light corky wood, smear red green color. Till the completion of all marriage rituals, basinga will be on bride and bridegroom's head. After taking out Kankana, they go and tie the basinga to any tree. Garland tied to horns of ox and cow; it is common to say basinga. This one is

woven with thin color thread like thick bunch. While travelling from place to place, it is customary to decorate with basinga for horns of oxen and garland of small jingling bells to neck.

Eg: String removal is over. Take out basinga go and tie to any tree and come back.



747. ಬಾಳಕ: ಸ್ವಲ್ಪ ದಪ್ಪವಾಗಿರುವ ಹಸಿ ಮೆಣಸಿನಕಾಯಿಗಳನ್ನು ಸೀಳಿ ಅದಕ್ಕೆ ಉಪ್ಪು ತುಂಬಿ ಮೊಸರಿನಲ್ಲಿ ನೆನೆಸುತ್ತಾರೆ. ಅನಂತರ ಅವುಗಳನ್ನು ಬಿಸಿಲಿನಲ್ಲಿ ಒಣಗಿಸುತ್ತಾರೆ. ಅದಕ್ಕೆ **ಬಾಳಕ** ಎಂದು ಹೆಸರು. ಬಾಳಕವನ್ನು ಎಣ್ಣೆಯಲ್ಲಿ ಕರಿದು ಮೊಸರನ್ನ ಅಥವಾ ಮಜ್ಜಿಗೆಹುಳಿ ಅನ್ನದ ಜೊತೆಗೆ ನಂಚಿಕೊಂಡರೆ ಬಹಳ ರುಚಿಯಾಗಿರುತ್ತೆ.

ಉದಾ: ಬಿಸಿಲು ಚೆನ್ನಾಗಿದೆ, ಸ್ವಲ್ಪ ಬಾಳಕ ಮಾಡಿಡಿ.

<baaLaka> (-) Thick green chilly - A little thick green chilly is split, filled with salt, and soaked in curds. Then it is dried in the sun. It is called balaka (a kind of condiment). If balaka fried in oil and eat with curd rice or curd sambar rice, it will be tasty.

Eg: Sunshine is nice. Do some baalaka and keep.



748. ಬಾಳೆಎಲೆಊಟ: ಪ್ರತಿನಿತ್ಯ ಮುತ್ತುಗದ ಎಲೆ, ತಟ್ಟೆ ಮೊದಲಾದುವನ್ನು ಊಟಕ್ಕೆ ಬಳಸಿದರೆ, ಅಗಲವಾದ ಬಾಳೇ ಎಲೆಯನ್ನು ವಿಶೇಷ ಊಟಕ್ಕೆ ಬಳಸುತ್ತಾರೆ. ಸಾಮಾನ್ಯವಾಗಿ ಹಬ್ಬಗಳಲ್ಲಿ ಹಬ್ಬದೂಟಕ್ಕೆ, ತಿಥಿಗಳಲ್ಲಿ ತಿಥಿಯೂಟಕ್ಕೆ ಬಳಸುತ್ತಾರೆ. **ಬಾಳೆಎಲೆ ಊಟ** ಎಂದರೆ ಪಂಚಭಕ್ಷ್ಯ ಪರಮಾನ್ನಗಳಿರುವ ಹಬ್ಬದೂಟ ಎಂದೇ ಅರ್ಥ. ಅತಿಥಿಗಳು ಬಂದರೆ, ಗಣ್ಯರು ಬಂದರೆ ಬಾಳೆಎಲೆಯಲ್ಲಿ ಊಟಹಾಕುತ್ತಾರೆ. ಸಾಮಾನ್ಯವಾಗಿ ಎಲ್ಲರಮನೆ ಹಿತ್ತಲಲ್ಲಿ ಬಾಳೆಗಿಡ ಬೆಳೆಸುತ್ತಾರೆ. ಹಾಗಾಗಿ ಬಾಳೆಎಲೆ ಸುಲಭವಾಗಿ ಸಿಗುತ್ತದೆ. ಬಾಳೆಎಲೆಯನ್ನು ಊಟಕ್ಕೆ ಹಾಕುವಾಗ ಅದರ ಅಗ್ರ (ತುದಿ) ಎಡಕ್ಕೆ ಬರುವಂತೆ ಊಟಕ್ಕೆ ಹಾಸುತ್ತಾರೆ. ಸಂಪ್ರದಾಯ ಗೊತ್ತಿಲ್ಲದವರು ಬಲಕ್ಕೆ ತುದಿ ಬರುವಂತೆ ಹಾಸಿದ್ದರೆ, ಅದನ್ನು ತಿಳಿದವರು ಎಡಕ್ಕೆ ತಿರುಗಿಸುತ್ತಾರೆ. ಬಾಳೆಎಲೆಯಲ್ಲಿ ಊಟಕ್ಕೆ ಬಡಿಸುವಾಗ ಕ್ರಮವಿದೆ. ಉಪ್ಪು, ಪಲ್ಯ, ಗೊಜ್ಜು, ಚಿತ್ರಾನ್ನ, ತೊವ್ವೆ, ತುಪ್ಪ,

ಇತ್ಯಾದಿ ಎಲೆಯಲ್ಲಿ ಯಾವಾಗ ಯಾವಾಗ ಎಲ್ಲೆಲ್ಲಿ ಎಲೆಯಲ್ಲಿ ಬಡಿಸಬೇಕು ಎಂಬುದಕ್ಕೆ ಒಂದು ಸಂಪ್ರದಾಯವಿದೆ. ಸ್ಮಾರ್ತ, ಮಾಧ್ವ, ವೈಷ್ಣವ ಸಂಪ್ರದಾಯಗಳಲ್ಲಿ ಸ್ವಲ್ಪಸ್ವಲ್ಪ ವ್ಯತ್ಯಾಸಗಳು ಬಡಿಸುವ ಕ್ರಮದಲ್ಲಿ, ಸಿದ್ಧಪಡಿಸುವ ಭಕ್ಷ್ಯಗಳಲ್ಲಿ ಕಾಣುತ್ತವೆ.

<baaLeeleooTa> Lunch on plantain leaf - If flem leaf, plate etc. are used for everyday lunch, wide plantain leaf is used for special lunch. Generally, for lunch during festivals and for lunch during ceremonies. Baleeleoota means food with sweets only. If guests come, VIPs come, they served food in plantain leaf. Generally, in everybody's back yard, grows plantain tree. So, plantain leaf is available easily. When plantain leaf is put for lunch, they put in such a way that tip point to be at left. Those who do not know the traditional custom, if they have put on right side, those who know the custom will turn to left side. while serving food on plantain leaf, there is a system. Salt, subji, gojju, lemon rice, thovve, ghee etc. On leaf which place to be put, there is a method. Some differences are seen in serving sweets among Smarthas, Madhvas and Vaishnavas.

749. ಬಾಳೆಕಾಯಿ: ಬಾಳೆಕಾಯಿ ಗೊನೆಗೊನೆಯಾಗಿ ಬೆಳೆಯುತ್ತದೆ. ಒಂದೊಂದು ಗೊನೆಯಲ್ಲೂ 10–12 ಚಿಪ್ಪುಗಳಿರುತ್ತವೆ. ಚಿಪ್ಪಿನಲ್ಲಿ ಸಾಮಾನ್ಯವಾಗಿ 12 ಬಾಳೆಕಾಯಿ. ಮಾರಾಟ ಮಾಡುವವರು ಗೊನೆಗಳನ್ನೇ ಮಾರುತ್ತಾರೆ.



ಉದಾ: ನಾಲ್ಕು ಗೊನೆಗಳನ್ನೂ ಚಿಪ್ಪು ಬಿಡಿಸಿ ಗುಡಾಣದಲ್ಲಿ ಒತ್ತೆಹಾಕು.

ಹೆಂಗಸರು ಸೀರೆ ಉಡುವಾಗ ನೆರಿಗೆ ಜಾರದಂತೆ ಸೊಂಟದ ಬಳಿ ಮಡಸಿ ಸಿಗಿಸಿದ ಬಾಳೆಕಾಯಿ ಆಕಾರದ ನೆರಿಗೆಯ ದಿಂಡನ್ನು ಬಾಳೆಕಾಯಿ ಎಂದು ಕರೆಯುತ್ತಾರೆ.

ಉದಾ: ಆದುಷ್ಟ ಬಾಳೆಕಾಯಿಗೆ ಕೈಹಾಕಲು ಬಂದ ಎಂದು ಗೌರಿ ಅತ್ತಳು.

ನೋಡಿ: ಬಾಳೆಹಣ್ಣು, ಗುಡಾಣ

<baalekaayi> Raw banana - Plantain grows in bunches. In each bunch there will be ten to twelve small bunches.

Generally, in one small bunch twelve plantain fruits. Sellers sell the whole bunches.

Eg: Separate all small bunches and put in big pot.

See: Plantain fruit, Big pot.

When women in olden days were wearing saree, she has to fix it in the naval area, she rotates the saree at that point, this fix looks like a banana.

Eg: Gouri was crying and told, that bad guy tried to snatch the saree fix - baalekaayi.



750. ಬಾಳೆಹಣ್ಣು: ಬಾಳೆಕಾಯಿಯನ್ನು ಚಿಪ್ಪುಚಿಪ್ಪಾಗೆ ಕೊಯಿದು ಗುಡಾಣದಲ್ಲಿಟ್ಟು ಹಣ್ಣು ಮಾಡುತ್ತಾರೆ. ಹಸುರು ಬಣ್ಣವಾಗಿದ್ದ ಬಾಳೆಕಾಯಿ ಹಣ್ಣಾದಾಗ ಹಳದಿಬಣ್ಣಕ್ಕೆ ತಿರುಗುತ್ತೆ. ತಿನ್ನುವಾಗ ಒಂದೊಂದೇ ಹಣ್ಣನ್ನು ಬಿಡಿಸಿ ತಿಂದರೂ, ದೇವರ ನೈವೇದ್ಯಕ್ಕೆ ಇಡುವಾಗ ಎರಡು ಅಥವಾ ನಾಲ್ಕುಹಣ್ಣನ್ನು ಒಟ್ಟಿಗೆ ಇಡುತ್ತಾರೆ.

ಉದಾ: ನಾಲ್ಕು ಬಾಳೆಹಣ್ಣನ್ನು ವೀಳ್ಳೇದೆಲೆ, ಅಡಿಕೆ ಜತೆಯಲ್ಲಿ ಆ ತಟ್ಟೇಲಿ ಇಟ್ಟುಕೊಡು.

ನೋಡಿ: ಹಣ್ಣುಮಾಡುವುದು, ಗುಡಾಣ

<baaLehaNNu> Ripe banana - Raw banana is cut in small bunches and kept in big pot to ripe. The green raw banana turns yellow when it ripened. Though while eating one by one fruit, for offering to God they keep two or four.

Eg: Give putting four plantain fruits, betel leaf, arecanut in that plate.

See: Hannumaduvudu (Ripening), Gudana (Big pot).

751. ಬಾಳೆಪಟ್ಟೆ: ಬಾಳೆಗಿಡದ ಕಾಂಡದ ಮೇಲಿರುವ ಪಟ್ಟೆಯನ್ನು ಸೀಳಿ ಒಂದು ಮೊಳದಷ್ಟು ಉದ್ದದ ಚೂರನ್ನು ಮಡಿಸಿ ಅದರ ಒಳಗೆ ಸಂಪಿಗೆ, ಮಲ್ಲಿಗೆ ಮುಂತಾದ ಬಿಡಿ ಹೂವುಗಳು ಮತ್ತು ವೀಳ್ಯದೆಲೆಗಳನ್ನು ಇಟ್ಟು ಮಾರುತ್ತಾರೆ. ಬಾಳೆನಾರಿನಿಂದ ಬಿಡಿಹೂವುಗಳನ್ನು ಮಾಲೆಯಾಗಿ ಕಟ್ಟಲು ಉಪಯೋಗಿಸುತ್ತಾರೆ. ಬಾಳೆನಾರು ಮತ್ತು

ಕತ್ತಾಳೆನಾರನ್ನು ವಿದ್ಯುಚ್ಛಕ್ತಿಯ ಉಪಕರಣಗಳಿಗೆ ಬಳಸಲು ಕರ್ನಾಟಕ ಸರ್ಕಾರ ಒಂದು ಉದ್ಯಮವನ್ನು ಕಲ್ಪಿಸಿಕೊಟ್ಟಿದೆ. ಆ ಯಂತ್ರದ ಸಹಾಯದಿಂದ ನಾರನ್ನು ತೆಳ್ಳಗೆ ಸೀಳಿ ಒಣಗಿಸಿದರೆ ಸರ್ಕಾರದ ಇಲಾಖೆಯವರು ಬಂದು ಹಣ ಕೊಟ್ಟು ತೆಗೆದುಕೊಂಡು ಹೋಗುತ್ತಾರೆ.

ಉದಾ: ಬಾಳೇಪಟ್ಟೆಯಲ್ಲಿ ಹೂವಿಟ್ಟರೆ ಬಾಡೋಲ್ಲ.

<baaLepaTTe> (-) Skin of plantain stem - Splitting the outer skin of plantain tree stem to a length of one-and-half foot, folding in between, put Sampige (a kind of yellow color flower), Jasmine etc. single flowers and betel leaves, they sell. With fiber of plantain skin, they use to make garlands. To use plantain fiber and Kathhale fiber for electrical equipment, Karnataka State Government has provided an industry. With the help of that machine if fiber is split thinly and dried, the concerned officers of Government will come, paying the amount and take it.

Eg: If flower is kept in balepatte, it will not dry.

752. ಬಾಳೆಕಂಬ: ಬಾಳೆಗಿಡವನ್ನು ನೆಲ ಮಟ್ಟಕ್ಕೆ ಕಡಿದು ಗೊನೆ ಇರುವ ಹಾಗೆಯೆ ತಂದು, ಮದುವೆ ಮುಂತಾದ ಶುಭಸಮಾರಂಭಗಳಲ್ಲಿ ಮನೆ ಮುಂದೆ ಚಪ್ಪರ ಹಾಕುವಾಗ ಕಂಬದಂತೆ ನಾಲ್ಕು ಕಡೆ ನೆಡುತ್ತಾರೆ.

ಉದಾ: ನಾಳೆ ಮದುವೆ, ಚಪ್ಪರ ಹಾಕಬೇಕು. ನಾಲ್ಕು ಬಾಳೆ ಕಂದು ಕಡಿದು ತಾ.

<baaLekamba> (-) During festivals and marriage functions it is a tradition to build a temporary Pendal. To decorate this pendal the Plaintain tree is cut at the ground level with its fruit branch and it is fixed at the four corners.

Eg: Tomorrow is marriage. Have to put a Pendal, bring four Baalekamba.

753. ಬಾಳೆಕಂದು: ಬಾಳೆಕಂದನ್ನು ಮಂಟಪದ ಕಂಬಗಳಿಗೆ ಸೇರಿಸಿ ಕಟ್ಟುತ್ತಾರೆ. ಗಣೇಶ ಮೊದಲಾದ ಹಬ್ಬಗಳಲ್ಲಿ ದೇವರ ಮಂಟಪಗಳಿಗೆ **ಬಾಳೆಕಂದು** ಕಟ್ಟುತ್ತಾರೆ. ಮದುವೆ ಮುಂಜಿ ಸಮಾರಂಭಗಳಲ್ಲಿ ಮತ್ತು ಹಳ್ಳಿಯ ಸಾಮೂಹಿಕ ಸಮಾರಂಭಗಳಲ್ಲಿ ಎಲ್ಲೆಲ್ಲಿಯು (ಬಲಿತ) ಬಾಳೆಕಂಬಗಳನ್ನು ಕಟ್ಟುತ್ತಾರೆ.



ಉದಾ: ನಾಳೆಯಿಂದ ರಾವೋತ್ಸವ ಶುರುವಾಗುತ್ತೆ, ನಾಲ್ಕು ಬಾಳೇಕಂದು ತತ್ತಾ ಚಪ್ಪರಕ್ಕೆ.

<baaLekandu> (-) The stem of plantain, they tie to the poles of pandal. During Ganesha etc. festivals they tie balekandu to God's pandal. During marriage, Thread ceremony and any public functions of the village, balekandu (plantain stem) is seen everywhere.

Eg: Ramotsava begins from tomorrow. Bring four balekandu for pandal.

754. ಬಾಳೆಗಿಡ: ಬಾಳೆಗಿಡವನ್ನು ತೋಟದಲ್ಲಿ ಬೆಳೆಯುತ್ತಾರೆ. ಮನೆಗಳಲ್ಲಿ ಹಿತ್ತಲಲ್ಲಿ ಬೆಳೆಯುತ್ತಾರೆ. ಊಟಕ್ಕೆ, ಚಪ್ಪರಕ್ಕೆ ಬಾಳೆಕಾಯಿ, ಬಾಳೆಕಂಬ ಬಳಕೆಯಾದರೆ, ಬಾಳೆಕಂಬದ ಒಳಗಡೆ ದಿಂಡನ್ನು ಆಹಾರವಾಗಿ ಬಳಸುತ್ತಾರೆ. ದಿಂಡಿನ ಕೋಸುಂಬರಿ ತಿನ್ನುವುದಕ್ಕೆ ಬಹಳ ರುಚಿ.

ಉದಾ: ಕಾಲುವೇಗೆ ನೀರುಬಿಟ್ಟಿದಾರೆ, ಬಾಳೆಗಿಡಗಳಿಗೆ ನೀರುಹಾಯಿಸು.

<baaLegiDa> (-) Plantain tree they grow in gardens and houses in back yard. For food, plantain stem (dindu) are used; the tender portion inside the stem is used as food. Kosumbari made of Dindu (the inner tender portion) is tasty to eat.

Eg: They have flowed water to canal. Divert water to plantain trees.

755. ಬಾಳೆನಾರು: ನೋಡಿ: ನಾರು

<baaLenaaru> See: Naaru (plantain fiber)

756. ಬ್ರಾಹ್ಮಣಾರ್ಥ: ಸತ್ತವರ ತಿಥಿ ಮಾಡುವ ದಿನ ಇಬ್ಬರು ಅಥವಾ ಮೂವರು ಬ್ರಾಹ್ಮಣರಿಗೆ ಶಾಸ್ತ್ರೋಕ್ತವಾಗಿ ಊಟ ನೀಡುವುದಕ್ಕೆ **ಬ್ರಾಹ್ಮಣಾರ್ಥ** ಎಂದು ಹೇಳುತ್ತಾರೆ. ಬ್ರಾಹ್ಮಣರ ಊಟವಾದಮೇಲೆ ಮನೆಯವರು ಊಟಮಾಡಬೇಕು. ಬ್ರಾಹ್ಮಣಾರ್ಥಕ್ಕೆ ಒಪ್ಪಿಕೊಳ್ಳುವವರು ಬಹಳ ನಿಷ್ಠೆಯಿಂದಿರಬೇಕು. ಬ್ರಾಹ್ಮಣಾರ್ಥದ ಊಟಕ್ಕೆ ಮೊದಲು ಯಾವ ಆಹಾರವನ್ನು ತೆಗೆದುಕೊಂಡಿರಬಾರದು. ಮಂತ್ರಗಳನ್ನು ಹೇಳಲು ಕಲಿತಿರಬೇಕು.

ಉದಾ: ಮುಂದಿನ ಶನಿವಾರ ಅಮ್ಮನ ತಿಥಿ ಬರುತ್ತೆ, ಈಗಲೇ ಇಬ್ಬರು

ಬ್ರಾಹ್ಮಣರಿಗೆ ತಿಳಿಸಿರಬೇಕು.

<braahmaNaartha> Brahmin who comes for lunch on death ceremeny - On the day of performing the ceremony of the deceased, to offer food ritualistically to two or three brahmins, they call Brahmanartha. (Ritual of Shraddha and initial offering of food). After the brahmins take food, the household people must eat. The one who accepts for brahmanartha, must have faith in religious customs. He should not have eaten anything before food of brahmanartha.

Eg: Next Saturday mother's ceremony. Must made known to two brahmins now itself.

757. ಬ್ರಾಹ್ಮಣರ ಬೈಗುಳ: ಬ್ರಾಹ್ಮಣವರ್ಗದವರಲ್ಲಿ ಹೆಚ್ಚಾಗಿ **ಬೈಗುಳಶಬ್ದಗಳು** ಇರಲಿಲ್ಲ. ಥೂ ನಿಮ್ಮನೆ ಹಾಳಾಗ, ನಿಮ್ಮ ವಂಶ ಹಾಳಾಗ ಅಂದರೆ ಅದು ದೊಡ್ಡ ಬೈಗುಳ. ತಲೆ ಹರಟೆ ಮಾತಾಡುವವನನ್ನು ಅಧಿಕ ಪ್ರಸಂಗಿ ಎನ್ನುತ್ತಿದ್ದರು. ಹಾಳಾದವನೆ, ನನ್ನ ಪ್ರಾರಬ್ಧವೇ, ಬೋಳೀಮಗನೆ, ಸೂಳೇಮಗನೆ, ಕತ್ತೆನನ್ಮಗನೆ, ಕತ್ತೇಮುಂಡೇದೆ, ಶನಿಮುಂಡೇದೆ, ಬೇಕೂಫಾ, ಮೂರ್ಖ, ಮುಠ್ಠಾಳ, ಅಯೋಗ್ಯ ಅನ್ನುವುದೂ ಇತ್ತು. ಅದರ ಅರ್ಥವನ್ನೇ ತಿಳಿಯದೆ ಕೋಪದ ಸೂಚಕವಾಗಿ ಆ ಪದಗಳನ್ನು ಬಳಸುವುದು ರೂಢಿಯಾಗಿತ್ತು.

ಮಗ ಎದುರು ಮಾತಾಡುತ್ತಿದ್ದರೆ ರಾಕ್ಷಸ, ಪಾಪಿ, ಚಂಡಾಲದ್ರೋಹಿ, ಅಯೋಗ್ಯ, ಮೂರ್ಖ, ಮುಠ್ಠಾಳ, ಮೊದಲಾದ ಬೈಗುಳನ್ನು ಬೈಯುತ್ತಾರೆ. ಎಲ್ಲೋ ಅನಿಷ್ಟಮುಂಡೇದು, ಏತಿ ಅಂದರೆ ಪ್ರೇತಿ ಅನ್ನುತ್ತೆ ಎಂದು ಹೇಳುತ್ತಾರೆ. ಗಂಡುಮಕ್ಕಳನ್ನು ಬೈದಷ್ಟು ಹೆಣ್ಣುಮಕ್ಕಳನ್ನು ಬೈಯುವುದಿಲ್ಲ. ಆದರೆ ಗಂಡಸರಿಗಿಂತ ಹೆಂಗಸರು ಬೈದಾಡುವುದು ಜಾಸ್ತಿ!

ಉದಾ: ನನ್ನ ಪ್ರಾರಬ್ಧ, ಅನಿಷ್ಟಮುಂಡೇದು ಹುಟ್ಟಿ ಗೋಳಾಡಿಸುತ್ತಿದೆ.

ನೋಡಿ: ಸೂಳೇಮಗ, ಕತ್ತೇಮಗ, ಕತ್ತೆಮುಂಡೆ, ಮೂರ್ಖ, ಮುಠ್ಠಾಳ, ಪ್ರಾರಬ್ಧ, ಬೇಕೂಫಾ, ನಾಯಿಮುಂಡೇದೆ, ಅಯೋಗ್ಯ, ದಂಡಪಿಂಡ.

<braahmaNarabaigula> (-) Abusing in Brahmin community - Among brahmin community, there were no abusing words that much. Thoo nimmane haalaaga (let your house be ruined), nimma vamsha halaga (Let your family be ruined) means it is big abuse. Person talking impertinently as

adhikaprasangi (arrogant man). Haladavane (go to ruin), Nanna prarabdhave (What sin I have done in previous life), Bolimagane, Soolemagane, Kathhenanmagane, Kathhemundede, Shanimundede, Bekoofa (idiot), Moorkha (Stupid person), Mutthala, Ayogya (Useless person) were also in usage. Without knowing the meaning of those words to indicate their anger, were common to use those words.

If son is talking face to face, rakshasa (demon), Papi, Chandaladrohi, Ayogya, Moorkha, Mutthala etc. they were abusing. Ello anishtamundedu, Ethi andare preti annuthhe. Abusing that much to sons, do not abuse daughters. But more than men, abusing by women is more!

Eg: It is my Karma, Born anishtamunde.

See: Soolemaga, Kathhemaga, Kathhemunde, Moorkha, Mut

758. ಬ್ರಾಹ್ಮಣೇತರ ಬೈಗುಳಶಬ್ದಗಳು: ಇತರೆ ಜನಗಳಲ್ಲಿ ನಿನ್ಮನೆ ಎಕ್ಕಹುಟ್ಟೋಗ, ತದಿಕಿಬಿಡ್ತೀನಿ, ಕೊಂದುಬಿಡ್ತೀನಿ, ಕತ್ತು ಹಿಸುಕಿಬಿಡ್ತೀನಿ ಅನ್ನೋರು. ಅವನೊಬ್ಬ ಚಾಂಡಾಲಸೂಳೇಮಗ, ಹಗಲು ಹೊತ್ತಿನಲ್ಲಿ ಅವನ್ನ ನೆನೆಸ ಬಾರದು. ಅವನು ಅವನ ಅಪ್ಪನಿಗೆ ಹುಟ್ಟಿದ್ದರೆ ಎದುರಿಗೆ ಬಂದು ಮಾತಾಡಲಿ. ಶಂಕ್ರಪ್ಪನ ಇಬ್ಬರು ಮಕ್ಕಳೂ ಅಪಾಪೋಲಿಗಳು, ಅವರ ವಂಶಕ್ಕೆ ಧೂಮಕೇತುಗಳಿದ್ಹಾಗೆ. ಹೀಗೆ ನಾನಾ ಬಗೆಯಲ್ಲಿ ಬೈಗುಳಗಳಿವೆ. ನಿನ್ನಕ್ಕನ್, ನಿನ್ನಮ್ಮನ್ ಇತ್ಯಾದಿ ಅತಿ ಅವಾಚ್ಯ ಶಬ್ದಗಳ ಪ್ರಯೋಗಗಳೂ ಇವೆ. ರಾಮಾಯಣ, ಭಾರತ ಮೊದಲಾದ ಗ್ರಂಥಗಳಲ್ಲಿ ಬರುವ ದುಷ್ಟವ್ಯಕ್ತಿಗಳ ಹೆಸರುಗಳನ್ನು ಬೈಯಲು ಬಳಸುತ್ತಾರೆ. ಕೀಚಕ, ರಾವಣ, ಶಕುನಿ ಇತ್ಯಾದಿ.

ಉದಾ: ಆ ಮುದುಕಿ ನಿನ್ಮನೆ ಎಕ್ಕಹುಟ್ಟೋಗ ಎಂದು ಬೈದಳು. ಅವನೊಬ್ಬ ಕೀಚಕ, ಇವನೋ ಕಲಿಯುಗದ ಶಕುನಿ. ಅವನು ಶಕುನಿ ಇದ್ದಹಾಗೆ, ಹುಷಾರಾಗಿರು.

<brahmaNethara baiguLashabdagaLu> Vulgar words used by others - In other caste people, Nimmane ekkahuttoga (let your house be ruined), Thadikibidtheeni (Will smash you), Kondubidtheeni (Kill you), Kathhu hisakibidtheeni (Will twist your neck) they were telling. He is

chandalasoolemaga, should not think about him during daytime. If he has born to his father let him come and talk in front. Shankrappa's both the children are Apapoli (Person fully gone astray). Like comet for their family, like this so many types of abuses. Ninnakka, Ninnamman etc. more vulgar words usage is also there. To abuse they use the names of bad characters coming across in Ramayan and Mahabharat, Keechaka, Ravana, Shakuni etc.

Eg: That old woman abused as Ninmane ekkahuttoga.

Eg: He is a Keechaka. This man like Shakuni of Kaliyug.

Eg: He is like Shakuni, be careful.



759. ಬಿಂದಿಗೆ: ಬಾವಿಯಿಂದ ನೀರನ್ನು ಮೇಲಕ್ಕೆತ್ತಲು ಉಪಯೋಗಿಸುವ ಪಾತ್ರೆಗೆ **ಬಿಂದಿಗೆ** ಎಂದು ಹೆಸರು. ಇದನ್ನು **ಕೊಡ** (ಬಾನಿ) ಎಂದೂ ಹೇಳುತ್ತಾರೆ. ಬಿಂದಿಗೆಯನ್ನು ತಾಮ್ರ ಅಥವಾ ಹಿತ್ತಾಳೆಯ ಲೋಹದಿಂದ ಮಾಡುತ್ತಾರೆ.

ಉದಾ: ಹಂಡೇಲಿ ನೀರಿಲ್ಲ, ನಾಲ್ಕು ಬಿಂದಿಗೆ ನೀರು ಸೇದಿಹಾಕು ಸ್ನಾನಕ್ಕೆ.

ನೋಡಿ: ಕೊಡ

<bindige> Round water vessel - The vessel to lift water from Well is called bindige. This is also called as Koda. Bindige is made of copper or brass metal.

Eg: No water in hande (vessel to heat water). Lift four bindiges water for bathing.

760. ಬಿಚ್ಚೋಲೆ: ತಾಳೆಗರಿಯನ್ನು ಸುರುಳಿಯಾಗಿ ಸುತ್ತಿ ಅದಕ್ಕೆ ಸಣ್ಣ ಕರೀಬಣ್ಣದ ಗಾಜಿನ ಬಳೆಯನ್ನು ತೊಡಿಸಿರುವುದಕ್ಕೆ **ಬಿಚ್ಚೋಲೆ** ಎಂದು ಹೆಸರು. ಗೌರಿಹಬ್ಬದ ದಿನ ಹೆಂಗಸರು ಬಿಚ್ಚೋಲೆಯನ್ನು ಅರಿಶಿನ, ಕುಂಕುಮ ಸಮೇತ ಗೌರಿದೇವಿಗೆ ಏರಿಸುತ್ತಾರೆ. ಯಾವ ಚಿನ್ನದ ಒಡವೆಗಳನ್ನೂ ಇಟ್ಟುಕೊಳ್ಳದೆ ಇರುವ ಹೆಂಗಸನ್ನು ಬಿಚ್ಚೋಲೆ ಗೌರಮ್ಮ ಎಂದು ಹಾಸ್ಯಮಾಡುತ್ತಾರೆ. ಬೆಟ್ಟಗುಡ್ಡಗಳಲ್ಲಿ ವಾಸಮಾಡುವ ಕೆಲವು ನಿವಾಸಿಗಳು ಬಿಚ್ಚೋಲೆಯನ್ನು ಕಿವಿಗೆ ಆಭರಣದಂತೆ ಧರಿಸುತ್ತಾರೆ.

ಉದಾ: ಬಿಚ್ಚೋಲೆಗೌರಮ್ಮನ ಹತ್ತಿರ ಚಿನ್ನದಸರ ಎಲ್ಲಿರುತ್ತೆ ್ಯ ಹೇಳೆ.

<bichhole> (-) Rolling round palm leaf, attaching small black color bangle, is called Bichhole. On Gowri festival day, women put bichhole with turmeric powder, kunkum on Gowri. A woman who is not having any gold ornament, they say as bichhole gowramma as fun. The tribal people living in hills, wear bichhole as an ear ornament.

761. ಬಿಡಿಗಾಸು: ನೋಡಿ: ಪುಡಿಗಾಸು

<biDikaasu> See: Pudigasu.



762. ಬಿಡಿಯೆಲೆ: ಊಟ ಮಾಡುವುದಕ್ಕೆ ಮುತ್ತುಗ ಅಥವಾ ಆಲದ ಎಲೆಗಳನ್ನು ಒಂದಕ್ಕೊಂದನ್ನು ಸೇರಿಸಿ ಹಂಚಿಕಡ್ಡಿಯಿಂದ ಹಚ್ಚುತ್ತಾರೆ. ಹೊಚ್ಚದೆ ಬಿಡಿಬಿಡಿಯಾಗಿದ್ದರೆ ಅದನ್ನು **ಬಿಡಿಯೆಲೆ** ಎಂದು ಹೇಳುತ್ತಾರೆ. ಬಿಡಿ ಮುತ್ತುಗ ಮತ್ತು ಆಲದ ಎಲೆಯನ್ನು ಚರುಪು ಹಂಚುವುದಕ್ಕಾಗಿ ಬಳಸುತ್ತಾರೆ. ಬಿಡಿ ಮುತ್ತುಗದ ಎಲೆಗಳನ್ನು ದಪ್ಪ ಸೆಣಬಿನ ದಾರದಿಂದ ಪೋಣಿಸಿ ಸರದಂತೆ ಮಾಡಿ ತೂಗುಹಾಕಿರುತ್ತಾರೆ. ಅವು ಒಣಗಿದ್ದರೂ ಕೂಡ ಬೇಕಾದಾಗ ಸ್ವಲ್ಪ ನೀರು ಚುಮುಕಿಸಿದರೆ ಮೃದುವಾಗುತ್ತೆ, ನಂತರ ಊಟದ ಎಲೆಯಾಗಿ ಹಚ್ಚಬಹುದು.

ಉದಾ: ಬರುವಾಗ ಒಂದಿಷ್ಟು ಮುತ್ತುಗದೆಲೆ ತಗಂಬಾ, ಊಟದಎಲೆ ಹಚ್ತೀನಿ.

<biDiele> Single leaf - For taking food, they attach one to another flame leaf or Aaladele with hancikaddi (a kind of grass). It it is not attached, they say bidiele. Single flame leaf and Aladele leaf used for distributing charupu (Prasad). Single flame leaves they attach like garland with jute thread and hang on. Even it is dried, when required, by sprinkling a little water, it becomes soft. Then as food leaf, can weave.

Eg: While coming bring some flame leaves. Will do food leaf.

763. ಬಿಮ್ಮಗೆ: ಬಿಗಿಯಾಗಿ ಕಟ್ಟುವುದನ್ನು **ಬಿಮ್ಮಗೆ** ಎನ್ನುವ ಪದವನ್ನು ಬಳಸುತ್ತಾರೆ. ಮುಖ ಗಂಟುಹಾಕಿಕೊಂಡು ಕೂತವನನ್ನು **ಬಿಮ್ಮಗೆ** ಕೂತಿದ್ದಾನೆ ಅಂತಾರೆ.

ದುಪಟಿ, ಕಂಬಳಿ ಮೊದಲಾದುವನ್ನು ಮುಸುಕಿಹಾಕಿಕೊಂಡು ಬಂದು ಮಕ್ಕಳನ್ನು ಹೆದರಿಸುವುದಕ್ಕೆ ಮುಸುಕಿನಗುಮ್ಮ ಎನ್ನುತ್ತಾರೆ.

ಉದಾ: ಮುಸುಕಿನಗುಮ್ಮ ಬಂತು ನೋಡು ಅಲ್ಲಿ.

ಉದಾ: ರಾಗಿಮೂಟೆಗಳ ಬಾಯನ್ನು ಬಿಮ್ಮಗೆ ಕಟ್ಟು. ಇಲ್ಲದಿದ್ದರೆ ಗಾಡಿಗೆ ಚೀಲಗಳನ್ನು ತುಂಬುವಾಗ ಚೀಲದ ಬಾಯಿ ಅಳಕವಾಗಿ ರಾಗಿ ಚೆಲ್ಲಿ ಹೋಗುತ್ತೆ.

<bimmage> Sitting quiet - To sit tightly, they use the word Bimmage. Person sitting tightly, they say Bimmage kunthidane (sitting). Covering with blanket, blanket made of sheep wool, to threaten children, they call musukinagumma.

Eg: Tie tightly the ragi bags. Otherwise, while putting bags on cart, they will loosen and ragi spills out.

764. ಬಿಸಿಲಡಿಗೆ: ಮದುವೆ ಸಮಾರಂಭದಲ್ಲಿ ಗಂಡಿನ ಕಡೆಯ ಸಂಬಂಧಿಗಳು ಬಂದಾಗ ಅವರನ್ನು ಚಪ್ಪರದೊಳಕ್ಕೆ ಆಹ್ವಾನಿಸಿ ವರಪೂಜೆ ಕಾರ್ಯಕ್ರಮವಾದ ನಂತರ ಊಟಕ್ಕೆ ಬಡಿಸುವುದನ್ನು **ಬಿಸಿಲಡಿಗೆ** ಎಂದು ಹೇಳುತ್ತಾರೆ. ಒಂದೊಂದು ಸಲ ಊಟಕ್ಕೆ ಬಡಿಸುವುದು ರಾತ್ರೆ ಹನ್ನೆರಡು ಗಂಟೆಯಾದರೂ ಅದಕ್ಕೆ ಬಿಸಿಲಡಿಗೆ ಎಂದೇ ಹೇಳುತ್ತಾರೆ.

ಉದಾ: ಭಟ್ಟರೇ, ಬೀಗರು ಇನ್ನೇನು ಬಂದುಬಿಡ್ತಾರೆ ಬಿಸಿಲಡಿಗೆ ಸಿದ್ಧಾನಾ?

<bisilaDige> (-) During marriage function when relatives of bridegroom come, inviting them to pandal after varapuje (a formal ceremony of welcome) offering food is called bisiladige. Even at times, it is night twelve o'clock, they say it is bisiladige.

Eg: Bhatre, the bridegroom's party will come. Is bisiladige ready?



765. ಬೀಗ: ಮನೆಯ ಬಾಗಿಲನ್ನು ತೆಗೆಯದಂತೆ ಭದ್ರಗೊಳಿಸಬೇಕಾದರೆ ಅಥವಾ ಕಬ್ಬಿಣ ಮತ್ತು ಮರದ ಪೆಟ್ಟಿಗೆಗೆ ಜೋಪಾನ ಮಾಡಲು ಹಾಕುವ ಲೋಹದ ಸಾಧನಕ್ಕೆ **ಬೀಗ** ಎಂದು ಹೆಸರು. ಬೀಗವನ್ನು ತೆಗೆಯಲು

ಬೀಗದಕೈ ಬೇಕೇ ಬೇಕು. ಬೀಗವನ್ನು ಕಬ್ಬಿಣ ಅಥವಾ ಹಿತ್ತಾಳೆಯ ಲೋಹದಿಂದ ಮಾಡುತ್ತಾರೆ. ಹಿತ್ತಾಳೆ ಬೀಗ, ಕಬ್ಬಿಣದ ಬೀಗ ಅಂತ ಎರಡು ವಿಧ ಬೀಗಗಳಲ್ಲಿ. ಹಿತ್ತಾಳೆಬೀಗದ ಬೆಲೆ ಹೆಚ್ಚು.

ಗಂಡಿನ ತಂದೆ ಮತ್ತು ಹೆಣ್ಣಿನ ತಂದೆ ಇಬ್ಬರಿಗೂ ಬೀಗ ಎಂದೇ ಕರೆಯುತ್ತಾರೆ.

ಉದಾ: ಹಿತ್ತಿಲಕಡೆ ಬೀಗ ಸರಿಯಾಗಿ ಹಾಕಿದ್ದೀಯ ನೋಡು.

<biiga> Lock - To secure that house door cannot be opened or the equipment to put for iron and wooden box is called biiga. Key only is required to open the lock. Lock is made of iron or brass metal. Brass lock and iron lock as two varieties in locks. Cost of brass lock is more.

Father of bridegroom and father of bride, both are called Biiga - Relative through marriage.

Eg: See whether you have put the lock properly for back door.

766. ಬೀಗರು: ಮದುವೆ ಸಮಾರಂಭದಲ್ಲಿ ಗಂಡಿನ ತಂದೆ ಮತ್ತು ಹೆಣ್ಣಿನ ತಂದೆಗೆ ಬೀಗರು ಎನ್ನುತ್ತಾರೆ. ಗಂಡಿನ ಮತ್ತು ಹೆಣ್ಣಿನ ತಾಯಿಗೆ ಬೀಗಿತ್ತಿ ಅನ್ನುವುದು ವಾಡಿಕೆ.

ಉದಾ: ಊರಿಂದ ಬೀಗ–ಬೀಗಿತ್ತಿ ನಿನ್ನೆ ಬಂದರು.

<biigaru> Relatives by marriage - During marriage function, bridegroom's father and bride's father they say biigaru. It is customary to say biigithhi for mother of boy and girl.

Eg: Biiga and Biigithhi came yesterday.

767. ಬೀಗರೂಟ: ಮದುವೆ ಸಮಾರಂಭಗಳೆಲ್ಲ ಮುಗಿದು ಬೀಗರೌತಣವಾದ ಮೇಲೆ ಗಂಡಿನ ಕಡೆಯವರು ಊರಿಗೆ ಪ್ರಯಾಣ ಮಾಡುವ ಗಡಿಬಿಡಿ. ದೇವಸ್ಥಾನಕ್ಕೆ ಹೋಗಿ ಪೂಜೆಯಾದ ನಂತರ ಪ್ರಯಾಣ ಬೆಳೆಸುತ್ತಾರೆ. ಅವರುಗಳಿಗೆ ಬಂಡಿಯೂಟ ಎಂದು ಮಳಿಯೋಗರೆ, ಮೊಸರನ್ನವನ್ನು ದೊಡ್ಡ ಪಾತ್ರೆಯಲ್ಲಿ ತುಂಬಿಕೊಡುತ್ತಾರೆ ಊರಿಗೆ ತಲುಪಿದ ತಕ್ಷಣ ಅವರುಗಳಿಗೆ ಅಡಿಗೆ ಮಾಡಲು ತೊಂದರೆಯಾಗುತ್ತೆ ಎಂಬುದಕ್ಕಾಗಿ ಈ ಪದ್ಧತಿ ನಡೆದು ಬಂದಿದೆ.

ಅಲ್ಲಿಗೆ ಹೆಣ್ಣಿನ ಮನೆತನದವರೂ, ಗಂಡಿನ ಮನೆತನದವರೂ ಒಂದಾದಂತೆ.

ದೊಡ್ಡ ದೊಡ್ಡ ಉದ್ದಿನ ಹಪ್ಪಳಗಳನ್ನು ಒಬ್ಬರ ಬೆನ್ನಿನ ಮೇಲೊಬ್ಬರು ಇಟ್ಟು ಕೈಯ್ಯಿಂದ ಬಡಿಯುತ್ತಾರೆ.

ಉದಾ: ಬೀಗರೂಟಕ್ಕೆ ಫೇಣಿ ಚೆನ್ನಾಗಿ ಮಾಡಿಸಿದ್ದರು.

<biigarooTa> (-) Bridegroom's party arranging lunch - Completing all the marriage functions, after biigaroota leaving of bridegroom's party to their place. Going to temple after worshipping they travel. For them calling as bandiyoota, filling in big vessel tamarind rice, curd rice they give. Immediately reaching their place it will be difficult for them to cook. That is why this custom has come into existence.

By that time, the bride's family and bridegroom's family have united. Putting big size urd dal papad on back of each other strike with hand.

Eg: For biigaroota they had got Pheni (a kind of sweet dish) done very nice.

768. ಬೀದಿಪಾಲು: ಮನೆ ಮಠ, ಆಸ್ತಿಪಾಸ್ತಿ ಎಲ್ಲವನ್ನು ಕಳೆದುಕೊಂಡು ನಿರಾಶ್ರಿತನಾಗಿರುವವನನ್ನು **ಬೀದಿಪಾಲಾಗಿದಾನೆ** ಎನ್ನುತ್ತಾರೆ.

ಉದಾ: ಶಿವಪ್ಪ ದುರಭ್ಯಾಸಗಳಿಗೆ ಬಲಿಯಾಗಿ ತೋಟ ತುಡಿಕೆ ಎಲ್ಲವನ್ನು ಹಾಳುಮಾಡಿಕೊಂಡು ಬೀದಿಪಾಲಾಗಿ ಹೋದ.

<beedipalu> Destitute State - A person who has lost all his properties etc. and is known as bankrupt - pauper in modern times.

Eg: Shivappa acquiring bad habits lost all properties and became pauper.



769. ಬೀಸುವಕಲ್ಲು: ಕೇವಲ ಎರಡು ಅಂಗುಲ ಎತ್ತರದ ಕಲ್ಲಿನಿಂದ ಚಕ್ರಾಕಾರವಾಗಿ ತಯಾರಿಸಿರುವುದು. ಇದೂ ಕೂಡ ಒಡೇಕಲ್ಲಿನಂತೆಯೆ ಒಂದರ ಮೇಲೆ ಇನ್ನೊಂದು ಕಲ್ಲು ಚಕ್ರಾಕಾರವಾಗಿರುವುದು. ಇದರಿಂದ ಅಕ್ಕಿ, ರಾಗಿ, ಕಡಲೇಬೇಳೆ ಮುಂತಾದುವನ್ನು ಬೀಸಿ ಹಿಟ್ಟು ಮಾಡಬಹುದು. ನೆಲದ ಮೇಲೆ

ಕುಳಿತುಕೊಂಡೆ ಬೀಸಬೇಕು. ಮೇಲಿನ ಕಲ್ಲು ಮಾತ್ರ ತಿರುಗುವುದು. ಅದಕ್ಕೆ **ಸುತ್ತುಗಲ್ಲು** ಎನ್ನುತ್ತಾರೆ. ಕೆಳಗಿನ ಕಲ್ಲಿಗೆ **ಅಡಿಗಲ್ಲು** ಎಂದು ಹೇಳುತ್ತಾರೆ. ಒಂದು ಕೈಯಿಂದ ಅದರ ಮಧ್ಯೆ ಇರುವ ರಂಧ್ರಕ್ಕೆ ಅಕ್ಕಿ, ರಾಗಿ, ಕಡಲೆಬೇಳೆಯನ್ನು ಸ್ವಲ್ಪಸ್ವಲ್ಪವಾಗಿ ಹಾಕಿ ಇನ್ನೊಂದು ಕೈಯಿಂದ ತಿರುಗಿಸಬೇಕು. **ಬೀಸುವಕಲ್ಲನ್ನು** ರಾಗಿಕಲ್ಲು ಎಂದೂ ಕರೆಯುತ್ತಾರೆ. ಹೆಚ್ಚಾಗಿ ರಾಗಿಬೀಸಲು ಈ ಕಲ್ಲನ್ನು ಬಳಸುತ್ತಾರೆ. ಅದಕ್ಕೆ ರಾಗಿಕಲ್ಲು ಎನ್ನುತ್ತಾರೆ.


ಉದಾ: ನಮ್ಮನೆ ಬೀಸುವಕಲ್ಲು ತುಂಬ ಸವೆದಿದೆ ಕಲ್ಲುಮುಳ್ಳು ಹುಯಿಸ್ಬೇಕು.

ನೋಡಿ: ಅಡಿಗಲ್ಲು

<biisuvakallu> Grinding Stone - Just two inches height made of stone like a wheel. This is also like paddy milling stone one above the other like wheel. From this, rice, ragi, gram etc. can be grinded and made powder. Must sit on floor and grind. The upper stone only turns. They say it is Suttugallu (turning wheel). Bottom stone they call adigallu (lower millstone). By one hand putting rice, ragi, gram little by little to the hole in the center, must turn with other hand. Grinding stone is also called as Ragikallu. Mostly this stone is used for grinding ragi. That is why they call Ragikallu.

Eg: Our house Grinding stone has worn out. Must get kallumullu (repairing of worn out part).

See: Adigallu



770. ಬುಗುರಿಆಟ: ಬುಗುರಿಆಟದಲ್ಲಿ ಇಬ್ಬರು ಒಂದುಬಾರಿಗೆ ಆಡಬಹುದು. ಬುಗುರಿಗೆ ಸುತ್ತುವ ದಾರಕ್ಕೆ ಚಾಟಿ ಎಂದು ಹೇಳುತ್ತಾರೆ. ನೆಲದ ಮೇಲೆ ಒಂದು ವೃತ್ತವನ್ನು ಹಾಕಿ ಅದರ ಮಧ್ಯೆ ಬುಗುರಿ ಇಟ್ಟು ಚಾಟಿ ಬೀಸಿದ ಬುಗುರಿಯಿಂದ ವೃತ್ತದಲ್ಲಿರುವ ಬುಗುರಿಗೆ ಹೊಡೆಯುತ್ತಾನೆ. ಬುಗುರಿ ಆಡಿಸಿದಾಗ ನೆಲಕ್ಕೆ ಬೀಳದಂತೆ ಕೈ ಮೇಲೆ ತಿರುಗುತ್ತಿರುವಂತೆಯೆ ಅಂಗೈಯಲ್ಲಿ ಹಿಡಿದಿರಿಸಿಕೊಳ್ಳುವುದಕ್ಕೆ ಅಪೀಚ್ ಎನ್ನುತ್ತಾರೆ.

<buguriaaTa> (-) In Buguriata (Spinning) two can play at a time. Thread which is rolled is called chati (cord of a top).

Making a circle on ground, keep top in center, strikes with other top rolled with cord to the one kept in center. When played with top, to hold in hand turning without falling on ground, they say apeech.



771. ಬುಡ್ಡಿದೀಪ: ಆಗೆಲ್ಲ ವಿದ್ಯುಚ್ಛಕ್ತಿ ಇಲ್ಲದ ಕಾಲ. ಯಾರ ಮನೆಯಲ್ಲಿ ನೋಡಿದರು ಬುಡ್ಡಿ, ಗೋಡೆಗೆ ತಗುಲಿಹಾಕುವ ದೀಪ, ಲಾಟೀನು (ಕಂದೀಲು) ಇರುತ್ತಿತ್ತು. ಎಲ್ಲವಕ್ಕೂ ಸೀಮೆಎಣ್ಣೆ ಬೇಕಾಗಿತ್ತು. ಮನೆಯ ಒಳಗೆ **ಬುಡ್ಡಿ**ಯನ್ನು ಎಲ್ಲೆಲ್ಲಿ ಬೇಕಾದರು ತೆಗೆದುಕೊಂಡು ಹೋಗಬಹುದು. ಗೋಡೆಗೆ ತಗುಲಿಹಾಕುವ ದೀಪವನ್ನು ಮಾತ್ರ ಇಟ್ಟಕಡೆಯೆ ಇಡುತ್ತಿದ್ದರು. ಮನೆಯ ಹೊರಗಡೆ ಕತ್ತಲಲ್ಲಿ ಹೋಗುವಾಗ ಲಾಟೀನು ಬಳಸುತ್ತಿದ್ದರು.


ಉದಾ: ಆ ಬುಡ್ಡಿ ತಂದ್ಕೊಡು ಎಣ್ಣೆ ಹಾಕಿಕೊಡ್ತೀನಿ.

ನೋಡಿ: ಚಿಮಣಿ, ಗೋಡೆದೀಪ, ಕಂದೀಲು, ಕೊಳ್ಳಿ, ಪಂಜು, ದೀವಟಿಗೆ.

<buDDideepa> Bottle type lamp - It was a time when there was no electricity. Seen in anybody's house buddi (bottle type lamp with wick), lamp hanging on wall, Lantern. For all kerosene was required. Inside the house buddi can be taken anywhere. Lamp to hang on wall was kept in one place only. When going outside house during night using lantern.

Eg: Bring that buddi. Will put oil and give.

See: Chimani, Godedeepa, Kandiilu, kolli, Panju, Deevatige.



772. ಬುಡುಬುಡಿಕೆ: ಬುಡುಬುಡಿಕೆ ನುಡಿಯುವವನು ಬೆಳಗಿನ ಝಾವಕ್ಕೆ ಬೀದಿಯ ಮೇಲೆ ಬುಡುಬುಡಿಕೆ ಬಾರಿಸಿಕೊಂಡು ಪದ ಹೇಳಿಕೊಳ್ಳುತ್ತ ಬರುತ್ತಾನೆ. ಮನೆಗಳ ಮುಂದೆ ನಿಂತು ಭವಿಷ್ಯ ಹೇಳಲು ಪ್ರಾರಂಭಿಸುತ್ತಾನೆ. ಬಟ್ಟೆ, ಕಾಸು, ದವಸ ಕೇಳುತ್ತಾನೆ. ಸಾಮಾನ್ಯವಾಗಿ ಬುಡುಬುಡಿಕೆಯವರು ಗಂಡಸರಾಗಿರುತ್ತಾರೆ. ಕಣಿ ಹೇಳುವವರು ಹೆಂಗಸರಾಗಿರುತ್ತಾರೆ.

ಉದಾ: ಜನಮಂದಿ ದಾರಿತಪ್ಪಿ ನಡೆಯುತ್ತಿದ್ದಾರೆ. ಮಾರಮ್ಮ ಕೆಂಡವಾಗವ್ಳೆ. ತಪ್ಪುಕಾಣಿಕೆಕೊಟ್ಟು ಬೇಡಿಕೊಳ್ಳಿ ಅಂತ ಹೇಳಿ ದಾಸಪ್ಪ ಬುಡುಬುಡಿಕೆ ಬಾರಿಸಿದ.

ನೋಡಿ: ಕೊರವಂಜಿ

<buDubuDike> Rattle drum - One who plays budubudike. Playing on road in the early morning, singing song, standing in front of house begins telling astrology. Asks for clothe, money, corns. Generally, rattle drum beaters will be men. The one tells astrology will be woman.

Eg: People are walking away from right path. Maramma has become angry. Telling paying penalty, pray, Dasappa struck budubudike.

See: Koravanji



773. ಬುತ್ತಿ: ಊರಿಂದೂರಿಗೆ ಪ್ರಯಾಣ ಮಾಡುವಾಗ ದಾರಿಯಲ್ಲಿ ತಿನ್ನಲು ತೆಗೆದುಕೊಂಡು ಹೋಗುವ ಪುಳಿಯೋಗರೆ ಅಥವಾ ಮೊಸರನ್ನವನ್ನು **ಬುತ್ತಿ** ಎನ್ನುತ್ತಾರೆ. ಮನೆಯಲ್ಲಿ ಮಾಡಿದ ಅಡುಗೆಯನ್ನು ಮನೆಯಲ್ಲೆ ಉಂಡರೆ ಅದು ಊಟ. ಮನೆಯ ಗಂಡಾಳು ವ್ಯವಸಾಯ ಮಾಡಲು ಗದ್ದೆ ಹೊಲಕ್ಕೆ ಹೊರಟಾಗ ಅವನ ಮಧ್ಯಾಹ್ನದ ಊಟವನ್ನು, ಬಾಳೆಎಲೆ ಅಥವ ಅಡಕೆಹಾಳೆಯಲ್ಲಿಟ್ಟು, ಅದನ್ನು ಬುಟ್ಟಿಯಲ್ಲಿಟ್ಟು ತಂದುಕೊಟ್ಟರೆ ಅದು ಬುತ್ತಿ ಎನಿಸುತ್ತದೆ. ಸಾಮಾನ್ಯವಾಗಿ ಬುತ್ತಿಯನ್ನು ಹೆಂಡತಿಯಾದವಳು ಮಧ್ಯಾಹ್ನದ ಹೊತ್ತಿಗೆ ಹೊಲಕ್ಕೇ ಹೋಗಿ ಗಂಡನಿಗೆ ಕೊಡುತ್ತಾಳೆ. ಅದು ಇಬ್ಬರಿಗು ಸಮಾಧಾನ.

ಉದಾ: ಕಮಲವ್ವಾ ಹೊಲಕ್ಕೆ ಬುತ್ತಿ ತಗಂಡು ಹೋಗ್ತೀಯಾ?

<buthi> (-) Food packed for journey - When travelling from place to place, to eat in between, the food tamarind rice or curd rice, they call butti. Food prepared in house if eaten in house only, it is Uuta (lunch). Man of the house when went to field for agriculture, his afternoon lunch packed in plantain leaf or areca leaf and kept in a basket and brought to him, it is known as butti. Generally, the wife goes to the field by noon and give it to her husband. That is of satisfaction to both.

Eg: Kamalavva, can you take butti to field?

774. ಬುರುಡೆ: ತೆಂಗಿನಕಾಯಿ ಚೆನ್ನಾಗಿ ಬಲಿಯದೆ ಸಣ್ಣ ಗಾತ್ರದಲ್ಲಿರುವಾಗಲೆ ಅದರಲ್ಲಿರುವ ಸ್ವಲ್ಪ ನೀರು ಹೊರಗೆ ಬಂದು ಖಾಲಿ **ಬುರುಡೆ**ಯಾಗಿ ಉಳಿಯುತ್ತೆ. ಅದು ಒಣಗಿದ ನಂತರ ಹಗುರವಾಗಿರುತ್ತೆ. ತೆಂಗಿನ ಬುರುಡೆಗಳನ್ನು ಸ್ನಾನಕ್ಕೆ ನೀರು ಕಾಯಿಸುವ ಒಲೆಗೆ ಉಪಯೋಗಿಸುತ್ತಾರೆ. ಸೀಮೆಎಣ್ಣೆಯನ್ನು ಬಳಸಿ ಹಚ್ಚುವ ತೂಗುದೀಪ ಅಥವಾ ಲಾಟೀನಿನ ಗಾಜಿನ ಚಿಮಣಿಗೂ ಬುರುಡೆ ಎನ್ನುತ್ತಾರೆ. ಸಂಗೀತದ ವಾದ್ಯಗಳಿಗೆ ಬಳಸುವ ಸೋರೆಬುರುಡೆಗೆ ಬುರುಡೆ ಎನ್ನುತ್ತಾರೆ. ಇಲ್ಲಸಲ್ಲದ ಸುಳ್ಳುಹೇಳುವುದನ್ನು ಬುರುಡೆಬಿಡ್ತಾನೆ ಎನ್ನುತ್ತಾರೆ.

ಉದಾ: ಶೀನಾ, ನೀರೊಲೆಗೆ ಇನ್ನೆರಡು ಬುರುಡೆ ಹಾಕು.

<buruDe> Dried coconut shell - Coconut without ripening well, when it is in small size, the little water inside coming out remains empty. When dried it becomes light. Dried coconuts are used to oven for heating water.

The glass chimney or hanging lamp or lantern using kerosene is also called as burude.

A dried pumpkin, bottle gourd used for music instruments is also called burude. Person who is bluffing with lie, they tell burude bidthane (bluffing).

Eg: Sheena, put another two dried coconuts for oven.

775. ಬೂರುಗ: ಇದು ಒಂದು ವಿಧವಾದ ಹತ್ತಿ. **ಬೂರುಗ**ದ ಮರ ಎತ್ತರವಾಗಿದ್ದು ಸಣ್ಣಸಣ್ಣ ಕಾಯಿ ಬಿಡುತ್ತೆ. ಕಾಯಿ ಒಣಗಿದನಂತರ ಮೇಲಿನ ಸಿಪ್ಪೆ ಒಡೆದು ಹತ್ತಿ ಕೆಳಕ್ಕೆ ಬೀಳುತ್ತೆ. ಬೂರುಗದಹತ್ತಿ ರೇಷ್ಮೆಯಂತೆ ನಯವಾಗಿರುತ್ತೆ. **ಬೂರುಗ**ದ ಮರಕ್ಕೆ ಗೊಬ್ಬರ, ನೀರು ಹಾಕಬೇಕಾಗಿಲ್ಲ. ಮಳೆಯ ನೀರೇ ಸಾಕು. ಕೆಳಗೆ ಬಿದ್ದ ಹತ್ತಿಯನ್ನು ಒಟ್ಟುಮಾಡುವುದೇ ದೊಡ್ಡ ಕೆಲಸ.

ಉದಾ: ನಾಲ್ಕಾರು ದಿಂಬಿಗಾಗುವಷ್ಟು ಬೂರುಗದಹತ್ತಿ ನಮ್ಮ ಹಿತ್ತಲ ಮರದಲ್ಲೇ ಸಿಕ್ತು.

<booruga> Silk cotton - This is a kind of cotton. Tree being big, small cotton grows. When cotton dries the outer skin will split and cotton falls. Buruga cotton will be so smooth as silk. Need not put manure or water for Buruga tree. Rainwater is

enough. To pile up the cotton fallen is the main job.

Eg: We got Buruga cotton in our backyard tree enough for four pillows.

776. ಬೂಸಾಮಾತು: ಬೂಸಾಬಿಡಬೇಡ ಎಂದರೆ ಸುಳ್ಳುಹೇಳಬೇಡ ಎಂದರ್ಥ. **ರೈಲುಬಿಡುವುದು** ಎಂಬುದು ಇನ್ನೊಂದು ಇದೇ ಅರ್ಥದ ಮಾತು.

<boosaamaathu> Useless Talk - Boosabidabeda means do not tell lie. Railu biduvudu is another word to express the same meaning.

777. ಬೃಂದಾವನ: ನೋಡಿ: ತುಳಸಿಕಟ್ಟೆ

<brindaavana> (-) A tower like structure for growing holy Basil plant - See: Thulasikatte

778. ಬೆಂಡು: ಜೋಳದ ದಂಟಿನ ಒಳಭಾಗಕ್ಕಿರುವುದೇ **ಬೆಂಡು**. ಇದು ಬಹಳ ಹಗುರವಾಗಿರುತ್ತೆ. ಬೆಂಡಿನಿಂದ ಮದುವೆಯಲ್ಲಿ ವಧೂ–ವರರ ತಲೆಗೆ ಅಲಂಕರಿಸುವ ಬಾಸಿಂಗವನ್ನು ಮಾಡುತ್ತಾರೆ. ಜೋಳದ ಕಡ್ಡಿಯನ್ನು ತೆಳ್ಳಗೆ ಸೀಳಿ ಬೀಸಣಿಗೆ ಮಾಡುತ್ತಿದ್ದರು. ಮದುವೆಯ ಕಾರ್ಯಕ್ರಮವಾದ ಕಾಶೀಯಾತ್ರೆಯಲ್ಲಿ ವರನ ಕೈಗೆ ಆ ತರಹ ಬೀಸಣಿಗೆಗೆ ಅಲಂಕಾರಮಾಡಿ ಕೊಡುತ್ತಿದ್ದರು.

ಉದಾ: ಗದ್ದೆಯಿಂದ ಬರುವಾಗ ನಾಲ್ಕಾರು ಜೋಳದದಂಟು ತಗಂಬಾ ಮದುವೆವರನಿಗೆ ಕೊಡುವ ಬೀಸಣಿಗೆ ಮಾಡ್ತೀನಿ.

<bendu> Corky wood - The inner portion of the stalk of jowar is bendu. They make Basinga from bendu for decorating on bride and bridegroom's forehead during marriage. Splitting the bendu they were preparing fan. In Kashiyatra one of the marriage function, they were giving such type of fan to the bridegroom duly decorated.

Eg: While coming from field, bring four or six jowar stalk. I will do fan to be given to bridegroom.

779. ಬೆಂಡೆಬ್ಬಿಸು: ಇಲ್ಲದ ತಕರಾರು ಮಾಡುವವರನ್ನು ಸರಿಯಾದ ದಾರಿಗೆ ತರುವುದಕ್ಕೆ **ಬೆಂಡೆಬ್ಬಿಸು** ಅನ್ನುವ ಪದವನ್ನು ಹೇಳುವುದು ರೂಢಿ.

ಉದಾ: ನಿಂಗಯ್ಯ ತುಂಬಾ ತರಲೆ ಮಾಡ್ತಾ ಇದಾನೆ, ಸರೀಗ್ ಬೆಂಡೆಬ್ಬಿಸಿ

ದಾರೀಗ್ತರಬೇಕು.

<benDebbisu> Trash - To set right a person creating unnecessary problems, it is common to say bendebbisu.

Eg: Ningayya is harassing too much. Must strive hard and bring him down.



780. ಬೆಕ್ಕಿನಶಕುನ ಯಾವುದಾದರೂ ಕೆಲಸಕ್ಕೆ ಮನೆಯಿಂದ ಹೊರಟಾಗ ಬೆಕ್ಕು ಅಡ್ಡಲಾಗಿ ಹೋದರೆ ಆಗಬೇಕಾದ ಕೆಲಸ ನಡೆಯುವುದಿಲ್ಲವೆಂಬ ಮೂಢನಂಬಿಕೆ ನಮ್ಮ ಹಳ್ಳಿಯ ಜನಗಳಲ್ಲಿದೆ. ಹಾಗೆಯೆ ಒಂಟಿ ಬ್ರಾಹ್ಮಣ ಎದುರಿಗೆ ಬಂದರೆ ಅಪಶಕುನ ಎನ್ನುತಿದ್ದರು. ಪಾಪ ಆ ಬೆಕ್ಕಿಗಾಗಲಿ, ಬ್ರಾಹ್ಮಣನಿಗಾಗಲಿ ಏನು ಗೊತ್ತು ಇವರ ಮನಸ್ಸಿನ ಪೀಕಲಾಟ. ಹಾಗೂ ಆಗಬೇಕಾದ ಕೆಲಸ ಸಲೀಸಾಗಿ ನಡೆದರೆ ಆ ಬೆಕ್ಕನ್ನಾಗಲಿ ಬ್ರಾಹ್ಮಣನನ್ನಾಗಲಿ ಹೊಗಳುವುದಿಲ್ಲ!

ಶುಭ ಶಕುನ – Good omen

ಕೆಟ್ಟ ಶಕುನ – Bad omen

ಉದಾ: ಬೆಕ್ಕು ಅಡ್ಡಬಂತು, ಮನೆಗೆ ವಾಪಸ್ ಹೋಗೋಣ.

<bekkinashakuna> Cat Omen - The false belief is with village people that when you leave the house for any work, if cat passes across, that work will not go through. Likewise, if a single brahmin comes in front, they were telling bad omen. How can that poor cat or brahmin knows their mind. But if the work goes through smoothly, they do not praise either the cat or brahmin!

Eg: Cat came across. Let us go back to home.

781. ಬೆನ್ನಟ್ಟು: ಒತ್ತಾಯ ಮಾಡಿ ಹಿಂಬಾಲಿಸಿಕೊಂಡು ಬರುವುದನ್ನು **ಬೆನ್ನಟ್ಟುವುದು** (ಬೆನ್ನುಬೀಳುವುದು) ಎನ್ನುತ್ತಾರೆ.

ಉದಾ: ಹೊನ್ನಯ್ಯ ಒಂದೇ ಸಮ ಎರಡು ತಿಂಗ್ಳಿಂದ ಬೆನ್ನಟ್ಟಿ ಬರ್ತಾ ಇದಾನೆ, ನಾನು ಎಷ್ಟೂಂತ ಸುಧಾರಿಸಲಿ.

<bennaTTu> Chasing - With pressure, following behind, they say bennattuvudu (bennubeeluvudu).

Eg: Honnayya is chasing simply from two months. How much can I support?

782. ಬೆಣಚುಕಲ್ಲು: ಬಿಳುಪಾದ ಕಲ್ಲಿಗೆ **ಬೆಣಚುಕಲ್ಲು** ಎಂದು ಹೆಸರು. ಬೆಣಚುಕಲ್ಲನ್ನು ಹಿಟ್ಟಾಗುವಂತೆ ಕುಟ್ಟಿ ಮಾರುತ್ತಾರೆ. ಅದನ್ನು **ರಂಗೋಲಿ** ಎಂದು ಕರೆಯುವರು. ಮನೆಯಮುಂದೆ ನೆಲದಮೇಲೆ ರಂಗೋಲಿಯನ್ನು ಉಪಯೋಗಿಸಿ ಹಸೆಗಳನ್ನು ಬರೆಯುತ್ತಾರೆ. ಬೆಣಚುಕಲ್ಲಿನ ಪುಡಿ ಮಚ್ಚು, ಕೊಡಲಿ, ಚಾಕುಗಳನ್ನು ಹರಿತಮಾಡಲು ಉಪಯೋಗಕ್ಕೆ ಬರುತ್ತದೆ. ಅಕ್ಕಿಹಿಟ್ಟಿನಲ್ಲೂ ರಂಗೋಲಿ ಹಾಕುತ್ತಾರೆ.

ಉದಾ: ನಾಲ್ಕೈದು ಬೆಣಚುಕಲ್ಲನ್ನು ಪುಡಿಮಾಡಿಡು. ಸಂಜೆ ಕುಡಗೋಲುಗಳನ್ನು ಹರಿತಮಾಡಿ ಕೊಡ್ತೇನೆ.

ನೋಡಿ: ರಂಗೋಲಿ

<beNachukallu> White stone - A kind of white shining stone is called benachukallu. They pound the stone and make powder. They call it as Rangoli. In front of houses on the ground, using Rangoli they write designs. The powder is used for sharpening axe, knife etc. From rice flour also they put Rangoli.

Eg: Make powder of four or five white stones. Evening I will sharpen the sickles.

See: Rangoli

783. ಬೆಣೆ: ನೋಡಿ: ಅಗಳಿ, ಚಿಲಕ

<beNe> Wooden Peg - See: Agali, Chilaka.


784. ಬೆರಕೆಸೊಪ್ಪು: ದಂಟು, ಹರಿವೆ, ಹೊನ್ನೆ, ನುಗ್ಗೆ ಮುಂತಾದ ಸೊಪ್ಪುಗಳನ್ನು ಒಟ್ಟಾಗಿ ಸೇರಿಸಿ ಮಾಡಿದ ಅಡುಗೆಗೆ **ಬೆರಕೆಸೊಪ್ಪಿನ** ಹುಳಿ, ಬೆರಕೆಸೊಪ್ಪಿನ ಪಲ್ಯ ಎಂದು ಹೇಳುತ್ತಾರೆ. ಬೆರಕೆಸೊಪ್ಪನ್ನು ಆಹಾರವಾಗಿ ಉಪಯೋಗಿಸುವುದು ಆರೋಗ್ಯಕರ.

ಉದಾ: ರಾತ್ರೆ ಊಟಕ್ಕೆ ಬೆರಕೆಸೊಪ್ಪಿನಹುಳಿ ಮಾಡ್ಬಿಡು.

<berakesoppu> (-) Varieties of green leaves mixed -

Mixing Dantu, Harive, Honne, Nugge food made is called berakesoppina sambar, berakesoppina subji. To use berakesoppu as food, is healthy.

Eg: For night dinner, do berakesoppina sambar.



785. ಬೆರಣಿ: ಹಸುವಿನ ಸಗಣಿಯನ್ನು ಉಂಡೆಯಂತೆ ಮಾಡಿ ಭತ್ತದ ಹೊಟ್ಟಿನ ಮೇಲೆ ಅದನ್ನು ಉರುಳಾಡಿಸಿ ದುಂಡಗೆ ರೊಟ್ಟಿಯಂತೆ ತಟ್ಟುತ್ತಾರೆ. ಅದು ಬಿಸಿಲಿನಲ್ಲಿ ಚೆನ್ನಾಗಿ ಒಣಗಿದ ನಂತರ ಬೆರಣಿ (ಕುಳ್ಳು) ಆಗುತ್ತೆ. ಅದನ್ನು ಸೌದೆಯಂತೆ ಒಲೆಯಲ್ಲಿ ಉರಿಸಲು ಸಾಧ್ಯವಾಗುತ್ತೆ. ಸೌದೆ ಸಿಗದೇ ಇದ್ದಾಗ, **ಬೆರಣಿ**ಯನ್ನೇ ಉಪಯೋಗಿಸಬಹುದು. ಬೇಸಿಗೆಕಾಲದಲ್ಲಿ ಬೆರಣಿಯನ್ನು ಬಿಸಿಲಿನಲ್ಲಿ ಒಣಗಿಸಿ ರಾಶಿರಾಶಿಯಾಗಿ ಒಟ್ಟಿರುತ್ತಾರೆ ಮಳೆಗಾಲದಲ್ಲಿ ಉಪಯೋಗಿಸುವುದಕ್ಕೆ.

ಸಗಣಿಯನ್ನು ನಿಂಬೇಹಣ್ಣಿನ ಗಾತ್ರದ ಉಂಡೆಮಾಡಿ ಒಣಗಿಸಿ ಭತ್ತದಹೊಟ್ಟಿನ ಮಧ್ಯೆ ಇಟ್ಟು ಸುಡುತ್ತಾರೆ. ನಂತರ ತೆಗೆದು ಪುಡಿ ಮಾಡಿ ಅದನ್ನು ವಿಭೂತಿಯಂತೆ ಬಳಸುತ್ತಾರೆ.

ಉದಾ: ಕಾಮನಹಬ್ಬದಲ್ಲಿ ಕಾಮಣ್ಣಕಟ್ಟಿಗೆ ಭೀಮಣ್ಣಬೆರಣಿ ಎಂದು ಹಾಡುತ್ತಾ ಹುಡುಗರು ಬಂದರು.

ನೋಡಿ: ತಿಪ್ಪೆಗುಂಡಿ, ಗಂಜಳ, ಹಸು, ಕಾಮನಹಬ್ಬ

<beraNi> Dried Cow dumg - Making cow dung as ball, roll on paddy husk, they beat with hand like roti. After it is dried in the sun, it becomes berani (kullu). It is possible to use as firewood. When firewood is not available, can use berani. During summer, drying berani in sun, they will have piled in heaps to use in rainy season.

Making cow dung as lemon size, dried in sun, putting inside paddy husk burn. Then taking out pound and use as Vibhuthi (ash to be smeared on forehead).

Eg: During Kaama festival boys came singing Kaamanna Kattige, BhiimaNNa berani.

786. ಬೆಲೆಕಟ್ಟು: ಅಕ್ಕಿ, ರಾಗಿ ಮುಂತಾದ ಧಾನ್ಯಗಳನ್ನು ಒಟ್ಟಾಗಿ ಮಾರಾಟ ಮಾಡುವಾಗ ಅದರ ಬೆಲೆಯನ್ನು ನಿರ್ಧರಿಸುವುದಕ್ಕೆ **ಬೆಲೆಕಟ್ಟುವುದು** ಎಂದು ಹೇಳುತ್ತಾರೆ.

ಉದಾ: ನಮ್ಮ ತ್ವಾಟದಾಗೆ ಸಾವಿರ ಮಣ ಅಡಕೆ ಫಸಲು ಈ ವರ್ಷದಲ್ಲಿ. ನೋಡಿ ಬೆಲೆಕಟ್ಟು, ಮುಂದಕ್ಕೆ ಮಾತಾಡಾವ.

<belekaTTu> Evaluation - While selling rice, ragi in wholesale, to decide the price, they say belekattuvudu.

Eg: In our garden this year one thousand monds of areca crop. Decide the price, then we shall discuss.

787. ಬೆಳ್ಳಿರಥ: ನಾಲ್ಕು ಚಕ್ರಗಳ ನೂರಾರು ಜನ ಎಳೆಯುವ ತೇರನ್ನು ರಥ ಎಂದು ಕರೆಯುತ್ತಾರೆ. ಅಂಥ ಉತ್ಸವ ರಥೋತ್ಸವ. ಎಂದರೆ ತೇರಿನಹಬ್ಬ. ರಥಗಳು ಸಾಮಾನ್ಯವಾಗಿ ಮರದ ತೇರುಗಳಾಗಿರುತ್ತವೆ. ಕೆಲವುಕಡೆ ಬೆಳ್ಳಿ ಹೊದಿಕೆ ಹೊದಿಸಿದ ತೇರುಗಳನ್ನು ಬೆಳ್ಳಿರಥ ಎಂದು ಕರೆಯುತ್ತಾರೆ. ನಮ್ಮ ಕಾವ್ಯಗಳಲ್ಲಿ ಚಿನ್ನದರಥಗಳ ಉಲ್ಲೇಖವಿದೆ. ಕಲ್ಲಿನ ತೇರುಗಳೂ ಇವೆ. ಹಂಪೆಯಲ್ಲಿ ನೋಡಬಹುದು. ಕಲ್ಲಿನ ಚಕ್ರಗಳ ತೇರುಗಳನ್ನು ಕೆಲವೆಡೆ ಕಾಣಬಹುದು. ತೇರುಗಳು ಚಿಕ್ಕದಾಗಿರಬಹುದು ಅಥವಾ ದೊಡ್ಡದಾಗಿರಬಹುದು. ರಥೋತ್ಸವಕಾಲದಲ್ಲಿ ವಿಶೇಷವಾಗಿ ಅಲಂಕರಿಸಿರುವುದನ್ನು ನೋಡುವುದಕ್ಕೆ ಮನೋಹರವಾಗಿರುತ್ತೆ.

ನೋಡಿ: ತೇರು (ರಥ)

<beLLiratha> Silver car - Car with four wheels to be pulled by hundreds of people, they call it Ratha. Such festival is Rathotsava. Means Car festival. Rathas generally, will be of wooden cars. In some places rathas covered with silver, they call belliratha. In our literature, there is mention of golden cars. Stone cars are also there. Can see in Hampe Stone wheels cars. Cars may be small or big. During car festival specially decorated one is a pleasure to see.

788. ಬೆಳ್ಳುಳ್ಳಿ: ಈರುಳ್ಳಿಯ ಹಾಗೆಯೇ **ಬೆಳ್ಳುಳ್ಳಿ**ಯೂ ಒಂದು ಗಡ್ಡೆ. ಬೆಳ್ಳುಳ್ಳಿ ಬಿಳಿಯಬಣ್ಣದ್ದು. ಕೆಲವು ಜನ ಬೆಳ್ಳುಳ್ಳಿಯನ್ನು ಉಪಯೋಗಿಸುವುದಿಲ್ಲ. ಬಾಣಂತಿಯರಿಗೆ ಬೆಳ್ಳುಳ್ಳಿಯ ಹಳುಕನ್ನು ತುಪ್ಪದಲ್ಲಿ ಕರಿದು ಬಿಸಿ



ಅನ್ನಕ್ಕೆ ಬೆರೆಸಿ ಕೊಡುತ್ತಾರೆ. ಅದು ಸೊಂಟಕ್ಕೆ ಬಲ ಕೊಡುತ್ತೆ. ಕಿವಿಯೊಳಗೆ ನೋವಾದರೆ ಬೆಳ್ಳುಳ್ಳಿಯ ಹಳುಕನ್ನು ಕೊಬರಿ ಎಣ್ಣೆಯಲ್ಲಿ ಬಿಸಿ ಮಾಡಿ ಹತ್ತಿಯಲ್ಲಿಟ್ಟು ಕಿವಿಗೆ ಸೇರಿಸುತ್ತಾರೆ.

ಉದಾ: ಈ ವರ್ಷ ನಮ್ಮ ಹೊಲದಲ್ಲಿ ಎರಡು ಚೀಲ ಬೆಳ್ಳುಳ್ಳಿ ಆಯಿತು.

<beLLuLLi> Garlic - (-) Just like onion bellulli is also a tuber. Bellulli is white color. Some people do not use bellulli. For baby delivered women, frying bellulli in ghee, mix with hot rice, give. It gives strength to waist. If there is pain in ear, heating bellulli in coconut oil, putting inside cotton, attach to the ear.

Eg: This year in our field, two bags of bellulli.

789. ಬೇಕಾಬಿಟ್ಟಿ: ಪೂರಾ ನಿಗಾ ಕೊಡದೆ ಅರ್ಧಂಬರ್ಧ ಮಾಡುವ ಕೆಲಸಕ್ಕೆ **ಬೇಕಾಬಿಟ್ಟಿ** ಎಂದು ಹೇಳುವುದು ರೂಢಿ. ಯಾವುದಾದರೂ ಒಂದು ವ್ಯವಹಾರದಲ್ಲಿ ಹಣ ಖರ್ಚುಮಾಡದೆ ಸುಲಭವಾಗಿ ಆ ಪದಾರ್ಥ ಸಿಕ್ಕಿತು ಎಂದು ತಿಳಿಸುವುದಕ್ಕೆ **ಬೇಕಾಬಿಟ್ಟಿ** ಅಥವಾ ಪುಗಸಟ್ಟೆ ಅನ್ನುವ ಪದ ರೂಢಿಯಲ್ಲಿದೆ.

ಉದಾ: ಪುಗಸಟ್ಟೆ ಸಿಕ್ಕರೆ ನನಗೊಂದಿರಲಿ, ನಮ್ಮಪ್ಪನಿಗೆ ಎರಡಿರಲಿ.

ಉದಾ: ನೀನು ಹೀಗೆ ಬೇಕಾಬಿಟ್ಟಿ ಕೆಲಸ ಮಾಡೂದಾದರೆ ನಾಳೆಯಿಂದ ಕೆಲಸಕ್ಕೆ ಬರಬ್ಯಾಡ.

<beekaabiTTi> (-) Work done carelessly - Without concentration, doing half and half work, it is common to say bekaabitti (doing with half mind). In any transaction, without spending money, if we get the thing easily, to express that, the word bekaabitti or Pugasatte is in vogue.

Eg: If you do work with half mind, do not come for work from tomorrow.

790. ಬೇಕೂಫ್ಲಾ: ನೋಡಿ: ಬ್ರಾಹ್ಮಣರ ಬೈಗುಳ

<bekoofa> Fool - See: Brahmanarabaigula

791. ಬೇಬಾಕು: ಹಳ್ಳಿಯಲ್ಲಿ ಯಾರ ಕಂದಾಯವೂ ಬಾಕಿ ಇಲ್ಲದ ಹಾಗೆ ಚುಕ್ತಾ ಮಾಡಿದ್ದರೆ ಅದನ್ನು **ಬೇಬಾಕಾಗಿದೆ** ಎಂದು ಹೇಳುತ್ತಾರೆ.

ಉದಾ: ಈ ವರ್ಷದ ಕಂದಾಯ ಪೂರಾ ಬೇಬಾಕಾಗಿದೆ, ಮುಂದಿನ ವರ್ಷವೂ ಹೀಗೇ ಆಗ್ಬೇಕು ಅಂತ ಶ್ಯಾನುಭೋಗರು ಹೇಳ್ತಾ ಇದ್ದರು.

<bebaaku> Finalised transaction - If property tax in the village is settled without any balance, they say bebakagide.

Eg: This year's tax is fully finalized. Shanbhog was telling, it should be done like this next year also.



792. ಬೇಲದಹಣ್ಣು: ಬೇಲದಹಣ್ಣು ತೆಂಗಿನಕರಟದ ಹಾಗೆ ಮಾಸಲು ಬಣ್ಣದ ಕರಟದೊಂದಿಗೆ ಚೆಂಡಿನಹಾಗೆ ದುಂಡಾಗಿರುತ್ತೆ. ಒಳಭಾಗದ ತಿರುಳು ಸಣ್ಣ ಬೀಜಗಳಿಂದ ಕೂಡಿ ಸಿಹಿ ಒಗರು ಮಿಶ್ರಿತವಾದ ರುಚಿಯಿಂದ ಕೂಡಿರುತ್ತೆ. ತಿರುಳಿನ ಜೊತೆಗೆ ಬೆಲ್ಲವನ್ನು ಬೆರೆಸಿ ತಿನ್ನಬಹುದು. ವಿಶೇಷವಾಗಿ ರಾಮನವಮಿ ಮುಂತಾದ ಹಬ್ಬಗಳಲ್ಲಿ ಬೇಲದಹಣ್ಣಿನ ಪಾನಕವನ್ನು ಮಾಡಿ ಎಲ್ಲರನ್ನು ಮನೆಗೆ ಕರೆದು ಪೂಜೆಯಾದನಂತರ ಹಂಚುತ್ತಾರೆ.

ಉದಾ: ಇನ್ನೊಂದುಲೋಟ ಬೇಲದಹಣ್ಣಿನಪಾನಕ ಕೊಡಿ ತುಂಬಾ ರುಚಿಯಾಗಿದೆ ಶಾರದಮ್ಮನವರೇ.

<beladahaNNu> Wood apple - Bela fruit like coconut shell with gray color. Shell will be round like a bal. The pulp inside with full of small seeds will be sweet mixed with astringent taste. Can eat the pulp mixing jaggery. Especially, during Ramanavami etc. festivals make juice with Bela, inviting people and distribute after Pooja.

Eg: Sharadamma, give me one more glass of Bela juice. Quite tasty.

793. ಬೇಲಿ: ಗದ್ದೆ, ಹೊಲ, ತೋಟಗಳ ಸುತ್ತಲು ದನಕರುಗಳು ಒಳಗೆ ನುಗ್ಗದಂತೆ ತಡೆಗಟ್ಟಲು ಹಾಕುವ ಮುಳ್ಳುತಂತಿ ಅಥವಾ ಮುಳ್ಳುಗಿಡಗಳಿಗೆ **ಬೇಲಿ** ಎಂದು ಹೆಸರು. ಬೇಲಿಗೆ ಸಾಮಾನ್ಯವಾಗಿ ಹಾಲುವಾಣದ ಗಿಡ ಮತ್ತು ಕತ್ತಾಳೆಗಿಡಗಳನ್ನು ಬಳಸುತ್ತಾರೆ.

ಉದಾ: ತಂತಿಬೇಲಿ ಹೆಚ್ಚು ಭದ್ರ ನಿಜ ಆದರೆ ಮುಳ್ಳುಬೇಲಿಗೆ ಖರ್ಚಾಗೋಲ್ಲ ತಂತಿಬೇಲಿಗೆ ದುಡ್ಡು ಬೇಕು.

ನೋಡಿ: ಹಾಲುವಾಣಗಿಡ, ರಕ್ಕಸಪಟ್ಟೆ

<beli> Fence - Around field, garden, to see that cows will not rush inside, putting thorny wire or plants is called fence. For fence generally, use haluvana or kathhale (Plant with thorns).

Eg: Wire fence is more secure, but for fence with thorny plants, does not cost much. For wire fence more money is required.

See: HaaluvaNa tree, RaakkasapaTTe



794. ಬೇವು: ಬೇವು ಒಂದು ಜಾತಿಯ ಮರ. ಅದರ ಎಲೆ ಬಹಳ ಕಹಿಯಾಗಿರುತ್ತೆ. ಯುಗಾದಿ ಹಬ್ಬದ ದಿನ ಬೇವಿನ ಚಿಗುರೆಲೆಗಳನ್ನು ತುಪ್ಪ ಮತ್ತು ಬೆಲ್ಲದೊಂದಿಗೆ ಸೇರಿಸಿ ಪೂಜೆಯಾದ ನಂತರ ಪ್ರಸಾದರೂಪದಲ್ಲಿ ತಿನ್ನುತ್ತಾರೆ. ನಾಟಿಔಷಧಿ ಮಾಡುವಾಗಲೂ ಬೇವಿನ ಎಲೆ ಮತ್ತು ಬೇವಿನ ಮರದ ತೊಗಟೆಯನ್ನು ಉಪಯೋಗಿಸುತ್ತಾರೆ. ಯುಗಾದಿ ಹಬ್ಬದಲ್ಲಿ ಮಾವಿನ ತೋರಣದ ಜತೆಗೆ ಬೇವಿನಗೊಂಚಲನ್ನು ಬಾಗಿಲಿಗೆ ಸಿಕ್ಕಿಸುತ್ತಾರೆ.

ಉದಾ: ಬೇವುಬೆಲ್ಲತಿಂದು ಒಳ್ಳೆಮಾತಾಡಿ ಹೋಗು (ಗಾದೆ)

<bevu> Neem is a type of tree. Its leaves are bitter. On Ugadi festival day the tender leaves adding ghee and jaggery eat as Prasada after pooja. While preparing native medicines also use neem leaves and skin of neem tree. During Ugadi festival, along with garland of mango leaves attach bunch of neem leaves.

Eg: Eat neem and jaggery, go after good talking (proverb).

795. ಬೂತಾಳೆ: ನೋಡಿ: ಪಾಪಾಸುಕಳ್ಳಿ

<boothaaLe> A kind of plant used for tence - See: Papasukalli

796. ಬೊಂತೆ: ನೋಡಿ: ದಟ್ಟ

<bonthe> (-) Cloth made of quilted rags - See: Datta



797. ಬೊಗಸೆ: ಎರಡು ಅಂಗೈಗಳನ್ನು ಬೆರಳುಗಳನ್ನು ಹೊಂದಿಸಿ ಬಟ್ಟಲಿನಂತೆ ಸೇರಿಸಿದಾಗ ಅದು ಹಿಡಿಸುವ ಅಳತೆಗೆ **ಬೊಗಸೆ** ಎನ್ನುತ್ತಾರೆ.

ಉದಾ: ಇವತ್ತು ಎಂಟು–ಹತ್ತು ಜನ ಊಟಕ್ಕೆ ಬರ್ತಾರೆ, ಎರಡು ಬೊಗಸೆ ಬೇಳೆ ಹಾಕಿ ಸಾರುಮಾಡು.

<bogase> Handful measure - When holding both palms, fingers together like a cup, the measure it holds they call Bogase (handful).

Eg: Today eight or ten persons will come for lunch. Putting two bogase dal, prepare rasam.

798. ಬೊಬ್ಬೆಹಾಕುವುದು: ಗಟ್ಟಿಯಾಗಿ ಕಿರಿಚಾಡುವುದಕ್ಕೆ **ಬೊಬ್ಬೆಹಾಕುವುದು** ಎಂದು ಹೇಳುವುದು ರೂಢಿ.

ಉದಾ: ಗೌಡ್ರ ಮನೆತಾವ ಏಟೊಂದು ಜನ ಬೆಳಗಿನಿಂದ ಬೊಬ್ಬೆಹಾಕ್ತಾ ಇದಾರೆ, ಯಾಕೇಂತ ಗೊತ್ತಿಲ್ಲ.

<bobbehaakuvudu> Screaming loudly, it is common to say bobbehakuvudu (cry aloud).

Eg: Near Gowda's house so many people are crying aloud since morning. Do not know why.

799. ಬೋಣಿಮಾಡು: ಹಣವನ್ನು ನಗದಾಗಿ ಕೊಟ್ಟು ಕೊಂಡುಕೊಳ್ಳುವ ಮೊದಲನೆ ವ್ಯಾಪಾರಕ್ಕೆ **ಬೋಣಿಮಾಡುವುದು** ಎನ್ನುತ್ತಾರೆ. ಸುಮ್ಮನೆ ಚೌಕಾಶಿ ಮಾಡ್ಬೇಡಿ ಎನ್ನುತ್ತಾರೆ. ಮೊದಲ ಬೋಣಿಯಲ್ಲೆ ತಕರಾರಾದರೆ ಆ ದಿನದ ವ್ಯಾಪಾರವೆಲ್ಲ ಹಾಳು ಎಂಬ ಭಾವನೆ ವರ್ತಕರಲ್ಲಿರುತ್ತೆ.

ಉದಾ: ನೀವು ಕೇಳುಕ್ಕುಂಚೇನೆ ಹತ್ತು ರೂಪಾಯಿ ಕಮ್ಮಿಮಾಡಿದೀನಿ, ಬೋಣಿ ಮಾಡ್ಬಿಡಿ.

ನೋಡಿ: ಚೌಕಾಸಿ, ಕೊಸರು

<booNimaaDuvudu> First transaction - The first transaction paying cash and buy, they say bonimaduvudu (Make the first purchase of the day by cash). Sellers will have an impression that if problem arises in the first transaction itself, the whole transaction of that day will be spoiled.

Eg: Before you ask, I have reduced ten rupees. Do the transaction.

See: Choukasi, Kosaru.

800. ಬೋರಲು: ನೋಡಿ: ಅಂಗತ್ತು

<boralu> Topsyturvy - See: Angathhu.

801. ಬೋಸಿ: ನೋಡಿ: ಚಟ್ಟಿ

<bosi> (-)Large mouthed round metal vessel - See: Chatti

802. ಬ್ರಹ್ಮಚಾರಿ ಉಡುಪುಗಳು: ಗಂಡಸರಿಗೆ ಉಡುವ ಹೊದೆಯುವ ಪಂಚೆಯನ್ನು ನೆಂಟರಿಷ್ಟರಿಗೆಲ್ಲ ಉಡುಗೊರೆಯಾಗಿ ಕೊಡುವುದು ಸಂಪ್ರದಾಯ. ಮುಂಜಿಯ ದಿನ ಐದು ಬ್ರಹ್ಮಚಾರಿಗಳಿಗೆ ಒಂದು ದಟ್ಟಿಪಂಚೆ ಮತ್ತು ಒಂಟಿ ಜನಿವಾರವನ್ನು ಚೂರು ಗೋಪಿಚಂದನದೊಂದಿಗೆ ಮುಂಜಿಯಾದ ಹುಡುಗನಿಂದ ಹಿರಿಯರು ಕೊಡಿಸುತ್ತಾರೆ.

ಉದಾ: ರಾಮೂ ಮುಂಜಿಯದಿನ 6–7 ಜನ ಬ್ರಹ್ಮಚಾರಿಗಳಿಗೆ ಪಂಚೆ, ಜನಿವಾರ, ಗೋಪೀಚಂದನ ಕೊಡಿಸಿದರು.

<brahmachari uDupugaLu> Bachelor's dress - It is customary to give as udugore (Present), for men to wear Dhothis to all relatives. On Thread Ceremony day for five brahmacharis (bachelors) one datti panche (single dhoti) and a single janivara, a piece of gopichandana (a kind of yellow earth used by Vaishnavas) will be given by the boy who had become brahmachari.

Eg: On Ramu's thread ceremony, for six to seven brahmacharis, dhothis, janivara, gopichandana, they got offered.

❑


ಭ / Bha

803. ಭಜನೆ: ದೇವರನ್ನು ಒಲಿಸಿಕೊಳ್ಳಲು ಜನರು ಭಕ್ತಿಯಿಂದ ಹಾಡಿನ ಮೂಲಕ ಲಯಬದ್ಧವಾಗಿ ಪ್ರಾರ್ಥನೆ ಮಾಡುತ್ತಾರೆ. ಇದು ವ್ಯಕ್ತಿಗತವಾಗಿರಬಹುದು ಅಥವಾ ಜನರು ಗುಂಪಾಗಿ ಮನೆಯಲ್ಲಿ, ದೇವಸ್ಥಾನಗಳಲ್ಲಿ, ಯಾತ್ರೆಗಳಲ್ಲಿ, ಉತ್ಸವಗಳಲ್ಲಿ ಭಜನೆ ಮಾಡುವರು. ನಿರಂತರವಾಗಿ ಪ್ರಾರ್ಥಿಸುವ ಭಜನಾ ಮಂಡಳಿಗಳು ತುಂಬಾ ಇವೆ. ಹೆಂಗಸರು, ಗಂಡಸರು ಹಾಗೂ ಮಕ್ಕಳು ಎಲ್ಲರೂ ಭಾಗವಹಿಸಬಹುದು.

ಉದಾ: ಎಲ್ಲರೂ ಭಜನೆ ಮಂದಿರಕ್ಕೆ ಸಂಜೆಗೆ ಬನ್ನಿ ದೇವರ ಭಜನೆ ಮಾಡೋಣ.

<bhajane> (-) To invoke the blessings fo God, people pray to God by chanting of names and songs in a rythmic pattern is Bhajane. Everyone can participate in the prayer. There a many prayer groups who practise regularly.

Eg: All of you please come to Bhajana Mandir for prayers.



804. ಭರಣಿ: ಹೆಂಗಸರು ಹಣೆಗೆ ಹಚ್ಚಿಕೊಳ್ಳುವ ಸಾದು, ಕುಂಕುಮ ಮತ್ತು ಕಣ್ಕಪ್ಪನ್ನು ಇಡಲು ಮಾಡಿರುವ ಸಣ್ಣ ಡಬ್ಬಿಗೆ **ಭರಣಿ** ಎಂದು ಹೆಸರು. ಭರಣಿಯನ್ನು ಮರ ಅಥವಾ ಲೋಹದಿಂದ (ಹಿತ್ತಾಳೆ, ಬೆಳ್ಳಿ) ಮಾಡುತ್ತಾರೆ. ಭರಣಿ ಒಂದು ಮಳೆಯ ಹೆಸರು ಕೂಡ. ಭರಣಿ ಮಳೆ ಬಂತು ಅಂದರೆ ಭತ್ತ ಬಿತ್ತಬಹುದು ಅಂತ ರೈತರು ಗದ್ದೆಗಳಲ್ಲಿ ಚುರುಕಾಗಿ ಕೆಲಸಮಾಡುತ್ತಾರೆ. ಭರಣಿ ಮಳೆಯ ನೀರಿನಿಂದ ಬೆಳೆ ಧಾರಾಳವಾಗಿ ಬೆಳೆಯುತ್ತೆ. ಭರಣಿ ಒಂದು ನಕ್ಷತ್ರದ ಹೆಸರು. ಭರಣಿ ನಕ್ಷತ್ರದಲ್ಲಿ ಹುಟ್ಟಿದವನು ಧರಣಿ ಆಳ್ತಾನೆ ಅನ್ನುವುದು ಒಂದು ಗಾದೆ.

ಉದಾ: ಊರಿಗೆ ಹೋಗುವಾಗ ಲಲಿತೂಗೆ ಕಣ್ಕಪ್ಪಿನ ಭರಣಿ ಕೊಡು.

<bharaNi> (-) Casket with lid - A small box made of metal sheet for women to keep Sadu, kunkum and Kankappu which they smear to their forehead is called Bharani. Bharani is

made of wood or metal (brass, silver). Bharani is the name of Rain too. Farmers work with spirit if Bharani rain comes, means can sow paddy. With Bharani rain crops grow in plenty.

Bharani is the name of a Star. A person born in Bharani star, will rule the world is a proverb.

Eg: When Lalithu goes to her place, give her a Bharani of Kankappu

805. ಭವಿಷ್ಯಹೇಳುವುದು: ಭವಿಷ್ಯಹೇಳುವವರು ಭವಿಷ್ಯ ಕೇಳುವುದಕ್ಕೆ ಬಂದವರ ಮುಖಚರ್ಯೆ, ಬಂದಹೊತ್ತು, ದಿಕ್ಕು ಎಲ್ಲವನ್ನೂ ಗಮನಿಸಿ ಪಂಚಾಂಗವನ್ನು ಬಿಚ್ಚಿ ಭವಿಷ್ಯ ಹೇಳುತ್ತಾರೆ. ಹೇಳಿದಂತೆ ಆದರೂ ಆಗಬಹುದು, ಆಗದಿದ್ದರೂ ಇರಬಹುದು.

ಉದಾ: ನಿಮ್ಮೂರಿನ ಶ್ಯಾಮಭಟ್ಟರು ತುಂಬಾ ಚೆನ್ನಾಗಿ ಭವಿಷ್ಯ ಹೇಳ್ತಾರಂತೆ ಹೌದೇ?

ನೋಡಿ: ಜ್ಯೋತಿಷ್ಯ

<bhavishyaheLuvudu> (-) Predict future occurrence - Astrologers, observing the persons who came to ask, their face, the time arrived, direction, opening the almanac predicts future. As told, it may or may not happen.

Eg: Shyamabhatta of your place predicts well it seems. Is it so?

See: Jyotishya

806. ಭಂಡಾರ ಒಡೆಯುವುದು: ಭೀಮನಮಾವಾಸ್ಯೆಯ ದಿನ **ಭಂಡಾರ ಒಡೆಯುವುದು** ಒಂದು ವಿಶೇಷವಾದ ಆಚರಣೆ. ಚಿರೋಟಿರವೆಗೆ ಸ್ವಲ್ಪ ಮೈದಾಹಿಟ್ಟನ್ನು ಬೆರೆಸಿ ಕಣಕ ಮಾಡಿಕೊಂಡು ಅಂಗೈ ಅಗಲ ದುಂಡಗೆ ಎರಡು ಹಾಳೆ ಮಾಡುತ್ತಾರೆ. ಹಾಗೆ ಮಾಡಿ ಒಂದು ಹಾಳೆಯ ಮೇಲೆ ದುಡ್ಡನ್ನು ಇಟ್ಟು ಇನ್ನೊಂದು ಹಾಳೆಯನ್ನು ಮುಚ್ಚಿ ಎಣ್ಣೆಯಲ್ಲಿ ಕರಿಯುತ್ತಾರೆ. ಅದಕ್ಕೆ ಭಂಡಾರ ಎಂದು ಹೆಸರು. ಸಾಮಾನ್ಯವಾಗಿ ಅಕ್ಕ ತಂಗಿಯರು ಅಣ್ಣ ತಮ್ಮಂದಿರನ್ನು ಕರೆದು ಭಂಡಾರವನ್ನು ಮನೆಯ ಮುಂದಿನ ಬಾಗಿಲ ಹೊಸಲಿನ ಮೇಲೆ ಎರಡು ಕಡೆಗೂ ಇಟ್ಟು ಒಡೆಸುತ್ತಾರೆ. ಇದೆಲ್ಲದರ ಉದ್ದೇಶ ಎಲ್ಲರೂ ಅನ್ಯೋನ್ಯವಾಗಿ ಬಾಳಬೇಕೆಂಬುದು.

ಉದಾ: ಶಾಮೂ ನೀನು ಈದಿನ ಭಂಡಾರ ಒಡೀಬೇಕು ಅಕ್ಕನಿಗೆ.

<bhanDaara oDeyuvudu> (-) Bhandara odeyuvudu on the day of Bheemanamavasya is a Special occasion. Adding a little maida flour to fine rava make a duff round two sheets of the size of a palm. Doing like that, on one sheet putting a coin and cover with another sheet, fry in oil. It is called Bhandara. Generally, inviting sisters, brothers, putting Bhandara both sides on the bottom of front door of house, get it broken. The main aim of all this is, all should live cooperatively.

Eg: Shamu, today you must break Bhandara for sister.

807. ಭಾಂಗಿ: ಅಂಚೆಯ ಮೂಲಕ ಊರಿಂದೂರಿಗೆ ಕಳುಹಿಸುವ ಪದಾರ್ಥಕ್ಕೆ **ಭಾಂಗಿ** ಎಂದು ಹೆಸರು. ಮದುವೆಯಾದ ಹೆಣ್ಣುಮಕ್ಕಳಿಗೆ ಗೌರಿವ್ರತವನ್ನು ಆಚರಿಸುವ ಸಲುವಾಗಿ ರೇಷ್ಮೆಯ ಖಣ, ಅರಿಶಿನ, ಕುಂಕುಮ, ಬಳೆ ಬಿಚ್ಚೋಲೆಗಳನ್ನು ಬಿಳಿಯ ಬಟ್ಟೆಯಲ್ಲಿ ಗಂಟುಮಾಡಿ ಹೊಲಿದಿರುವ ಭಾಗಕ್ಕೆ ಅರಗಿನಿಂದ ಭದ್ರಮಾಡಿ ಆ **ಭಾಂಗಿ**ಯನ್ನು ಅಂಚೆಯ ಮೂಲಕ ಕಳುಹಿಸುತ್ತಿದ್ದರು. ಇಂಗ್ಲಿಷಿನಲ್ಲಿ ಪಾರ್ಸೆಲ್ ಅಂತಾರೆ. ಉದಾ: ಈ ಸಲ ಗೌರೀಹಬ್ಬಕ್ಕೆ ಮೂರು ಜನ ಹೆಣ್ಣುಮಕ್ಕಳಿಗೂ ಭಾಂಗಿ ಕಳಿಸ್ಬೇಕು.

<bhaangi> Parcel - Thing which is sent from place to place by post is called bhangi. For married daughters to perform Gowrivratha, silk cloth, turmeric powder, kunkum, bangle, bichhole etc. packing in white cloth, fixing with red sealing wax at the stitched portion, they were sending that bhangi through post. They call it as Parcel in English.

Eg: This time for Gowrivratha, must send bhangi to all three daughters.

808. ಭಿಕ್ಷೆ: ನೋಡಿ: ಉಪನಯನ

<bhikshe> See: Upanayana

809. ಭೂಮದೂಟ: ಭೂಮದೂಟದಲ್ಲಿ ಎರಡು ಕುಡಿ ಬಾಳೇಎಲೆಗಳನ್ನು ಒಂದರಪಕ್ಕಕ್ಕೊಂದು ಹಾಸಿ ಸಿಹಿ ಪದಾರ್ಥಗಳನ್ನು ಬಡಿಸಿದಾಗ ಗಂಡು ಹೆಣ್ಣಿಗೂ, ಹೆಣ್ಣು ಗಂಡಿಗೂ ಕೈಯ್ಯಲ್ಲಿ ತಿನಿಸುತ್ತಾರೆ. ಹೆಣ್ಣು ಗಂಡಿಗೆ ತಿನಿಸುವಾಗ ಹೆಣ್ಣಿನ ಸ್ನೇಹಿತೆಯರು 'ಬೆರಳು ಜೋಪಾನ ಹುಶಾರಾಗಿರು' ಎಂದು ಚುಡಾಯಿಸುತ್ತಾರೆ.

ಸುತ್ತಲೂ ಆಪ್ತರು ಬಂಧುಬಳಗ ಸೇರಿ ರೇಗಿಸುತ್ತ ಹಾಸ್ಯಮಾಡುತ್ತಾ ಒಬ್ಬರಿಗೊಬ್ಬರು ಭಕ್ಷ್ಯಗಳನ್ನು ತಿನ್ನಿಸಲು ಒತ್ತಾಯಿಸುತ್ತಾರೆ.

ಉದಾ: ಹೂ ಲಾಡು ತಿನ್ನಿಸು (ತಿನ್ಸು) ಬಿಡಬೇಡ.

<bhoomadooTa> Special dinner for newly married couple - In Bhoomadoota spreading two plantain leaves side by side serving sweets, boy to girl, girl to boy, feed with hand. While girl feeding to boy, friends of girl saying 'be careful with finger" they cajole. Around, relatives and well-wishers will be making anger and fun, pressurizing to feed each other.

Eg: Yes, feed Laddu (laDDu) do not wait.

810. ಭೋಗ್ಯ: ಹಳ್ಳಿಗಾಡುಗಳಲ್ಲಿ ರೈತರು ಹಣ ಸಾಲಪಡೆಯಬೇಕಾದರೆ ಅದಕ್ಕೆ ಬಡ್ಡಿಯನ್ನು ಕೊಡಬೇಕು. ಬಡ್ಡಿಯ ಬದಲು ಸ್ವಲ್ಪ ಭಾಗ ಜಮೀನನ್ನಾಗಲಿ ಅಥವಾ ಮನೆಯನ್ನಾಗಲಿ ಕೆಲವು ಕಾಲದವರೆಗೆ ಸಾಲ ಕೊಟ್ಟವನಿಗೆ ಬಿಟ್ಟುಕೊಡುತ್ತಾರೆ. ಈ ಕ್ರಮಕ್ಕೆ **ಭೋಗ್ಯ** ಎನ್ನುತ್ತಾರೆ. ಸಾಲದ ಹಣ ತೀರುವವರೆಗೂ ಸಾಲ ಕೊಟ್ಟವನು ಆ ಜಮೀನಿನಲ್ಲಿ ಬರುವ ಬೆಳೆಯನ್ನು ಅನುಭವಿಸುತ್ತಾನೆ.

ಉದಾ: ಸಣ್ಣೇಗೌಡ ಕೆರೆಬಲಗಡೆ ಜಮೀನನ್ನು ತಿಮ್ಮಯ್ಯನಿಗೆ ಭೋಗ್ಯಕ್ಕೆ ಹಾಕಿದ್ದಾನೆ.

<bhoogya> Pledge - In villages farmers to get loan must pay interest. Instead of interest, they leave a portion of land or house for a few months to those who have given loan. This procedure is called bhogya. Till the loan is cleared the person who has given loan will enjoy the crops in that portion of land.

Eg: Sannegowda has pledged land right side of tank to Thimmayya.

❑

ಮ / Ma



811. ಮಂಕರಿ: ಬಿದಿರನ್ನು ತೆಳ್ಳಗೆ ಸೀಳಿ ಕುಕ್ಕೆಯಂತೆ ಹೆಣೆಯುತ್ತಾರೆ. ಅದು **ಮಂಕರಿ**. ಸಿಪ್ಪೆ ಸುಲಿದ ಅಡಕೆಯನ್ನು ಬೇರೆ ಕಡೆಗೆ ಸಾಗಿಸಲು ಇದು ಉಪಯೋಗ. ಮರದಿಂದ ಇಳಿಸಿದ ಮಾವಿನ ಕಾಯಿಗಳನ್ನು ಮಂಕರಿಯಲ್ಲಿ ತುಂಬಿ, ಹಣ್ಣು ಮಾಡಲು ಒಯ್ಯುವಾಗ ಮಂಕರಿ ಬೇಕೇ ಬೇಕು. ಬಿದಿರಿನಿಂದ ದೊಡ್ಡ ಕುಕ್ಕೆಗಳು, ಚಾಪೆ, ಅಕ್ಕಿ ಕೇರುವ ಮರ ಮುಂತಾದ ಪದಾರ್ಥಗಳನ್ನು ತಯಾರಿಸುತ್ತಾರೆ. ಹಳ್ಳಿಗಾಡುಗಳಲ್ಲಿ ಹೆಂಗಸರು ಹೆರಿಗೆಯಾದ ಮೇಲೆ, ವಾರಕ್ಕೊಂದು ಸಲವಾದರೂ ಬಿಸಿನೀರಿನಿಂದ ಸ್ನಾನ ಮಾಡಿದ ನಂತರ, ತಲೆಯ ಕೂದಲನ್ನು ಒಣಗಿಸಿಕೊಳ್ಳುವುದಕ್ಕೆ, ಬಿದಿರಿನ ಕುಕ್ಕೆಯನ್ನು ಉಪಯೋಗಿಸುತ್ತಿದ್ದರು. ಅಗ್ಗಿಷ್ಟಿಕೆಯಲ್ಲಿ ಕೆಂಡವನ್ನು ಹಾಕಿ, ದೊಡ್ಡ ಬಿದಿರಿನ ಕುಕ್ಕೆಯನ್ನು ಅದರ ಮೇಲೆ ಕವಿಚಿ, ಮೇಲೊಂದು ಬಟ್ಟೆಯನ್ನು ಹಾಕಿ, ಅದರ ಮೇಲೆ ಒದ್ದೆಯಾದ ತಲೆಯ ಕೂದಲನ್ನು ಒಣಗಿಸಿಕೊಳ್ಳುತ್ತಿದ್ದರು. ಕೆಂಡದ ಮೇಲೆ ಸಾಂಬ್ರಾಣಿ ಪುಡಿ, ಅರಿಶಿನವನ್ನು ಹಾಕಿದಾಗ ಅದರ ಬಿಸಿ ಹೊಗೆ ಒದ್ದೆಯಾಗಿರುವ ಕೂದಲನ್ನು ಒಣಗಿಸುತ್ತದೆ. ಜೊತೆಗೆ ಘಮಘಮ ವಾಸನೆಯೂ ಇರುತ್ತೆ.

ಉದಾ: ಬೇಯಿಸಿದ ಅಡಕೆನೆಲ್ಲ ಆ ಕಡೆ ಒಯ್ಯಬೇಕು ಇಪ್ಪತ್ತು ಮಂಕರಿ ತಗಂಬಾ.

ನೋಡಿ: ಕುಕ್ಕೆ

<munkari> Basket - Splitting bamboo thinly, weave like a basket. That is mankari. To transport Areca peeled of outer skin to different place this is useful. The mangos plucked from tree, to fill in mankari to shift for ripening, mankari is required essentially. With bamboo, big baskets, carpets, bamboo fan etc. are prepared. In villages, women after delivery, once a week at least, after taking bath with hot water, to dry hair, were using bamboo baskets. Putting fire in oven, covering with big bamboo basket, putting a cloth on that, they were getting hair dried.

When putting sambrani (Loban, a kind of fragrant substance) and turmeric powder, the hot fumes will dry the wet hair. Also, a nice smell will be there.

Eg: Baked areca must be shifted to that side. Bring twenty mankaris.

See: Kukke

812. ಮಂಗಳೂರುಹೆಂಚು: ನೋಡಿ: ಹೆಂಚು

<mangalooruhenchu> Mangalore tile - See: Henchu (Tile)

813. ಮಂಚಿಗೆ: ನೋಡಿ: ಅಟ್ಟಣೆ

<manchige> Raised platform - See: Attane



814. ಮಂತ್ರವಾದಿ: ಮಂತ್ರವಾದಿಯಾದವನು ಜನರ ಮನರಂಜನೆಗಾಗಿ ಆಕರ್ಷಣೀಯವಾದ ಆಟಗಳನ್ನು ಪ್ರದರ್ಶನ ಮಾಡುತ್ತಾನೆ. ಅವನ ಕೈಚಳಕದಿಂದ ಪ್ರೇಕ್ಷಕರಿಗೆ ಗೊತ್ತಾಗದಂತೆ ಚಮತ್ಕಾರವಾಗಿ ಆಟಗಳನ್ನು ತೋರಿಸುತ್ತಾನೆ. ಇದ್ದಕ್ಕಿದ್ದಂತೆ ಮಾವಿನ ಓಟೆಯನ್ನು ನೆಲದ ಮೇಲಿಟ್ಟು ಮಣ್ಣು ಮುಚ್ಚಿ ಒಂದೆರಡು ನಿಮಿಷಗಳೊಳಗಾಗಿ ಅದು ಗಿಡವಾಗಿ ಹಣ್ಣು ಬಿಟ್ಟಿರುವಂತೆ ಕಾಣುತ್ತೆ. ವಾಸ್ತವಿಕವಾಗಿ ಹಾಗಾಗಲು ಸಾಧ್ಯವಿಲ್ಲ. ಅದನ್ನು **ಕಣ್ಣುಕಟ್ಟು** ಎಂದು ಹೇಳುತ್ತಾರೆ.

ಉದಾ: ನಮ್ಮೂರ ಮಂಜಣ್ಣ ನಮ್ಮ ತಂದೆ ಕಾಲದಲ್ಲಿ ಭಾರಿ ಮಂತ್ರವಾದಿ ಆಗಿದ್ದ.

ನೋಡಿ: ಜಾದೂಗಾರ, ಯಕ್ಷಿಣಿಕಾರ, ಮೋಡಿಯವನು

<manthravaadi> Magician - The person who is a magician, for entertainment of people, demonstrates attractive plays. With his dexterity, without knowing to audience, skillfully shows the games. Suddenly putting the mango seed on ground covering soil, within a minute or two, it grows as plant and fruit seen. Naturally, it is not possible. They say it is mesmerism.

Eg: Manjanna of our place, in our father's time, was a great magician.

See: Jadugara, Yakshinikara, Modiyavanu.

815. ಮಂತ್ರಾಕ್ಷತೆ: ಮದುವೆ, ಮುಂಜಿ, ನಾಮಕರಣ, ಗೌರಿ–ಗಣಪತಿವ್ರತ ಮುಂತಾದ ಶುಭ ಕಾರ್ಯಕ್ರಮಗಳಲ್ಲಿ ಅಕ್ಕಿಯನ್ನು ಅರಿಶಿನ ಅಥವಾ ಕುಂಕುಮದಲ್ಲಿ ಬೆರೆಸಿ **ಮಂತ್ರಾಕ್ಷತೆ**ಯಾಗಿ ಬಳಸುತ್ತಾರೆ. ಅಶುಭಕಾರ್ಯಗಳಲ್ಲಿ ಬರೀ ಅಕ್ಕಿಯನ್ನು ಉಪಯೋಗಿಸುತ್ತಾರೆ.

ಉದಾ: ಮಂತ್ರಾಕ್ಷತೆಗಳಲ್ಲಿ ಕೆಂಪು ಮಂತ್ರಾಕ್ಷತೆ, ಹಳದಿ ಮಂತ್ರಾಕ್ಷತೆ ಎಂದು ಎರಡು ವಿಧ.

<manthraakshathe> (-) Consecrated coloured rice - Marriage, Thread Ceremony, Naming Ceremony, Gowri-Ganesha etc. auspicious occasions, rice mixing turmeric powder or Kunkum use as manthrakshate. During inauspicious functions mere rice, they use.

Eg: Among manthrakshate, red manthrakshate and yellow manthrakshate two types.

816. ಮಂಡಿ: ದವಸಧಾನ್ಯಗಳನ್ನು ಒಟ್ಟಾಗಿ ಸಗಟಾಗಿ ವ್ಯಾಪಾರ ಮಾಡುವ ಸ್ಥಳವನ್ನು ಮಂಡಿ ಎಂದು ಕರೆಯುತ್ತಾರೆ.

ಉದಾ: ಹರಿಯಪ್ಪನವರ ಮಂಡೀಲಿ ನಾಲ್ಕುಮೂಟೆ ಅಕ್ಕಿ ಊರಿಗೆ ಕಳಿಸು.

<manDi> Wholesale shop - Place where selling commodities wholesale call it as Mandi.

Eg: From Hariyappa's shop send four bags of rice to village.

817. ಮಂದಲಿಗೆಚಾಪೆ: ಒಂದು ವಿಧವಾದ ನೊಜೆಹುಲ್ಲಿನಿಂದ ಹೆಣೆದಿರುವ ಚಾಪೆ. **ಮಂದಲಿಗೆಚಾಪೆ**ಯನ್ನು ಮಡಿಬಟ್ಟೆಯನ್ನುಟ್ಟು ಕೆಲಸ ಮಾಡುವಾಗ ಮಾತ್ರ ಉಪಯೋಗಿಸುತ್ತಾರೆ. ಒಬ್ಬೊಬ್ಬರೆ ಕುಳಿತುಕೊಳ್ಳುವಂತಹ ಚೌಕಟ್ಟಾದ ಜಾಪೆಯೂ ಇರುತ್ತದೆ. ನೀರು ಚುಮಿಕಿಸಿ ಒರೆಸಿಡಬಹುದು.

ಉದಾ: ಮಡಿ ಉಟ್ಕಂಡಿದೀನಿ ಆ ಮಂದಲಿಗೆಚಾಪೆ ಈ ಕಡೆ ಇಟ್ಬಿಡು.


<mandaligechaape> Mat - Carpet made of a kind of

grass. Mandalige carpet is used only when one wearing madi clothes. Square carpet is also there where only one can sit. Sprinkling water, wash and keep.

Eg: I will wear madi and come. Keep mandalige carpet this side.

818. ಮಕರತೋರಣ: ನೋಡಿ: ತೋರಣ

<makarathooraNa> A kind of banner - See: Thorana



819. ಮಗ್ಗ: (ಕೈಮಗ್ಗ) ಉಡುವ ಬಟ್ಟೆ (ಪಂಚೆ, ಸೀರೆ), ಜಮಖಾನ ಮುಂತಾದುವುಗಳನ್ನು ನೇಯಬೇಕಾದರೆ **ಮಗ್ಗ** ಬೇಕಾಗುತ್ತದೆ. ಬಟ್ಟೆಯನ್ನು ತಯಾರು ಮಾಡಲು ಅವಶ್ಯಕವಾದ ದಾರದ ಉಂಡೆಗಳನ್ನು ಮೇಲೆ ಸಾಲಾಗಿ ಜೋಡಿಸಿರುತ್ತಾರೆ. ಮಗ್ಗದ ಹಿಡಿಯನ್ನು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಬದಲಾಯಿಸುತ್ತ ಹೋದಾಗ ದಾರ ಒಂದಕ್ಕೊಂದು ಹೆಣೆದುಕೊಂಡು ಬಟ್ಟೆಯಾಗುತ್ತೆ. ಬಣ್ಣಬಣ್ಣದ ದಾರಗಳನ್ನು ಉಪಯೋಗಿಸಿ ತರಹಾವಾರಿ ಬಟ್ಟೆಗಳನ್ನು ಮಾಡುತ್ತಾರೆ. ಹಳೇಮಗ್ಗಗಳನ್ನು ಕೈಮಗ್ಗ ಎನ್ನುತ್ತಾರೆ. ಹೊಸಮಗ್ಗಗಳು ವಿದ್ಯುತ್‌ಮಗ್ಗಗಳಾಗಿವೆ.

ಉದಾ: ಹಿಂದಿನ ರಸ್ತೇಲಿ ನಾಲ್ಕೈದು ಮನೆಯೋರು ಕೈಮಗ್ಗ ಹಾಕಿದಾರೆ.

ಶಂಕರಪ್ಪನ ಮನೇಲಿ ವಿದ್ಯುತ್ ಮಗ್ಗ ಇದೆ.

<magga> Weaver's loom - To weave wearing clothes (dhothi, saree), carpet etc. magga is required. For wearing cloth, the required thread rolls are attached on top in a row. The handle of loom when changed from left to right, right to left, thread weaved one to another becomes cloth. Using different color thread, manufacture varieties of cloth. Old looms they say Handloom. New looms have become electric looms.

Eg: On back road four to five houses have put handlooms.

Shankarappa has electric looms in his home.

820. ಮಗುಟ: ರೇಷ್ಮೆ ಅಥವಾ ಕತ್ತಾಳೆನಾರಿನಿಂದ ಮಾಡಿರುವ ಬಟ್ಟೆಗೆ **ಮಗುಟ** ಎಂದು ಹೇಳುತ್ತಾರೆ. ಕತ್ತಾಳೆನಾರನ್ನು **ಕಿತ್ತಾನಾರು** ಎಂದೂ ಕರೆಯುತ್ತಾರೆ. ಪೂಜೆ

ಪುನಸ್ಕಾರಗಳನ್ನು ಮಾಡುವಾಗ ಮಗುಟವನ್ನು ಉಡುವುದಕ್ಕೂ ಹೊದೆಯುವುದಕ್ಕೂ ಉಪಯೋಗಿಸುವುದು ವಾಡಿಕೆ. ಮಡಿಗೆ ರೇಷ್ಮೆ ಮಗುಟವನ್ನು ಬಳಸುತ್ತಾರೆ.

ಉದಾ: ಮಗುಟ ಉಟ್ಕಂಡ್‌ಹೋಗಿ ಎರಡು ಕೊಡ ನೀರು ತಗಂಬಾ.

<maguTa> Silk dothi - Cloth made of silk or jute fiber is called Maguta. Kathhale fiber is also called as Kithhanaru. When doing Puja, it is customary to use maguta for wearing. For madi use silk maguta.

Eg: Wearing maguta, bring two vessels of water.

821. ಮಜ್ಜಲಿಪುಡಿ: ಮಜ್ಜಲಿಪುಡಿ ಒಂದು ವಿಧವಾದ ಗಿಡದ ಎಲೆಯಿಂದ ತಯಾರಾದುದು. ಆ ಎಲೆಗಳನ್ನು ಚೆನ್ನಾಗಿ ಒಣಗಿಸಿ ಪುಡಿ ಮಾಡುತ್ತಾರೆ. ಮಜ್ಜಲಿಪುಡಿಯನ್ನು ಸೀಗೇಪುಡಿಯೊಂದಿಗೆ ಬೆರಸಿ, ಎಣ್ಣೆ ಸ್ನಾನ ಮಾಡುವಾಗ ಮೈಗೆ ಉಜ್ಜಿದರೆ, ಎಣ್ಣೆಯ ಜಿಡ್ಡೆಲ್ಲ ಹೋಗಿ ಮೈಗೆ ಹೊಳಪು ಕೊಡುತ್ತದೆ.

ಉದಾ: ನಾಳೆ ಸಂತೆಗೆ ಹೋದಾಗ ಮಜ್ಜಲಿಪುಡಿ ಕೊಂಡ್ಕಂಡ್ಬಾ.

<majjalipuDi> Majjalipudi is made of a kind of leaf of a plant. They dry those leaves and make powder. Mixing majjalipudi with Sigepudi (seekkai) while taking bath if rubbed on body, the stickiness of oil will clear and gives shining to body.

Eg: When you go to flea market tomorrow, buy majjalipudi and bring.

822. ಮಜ್ಜಿಗೆಹುಳಿ: ನೋಡಿ: ಹುಳಿ


<majjigehuLi> Sambar made with curd - See: Huli, Sambar.

823. ಮಡಕೆ: ನೋಡಿ: ಕುಡಿಕೆ, ಕುಂಡ, ಗಡಿಗೆ, ಕುಂಭ

<maDake> Pot - See: Kudike, Kunda, Gadige, Kumba

824. ಮಡಿಕೋಲು: ಒಗೆದು ಒದ್ದೆಯಾಗಿರುವ ಬಟ್ಟೆಗಳನ್ನು ಯಾರೂ ಮುಟ್ಟದಂತೆ ಒಣಗಿಸಲು ಗಳುವಿನ ಮೇಲೆ ಹರಡುವುದಕ್ಕೆ ಉಪಯೋಗಿಸುವ ಮರದ ಕೋಲೇ **ಮಡಿಕೋಲು**. ಹಬ್ಬಹರಿದಿನಗಳಲ್ಲಿ ರವೆಯಿಂದ ಮಾಡಿದ ಶ್ಯಾವಿಗೆಯನ್ನು ಒಣಗಿಸಲು ಮಡಿಕೋಲನ್ನು ಆ ಪಕ್ಕ ಈ ಪಕ್ಕ ಎರಡು ಡಬ್ಬಗಳ ಮೇಲೆ ಇಟ್ಟು5

ಮರದ ಕೋಲಿನ ಮೇಲೆ ಹರಡುತ್ತಿದ್ದರು.



ಉದಾ: ಆ ಕಡೆ ಈ ಕಡೆ ಒಂದೊಂದು ಡಬ್ಬ ಇಟ್ಟು ಅದರಮೇಲೆ ಮಡಿಕೋಲಿಡು, ಶ್ಯಾವಿಗೆ ಹಾಕ್ತೀನಿ.

<maDikoolu> (-) A long bamboo stick - The bamboo stick used to dry washed wet clothes, not to be touched by anyone, is madikolu. During festival days vermicelli made of rava for drying, keep madikolu on two tins this side and that side, were spreading.

Eg: Keeping on each side a tin and put madikolu. Will spread vermicelli.

825. ಮಡಿಪಂಚೆ: ನೋಡಿ: ಛೋಟಾಪಂಚೆ, ಅಂಗವಸ್ತ್ರ

<maDipanche> Clean washed cloth - See: Chotapanche, Angavasthra


826. ಮಡಿಲುತುಂಬುವುದು: ಮದುವೆ ಕಾರ್ಯಕಲಾಪಗಳು ಪ್ರಾರಂಭವಾದ ಮೇಲೆ ವರಪೂಜೆಯಾದ ನಂತರ ಗಂಡಿನ ತಾಯಿ, ಮದುವೆಯ ಹುಡುಗಿಯನ್ನು ಹಸೆಯ ಮೇಲೆ ಕೂರಿಸಿ ಅವಳ ಮಡಿಲಿಗೆ ಸೀರೆ, ಕುಪ್ಪಸ, ಹೂವು ಹಣ್ಣು, ಕೊಬರಿ ತುಂಬುತ್ತಾರೆ. ಈ ಕಾರ್ಯಕ್ರಮವೇ **ಮಡಿಲುತುಂಬುವುದು.**



<madiluthumbuvudu> After commencement of marriage functions, after Varapuje, the bridegroom's mother seating the bride on decorated plank, for her pouch like fold on saree fill saree, blouse, flower, fruit, dry coconut. This function is madiluthumbuvudu.

827. ಮಡಿವಾಳ: ನೋಡಿ: ಅಗಸ

<maDivaaLa> See: Dhobi



828. ಮಣಕ: ಕರು ಬೆಳೆದು ವಯಸ್ಸಾದಾಗ ಅದನ್ನು **ಮಣಕ** ಎನ್ನುತ್ತಾರೆ. ಮಣಕದ ಮೇಲೆ ಹೋರಿಯನ್ನು ಹಾಯಿಸಿ ಅದು ಗಬ್ಬವಾಗುವಂತೆ ಮಾಡುತ್ತಾರೆ. ಅದು ಗಬ್ಬವಾಗಿ ಕರುಹಾಕಿದ ನಂತರ ಹಾಲು ಕೊಡಲು ಸಿದ್ಧವಾಗುತ್ತೆ.

ಉದಾ: ನಮ್ಮನೆ ಬಿಳೀಕರು ಮಣಕ ಆಗಿದೆ ಹೋರಿಹಾಯಿಸ್ಬೇಕು.


<maNaka> Youthful buffalo or cow - The cow which is young in years and in the heat. Then it is matched with a heifer calf and it gives birth to a calf and yeilds milk.

829. ಮದಗ: ಮಳೆ ಜಾಸ್ತಿಯಾಗಿ ಕೆರೆ ತುಂಬಿದಾಗ ತೂಬಿನಮೇಲೆ ನೀರು ಬಂದು ಕೋಡಿಬಿದ್ದು ಕಾಲುವೆಯ ಮುಖಾಂತರ ಹೊರಗೆ ಹರಿಯುತ್ತದೆ. ಅದನ್ನು ಕೆರೆ **ಮದಗ** ಬಿದ್ದಿದೆ ಎನ್ನುತ್ತಾರೆ. ತೂಬಿನ ಕಲ್ಲನ್ನೆತ್ತಿ ಹೆಚ್ಚಿಗೆ ಇರುವ ನೀರನ್ನು ಹೊರಕ್ಕೆ ಬಿಡುತ್ತಾರೆ.

ಉದಾ: ಬುಕ್ಕಾಂಬುಧಿ ಕೆರೆ ಎರಡು ವರ್ಷವೂ ಮದಗಬಿದ್ದಿತ್ತು.

<madaga> Sluice of a tank - Raining too much, when tank is full, water flows out above the sluice of the tank. They call it as Madaga (canal). Lifting the stone of sluice, they flow the excess water.

Eg: Bukkambudhi tank had madaga on both two years.



830. ಮದನಿಂಗ: ಮದುವೆಯಾಗುವ ಗಂಡನ್ನು **ಮದನಿಂಗ** ಎಂದು, ಮದುವೆಯಾಗುವ ಹೆಣ್ಣನ್ನು **ಮದಲಗಿತ್ತಿ** (ಮೊದಲಗಿತ್ತಿ) ಎಂದು ಕರೆಯುತ್ತಾರೆ. ಮದನಿಂಗನಿಗೆ ತಲೆಯ ಮೇಲೆ ಕುಚ್ಚಿನ ಕೆಂಪು ರೇಷ್ಮೆ ಪೇಟವನ್ನಿಟ್ಟು, ಮದಲಗಿತ್ತಿಗೆ ಹೊದಿಕೆ ಸೀರೆಯನ್ನು ಬೆನ್ನಿನ ಮೇಲೆ ಹಾಕಿ ದೇವರಗುಡಿಗೆ ವಾದ್ಯಸಮೇತ ಕರೆದುಕೊಂಡು ಹೋಗುತ್ತಾರೆ.

ಉದಾ: ಮದನಿಂಗನ ತಲೇಮೇಲೆ ರೇಷ್ಮೆಪೇಟ ಇಡು.

ಶಬ್ದರೂಪ: (ಮದಲಿಂಗ) ಮದನಿಂಗ

<madaninga> (-) For boy to be married Madaninga, girl to be married, they call madalagithhi (modalagithhi). For

madaninga on head, keeping a red silk turban a tuft tied at the end. For madalagithhi putting a covering saree on back take them to the temple with band.

Eg: Put silk turban on madaninga's head.


Different version: (madalinga) madaninga.

831. ಮನೆತುಂಬಿಸುವುದು: ಮನೆತುಂಬಿಸುವ ಶಾಸ್ತ್ರದಲ್ಲಿ ಗಂಡಿನ ಮನೆಯವರ ಬಾಗಿಲ ಹೊಸಿಲಿನ ಮೇಲೆ ಅಳೆಯುವ ಅಕ್ಕಿಸೇರಿನಲ್ಲಿ ಅಕ್ಕಿಯನ್ನು ತುಂಬಿ ಇಟ್ಟಿರುತ್ತಾರೆ. ವರ–ವಧುವಿಗೆ ಬಾಗಿಲಲ್ಲಿ ಆರತಿಯಾದ ಮೇಲೆ ಹೊಸಲ ಮೇಲಿದ್ದ ಅಕ್ಕಿಯ ಸೇರನ್ನು ಬಲಕಾಲಿನಿಂದ ಚಿಮ್ಮಿ ಒಳಕ್ಕೆ ಹೋಗುತ್ತಾಳೆ. ಸೇರನ್ನು ಒದ್ದಾಗ ಅಕ್ಕಿ ಎಷ್ಟು ಹರಡಿಕೊಳ್ಳುತ್ತದೋ ಅಷ್ಟುದ್ದ ಆ ಮನೆಗೆ ಸೊಸೆ ಭಾಗ್ಯತರುತ್ತಾಳೆ ಎಂಬುದು ನಂಬಿಕೆ.

ಉದಾ: ಶಾರದಾ, ಅಕ್ಕಿ ಸೇರನ್ನ ಜೋರಾಗಿ ಒದಿ ಕಾಲಿನಿಂದ, ಒಳಕ್ಕೆ ಬಲಗಾಲನ್ನಿಡು.

<manethumbisuvudu> Receiving the bride ceremoniously - In the ritual of receiving bride to the house of husband, at the bottom of front door of bridegroom's house, will have kept rice in a measuring seer. After doing arati to bride and bridegroom, after striking the seer with her right leg enters the house. When striking the seer, how much length the rice spreads that much the daughter in law brings fortune is the belief.

Eg: Sharada, strike with force, put inside the right leg.



832. ಮನೆದೇವರು: ಮನೆದೇವರನ್ನು ಬಾಯಿ ಮಾತಿನಲ್ಲಿ ಮಂದೇವರು ಎನ್ನುತ್ತಾರೆ. ಒಬ್ಬೊಬ್ಬರ ಮನೆಯವರೂ ಅವರ ವಂಶಪಾರಂಪರ್ಯವಾಗಿ ಆಚರಿಸಿಕೊಂಡು ಬಂದ ಸಂಪ್ರದಾಯಗಳಂತೆ, **ಮನೆದೇವರ ಪೂಜೆಯನ್ನು** ಮದುವೆಯ ಪ್ರಾರಂಭದಲ್ಲಿ ಮಾಡುತ್ತಾರೆ. ನಾಲ್ಕೈದು ಅಡಿ ಉದ್ದದ ಬಿದಿರುಕೋಲಿಗೆ ಹೊಸ ಸೀರೆ, ಕುಬುಸದ ಬಟ್ಟೆಯನ್ನು ಸುತ್ತಿ, ಸಣ್ಣ ಚಿನ್ನದ ತಾಳಿಯನ್ನು ಕಟ್ಟಿ, ಮಾವು, ಬಿಲ್ವಪತ್ರೆ, ಎಕ್ಕದ ಎಲೆ ಮುಂತಾದ ಎಲೆಗಳನ್ನು ಕಟ್ಟಿ, ಆ ಕೋಲನ್ನು ತಟ್ಟೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ಈ ಎಲೆಗಳು ಒಂದೊಂದು ಮನೆತನಕ್ಕೂ ಬೇರೆ ಬೇರೆ ಇರುತ್ತೆ. ಮದುವೆಯ ಮಂಗಳಕಾರ್ಯಗಳು ಮುಗಿದ

ನಂತರ ಮನೆದೇವರ ವಿಸರ್ಜನೆ ಮಾಡಿ ಅದಕ್ಕೆ ಕಟ್ಟಿದ್ದ ಸೀರೆ ಕುಬುಸದ ಬಟ್ಟೆಯನ್ನು ಯಾರಾದರು ಹೆಣ್ಣು ಮಕ್ಕಳಿಗೆ ಕೊಡುತ್ತಾರೆ. ಮನೆದೇವರನ್ನು ಕುಲದೇವತೆ ಎಂದೂ ಕರೆಯುತ್ತಾರೆ.

ಉದಾ: ಮನೆದೇವರನ್ನು ಈ ಮೂಲೇಲಿ ಇಡಿ.

<manedeevaru> Family deity - They call casually as mandevaru for manedevaru. People of each house as per the customs followed traditionally, do worshipping manedevaru at the beginning of marriage. For a bamboo stick of four to five feet length, tying a new saree, blouse cloth a small gold thali (mangalya), tying mango, Bilva leaf, Ekka leaf. Keeping that in a plate worship. These leaves will be different for each family. After all the marriage rituals are over, sending the deity, the saree and blouse piece will be given to any girl. Manedevaru is also called as Kuladevaru.

Eg: Keep manedevaru in this corner.

833. ಮನೆಮುಂದೆ ಕೂಗುವವರು: ಮನೆ ಮುಂದೆ ರಸ್ತೆಗಳಲ್ಲಿ ವ್ಯಾಪಾರ ಮಾಡುವವರು ವಿವಿಧ ವೃತ್ತಿಗಳವರು ಕೂಗಿಕೊಂಡು ಬರುವುದು ಹಿಂದಿನ ಕಾಲದ ಪದ್ಧತಿ. ಹಳೇಪೇಪರ್, ಖಾಲಿಸೀಸಾಯಿ ಎಂದು ಕಡ್ಡಿಕಾಗದ, ಹಳೇಬರೇ ಸೀರೆಗಳನ್ನು ಕೊಂಡುಕೊಳ್ಳುವವರು ಬರುತ್ತಿದ್ದರು. ಹಾಗೇ ಮೊಸರು ಮಾರುವವರು ಬರುತ್ತಿದ್ದರು. ಈಗ ಬೆಂಗಳೂರಿನ ಬಡಾವಣೆ ರಸ್ತೆಗಳಲ್ಲಿ ತರಕಾರಿ ಬೇಕಾ ಎಂದು ಕೂಗುವವರನ್ನು ಕಾಣುತ್ತೇವೆ. ಮನೆಯವರು ಕರೆದಾಗ ಅವರ ಮನೆಮುಂದೆ ನಿಂತು ವ್ಯಾಪಾರ ಮಾಡುತ್ತಿದ್ದರು.

ಉದಾ: ತರಕಾರಿಯವಳು ಕೂಗುತ್ತಿದ್ದಾಳೆ ಕರಿ ಅವಳನ್ನ.

<manemunde kooguvavaru> **Sellers** of different professions - In front of house on roads, sellers are of several professions coming shouting is ancient system. Buying of old paper, empty bottles, kaddi kaagada, old sarees, were coming. Likewise, sellers of milk, curds were coming. Now in roads of extensions in Bengaluru, people shouting, want vegetables we see. When house owners call standing before their house, were doing business.

Eg: Vegetable seller is shouting. Call her.

834. ಮನೆಮುಂದೆ ಬೆಂಕಿ: ಹಳ್ಳಿಗಳಲ್ಲಿ ಯಾರ ಮನೆಯಲ್ಲಾದರು ಸಾವಾಗಿದ್ದರೆ ಕೂಡಲೆ ಮನೆಯ ಮುಂದುಗಡೆ ಒಂದೆರಡು ಸೌದೆ ತುಂಡುಗಳನ್ನಿಟ್ಟು ಬೆಂಕಿ ಹಾಕಿರುತ್ತಾರೆ. ಅದನ್ನು ನೋಡಿದ ತಕ್ಷಣ ಅವರ ಮನೆಯಲ್ಲಿ ಯಾರಾದರು ಸತ್ತಿದ್ದಾರೆಂದು ತಿಳಿಯಬಹುದು. ಮನೆಯ ಹೊಸಿಲಿನ ಮೇಲೆ ರಂಗೋಲಿ ಇರುವುದಿಲ್ಲ. ಭಟ್ಟರು ಕೈಯ್ಯಲ್ಲಿ ತಾಮ್ರದ ಪಂಚಪಾತ್ರೆ, ದರ್ಭೆ ಹಿಡಿದುಕೊಂಡು ಬರುತ್ತಿದ್ದರೆ ಅವರು ಯಾರದೋ ಮನೆಯ ಅಶುಭಕಾರ್ಯಕ್ಕೆ ಹೊರಟಿದ್ದಾರೆಂದೇ ಅರ್ಥ.

ಉದಾ: ರಾಮಣ್ಣ ಅವರ ಮನೆಮುಂದೆ ಬೆಂಕಿ ಹಾಕಿದೆ, ಬಹುಶಃ ಅವರ ಅಜ್ಜಿ ಸತ್ತಿರಬೇಕು.

<manemunde benki> (-) Fire in front of house - If anyone has died in anybody's house in the village, immediately in front of their house, placing one or two firewood and put fire. After seeing that we can understand that someone has died in their house. At bottom of front door there will be no Rangoli. If Purohit holding copper vessel and darbhe in his hand means, he is going for an inauspicious function in somebody's house.

Eg: Fire is put in front of Ramanna's house. Perhaps his grandmother must have died.

835. ಮನೆವೈದ್ಯ: ನೋಡಿ: ಕೈಔಷಧಿ

<manevaidya> See: Kaioushadhi (native medicine)

836. ಮಮ್ಮಟಿ: ನೋಡಿ: ಎಲೆಗುದ್ದಲಿ

<mammaTi> See: Eleguddali (Spade)

837. ಮದುವೆಯ ಮೊದಲನೆ ಕಾರ್ಯಕ್ರಮ: ಮದುವೆ ಚಪ್ಪರದಲ್ಲಿ ಹೆಣ್ಣಿನ ಕಡೆಯವರು ಬೀಗರನ್ನು ಎದುರುಗೊಳ್ಳಲು ಸಿದ್ಧವಾಗಿರುತ್ತಾರೆ. ಅವರು ಬಂದ ಕೂಡಲೆ ಹೆಣ್ಣಿನ ಕಡೆಯವರು ಅವರ ತಲೆಯ ಮೇಲೆ ಪುರೋಹಿತರು ಕೊಟ್ಟ ಭತ್ತದ ಅರಳು ಮಂತ್ರಾಕ್ಷತೆಯನ್ನು ಹಾಕುತ್ತಾರೆ. ಅನಂತರ ಬೀಗರ ಪ್ರವೇಶ. ಕಾಫ಼ಿ ತಿಂಡಿ ಸಮಾರಂಭಗಳಾದ ಮೇಲೆ ಕಾರ್ಯಕ್ರಮಗಳು ಶುರುವಾಗುತ್ತವೆ.

ಉದಾ: ಎಲ್ಲಾ ಬನ್ನಿ ಬೀಗರು ಬರುತ್ತಿದ್ದಾರೆ ಎದುರುಗೊಳ್ಳಬೇಕು.

<maduveya modalane kaaryakrama> (-) First program of marriage function - In the marriage pandal the bride's party will be ready to welcome the bridegroom's party. Immediately after their arrival the bride's party will put aralu (parched paddy) and manthrakshate given by the Purohit on their head. Then entering of beegas (bridegroom's party). After coffee and tiffin, the programs commence.

Eg: Come everyone. The bridegroom's party is arriving. Must welcome.

838. ಮರಣಸಂಸ್ಕಾರ: **ಮರಣಸಂಸ್ಕಾರ**ವನ್ನು ಮುಂಜಿಯಾದ ಮಗ ಮಾಡುವುದು. ಮಕ್ಕಳೇ ಇಲ್ಲದಿದ್ದವರ ಸಂಸ್ಕಾರವನ್ನು ಯಾರು ಬೇಕಾದರೂ ಮಾಡಬಹುದು. ನಿಧನರಾಗಿ ಮೂರನೇ ದಿವಸದ ದಿನ ಸತ್ತವನ ಅಸ್ಥಿಯನ್ನು ಒಂದು ಮಣ್ಣಿನ ಮಡಕೆಯಲ್ಲಿಟ್ಟುಕೊಂಡು ಯಾವುದಾದರೂ ನದಿ ಅಥವಾ ಕೆರೆಯಲ್ಲಿ ಬಿಟ್ಟು ಬರುತ್ತಾರೆ. ಹನ್ನೊಂದು ದಿವಸಗಳವರೆಗೆ ಮನೆಯ ಉಳಿದವರಿಗೆಲ್ಲ ಸೂತಕವಿರುತ್ತೆ. ಹದಿನಾಲ್ಕನೆಯ ದಿವಸ ಶುಭ. ಆ ದಿನ ಸತ್ತವನ ಗಂಡು ಮಕ್ಕಳಿಗೆ ನೆಂಟರಿಷ್ಟರೆಲ್ಲರೂ ಹೊಸ ಬಟ್ಟೆಯನ್ನು ಕೊಡುತ್ತಾರೆ.

ಉದಾ: ಈವತ್ತು 14ನೇ ದಿನ ಹೊಸಬಟ್ಟೆ ಕೊಡಬೇಕು.

<maraNasamskaara> Death ceremony to be done by son who has become brahmachari. For one who has no children anybody can perform it. Third day after death, the remnant ash keeping it in a mud pot, will immerse into any river or tank and come back. For eleven days the remaining house members will have Sutaka (impurity resulting from death). Fourteenth day is auspicious. On that day for sons of the deceased all relatives will offer new clothes.

Eg: Today is fourteenth day. Must give new clothes.

839. ಮರಮುಟ್ಟು: ಮನೆಯ ಕಟ್ಟಡವನ್ನು ಕಟ್ಟುವಾಗ ಬೇಕಾಗುವ ಬಾಗಿಲುವಾಡ, ಕದ, ಕಿಟಕಿ, ತೊಲೆ, ನಾಗೊಂದಿಗೆ, ಅಟ್ಟ, ಅಲಮಾರು, ಮರದ ಏಣಿ, ಹಲಗೆ ಇವೆಲ್ಲಕ್ಕೂ **ಮರಮುಟ್ಟು** ಎನ್ನುತ್ತಾರೆ.

ಉದಾ: ಎಲ್ಲ ಮರಮುಟ್ಟು ಬಂದಾಗಿದೆ ಕಟ್ಟಡ ಶುರುಮಾಡ್ಬಿಡಿ.

<maramuTTu> Domestic wood work - When building a house, the required doorframe, door, window, roof, nagondige, platform, almirah, wooden ladder, plank all is called maramuttu (domestic woodwork).

Eg: All woodwork has come. Start building work.

840. ಮರ ಹೊಡೆಯುವುದು: ನೇಗಿಲಿನಿಂದ ನೆಲವನ್ನು ಉತ್ತಿದ ನಂತರ ಮಣ್ಣು ಹೆಂಟೆಹೆಂಟೆಯಾಗಿರುತ್ತೆ. ಅದನ್ನು ಸಮಮಟ್ಟ ಮಾಡಲು ಭಾರವಾದ ಮರದ ಕೊರಡನ್ನು ನೊಗಕ್ಕೆ ಕಟ್ಟಿ ಎತ್ತುಗಳಿಂದ ಎಳೆಸಿದರೆ ಮಣ್ಣಿನ ಹೆಂಟೆಗಳು ಹುಡಿಹುಡಿಯಾಗಿ ನೆಲ ಸಮಮಟ್ಟವಾಗುತ್ತೆ. ಹಾಗೆ ಮಾಡುವುದನ್ನು **ಮರಹೊಡೆಯುವುದು** ಎಂದು ಹೇಳುತ್ತಾರೆ.

ಉದಾ: ಇವತ್ತೆಲ್ಲ ಮರಹೊಡೆದು ಮುಗಿಸಿಬಿಟ್ಟರೆ, ನಾಳೆ ಬೀಜ ಬಿತ್ತಬಹುದು.

<marahoeDeyuvudu> (-) Level the ploughed land - After ploughing the ground, soil will be in lump. To level that, tying a weighty wooden log (Stamper) pulled by oxen, the mud lumps will break, ground becomes levelled. That procedure is called as marahodeyuvudu (Levelling the ground).

Eg: Today if you complete levelling the ground tomorrow can sow seeds.

841. ಮರಳುಕಾಂತಿ ಭತ್ತ: ಕೆಂಪು ಬಣ್ಣದ ಭತ್ತವನ್ನು **ಮರಳುಕಾಂತಿ ಭತ್ತ** ಎನ್ನುವುದು ರೂಢಿಯಲ್ಲಿದೆ. ಈ ಭತ್ತದಿಂದ ಬರುವ ಅಕ್ಕಿಯಲ್ಲಿ ಅನ್ನ ಮಾಡಿದರೆ ಬಹಳ ರುಚಿಯಾಗಿರುತ್ತೆ. ಮತ್ತು ಆರೋಗ್ಯಕರವಾದದ್ದು. ಭತ್ತವನ್ನು ಬೇಯಿಸಿ ಕಬ್ಬಿಣದ ಬಾಣಲೆಯಲ್ಲಿ ಹುರಿದು, ಒರಳಿನಲ್ಲಿ ಕುಟ್ಟಿದರೆ ಅದು ಅವಲಕ್ಕಿ ಎನಿಸುತ್ತದೆ. ಅವಲಕ್ಕಿಯನ್ನು ನೀರಿನಲ್ಲಿ ನೆನೆಸಿ ಹಿಂಡಿದರೆ ನೀರು ಬೇರೆಯಾಗಿ ಮೆತ್ತಗಿರುವ ಅವಲಕ್ಕಿಯಾಗುತ್ತೆ. ಅದಕ್ಕೆ ತೆಂಗಿನಕಾಯಿ ತುರಿ, ಒಗ್ಗರಣೆ ಹಾಕಿ ಉಪಹಾರವಾಗಿ ಬಳಸುತ್ತಾರೆ. ಸಾಮಾನ್ಯವಾಗಿ ಮರಳುಕಾಂತಿ ಭತ್ತ ಎಲ್ಲ ಪ್ರದೇಶದಲ್ಲೂ ಬೆಳೆಯುವುದಿಲ್ಲ.

ಉದಾ: ಈ ವರ್ಷ ನಮಗೆ 20 ಚೀಲ ಮರಳುಕಾಂತಿ ಭತ್ತ ಬಂತು.

<maraLukaanthibhathha> A variety of red paddy - It is in usage to call red color paddy as Maralukanti paddy. If rice is prepared out of this paddy, it will be tasty. Also, healthy. Baking paddy, frying in iron pan, if pounded in millstone, it is

called as Poha (beaten rice). If it is soaked in water and squeeze water will separate. Poha becomes soft. For that mixing grated coconut and put vagar they use as tiffin. Generally, maralukanti paddy will not grow in all places.

Eg: This year we got twenty bags of maralukanti paddy

842. ಮಳ್ನೀರು ಎರೆಯುವುದು: ನೋಡಿ: ಎಣ್ಣೆಶಾಸ್ತ್ರ

<malneeruereyuvudu> See: Enneshastra



843. ಮಸೆಗಲ್ಲು: ಕೊಡಲಿ, ಮಚ್ಚು, ಕುಡುಗೋಲು, ಎಲೆಗುದ್ದಲಿ ಮುಂತಾದ ಆಯುಧಗಳು ಸವೆದುಹೋದಾಗ, ಉಜ್ಜಿ ಹರಿತ ಮಾಡುವುದಕ್ಕೆ ಉಪಯೋಗಿಸುವ ಕಲ್ಲಿಗೆ **ಮಸೆಗಲ್ಲು** ಎಂದು ಹೆಸರು. ಮಸೆಗಲ್ಲಿನ ಮೇಲೆ ಬೆಣಚುಕಲ್ಲಿನ ಸಣ್ಣ ಪುಡಿಯನ್ನು ಹಾಕಿ ಅದರ ಮೇಲೆ ಆಯುಧಗಳನ್ನು ಉಜ್ಜಿದಾಗ ಅವುಗಳ ಅಲಗು ಹರಿತವಾಗುತ್ತೆ. ಹಳ್ಳಿಗಳಲ್ಲಿ ಎಲ್ಲರ ಮನೆಯ ಮುಂದೆಯೆ ಮಸೆಗಲ್ಲನ್ನು ಇಟ್ಟುಕೊಂಡಿರುತ್ತಾರೆ. ಗದ್ದೆಗೆ, ತೋಟಕ್ಕೆ ಹೊರಡುವ ಮುಂಚೆ ಕುಡುಗೋಲನ್ನು ಹರಿತ ಮಾಡಿಕೊಳ್ಳುತ್ತಾರೆ.

ಉದಾ: ಕುಡುಗೋಲು ತುಂಬ ಸವೆದಿದೆ ಮಸೆಗಲ್ಲುಮೇಲೆ ಸ್ವಲ್ಪ ಮರಳುಹಾಕಿ ಕುಡುಗೋಲು ಉಜ್ಜು.

<masegallu> Touch stone - The stone used for sharpening the implements like axe, spade, knife etc. is known as Masegallu. On touchstone, putting the powder of white stone, when rubbed the implements on that they become sharpened. In villages every house will have a touchstone in front. Before going to field, garden they sharpen the kudugolu.

Eg: Kudugolu (Sickle) is very much worn out. Put some sand and rub the sickle.



844. ಮಳೆಕರೆಯುವುದು: ಸಕಾಲಕ್ಕೆ ಮಳೆ ಬಾರದೆ ಇದ್ದಾಗ ದೇವರಿಗೆ ಅಭಿಷೇಕ ಮಾಡಿ, 8–10 ಜನ ವೈದಿಕರು ಕೆರೆಯ ನೀರಿನಲ್ಲಿ ನಿಂತು ಮಂತ್ರಗಳನ್ನು ಗಟ್ಟಿಯಾಗಿ ಘೋಷಿಸುತ್ತ

ಮಳೆರಾಯನನ್ನು ಕರೆಯುತ್ತಾರೆ. ಅದಕ್ಕೆ **ಮಳೆಕರೆಯುವುದು** ಎಂದು ಹೇಳುವುದು ವಾಡಿಕೆ. ಮಳೆಕರೆಯುವುದನ್ನು ಪರ್ಜನ್ಯಜಪ ಎಂದು ಹೇಳುತ್ತಾರೆ.

ಉದಾ: ತೋಟಗಳೆಲ್ಲ ಮಳೆಬರದೆ ಬಾಡಿಹೋಗಿವೆ, ಪರ್ಜನ್ಯಜಪಮಾಡಿ ಮಳೆಕರೆಸಬೇಕು.

<maLekareyuvudu> To invite rain - When it does not rain in right season, doing abhishek, eight to ten Vaidikas (well versed in Vedas) standing in water in the tank, reciting hymns loudly call rain god. It is common to say malekareyuvudu (Calling rain). They say for calling rain Parjanyajapa.

Eg: Without rain all gardens have dried. Performing Parjanyajapa must get rain.

845. ಮಹಡಿಮನೆ: ನೋಡಿ: ಅಂತಸ್ತು

<mahaDimane See: Anthasthu

846. ಮಾಗಳಿ: ಇದು ಒಂದು ಸಣ್ಣ ಜಾತಿಯ ಗಿಡ. **ಮಾಗಳಿಯ (ಮಾಕಳಿ)** ಬೇರನ್ನು ನಿಂಬೆ, ಹೇರಳೆಕಾಯಿನ ಉಪ್ಪಿನಕಾಯಿಗೆ ಬೆರೆಸುತ್ತಾರೆ. ಮಾಗಳಿ ಬೇರು ಸುವಾಸನೆಯಾಗಿರುತ್ತೆ.

ಉದಾ: ಸಿದ್ದರಾಮಯ್ಯನ ಮನೇಲಿ ಬರೀ ಮಾಗಳಿಬೇರಿಂದ ಉಪ್ಪಿನಕಾಯಿ ಹಾಕಿದ್ದಾರೆ.

<maaGaLi> A kind of plant - This is a kind of small plant. Roots of Magali (makali) mix with pickle of lime, herale. Magali root will be of good smell.

Eg: In Siddaramayya's house have made pickle of mere Magali roots.



847. ಮಾಟಮದ್ದು: ಮಾಟಮದ್ದು ಮಾಡುವವರು ವಾಮಾಚಾರ ಪಂಥಕ್ಕೆ ಸೇರಿದವರು. ಸಾಮಾನ್ಯವಾಗಿ ಜನರ ಜೊತೆ ಸಂಪರ್ಕ ಇಟ್ಟುಕೊಂಡಿರುವುದಿಲ್ಲ. ಅವರು ಯಾವಾಗಲು ಇನ್ನೊಬ್ಬರಿಗೆ ಕೆಟ್ಟದ್ದನ್ನೆ ಮಾಡುತ್ತಾರೆ. ಸಹಪಂಕ್ತಿಯಲ್ಲಿ ಊಟ ಮಾಡುವುದಿಲ್ಲ. ನನಗೆ ಗೊತ್ತಿದ್ದಂತೆ ನಮ್ಮೂರಿನಲ್ಲಿ ಒಬ್ಬರು ಅವರ ಮನೆಯವರ ಜೊತೆಯೇ ಸೇರುತ್ತಿರಲಿಲ್ಲ. ಕ್ಷುದ್ರ ದೇವತೆಗಳನ್ನು ಆರಾಧಿಸಿ

ಶಕ್ತಿಪಡೆದಿರುತ್ತಾರೆ. ಮಾಟಗಾರರು ಇದ್ದಂತೆ ಮಾಟಗಾತಿಯರೂ ಇರುತ್ತಾರೆ.

<maaTamaddu> (-) Persons doing witchcraft belong to Vamamarga. Generally, they do not mix with others. They always do harm to others. They do not sit in a row of others for lunch. As I know in our village, one person was not mingling with his own house members. They will have attained power worshipping bad deities. Like men, women are also there.

848. ಮಾಯುವುದು: (ಮಾಗುವುದು) ಹಣ್ಣು ಪಕ್ವವಾಗುವುದಕ್ಕೆ **ಮಾಯುವುದು** (ಮಾಗುವುದು) ಎಂದು ಹೇಳುತ್ತಾರೆ. ಪರಿಪಕ್ವ ಫಲಕ್ಕೆ ತುಂಬಾ ಹಣ್ಣಾಗಿದೆ ಎನ್ನುತ್ತಾರೆ.

ಉದಾ: ಮಾವಿನಹಣ್ಣು ಇನ್ನು ಹುಳಿ ಮ್ಯಾಗದೆ, ಎರಡು ಮೂರು ದಿವಸ ಬಿಟ್ಟರೆ ಮಾಯುತ್ತೆ.

ಉದಾ: ಹಲಸಿನಹಣ್ಣು ತುಂಬಾ ಮಾಗಿದೆ, ಪಿಚಪಿಚ ಎನ್ನುತ್ತಿದೆ.

<maayuvudu> Ripening - Fruit to ripen they say mayuvudu (maguvudu). For fully ripened fruit they say thumba hannagide.

Eg: Jackfruit is fully ripened. Tasting too bad.



849. ಮಾರಮ್ಮನ ಸಿಡಿ: ಹಳ್ಳಿಗಳಲ್ಲಿ ಕೆಲವು ದೇವತೆಗಳಿಗೆ ಸಿಡಿ ಮಾಡುವುದು ವಾಡಿಕೆಯಾಗಿದೆ. ಮಾರಮ್ಮನ ಸಿಡಿ ಆಗುವಾಗ ಸಿಡಿ ಕಂಬದ ಮೇಲೆ ಅಡ್ಡಲಾಗಿ ದಪ್ಪವಾದ ಮರದ ಕಂಬವನ್ನು ಸೇರಿಸುತ್ತಾರೆ. ಕಂಬದ ಒಂದು ತುದಿಯಲ್ಲಿ ಸಿಡಿ ಮಾಡುವವನು ಕುಳಿತುಕೊಳ್ಳುತ್ತಾನೆ. ಕಂಬದ ಇನ್ನೊಂದು ತುದಿಗೆ ಹಗ್ಗವನ್ನು ಕಟ್ಟಿ ಜೋರಾಗಿ ತಿರುಗಿಸುತ್ತಾರೆ. ನಂತರ ಅವನು ಕೆಳಗಿಳಿದುಬಂದು ಮಾರಿ ದೇವತೆಯ ಮುಂದೆ ಕುಣಿಯುತ್ತಾನೆ. ಸುತ್ತಲು ತಮಟೆ ಬಡಿಯುತ್ತಿರುತ್ತಾರೆ. ಸಿಡಿ ಕಂಬದ ಹತ್ತಿರ ಮೇಕೆ ಅಥವಾ ಕುರಿಯನ್ನು ತಂದು ಅದರ ಕೊರಳಿಗೆ ಚೆಂಡುಹೂವಿನ ಮಾಲೆಯನ್ನು ಹಾಕುತ್ತಾರೆ. ಪೂಜೆಯಾದ ಮೇಲೆ ಮೇಕೆಯನ್ನು ಕುಡುಗೋಲಿನಿಂದ ಕಡಿದು ಮಾರಿಗೆ ಬಲಿ ಒಪ್ಪಿಸುತ್ತಾರೆ.

ಉದಾ: ಈ ಸಲ ಮಾರಮ್ಮನ ಸಿಡಿಗೆ ರಾಮಯ್ಯನೋರ ಮನೆ ಸೇವೆ ಇದೆ.

<maarammana siDi> In villages, it is in vogue to

observe Sidi (Service offered to a village deity). While doing Maramma Sidi, on the pole they attach a bamboo across. The person who does Sidi sits on one edge of the bamboo. Tying rope to the other edge, turn with full force. Then he comes down and dance before the Mari deity. Around they will be beating drum. Near the Sidi pole, bringing a lamb or sheep garlanding it. After worshipping they kill the lamb and offer to deity.

Eg: This time for Maramma Sidi, offering service is for Ramayya's house.



850. ಮಾಂಗಲ್ಯಧಾರಣೆ: ಮಾಂಗಲ್ಯಧಾರಣೆ ಆಗುವ ಮೊದಲು ತಾಳಿಯನ್ನು ಅರಿಶಿನ ಕುಂಕುಮದೊಂದಿಗೆ ತಟ್ಟೆಯಲ್ಲಿಟ್ಟುಕೊಂಡು ಹೆಣ್ಣಿನ ಕಡೆಯವರು ಹಿರಿಯ ನೆಂಟರಿಷ್ಟರ ಕೈಗೆ ಮುಟ್ಟಿಸಿ ಅವರ ಆಶೀರ್ವಾದ ಪಡೆಯುತ್ತಾರೆ. ಪುರೋಹಿತರು ಮಂತ್ರೋಚ್ಚಾರಣೆ ಮಾಡಿದ ಮೇಲೆ ವರ ವಧುವಿನ ಕೊರಳಿಗೆ ತಾಳಿಯನ್ನು ಕಟ್ಟುತ್ತಾನೆ. ತಾಳಿಕಟ್ಟುವ ಸಮಯಕ್ಕೆ ವಾದ್ಯದವರು ಗಟ್ಟಿಯಾಗಿ ವಾದ್ಯಗಳನ್ನು ಬಾರಿಸುತ್ತಾರೆ. ಇದನ್ನು ಗಟ್ಟಿಮೇಳ ಎನ್ನುತ್ತಾರೆ. ಆಹ್ವಾನಿತರಾಗಿ ಬಂದವರೆಲ್ಲರು ಮಂತ್ರಾಕ್ಷತೆಯನ್ನು ವಧೂ–ವರರ ತಲೆಯ ಮೇಲೆ ಹಾಕಿ ಆಶೀರ್ವದಿಸುತ್ತಾರೆ.

ಉದಾ: ಗಟ್ಟಿಮೇಳ ಗಟ್ಟಿಮೇಳ ಬಾರಿಸಿ.

<mangalyadhaaarane> (-) Before mangalyadharane, keeping mangalya with turmeric powder and kunkum in a plate the bride's party touches to the hand of elderly people and receive their blessings. After the Purohits recite sacred hymns the bridegroom ties mangalya to the neck of bride. At the time of tying mangalya the band people blow the bands very loudly. This is called Gattimela. All the invitees put manthrakshate on bride and bridegroom's head, bless them.

Eg: Blow Gattimela, gattimela.

851. ಮಿಡಿಕಾಯಿ: ಚಿಕ್ಕ ಮಾವಿನಕಾಯನ್ನು **ಮಿಡಿ** ಎನ್ನುತ್ತಾರೆ. ಮಿಡಿಮಾವಿನಕಾಯಿ ಏಳೆಂಟು ಒಟ್ಟಿಗೆ ಗೊಂಚಲು ಗೊಂಚಲಾಗಿ ಬಿಡುತ್ತದೆ.

ಮಿಡಿಮಾವಿನಕಾಯಿನ ಮರ ಎತ್ತರವಾಗಿರುವುದರಿಂದ ಸೊಂಟಕ್ಕೆ ಗೋಣಿ ಚೀಲವನ್ನು ಕಟ್ಟಿಕೊಂಡು ಮರದ ಮೇಲೆ ಹತ್ತಿ ಮಿಡಿಕಾಯನ್ನು ಚೀಲದೊಳಕ್ಕೆ ತುಂಬಿ ಹಗ್ಗದ ಸಹಾಯದಿಂದ ಚೀಲವನ್ನು ನಿಧಾನವಾಗಿ ನೆಲದ ಮೇಲೆ ಬಿಡುತ್ತಾರೆ. ಬೇರೆ ಜಾತಿಯ ಮಾವಿನಹಣ್ಣಿನಂತೆ ಮಿಡಿಕಾಯಿ ಹಣ್ಣಾಗುವುದಿಲ್ಲ. ಮಿಡಿಕಾಯಿ ಉಪ್ಪಿನಕಾಯಿಗೆ ಮಾತ್ರ ಮೀಸಲಾದುದು. ಮಿಡಿ ಉಪ್ಪಿನಕಾಯಿ ರುಚಿ, ವಿಶೇಷವಾದುದು.

ಉದಾ: ಕೆಂಚಯ್ಯ ತೋಟದಿಂದ ಬರುವಾಗ ಒಂದು ಮಂಕರಿಯಷ್ಟು ಮಿಡಿಕಾಯಿ ತರಬೇಕು.

<miDikaayi> Type of mango used for pickle - Small raw mango is called midikayi. Midikayi eight to ten grows in bunches. Since the tree of midikayi is too tall, they tie a gunny bag to waist, climb the tree, filling midikayi, through a rope leaves slowly to the ground. Like any other variety of mango, midikayi will not ripe. Midikayi is meant for pickle only. Taste of midikayi is a special one.

Eg: Kenchiah, while coming from garden must bring a basket of midikayi.

852. ಮಿಡ್ಡೆಅನ್ನ: ಅಕ್ಕಿ ಬೇಯಿಸುವಾಗ ನೀರು ಜಾಸ್ತಿಯಾದರೆ, ಅನ್ನ ಮುದ್ದೆಮುದ್ದೆ ಆಗುತ್ತದೆ. ಆಗ ಅನ್ನ **ಮಿಡ್ಡೆ**ಯಾಗಿದೆ ಎನ್ನುತ್ತಾರೆ. ಚಿಕ್ಕಮಕ್ಕಳಿಗೆ ತಿನ್ನಿಸಲು ಅಗುಳು ಅನ್ನ ಆಗೋಲ್ಲ. ಮಿಡ್ಡೆ ಅನ್ನ ಬೇಕಾಗುತ್ತದೆ. ಮಿಡ್ಡೆ ಅನ್ನ ಇಲ್ಲದಿದ್ದರೆ ಗಟ್ಟಿ ಅನ್ನವನ್ನೇ ಹಿಸುಕಿ ಉಪ್ಪು ತುಪ್ಪ ಸೇರಿಸಿ ಮೆತ್ತಗೆಮಾಡುತ್ತಾರೆ.

ಉದಾ: ಯಾಕೆ ಇವತ್ತು ಅನ್ನ ಇಷ್ಟೊಂದು ಮಿಡ್ಡೆಯಾಗ್ಬಿಟ್ಟಿದೆ?

<miDDeanna> Over boiled cooked rice - When baking rice if water is more, rice becomes lumpy. Then they say rice has become midde. For feeding young children, if rice is little coarse, will not suit. Midde rice is required. If midde rice is not there, squeezing coarse rice, mixing salt, ghee, make it soft.

Eg: Why today rice has become midde (over boiled)?

853. ಮಿಳ್ಳೆ: ತುಪ್ಪ, ಎಣ್ಣೆ ಬಡಿಸುವ ಚಮಚಕ್ಕೆ **ಮಿಳ್ಳೆ** ಎನ್ನುತ್ತಾರೆ. ಇದರ ಬಟ್ಟಲು ಆಳವಾಗಿರುತ್ತದೆ. ಚಮಚದಹಾಗೆ ತೆಳ್ಳಗಿರುವುದಿಲ್ಲ. ಸಾಮಾನ್ಯವಾಗಿ

ಅಲ್ಯೂಮಿನಿಯಂ ಲೋಹದ್ದಾಗಿರುತ್ತದೆ.



ಉದಾ: ಎರಡು ಮಿಳ್ಳೆ ಎಣ್ಣೆ ಹಾಕಿ ಒಗ್ಗರಣೆ ಮಾಡು.

ಉದಾ: ಹಾಲನ್ನು ಮಿಳ್ಳೆಯಲ್ಲಿ ಕುಡಿಸು, ಇಲ್ಲದಿದ್ದರೆ ಎಲ್ಲ ಚೆಲ್ಲಿಹೋಗುತ್ತೆ.

<miLe> (-) Equipment for serving ghee, oil is called mille. Cup of this is deep. Not thin like spoon.

Eg: Feed milk in Mille. Otherwise, it will spill.

854. ಮೀಸಲುಕಟ್ಟುವುದು: ಏನಾದರೂ ಕಷ್ಟಗಳು ತಲೆದೋರಿದಾಗ ಅದರ ನಿವಾರಣೆಗಾಗಿ ಅವರವರ ದೇವರಿಗೆ ಹರಸಿಕೊಂಡು ಕಾಣಿಕೆಯನ್ನು ಪ್ರತ್ಯೇಕವಾಗಿ ಮುಡುಪಾಗಿಡುವುದಕ್ಕೆ **ಮೀಸಲುಕಟ್ಟುವುದು** ಎಂದು ಹೇಳುತ್ತಾರೆ. ವರ್ಷಕ್ಕೊಮ್ಮೆ ಆ ದೇವಸ್ಥಾನಗಳಿಗೆ ಹೋದಾಗ ಮುಡುಪು ಕಾಣಿಕೆಯನ್ನು ಅರ್ಪಿಸಿ ಬರುತ್ತಾರೆ. ಮಗಳ ಮದುವೆಗೆ ಅಂತ ಅರವತ್ತು ಸಾವಿರ ರುಪಾಯಿ ಮೀಸಲಾಗಿಟ್ಟಿದೀನಿ ಅಂತಾರೆ.

ಉದಾ: ಮಗನಿಗೆ ಸಿಡುಬೆದ್ದು ನರಳುತ್ತಿದ್ದಾಗ ಮಾರಿಯಮ್ಮನಿಗೆ ಮೀಸಲುಕಟ್ಟಿದೆವು. ಈಸಲ ಜಾತ್ರೆಗೆ ಹೋದಾಗ ಮೀಸಲು ಒಪ್ಪಿಸಿ ಬರಬೇಕು.

<meesalukatTTuvudu> Set something apart to offer to deity - When you come across any trouble, to keep money separately, to be offered to their deity is called misalukattuvudu. Once a year when you go to that temple, offer money, and come. They say that they have kept sixty thousand rupees for daughter's marriage.

Eg: When son was suffering from smallpox, we kept maney for Maramma. When we go for jatra this time, must offer.

855. ಮುಕ್ಕಾಂ (ಮೊಕ್ಕಾಂ): ಎರಡು ಮೂರು ದಿವಸಗಳು ಬೇರೆ ಕಡೆ ಉಳಿಯಬೇಕಾಗಿ ಬಂದರೆ ಅದನ್ನು **ಮುಕ್ಕಾಂ** (ಮೊಕ್ಕಾಂ) ಠಿಕಾಣೆ ಹೂಡುವುದು ಎಂದು ಹೇಳುತ್ತಾರೆ. ಶ್ಯಾನುಭೋಗರ ಲೆಕ್ಕಪತ್ರಗಳನ್ನು ತನಿಖೆಮಾಡುವ ಸಲುವಾಗಿ ಜಿಲ್ಲಾಧಿಕಾರಿಗಳು ಮತ್ತು ಅಮಲ್ದಾರರು ಹಳ್ಳಿಯಲ್ಲಿ ಮುಕ್ಕಾಂ ಮಾಡುತ್ತಾರೆ.

ಉದಾ: ಅವನು ಬಿಡಪ್ಪ ಎಲ್ಲಿ ಅಂದರೆ ಅಲ್ಲಿ ಮುಕ್ಕಾಂ ಮಾಡಿಬಿಡ್ತಾನೆ!

<mukkaam> (mokkaam) Camping - If we must stay outside for two or three days, they say mukkam. To verify the accounts of Shanbhog, Deputy Commissioner and Amalbaar camp in the village.

Eg: Leave that fellow. He will stay anywhere!

856. ಮುತ್ಕಾಳ: ನೋಡಿ: ಬ್ರಾಹ್ಮಣರ ಬೈಗುಳ

<muTThaLa> See: Brahmanara Baigula

857. ಮುಡಿಕೊಡುವುದು: ನೋಡಿ: ಚೂಡಾಕರ್ಮ

<muDikoDuvudu> See: Choodakarma



858. ಮುತ್ತುಗದ ಎಲೆ: ಬಾಳೆ ಎಲೆಯ ಹಾಗೆ ಊಟಕ್ಕೆ ಮುತ್ತುಗದ ಎಲೆಯನ್ನು ಬಳಸುತ್ತಾರೆ. ಇವುಗಳನ್ನು ಮಾರುತ್ತಾರೆ. ಮುತ್ತುಗದ ಎಲೆಗಳನ್ನು ಒಂದಕ್ಕೊಂದು ಜೋಡಿಸಿ ಹಂಚಿಕಡ್ಡಿಯನ್ನು ಚುಚ್ಚಿ ದುಂಡಾಗಿ ಹೆಣೆಯುತ್ತಾರೆ. ಅದರಮೇಲೆ ಅನ್ನ, ಸಾರು ಮುಂತಾದ ಊಟದ ಪದಾರ್ಥಗಳನ್ನು ಬಡಿಸುತ್ತಾರೆ. ಆಲದ ಎಲೆಯೂ ಇದರಂತೆಯೆ. ಹಂಚಿಕಡ್ಡಿ ಒಂದು ವಿಧವಾದ ಹುಲ್ಲಿನ ಜೊತೆಗೆ ಸುಮಾರು ಎರಡು ಮೂರು ಅಡಿ ಎತ್ತರಕ್ಕೆ ಬೆಳೆಯುವ ಕಡ್ಡಿ. ಅದನ್ನು ಮುಕ್ಕಾಲು ಅಂಗುಲ ಉದ್ದಕ್ಕೆ ಕತ್ತರಿಸಿ, ಸೀಳಿ ಎಲೆಗಳನ್ನು ಹಚ್ಚುತ್ತಾರೆ.

ಉದಾ: ಇವತ್ತು ಮುತ್ತುಗದಎಲೆ ಮಾರೂದಕ್ಕೆ ತಂದಿದ್ದರು.

<mutthhugadaele> Leaf of flame tree - Like plantain leaf, for taking food, they use muthhugadaele (flame leaf). These are sold. Attaching flame leaves one to another, weave with hanchikaddi (a kind of grass). On that serve rice, rasam etc. items. Aala leaf is also like this. Hanchikaddi is a type of stick grows with grass to a height of two to three feet. They split into three fourth of an inch and weave.

Eg: Today they had brought flame leaves to sell.

859. ಮುದ್ದೆ: ಮುದ್ದೆಯನ್ನು ರಾಗಿ ಅಥವಾ ಜೋಳದ ಹಿಟ್ಟನ್ನು ನೀರಿನೊಂದಿಗೆ ಬೇಯಿಸಿ ಹೇರಳೆಕಾಯಿನ ಗಾತ್ರದ ಉಂಡೆಯನ್ನು ಮಾಡುತ್ತಾರೆ. ರಾಗಿಮುದ್ದೆ

ಆರೋಗ್ಯಕರವಾದ ಆಹಾರ. ನೀರನ್ನು ಕುದಿಸಿ ಒಂದು ಚಮಚ ಎಣ್ಣೆಯನ್ನು ಹಾಕಿ ರಾಗಿಹಿಟ್ಟನ್ನು ಬೆರೆಸಿ ಒಲೆಯ ಮೇಲೆ ಸ್ವಲ್ಪಕಾಲ ಬಿಡಬೇಕು. ನಂತರ ಬೆಂದಿರುವ ಹಿಟ್ಟನ್ನು ಸಣ್ಣಕೋಲಿನಿಂದ ಕೂಡಿಸಿ ಉಂಡೆ ಕಟ್ಟಬೇಕು. ಹುರುಳಿಕಟ್ಟಿನಸಾರು ಇದ್ದರಂತೂ ರಾಗಿಮುದ್ದೆ ನುಂಗಲು ಹಿತವಾಗಿರುತ್ತೆ.

ಉದಾ: ವಾರಕ್ಕೆ ಎರಡುಸಲವಾದರೂ ರಾಗಿಮುದ್ದೆ ಮಾಡಿ.

<mudde> Ragi bowl - Bowl is made of ragi or jowar flour mixing with water and baked, make balls of the size of heralekayi (a kind of lemon). Raage bowl is a healthy food. Boiling water mix a spoon of oil and raagi flour. Keep it on oven for a few minutes, then that flour must be stirred with a wooden stick and make a ball. Rasam made of horse gram is well suited for raage bowl, nice to swallow.

Eg: Make raage bowl at least twice a week.

860. ಮುಳುಗಡೆ: ಯಾವುದಾದರೂ ಪದಾರ್ಥ ಅಥವಾ ಪ್ರದೇಶದ ಭಾಗ, ತೋಟ, ಗದ್ದೆ ಇತ್ಯಾದಿ ನೀರಿನಲ್ಲಿ ಮುಳುಗಿ ಹೋದಾಗ **ಮುಳುಗಡೆಯಾಯಿತು** ಎಂದು ಹೇಳುವುದು ರೂಢಿ.

ಉದಾ: ಕೆರೆ ಏರಿ ಬಿರುಕುಬಿಟ್ಟು ಸುಮಾರು ಇಪ್ಪತ್ತು ಅಡಿಯಷ್ಟು ಕೆರೆದಂಡೆ ಒಡೆದು ಆನೆಗಾತ್ರ ಕೆರೆನೀರು ನುಗ್ಗಿ ಪಕ್ಕದ ತೋಟದ ಅಡಕೆ, ಬಾಳೆ ಎಲ್ಲ ಮುಳುಗಡೆ ಆಗೋಯ್ತು.

<muLugaDe> Immersed in water - When anything or any part of the area is drowned in water, it is common to say mulugadeyayithu.

Eg: Tank bund cracking, about twenty feet broke. Water nearly an elephant size rushed, neighbor areca garden, plantain all immersed in water.

861. ಮುಂಗಾರುಮಳೆ: ವರ್ಷದ ಪ್ರಾರಂಭದಲ್ಲಿ ಮೊದಲಬಾರಿಗೆ ಬೀಳುವ ಮಳೆಗೆ **ಮುಂಗಾರುಮಳೆ** ಎನ್ನುತ್ತಾರೆ.

ಉದಾ: ಮುಂಗಾರುಮಳೆ ಬಿದ್ದು ನೆಲ ಹಸನಾಗೈತೆ, ಮುಂದಿನ ಶುಕ್ರವಾರ ಬೇಸಾಯ ಹೂಡಬಹುದು.

<mungaarumaLe> (-) First rain of the season - Beginning of the year rain falling, they say mungarumale.

Eg: Falling mungarumale ground has become to proper condition. Next Friday can start doing cultivation.

862. ಮುಂಭಾರ: ಎತ್ತಿನಗಾಡಿಯಲ್ಲಿ ಮುಂಭಾಗಕ್ಕೆ ಚೀಲಗಳು ಜಾಸ್ತಿಯಾದರೆ ಎತ್ತುಗಳು ಗಾಡಿಯನ್ನು ಎಳೆಯುವುದಕ್ಕಾಗುವುದಿಲ್ಲ **ಮುಂಭಾರವಾಗಿದೆ** ಎನ್ನುತ್ತಾರೆ,

ಉದಾ: ಎರಡು ಚೀಲ ಹಿಂದಕ್ಕೆ ಜರುಗಿಸು, ಮುಂಭಾರ ಸರಿ ಹೋಗ್ತೈತೆ.

<mumbhaara> (-) Weight in the forepart - In bullock cart more bags are kept in front. Oxen cannot pull cart. They say mumbharavagide (weight in the forepart).

Eg: Push two bags behind. Weight will become all right

863. ಮೂಗ್ದಾರ (ಮೂಗುದಾರ): ಮೂಗ್ದಾರವನ್ನು ದಪ್ಪನಾದ ಹುರಿಯಿಂದ ಮಾಡುತ್ತಾರೆ. ಸಾಮಾನುಗಳನ್ನು ತುಂಬಿದ ಗಾಡಿಯನ್ನು ಎಳೆಯುವ ಎತ್ತುಗಳ ಮೂಗಿನ ಹೊಳ್ಳೆಗೆ ಮೂಗ್ದಾರವನ್ನು ಹಾಕಿರುತ್ತಾರೆ. ದಾರಿಬಿಟ್ಟು ಅಕ್ಕಪಕ್ಕ ಎತ್ತುಗಳು ಹೋದರೆ, ಮೂಗ್ದಾರವನ್ನು ಎಳೆಯುತ್ತಾರೆ. ಎತ್ತುಗಳು ತಕ್ಷಣ ಚುರುಕಾಗುತ್ತವೆ.

ಉದಾ: ಮೂಗ್ದಾರ ಎಲ್ಲ ಹರಿದುಹೋಗಿದೆ, ನಾಳೆ ಸಂತೇಲಿ ದಪ್ಪಹುರಿ ಕೊಂಡ್ಕಂಡ್ಬಾ.

ಉಚ್ಚಾರಭೇದ: ಮೂಗುದಾರ (ಮೂಗ್ದಾರ)

<muugdaara> (-) Cord put through a bullock's nostril. muugdaara is made of thick thread. Oxen which pull cart loaded with things, for nostril they put muugdaara. If oxen go this side or that side, they pull muugdaara. Oxen become active.

Eg: muugdaara *all are cut. Tomorrow in flea market, buy thick rope and bring.*

Different pronunciation: For muugdaara (muugdaara).

864. ಮೂಗುದಾಣ: ತುಂಟಾಟ ಮಾಡುವಂತಹ ಎತ್ತು, ಎಮ್ಮೆ, ಹಸುಗಳನ್ನು ಹತೋಟಿಯಲ್ಲಿಡಬೇಕಾದರೆ, ಅವುಗಳ ಮೂಗಿನ ನೊಸಳಿಗೆ ಕಿರುಬೆರಳು ದಪ್ಪದ ಹುರಿಯನ್ನು ಹಾಕಿ ಏಳೆಯುತ್ತಾರೆ. ಆ ಹುರಿಗೆ **ಮೂಗುದಾಣ** ಎಂದು ಹೆಸರು. ಏಳೆದಾಗ ಅವುಗಳಿಗೆ ಸ್ವಲ್ಪ ನೋವಾಗಿ ತಂಟೆಮಾಡುವುದಿಲ್ಲ.

ಉದಾ: ಶಿವಪ್ಪನಿಗೆ ಮೂಗುದಾಣಹಾಕಿದರೆ ನೋಡು ಅವನೇ ದಾರೀಗ್ಬರ್ತಾನೆ.

ಪದರೂಪ: ಮೂಗುದಾರ (ಮೂಗುದಾಣ)

<muugudaaNa> (-) To keep in control ox, buffalo, cows, doing mischief, for their nose putting a thick thread of a little finger size, pull. That thread is called muugudaaNa. When pulled, they get a little pain and do not do mischief.

Eg: If you put muugudaaNa for Shivappa, see he will come back to control.

Different version: Muugudaara (moogudaana)

865. ಮೂಗೇಟು: ಎಲ್ಲಿಯಾದರೂ ಬಿದ್ದು ಅಥವಾ ಯಾವುದಾದರೂ ಭಾರದ ಸಾಮಾನುಗಳು ಶರೀರಕ್ಕೆ ತಗುಲಿ ಪೆಟ್ಟಾದಾಗ ರಕ್ತ ಕಾಣದಿದ್ದರೂ ಆ ಜಾಗದಲ್ಲಿ ನೋವಿರುತ್ತೆ. ಅದಕ್ಕೆ **ಮೂಗೇಟು** ಎನ್ನುತ್ತಾರೆ.

ಉದಾ: ಎಲ್ಲೋ ಮೂಗೇಟು ಬಿದ್ದೈತೆ ಅಂತ ಕಾಣ್ತದೆ, ಉಪ್ಪು ಹುರಿದು ಕಾವುಕೊಡು.


<muugeeTu> (-) Pain inside the body - Falling somewhere or any weighty things if touched the body and paining, though there is no blood seen, inside pain will be on that spot. They say it is muugeeTu (Pain inside the body).

Eg: May be muugeeTu *has fallen. Heat salt and give fomentation.*

866. ಮೂರ್ಖ: ನೋಡಿ: ಬ್ರಾಹ್ಮಣರ ಬೈಗುಳ

<moorkha> See: Brahmanara Baigula

867. ಮೆಟ್ಟಕ್ಕಿಕುಕ್ಕೆ: ಬಿದಿರನ್ನು ತೆಳ್ಳಗೆ ಸೀಳಿ ಮುಚ್ಚಳದಂತೆ ಅಗಲವಾಗಿ ಹೆಣೆದಿರುವ ತಟ್ಟೆಗೆ **ಮೆಟ್ಟಕ್ಕಿಕುಕ್ಕೆ** ಎಂದು ಹೇಳುತ್ತಾರೆ. ಮದುವೆಯ ಸಮಾರಂಭದಲ್ಲಿ ಎರಡು ಮೆಟ್ಟಕ್ಕಿಕುಕ್ಕೆಗಳನ್ನು ಒಂದರ ಮುಂದೆ ಎದಿರುಬದಿರಾಗಿ ಇನ್ನೊಂದನ್ನಿಟ್ಟು ಅಕ್ಕಿಯನ್ನು ತುಂಬುತ್ತಾರೆ.



ವಧೂ–ವರರು ಒಂದೊಂದರಲ್ಲಿ ಒಬ್ಬರು ಬಲಗಾಲನ್ನಿಟ್ಟು ಮೊದಲು ಆಮೇಲೆ ಎಡಗಾಲನಿಟ್ಟು ಎದುರುಬದರಾಗಿ ನಿಲ್ಲುತ್ತಾರೆ. ಪುರೋಹಿತರು ಮಂತ್ರ ಹೇಳಿದ ನಂತರ ವಧೂವರರು ಒಬ್ಬರ ತಲೆಯ ಮೇಲೊಬ್ಬರು ಅಕ್ಕಿಯನ್ನು ಬೊಗಸೆಯಲ್ಲಿ ಸುರಿಯುತ್ತಾರೆ.

ಉದಾ: ನಮ್ಮೂರು ರಂಗ–ಸುಶೀಲರ ಮದುವೇಲಿ ಇಟ್ಟಿದ್ದ ಮೆಟ್ಟಕ್ಕಿಕುಕ್ಕೆ ಚಿಕ್ಕದಾಗಿತ್ತು.

<meTTakkikukke> (-) Bamboo lid filled with rice - Splitting bamboo thinly the plate weaved like a lid they say Mettakkikukke. During marriage function, placing two plates side by side, fill the rice. Bride and bridegroom placing their right leg on that, one facing the other stand. After the Purohit reciting hymns, bride and bridegroom pour rice from hand on each other head.

Eg: Ranga Susheela's marriage of our village, mettakkikukke which was used was small.

868. ಮೆಟ್ಟಲುಬಾವಿ: ನೋಡಿ: ಕಪಿಲೆಬಾವಿ

<meTTalubaavi> See: Kapilebaavi

869. ಮೆದೆ: ಒಣಗಿದ ಹುಲ್ಲನ್ನು ಹೊರೆಹೊರೆಯಾಗಿ ಕಟ್ಟಿ ನಾಲ್ಕಾರು ಅಡಿ ಎತ್ತರದವರೆಗು ಜೋಡಿಸಿಟ್ಟಿರುವುದನ್ನು **ಮೆದೆ** ಎಂದು ಹೇಳುತ್ತಾರೆ. ಹುಲ್ಲು ಬೇಕಾದ ಸಮಯದಲ್ಲಿ ಒಂದೊಂದೇ ಹೊರೆಯನ್ನು ಬಿಡಿಸಿ ದನಕರುಗಳಿಗೆ ತಿನ್ನಿಸುತ್ತಾರೆ.



ಉದಾ: ಮೆದೆಯಿಂದ ಎರಡು ಹೊರೆ ಹುಲ್ಲು ತಂದ್‌ಹಾಕು.

<mede> Stack of hay - Dry grass tied in bundles, keeping together up to four- or six-feet height is called mede. When grass is required, detatching one by one bundle and feed cows.

Eg: Bring two bundles of grass from mede.

870. ಮೆಹನತ್ತು: ಹೆಚ್ಚು ಕಷ್ಟಪಟ್ಟು ಕೆಲಸ ಮಾಡುವುದನ್ನು ಮೆಹನತ್ತು ಅನ್ನುವುದು ರೂಢಿ. ಅಂಥವರು ನಿಜಕ್ಕೂ ಶ್ರಮ ಜೀವಿಗಳು. ಮೆಹನತ್ತಿನಿಂದ ಕೆಲಸ

ಮಾಡುವವರಿಗೆ ಉತ್ತೇಜನ ಕೊಡಬೇಕು. ಈಗ ಮೆಹನತ್ತಿನಿಂದ ಕೆಲಸ ಮಾಡುವವರು ಕಡಮೆಯಾಗಿದ್ದಾರೆ.

ಉದಾ: ನಮ್ಮ ಹಳ್ಳಿಯಲ್ಲಿ ನಡೆದ ಸಾಮೂಹಿಕ ಕಾರ್ಯಕ್ರಮಗಳಲ್ಲಿ ಜವರೇಗೌಡರು ಬಹಳ ಮೆಹನತ್ತು ಮಾಡಿದರೆಂದು ಪ್ರತಿಯೊಬ್ಬರೂ ಹೇಳುತ್ತಿದ್ದರು.

<mehanathhu> Special effort - It is common to say mehanathhu for doing work with great effort. They are hard working. People who work with great effort must be encouraged. Now-a-days, workers doing hard work are diminishing.

Eg: In the public functions which took place in our village, everyone was saying that Javaregowda worked with great effort.

871. ಮೇದರವನು: ಬಿದಿರು ಕುಕ್ಕೆ, ಮಂಕರಿ, ಮೊರ, ಬೀಸಣಿಗೆ ಮುಂತಾದುವುಗಳ ಬಿದಿರಿನ ಕೆಲಸ ಮಾಡುವವನಿಗೆ **ಮೇದರವನು** ಎನ್ನುತ್ತಾರೆ. ಹಳ್ಳಿಗಳಲ್ಲಿ ಅವರದೆ ಒಂದು ಜನಾಂಗವಾಗಿರುತ್ತೆ. ಬುಟ್ಟಿ ಹೆಣೆಯುವವರು ಎಂದೂ ಕರೆಯುತ್ತಾರೆ.



ಉದಾ: ಊರ ಹೊರಗಡೆ ಹತ್ತು ಜನ ಮೇದರವರು ಗುಡಿಸಲು ಹಾಕ್ಕಂಡಿದಾರೆ. ನಾಲ್ಕು ಬಿದಿರುಕುಕ್ಕೆ ಮಾಡಿಸ್ಬೇಕು.

<meedaravanu> (-) A tribe who does plaiting bamboo work - Basket, bamboo fan, fans, the person who does bamboo work is called medaravanu. In villages, they are a community by themselves. They also call them as Buttiheneyuvavaru.

Eg: Outside the village ten bamboo workers have put huts. Must get four bamboo baskets done.

872. ಮೇವು: ಎತ್ತು, ಹಸುಕರುಗಳಿಗೆ ಕೊಡುವ ಆಹಾರಕ್ಕೆ **ಮೇವು** ಎಂದು ಹೆಸರು. ಹುಲ್ಲು, ಸೊಪ್ಪು, ದಂಟು, ಕಲಗಚ್ಚು, ಬೂಸ, ಹುರುಳಿ ಇವೆಲ್ಲವು ಮೇವು. ಒಂದು ಬಗೆಯ ಜೋಳದ ಕಡ್ಡಿಯನ್ನು ಸಣ್ಣಗೆ ಕತ್ತರಿಸಿ ಆಹಾರವಾಗಿ ಕೊಡುತ್ತಾರೆ. ಇವೆಲ್ಲವೂ ಮೇವು. ಸಾಮಾನ್ಯವಾಗಿ ಹುರುಳಿಯನ್ನು ಬೇಯಿಸಿ ಎತ್ತುಗಳಿಗೆ, ಕುದುರೆಗಳಿಗೆ ಮಾತ್ರ ಹಾಕುತ್ತಾರೆ. ಬೇಯಿಸಿದ ಹುರುಳಿ ಎತ್ತುಗಳಿಗಾದರೆ, ಕಟ್ಟನ್ನು

ನಾವು ಸಾರುಮಾಡುವುದಕ್ಕೆ ಬಳಸಬಹುದು. ಹುರುಳಿಯ ಕಟ್ಟಿನಿಂದ ಮಾಡಿದ ಸಾರು ರಾಗಿಮುದ್ದೆಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ.

ಉದಾ: ಕೆಂಚಾ ದನದಕೊಟ್ಟಿಗೆಗೆ ಮೇವು ತಂದ್‌ಹಾಕು.

<meevu> Animal food - Animal feed of any kind of grass etc. The food given to ox, cows, calves is called mevu. Grass, green leaves, rice washed water, boosa, huruli (horse gram) all these are animal feed. Generally, boiling horse gram feed oxen only. If boiled horse gram is for oxen, the sap we can use for making rasam. Rasam made of the sap of horse gram is well suited for raage ball.

Eg: Kencha, put grass in cowshed.

873. ಮೊಂಡುಪರಕೆ: ನೋಡಿ: ನೊಜೆಹುಲ್ಲಿನಪರಕೆ

<monDuparake> See: Nojehullinaparake

874. ಮೊಗಸಾಲೆ: ಮನೆಯ ಮುಂಭಾಗದ ಹಜಾರಕ್ಕೆ **ಮೊಗಸಾಲೆ** ಎನ್ನುತ್ತಾರೆ.

ಶ್ಯಾನುಭೋಗರ ಮನೆಯ ಮೊಗಸಾಲೆಯಲ್ಲಿ ಊರಿನ ಮುಖ್ಯಸ್ಥರೆಲ್ಲ ಸೇರುತ್ತಾರೆ. ಆ ದಿನ ಯಾವುದಾದರೂ ಒಂದು ತೀರ್ಮಾನ ಆಗಲೇಬೇಕು.

ದಾ: ದೇವರಗುಡಿಯ ಮೊಗಸಾಲೆಯಲ್ಲಿ ಊಟಕ್ಕೆ ಎಲೆಗಳನ್ನು ಹಾಕಿದ್ದಾರೆ.

<mogasaale> Front verandah - Corridor in front of the house is called Mogasale. In mogasale of Shanbhog's house all important persons of the village will assemble. On that day any one final decision must take place.

Eg: In mogasale of the temple they have arranged plantain leaves for lunch.



875. ಮೊಟ್ಟೆ: ಮೊಟ್ಟೆ ಎಂದರೆ ಕೋಳಿ ಮೊಟ್ಟೆಯಲ್ಲ! ತೆಂಗಿನಕಾಯಿನ ಮೇಲಿರುವ ತೊಗಟೆಗೆ **ಮೊಟ್ಟೆ** ಎಂದು ಹೆಸರು. ಇದನ್ನು ಬಿಸಿಲಿನಲ್ಲಿ ಒಣಗಿಸಿ, ನೀರು ಕಾಯಿಸಲು ಒಲೆಗೆ ಬೆಂಕಿ ಹಾಕಿ ಮೊಟ್ಟೆಗಳನ್ನು ಸುಡುತ್ತಾರೆ. ಅದರ ಕಾವು ಸೌದೆಗಿಂತಲು ಹೆಚ್ಚಿರುತ್ತೆ. ಹಸೀ ಮೊಟ್ಟೆಯನ್ನು ನೀರಿನಲ್ಲಿ ಹಾಕಿ ಸ್ವಲ್ಪ

ದಿವಸಗಳು ಬಿಟ್ಟರೆ ಅದು ಕೊಳೆಯುತ್ತದೆ. ನಂತರ ನೀರಿನಿಂದ ತೆಗೆದು ಅದನ್ನು ಕೊಡತಿಯಿಂದ ಜಜ್ಜುತ್ತಾರೆ. ಆಗ ಮೇಲಿನ ಸಿಪ್ಪೆ ಬೇರೆಯಾಗಿ ಒಳಭಾಗದ ನಾರು ಬೇರ್ಪಡಿಸಲ್ಪಡುತ್ತದೆ. ಅದನ್ನು ಬಿಸಿಲಿನಲ್ಲಿ ಒಣಗಿಸಿ ಜಜ್ಜಿದರೆ ನಾರು ಹೊಸೆಯಲು ಸಿದ್ಧವಾಗುತ್ತೆ. ಅದನ್ನು ಒಂದಕ್ಕೊಂದನ್ನು ಸೇರಿಸಿ ಹಗ್ಗದಂತೆ ಹೆಣೆಯುತ್ತಾರೆ. ಆ ಹಗ್ಗ ಹಸು ಕರುಗಳನ್ನು ಕಟ್ಟಲು, ಬಾವಿಯಿಂದ ನೀರು ಸೇದಲು ಉಪಯೋಗವಾಗುತ್ತೆ.

ಉದಾ: ತೋಟದಬಾವಿ ಒಳಕ್ಕೆ ಒಂದಿಷ್ಟು ಹಸೀಮೊಟ್ಟೆ ಹಾಕ್ಬಿಟ್ಬಾ.

<moTTe> Outer skin of coconut - Motte does not mean egg! The outer skin of coconut is called Motte. This is dried in sun, used for heating water. The heat of this will be much more than firewood. Wet motte is soaked in water and left for a few days it gets rotten. Then taking out of water they crush with iron hammer. Then the outer skin gets separated with fiber. If that is dried in sun and crushed, fiber will be ready for weaving thread. Attaching one to another weave like a rope. That rope will be useful for tying cows, drawing water from well.

Eg: Put some wet mottes into the garden well

876. ಮೊದಲತೀರ್ಥ: ದೇವಸ್ಥಾನಗಳಲ್ಲಿ ದೇವರಿಗೆ ಅಭಿಷೇಕ, ಮಂಗಳಾರತಿಯಾದ ನಂತರ ಅರ್ಚಕರು **ಮೊದಲ ತೀರ್ಥ**ವನ್ನು ತೆಗೆದುಕೊಂಡು ನಂತರ ಬಂದಿರುವ ಭಕ್ತಾದಿಗಳಿಗೆ ಕೊಡುತ್ತಾರೆ. ವಿಶೇಷ ಸಂದರ್ಭಗಳಲ್ಲಿ ದೇವಸ್ಥಾನದ ಮೇಲ್ಜವಾಬ್ದಾರಿಯನ್ನು ನೋಡಿಕೊಳ್ಳುವ ಯಜಮಾನನಿಗೆ ಮೊದಲ ತೀರ್ಥವನ್ನು ಕೊಟ್ಟು ನಂತರ ಉಳಿದವರಿಗೆ ತೀರ್ಥವನ್ನು ಕೊಡುತ್ತಾರೆ.

ಉದಾ: ಯಜಮಾನರಿಗೆ ಮೊದಲತೀರ್ಥ ಕೊಡಿ ಅರ್ಚಕರೇ.

<modalatheertha> First offered holy water - In temples after abhisheka and arati priests wil take holy water first and then give to the devotees who have come. On special occasions to the main person who supervises the temple, give the holy water first and then give to others.

Eg: Give first holy water to elderly person, archakare.

877. ಮೊದಲಸುತ್ತು: ಹಿರೇಮಗಳೂರಿನಲ್ಲಿ ನಡೆಸುವ ರಥೋತ್ಸವದ ದಿನ ರಾತ್ರೆ ದೇವರ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ದೇವಸ್ಥಾನದ

ಒಳಾಂಗಣದಲ್ಲಿ ಮೂರುಸುತ್ತು ಪ್ರದಕ್ಷಿಣೆ ಮಾಡುತ್ತಿದ್ದರು. ಭಕ್ತಾದಿಗಳು ಉತ್ಸವದ ಮುಂದೆ ಭಜನೆ ಮಾಡುತ್ತಿದ್ದರು. ಮೊದಲಸುತ್ತಿನ ಪ್ರದಕ್ಷಿಣೆಯಲ್ಲಿ ರಾಮಭಜನೆ ಮಾಡುವ ಸುಯೋಗ ಇಂಥವರಿಗೆ ಎಂದಿರುತ್ತದೆ.

ಉದಾ: ವೆಂಕಟರಮಣ ಭಾಗವತರಿಗೆ ದೇವರ ಮೊದಲ ಸುತ್ತಿನ ಪ್ರದಕ್ಷಿಣೆಯಲ್ಲಿ ರಾಮಭಜನೆ ಮಾಡುವ ಅವಕಾಶವಿತ್ತು.

<modalasuthhu> (-) Opportunity given for bhajan in first round - On the day of car festival in Hiremagalur (Karnataka) in the night, keeping the deity's idol in palanquin were going three rounds in the inner circle of temple. Devotees were doing bhajan in front of procession. In the first round the opportunity of doing Rama bhajan will have been reserved.

Eg: For Venkataramana Bhagavatar there was a place to do Rama bhajan in the first round.




878. ಮೊಹರಂ: ಮೊಹರಂ ಹಬ್ಬದದಿನ ನಮ್ಮ ಹಳ್ಳಿಯ ಒಬ್ಬಿಬ್ಬರು ಮುಸಲ್ಮಾನ್ ಪಂಗಡದವರು ಹುಲಿವೇಷ ಹಾಕಿಕೊಂಡು ನಮ್ಮ ಕೇರಿಗೆ ಬರುತ್ತಿದ್ದರು. ಹುಲಿವೇಷ ಹಾಕುವವನು ಒಂದು ಕಾಚಾ ಧರಿಸಿ ಮೈಮೇಲೆಲ್ಲ ಹುಲಿಯಂತೆ ಬಣ್ಣಬಣ್ಣದ ಪಟ್ಟೆಗಳನ್ನು ಬಳಿದುಕೊಂಡಿರುತ್ತಿದ್ದ. ಮುಖಕ್ಕೆ ಹುಲಿಯ ಮುಖವಾಡ. ಮೂರು ಜನ ಸುತ್ತಲೂ ನಿಂತುಕೊಂಡು ಅವನ ಸೊಂಟಕ್ಕೆ ಹಗ್ಗವನ್ನು ಕಟ್ಟಿ ಆಡಿಸುತ್ತಿದ್ದಾಗ ಅವನು ಆವೇಶದಿಂದ ಕುಣಿಯುತ್ತಿದ್ದ. ಅವನ ಮುಂದೆ ಒಬ್ಬ ಫಕೀರ ಒಂದು ಕೈಯ್ಯಲ್ಲಿ ಮಣ್ಣಿನತಟ್ಟೆಯಲ್ಲಿ ಸಾಂಬ್ರಾಣಿ ಹೊಗೆಯನ್ನು ಹಾಕಿಕೊಂಡು ಇನ್ನೊಂದು ಕೈಯ್ಯಲ್ಲಿ ಗೋಲಕವನ್ನು ಹಿಡಿದುಕೊಂಡಿರುತ್ತಿದ್ದ. ಮತ್ತೊಬ್ಬ ಮುಸಲ್ಮಾನ (ಖಾಜಿಸಾಹೇಬ್) ನವಿಲುಗರಿ ದಂಡೆಯಿಂದ ಎಲ್ಲರಿಗೂ ತಲೆ ಸವರುತ್ತಿದ್ದ. ನಮ್ಮ ಕೇರಿಯವರೆಲ್ಲರು ಗೋಲಕಕ್ಕೆ ದುಡ್ಡು ಹಾಕುತ್ತಿದ್ದರು.

ಉದಾ: ಮುಂದಿನವಾರವೇ ಮೊಹರಂ ಹಬ್ಬ ಬಂತು.

<moharam> A festival of Muslims - On the Moharam festival day, one or two muslims of our village wearing tiger dress were coming to our street. Person who was wearing tiger dress was putting an underwear, coloring his body with stripes

of varieties of color. For face tiger mask. Three persons standing around tying rope to his waist playing, he was dancing with excitement. In front of him, a maulvi holding in one hand a mud plate putting sambrani fumes (a kind of fragrant substance) in another hand was holding a box for putting money. Another maulvi with peacock feather bunch was touching softly on everybody's head. All residents of our street, were putting money into the box.

Eg: Next week only Moharam festival.



879. ಮೊಳ: ಪಂಚೆ, ಸೀರೆಗಳನ್ನು ಅಳತೆ ಮಾಡುವಾಗ ಕೈಮೊಳದಿಂದಲೇ ಎಷ್ಟೆಂದು ಹೇಳುತ್ತಿದ್ದರು. **ಮೊಳ** ಎಂದರೆ ಒಂದೂವರೆ ಅಡಿ.

ಉದಾ: ಮದುವೆ ಜವಳಿಪಟ್ಟಿಯಲ್ಲಿ ಎರಡು ಜೊತೆ ಒಂಬತ್ತು ಮೊಳದ ಪಂಚೆ ತನ್ನಿ.

<mola> A measure - While measuring dhothi, sarees, they were telling with hand only. Mola means one-and-half foot.

Eg: In the list of marriage clothes, bring two pairs of nine molas dhothi.

880. ಮೋಜಣಿದಾರ: ಮೋಜಣಿದಾರ ಸರ್ಕಾರದಿಂದ ನೇಮಿತನಾದ ಅಧಿಕಾರಿ. ಹಳ್ಳಿಗಳಲ್ಲಿ ಜಮೀನುಗಳ ಬಗ್ಗೆ ವಾದವಿವಾದಗಳು ತಲೆದೋರಿದಾಗ, ಮೋಜಣಿದಾರನನ್ನು ಸರ್ಕಾರದವರು ಕಳುಹಿಸಿಕೊಡುತ್ತಾರೆ. ಅವನು ಬಂದು ಭೂಮಿಯನ್ನು ದೊಡ್ಡ ಸರಪಳಿಯಿಂದ ಅಳತೆ ಮಾಡಿ ಸರ್ಕಾರಕ್ಕೆ ವರದಿ ಒಪ್ಪಿಸುತ್ತಾನೆ. ನಂತರ ಸರ್ಕಾರದವರು ತೀರ್ಮಾನಿಸುತ್ತಾರೆ.

ಉದಾ: ಕೆಂಪಯ್ಯನ ಜಮೀನಿನ ತಕರಾರಿನ ಫೈಸಲ್‌ಗಾಗಿ ಮೋಜಣಿದಾರ ಶಂಕರಪ್ಪ ನಿನ್ನೆ ನಮ್ಮೂರಿಗೆ ಬಂದಿದ್ದರು.

<mojaNidaara> Land Surveyor is an officer appointed by government. When disputes arise regarding land in villages government will send Land Surveyor. He comes and measure the land with a big chain and submits his report to government.

Then the government will decide.

Eg : For taking a final decision about the appeal of Kempiah for his land, Land Surveyor Shankarappa had come to our village.

881. ಮೋಟುಗೋಡೆ: ನೋಡಿ: ಅಡ್ಡಗೋಡೆ

<mooTugooDe> See: ADDagoDe

882. ಮೋತೆ: ಬಾಳೆಗಿಡದಲ್ಲಿ ಬಿಡುವ ದಪ್ಪವಾದ ಹೂವಿಗೆ **ಮೋತೆ** ಎಂದು ಹೆಸರು. ಬಾಳೆಗೊನೆಯ ತಳಭಾಗದಲ್ಲಿ ಪದರಪದರವಾಗಿ ಬೆಳೆಯುತ್ತೆ. ಮೋತೆಯ ಮೇಲಿನ ಎರಡು ಮೂರು ಪದರಗಳನ್ನು ತೆಗೆದು ಉಳಿಯುವ ಎಳೆಯ ಹೂವನ್ನು ಸಣ್ಣಗೆ ಹೆಚ್ಚಿ ಪಲ್ಯಮಾಡಲು ಬಳಸುತ್ತಾರೆ. ಸತ್ತವರ ಶ್ರಾದ್ಧಕರ್ಮಗಳನ್ನು ಮಾಡುವ ದಿನ, ಬ್ರಾಹ್ಮಣರಿಗೆ ನೀಡುವ ಊಟಕ್ಕೆ ಬಾಳೆಮೋತೆ, ದಿಂಡು, ಬಾಳೆಕಾಯಿ ಶ್ರೇಷ್ಠ.




ಉದಾ: ನಾಳೆ ತಿಥಿಗೆ ಬಾಳೆಮೋತೆ, ದಿಂಡು ತಂದರೆ ಉತ್ತಮ.

<moothe> (-) Big flower at the end of bunch - A big flower grows on plantain tree is called Moothe. At bottom of plantain bunch grows in layers. Removing two or three layers on the flower, the remaining flower they use for making subji. On the day of death ceremony, for the food offered to brahmins, plantain flower, the inner tender part of stem, raw banana is the best.

Eg: For tomorrow's death ceremony better to bring plantain flower, Baale dinDu (tender portion of stem).

883. ಮೌಂಜಿ: ಉಪನಯನ ಮಾಡುವಾಗ ಬ್ರಹ್ಮಚಾರಿಯ ಸೊಂಟಕ್ಕೆ ಸುತ್ತುವ ಹುರಿಗೆ **ಮೌಂಜಿ** ಎಂದು ಹೆಸರು. ಮೌಂಜಿಯನ್ನು ಒಂದು ಬಗೆಯ ಹುಲ್ಲಿನ ನಾಲ್ಕಾರು ಎಳೆಗಳನ್ನು ಹೊಸೆದು ಮಾಡುತ್ತಾರೆ. ಉಪನಯನ ಕಾರ್ಯಕ್ರಮ ಮುಗಿಯುವವರೆಗೂ ಮೌಂಜಿ ವಟುವಿನ ಸೊಂಟದಲ್ಲಿರುತ್ತೆ.



ಉದಾ: ಶಂಕ್ರೂ ಮೌಂಜಿಯನ್ನು ವಟುವಿಗೆ ಬಿಗಿಯಾಗಿಕಟ್ಟು, ಜಾರಬಾರದು.

<mounji> (-) Girdle of Mufiza grass - While doing thread ceremony, the thread which is tied to brahmachari's waist is called Mounji. Mounji is prepared twisting four or six threads of a type of grass. Till to the end of ritual ceremonies of Thread ceremony mounji will be on the boy's waist.

Eg: Shankru, tie mounji tightly to Vatu. Must not skip.

❑

ಯ / Ya

884. ಯಕ್ಕಾಹುಟ್ಟೋಯ್ತು: ಮಾಡಿದ ಕೆಲಸಗಳು ಯಾವುದೂ ನೇರವಾಗಿ ಆಗದಿದ್ದಾಗ **ಯಕ್ಕಾಹುಟ್ಟೋಯ್ತು** ಅನ್ನುವ ಪದವನ್ನು ಬಳಸುತ್ತಾರೆ.

ಉದಾ: ಹತ್ತುದಿವಸದಿಂದ ಮಾಡಿದ ಗದ್ದೆಕೆಲಸವೆಲ್ಲಾ ಒಂದೇದಿನದಲ್ಲಿ ಯಕ್ಕಾಹುಟ್ಟೋಯ್ತು ಆನೆಕಲ್ ಮಳೆಬಂದು.

<yakkaahuTToythu> (-) Improper work done - The works not done properly, they use the word yakkahuttoythu.

Eg: The work done for the past ten days within a day yakkahuttoythu due to hailstorm.

885. ಯವಾರ: ವ್ಯವಹಾರ ಹಳ್ಳಿಯ ಭಾಷೆಯಲ್ಲಿ ಯವಾರ ಆಗಿದೆ. ಮನೆಯ ಉಸ್ತುವಾರಿಯನ್ನು ಜವಾಬ್ದಾರಿಯಿಂದ ನೋಡಿಕೊಳ್ಳುವುದಕ್ಕೆ ಯವಾರ ಎನ್ನುವುದು ರೂಢಿ.

ಉದಾ: ನಂಗೂ ವಯಸ್ಸಾಯ್ತು. ಮನೆ, ತ್ವಾಟ ತುಡಿಕೆ, ಹಣಕಾಸಿನ ಯವಾರನೆಲ್ಲ ಮಗ, ಸೊಸೆಗೆ ಬಿಟ್ಟುಬಿಟ್ಟಿದೀನಿ.

<yavaara> Vyavahara **(transaction)** has become in village language, yavara. To look after house supervision responsibly, it is common to say Yavara.

Eg: I am also aged. I have given up supervision of house, garden, money transaction etc. to son and daughter in law.

886. ಯಾಪಾಟಿ: ಮಾಡಬೇಕಾದ ವಿಪರೀತ ಕೆಲಸಗಳಿದ್ದರೆ **ಯಾಪಾಟಿ** ಅನ್ನುವ ಪದವನ್ನು ಬಳಸುತ್ತಾರೆ. ಯಾಪಾಟಿ ಎಂದರೆ ಬಹಳ, ಅಪಾರ, ಎಷ್ಟೊಂದು, ಅಧಿಕ ಕೆಲಸ ಎಂದರ್ಥ.

ಉದಾ: ಎಲ್ಲರೂ ಸುಮ್ಮನೆ ಕುಂಟ್ಬಿಟ್ಟಿದಾರೆ, ಯಾಪಾಟಿ ಕೆಲಸ ಐತೆ.

<yaapaaTi> Very much - If there is too much of work to be done, they use the word Yapati. Yapati means, very much, too much, how many, over work.

Eg: All are simply sitting. So much of work is there.

887. ಯುಗಾದಿಹಬ್ಬ: ಯುಗಾದಿಹಬ್ಬದ ದಿನ ದೇವರಿಗೆ ಪೂಜೆ ಮಾಡಿ, ಬೇವಿನ ಸೊಪ್ಪಿನ ಕುಡಿ ಎಲೆಗಳನ್ನು ಬೆಲ್ಲದೊಂದಿಗೆ ಸೇರಿಸಿ ಎಲ್ಲರಿಗೂ ಹಂಚುತ್ತಾರೆ. ಆ ದಿನ ಮನೆಯವರೆಲ್ಲರೂ ಹೊಸಬಟ್ಟೆಗಳನ್ನು ಅಂಚಿಗೆ ಕುಂಕುಮ ಹಚ್ಚಿ ಉಡುತ್ತಾರೆ. ಮಾವು ಬೇವಿನ ತೋರಣ ಬಾಗಿಲಿಗೆ ಕಟ್ಟುತ್ತಾರೆ. ಹೋಳಿಗೆ ಮಾಡುತ್ತಾರೆ. ಪಂಚಾಂಗಶ್ರವಣ ಈ ಹಬ್ಬದ ವಿಶೇಷ.

ಉದಾ: ಬೇವು ಬೆಲ್ಲ ತಿಂದು ಒಳ್ಳೆ ಮಾತಾಡು (ಗಾದೆ)

ನೋಡಿ: ಪಂಚಾಂಗಶ್ರವಣ


<yugaadihabba> (-) Commencement of an year - On the day of Yugadi festival, mixing tender neem leaves with jaggery distribute to all. That day all household people smearing kunkum to new clothes wear. Tie to the door mango leaves, neem bunch garland. Do holige (a kind of sweet made of fine rava, dry coconut and jaggery). Reciting almanac is a specialty of this festival.

Eg: Eat neem-jaggery, talk good (proverb)

See: Panchangashravana

❑

ರ / Ra





888. ರಂಗೋಲಿ: ಪ್ರತಿದಿನ ಮನೆ ಮುಂದೆ, ತುಳಸಿ ಕಟ್ಟೆ ಮುಂದೆ ರಂಗೋಲಿ ಹಾಕುವುದು ನಿತ್ಯ ಸಂಪ್ರದಾಯ. ಅಕ್ಕಿಯನ್ನು ನೀರಿನಲ್ಲಿ ನೆನೆಸಿ ನುಣ್ಣಗೆ ಒರಳಿನಲ್ಲಿ ಅರೆದು ಅದರಿಂದ ಹಬ್ಬಹರಿದಿನಗಳಲ್ಲಿ ಮತ್ತು ಮದುವೆ ಮಂಟಪದಲ್ಲಿ ಹಸೆಮಣೆಯ ಮುಂದೆ ರಂಗೋಲಿ ಹಾಕುತ್ತಾರೆ. ಅಕ್ಕಿಹಿಟ್ಟಿನಲ್ಲಿ ಹಾಕಿದ ರಂಗೋಲಿ ಒಣಗಿದ ನಂತರ ನೀರು ಬಿದ್ದರು ಹಾಳಾಗುವುದಿಲ್ಲ.

ಹವನಹೋಮಗಳನ್ನು ಮಾಡುವಾಗ, ಹೋಮಕುಂಡದ ಸುತ್ತಲು ಗಣಪತಿ ಮತ್ತು ಸತ್ಯನಾರಾಯಣ ವ್ರತದ ದಿವಸ ಮಂಟಪದ ಮುಂದೆ ಬಗೆಬಗೆಯ ಬಣ್ಣದ ರಂಗೋಲಿಯನ್ನು ಹಾಕುತ್ತಾರೆ. ಊರಿನಲ್ಲಿ ದೇವರ ಉತ್ಸವ ಬಂದಾಗಲೂ ಮನೆಮುಂದೆ ರಸ್ತೆಗಳಲ್ಲಿ ರಂಗೋಲಿಹಾಕುವ ವಾಡಿಕೆಯಿದೆ.

ಮನೆಯಲ್ಲಿ ತಿಥಿ ಮಾಡುವ ದಿನ ಬಾಗಿಲ ಮುಂದೆ ರಂಗೋಲಿ ಹಾಕುವುದಿಲ್ಲ. ಬ್ರಾಹ್ಮಣರ ಭೋಜನವಾದ ಮೇಲೆ ಅವರು ಕೈತೊಳೆದು ಒಳಕ್ಕೆ ಬಂದ ನಂತರ ಬಾಗಿಲ ಹೊಸಲಿಗೆ ಎರಡೆಳೆ ರಂಗೋಲಿಯನ್ನು ಹಾಕುವುದು ಸಂಪ್ರದಾಯ.

ಒಂದು ಬಗೆಯ ಬೆಣಚು ಕಲ್ಲನ್ನು ನುಣ್ಣಗೆ ಕುಟ್ಟಿ ಮಾಡಿದ ಪುಡಿಯೆ **ರಂಗೋಲಿ** (ರಂಗವಲ್ಲಿ). ರಂಗೋಲಿಯಿಂದ ದೇವರ ಗೂಡಿನ ಮತ್ತು ಮನೆಯ ಮುಂದೆ ಹಸೆಯನ್ನು ಬರೆಯುತ್ತಾರೆ. ಪ್ರತಿದಿನ ಬೆಳಿಗ್ಗೆ ಮನೆಯ ಹೊರಭಾಗದ ಹೊಸಲಿಗೆ ನೀರು ಚುಮುಕಿಸಿ ರಂಗೋಲಿಯಿಂದ ಎರಡು ಎಳೆಗಳನ್ನು ಬರೆಯುತ್ತಾರೆ. ರಂಗೋಲಿಗೆ ಬಣ್ಣಬಣ್ಣದ ಹಿಟ್ಟನ್ನು ಬೆರೆಸಿ ತರಹೇವಾರಿ ಹಸೆಗಳನ್ನು ಬರೆಯುತ್ತಾರೆ. ಗೃಹಪ್ರವೇಶದ ಸಮಾರಂಭದಲ್ಲಿ ನೋಡಬೇಕು ಆ ಸೊಬಗನ್ನು. ರಂಗೋಲಿ ಹಾಕುವುದು ಒಂದು ಕಲೆ. ಇದನ್ನು ರಂಗವಲ್ಲಿ ಕಲೆ ಎಂದೂ ಕರೆಯುತ್ತಾರೆ.

ನೋಡಿ: ರಂಗವಲ್ಲಿ

ಉದಾ: ನಮ್ಮೂರು ರಂಗಮ್ಮನವರು ರಂಗೋಲಿ ಹಾಕೊದ್ರಲ್ಲಿ ಎತ್ತಿದಕೈ.

ಉದಾ: ಈವತ್ತು ರಾಮದೇವರ ಮೆರವಣಿಗೆ ಬರುತ್ತೆ, ರಸ್ತೆಗೂ

ರಂಗೋಲಿಹಾಕು.

<rangooli> (-) Decorative designs drawn with coloured powder - Everyday in front of house, in front of Tulasikatte putting Rangoli is a daily custom. Soaking rice in water grinding glossily in grinding stone put Rangoli on festival days and in front of decorated plank in marriage pandal, Rangoli put out of rice flour after dried, even if water falls on that it will not spoil.

While performing Havan homas around homakunda, on the day of Ganapathi festival, Satyanarayanavratha, write Rangoli in varieties of color. It is also in vogue to put rangoli on road in front of house when village deity's procession comes.

On the day of death ceremony, they do not put rangoli in front of house. After brahmins take food, washing hands and come inside at the entrance putting two stripes of rangoli is the custom.

Powder made of white stone by crushing is Rangoli (rangavalli). With rangoli write decorative designs in front of Pooja room and in front of house. Everyday morning sprinkling water at entrance of house write two stripes of rangoli. Mixing colored powder to rangoli write varieties of designs. You must see the charm during housewarming ceremony. Writing Rangoli is an art. They also call it as Rangavalli art.

Eg: Rangamma of our village is an expert in putting Rangoli.

Eg: Today the procession of Ramadevaru comes. Put rangoli on road also.

See: Rangavalli

889. ರಂಪ: ಗರಗಸದ ಹಾಗೆ ಚೂಪು ಹಲ್ಲುಗಳುಳ್ಳ ದೊಡ್ಡ ಗರಗಸಕ್ಕೆ **ರಂಪ** ಎಂದು ಹೆಸರು. ದಪ್ಪವಾದ ಮರದ ದಿಮ್ಮಿಗಳನ್ನು ಕತ್ತರಿಸಲು ರಂಪವನ್ನು ಬಳಸುತ್ತಾರೆ. ಗರಗಸದಿಂದ ಕೊಯ್ಯುವುದಕ್ಕೆ ಒಬ್ಬರೇ ಸಾಕು. ರಂಪದಿಂದ ಮರದ ದಿಮ್ಮಿಗಳನ್ನು ಕೊಯ್ಯಲು ಇಬ್ಬರು ಬೇಕು. ರಂಪದ ಎರಡು ತುದಿಯಲ್ಲೂ ಮರದ ಹಿಡಿ ಇರುತ್ತೆ.



ಹುಡುಗರು ಗಲಾಟೆ ಮಾಡುತ್ತಿದ್ದರೆ ರಂಪ ಅನ್ನುವ ಪದವನ್ನು ಹೇಳುತ್ತಾರೆ.

ಉದಾ: ರಂಪ ಅಲ್ಲಿಗೆ ತಂದುಕೊಡು.

ಉದಾ: ಏನಾಕ್ ಹೀಗೆ ರಂಪ ಮಾಡ್ತಿದೀರೋ, ಸ್ವಲ್ಪ ಗಂಭೀರವಾಗಿ ಕುಂತ್ಕಂಡು ಕೇಳಿ.

<rampa> Big saw having sharp teeth like saw is called Rampa. To cut big wood log they use Rampa. One is enough to cut with saw. To cut logs with Rampa two are required. On both ends of Rampa there will be wooden handle.

If boys are making noise, they use the word Rampa.

Eg: Bring Rampa and give.

Eg: Why are you making noise like this? Sit little dignifying and listen

890. ರಕ್ಕಸಪಟ್ಟೆ: ನೋಡಿ: ಕತ್ತಾಳೆ

<rakkasapaTTe> See: kathale

891. ರಚ್ಚೆ: ಮಗು ಒಂದೇ ಸಮ ಹಟ ಮಾಡುತ್ತಿದ್ದರೆ **ರಚ್ಚೆಮಾಡ್ತಾ** ಇದೆ ಎಂದು ಹೇಳುವುದು ರೂಢಿ.

ಉದಾ: ಮಗು ಬೆಳಗಿನಿಂದ ರಚ್ಚೆ ಮಾಡ್ತಾನೆ ಇದೆ, ನಾಲ್ಕುಹಂಚಿಕಡ್ಡಿ ತಾ, ನೀವಾಳಿಸಿ ಹಾಕ್ತೀನಿ.

<rachhe> Child's Incessant - If child is crying incessantly it is common to say doing rachhe.

Eg: Child is incessantly crying since morning. Bring four hanchikaddi (a kind of grass). I will wave.



892. ರಥ ಎಳೆಯುವುದು: ರಥೋತ್ಸವದ ದಿನ ರಥವನ್ನು ಎಳೆಯುವುದಕ್ಕೆ ರಥದ ಮುಂಭಾಗದಲ್ಲಿ ಎರಡು ಕಡೆಗೂ ದಪ್ಪವಾದ ತೆಂಗಿನ ಹಗ್ಗವನ್ನು ಕಟ್ಟುತ್ತಾರೆ. ಎಲ್ಲರೂ ಹಗ್ಗವನ್ನು ಹಿಡಿದು, ಗೋವಿಂದಾ ಗೋವಿಂದಾ

ಎಂದು ಹೇಳುತ್ತಾ ರಥವನ್ನು ಎಳೆಯುತ್ತಾರೆ. ಸುತ್ತಮುತ್ತ ನಿಂತಿರುವ ಭಕ್ತಾದಿಗಳು ಹೂವು, ಬಾಳೆಹಣ್ಣಿಗೆ ದವನವನ್ನು ಸಿಕ್ಕಿಸಿ ರಥದ ಮೇಲಕ್ಕೆ ಎಸೆಯುತ್ತಾರೆ. ಒಂದುಸುತ್ತು ಪ್ರದಕ್ಷಿಣೆ ಬಂದ ನಂತರ ರಥವನ್ನು ದೇವಸ್ಥಾನದ ಹೆಬ್ಬಾಗಿಲಿನ ಮುಂದೆ ನಿಲ್ಲಿಸುತ್ತಾರೆ. ಎಲ್ಲರೂ ಚಪ್ಪಾಳೆ ತಟ್ಟಿದ ಮೇಲೆ ಉತ್ಸವ ಮೂರ್ತಿಯನ್ನು ರಥದಿಂದ ಕೆಳಕ್ಕೆ ಇಳಿಸುತ್ತಾರೆ.

ಉದಾ: ಬನ್ನಿ ನಾವೂ ರಥ ಎಳೆಯೋಣ.

<rathaeLeyuvudu> (-) Pulling of the car - On Car festival day, to pull the Car in front tie on both sides a thick rope. Everyone holding the rope reciting 'Govindaa, govindaa' pull the Car. Devotees standing around, throw flower, plantain on the top of Car. After going around the temple once, they stop the Car in front of main entrance of the temple. All will clasp and bring down the deity's idol.

Eg: Come, let us also pull the Car.

893. ರಥಬೀದಿ: ರಥೋತ್ಸವ ಕಾಲದಲ್ಲಿ ಊರಲ್ಲಾಗಲಿ, ದೇವಸ್ಥಾನಲಾಗಲಿ ರಥ ಎಳೆಯುತ್ತಾರೆ. ನಿರ್ದಿಷ್ಟವಾದ ರಸ್ತೆಗಳಲ್ಲಿ ಮಾತ್ರ ಸಂಚರಿಸುತ್ತದೆ. ಈ ಮಾರ್ಗಗಳು ಬದಲಾಗುವುದಿಲ್ಲ. ಬೆಂಗಳೂರಿನ ಕರಗ ನೂರಾರು ವರ್ಷಗಳಿಂದ ಅದೇ ಮಾರ್ಗದಲ್ಲಿ ಸಂಚರಿಸುತ್ತದೆ. ನಮ್ಮೂರಿನ ಹತ್ತಿರವಿರುವ ಅಂತರಗಟ್ಟೆಯಲ್ಲಿ ದೇವಸ್ಥಾನದ ಸುತ್ತಲೂ ರಥ ಸಂಚರಿಸುತ್ತದೆ. ಹೀಗೆ ರಥ ಸಂಚರಿಸುವ ಬೀದಿಯನ್ನು ತೇರಿನರಸ್ತೆ ಅಥವಾ **ರಥಬೀದಿ** ಎಂದು ಕರೆಯುತ್ತಾರೆ. ಅನೇಕ ಊರುಗಳಲ್ಲಿ ದೇವಸ್ಥಾನಗಳಬಳಿ ರಥಬೀದಿಗಳಿವೆ.

<rathabeedi> Car Street - During Car festival time, either in town or in temple, pull the Car. It moves in specific roads. These routes will not change. Karaga in Bengaluru from hundred years move in the same route. In Antharagatte near our village Car moves around the temple. Like this the road on which Car moves, they call it as Therina raste or Rathabeedi. In many towns near temples there are Car Streets.

894. ರಥೋತ್ಸವ: ಕೆಲವು ದೇವರುಗಳಿಗೆ ರಥೋತ್ಸವವೂ ಉಂಟು. ಊರಿಂದೂರಿಗೆ ಪ್ರಯಾಣ ಮಾಡುವವರಿಗೆಲ್ಲ ದಾರಿಯುದ್ದಕ್ಕೂ ಪಾನಕ, ನೀರುಮಜ್ಜಿಗೆ, ಕಬ್ಬಿನಹಾಲನ್ನು ಹಂಚುತ್ತಿದ್ದರು. ಚಿಕ್ಕಮಗಳೂರಿನ ಹತ್ತಿರವಿರುವ

ಹಿರೇಮಗಳೂರಿನಲ್ಲಿ, ತರೀಕೆರೆಗೆ ಸಮೀಪವಾಗಿರುವ ಸೋಂಪುರದಲ್ಲಿ, ತುಮಕೂರಿನ ಹತ್ತಿರದ ಮುಳುಕುಂಟೆಗ್ರಾಮ, ಅಂತರಗಟ್ಟೆ ಇಲ್ಲೆಲ್ಲ ರಥೋತ್ಸವಗಳು ವರ್ಷಕ್ಕೊಂದಾವರ್ತಿ ನಡೆಯುತ್ತವೆ. ದೇವಸ್ಥಾನದ ಮುಂಭಾಗದಲ್ಲಿ ರಸ್ತೆಯುದ್ದಕ್ಕೂ ಆಪಕ್ಕ, ಈಪಕ್ಕ ಪುರಿ ಬತ್ತಾಸು, ಹಣ್ಣುಹೂವುಗಳ ಅಂಗಡಿಗಳು ಬಂದ ಭಕ್ತಾದಿಗಳಿಗೆಲ್ಲ ಸುಸ್ವಾಗತ ನೀಡುತ್ತವೆ.

ರಥೋತ್ಸವಗಳಲ್ಲಿ ಬಂದವರಿಗೆಲ್ಲ ಸಂತರ್ಪಣೆ. ಹಯಗ್ರೀವ, ಸಜ್ಜಿಗೆ, ಪಾಯಸದೂಟ. ಊಟದ ಏರ್ಪಾಟನ್ನು ಹತ್ತಿರದಲ್ಲೆ ಇರುವ ಛತ್ರದಲ್ಲಿ ಮಾಡಿರುತ್ತಾರೆ. ಚಿಕ್ಕಮಗಳೂರಿನ ಸಮೀಪದಲ್ಲಿರುವ ಹಿರೇಮಗಳೂರಿನಲ್ಲಿ ನಡೆಯುವ ರಥೋತ್ಸವದ ದಿನ ದಾರಿಯುದ್ದಕ್ಕೂ ಅಲ್ಲಲ್ಲೆ ಅಟ್ಟಣೆಗಳನ್ನು ಹಾಕಿ ಬರುವ ಭಕ್ತಾದಿಗಳಿಗೆಲ್ಲ ಪಾನಕ, ನೀರುಮಜ್ಜಿಗೆ ನೀಡುತ್ತಿದ್ದರು. ಉದಾ: ಹಿರೇಮಗಳೂರು ರಥೋತ್ಸವಕ್ಕೆ ಈ ವರ್ಷ ನಮ್ಮ ಹಳ್ಳಿಯೋರು ಅರವಟ್ಟಿಗೆ ಇಟ್ಟಿದ್ದಾರೆ.

<rathoothsava> Temple car festival - For some of the deities there is Rathotsava. For devotees travelling from place to place, throughout the road, juice, buttermilk, sugarcane juice they were offering. In Hiremagalur near Chikmagalur, in Sompura near Tarikere, in Mulukuntegrama near Tumkur, Antharagatte, in all these places once a year Car festival takes place. In front of the temple throughout the street that side, this side, Puri, battasu, fruits flowers shops welcome the devotees. During Car festifvals for the coming people, food arrangement. Hayagriva, Sajjige, Kheer lunch. Food arrangement will have been done in the Choultry near the temple. On the Car festival day taking place in Hiremagalur, throughout the road putting a pandal offering juice and buttermilk to the coming devotees.

Eg: For Car festival of Hiremagalur this year, our villagers have put Aravattige (A temporary roadside charitable house).

895. ರವೆ: ಅಕ್ಕಿತರಿಯನ್ನು ರವೆ ಎನ್ನುತ್ತಾರೆ. ದಪ್ಪತರಿ ಸಣ್ಣತರಿ ಎಂದು ಎರಡು ವಿಧ. ಸಣ್ಣತರಿಯನ್ನು ಗಂಜಿಗೆ ದಪ್ಪತರಿಯನ್ನು ಉಪ್ಪಿಟ್ಟು ಇತ್ಯಾದಿಗಳಿಗೆ ಬಳಸುತ್ತಾರೆ. ತುಂಬಾ ಸಣ್ಣಗಿರುವ ರವೆಯನ್ನು ಚಿರೋಟಿರವೆ ಎನ್ನುತ್ತಾರೆ. ಚಿರೋಟಿ ಮಾಡಲು ಅತಿ ಸಣ್ಣರವೆ ಬೇಕು.

ಉದಾ: ಚಿರೋಟಿ ಮಾಡಿಸಬೇಕು 2 ಕೆಜಿ ಚಿರೋಟಿರವೆ ತರಿಸು.

ನೋಡಿ: ಅಕ್ಕಿತರಿ

<rave> (-) Small groits of wheat/rice - Grounded rice is called rave. Thick rave and small rave are two types. Small rave for Ganji (Gruel), thick rave for Upma etc. they use. Very small rave is called Chiroti rave. For making Chiroti (a kind of Sweet) very small rave is required.


Eg: Must get done Chiroti. Get two kg of Chiroti rave.

896. ರಸದಾಳೆಕಬ್ಬು: ನೋಡಿ: ಪಟಾಪಟಿಕಬ್ಬು

<rasadaaLekabbu> See: Patapatikabbu.

897. ರಾಗಿಕಲ್ಲು: ನೋಡಿ: ಬೀಸುವಕಲ್ಲು

<raageekallu> See: Beesuvakallu



898. ರಾಟೆ: ರಾಟೆಯನ್ನು ಮರದ ಕೊರಡಿನಿಂದಲು, ಗಡಗವನ್ನು ಎರಕದ ಕಬ್ಬಿಣದಿಂದಲು ತಯಾರು ಮಾಡುತ್ತಾರೆ. ರಾಟೆಯ ಬಾವಿಯಾದರೆ, ಬಾವಿಯ ಅಗಲಕ್ಕು ಇರುವ ಕಲ್ಲು ಚಪ್ಪಡಿಯನ್ನು ಮೇಲ್ಭಾಗದಲ್ಲಿ ನಿಲ್ಲಿಸಿ ಚಪ್ಪಡಿಯ ಮಧ್ಯೆ ಎರಡು ರಂಧ್ರಗಳನ್ನು ಮಾಡಿ ಅದರ ಮೂಲಕ ರಾಟೆಯನ್ನು ಸಿಕ್ಕಿಸುತ್ತಾರೆ. ರಾಟೆಯ ಮೇಲೆ ನೀರು ಸೇದುವ ಹಗ್ಗವನ್ನು ಇಳಿಬಿಟ್ಟು ಹಗ್ಗದ ಒಂದು ತುದಿಗೆ ಕೊಡವನ್ನು ಕಟ್ಟಿ ಬಾವಿಯ ಒಳಕ್ಕೆ ಬಿಟ್ಟಾಗ ನೀರು ಕೊಡಕ್ಕೆ ತುಂಬಿಕೊಳ್ಳುತ್ತದೆ. ಹಗ್ಗದ ಇನ್ನೊಂದು ತುದಿಯನ್ನು ಮೇಲಕ್ಕೆ ಎಳೆದಾಗ ತುಂಬಿದ ಕೊಡ ಮೇಲಕ್ಕೆ ಬರುತ್ತೆ.

ಗಡಗದಿಂದಲೂ ಇದೇ ರೀತಿ ನೀರು ಸೇದಬಹುದು. ಕೆಲಸವಾದ ನಂತರ ಗಡಗವನ್ನು ತೆಗೆದಿಡಬಹುದು. ನಮ್ಮ ಹಳ್ಳಿಗಳಲ್ಲಿ ಕೆಲವು ಕಡೆ ನೆಲಬಾವಿಗಳಿವೆ. ಬಾವಿಯ ಮೇಲ್ಭಾಗ ನೆಲಮಟ್ಟಕ್ಕೆ ಇರುತ್ತೆ. ಆ ತರಹ ಬಾವಿಗೆ ರಾಟೆ, ಗಡಗದ ಅವಶ್ಯಕತೆ ಇರುವುದಿಲ್ಲ. ಹಗ್ಗವನ್ನು ಕೊಡ ಸಮೇತ ಬಾವಿಯೊಳಗೆ ಇಳಿಬಿಟ್ಟು, ನೀರು ತುಂಬಿದ ನಂತರ ಕೊಡವನ್ನು ಮೇಲಕ್ಕೆ ಎಳೆಯಬೇಕು.

ಹತ್ತಿಯಿಂದ ನೂಲು ತೆಗೆಯುವ ಸಾಧನಕ್ಕೂ ರಾಟೆ ಅನ್ನುತ್ತಾರೆ. ರಾಟೆಯಿಂದ ನೂಲನ್ನು ತೆಗೆದು ಚಕ್ರಕ್ಕೆ ಸುತ್ತಿ ಕೈಮಗ್ಗದವರಿಗೆ ಕೊಟ್ಟು ಬಟ್ಟೆಯನ್ನು ಮಾಡಿಸಿಕೊಳ್ಳುತ್ತಿದ್ದರು.

ಉದಾ: ರಾಟೆ ಮೇಲೆ ನೀರು ಸೇದುವ ಹಗ್ಗ ಹಾಕ್ಟಿಟ್ಟಾ.

ನೋಡಿ: ಗಡಗ, ನೆಲಬಾವಿ

<raaTe> Spinning wheel - For rate (wheel) made of wooden log, Gadaga made of cast iron. If it is wheel well, the stone slab through width of well above, making two holes, through that attach the wheel. On the wheel the rope is swung. When tying the vessel to one end leaves into well, water fills into vessel. From the other end of rope when pulls up the vessel filled with water comes up.

From Gadaga also we can draw water in the same way. After the work is over, we can remove Gadaga. In our villages, some of the places, there are ground wells. Upper portion of the well will be to the ground level. For such type of well there is no necessity of wheel, gadaga. Rope together with vessel pushed into well, after filled with water, must be pulled up.

The equipment used for weaving thread of cotton is called Rate (Wheel). Making thread from Rate, tying to a wheel, and giving to hand loomers were getting cloth made.

*Eg: Put rope for drawing water on Rate***.**

See: Gadaga, Nelabavi

899. ರಾಜಿ: ಒಬ್ಬರಿಗೊಬ್ಬರು ಜಗಳವಾಡಿ ಪರಿಸ್ಥಿತಿ ಹದಗೆಟ್ಟರೆ ಹಳ್ಳಿಯ ಹಿರಿಯರು ಅವರಿಗೆ ಸಮಾಧಾನದ ನಾಲ್ಕು ಮಾತುಗಳನ್ನು ಹೇಳಿ **ರಾಜಿ** ಮಾಡಿಕೊಳ್ಳಿ ಎಂದು ಬುದ್ಧಿವಾದ ಹೇಳುತ್ತಾರೆ.

ಉದಾ: ಇರೂ ನಾಲ್ಕು ಮನೆಯಾಗೆ ಒಬ್ಬರಿಗೊಬ್ಬರು ಕಚ್ಚಾಡಿದರೆ ಏನು ಸಾರ್ಥಕ, ಇಬ್ಬರೂ ರಾಜಿ ಮಾಡ್ಕಂಡು ಬದುಕುವ ದಾರಿ ನೋಡಿ.

<raaji> (-) Quarreling each other, if it becomes uncontrollable, the elderly persons of the village console them and advise to compromise.

Eg: What is the use of quarrelling each other within these four houses? Compromise and lead a good life.

900. ರಾಮನವಮಿ: ರಾಮನವಮಿ, ಶಿವರಾತ್ರಿ, ಕೃಷ್ಣ ಜನ್ಮಾಷ್ಟಮಿ ಹಬ್ಬ ಸೇರಿಸಿ ದಿವಸ ಎಲ್ಲರ ಮನೆಯಲ್ಲು ಪಾನಕ, ಕೋಸುಂಬರಿ, ರಸಾಯನ, ಗೊಜ್ಜವಲಕ್ಕಿ. ಹಣ್ಣಿನ ಕಾಲವಾದ್ದರಿಂದ ಮಾವಿನ ಸೀಕರಣೆ ಮತ್ತು ಹಲಸಿನಹಣ್ಣಿನ ತೊಳೆಯನ್ನು ಕೊಡುತ್ತಾರೆ. ಆ ದಿನ ಎಲ್ಲರನ್ನು ಕರೆದು ಶ್ರೀರಾಮ ದೇವರ ಫ಼ೋಟೊ ಇಟ್ಟು ಪೂಜೆ ಮಾಡಿ, ಬಂದ ಬ್ರಾಹ್ಮಣರೆಲ್ಲರಿಗೂ ಮಂಗಳಾರತಿ, ಹೂವು, ಗಂಧ, ಅಕ್ಷತೆ ಕೊಟ್ಟು ನಮಸ್ಕರಿಸುತ್ತಾರೆ. ಬುಕ್ಕಾಂಬುಧಿ ಬ್ರಾಹ್ಮಣರ ಕೇರಿಯಲ್ಲಿ ಎಲ್ಲರ ಮನೆಯಲ್ಲು ಇದೇ ಸಡಗರ. ಬುಕ್ಕಾಂಬುಧಿಯಲ್ಲಿ ಸುಮಾರು ಇಪ್ಪತ್ತು ಸಂಸಾರಗಳಿದ್ದುವು. ಪ್ರತಿಯೊಬ್ಬರೂ ಎಲ್ಲರನ್ನೂ ಅವರವರ ಮನೆಗೆ ರಾಮನವಮಿಪೂಜೆಗಾಗಿ ಆಹ್ವಾನಿಸುತ್ತಿದ್ದರು.

ನೋಡಿ: ಪಾರಾಯಣ, ಹರಿಕಥೆ, ಕೋಸುಂಬರಿ

<raamanavami> A festival - On Ramanavami day in all the houses, panaka (juice), kosumbari, rasayana (plantain mixed with jaggery), Gojjavalakki (made of Poha), since fruit season, mango, and jackfruit they offer. Inviting all on that day putting Srirama's photo worship, wave arati to all brahmins invited, offer flower and sandal paste, prostrate them. In Brahmin Street, in all houses of Bukkambudhi same enthusiasm. In Bukkambudhi there were twenty families. Everyone was inviting everybody to his house for Ramanavami Pooja.

See: Parayana, Harikathe, Kosumbari.

901. ರಾಮೋತ್ಸವ: ರಾಮೋತ್ಸವ ಊರಿನ ದೊಡ್ಡ ಹಬ್ಬಗಳಲ್ಲಿ ಒಂದು. ಮನೆಮನೆಗಳಲ್ಲಿ ರಾಮನವಮಿ ಆಚರಿಸುತ್ತಾರೆ. ರಾಮೋತ್ಸವದಲ್ಲಿ ಊರಿನಲ್ಲಿ ಅರವಟ್ಟಿಗೆ ಇಟ್ಟು ಪಾನಕ, ಕೋಸುಂಬರಿ, ಮಜ್ಜಿಗೆಗಳನ್ನು ರಾಮನವಮಿದಿನದಂದು ಹಂಚುತ್ತಾರೆ. ರಥೋತ್ಸವದ ದಿನಗಳಲ್ಲೂ ಪಾನಕ, ಕೋಸುಂಬರಿ ಹಂಚುವುದುಂಟು.

ಚಿಕ್ಕಮಗಳೂರಿನಲ್ಲಿ ಒಂದುಬಾರಿ ರಾಮೋತ್ಸವದ ದಿನ ರಸ್ತೆಯಮೇಲೆ ಉತ್ಸವ ಹೊರಟಾಗ ಮುಂದುಗಡೆ ಭಕ್ತರು ರಾಮಭಜನೆಮಾಡುತ್ತಾ ಹೋಗುತ್ತಿದ್ದರು. ಆಗ ಚನ್ನಪ್ಪಯ್ಯ ಎಂಬುವವರು ಆಂಜನೇಯವೇಷ ಹಾಕಿದ್ದರು. ಆ ವೇಷದಲ್ಲಿ ಅವರು ಆವೇಶದಿಂದ ಅಲ್ಲಿಇಲ್ಲಿ ಎಗರಾಡಿ ರಾಮೋತ್ಸವ ಮುಗಿದ ಒಂದು ವಾರದವರೆಗೂ ಮೈಮೇಲೆ ಪ್ರಜ್ಞೆ ಇಲ್ಲದಂತೆ ಕಿರುಚುತ್ತಿದ್ದರು!

<raamootsava> A festival - Ramotsava is one of great festivals of village. In almost all the houses, they perform Ramanavami. During Ramotsava, installing Aravattige (Charitable road/house) offer juice, Kosumbari, buttermilk on Ramanavami day. During Car festival days also, they distribute juice, kosumbari.

In Chikmagalur, once when procession was going on road, devotees were doing bhajan in the front. That time, Channappayya was wearing the dress of Hanuman. With that dress in full excitement jumping here and there, he was screaming even after one week of Ramotsava!


902. ರೂಬುರೂಬು: ಯಾವುದಾದರೂ ತೀರ್ಮಾನವನ್ನು ಎದುರು ಎದಿರಿಗೇ ಮಾಡುವುದಕ್ಕೆ **ರೂಬುರೂಬು** ಎನ್ನುತ್ತಾರೆ.

ಉದಾ: ಸುಮ್ಮನೆ ಯತಾಕೆ ಜಗಳ ಆಡ್ತೀರಿ, ರೂಬುರೂಬು ಮಾತನಾಡಿಕೊಂಡು ಒಂದು ಸರಿಯಾದ ತೀರ್ಮಾನಕ್ಕೆ ಬನ್ನಿ. ರೂಬುರೂಬು ಮಾತನಾಡಿದರೆ ಮನಸ್ಸು ಬಿಚ್ಚಿ ಸಮಸ್ಯೆಯನ್ನು ಬಗೆಹರಿಸಬಹುದು.

<rooburoobu> Face to face in person - To take any decision face to face, they say Rooburoobu.

Eg: Why you quarrel simply? Talk face to face and come to a decision. If you talk face to face, can solve the problem.

903. ರೂಲುದೊಣ್ಣೆ: ಸುಮಾರು ಒಂದು ಮೊಳ ಉದ್ದದ ದುಂಡಾಗಿರುವ ಕರೀಮರದ ಕೋಲನ್ನು **ರೂಲುದೊಣ್ಣೆ** ಎಂದು ಹೇಳುತ್ತಾರೆ. ಪ್ರತಿಯೊಬ್ಬ ಶ್ಯಾನುಭೋಗರ ಮನೆಯಲ್ಲೂ ಕಾಲ್ಮಣೆ, ರೂಲುದೊಣ್ಣೆ ಇದ್ದೇ ಇರುತ್ತೆ. ಕಾಗದದ ಮೇಲೆ ನೆಟ್ಟಗೆ ಗೆರೆ ಎಳೆಯಲು ರೂಲುದೊಣ್ಣೆಯನ್ನು ಬಳಸುತ್ತಾರೆ. ಸ್ಕೇಲನ್ನು (ಅಳತೆಪಟ್ಟಿ) ಗೆರೆ ಎಳೆಯಲು ಈಗಿನವರು ಬಳಸುತ್ತಾರೆ.



ಉದಾ: ಇಲ್ಲಿದ್ದ ರೂಲುದೊಣ್ಣೆ ಯಾರು ತಗಂಡು ಹೋದರು?

<rooludoNNe> Scale used by Shanbhog - About one-and-half foot length round black wood stick, they say Rooludonne. In every Shanbhog's house, small stool with legs

and Rooludonne will be there. These people use scale for drawing lines.

Eg: Who has taken the Rooludonne from here?



904. ರೈಲುಚೊಂಬು: ರೈಲುಚೊಂಬನ್ನು ಎರಕದ ಲೋಹದಿಂದ ತಯಾರಿಸುತ್ತಾರೆ. ಊರಿಂದೂರಿಗೆ ಪ್ರಯಾಣ ಮಾಡುವಾಗ ಕುಡಿಯುವ ನೀರನ್ನು ಇಟ್ಟುಕೊಳ್ಳಲು ರೈಲುಚೊಂಬನ್ನು ಬಳಸುತ್ತಿದ್ದರು. ರೈಲುಚೊಂಬಿನ ಬಾಯಿಗೆ ಮುಚ್ಚುವ ಮುಚ್ಚಳವು ಸ್ಕ್ರೂ ತರಹ ತಿರುಗುತ್ತದೆ. ಅದರ ಮೇಲೆ ಹಿಡಿ ಇರುವುದರಿಂದ ಕೈಯ್ಯಲ್ಲಿ ಹಿಡಿದುಕೊಂಡು ಹೋಗಬಹುದು.

ಉದಾ: ಅಟ್ಟದಮೇಲಿರುವ ರೈಲುಚೊಂಬನ್ನು ತಂದು ಶುಭ್ರವಾಗಿ ತೊಳೆದಿಡು.

<railuchombu> Railuchombu (a round vessel with screw lid) is made of bronze. While travelling from place to place, to keep drinking water, were using railuchombu. The lid to cover the vessel also turns like screw. Since there is a handle on top of that, can go holding in hand.


Eg: Bring down Railuchombu from top and keep cleanly washed.

905. ರೊಪ್ಪ: ಕುರಿಹಿಂಡು ವಾಸಿಸುವ ಜಾಗಕ್ಕೆ **ರೊಪ್ಪ** ಎಂದು ಹೆಸರು. ಯಾವ ಹೊಲಕ್ಕೆ ಬೇಕಾದರೂ ಕುರಿಯ ಮಾಲಿಕರಿಗೆ ತಿಳಿಸಿದರೆ, ಬೆಳಗಿನಿಂದ ಸಂಜೆಯವರೆಗೆ ಕುರಿಗಳನ್ನು ತಂದು ನಿಲ್ಲಿಸುತ್ತಾರೆ. ಅದಕ್ಕೆ ಹಣ ಕೊಡಬೇಕು. ದಿನವೆಲ್ಲಾ ಕುರಿಗಳು ಹಾಕುವ ಹಿಕ್ಕೆ ಹೊಲಕ್ಕೆ ಗೊಬ್ಬರ ಆಗುತ್ತದೆ.

ಉದಾ: ತಿಮ್ಮೇಗೌಡನ ರೊಪ್ಪಕ್ಕೆ ಇವತ್ತೇ ಹೇಳಿಕಳಿಸು.

<roppa> (-) Fold for sheep - Place where sheep live is called roppa. To which field you want, if you tell the owner of sheep, they bring sheep and make them to stand from morning to evening. For that we must pay money. The whole day, the sheep produce globules of excreta will become manure.

Eg: Tell today itself to Thimmegowda's roppa.



906. ರೋಣುಗಲ್ಲು: ಹಳ್ಳಿಗಳಲ್ಲಿ ಆಗಿನ ಕಾಲಕ್ಕೆ ಸಿಮೆಂಟ್ ಇನ್ನೂ ಬಳಕೆಗೆ ಬಂದಿರಲಿಲ್ಲ. ಸುಣ್ಣ ಮತ್ತು ಮರಳಿಗೆ ನೀರನ್ನು ಬೆರೆಸಿ ನುಣ್ಣಗೆ ಅರೆದು ಗಾರೆಯನ್ನು ಮಾಡುತ್ತಿದ್ದರು. ಸುಮಾರು ಒಂದು–ಒಂದೂವರೆ ಅಡಿ ಅಗಲ ಅಷ್ಟೇ ಅಡಿ ಆಳದ ಚಕ್ರಾಕಾರವಾದ ಗುಂಡಿಯನ್ನು ಮಾಡಿ, ಅದರಲ್ಲಿ ಸುಣ್ಣ ಮತ್ತು ಮರಳನ್ನು ಹಾಕಿ ದಪ್ಪವಾದ ರೋಣುಗಲ್ಲಿನಿಂದ ಅರೆಯುತ್ತಿದ್ದರು. **ರೋಣುಗಲ್ಲು** ಸುತ್ತುವುದು ಎತ್ತುಗಳ ಸಹಾಯದಿಂದ. ಗಾರೆ ಸಿಮೆಂಟಿಗಿಂತ ಗಟ್ಟಿ ಎಂದು ಹಳ್ಳಿಗರ ಅಭಿಪ್ರಾಯ.

ಉದಾ: ನಮ್ಮ ಹಳ್ಳಿಗೆ ಬರುವ ರಸ್ತೇಲಿ ಕಲ್ಲುಗಳೆಲ್ಲ ಎದ್ದುಬಂದ್ಬಿಟ್ಟಿದೆ, ಎರಡುಸಲ ರೋಣುಗಲ್ಲನ್ನು ಹಾಯಿಸಬೇಕು.

<ronoNgallu> Grinding machine fitted with round stone - In villages at that time cement was not in use. Mixing water to lime and sand grinding glossily, were making mortar. About one to one-and-half foot width, the same measure depth pit, putting in that lime and sand, were grinding with thick round stone with a hole in center. This stone turns with help of oxen. The mortar is stronger than cement is the opinion of villagers.

Eg: In the road connecting to our village, stones have come up. Two times must roll the Ronugallu.

❑

ಲ / La



907. ಲಂಟಾನ: ಲಂಟಾನ ಒಂದು ಜಾತಿಯ ಸಣ್ಣ ಗಿಡ. ರೆಂಬೆಯ ಸುತ್ತಲು ತರಕಲುತರಕಾಲಾಗಿ ಚಿಕ್ಕ ಮುಳ್ಳುಗಳಿರುತ್ತವೆ. ಗಾಯಗಳಿಗೆ ಲಂಟಾನದ ಸೊಪ್ಪನ್ನು ಅರೆದು ಅದರ ರಸವನ್ನು ಹಚ್ಚಿ ಗಾಯವನ್ನು ವಾಸಿ ಮಾಡುತ್ತಿದ್ದರು. ಇದು ಬಹಳ ಸುಲಭದ ಔಷಧಿ. ಗಾಯದ ಮೇಲೆ ಹಚ್ಚಿದ ರಸ ಒಣಗಿದ ನಂತರ ಅದರ ಮೇಲೆ ನೀರು ಬಿದ್ದರೂ ಕರಗುವುದಿಲ್ಲ.

ಉದಾ: ನೋಡು ಹ್ಯಾಗೆ ರಕ್ತ ಸೋರ್ತಾ ಇದೆ ಲಂಟಾನದಸೊಪ್ಪು ತಗಂಬಾ ಅರೆದು ಹಚ್ಚೀನಿ.

ಉಚ್ಚಾರಭೇದ: ಲಾಂಟಾನಾ (ಲಂಟಾನ)

<lanTaana> A kind of shrub - Lantana is a kind of small plant. Around the branch, there will be small thorns. They were curing wounds smearing the juice of lantana leaves duly crushed. This is a medicine with no cost. Juice smeared on wound when dried, even if water falls on that will not dissolve.

Eg: See how blood is oozing. Bring lantana leaves. Will crush and smear.

Different pronunciation: Laantana (Lantaana)



908. ಲಕೋಟಿನ ಹೋಳಿಗೆ: ಸಣ್ಣರವೆಯನ್ನು ಹಾಕಿ ಕಣಿಕ ಮಾಡಿಕೊಂಡು ಅಂಗೈ ಅಗಲದ ಹಾಳೆಯಾಗಿ ತಟ್ಟಿ ಅದರ ಮೇಲೆ, ಹುರಿಗಡಲೆ ಹಿಟ್ಟು, ಸಕ್ಕರೆ, ಕೊಬರಿತುರಿ ಮಿಶ್ರಣವನ್ನು ಒಂದು ಸೌಟಿನಷ್ಟು ಹರಡಿ, ಲಕೋಟೆಯಂತೆ ನಾಲ್ಕು ಕಡೆಯು ಮಡಿಸಿ, ಕಾವಲಿಯ ಮೇಲೆ ಸುಡುತ್ತಾರೆ. ಇದನ್ನು **ಲಕೋಟಿನ ಹೋಳಿಗೆ** ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಲಕೋಟನ ಹೋಳಿಗೆಯನ್ನು ವಿಜಯದಶಮಿಯ ದಿನ ಮಾಡುತ್ತಾರೆ.

ಉದಾ: ನಮ್ಮಲ್ಲಿ ವಿಜಯಮ್ಮ ಲಕೋಟಿನ ಹೋಳಿಗೆ ಮಾಡೋದಕ್ಕೆ ತುಂಬ ಹೆಸರಾದವರು.

<lakooTanahooLige> (-) A kind of sweet - Making duff with fine soji, patting like a round sheet of a size of palm, on that putting the mixture of roasted gram powder, sugar, dry coconut powder, folding like an envelope, burn on pan. They say this Lakotanaholige. Generally, they do Lakotanaholige on Vijayadasami Day.

Eg: Among us, Vijayamma is famous in doing Lakotanaholige.

909. ಲಕ್ವ: ಕೈ ಅಥವಾ ಕಾಲು ಅದರ ಶಕ್ತಿಯನ್ನು ಇದ್ದಕ್ಕಿದ್ದಂತೆ ಕಳೆದುಕೊಳ್ಳುವುದಕ್ಕೆ **ಲಕ್ವ** ಅನ್ನುತ್ತಾರೆ. ಹಳ್ಳಿಗಾಡುಗಳಲ್ಲಿ ಹಿಂದೆ ಆಸ್ಪತ್ರೆ ಸೌಕರ್ಯ ಬಹಳ ಕಡಮೆಯಾಗಿತ್ತು. ಪ್ಲೇಗು, ಕಾಲರಾ ಮುಂತಾದ ರೋಗಗಳು ಬಂದಾಗ ಚಿಕಿತ್ಸೆ ಸರಿಯಾಗಿ ನಡೆಯದಿದ್ದರೆ, ಲಕ್ವ ಹೊಡೆಯುತ್ತಿತ್ತು. ಇದನ್ನು ಪಾರ್ಶ್ವವಾಯು ಎಂದೂ ಹೇಳುತ್ತಾರೆ. ದೇಹದ ಬಲಭಾಗ ಅಥವಾ ಎಡಭಾಗ ಪೂರಾ ಸ್ವಾಧೀನದಲ್ಲಿರುವುದಿಲ್ಲ.

ಉದಾ: ಸಣ್ಣೇಗೌಡನಿಗೆ ಲಕ್ವ ಹೊಡೆದಿದೆಯಂತೆ.

<lakva> Paralysis - If hand or leg loses its strength suddenly, they call it as Lakva. In villages the hospital facility was less. When plague, cholera etc. diseases occur if treatment is not done enough, paralysis use to occur. They call this Parshvavayu. Either the right side or left side will not be in control.

Eg: It seems Sannegowda has paralysis.

910. ಲಟ್ಟಣಿಗೆ: ಪೂರಿ, ಚಪಾತಿ, ಒಬ್ಬಟ್ಟು ಮುಂತಾದುವನ್ನು ಲಟ್ಟಿಸಿ ಮಾಡುವುದಕ್ಕೆ ಉಪಯೋಗಿಸುವ ಸಾಧನವೆ **ಲಟ್ಟಣಿಗೆ**. ಲಟ್ಟಣಿಗೆ ಸುಮಾರು ಒಂದು-ಒಂದೂವರೆ ಅಡಿ ಉದ್ದವಿದ್ದು, ದುಂಡಗಿರುವ ಮರದ ಕೋಲು. ಲೋಹದಿಂದಲೂ ಲಟ್ಟಣಿಗೆಯನ್ನು ಮಾಡುತ್ತಾರೆ. ಚನ್ನಪಟ್ಟಣದಲ್ಲಿ ಬಣ್ಣದ ಲಟ್ಟಣಿಗೆ ತಯಾರು ಮಾಡುತ್ತಾರೆ.



ಉದಾ: ಚಿಕ್ಕಮ್ಮಾ ಲಟ್ಟಣಿಗೆ ಎಲ್ಲಿಟ್ಟಿದ್ದೀಯಾ ತಗೊಂಬಾ ಹಪ್ಪಳ ಮಾಡಬೇಕು.

<laTTaNige> Rolling pin - Equipment used for making Poori, Chapati, Obbattu (a kind of sweet) is Lattanige. Lattanige is about one to one-and-half foot length round wooden stick. Make Lattanige from metal also. In Channapatna (Karnataka) they manufacture Lattanige with colored wood.

Eg: Aunt, where have you kept Lattanige? Bring, must do papad.


911. ಲಾಜಾಹೋಮ: ಮದುವೆ ಸಮಾರಂಭದಲ್ಲಿ ವಧೂವರರಿಬ್ಬರಿಂದಲೇ ಮಾಡಿಸುವ ಹೋಮ ಲಾಜಾಹೋಮ. ಲಾಜಾಹೋಮಕ್ಕೆ ಭತ್ತದ ಅರಳನ್ನು ಬಳಸುತ್ತಾರೆ. ಪುರೋಹಿತರು ಒಂದೊಂದು ಮಂತ್ರವನ್ನು ಹೇಳಿದಾಗಲೂ ಅರಳನ್ನು ಮುಷ್ಟಿಯಿಂದ ಹಿಡಿದು **ಹೋಮಕುಂಡಕ್ಕೆ** ಹಾಕುತ್ತಾರೆ.

ಉದಾ: ಲಾಜಾಹೋಮಕ್ಕೆ ಭತ್ತದರಳು ಸಿದ್ಧಾಮಾಡಿ.

<laajaahoma> (-) Offering of parched paddy to the sacrificial fire - During the marriage, got done by bride-bridegroom only is Lajahoma. For Lajahoma they use parched paddy. Priest reciting hymns one by one, they hold parched paddy in hand and put into Homakunda.

Eg: For Lajahoma get parched paddy ready.

912. ಲಾಟೀನು: ಲಾಟೀನು ಮನೆಯ ಹೊರಗಡೆ ಹೋಗುವಾಗ ಉಪಯೋಗಿಸುತ್ತಿದ್ದರು. ಅದರ ಸುತ್ತಲೂ ಗಾಜಿನ ಮುಚ್ಚಳವಿರುವುದರಿಂದ ಗಾಳಿಗೆ ದೀಪ ಆರಿಹೋಗುವುದಿಲ್ಲ. ಗಾಜಿನ ಮುಚ್ಚಳವನ್ನು ಪ್ರತಿದಿನವು ಬೂದಿಯಿಂದ ಒರೆಸಿ ಕಪ್ಪನ್ನು ಹೋಗಿಸಬೇಕು.



ಉದಾ: ಸ್ವಲ್ಪ ಲಾಟೀನು ತಗಂಬಾ ಹೊರಗಡೆಹೋಗಿ ಬರ್ತೀನಿ.


ನೋಡಿ: ಗೋಡೆದೀಪ

<laaTiinu> Lantern they were using when going out of house. Since its around glass cover is there, light will not

extinguish. Glass cover must be cleaned everyday with ash and remove black.

Eg: Bring lantern. I will go out and come.

See: Wall lamp



913. ಲಾಳ: ಲಾಳವನ್ನು ಕಬ್ಬಿಣದ ದಪ್ಪ ಪಟ್ಟಿಯಿಂದ ತಯಾರು ಮಾಡುತ್ತಾರೆ. ಅದು ಅರ್ಧಚಂದ್ರಾ ಕೃತಿಯಲ್ಲಿರುತ್ತೆ. ಕುದುರೆ ಮತ್ತು ಎತ್ತಿನ ಕಾಲುಗಳ ಗೊರಸಿನ ತಳಭಾಗಕ್ಕೆ ಲಾಳವನ್ನಿಟ್ಟು ಮಳೆಯಿಂದ ಹೊಡೆಯುತ್ತಾರೆ. ಲಾಳ ಹಾಕಿದ ಕಾಲುಗಳಿಂದ ಅವುಗಳು ಒಡಾಡುವುದು ಸುಲಭ.

<laaLa> (-) An iron device fixed to the leg of ox or horse - Lala is made of thick iron plate. It will be in a shape of half circle. To the bottom of horse leg or ox put the laala and fix with nail. With laala it will be easy for them to walk.

914. ಲಾಳಿಹೊಡೆ: ಏನೂ ಕೆಲಸ ಮಾಡದೆ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಾಡ್ತಾ ಇದ್ದರೆ **ಲಾಳಿಹೊಡೀತಾ** ಇದಾನೆ ಅಂತಾರೆ.

ಉದಾ: ಬೈಗಿನಿಂದ ಸಂಜೇವರೆಗೂ ಲಾಳಿಹೊಡೀತಾ ಇರಬ್ಯಾಡ, ತ್ವಾಟಕ್ಕೆ ಹೋಗಿ ಗೊಬ್ಬರ ಹಾಕಿಬಿಟ್ಟಾ.

<laaLihoDe> (-) Without doing any work if one is walking up and down, they say laleehodeethaa idaane.

Eg: Do not do wandering from morning to night. Go to garden and put manure.

915. ಲಿಖಾವಟ್: ಆಸ್ತಿಪಾಸ್ತಿಗಳ ವಿವರಗಳನ್ನು, ಕೊಂಡು ಮಾರಾಟಮಾಡಿರುವ ವ್ಯವಹಾರಗಳನ್ನು ಬರವಣಿಗೆಯ ಮೂಲಕ ಇಡುವುದಕ್ಕೆ **ಲಿಖಾವಟ್** ಎನ್ನುತ್ತಾರೆ.

ಉದಾ: ನೀನು ಮೊನ್ನೆ ಕೊಂಡ ಗದ್ದೆ ಜಮೀನಿನ ವ್ಯವಹಾರವನ್ನೆಲ್ಲ ಶಾನುಭೋಗರತಾವ ಹೋಗಿ ಬಿಸಿಬಿಸೀಲೆ ಲಿಖಾವಟ್ ಮಾಡಿಸುವುದು ಉತ್ತಮ.

<likhaavaT> Record - To keep it in writing the transactions of buying and selling properties is called Likhavat (Written letter).

big money lender. Right from ages they are doing levadevi.

Eg: It is better to get likhavat done by Shanbhog regarding your buying of land two days early.

916. ಲೇವಾದೇವಿ: ಹಣವನ್ನು ಇನ್ನೊಬ್ಬರಿಗೆ ಬಡ್ಡಿಗಾಗಿ ಕೊಡುವುದು, ತೆಗೆದುಕೊಳ್ಳುವುದು ಮುಂತಾದ ವ್ಯವಹಾರಕ್ಕೆ **ಲೇವಾದೇವಿ** ಎನ್ನುತ್ತಾರೆ. ಲೇವಾದೇವಿಗೆ ಲೇಣೆದೇಣೆ ಎಂದೂ ಹೇಳುವರು.

ಉದಾ: ಬೈರೆಗೌಡರು ದೊಡ್ಡ ಕುಳ, ಲಾಗಾಯಿತ್ತಿಂದ ಅವರ ಮನೆಯವರು ಲೇವಾದೇವಿ ಮಾಡ್ತಾ ಇದಾರೆ.

<levaadevi> Transacton of paying money on interest to others or taking money is called levadevi.

Eg: Bairegowda is a

❑

ವ / Va

917. ವಕ್ಕರಿಸು: ಸುಳುಸೂಕ್ಷ್ಮ ಕೊಡದೆ ಇದ್ದಕ್ಕಿದ್ದಂತೆ ಬಂದು ಸಹಾಯ ಕೇಳುವವನಿಗೆ ವಕ್ಕರಿಸಿದ್ದಾನೆ ಎಂದು ಹೇಳುತ್ತಾರೆ.

ಉದಾ: ಮೂರು ದಿವಸದಿಂದ ಬಂದು ವಕ್ಕರಿಸಿದ್ದಾನೆ, ನಾನು ಏನ್ ಹೇಳ್ಬೇಕು ಅಂತ ತೋಚ್ತಾಇಲ್ಲ.

<vakkarisu> (-) Sudden approach for help - For a person without giving any hint, suddenly coming and asking for help they say, vakkarisiddane.

Eg: In the last three days he has come, staying without hesitation. I do not no what to tell him.

918. ವಜನು: ಭಾರವನ್ನು ಸೂಚಿಸುವುದಕ್ಕೆ **ವಜನು** ಎಂದು ಹೇಳುತ್ತಾರೆ. ವಜನು ಹೆಚ್ಚಾದರೆ ಎತ್ತುಗಳು ಗಾಡಿಯನ್ನು ಎಳೆಯುವುದಕ್ಕಾಗುವುದಿಲ್ಲ.

ಉದಾ: ವಜನು ಜಾಸ್ತಿಆಯಿತೂಂತ ಕಾಣುತ್ತೆ, ಎರಡು ಚೀಲ ತೆಗೆದುಬಿಡು.

<vajanu> Weight - To indicate weight they say vajana. If weight is more oxen cannot pull cart.

Eg: Weight is more it seems, remove two bags.

919. ವಟು: ನೋಡಿ: ಉಪನಯನ

<vaTu> See: Upanayana

920. ವಠಾರ: ಐದಾರು ಸಂಸಾರಸ್ಥರ ಸಣ್ಣಸಣ್ಣ ಮನೆಗಳಿರುವ ಆವರಣಕ್ಕೆ **ವಠಾರ** ಎಂದು ಹೇಳುತ್ತಾರೆ. ವಠಾರದ ಹೆಸರನ್ನು ಅದರ ಮಾಲೀಕರ ಹೆಸರಿನ ಮೇಲೆ ತಿಳಿಸುತ್ತಾರೆ.

ಉದಾ: ಶೇಷಣ್ಣನವರ ವಠಾರದಲ್ಲಿ ಒಂದು ಮನೆ ಖಾಲಿ ಇದೆಯಂತೆ, ವಿಚಾರಿಸಿ.

<vaTTaara> Group of small houses - In one proximity five or six small houses of families are there, they say Vatara (group of small houses in a complex). The name of vatara is expressed with the name of owner.

Eg: In Sheshanna's vatara one house is vacant it seems. Go and enquire.

921. ವರಪೂಜೆ: ವರಪೂಜೆಗೆ ವರನನ್ನು ಹಸೆಯ ಮೇಲೆ ಕೂರಿಸಿ ಹೆಣ್ಣಿನ ತಂದೆ ತಾಯಿಗಳು ಅವನಿಗೆ ಕಾಲು ಒರೆಸಿ ಹಣೆಗೆ ಕುಂಕುಮವನ್ನು ಹಚ್ಚುತ್ತಾರೆ. ನಂತರ ಪುರೋಹಿತರು, ಅಚ್ಚುಹಾಕಿಸಿರುವ ಮದುವೆ ಆಹ್ವಾನದ ಎರಡು ಪತ್ರಿಕೆಗಳನ್ನು ಗಟ್ಟಿಯಾಗಿ ಓದಿದ ನಂತರ ಹೆಣ್ಣಿನ ತಂದೆತಾಯಿಗಳು ಮತ್ತು ಗಂಡಿನ ತಂದೆತಾಯಿಗಳಿಗೆ ಒಂದು ತಟ್ಟೆಯಲ್ಲಿಟ್ಟು ಕೊಡುತ್ತಾರೆ. ನಂತರ ಹುಡುಗನಿಗೆ ವರೋಪಚಾರವಾಗಿ ಕೊಡಬೇಕಾದ ಹೊಸ ಬಟ್ಟೆಬರೆಗಳು, ಚೈನು ಅಥವಾ ಉಂಗುರವನ್ನು ಕೊಡುತ್ತಾರೆ. ಅವನಿಗೆ ಹೆಣ್ಣುಮಕ್ಕಳಿಂದ ಆರತಿಯಾದ ನಂತರ ಕಾರ್ಯಕ್ರಮ ಮುಗಿಯುತ್ತೆ.



ಉದಾ: ಯಾರಲ್ಲಿ ವರೋಪಚಾರ ತನ್ನಿ.

<varapooje> (-) A formal ceremony of welcoming bridegroom - For Varapuje, seating the bridegroom on

decorated plank (Hasemane), the bride's parents wash his legs, smear kunkum to his forehead. Then after the Priest read the two printed invitations loudly, give it to bride's and bridegroom's parents. Then they give to the boy new clothes, chain, and ring. After arati to him by women program ends.

Eg: Who is there, bring presents for boy.

922. ವರಸಾಮ್ಯ: ಹೆಣ್ಣಿಗೆ ಗಂಡನ್ನಾಗಲಿ, ಗಂಡಿಗೆ ಹೆಣ್ಣನ್ನಾಗಲಿ ನೋಡುವಾಗ ಇಬ್ಬರ ರೂಪ, ಎತ್ತರ, ಗುಣ, ವಯಸ್ಸು, ಎಲ್ಲವನ್ನೂ ಹೋಲಿಸುವುದಕ್ಕೆ **ವರಸಾಮ್ಯ** ಎಂದು ಹೇಳುತ್ತಾರೆ.

ಉದಾ: ನಿಮ್ಮ ಮಗಳಿಗೆ ವರಸಾಮ್ಯ ಚೆನ್ನಾಗಿದೆ, ಸಂಬಂಧ ಬೆಳೆಸಬಹುದು.

<varasaamya> Mutual suitability of bride and bridegroom - When selecting boy for a girl or girl to a boy, for both beauty, height, character, age, all to compare they say varasamya.

Eg: For your daughter varasamya is good. Can proceed

923. ವರಹ: ಚಿನ್ನದಿಂದ ತಯಾರಿಸಿದ ಒಂದು ನಾಣ್ಯಕ್ಕೆ ವರಹ ಎಂದು ಹೆಸರು. ವರಹ ಹಿಂದಿನ ಕಾಲದಲ್ಲಿ ಚಲಾವಣೆಯಲ್ಲಿದ್ದದ್ದು. ಕಾಲಕ್ರಮೇಣ ರುಪಾಯಿ, ಆಣೆ, ಕಾಸು ನಂತರ ನಯಾಪೈಸ, ಕಾಗದದಿಂದ ತಯಾರಾದ ನೋಟುಗಳು ಚಲಾವಣೆಗೆ ಬಂದುವು.

ನೋಡಿ: ಪಾವಲಿ

<varaha> A gold coin with a stamp of boar - Coin made of gold is called Varaha. Varaha was the currency in olden days. Gradually, rupee, aane, kaasu, then nayapaisa, notes made of paper came in currency.

See: Pavali

924. ವರ್ಷತೊಡಕು: ವರ್ಷದ ಮುಖ್ಯವಾದ ಮೊದಲನೆಯ ಹಬ್ಬ ಎಂದರೆ ಅದು ಯುಗಾದಿ. ಚೈತ್ರಮಾಸದ ಶುದ್ಧ ಪಾಡ್ಯಮಿಯ ದಿನ ಆಚರಿಸುವ ಹಬ್ಬ. ಹಬ್ಬದ ಮಾರನೇದಿನವನ್ನು **ವರ್ಷತೊಡಕು** ಎನ್ನುತ್ತಾರೆ. ಆ ದಿನ ಮನಸ್ಸಿನಲ್ಲಿ ಯಾವಾಗಲೂ ಒಳ್ಳೆಯ ಆಲೋಚನೆಗಳನ್ನು ಮಾಡಿದರೆ ವರ್ಷದ ಕಡೆಯವರೆಗೂ ಅದರಂತೆ ಒಳ್ಳೆಯದೇ ಆಗುತ್ತೆಂದು ಹೇಳುತ್ತಾರೆ.

ಉದಾ: ನಾಳೆ ವರ್ಷತೊಡಕು ಪಾಯಸ ಮಾಡಲೇಬೇಕು.

<varshathodaku> The important first festival of the year means, it is Yugadi. On the first day of Chaitra month, festival to observe. Next day they call Varshathodaku. That day if you think in mind good thoughts, till to the end of that year, good things will happen they say.

Eg: Tomorrow is Varshathodaku. Must do kheer.

925. ವಾಡಿಕೆ: ಯಾವುದಾದರು ಒಂದು ಪದ್ಧತಿಯನ್ನು ಅನೂಚಾನವಾಗಿ ಆಚರಿಸಿಕೊಂಡುಬರುವುದನ್ನು **ವಾಡಿಕೆ** ಎಂದು ಹೇಳುವುದು ರೂಢಿ.

ಉದಾ: ಸೋಮಯ್ಯನೋರ ಮನೇಲಿ ಪ್ರತಿ ವರ್ಷ ಬಂದಹುಣ್ಣಿಮೆಯ ದಿನ ದೇವರಿಗೆ ಎಡೆ ಇಕ್ಕುವುದು ವಾಡಿಕೆ.

<vaaDike> Custom - Any one custom observed traditionally it is common to say Vadike.

Eg: In Somayya's house every year on Bandahunnime day, offer food for deity is Vadike (Practice).

926. ವಾಡೆ: ನೋಡಿ: ಸಿಂಬೆ

<vaaDe> See: Simbe

927. ವಾನಪ್ರಸ್ಥಾಶ್ರಮ: ವೃದ್ಧರಾದ ದಂಪತಿಗಳು ಕಾಲು ನಡೆಗೆಯಲ್ಲೇ ಊರೂರುಗಳನ್ನು ಸುತ್ತುತ್ತಾ ದೇವರ ಸೇವೆ ನಡೆಸಿಕೊಂಡು ಜೀವನ ತಳ್ಳುತ್ತಾರೆ. ಇದೇ **ವಾನಪ್ರಸ್ಥಾಶ್ರಮ**. ಸಂಸಾರದ ಜವಾಬ್ದಾರಿಯನ್ನು ಮಕ್ಕಳಿಗೆ ಬಿಟ್ಟುಕೊಡುತ್ತಾರೆ.

ಉದಾ: ಮಕ್ಕಳು, ಮೊಮ್ಮಕ್ಕಳು ಇರುವ ರಾಮಾಶಾಸ್ತ್ರಿಗಳು ಈಗ ವಾನಪ್ರಸ್ಥಾಶ್ರಮಿಗಳಾಗಿದ್ದಾರೆ.

<vaanaprasthaashrama> (-) Third stage of religious order of life - Aged couple by walk only going round from place to place, doing service to God, lead life. This is vanaprasthashrama. Resonsibility of the family they leave to children.

Eg: Ramashastri having children and grandchildren has entered vanaprasthashrama.

928. ವಾರದಸಂತೆ: ಒಂದೊಂದು ಹಳ್ಳಿಯಲ್ಲು ವಾರದಲ್ಲಿ ಒಂದು ದಿನ ಸಂತೆ ನಡೆಯುತ್ತೆ. ಆ ದಿನ ಸುತ್ತಮುತ್ತಲ ಹಳ್ಳಿಯವರು ಬೆಳೆದ ದವಸ ಧಾನ್ಯಗಳನ್ನು ತಂದು ಮಾರುತ್ತಾರೆ. ಅಂಗಡಿಯಲ್ಲಿ ಮಾರುವ ಬೆಲೆಗಿಂತ ಸಂತೆಯಲ್ಲಿ ಸ್ವಲ್ಪ ಕಡಮೆ ಬೆಲೆಗೆ ಧಾನ್ಯಗಳು ಮತ್ತು ತರಕಾರಿಗಳು ದೊರೆಯುತ್ತವೆ.

ಬುಕ್ಕಾಂಬುಧಿಯಲ್ಲಿ ಶುಕ್ರವಾರ, ಹತ್ತಿರವಿರುವ ಶಿವನೆಯಲ್ಲಿ ಸೋಮವಾರ, ಮಂಗಳವಾರಸಂತೆ, ಚಿಕ್ಕಮಗಳೂರಿನಲ್ಲಿ ಬುಧವಾರ, ಶನಿವಾರ ಸಂತೆಗಳು. ಸಂತೆಗಳು ಊರ ಹೊರಭಾಗದಲ್ಲಿ ಸೇರುವುದು. ಅಕ್ಕಿ, ಬೇಳೆ ಮುಂತಾದ ದವಸಧಾನ್ಯಗಳನ್ನು ಮಾರುವವರು ಗುಡಾರಗಳನ್ನು ಹಾಕಿರುತ್ತಾರೆ.

ಉದಾ: ಶನಿವಾರದ ಸಂತೆಗೆ ಹೋಗೋಣ ಬಾ.

<vaaradasanthe> Weekly sandy - In each village, one day in a week, fair market will take place. That day villagers around sell the crops grown. Can get at a little cheaper rate than shops the crops and vegetables.

In Bukkambudhi Friday, nearby Shivane Monday, Tuesday fair market, in Chikmagalur Wednesday, Saturday fair markets. Fair markets will meet outside the village. Sellers of rice, dal etc. will put tents.


Eg: Let us go for Saturday fair market.

929. ವಾರಸುದಾರ: ಅಜ್ಜ, ಮುತ್ತಜ್ಜ ಮಾಡಿಟ್ಟಿರುವ ಮನೆ, ತೋಟ ತುಡಿಕೆಗಳಿಗೆ ಮಕ್ಕಳು, ಮೊಮ್ಮಕ್ಕಳಿಗೆ ಅನುಭವಿಸುವ ಬಾಧ್ಯತೆ ಇರುತ್ತೆ. ಅವರಿಗೆ ಆ ಆಸ್ತಿಯ **ವಾರಸುದಾರರು** ಎಂದು ಹೇಳುತ್ತಾರೆ.

ಉದಾ: ಕೆರೆ ಮ್ಯಾಗಳ ತೋಟ ಬೈರೆಗೌಡ್ರದ್ದು, ಅವರ ಮೊಮ್ಮಗನೇ ಅದಕ್ಕೆ ವಾರಸುದಾರ.

<vaarasudaara> Inheritor - For house, garden, property done by grandfather, great grandfather, children, grandchildren will have right to enjoy. They say they are the heirs for that property.

Eg: Garden next to the tank belongs to Bairegowda. His grandson is the heir for that property.



930. ವ್ಯಾಸಪೀಠ: ವ್ಯಾಸಪೀಠವನ್ನು ಕರೀಮರದಲ್ಲಿ ಮಾಡುತ್ತಾರೆ. ಎರಡು ಒಂದೇ ಸಮನಾದ ಕರೀಮರದ ಹಲಗೆಗಳನ್ನು ಒಂದಕ್ಕೊಂದು ಸೇರುವಂತೆ ಮಾಡಿ, ಅದರ ಮೇಲೆ ರಾಮಾಯಣ, ಮಹಾಭಾರತದ ಪುಸ್ತಕಗಳನ್ನಿಟ್ಟುಕೊಂಡು ಓದುತ್ತಿದ್ದರು.

ಉದಾ: ಶಾಸ್ತ್ರಿಗಳು ಪುರಾಣವಾಚನಮಾಡ್ತಾರೆ, ವ್ಯಾಸಪೀಠ ತಂದಿಡು.

<vyaasapeeTTa> A kind of book rest - Vyasapeeta (a wooden device to keep books) is made of black wood. Joining two black wooden planks, on that keeping books of Mahabharat, Ramayana were reading.

Eg: Shastriji will do Purana discourse. Keep Vyasapeeta.

931. ವಿಲೇವಾರಿ: ಹೊಲ ಗದ್ದೆಗಳಲ್ಲಿ ಕೆಲಸಮಾಡುವ ಕೂಲಿಗಳಿಗೆ ವಾರಕ್ಕೊಂದು ಸಲ ಅವರಿಗೆ ಕೊಡಬೇಕಾದ ಕೂಲಿಯ ಹಣವನ್ನು ಸಂದಾಯ ಮಾಡುತ್ತಾರೆ. ಅದಕ್ಕೆ **ವಿಲೇವಾರಿ** ಎನ್ನುವ ಪದವನ್ನು ಬಳಸುವುದು ರೂಢಿ.

ಯಾವುದಾದರೂ ಒಂದು ಕೆಲಸವನ್ನು ಕೊನೆಯ ಗಳಿಗೆಗೆ ಮುಟ್ಟಿಸುವುದಕ್ಕೂ ವಿಲೇವಾರಿ ಎಂದೇ ಹೇಳುತ್ತಾರೆ. ಬಟವಾಡೆ, ತೀರ್ಮಾನ, ವಿತರಣೆ, ಹಂಚಿಕೆ ಎಲ್ಲ ಪದಗಳನ್ನೂ ಇದೇ ಅರ್ಥದಲ್ಲಿ ಬಳಸುತ್ತಾರೆ.

ಉದಾ: ನಾಳೆ ಸಂಜೆ ಕೂಲಿಹಣ ವಿಲೇವಾರಿ ಮಾಡ್ತಾರಂತೆ.

<vilevaari> Classification - Workers who do work in field, wages for them they pay once a week. For that it is common to use the word vilevari (arrangement).

Any work to be done to the end, they also say vilevari. Batavade, Decision, Distribution, Divide, all these words are used with the same meaning.

Eg: Tomorrow evening they are arranging to pay wages.

932. ವೆಂಕಟರಮಣಭಾಗವತರು: ವೆಂಕಟರಮಣಯ್ಯ ಬುಕ್ಕಾಂಬುಧಿ, ಚಿಕ್ಕಮಗಳೂರು, ಹರಿಹರಪುರ ಮುಂತಾದ ಸ್ಥಳಗಳಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಿ ಕೊನೆಗೆ ಚಿಕ್ಕಮಗಳೂರಿನಲ್ಲಿ ಕೆಲಸದಿಂದ ನಿವೃತ್ತರಾದರು. ಅವರಿಗೆ ಮೊದಲಿನಿಂದಲೂ ಹರಿಕಥಾಶ್ರವಣ, ರಾಮೋತ್ಸವಗಳನ್ನು ನಡೆಸುವುದು ಮುಂತಾದ

ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ. ಕರ್ನಾಟಕದ ಅನೇಕಕಡೆಗಳಲ್ಲಿ ರಾಮೋತ್ಸವಗಳನ್ನು ನಡೆಸಿದರು. ಅಲ್ಲಿಂದ ಮುಂದೆ ಅವರಿಗೆ ಭಾಗವತ ಎಂಬ ಬಿರುದನ್ನು ಭಕ್ತಾದಿಗಳು ಅವರ ಹೆಸರಿನ ಮುಂದಕ್ಕೆ ಸೇರಿಸಿದರು. ಹರಿಹರಪುರದಲ್ಲಿ ಸಂಘಟನೆ ಮಾಡಿದ ರಾಮೋತ್ಸವವನ್ನು ಯಾರೂ ಮರೆಯುವಂತಿಲ್ಲ. ಅಲ್ಲಿಂದ ಮುಂದೆ ವೆಂಕಟರಮಣಯ್ಯ ವೆಂಕಟರಮಣ ಭಾಗವತರೇ ಆದರು. ಶೃಂಗೇರಿ ಶಾರದಾ ವಿದ್ಯಾಪೀಠದ ಸ್ವಾಮೀಜಿಯವರಿಗೆ ಅವರು ಪರಮಭಕ್ತರಾಗಿದ್ದರು.

ನೋಡಿ: ಊರಿನ ಕಲಾವಿದರು

<venkaTaramaNabhaagavatharu> Venkataramaniah working as teacher in Bukkambudhi, Chikmagalur, Hariharpur etc. places, at the end retired in Chikmagalur. He was interested right from the beginning in arranging Harikatha discourse, Ramotsava etc. cultural programs. He arranged Ramotsava in many places in Karnataka. After that, the devotees added a title 'Bhagavatha' for his name. Nobody can forget the Ramotsava he arranged in Hariharpur. Then Venkataramaniah became Venkataramana Bhagavathar. He was a great devotee of Swamiji of Sringeri Sharadavidyapeeta.

See: Oorinakalavidaru



933. ವೇದಿಕೆ: ನಾಟಕ ಆಡುವ ಜಾಗ ಪ್ರೇಕ್ಷಕರು ಕೂರುವ ಜಾಗಕ್ಕಿಂತ ಎತ್ತರವಾಗಿರಬೇಕು. ಅದನ್ನು ದಪ್ಪವಾಗಿರುವ ಮರದ ಹಲಗೆಗಳನ್ನು ಜೋಡಿಸಿ ಮಾಡುತ್ತಾರೆ. ಅದು ಅಟ್ಟಣೆಯ ಹಾಗಿದ್ದರು ನಾಟಕದ **ವೇದಿಕೆ** ಎಂದು ಹೇಳುವುದು ರೂಢಿ.

ಉದಾ: ವೇದಿಕೆಯನ್ನು ಸರಿಯಾಗಿ ಕಟ್ಟು, ರಂಗಪ್ಪ.

<vedike> Stage - The place where drama is staged must be higher than the place where the audience sit. They will have done joining thick wooden slabs. Though it is like attane, it is common to say drama stage.

Eg: Rangappa, assemble the vedike (drama stage) correctly.

934. ವೈದೀಕ: ಸತ್ತವರ ತಿಥಿಯನ್ನು ವರ್ಷಕ್ಕೊಮ್ಮೆ ಮಾಡುವುದಕ್ಕೆ **ವೈದೀಕ** ಎನ್ನುತ್ತಾರೆ. ವೈದೀಕ ಮಾಡುವ ದಿನ ಬ್ರಾಹ್ಮಣರ ಭೋಜನಕ್ಕೆ ಮಾಡುವ ಅಡುಗೆಯನ್ನು ಬಹಳ ಮಡಿಯಿಂದ ಮಾಡುತ್ತಾರೆ. ಶ್ರಾದ್ಧಕರ್ಮ ಮುಗಿಯುವವರೆಗೂ ಹೆಂಗಸರು ಹಣೆಗೆ ಕುಂಕುಮವನ್ನಿಡುವುದಿಲ್ಲ. ಪಿಂಡಕ್ಕೆ ನಮಸ್ಕಾರ ಮಾಡಿದ ನಂತರ ಕುಂಕುಮವನ್ನು ಹಣೆಗೆ ಹಚ್ಚಿಕೊಳ್ಳುತ್ತಾರೆ. ಶ್ರದ್ಧೆಯಿಂದ ಮಾಡುವುದೆ ಶ್ರಾದ್ಧ. ವೈದೀಕವನ್ನು ಮಾಡಿಸುವುದಕ್ಕೆ ಬರುವ ಪುರೋಹಿತರು ವೇದ ಪಾರಂಗತರಾಗಿರುತ್ತಾರೆ. ಹಳ್ಳಿಮನೆಗಳಲ್ಲಿ ವೈದೀಕ ಮಾಡುವ ದಿನ ಮಕ್ಕಳು ಸಲೀಸಾಗಿ ಅಡುಗೆ ಮನೆಗೆ ನುಗ್ಗುವ ಹಾಗಿಲ್ಲ. ಮಡಿಯೋ ಮಡಿ! ಮಕ್ಕಳಿಗೆಲ್ಲ ಬೇರೆ ಕಡೆ ಕಾಫಿ, ತಿಂಡಿ ಮಾಡಿಕೊಡುತ್ತಾರೆ.

ಉದಾ: ಈ ದಿನ ನಮ್ಮ ಮಾವನವರ ವೈದೀಕ ಇದೆ ರಾಯ್ರೇ, ಬರೋಕಾಗೊಲ್ಲ.

<vaideeka> Observing death ceremony once a year, they say Vaideeka. On the day of vaideeka, the food items for brahmins, they do with all madi (cleanliness). Till the shraddhakarma is over, women will not put kunkum on forehead. After prostrating to Pinda (lump of rice offered to ancestors) they put kunkum on forehead. Doing with all faith is Shraddha. Priests who come for vaideeka will be experts in Vedas. In village houses, on the day of death ceremony children cannot rush into kitchen easily. Cleanliness, Cleanliness! For children they prepare coffee, tiffin in another place.

Eg: Today death ceremony of our father in law. Cannot come.

❑

ಶ / Sha

935. ಶಂಕುಸ್ಥಾಪನೆ: ದೊಡ್ಡದೊಡ್ಡ ಕಟ್ಟಡಗಳನ್ನು ಕಟ್ಟುವ ಮೊದಲು ಆ ನೆಲದಲ್ಲಿ ಪೂಜೆ ಮಾಡಿ ಅಡಿಗಲ್ಲನ್ನು ಹಾಕುವ ಕಾರ್ಯಕ್ರಮಕ್ಕೆ **ಶಂಕುಸ್ಥಾಪನೆ** ಎಂದು ಹೆಸರು. ಸಾಮಾನ್ಯವಾದ ಮನೆಗಳನ್ನು ಕಟ್ಟುವಾಗಿನ ಕಾರ್ಯಕ್ರಮಕ್ಕೆ ಗುದ್ದಲಿಪೂಜೆ ಎನ್ನುವುದು ರೂಢಿ.

ಉದಾ: ನಾಳೆ ದೇವಸ್ಥಾನದ ಕಟ್ಟಡಕ್ಕೆ ಶಂಕುಸ್ಥಾಪನೆ ಇಟ್ಟುಕೊಂಡಿದ್ದಾರೆ.

<shankusthaapane> Laying foundation - Before constructing big buildings, worshiping on that place, putting adigallu (foundation stone) program is called Shankusthapane. Program of building ordinary houses, it is common to say Guddalipooje.

Eg: They have arranged Foundation Ceremony for construction of temple.

936. ಶೀಕರಣೆ: ಮಾವಿನಹಣ್ಣು, ಬಾಳೆಹಣ್ಣನ್ನು ಸಣ್ಣಗೆ ಹೆಚ್ಚಿ ಹಾಲು ಬೆರೆಸಿ ಏಲಕ್ಕಿಪುಡಿಯನ್ನು ಹಾಕಿ ಮಾಡಿರುವುದೆ ಶೀಕರಣೆ. ದೋಸೆ, ರೊಟ್ಟಿಗೆ ನಂಚಿಕೊಳ್ಳಲು ಶೀಕರಣೆಯನ್ನು ಮಾಡುತ್ತಾರೆ.

ಉದಾ: ಇನ್ನುಸ್ವಲ್ಪ ಶೀಕರಣೆಹಾಕಿ.

<sheekaraNe> (-) Semi liquid preparation made of mango pulp - Cutting small pieces of mango, banana, mix milk, cardamom powder is Sheekarane. To taste with dosa, roti they do sheekarane.

Eg: Put some more sheekarane.

937. ಶ್ರಾದ್ಧ: ನೋಡಿ: ಊಟಕ್ಕೆ ಕರೆಯುವುದು

<shraaddha> See: Ootakkekareyuvudu (Inviting for lunch)

938. ಶ್ರಾವಣಮಾಸ: ದೇವಸ್ಥಾನಗಳಲ್ಲಿ ಶ್ರಾವಣ ಮಾಸದ ಪ್ರತಿ ಸೋಮವಾರ ರಾತ್ರೆ ದೇವರಿಗೆ ಮಂಗಳಾರತಿ ಆದ ಮೇಲೆ ಪ್ರಸಾದ ವಿನಿಯೋಗಕ್ಕೆ ಕಡಲೆಕಾಳು ಅಥವಾ ಹೆಸರುಕಾಳಿನ ಉಸಲಿ (ಗುಗ್ಗರಿ), ಎಳ್ಳುಸೂಸಲು, ಹುರಿಕಡಲೇ ಹಿಟ್ಟು ಮೀಸಲು. ಧನುರ್ಮಾಸದಲ್ಲಿ ಒಂದು ತಿಂಗಳು ಪ್ರತಿನಿತ್ಯವೂ ಬೆಳಿಗ್ಗೆ ಪೂಜೆಯಾದ ನಂತರ ಬಿಸಿಬಿಸಿ ಪೊಂಗಲು ಪ್ರಸಾದಕ್ಕೆ. ಶ್ರಾವಣ ಮಾಸ ಪ್ರಾರಂಭವಾಯಿತೆಂದರೆ ಹಬ್ಬಗಳ ಸಾಲೇಸಾಲು.

<shraavaNamaasa> (-) In temples, every Monday night of Shravana month, after arati to God, to distribute prasad, gram or moong usali (guggari), roasted sesame powder with jaggery, roasted gram powder is special. In Dhanurmas for one month every morning after pooja hot Pongal for prasad distribution. If Shravana begins means series of festivals.

939. ಶ್ಯಾನುಭೋಗ: ಹಳ್ಳಿಯ ಉಸ್ತುವಾರಿಯನ್ನು ನೋಡಿಕೊಳ್ಳಲು ಅನೇಕ ಸಿಬ್ಬಂದಿಗಳು ಬೇಕು. ಹಳ್ಳಿಯ ಮುಖ್ಯಸ್ಥ ಪಟೇಲ ಆದರೂ **ಶ್ಯಾನುಭೋಗ** ಪ್ರಧಾನವ್ಯಕ್ತಿ. ಹಳ್ಳಿಯಲ್ಲಿ ವಾಸಿಸುವ ಪ್ರತಿಯೊಬ್ಬರ ಮನೆಯ ವಿವರಗಳನ್ನು ಒಬ್ಬೊಬ್ಬರಿಗೆ ಒಂದು ಪುಸ್ತಕದಂತೆ ದೊಡ್ಡ ಹಾಳೆಯಲ್ಲಿ ಬರೆಯುವ ಕೆಲಸ ಶ್ಯಾನುಭೋಗನದು. ಆ ಪುಸ್ತಕದಲ್ಲಿ ಎಲ್ಲ ರೈತರ ಜಮೀನಿನ ವಿವರ, ಯಾವ ಬೆಳೆ ಬೆಳೆಯುತ್ತಾರೆ, ಎಷ್ಟು ಕಂದಾಯ ಕೊಡುತ್ತಾರೆ, ಅವರ ಮನೆಯಲ್ಲಿರುವ ಜನಗಳ ಹೆಸರು, ವಯಸ್ಸು ಎಲ್ಲವು ವಿವರವಾಗಿ ಕಾಣಿಸುತ್ತದೆ.

ಶ್ಯಾನುಭೋಗನಲ್ಲದೆ, ಇನ್ನೂ ಕೆಲವು ಹುದ್ದೆಗಳು ಹಳ್ಳಿಗೆ ಸಂಬಂಧಿಸಿದಂತೆ ಇವೆ, ತಳವಾರ, ನೀರುಗಂಟಿ, ಕುಳವಾಡಿ, ಶೇಕ್‌ದಾರ ಮೊದಲಾದುವು. ಇವರೆಲ್ಲರ ಮೇಲಿನ ತನಿಖೆ ಮಾಡಲು ಅಮಲ್ದಾರ್ ಹುದ್ದೆ ದೊಡ್ಡದು. ಅವರು ವರ್ಷಕ್ಕೊಮ್ಮೆ ಹಳ್ಳಿಗೆ ಬಂದು ಶ್ಯಾನುಭೋಗರ ಮುಖಾಂತರ ಲೆಖ್ಖ ಪತ್ರಗಳನ್ನು ತನಿಖೆ ಮಾಡುತ್ತಾರೆ. ಅದನ್ನು ಜಮಾಬಂದಿ ಎಂದು ಹೇಳುತ್ತಾರೆ.

ಉದಾ: ನಮ್ಮೂರು ಕೃಷ್ಣಪ್ಪ ಶ್ಯಾನುಭೋಗರು ತುಂಬಾ ಹೆಸರುಗಳಿಸಿದ್ದಾರೆ.

<shyaanubhooga> Village Accountant - To look after the management of village, several staff are required. Though the important person is Patel, Shyanubhog is the Chief. Writing like a book for each person's details of house is that of Shyanubhog. In that book all farmers' details of land, what crop he grows, how much tax he pays, names of persons living in the

house, age, everything will be seen.

Apart from Shanbhog, there are some more posts relevant to village. Thalavara (village watchman), Neerganti (employee in charge of letting water from channel to field), Kulavadi (village servant), Shekdar (Revenue Officer) etc. To do investigation, the post of Amildar is big. He comes to the village once a year to investigate all accounts through Shanbhog. That is called as Jamabandi (Settlement of assessments).

Eg: Our Krishnappa shanbhog has taken a good name.

❑

ಷ / Sha

940. ಷರಾ: ಕಾಗದ ಪತ್ರಗಳನ್ನು ಬರೆಯುವಾಗ ಪತ್ರದ ಕಡೆಯಲ್ಲಿ ವಿಶೇಷವಾದ ಸಂಗತಿಯನ್ನು ಒಂದೇ ವಾಕ್ಯದಲ್ಲಿ ತಿಳಿಸುವುದಕ್ಕೆ ಷರಾ ಎನ್ನುತ್ತಾರೆ. ವಾಕ್ಯದ ಹಿಂಭಾಗಕ್ಕೆ ಷರಾ ಎಂದು ಬರೆದು ನಂತರ ಸಂಗತಿಯನ್ನು ಬರೆಯುತ್ತಾರೆ. ಹಳ್ಳಿಯ ಶ್ಯಾನುಭೋಗರ ದಾಖಲೆಗಳಲ್ಲಿ ಷರಾ ಪದವನ್ನು ನೋಡಬಹುದು. ಷರಾವನ್ನು ಟಿಪ್ಪಣಿ ಎಂದು ಕರೆಯುತ್ತಾರೆ.

ಉದಾ: ಆ ಬಗ್ಗೆ ಶಾನುಭೋಗರು ನನ್ನ ಕಾಗದದಲ್ಲಿ ಷರಾ ಬರೆದಿದ್ದಾರೆ.

<sHaraa> Postscript - While writing documents at the end to indicate special matter, in one sentence only, they call Shara. Before the sentence writing Postscript then they write the special matter. Can see the word Shara in the documents of Shanbhog. Sharaa is also known as Tippanni.

Eg: Regarding that Shanbhog has written Shara (Postscript) in my letter.

❑

ಸ / Sa

941. ಸಂಕ್ರಾಂತಿಹಬ್ಬ: ಸಂಕ್ರಾಂತಿಗೆ ಎಳ್ಳು, ಕರಿಯ ಎಳ್ಳನ್ನು ನೀರಿನಲ್ಲಿ ಒಂದೆರಡು ಗಂಟೆಯಕಾಲ ನೆನೆಸಿಟ್ಟು ನೀರನ್ನೆಲ್ಲ ಬಸಿದು ನೆಲದ ಮೇಲೆ ಉಜ್ಜಿದರೆ ಕರಿಯಸಿಪ್ಪೆ ಬೇರೆಯಾಗುತ್ತೆ. ನಂತರ ಎಳ್ಳನ್ನು ಹುರಿದು ಅದಕ್ಕೆ ಸಣ್ಣಗೆ ಹೆಚ್ಚಿದ ಕೊಬರಿಚೂರು, ಬೆಲ್ಲ, ನೆಲಗಡಲೆಬೀಜ, ಹುರಿಗಡಲೆಯನ್ನು ಬೆರೆಸುತ್ತಾರೆ. ಸಂಕ್ರಾಂತಿಯದಿನ ಹೆಂಗಸರು ಬೆರೆಸಿದ ಎಳ್ಳನ್ನು ಮನೆಮನೆಗೂ ಹೋಗಿ ಕೊಟ್ಟುಬರುತ್ತಾರೆ. ಎಳ್ಳಿನ ಜೊತೆಗೆ ಕಬ್ಬಿನಚೂರು, ಬಾಳೆಹಣ್ಣು, ಸಕ್ಕರೆಅಚ್ಚು ಕೊಡುತ್ತಾರೆ. ಮದುವೆಯಾಗದ ಹುಡುಗಿಯರು ಕರಿಯಮಣ್ಣಿನಿಂದ ಮಾಡಿದ ಕುಡಿಕೆಯಲ್ಲಿ ಎಳ್ಳನ್ನಿಟ್ಟು ಕೊಡುತ್ತಾರೆ. ಇದಕ್ಕೆ **ಎಳ್ಳುಬೀರುವುದು** ಎಂದು ಹೆಸರು.

ಸಂಕ್ರಾಂತಿ ಹಬ್ಬದ ದಿನ ಸಾಯಂಕಾಲ ಹಳ್ಳಿಯ ಹಸುಗಳ ಕೋಡುಗಳಿಗೆ ಗೆಜ್ಜೆಯನ್ನು ಕಟ್ಟಿ ಅಲಂಕಾರ ಮಾಡಿರುತ್ತಾರೆ. ಸಂಕ್ರಾಂತಿ ಹಬ್ಬ ಎಂದರೆ ಎಳ್ಳುಬೀರುವ ಸಂಭ್ರಮ ಎದ್ದು ಕಾಣುತ್ತಿರುತ್ತೆ ಎಲ್ಲರ ಮನೆಯಲ್ಲು. ಹತ್ತಾರು ಮನೆಯವರು ಒಂದು ಕಡೆ ಸೇರಿ ಅವರವರ ಮನೆಯ ಎಳ್ಳನ್ನು ಉಜ್ಜುವುದಕ್ಕೆ ತಂದಿರುತ್ತಾರೆ. ಆ ದಿನ ಆ ಮನೆಯವರು ಬಂದವರಿಗೆಲ್ಲ ಕಾಫಿ, ಕೋಡುಬಳೆ ಮುಂತಾದುವನ್ನು ಹಂಚುತ್ತಾರೆ. ಬೀರುವ ಎಳ್ಳನ್ನು ವಯಸ್ಸಾದವರು (ಹಲ್ಲಿಲ್ಲದವರು) ಕುಟ್ಟಾಣಿಯಲ್ಲಿ ಕುಟ್ಟಿಕೊಂಡು ತಿನ್ನುತ್ತಾರೆ!

ಉದಾ: ಕಂಚಿನತಪ್ಪಲೆಯನ್ನು ಶುಭ್ರವಾಗಿ ತೊಳೆದಿಡು. ನಾಳೆ ಎಳ್ಳುಬೀರುವುದಕ್ಕೆ ಹೋಗಬೇಕು.

ನೋಡಿ: ಎಳ್ಳುಬೀರುವುದು

<sankraanthihabba> A festival - For Sankranthi Sesame soaking black sesame in water for one or two hours, taking out water, if rubbed on floor, the black skin gets separated. Then frying sesame, small thin pieces of dry coconut, jaggery, peanut, roasted gram, they mix. On the day of Sankranthi, women go to every house and give the mixed sesame. Together sugarcane piece, banana, sugarplum they give. Unmarried girls give putting mixed sesame in small black pot. It is called ellubeeruvudu. (Distribution of mixed sesame).

On the day of Sankranthi evening decorate cows putting jingling bells to the horns. Sankranthi festival means, distribution of mixed sesame is more visible in every house. Several householders meeting in one house will have brought sesame to rub. On that day that house people offer coffee, kodubale (a kind of fried snack) to all who have come. The aged persons (without teeth) grinding sesame in grinding stone, eat.

Eg: Keep the bronze vessel cleanly washed. Tomorrow must go for distribution of sesame.

See: Ellubeeruvudu (Distribution of Sesame)

942. ಸಂಚಿ: ಎಲೆಅಡಿಕೆ ಅಗಿಯುವ ಹವ್ಯಾಸ ಅನೇಕರಿಗೆ ಇರುತ್ತದೆ. ಅದಕ್ಕೆ ಬೇಕಾದ ಪರಿಕರಗಳೊಡನೆ ಎಲೆಅಡಿಕೆಯನ್ನು ಪದರಪದರವಾಗಿ ಹೊಲಿದ ಚೀಲದಲ್ಲಿ ಇಟ್ಟುಕೊಂಡು ಹಳ್ಳಿಯಲ್ಲಿ ಹೆಂಗಸರು ಸೊಂಟಕ್ಕೆ ಸಿಗಿಸಿಕೊಂಡು ಇರುತ್ತಾರೆ. ಇದಕ್ಕೆ ಸಂಚಿ ಎಂದು ಹೆಸರು. ಮೈಸೂರು ಅರಸರಬಳಿ ಸಂಚಿ ಹೊನ್ನಮ್ಮ ಎಂಬುವಳು ಇದ್ದಳು. ಅವಳದು ಎಲೆಅಡಿಕೆ ಮಡಿಚಿಕೊಡುವ ಕಾಯಕದವಳು. ಅವಳನ್ನು ಸಂಚಿ ಹೊನ್ನಮ್ಮ ಎಂದೇ ಕರೆಯುತ್ತಿದ್ದರು. ಹದಿಬದೆಯಧರ್ಮ ಎಂಬ ಗ್ರಂಥವನ್ನು ಬರೆದಿದ್ದಾಳೆ.

ಉದಾ: ಸಂಚಿ ತಾಯಕ್ಕನ್ನ ತೋಟಕ್ಕೆ ಬರಹೇಳು.

<sanchi> (-) Bag with partition to hold betels, nuts etc. Habit of chewing betels, nuts is there for many people. Putting the required items, betels, nuts in layers in the stitched bag, the women in villages will have attached to their waist. It is called sanchi.

With the King of Mysore, a woman called Sanchi Honnamma was there. Her work was to fold betels and give. She was addressed as Sanchi Honnamma. She has written a book called Hadibadeya Dharma.

Eg: Ask Sanchi Thayakka to come to garden.

943. ಸಂಡಿಗೆ: ಭತ್ತದ ಅರಳು ಅಥವಾ ಅವಲಕ್ಕಿಯನ್ನು ನೀರಿನಲ್ಲಿ ನೆನೆಸಿ ನೀರನ್ನು ಬಸಿದು, ಉಪ್ಪು ಹಸಿರು ಮೆಣಸಿನಕಾಯನ್ನು ಅರೆದು ಅರಳಿಗೆ ಬೆರೆಸಿ, ಚೂರುಚೂರಾಗಿ ಒಂದು ಬಟ್ಟೆಯ ಮೇಲೆ ಸಾಲಾಗಿಟ್ಟು ಬಿಸಿಲಿನಲ್ಲಿ ಒಣಗಿಸುತ್ತಾರೆ.

ಅದಕ್ಕೆ **ಸಂಡಿಗೆ** ಎಂದು ಹೆಸರು. ಸಂಡಿಗೆಯನ್ನು ಒಳ್ಳೆಣ್ಣೆಯಲ್ಲಿ ಕರಿದು ಬಳಸುತ್ತಾರೆ.

ಉದಾ: ರಾತ್ರೆ ಊಟಕ್ಕೆ ಮಜ್ಜಿಗೆಹುಳಿ ಮತ್ತು ಸಾರಿನ ಜೊತೆಗೆ ಸ್ವಲ್ಪ ಅರಳುಸಂಡಿಗೆಯನ್ನು ಕರಿದಿಡಿ.

<sanDige> A kind of condiment - Parched paddy or Poha soaked in water and take out water, adding salt and green chilly duly crushed, keeping in small pieces on a cloth in line, they dry in sun. It is called Sandige. They use Sandige frying in oil.

Eg: For night dinner, curds sambar and rasam, fry some parched paddy sandige.

944. ಸಂತೆಮಾಳ: ಚಿಕ್ಕಮಗಳೂರಿನಲ್ಲಿ ಸಂತೆ ನಡೆಸುವುದಕ್ಕಾಗಿಯೇ ಸಂತೆಮಾಳವನ್ನು ಕಟ್ಟಿದ್ದಾರೆ ಸ್ವಲ್ಪ ಮಳೆಹನಿ ಬಂದರೂ ತೊಂದರೆಯಾಗದಂತೆ. ರೈತರು ಬೆಳೆದ ದವಸಧಾನ್ಯಗಳು ಮತ್ತು ತರಕಾರಿಗಳನ್ನು ತಂದು ಮಾರುತ್ತಾರೆ. ಅಲ್ಪಸ್ವಲ್ಪ ತರಕಾರಿಗಳು ಸಂಜೆಯ ಹೊತ್ತಿಗೆ ವ್ಯಾಪಾರವಾಗದೆ ಉಳಿದರೆ ಅದನ್ನು ತೆಗೆದುಕೊಂಡು ಹೋಗುತ್ತಿರಲಿಲ್ಲ. ಭಿಕ್ಷುಕರು ಅದನ್ನು ತೆಗೆದುಕೊಂಡು ಹೋಗುತ್ತಿದ್ದರು.

ಉದಾ: ಬನ್ನಿ ತೊಗೊಂಡುಹೋಗಿ ಈ ತರಕಾರೀನ.

<santhemaaLa> (-) A place known for date our place for business - In Chikmagalur to run fair market only have built a market. If it rains a little without any trouble farmers bring the grown crops and vegetables and sell. If a little vegetable without sold remain by evening, they were not taking it back. Beggars used to take them.

Eg: Come, take these vegetables.

945. ಸಂದೂಕ: ಕಬ್ಬಿಣದ ಪೆಟ್ಟಿಗೆ **ಸಂದೂಕ** ಎಂದು ಕರೆಯುತ್ತಿದ್ದರು. ಕೆಲವು ಬೆಲೆ ಬಾಳುವ ಒಡವೆ ವಸ್ತುಗಳನ್ನು ಸಂದೂಕದಲ್ಲಿಟ್ಟು ಬೀಗ ಹಾಕುತ್ತಾರೆ. ಸಂದೂಕ ಬಹಳ ಭಾರವಾಗಿರುವುದರಿಂದ ಸುಲಭವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಜರುಗಿಸುವುದಕ್ಕಾಗುವುದಿಲ್ಲ. ಗಟ್ಟಿಯಾದ ದಪ್ಪ ಹಲಗೆಯಿಂದ ಮಾಡಿದ ದೊಡ್ಡ ಪೆಟ್ಟಿಗೆಗೂ



ಸಂದೂಕವೆಂದೇ ಹೇಳುತ್ತಾರೆ.


ಉದಾ: ಅಡ್ಡಿಕೆ, ಸರ ಎಲ್ಲ ಸಂದೂಕದಲ್ಲಿದೆ ನಾಳೆ ಬೇಕಾದರೆ ತೆಗೆದುಕೊ.

<sandooka> Safe - For iron box they were calling Sandooka Keeping valuable ornaments in Safe and lock it. Since the box is very heavy, it is not possible to move from one place to another place. Big box made of strong thick wooden plank is also called as Sandooka.

Eg: Addike (a semicircular ornament), chain, everything is in Sandooka. If you want take tomorrow.

946. ಸಂಧ್ಯಾವಂದನೆ: ನೋಡಿ: ಉಪನಯನ

<sandhyaavandane> See: Upanayana



947. ಸಕ್ಕರೆಗುತ್ತಿ: ಅಕ್ಕಿ, ರಾಗಿ ಮುಂತಾದ ಧಾನ್ಯಗಳ ಮೂಟೆಯನ್ನು ಬಿಚ್ಚದೆ ಪರೀಕ್ಷೆ ಮಾಡುವುದಕ್ಕೆ ಉಪಯೋಗಿಸುವ ಸಾಧನಕ್ಕೆ **ಸಕ್ಕರೆಗುತ್ತಿ** ಎನ್ನುತ್ತಾರೆ. ಮರದ ಹಿಡಿಗೆ ಸುಮಾರು ಒಂದು ಅಡಿ ಉದ್ದದ ಕಬ್ಬಿಣದ ತಗಡನ್ನು ಕೊಳವೆಯಾಕಾರದಲ್ಲಿ ಸೆಕ್ಕಿಸುತ್ತಾರೆ. ಸಕ್ಕರೆಗುತ್ತಿಯನ್ನು ಮೂಟೆಗೆ ಚುಚ್ಚಿ ತಿರುಗಿಸಿ ಎಳೆದರೆ ಒಂದು ಬೊಗಸೆಯಷ್ಟು ಧಾನ್ಯ ಹೊರಕ್ಕೆ ಬರುತ್ತೆ.

ಉದಾ: ಸಕ್ಕರೆ ಗುತ್ತಿಹಾಕಿ ನೋಡಿ ರಾಗಿ ಹೇಗಿದೆ ಹೇಳು ರಾಮಪ್ಪಾ.

<sakkareguthhi> (-) A metallic spike - Equipment used to examine rice, ragi etc. crops without opening the bags is called Sakkareguthhi. For wooden handle attach about one-foot length iron sheet in a tubelike shape. Pushing the equipment into the bag, turn and pull out about two handful of crop comes out.

Eg: Rangappa put sakkareguthhi and tell how is ragi.

948. ಸಗಣಿ: ಹಸುಕರುಗಳ ಮಲಕ್ಕೆ **ಸಗಣಿ** ಎಂದು ಹೆಸರು. ಸಗಣಿಯನ್ನು ಭತ್ತದ ಹೊಟ್ಟಿನಲ್ಲಿ ಬೆರೆಸಿ ಅಂಗೈ ಅಗಲ ಗಾತ್ರಕ್ಕೆ ತಟ್ಟಿ ಒಣಗಿಸಿಡುತ್ತಾರೆ. ಅದು ಬೆರಣಿ. ಮಳೆಗಾಲದಲ್ಲಿ ನೀರು ಕಾಯಿಸಲು ಬೆರಣಿಯೇ ಬೇಕು. ಹಸುವಿನ ಸಗಣಿಯಿಂದ ಮನೆಯ ನೆಲವನ್ನು ಸಾರಿಸುತ್ತಾರೆ.

ಹಸುವಿನ ಸಗಣಿಯನ್ನು ಸಣ್ಣ ಉಂಡೆಗಳಾಗಿ ಮಾಡಿ ಒಣಗಿಸಿ, ಭತ್ತದ ಹೊಟ್ಟಿನಲ್ಲಿ ಸುಟ್ಟು ಹಣೆಗೆ ಹಚ್ಚಿಕೊಳ್ಳುವ ವಿಭೂತಿಯನ್ನು ಮಾಡುತ್ತಾರೆ. ಹಸುವಿನ ಸಗಣಿಯಿಂದ ಮಾಡಿದ ವಿಭೂತಿ ಬಹಳ ಶ್ರೇಷ್ಠವಾದದ್ದು.

ಹಸುವಿನ ಸಗಣಿಯಿಂದ ಎರಡು ಅಂಗುಲ ಎತ್ತರದಷ್ಟು ಗೋಪುರವಾಗಿ ಮಾಡಿ, ಅದಕ್ಕೆ ಗರಿಕೆಹುಲ್ಲನ್ನು ಸೆಕ್ಕಿಸಿ ಬಲಿಪಾಡ್ಯಮಿಯ ದಿನ ಮನೆಯ ಮುಂಭಾಗದ ಬಾಗಿಲಿನ ಎರಡು ಪಕ್ಕಕ್ಕೂ ಇಟ್ಟು ಪೂಜೆ ಮಾಡುವುದು ವಾಡಿಕೆ. ಹಸುಕರು, ಎತ್ತು, ಎಮ್ಮೆಗಳ ಸಗಣಿಯನ್ನು ತಿಪ್ಪೆಗುಂಡಿಯಲ್ಲಿ ಹಾಕಿ ಗೊಬ್ಬರ ಮಾಡುತ್ತಾರೆ. ಈ ಗೊಬ್ಬರ ರಾಸಾಯನಿಕ ಗೊಬ್ಬರಕ್ಕಿಂತ ಒಳ್ಳೆಯದೆಂದು ಹಳ್ಳಿಯವರ ಅಭಿಪ್ರಾಯ.

ಉದಾ: ಹಸುವಿನ ಸಗಣಿ ತೆಗೆದಿಟ್ಟಿರು ಸಂಜೆಗೆ ವಿಭೂತಿ ಮಾಡ್ತೀನಿ.

<sagaNi> Cow dung - Dung of cattle is called Sagani. Cow dung mixed with paddy skin, pressed to a size of palm, dried and kept. That is called berani (dried cow dung). During rainy season to heat water dried cow dung only is required. With cow's dung they sweep the house floor. Cow's dung is made like small balls, dried and burnt in paddy skin and make ash (vibhuti) to smear on forehead. Vibhuti made of cow's dung is famous.

Making cow dung to two inches height like cone shape, attach top end of grass, on Balipadyami day on both sides of house front door, worship is the custom. Dung of cattle, ox, buffalo put in manure pit, make manure. This manure is better than chemical manure, is the opinion of villagers.

Eg: Keep cow's dung. Evening make vibhuti.

949. ಸಜ್ಜಿಗೆ: ಸಜ್ಜಿಗೆ ಮಾಡಬೇಕಾದರೆ ನೀರನ್ನು ಕುದಿಸಿ ಸಣ್ಣರವೆಯನ್ನು ಅದರೊಳಕ್ಕೆ ಹಾಕಿ ಬೇಯಿಸುತ್ತಾರೆ. ಅನಂತರ ಸಕ್ಕರೆ, ತುಪ್ಪ ಮತ್ತು ಏಲಕ್ಕಿ ಪುಡಿಯನ್ನು ಬೆರೆಸುತ್ತಾರೆ. ಸಜ್ಜಿಗೆಯನ್ನು ರಾಮನವಮಿಯ ದಿನ ನೈವೇದ್ಯಕ್ಕೆ ಮಾಡುವುದು ಸರ್ವೇಸಾಮಾನ್ಯ. ಸಜ್ಜಿಗೆಯನ್ನು ಬಾಣಂತಿಗೂ ಕೊಡುತ್ತಾರೆ.

ಉದಾ: ಬಾಣಂತಿಗೆ ಮಾಡಿದ ಸಜ್ಜಿಗೆಯನ್ನು ನಮಗೂ ಸ್ವಲ್ಪ ಕೊಡಿ ಪರವಾಗಿಲ್ಲ.

<sajjige> (-) A kind of sweet dish - To make sajjige,

boiling water putting fine rava into it and bake. Then mix sugar, ghee and cardamom powder. It is very common to make sajjige on Ramanavami day for naivedya. Sajjige is given to ladies who have borne child.

Eg: Sajjige made for bananthi, nevermind give us also a little.



950. ಸಪ್ತಪದಿ: ಸಪ್ತಪದಿ ಕಾರ್ಯಕ್ರಮದಲ್ಲಿ ಗಂಡು ಪುರೋಹಿತರು ಹೇಳಿದಂತೆ ಏಳು ಹೆಜ್ಜೆಗಳನ್ನು ಹಾಕಿ ಅವನಿಂದ ಪ್ರಮಾಣ ವಚನಗಳನ್ನು ಹೇಳಿಸುತ್ತಾರೆ. ಅದರಂತೆ ಅವನು ಹೆಂಡತಿಯನ್ನು ಯಾವರೀತಿ ಪೋಷಿಸಬೇಕೆಂದು ಬುದ್ಧಿವಾದ ಹೇಳುತ್ತಾರೆ. ಸಪ್ತಪದಿ ಕಾರ್ಯಕ್ರಮ ಮದುವೆಯಲ್ಲಿ ಬಹು ಮುಖ್ಯವಾದ ಅಂಗ.

<sapthapadi> (-) A ritual of taking seven steps - In Saptapadi program, boy as told by Priest putting seven steps, he is made to take oath. Accordingly, how he must take care of his wife, Priest advises. Saptapadi program in marriage is one very important.

951. ಸಪ್ತಾಹ: ಏಳು ದಿನಗಳ ಕಾರ್ಯಕ್ರಮವನ್ನು ಸಪ್ತಾಹವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಧರ್ಮಗ್ರಂಥಗಳನ್ನು ಪೂರ್ಣವಾಗಿ ಅಥವಾ ಸಂಗ್ರಹರೂಪವನ್ನು ಸಪ್ತಾಹವನ್ನಾಗಿ (ಏಳುದಿನ ವಾಚನಕಾರ್ಯಕ್ರಮ ಅಥವಾ ಪ್ರವಚನ ಕಾರ್ಯಕ್ರಮ) ನಡೆಸುತ್ತಾರೆ. ರಾಮನವಮಿ ಕಾರ್ಯಕ್ರಮವನ್ನೂ ರಾಮಸಪ್ತಾಹ ಎಂದೇ ಕರೆಯುತ್ತಾರೆ.

ಉದಾ: ದೇವಸ್ಥಾನದಲ್ಲಿ ನಾಳೆಯಿಂದ ನವರಾತ್ರಿ ಪ್ರಯುಕ್ತ ದುರ್ಗಾಸಪ್ತಶತಿ ಪಾರಾಯಣ ಇದೆ.

<sapthaaha> (-) Seven days of celebration for a week - Program of seven days is called Saptaha. Generally, holy book or collected material they do it as week's program (seven days discourse). Ramanavami program is also called Ramasaptaha.

Eg: In temple from tomorrow, on account of Navarathri there is Durgasaptashati discourse.



952. ಸಮಿತ್ತು: ಅರಳಿ ಮರದ ಸಣ್ಣ ಕಡ್ಡಿಗಳಿಗೆ **ಸಮಿತ್ತು** ಎಂದು ಹೆಸರು. ಸಮಿತ್ತನ್ನು ಹೋಮ ಮಾಡುವಾಗ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಪುರೋಹಿತರ ಮನೆಗಳಲ್ಲಿ ಸಮಿತ್ತು ಮತ್ತು ದರ್ಭೆಯನ್ನು ಕಂತೆಕಂತೆಯಾಗಿ ಕಟ್ಟಿಟ್ಟಿರುತ್ತಾರೆ. ಸಮಿತ್ತನ್ನು ಸುಮಾರು ಒಂದು ಗೇಣು ಉದ್ದ ಅಳತೆಗೆ ಕತ್ತರಿಸಿ ಹೋಮಕ್ಕೆ ಉಪಯೋಗಿಸುತ್ತಾರೆ.

ಉದಾ: ಆ ಸಮಿತ್ತಿನಕಟ್ಟನ್ನು ಈ ಕಡೆ ತಂದುಕೊಡು.

ನೋಡಿ: ದರ್ಭೆ

<samithhu> Small sticks of Arali tree is called samithhu. They use samithhu while doing Homa. Generally, in priest's houses samithhu and darbhe (a kind of grass) are stored in bundles. They cut samithhu to a length of nine inches and use for Homa.

Eg: Bring that bundle of samiththu this side.

See: Darbhe

953. ಸರಗುಣಿಕೆ: ದಾರದಿಂದ ಸುಲಭವಾಗಿ ಎಳೆದ ಕೂಡಲೆ ಬಿಚ್ಚುವಂತೆ ಹಾಕುವ ಗಂಟು, **ಸರಗುಣಿಕೆ.** ಇದನ್ನು ಜೀರ್‌ಗಂಟು ಎಂದೂ ಕರೆಯುತ್ತಾರೆ.

ಉದಾ: ಕಗ್ಗಂಟು ಮಾಡಬೇಡ, ಸರಗುಣಿಕೆ ಹಾಕೋ ಮಗನೆ ಎಂದು ಹೇಳುತ್ತಾರೆ.

ನೋಡಿ: ಜೀರ್‌ಗಂಟು

<saragunike> Noose - Knot which can unwhirl easily by pulling the thread is saragunike. This is also called as Jeergantu.

Eg: Do not make Kaggantu. Put Jeergantu my son.

See: Jeergantu

954. ಸರಿಹೊತ್ತು: ಸರಿಹೊತ್ತು ಎಂದರೆ ಮಧ್ಯರಾತ್ರಿ. ಯಾವನೋ ಅವನು ಸರ್ಹೊತ್ನಲ್ಲಿ ಹುಚ್ಚನಂತೆ ಕೂಗ್ತಾ ಅವನೆ. ಯಾರು ಪಕ್ಕದರಸ್ತೆ ಹುಚ್ಚಪ್ಪನ ಮಗ ಅಂತ ಕಾಣುತ್ತೆ.

ಉದಾ: ಪೊಲೀಸಪ್ಪ ಸರ್ಹೊತ್ನಲ್ಲಿ ಶಿಳ್ಳೆಹಾಕ್ಕಂಡು ಬೀದಿಬೀದಿಯಲ್ಲೂ ಗಸ್ತು ತಿರ್ಗ್ತಾರೆ.

ಉಚ್ಚಾರಭೇದ: ಸರ್ಹೊತ್ತು (ಸರಿಹೊತ್ತು)

<sarihothhu> Latter part of the night - Sarihothhu means midnight. Someone is shouting like mad man in midnight. Maybe next road Huchhappa's son.

Eg: Policeman in midnight whistling going in every street.

Different pronunciation: Sarhothhu (sarihothhu)

955. ಸಲ: ನೋಡಿ: ಕಿತ

<sala> See: Kitha


956. ಸಲಕರಣೆ: ಉಪಯೋಗಕ್ಕೆ ಬೇಕಾದ ಪ್ರತಿಯೊಂದು ಸಾಮಾನನ್ನೂ ಒದಗಿಸಿಕೊಟ್ಟಾಗ ಅದನ್ನು **ಸಲಕರಣೆ** ಎನ್ನುತ್ತಾರೆ.

ಉದಾ: ಭಟ್ಟರೇ ನೀವು ಏನ್ ಬೇಕಾದರೂ ಅಡಿಗೆ ಮಾಡಬಹುದು. ಪ್ರತಿಯೊಂದು ಸಲಕರಣೆಯೂ ಇದೆ ಅಡಿಗೆಮನೇಲಿ.

<salakaraNe> Equipment - When providing every item required to use, they say Salakarane.

Eg: Bhatji, you can make any item of food. Every equipment is there in the kitchen

957. ಸಾಂಬಾರಮರಿಗೆ: ಅಡಿಗೆ ಮನೆಯಲ್ಲಿ ಒಗ್ಗರಣೆಗೆ ಬೇಕಾಗುವ ಸಾಸುವೆ, ಜೀರಿಗೆ, ಉದ್ದಿನಬೇಳೆ, ಕಡಲೇಬೇಳೆ ಮುಂತಾದ ಪದಾರ್ಥಗಳು ಒಟ್ಟಿಗೆ ಸಿಗುವಂತೆ ಇಡುವ ಮರದ ದೊಡ್ಡ ಭರಣಿಗೆ **ಸಾಂಬಾರಮರಿಗೆ** ಎಂದು ಹೆಸರು. ಸಾಂಬಾರಮರಿಗೆಯಲ್ಲಿ ಐದಾರು ಬಟ್ಟಲುಗಳಹಾಗೆ ಒಂದೇ ಮರದ ತುಂಡಿನಲ್ಲಿ ಕೆತ್ತಿರುತ್ತಾರೆ.



ಉದಾ: ಈ ಸಲ ಬಡಗಿ ನಮ್ಮ ಹಳ್ಳಿಗೆ ಬಂದರೆ ಒಂದು ಸಾಂಬಾರಮರಿಗೆ ಮಾಡಿಸ್ಬೇಕು.

<saambaaramarige> (-) Container to keep mustard etc. - In kitchen, a big wooden vessel in which all the required items for vagar like, mustard seeds, jeera, urd dal, gram etc. can be

kept together is called sambaramarige. In sambaramarige five to six cups are made in one wooden log.

Eg: This time if carpenter comes to our village, must get one sambaramarige done.

958. ಸಾಗುವಳಿ: ಹೊಲಗದ್ದೆಗಳಲ್ಲಿ ವ್ಯವಸಾಯ ಮಾಡುವುದನ್ನು **ಸಾಗುವಳಿ** ಎನ್ನುತ್ತಾರೆ. ವ್ಯವಸಾಯ ಮಾಡುವುದಕ್ಕೆ ಮುಂಚೆ ಸರ್ಕಾರದಿಂದ ಸಾಗುವಳಿಚೀಟಿಯನ್ನು ಪಡೆಯಬೇಕು. ಪ್ರತಿಯೊಬ್ಬ ರೈತನೂ ಅವನ ಜಮೀನಿನಲ್ಲಿ ಏನು ಸಾಗುವಳಿ ಮಾಡುತ್ತಾನೆಂಬ ಬಗ್ಗೆ ಶ್ಯಾನುಭೋಗರ ಲೆಕ್ಕಪತ್ರಗಳಲ್ಲಿ ನಮೂದಿಸಿರುತ್ತೆ.

ಉದಾ: ಸಿದ್ದರಾಮಪ್ಪ ಎರಡು ಎಕರೆ ಜಮೀನು ಪಡಕಂಡು ಸಾಗುವಳಿಮಾಡ್ಕಂಡಿದಾನೆ.

ನೋಡಿ: ಆಬಾದು

<saaguvaLi> Cultivation - Doing cultivation in field is called saguvali. Before cultivating we must obtain Cultivation order from government. In Shanbhog's documents, it will have been recorded regarding each farmer in his land what he cultivates.

Eg: Siddaramappa securing two acres land doing cultivation. See: Aabaadu

959. ಸಾಣೆ ಹಿಡಿಯುವುದು: ಮಚ್ಚು, ಕುಡುಗೋಲು, ಕೊಡಲಿ ಮುಂತಾದ ಸಲಕರಣೆಗಳನ್ನು ಹರಿತ ಮಾಡುವುದಕ್ಕೆ **ಸಾಣೆ ಹಿಡಿಯುವುದು** ಎಂದು ಹೇಳುತ್ತಾರೆ. ಚಾಕು, ಕತ್ತರಿ ಮುಂತಾದ ಸಣ್ಣ ಸಲಕರಣೆಗಳನ್ನು ಕಲ್ಲಿನ ಮೇಲೆ ಮರಳುಹಾಕಿ ಉಜ್ಜಿ ಚೂಪು ಮಾಡುತ್ತಾರೆ. ಮಚ್ಚು, ಕೊಡಲಿಗಳನ್ನು ಮಾತ್ರ ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿ ಸುತ್ತಿಗೆಯಿಂದ ಬಡಿದು ಹದ ಮಾಡುತ್ತಾರೆ.

ಉದಾ: ಸಾಣೆ ಹಿಡಿಯೋನು ಬಂದಿದಾನೆ, ಚಾಕು ಕತ್ತರಿ ಎರಡನ್ನೂ ಸಾಣೆಹಿಡಿಸಿಬಿಡು.

ನೋಡಿ: ಹಣೆ

<saaNehiDiyuvudu> (-) Sharpen the weapons - For sharpening sickle, knife, axe etc. equipments they say sanehidiyuvudu. Knife, scissor etc. small equipments putting

sand on stone slab by rubbing sharpen. Sickle and axes only they heat in fire and beat to become proper condition.


Eg: Sharpener has come. Knife, scissor both get sharpened.



960. ಸಾಣೇಕಲ್ಲು: ಸಾಣೇಕಲ್ಲನ್ನು ಒಂದು ವಿಶೇಷವಾದ ಕಲ್ಲಿನಿಂದ ತಯಾರಿಸುತ್ತಾರೆ. ಮೂರು ಅಂಗುಲದಿಂದ ಒಂದು ಅಡಿ ವ್ಯಾಸವಿರುವ ಚಕ್ರಾಕಾರವಾದ ಕಲ್ಲು. ಇದರ ಮೇಲೆ ಗಂಧದ ಕೊರಡಿನಿಂದ ಉಜ್ಜಿ ಗಂಧವನ್ನು ಮಾಡುತ್ತಾರೆ. ದೇವರ ಪೂಜೆಗೆ, ಹಣೆಗೆ ಹಚ್ಚಿಕೊಳ್ಳುವುದಕ್ಕೆ ಉಪಯೋಗ ಮಾಡುವುದು. **ಗಂಧದಕಲ್ಲು** ಎಂದೂ ಸಾಣೇಕಲ್ಲನ್ನು ಕರೆಯುತ್ತಾರೆ. ಮೂರು ಅಂಗುಲ ವ್ಯಾಸವುಳ್ಳ ಸಾಣೇಕಲ್ಲಿನ ಮೇಲೆ, ಆಯುರ್ವೇದದ ಔಷಧಿಯನ್ನು ಗೆರೆಯಂತೆ ಹಚ್ಚಿ, ಒಣಗಿಸಿ ರೋಗಿಗಳಿಗೆ ಕೊಡುತ್ತಿದ್ದರು. ನಾನು ಚಿಕ್ಕಮಗಳೂರಿನಲ್ಲಿ ಒಬ್ಬ ಆಯುರ್ವೇದ ಪಂಡಿತರು ರೋಗಿಗಳಿಗೆ ಕೊಡುತ್ತಿದ್ದ ಔಷಧಿಯನ್ನು ನೋಡಿದ್ದೆ. ಸಾಣೇಕಲ್ಲಿನ ಮೇಲೆ ಪಂಡಿತರು ಗೆರೆ ಹಾಕಿ ಕೊಟ್ಟಿರುವ ಔಷಧಿಯನ್ನು ನೀರಿನಿಂದ ತೆಗೆದು, ಜೇನುತುಪ್ಪ, ಹಾಲು ಅಥವಾ ತುಳಸಿರಸದೊಂದಿಗೆ ಮಕ್ಕಳಿಗೆ ಔಷಧಿಯನ್ನು ಕೊಡುತ್ತಿದ್ದರು.

ಉದಾ: ಸಾಣೇಕಲ್ಲು, ಗಂಧದಕೊರಡು, ಕುಪ್ಪಿಮಾತ್ರೆ ಮೂರನ್ನೂ ತಂದಿಡು ಗೆರೆ ಎಲೆದು ತೇಯ್ತೀನಿ.

ನೋಡಿ: ಗಂಧದಕೊರಡು, ಕುಪ್ಪಿಮಾತ್ರೆ



<saaNekallu> (-) Touch stone. They prepare sanekallu with a special stone. A round stone with three inches height, one-foot diameter. On that rubbing the sandal wood make sandal paste. For pooja and smearing on forehead use. They call it as Gandhadakallu for sanekallu.

On three inches diameter touch stone, smearing ayurvedic medicine like three to four lines, dry were giving to patients. I had seen in Chikmagalur, one Ayurvedic Pandit giving medicine to patients. Taking out medicine smearing on the line with water, mixing honey, milk or thulasi juice, were

giving medicine to children.

Eg: Bring touch stone and sandal wood. Will make sandal paste.

See: Sandal wood, Kuppimaatre

961. ಸಾಬೂನು: ಸೋಪನ್ನು (Soap ಇಂಗ್ಲಿಷ್‌ಪದಕ್ಕೆ ಬಳಸುವ ಪದ) ಸಾಬೂನು ಎಂದು ಕರೆಯುತ್ತಾರೆ. ಬಟ್ಟೆಗಳನ್ನು, ಪಾತ್ರೆಗಳನ್ನು ನಿರ್ಮಲಗೊಳಿಸಲು ಕೊಳೆತೆಗೆಯಲು ಬಳಸುತ್ತಾರೆ. ಈಗ ಸೋಪಿನ ಪುಡಿಗಳು ಬಳಕೆಗೆ ಬಂದಿವೆ.

ಉದಾ: ಸಾಬೂನು ತರಬೇಕು ಖರ್ಚಾಗಿದೆ. ರಾಶಿ ಬಟ್ಟೆ ಒಗೆಯೋಕೆ ಬಿದ್ದಿದೆ.

ನೋಡಿ: ಅಂಟುವಾಳ

<saaboonu> Soap is called as sabunu. For cleaning clothes, vessels for removing dirt, use sabunu. Now soap powders have come in usage.

Eg: Must get soap, exhausted. Plenty of clothes are heaped up to be washed.

962. ಸಾರಣೆಕಾರಣೆ: ನೋಡಿ: ಹುರಿಮಂಜು

<saaraNekaaraNe> See: Hurimanju

963. ಸಾರು: ನಿತ್ಯದ ಅಡಿಗೆಯಲ್ಲಿ ಸಾರು, ಹುಳಿ, ಮಜ್ಜಿಗೆ, ಅನ್ನ ಇದ್ದೇ ಇರುತ್ತೆ. ಸಾರು ಮಾಡುವುದರಲ್ಲಿ ಒಬ್ಬೊಬ್ಬರದು ಒಂದೊಂದು ರುಚಿ. ಬೇಳೆ ಜಾಸ್ತಿ ಇದ್ದು ಸಾರು ಗಟ್ಟಿಯಾಗಿದ್ದರೆ **ಗಟ್ಟಿಸಾರು** ಎನ್ನುತ್ತಾರೆ. ಬೇಳೆ ಕಡಿಮೆ ಇದ್ದು ತಿಳಿಯಾಗಿದ್ದರೆ **ತಿಳಿಸಾರು** ಎನ್ನುತ್ತಾರೆ. ಕೆಲವರು ಮಾಡುವ ಸಾರಿಗೆ ವಿಶೇಷ ರುಚಿ ಇರುತ್ತೆ. ಅದು ಅವರು ಮಾಡುವ ರೀತಿ, ಹದವನ್ನು ಅವಲಂಬಿಸಿರುತ್ತೆ.

ನೋಡಿ: ಚನ್ನಂಗಿಬೇಳೆ, ಹುಳಿ

<saaru> A kind of soup - In daily food, rasam, sambar, buttermilk, rice will always be there. In making rasam each will have different taste. If dal is more and rasam is thick, they say gattisaru. If dal is less and rasam thin, they say Thilisaru. Some people making rasam will have special taste. It depends on the way they do, and condition.


See: Channangibele, sambar

964. ಸಿಂಡರಿಸು: ಕಾರಣವನ್ನು ತಿಳಿಯಪಡಿಸದೆ ಕೋಪ ಮಾಡಿಕೊಳ್ಳುವುದನ್ನು **ಸಿಂಡರಿಸುವುದು** ಎನ್ನುತ್ತಾರೆ.

ಉದಾ: ಏ ಗೂಬೆಮುಂಡೇದೆ, ಯಾಕ್ ಹಾಗೆ ಮುಖ ಸಿಂಡರಿಸಿಕೊಂಡಿದೀಯ, ಏನಾಗದೆ ಅಂತ ಬೊಗಳು.

<sinDarisu> Knit the brown - Getting angry without making known the reason they call sindarisuvudu (frowning).

Eg: Ei goobemundede, why you are frowning, tell what has happened?



965. ಸಿಂಬೆ: ಹಳೆಯದಾದ ಪಂಚೆ, ಸೀರೆ ಅಥವಾ ಪುಂಡಿಹುರಿಯನ್ನು ದುಂಡಗೆ ಸುತ್ತಿದರೆ ಅದು **ಸಿಂಬೆ**ಯಾಗುತ್ತೆ. ಸಿಂಬೆಯನ್ನು ತಲೆಯ ಮೇಲಿಟ್ಟು ಅದರ ಮೇಲೆ ನೀರು ತುಂಬಿದ ಕೊಡ ಅಥವಾ ತಪ್ಪಲೆಯನ್ನಿಟ್ಟುಕೊಂಡು ಸಲೀಸಾಗಿ ನಡೆದುಕೊಂಡು ಬರುತ್ತಾರೆ. ನೀರು ಕೊಡದಿಂದ ಹೊರಕ್ಕೆ ಚೆಲ್ಲುವುದಿಲ್ಲ. ಹಾಲು, ಮೊಸರು ಮಾರಾಟ ಮಾಡುವವರು ದೊಡ್ಡ ದೊಡ್ಡ ಮಡಕೆಗಳಲ್ಲಿ ಹಾಲು, ಮೊಸರು ತುಂಬಿ ಅದನ್ನು ಸಿಂಬೆಯ ಮೇಲೆ ಇಡುತ್ತಾರೆ.

ಗುಡಾಣ/ವಾಡೆಗಳ ಕೆಳಕ್ಕೆ ಈ ತರಹ ಸಿಂಬೆಗಳನ್ನು ಒಣಗಿದ ಹುಲ್ಲಿನಿಂದ ಅಥವಾ ಬಾಳೆಯನಾರಿನಿಂದ ಮಾಡಿ ಇಡುತ್ತಾರೆ. ತೆಂಗಿನ ಹುರಿಯಿಂದಲೂ ಮಾಡಬಹುದು. ಇದು ಬಹಳ ದಿನಗಳವರೆಗೆ ಬಾಳಿಕೆ ಬರುತ್ತದೆ.

ಉದಾ: ವಾಡೆ ಕೆಳಕ್ಕೆ ತೆಂಗಿನನಾರಿನ ಸಿಂಬೆ ಮಾಡಿಡು ಇಲ್ಲದಿದ್ದರೆ ತಳ ಹೋಗ್ಬಿಡುತ್ತೆ.

ನೋಡಿ: ಗುಡಾಣ, ವಾಡೆ

<simbe> (-) A coil of cloth etc. placed at the bottom of vessel - Old dhothi, saree or jute thread if tied around becomes Simbe (coil). Putting simbe on head and on that putting vessel full of water women easily come by walk. Water will not spill out. Sellers of milk, curds in big pots filling milk, curds, put it on simbe.

At the bottom of big pots (gudana) preparing these types of simbes from dry grass or plantain fiber, keep. Can be done

with coconut fiber also. This stays firm for days together.

Eg: Keep simbe of coconut fiber at the bottom of Vade (big pot). Otherwise bottom will break.

See: Gudana, Vade

966. ಸಿಕ್ಕಾಬಟ್ಟೆ: ಬುದ್ಧಿ ಹೆಂಗೆಂಗೆ ಓಡ್ತದೊ ಹಂಗೆ ಮಾತಾಡೋದಕ್ಕೆ ಸಿಕ್ಕಾಬಟ್ಟೆ ಅನ್ನುತ್ತಾರೆ. ಕಂಡಾಬಟ್ಟೆ ಎಂದರೂ ಇದೇ ಅರ್ಥ.

ಉದಾ: ಅವನೇನಪ್ಪ ಹಂಗೆ ಸಿಕ್ಕಾಬಟ್ಟೆ ಮಾತಾಡ್ಬುಟ್ಟ, ತಲೇಲಿ ಸ್ವಲ್ಪವೂ ಬುದ್ಧಿ ಇಲ್ಲ ಅಂತ ಕಾಣ್ತದೆ.

<sikkabaTTe> Without limit - To talk with wavering mind, they say sikkabatte. If told Kandabatte the same meaning.

Eg: See how he talked sikkabatte (without limit). It seems he has no brain.

967. ಸೀನೀರಿನಬಾವಿ: ನೋಡಿ: ನೆಲಬಾವಿ

<seeneerinabaavi> See: Nelabavi

968. ಸೀಮಂತ: ಮದುವೆಯಾದ ಹುಡುಗಿ ಮೊದಲನೆಯ ಸಲ (ಚೊಚ್ಚಲು) ಗರ್ಭಿಣಿಯಾದಾಗ 6–7ನೇ ತಿಂಗಳಲ್ಲಿ ಅವಳನ್ನು ತೌರುಮನೆಗೆ (ತಾಯಿಯಮನೆಗೆ) ಕಳುಹಿಸುತ್ತಿದ್ದರು. ಅವಳಿಗೆ ಎರಡು ಕೈಗಳಿಗೂ ಹಸಿರು ಗಾಜಿನ ಬಳೆಗಳನ್ನು ತೊಡಿಸಿ, ಹಸಿರು ಸೀರೆಯನ್ನುಡಿಸಿ ಆರತಿ ಎತ್ತುವುದು ಹಿಂದಿನಿಂದ ಬಂದ ಸಂಪ್ರದಾಯ. ಆ ಸಮಾರಂಭಕ್ಕೆ **ಸೀಮಂತ** ಎನ್ನುತ್ತಾರೆ. ಹುಡುಗಿಯ ತಾಯಿಗೆ ಸೀಮಂತ ಬಹಳ ಸಡಗರದ ಹಬ್ಬ. ಆ ದಿನ ಹಿರಿಯ ಮುತ್ತೈದೆಯರನ್ನೆಲ್ಲ ಕರೆದು ಗರ್ಭಿಣಿಯಾದ ಹುಡುಗಿಗೆ ಅವರಿಂದ ಆಶೀರ್ವಾದ ಮಾಡಿಸುತ್ತಾಳೆ.

ಉದಾ: ಪದ್ಮಾವತಿ ಗರ್ಭಿಣಿಯಾಗಿ ಬಂದಿದಾಳೆ ಸೀಮಂತ ಮಾಡ್ಬೇಕು.

<seemantha> Baby Shower A rite performed at the pregnancy - Married girl when becoming pregnant for first time, in sixth or seventh month used to send her to her native place (mother's house). For her putting glass bangles to both hands, wearing green saree, waving arati is traditional custom. That function is called seemantha. For girl's mother seemantha is an enjoyable festival. That day inviting all elderly women, get blessings from them to the pregnant girl.

Eg: Padmavati has come pregnant. Must do Seemantha.

969. ಸುಫರ್ದು: ಅಧೀನವಾಗಿರುವುದಕ್ಕೆ **ಸುಫರ್ದು** ಎಂದು ಹೇಳುತ್ತಾರೆ.

ಉದಾ: ಮನೆ, ತ್ವಾಟ ಎಲ್ಲ ಸರ್ಕಾರದ ಸುಫರ್ದಿನಲ್ಲಿದೆ. ನಮ್ಮ ಸುಫರ್ದಿಗೆ ಪಡೆಯಬೇಕಾದರೆ ಇನ್ನೂ ನಾಲ್ಕಾರು ವರ್ಷ ಹೆಣಗಬೇಕು.

<suphardu> Possession - To be under custody, they say Suphardu.

Eg: House, garden everything is under custody of government. To get back to our custody, must struggle for four to six years still.

970. ಸುಸ್ತಿಬಡ್ಡಿ: ಹಣ ಸಾಲವಾಗಿ ತೆಗೆದುಕೊಂಡವನು ನಿಗದಿಯಾದ ಕಾಲಕ್ಕೆ ವಾಪಸ್ ಕೊಡದೆ ಹೋದರೆ, ಕೊಟ್ಟ ಹಣ ಮತ್ತು ಬಡ್ಡಿಯ ಮೇಲೆ ಹೆಚ್ಚು ಬಡ್ಡಿ ವಸೂಲ್ಮಾಡುತ್ತಾರೆ. ಅದಕ್ಕೆ **ಸುಸ್ತಿಬಡ್ಡಿ** ಎಂದು ಹೆಸರು.

ಉದಾ: ಎರಡುಸಲ ಕಂತು ಕಟ್ಟಕ್ಕಾಗಲಿಲ್ಲ ಸುಸ್ತಿಬಡ್ಡಿ ಹಾಕ್ಬಿಟ್ಟವರೆ.

ನೋಡಿ: ಚಕ್ರಬಡ್ಡಿ

<susthibaDDi> Compound interest - Person who has taken money on loan does not return in due time, they recover more interest on the principal loan and interest. For that it is called susthibaddi.

Eg: Could not pay installment for two times. They have charged compound interest.

971. ಸುಳಿ: ತೆಂಗು, ಅಡಕೆಕಾಯನ್ನು ಮೊಟ್ಟೆ ಸಮೇತ ನೆಲದಲ್ಲಿ ಹೂಳಿದರೆ ಒಂದೆರಡು ತಿಂಗಳಾದ ನಂತರ ಮೊಳಕೆ ಬರುವುದನ್ನು **ಸುಳಿ** ಎನ್ನುತ್ತಾರೆ. ನೆತ್ತಿಮೇಲೆ ಬ್ರಹ್ಮರಂಧ್ರ ಇರುವ ಭಾಗಕ್ಕೆ ಸುಳಿ ಎಂದು ಕರೆಯುವರು.

ಹೀನಸುಳಿ ಬೋಳಿಸಿದರೆ ಹೋದೀತೇ ಎಂಬುದು ಗಾದೆ.

ಉದಾ: ನಮ್ಮ ತ್ವಾಟದಾಗೆ ನಲವತ್ತು ಮೊಟ್ಟೆ ತೆಂಗಿನಕಾಯಿ ಸುಳಿ ಒಡೆದಿವೆ. ಮುಂದಿನ ವಾರ ಬೇರೆಕಡೆಗೆ ಹುಟ್ಟುಹಾಕಬೇಕು.

<suLi> (-) Tender Coconut, Areca with skin if put inside the ground, after one or two months, it sprouts, is called as Suli. The portion of aperture on the center of head is called Suli.

Heenasuli bolisidare hodeethe is a proverb. (Even if you cut the spiral of hair on the body considered as inauspicious, can it go).

Eg: In our garden forty coconuts have sprouted. Next week must replant in separate place.

972. ಸೂತಕ: ಯಾರಾದರೂ ಸತ್ತಾಗ ಆ ಮೈಲಿಗೆಯನ್ನು ಸೂತಕ ಎಂದು ಕರೆಯುತ್ತಾರೆ. ಸೂತಕ ಇರುವವರು ಶುಭಕಾರ್ಯಗಳಿಗೆ ಹೋಗುವುದಿಲ್ಲ. ಶುಭಕಾರ್ಯಗಳನ್ನು ಮಾಡುವುದೂ ಇಲ್ಲ.

ಮಗು ಜನನವಾದರೆ ಅಥವಾ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಮೊದಲ ಹನ್ನೊಂದು ದಿವಸಗಳು ಉಳಿದವರಿಗೆಲ್ಲ ಮೈಲಿಗೆಯಾಗುತ್ತೆ. ಅದನ್ನು **ಸೂತಕ** ಎನ್ನುತ್ತಾರೆ. ಜನನವಾದಾಗ ಆ ಮೈಲಿಗೆಯನ್ನು **ಪುರುಡು** ಎಂತಲೂ, ಸಾವಾಗಿ ಮೈಲಿಗೆಯಾದಾಗ **ಸೂತಕ** ಎಂತಲೂ ಹೇಳುವುದು ರೂಢಿ. ಆ ಹನ್ನೊಂದು ದಿವಸಗಳು ಅಡುಗೆಮನೆ, ದೇವರಮನೆಗೆ ಯಾರೂ ಹೋಗುವುದಿಲ್ಲ.

ಉದಾ: ಇನ್ನು ಮೂರು ದಿನ ಸೂತಕ ಇದೆ ಆಮೇಲೆ ನಿಮ್ಮನೆಗೆ ಬರ್ತೀವಿ.

ನೋಡಿ: ಪುರುಡು, ಮೈಲಿಗೆ

<suuthaka> Impurity - When anyone dies, that impurity is called Suutaka. Those who are having suutaka, will not attend auspicious functions. Will not perform auspicious functions.

If child is born or anyone dies in the house the first eleven days all the remaining people will have impurity. That is called suutaka. The impurity while child born is called Purudu, impurity by death called as Sutaka. That eleven days no one will enter kitchen or Puja mandir.

Eg: For another three days we have impurity. After that will come to your house.

See: Purudu, Mailige (impurity)

973. ಸೂರ್ಯನಮಸ್ಕಾರ: ಬೆಳಿಗ್ಗೆ ಮುಂಚೆ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ, ಸೂರ್ಯೋದಯವಾದ ಕೂಡಲೆ ಸೂರ್ಯನಿಗೆ ಎದುರಾಗಿ ನಿಂತು **ಸೂರ್ಯನಮಸ್ಕಾರ** ಮಾಡುತ್ತಾರೆ. ಬೆಳಗಿನಹೊತ್ತು ಸೂರ್ಯನ ರೇಖೆಗಳು ಶರೀರದ ಮೇಲೆ ಬಿದ್ದರೆ ಅದು ಆರೋಗ್ಯಕರ ಎನ್ನುವುದು ನಂಬಿಕೆ. ಸೂರ್ಯನಮಸ್ಕಾರ

ಮಾಡುವುದಕ್ಕೆ ಮುಂಚೆ ಗುರುವಿನಿಂದ ಆಶೀರ್ವಾದ ಪಡೆಯಬೇಕು.



<sooryanamaskaara> Prostrating to Sun - Getting up early in the morning after finishing daily morning rites, immediately after sunrise, standing opposite to Sun they prostrate Suryanamaskara. Morning time sunrays fall on body, it is healthy, is the belief. Before doing Suryanamaskara must get blessings from Guru (Religious Preceptor).

974. ಸೂಲಗಿತ್ತಿ: ಯಾರ ಮನೆಯಲ್ಲಾದರು ಗರ್ಭಿಣಿಯಾದ ಹೆಂಗಸು ಹೆರಿಗೆಯಾದಾಗ ಸಹಾಯ ಮಾಡುವವಳಿಗೆ **ಸೂಲಗಿತ್ತಿ** ಎಂದು ಹೆಸರು. ಮಗು ಜನನವಾದ ನಂತರ ಮಗು ಮತ್ತು ಬಾಣಂತಿಗೆ ನೀರು ಹಾಕುವುದು ಮತ್ತು ಬಟ್ಟೆಗಳನ್ನು ಕೆರೆಗೆ ತೆಗೆದುಕೊಂಡು ಹೋಗಿ ಒಗೆದು, ಒಣಗಿಸಿ ತಂದು ಕೊಡುವ ಜವಾಬ್ದಾರಿ ಸೂಲಗಿತ್ತಿಯದು.

ಉದಾ: ಬುಕ್ಕಾಂಬುಧಿಯಲ್ಲಿ ನಮ್ಮ ಅಜ್ಜಿ ಯಾರ ಮನೆಯಲ್ಲಿ ಹೆರಿಗೆಯಾದರು ಸೂಲಗಿತ್ತಿಯಾಗಿ ಹೋಗಿ ಸಹಾಯಮಾಡುತ್ತಿದ್ದರು.

<suulagithhi> Midwife - In anybody's house pregnant women borne, the person who helps is called suulagithhi. After child is born, for child and baananthi to bathe and taking clothes to tank wash, dry and bring back is the responsibility of midwife.

Eg: In Bukkambudhi our grandmother, in anybody's house if child born, was going as suulagithhi and helping.

975. ಸೂಳೇಮಗ: ನೋಡಿ: ಬ್ರಾಹ್ಮಣರ ಬೈಗುಳ

<suuLemaga> See: Brahmanara Baigula

976. ಸೆತ್ತೆ: ಒಣಗಿರುವ ಹುಲ್ಲು, ಸೊಪ್ಪು ಮುಂತಾದುವನ್ನು ಗುಪ್ಪೆಗುಪ್ಪೆಯಾಗಿ ಒಟ್ಟಿರುವುದಕ್ಕೆ **ಸೆತ್ತೆ** ಎನ್ನುತ್ತಾರೆ. ಗೊಬ್ಬರ ಮಾಡುವಾಗ ಸೆತ್ತೆಯನ್ನು ಗುಂಡಿಯಲ್ಲಿ ಹಾಕಿ ಸಗಣಿ, ಗಂಜಲವನ್ನು ಹಾಕಿದರೆ ಕೆಲವಾರು ತಿಂಗಳುಗಳಲ್ಲಿ ಅದು ಪೂರ್ತಿ ಕೊಳೆತು ಒಳ್ಳೆಯ ಗೊಬ್ಬರವಾಗುತ್ತೆ. ಸೆತ್ತೆಯನ್ನು ಶಾಡೆ ಎಂದೂ ಕರೆಯುತ್ತಾರೆ.

ಉದಾ: ದನದಕೊಟ್ಟಿಗೆಯಲ್ಲಿ ಬಿದ್ದಿರುವ ಸೆತ್ತೇನೆಲ್ಲ ಗೊಬ್ಬರದಗುಂಡಿಗೆ

ಹಾಕಿಬಿಡು.

<sethhe> Heap of grass - To pile up dry grass, greens in heaps they say Sethhe (garbage). While preparing manure, putting garbage in the pit, if put cow dung, excreta in a few months it rotten fully and becomes good manure. For sethhe they also call as Shade.

Eg: Put all the garbage in cowshed into manure pit.

977. ಸೇವಾಕರ್ತರು: ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ದೇವರ ಸೇವೆಗೆ, ಪೂಜಾಕಾರ್ಯಕ್ಕೆ ಉತ್ಸವಕ್ಕೆ ಆಗುವ ಖರ್ಚನ್ನು ಕೊಡುವವರನ್ನು **ಸೇವಾಕರ್ತರು** ಎಂದು ಕರೆಯುತ್ತಾರೆ. ಇಂಥಿಂಥ ದಿನ ಇಂಥಿಂಥ ಸೇವಾಕರ್ತರ ಸೇವೆ (ಪೂಜಾಕೈಂಕರ್ಯ) ಇದೆ ಎಂದು ಗೊತ್ತಾಗಿರುತ್ತದೆ. ಆ ದಿನದಂದು ಸೇವಾಕರ್ತರಿಗೆ ಅರ್ಚಕರು ವಿಶೇಷ ಆಶೀರ್ವಾದ ಮಾಡಿ ಹಾರ, ಫಲ, ತೀರ್ಥ ಪ್ರಸಾದ ನೀಡುತ್ತಾರೆ.

ನೋಡಿ: ಪುದುವಟ್ಟು

<sevakartharu> Supporters - Generally, in temples for service and pooja, festival, the expenses those who bear, are called Sevakartharu. It will have been known that whose service is there on a particular day. That day, the priest will bless the person specially and offer garland, fruits, holy water.

See: Puduvattu

978. ಸೇರುಮಣ್ಣು: ಮನೆಯ ಗೋಡೆಗಳನ್ನು ಕಟ್ಟುವಾಗ **ಸೇರುಮಣ್ಣನ್ನು** ಉಪಯೋಗಿಸುತ್ತಾರೆ. ಇದು ಬಹಳ ಅಂಟಾಗಿರುತ್ತೆ. ಸೇರುಮಣ್ಣಿನ ಜೊತೆಗೆ ರಾಗಿ ಅಥವಾ ಅಕ್ಕಿಯ ಅಂಬಲಿಯನ್ನು ಬೆರೆಸುವುದು ವಾಡಿಕೆ. ಈ ತರಹ ಮಣ್ಣು ಸಿಮೆಂಟಿನಷ್ಟೇ ಬಲವಾಗಿರುತ್ತೆ. ಇಟ್ಟಿಗೆ ಗೋಡೆಯನ್ನು ಕಟ್ಟುವಾಗ ಒಂದೊಂದರ ಮಧ್ಯಕ್ಕೆ ಸೇರುಮಣ್ಣನ್ನು ಹಾಕುತ್ತಾರೆ. ಅದು ಒಣಗಿದ ನಂತರ ಇಟ್ಟಿಗೆಗಳು ಬಿಗಿಯಾಗಿ ಹಿಡಿದುಕೊಳ್ಳುತ್ತವೆ.

ಉದಾ: ಏ ಗಿಡ್ಡೂ ನಾಲ್ಕು ಬಾಣಲೆ ಸೇರುಮಣ್ಣು ಇಲ್ಲಿಗೆ ತಂದ್‌ಹಾಕು.

<serumaNN> A kind of sticky mud - When constructing walls of house, use serumannu. It will be very sticky. It is common to mix gruel of ragi or rice to Serumannu. This type of

soil is as strong as Cement. When building brick walls, in between put the soil. After it is dried, bricks will hold strongly.

Eg: Ei Giddoo put four measures of soil here.

979. ಸೊಕ್ಕು: ಸೊಕ್ಕು ಅಂದರೆ ಅಹಂಕಾರ, ಗರ್ವದಿಂದಿರುವವನನ್ನು **ಸೊಕ್ಕಿನ** ಮನುಷ್ಯ ಎನ್ನುತ್ತಾರೆ.

ಉದಾ: ನನ್ನ ತಂಟೆಗೇನಾದರು ಬರಲಿ ಅವನ ಸೊಕ್ಕು ಅಡಗಿಸಿ, ಹುಟ್ಟಲಿಲ್ಲ ಅನ್ನಿಸ್ಬಿಡ್ತೀನಿ.

<sokku> Arrogant - Sokku means ahankara (egotism). One who is arrogant is called egotist person.

Eg: If he comes to me to kindle, I will handle him to see that he did not born.

980. ಸೊಗಡವರೆ: ನೋಡಿ: ಸೊಗಡು

<sogaDavare> See: SogaDu

981. ಸೊಗಡು: ಎಣ್ಣೆಯ ಹಾಗೆ ಜಿಗುಟಾಗಿರುವ ಕಟುವಾಸನೆಗೆ **ಸೊಗಡು** ಎಂದು ಹೆಸರು. ಮಂಜು ಬೀಳುವ ಕಾಲದಲ್ಲಿ ಹೊಲದವರೆಕಾಯಿ ವಿಶೇಷವಾಗಿ ಬೆಳೆಯುತ್ತೆ. ಅವರೆಕಾಯಿನ ಮೇಲೆ ಸೊಗಡು ತೆಳ್ಳಗೆ ಎಣ್ಣೆಯನ್ನು ಸವರಿದಂತೆ ಕಾಣುತ್ತೆ. ಸೊಗಡು ಅವರೆಕಾಯನ್ನು ಮನೆಗೆ ತಂದಾಗ ಮನೆಯೆಲ್ಲ ಸೊಗಡು ವಾಸನೆಯಾಗಿರುತ್ತೆ.

ಉದಾ: ರಸ್ತೆ ಪಕ್ಕದಲ್ಲೆಲ್ಲ ಸೊಗಡು ಅವರೇಕಾಯಿ ಮಾರ್ತಾ ಇದಾರೆ.

ನೋಡಿ: ಸೊಗಡವರೆ

<sogaDu> Pungent smell - Sticky like oil with abnormal smell is called sogadu. In the season of fog, holadavarekayi (a kind of vegetable) grows in plenty. On that pungent smell looks like thin oil. When brought that to home, the whole house will have that smell.

Eg: On sides of road, they are selling sogaduavarekayi.

See: Sogadavare

982. ಸೊನೆ: ಸಾಮಾನ್ಯವಾಗಿ ಮಾವಿನಕಾಯಿ, ಪೊಪ್ಪಾಯ, ಬಾಳೆಕಾಯಿ ಮತ್ತು ಹಲಸಿನಕಾಯಿಯ ತೊಟ್ಟಿನಿಂದ ಹೊರಬರುವ ರಸಕ್ಕೆ ಸೊನೆ ಎಂದು ಹೇಳುತ್ತಾರೆ. ಇವೆಲ್ಲವು ಹಣ್ಣಾದಾಗ ಸೊನೆ ಬತ್ತಿಹೋಗಿರುತ್ತದೆ. ಮಾವಿನಕಾಯಿ ಮತ್ತು

ಬಾಳೆಕಾಯಿನ ಸೊನೆ ಬಟ್ಟೆಗೆ ತಗುಲಿದರೆ ಹೋಗುವುದೆ ಇಲ್ಲ. ಪರಂಗಿಕಾಯಿನಿಂದ ಬರುವ ಹಾಲಿಗೆ ಜೇನುತುಪ್ಪ ಬೆರೆಸಿ ಮಕ್ಕಳಿಗೆ ಕೆಮ್ಮು ಬಂದಾಗ ಕೈಔಷಧಿಯಾಗಿ ಕುಡಿಸುತ್ತಾರೆ.

ಉದಾ: ಮಾವಿನಕಾಯಿಗಳನ್ನು ಬುಟ್ಟಿಗೆ ತುಂಬುವಾಗ ಹುಶಾರಾಗಿರು ಸೊನೆ ಬಟ್ಟೆಗೆಲ್ಲ ತಗುಲುತ್ತೆ.

ಪದರೂಪ: ಪೊಪ್ಪಾಯಿ (ಪಪ್ಪಾಯಿ), ಪರಂಗಿಹಣ್ಣು

ನೋಡಿ: ಕೈಔಷಧಿ

<sone> White secretion - Generally, mango, poppaya, banana and jack fruit, juice coming out from stalk is called sone (sap). When all these are ripened sap dries. If sap of mango and banana touches the cloth it cannot get cleaned. Sap out of Poppaya mixing honey give to children as native medicine for cough.

Eg: While filling mangos to baskets be careful. Sap touches to clothe.

Different version: Poppayi (Pappayi), Parangi fruit.

See: Native medicine

983. ಸೊಪ್ಪಿನಹುಳಿ: ನೋಡಿ: ಹುಳಿ

<soppinahuLi> See Huli (sambar)

984. ಸೊಪ್ಪೆತೆಂಗಿನಕಾಯಿ: ನೋಡಿ: ಅಂತರಗಾಯಿ ಅನ್ಯ: ದೃಷ್ಟಿಗಾಯಿ

<soppethenginakaayi> See: Antharagayi/Drushtigayi

985. ಸೊಲ್ಲಡಗು: ಇನ್ನೊಂದು ಬಾರಿ ಆ ಮಾತು ಆಡಬಾರದು, ಹಾಗೆ ಮಾಡುವುದಕ್ಕೆ ಸೊಲ್ಲಡಗಿಸುವುದು ಎನ್ನುತ್ತಾರೆ.

ಉದಾ: ಅವನೇನಾದರೂ ನಮ್ಮ ಹಟ್ಟಿಗೆ ಇನ್ನೊಂದು ಸಲ ಕಾಲಿಡಲಿ, ಅವನ ಸೊಲ್ಲಡಗಿಸಿಬಿಡ್ತೀನಿ.

<sollaDagu> (-) Speech to cease - Should not talk one more time. To do that they say solladagisuvudu (To curb talking).

Eg: Let him come again to our hamlet. I will smash him.

986. ಸೋನೆಮಳೆ: ನೋಡಿ: ಹನಿಮಳೆ

<sonemale> See: Hanimale (Drizling)

987. ಸೋಪಸ್ಕರ: (ಸ್ವಯಂಪಾಕ) ಅಡುಗೆ ಮಾಡಲು ಅವಶ್ಯಕವಾಗಿ ಬೇಕಾದ ಅಕ್ಕಿ, ಬೇಳೆ, ತರಕಾರಿ, ತೆಂಗಿನಕಾಯಿ, ಹಾಲು, ಮೊಸರು, ತುಪ್ಪ ಮುಂತಾದುವನ್ನು ಒಂದು ತಟ್ಟೆಯಲ್ಲಿಟ್ಟು ಯಾರಿಗಾದರೂ ಕೊಡುವುದಕ್ಕೆ ಸೋಪಸ್ಕರ ಎಂದು ಹೆಸರು. ಮನೆಯಲ್ಲಿ ಯಾರಾದರೂ ತೀರಿಕೊಂಡಾಗ ಮೊದಲ ವರ್ಷದ ಪ್ರತಿ ತಿಂಗಳೂ ತಿಥಿಯನ್ನು ಮಾಡುವ ಸಂಪ್ರದಾಯವಿದೆ. ಅದನ್ನು ಆಚರಿಸಲು ಸಾಧ್ಯವಾಗದೇ ಹೋದಾಗ ಸೋಪಸ್ಕರವನ್ನು ಬ್ರಾಹ್ಮಣನಿಗೆ ಕೊಡುತ್ತಾರೆ.

ಉದಾ: ಶಂಕರಾ, ರಾಮಯ್ಯನವರ ಮನೆಯಲ್ಲಿ ಸೋಪಸ್ಕರ ಇಟ್ಟಿದಾರಂತೆ, ಹೋಗಿ ತೆಗೆದುಕೊಂಡುಬಾ.

ನೋಡಿ: ತಿಥಿ

<soopaskara> (Swayampaaka) The items required for cooking, rice, dal, vegetables, coconut, milk, curds, ghee etc. keeping in a plate and offer to anyone is called sopaskara (provisions). If anybody dies in house, there is a custom to perform death ceremony every month in the first year. If it is not possible to perform that, they give sopaskara (provisions) to a brahmin.

Eg: Shankara, in Ramayya's house they have kept sopaskara. Go and bring it.

See: Thithi (death ceremony)



988. ಸ್ತ್ರೀಯರ ಉಡುಪುಗಳು: ಮದುವೆ, ಮುಂಜಿ ಸಮಾರಂಭಗಳಲ್ಲಿ ಹೆಂಗಸರಿಗೆ ಸೀರೆ, ಕುಬುಸದ ಬಟ್ಟೆಗಳನ್ನು ಕೊಡುತ್ತಾರೆ. ಸ್ತ್ರೀಯರು ಸೀರೆ ಉಟ್ಟರೆ, ಚಿಕ್ಕ ಹೆಣ್ಣುಮಕ್ಕಳು ಲಂಗ ತೊಡುತ್ತಾರೆ.

ಉದಾ: ಇಲ್ಲಿ ಇಟ್ಟಿರುವ ನಾಲ್ಕು ಸೀರೆಗಳೂ ಹೆಂಗಸರಿಗೆ, ಲಲಿತು, ಉಷಾ ಇಬ್ಬರಿಗೂ ಲಂಗ ಮೇಲ್ಗಡೆ ಇಟ್ಟಿದ್ದಾರೆ.

<sthreeyara uDupugaLu> Women's dress - During marriage, thread ceremony functions, for women they give

saree, blouse pieces. If women wear saree, young girls wear langa (skirt).

Eg: All four sarees kept here are for women. For both Lalithu, Usha skirts are kept on top.

❑

ಹ / Ha



989. ಹಂಚಿಕಡ್ಡಿ: ಹಂಚಿಕಡ್ಡಿ ಒಂದು ವಿಧವಾದ ಹುಲ್ಲಿನ ಮಧ್ಯೆ ಸುಮಾರು ಮೂರು ಅಡಿ ಎತ್ತರಕ್ಕೆ ಬೆಳೆಯುತ್ತೆ. 40–50 ಹಂಚಿಕಡ್ಡಿಗಳನ್ನು ಒಟ್ಟಿಗೆ ಸೇರಿಸಿ ಕಸ ಗುಡಿಸಲು ಪರಕೆಯಾಗಿ ಬಳಸುತ್ತಾರೆ. ಅಡಿಗೆ ಮನೆ, ದೇವರ ಮನೆಗಳಲ್ಲಿ ಕಸ ಗುಡಿಸಲು ಹಂಚಿಕಡ್ಡಿ ಪರಕೆ ಅಥವಾ ನೊಜೆಹುಲ್ಲಿನ ಪರಕೆ ಬಳಸುವುದು ರೂಢಿ. ಹಂಚಿಕಡ್ಡಿಯನ್ನು ಸೀಳಿ ಆಲ ಅಥವಾ ಮುತ್ತುಗದ ಎಲೆಗಳನ್ನು ಒಂದಕ್ಕೊಂದು ಸೇರಿಸಿ ಊಟದ ಎಲೆ ಮಾಡಲು ಉಪಯೋಗಿಸುತ್ತಾರೆ. ಚಿಕ್ಕ ಮಕ್ಕಳು ಹೆದರಿ ರಚ್ಚೆ ಮಾಡಿದಾಗ ಐದಾರು ಹಂಚಿಕಡ್ಡಿಗಳಿಗೆ ಬೆಂಕಿಹಚ್ಚಿ ನಿವಾಳಿಸಿ ಸುಡುತ್ತಾರೆ. ಅದು ಪಟಪಟ ಶಬ್ದ ಮಾಡಿದಾಗ ಮಕ್ಕಳು ಅಳುವುದನ್ನು ನಿಲ್ಲಿಸಿ ಸುಮ್ಮನಾಗುತ್ತವೆ.

ಉದಾ: ಮಕ್ಕಳಿಗೆ ದೃಷ್ಟಿ ಆಗಿದೆ ಹಂಚಿಕಡ್ಡಿ ನಿವಾಳಿಸು.

ನೋಡಿ: ಪೊರಕೆ (ಪರಕೆ)

<hanchikaDDi> Stalk of hanchi grass - Hanchikaddi grows three feet height in between a kind of grass. Attaching hanchikaddi together use as broom to sweep dirt.. It is common to use broom of hanchikaddi or broom of a kind of grass to sweep in kitchen, pooja mandir. Slitting hanchikaddi attaching Ala or flame leaves use to make food leaf.

When children fearing start crying, for five or six hanchikaddis put fire and wave. It makes sound, children stop crying.

Eg: For children evil eye has fallen. Wave hanchikaddi.


See: Porake (parake) Broom.

990. ಹಂಡೆ: ಹಂಡೆಯನ್ನು ಹಿತ್ತಾಳೆ ಅಥವಾ ತಾಮ್ರದ ಲೋಹದಿಂದ ತಯಾರಿಸುತ್ತಾರೆ. ಸುಮಾರು ಏಳೆಂಟು ಕೊಡದಷ್ಟು ನೀರನ್ನು ತುಂಬಿ ಸ್ನಾನಕ್ಕೆ ನೀರು ಕಾಯಿಸಲು ಉಪಯೋಗಿಸುತ್ತಾರೆ. ಹಂಡೆಯ ಬಾಯಿ ಅಗಲವಾಗಿರುವುದರಿಂದ ಚೊಂಬಿನಿಂದ ಬಿಸಿನೀರನ್ನು ತೆಗೆದು ಸ್ನಾನಮಾಡಬಹುದು. ಅದರ ಪಕ್ಕದಲ್ಲಿ ಇನ್ನೊಂದು ಹಂಡೆಯನ್ನು ಇಟ್ಟಿರುತ್ತಾರೆ ತಣ್ಣೀರಿಗಾಗಿ.

ಉದಾ: ಹಂಡೇಲಿ ನೀರಿಲ್ಲದೆ ಇದ್ದರೆ ನಾಲ್ಕು ಕೊಡ ನೀರು ಸೇದಿಹಾಕು.

<hanDe> Large metal boiler - Hande (vessel to heat water) is made of brass or copper. Filling about seven to eight bindiges water, use to heat for bathing. Since the mouth of vessel is wide, can take water with small vessel for bathing. By the side they will have kept another hande for cold water.

Eg: If there is no water in hande, draw four bindiges water and put.



991. ಹಗ್ಗ: ತೆಂಗಿನನಾರು ಅಥವಾ ಕತ್ತಾಳೆನಾರಿನಿಂದ ದಪ್ಪವಾಗಿ ಮಾಡಿದ ಹುರಿಯೆ **ಹಗ್ಗ**. ಮೂರು ನಾಲ್ಕು ವಿಧವಾದ ಹಗ್ಗಗಳಿರುತ್ತವೆ. ಹಸುಕರುಗಳನ್ನು ಕಟ್ಟುವುದಕ್ಕೆ ಬೆರಳುಗಾತ್ರದ ಹಗ್ಗ ಸಾಕು. ಬಾವಿಯಿಂದ ನೀರನ್ನು ಮೇಲಕ್ಕೆ ಎತ್ತಲು ಹೆಬ್ಬೆರಳು ಗಾತ್ರದ ಹಗ್ಗ ಬೇಕಾಗುತ್ತದೆ. ರಥವನ್ನು ಎಳೆಯಲು ಮಾತ್ರ ಎರಡು ಹೆಬ್ಬೆರಳು ಗಾತ್ರದ 40–50 ಅಡಿ ಉದ್ದದ ಹಗ್ಗವನ್ನು ಬಳಸುತ್ತಾರೆ.

ಉದಾ: ನೀರುಸೇದುವ ಹಗ್ಗ ತುಂಡ್‌ತುಂಡಾಗಿಬಿಟ್ಟಿದೆ.

ನೋಡಿ: ಹುರಿಹಗ್ಗ

<hagga> Rope - Big thread made of coconut fiber or jute fiber is hagga. Three or four types of ropes. For tying cattle rope of finger thickness is enough. For drawing water from well requires rope of main finger thickness. For pulling Car they use rope of forty to fifty feet length of the size of two main fingers.

Eg: Rope for drawing water has become pieces.

See: Thread rope

992. ಹಚ್ಚಡ: ನೋಡಿ: ದುಪ್ಪಟಿ

<hachhaDa> Sheet of cloth used as bedspread - See: Duppati

993. ಹಜಾಮತ್: ನೋಡಿ: ಕ್ಷೌರ, ಚೌಲ

<hajaamath> Hair cut - See: Kshoura, Choula

994. ಹಟ್ಟಿ: ವಾಸ ಮಾಡುವ ಚಿಕ್ಕ ಜಾಗಕ್ಕೆ **ಹಟ್ಟಿ** ಎಂದು ಹೆಸರು. ಅಗಸರಹಟ್ಟಿ, ಕುಂಬಾರ ಹಟ್ಟಿ ಹೀಗೆ ಎಲ್ಲ ಬೇರೆಬೇರೆಯಾಗಿರುತ್ತೆ.

ಉದಾ: ಅಗಸರಹಟ್ಟೀಗೆ ಹೋಗಿ ರಾಮಪ್ಪ ಇದಾನೋ ನೋಡ್ಕಂಡ್ಬಾ.

<haTTi> Group of small houses - Small place to live is called hatti (hamlet). Dhobihatti (washerman hamlet), Kumbarahatti (pot maker hamlet) like this all will be separate.

Eg: Go to dhobihatti see whether Ramappa is there.

995. ಹಡಪ: ಕ್ಷೌರಿಕನ ಸಾಮಾಗ್ರಿಗಳ ಪೆಟ್ಟಿಗೆಗೆ ಹಡಪ ಎನ್ನುತ್ತಾರೆ. ಸೋಪು, ಕತ್ತಿ, ಕತ್ತರಿ, ಬಾಚಣಿಗೆ ಮೊದಲಾದವು ಅದರಲ್ಲಿರುತ್ತವೆ. ಹಿಂದಿನ ಕಾಲದಲ್ಲಿ ಕ್ಷೌರಿಕರು ಹಡಪದೊಂದಿಗೆ ಮನೆಗಳಿಗೆ ಬರುತ್ತಿದ್ದರು.

ಉದಾ: ತಿಪ್ಪ ನಾಳೆ ಮನೆಗೆ ಹಡಪದೊಡನೆ ಬರ್ತಾನೆ

<haDapa> Barber's kit - The box of equipments of barber they say Hadapa. Soap, knife, scissors, comb etc. will be in that box. In olden days barbers along with that box were coming to houses.

Eg: Thippa will come tomorrow with hadapa.

996. ಹಣತೆ: ಹಣತೆ ಮಣ್ಣಿನಿಂದ ಮಾಡಿರುವ ದೀಪ. ಕಪ್ಪು ಅಥವಾ ಕೆಂಪು ಮಣ್ಣಿನಿಂದ **ಹಣತೆ**ಯನ್ನು ಮಾಡಿ ಬೆಂಕಿಯಲ್ಲಿ ಸುಡುತ್ತಾರೆ. ಕಾರ್ತಿಕ ಮಾಸದಲ್ಲಿ ದೇವಸ್ಥಾನಗಳ ಮುಂದೆ ನೂರಾರು ಹಣತೆಗಳಲ್ಲಿ ಎಳ್ಳೆಣ್ಣೆ ಅಥವಾ ಹರಳೆಣ್ಣೆಯನ್ನು ಬಳಸಿ ದೀಪ ಹಚ್ಚುತ್ತಾರೆ.



ಉದಾ: ಈಗ ಕಾರ್ತಿಕಮಾಸ ದಿನಾ ಹಣತೆ ಇಟ್ಟು ದೀಪ ಹಚ್ಚಬೇಕು.

<haNathe> (-) Earthen cuplike lamp - Lamp made of

soil. Making lamp with black or red color soil, burn in fire. In Karthik month in front of temple, using sesame oil or castor oil, burn hundreds of lamps.

Eg: Now it is Karthik month. Every day must put lamp and light.

997. ಹಣಾಹಣಿ: ಒಬ್ಬರಿಗೊಬ್ಬರು ಹೊಡೆದಾಡಿ ಜಗಳವಾಡುವುದನ್ನು ಹಣಾಹಣಿ ಎನ್ನುವುದು ರೂಢಿ.

ಉದಾ: ನೆನ್ನೆ ಮಧ್ಯಾಹ್ನ ಮೂಲೆಮನೆ ಶಾಮಣ್ಣನಿಗು ನಿಂಗಪ್ಪನಿಗು ಹಣಾಹಣಿ ಜಗಳವಾಗಿ ಇಬ್ಬರಿಗೂ ಹಣೆಮೇಲೆ ರಕ್ತ ಸೋರ್ತಿತ್ತು.

<haNaahaNi> Quarrelling, beating one another is common to say hanahani (big quarrel).

Eg: Yesterday afternoon, corner house Shamanna and Ningappa quarrelling each other. For both, blood was oozing on forehead.

998. ಹಣಿ: ನೋಡಿ: ಸಾಣೆಹಿಡಿಯುವುದು

<haNi> See: Sanehidiyuvudu (Sharpening)

999. ಹಣ್ಣು ಮಾಡುವುದು: ಮಾವಿನಕಾಯನ್ನು ಹಣ್ಣು ಮಾಡುವುದಕ್ಕೆ ಒಣಗಿದ ಭತ್ತದ ಹುಲ್ಲನ್ನು ನೆಲದ ಮೇಲೆ ಹರಡಿ ಅದರ ಮೇಲೆ ಬಲಿತ ಮಾವಿನಕಾಯಿಗಳನ್ನು ಸಾಲಾಗಿ ಜೋಡಿಸಿ, ಮೇಲ್ಭಾಗಕ್ಕೂ ಹುಲ್ಲನ್ನು ಹಾಕಿ ಒಂದು ವಾರ ಬಿಟ್ಟರೆ ಕಾಯಿಗಳು ಹಣ್ಣಾಗುತ್ತವೆ. ಇದನ್ನು ಒತ್ತೆಹಾಕುವುದು (ಅಡೆಹಾಕುವುದು) ಎಂದೂ ಕರೆಯುತ್ತಾರೆ.

ಬಾಳೆಕಾಯಿಗಳನ್ನು ಹಣ್ಣು ಮಾಡುವುದಕ್ಕೆ ಗುಡಾಣದೊಳಕ್ಕೆ ಬಾಳೆಕಾಯಿನ ಚಿಪ್ಪುಗಳನ್ನು ಒಂದರ ಮೇಲೊಂದರಂತೆ ಇಟ್ಟು ಮಧ್ಯೆ ಆವರಿಕೆ ಸೊಪ್ಪನ್ನು ಹರಡಿರುತ್ತಾರೆ. ಏಳೆಂಟು ದಿವಸಗಳಲ್ಲಿ ಕಾಯಿ ಹಣ್ಣಾಗಿರುತ್ತದೆ.

ಉದಾ: ಒತ್ತೆಹಾಕಿದ್ದ ಎಲ್ಲ ಮಾವಿನಕಾಯಿಗಳೂ ಹಣ್ಣಾಗಿವೆ.

ನೋಡಿ: ಅಡೆಹಾಕುವುದು

<haNNumaaDuvudu> To cause unripen fruit to ripen - To ripen mango, spreading dry grass on floor, on that piling up mangos in line putting grass on top also, leave it for a week, it

ripens. It is also called othhehakuvudu (adehakuvudu). To ripen banana, putting banana bunches in gudana (vade) one above the other, and cover with avarike leaves. Within seven to eight days banana will ripen.

Eg: All the mangoes which were put to ripe have been ripened.

See: Adehaakuvudu

1000. ಹಣ್ಣುಕಾಯಿ ಮಾಡಿಸು: ರಥೋತ್ಸವ ಕಾಲದಲ್ಲಿ ತಂತಮ್ಮ ಮನೆಗಳ ಮುಂದೆ ರಥ ಬಂದಾಗ ಮನೆ ಮುಂದೆ ಗುಡಿಸಿ ರಂಗೋಲಿ ಹಾಕಿರುತ್ತಾರೆ. ದೇವರಿಗೆ ಹಣ್ಣುಕಾಯಿ ಒಪ್ಪಿಸುತ್ತಾರೆ. ಮಂಗಳಾರತಿಯನ್ನು ಮನೆಯವರೆಲ್ಲ ಸ್ವೀಕರಿಸುತ್ತಾರೆ. ತೆಂಗಿನಕಾಯಿ, ಹೂವು ಹಣ್ಣು ಮೊದಲಾದುವನ್ನು ತಟ್ಟೆಯಲ್ಲಿ ಇಟ್ಟು ದೇವರಿಗೆ ಅರ್ಪಿಸುವುದಕ್ಕೆ ಹಣ್ಣುಕಾಯಿ ಮಾಡಿಸುವುದು ಎನ್ನುತ್ತಾರೆ.

ಉದಾ: ದೇವರು ಬಂತು ಬೇಗ ಹಣ್ಣುಕಾಯಿ ತಗಂಬಾ.

<haNNukaayimaaDisu> (-) During the Car festival time in front of houses when Car comes, sweep the ground and decorate with Rangoli. They offer fruits to God. All householders take Mangalarati. Putting coconut, flower, fruits etc. and offer to God is called Hannukayimadisuvudu.

Eg: God arrived. Bring quickly Fruits, coconuts.

1001. ಹತ್ತರಿ: ನೋಡಿ: ಉಜ್ಜುಗೊರಡು

<hathhari> See: Ujjugoradu.

1002. ಹತಾಹಿತಿ: ಕೆಲಸಗಳು ಒಂದಾದಮೇಲೊಂದರಂತೆ ಬಿಡುವಿಲ್ಲದಹಾಗೆ ಬಂದು ಆಯಾಸವಾದಾಗ **ಹತಾಹಿತಿ** ಎನ್ನುತ್ತಾರೆ. ಗಡಿಬಿಡಿ ಆಗುವುದು ಹತಾಹಿತಿ ಆದಾಗ.

ಉದಾ: ಮನೆಗೆ ನೆಂಟರಿಷ್ಟರೆಲ್ಲ ಬಂದಿದ್ದರು, ಜೊತೆಗೆ ನಮಗೆ ತಿರುಪತಿಗೆ ಹೊರಡುವ ಗಲಾಟೆ, ಹೀಗಾಗಿ ಎಲ್ಲ ಹತಾಹಿತಿಯಾಗ್ಬಿಡ್ತು.

<hathaahithi> Frequent blows - When work done without break and gets tired they say hatahiti. Confusion occurs when it is hatahiti.

Eg: All relatives had come. Side by side our travel to Tirupati. Result all in confusion.

1003. ಹನಿಮಳೆ: ಹನಿಹನಿಯಾಗಿ ಮಳೆ ಬರುತ್ತಿದ್ದರೆ ಹನಿಗೂಡ್ತಾ ಇದೆ ಎನ್ನುತಾರೆ. ಒಂದೇ ಸಮನೆ ಬಿಡದೆ ಸುರಿದರೆ ಸೋನೆಮಳೆ ಎನ್ನುತ್ತಾರೆ.

ಉದಾ: ಹನಿಮಳೆ ಸುರುವಾಗಿದೆ, ಈ ವಾರದೊಳಗೆ ಕೆರೆಗೆ ನೀರು ಬರ್ಬಹುದು.

ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ಬಳ್ಳ (ಗಾದೆ)

ನೋಡಿ: ಸೋನೆಮಳೆ, ಜಿಟಿಜಿಟಿಮಳೆ, ಕುಂಭದ್ರೋಣಮಳೆ

<hanimaLe> Drizzle - If rain is dripping, they say hanigoodthaayide. It it is pouring continuously they say sonemale.

Eg: Hanimale has started. Within this week tank may get filled.

Hanigoodidare halla, thenegoodidare balla (proverb).

See: Sonemale, jatijatimale, Kumbhadronamale.

1004. ಹಬ್ಬದಡಿಗೆ: ಒಂದೊಂದು ಹಬ್ಬಕ್ಕು ವಿಶೇಷವಾದ ಅಡಿಗೆ ಪದಾರ್ಥಗಳನ್ನು ಮಾಡುವ ಸಂಪ್ರದಾಯವನ್ನು ಇಟ್ಟುಕೊಂಡಿರುತ್ತಾರೆ. ಯುಗಾದಿ ಹಬ್ಬಕ್ಕೆ ಹೂರಣದೊಬ್ಬಟ್ಟು, ಗೌರಿಹಬ್ಬಕ್ಕೆ ಕಾಯೊಬ್ಬಟ್ಟು, ಗಣಪತಿಗೆ ಕರಿಗಡುಬು, ನಾಗರಪಂಚಮಿಗೆ ಸಿಹಿ ಮತ್ತು ಖಾರದ ಕಡುಬು, ವಿಜಯದಶಮಿಗೆ ಸುರುಳಿಹೋಳಿಗೆ. ಯಾರ ಮನೆಯಲ್ಲಿ ನೋಡಿದರೂ ಒಂದೇ ತರಹದ ಅಡಿಗೆ.

<habbadaDige> (-) Special food for each festival - They have retained a custom for preparing a special item for each festival. For Ugadi, hooranadobbattu, for Gouri festival kayobbattu, for Ganapathi karigadubu, for Nagarapanchami, sweet and masala kadubu, for Vijayadasami, suruliholige, if seen in anybody's house, the same type of preparation.

1005. ಹರಳೆಣ್ಣೆ: ನೋಡಿ: ಅಚ್ಚೆಳ್ಳೆಣ್ಣೆ

<haraLeNNe> Castor oil: See: achhellenne.



1006. ಹರಿಕಥೆ: ಹರಿಕಥೆ, ಪುರಾಣಶ್ರವಣ, ರಾಮಾಯಣ ಪಾರಾಯಣ ಎಲ್ಲವೂ ವರ್ಷಕ್ಕೊಂದಾವರ್ತಿ ನಡೆಯುವುದು ಹಳ್ಳಿಯ ಸಂಪ್ರದಾಯಗಳು. ಹರಿಕಥೆ ಮಾಡುವ ಹರಿಕಥೆ ದಾಸರು (ಕೀರ್ತನಕಾರರು) ಹೊರಗಿನಿಂದ ಬರುತ್ತಿದ್ದರು. ಅವರು ಹಳ್ಳಿಯಲ್ಲಿರುವವರೆಗೂ ಒಬ್ಬೊಬ್ಬರ ಮನೆಯಲ್ಲಿ ಅವರನ್ನು ಕರೆದು ಆದರಿಸುತ್ತಿದ್ದರು. ಅವರು ಊರಿಗೆ ಹಿಂತಿರುಗುವಾಗ ಹಳ್ಳಿಯವರೆಲ್ಲ ಸೇರಿ ಸಂಭಾವನೆ, ಉಡುವ ಹೊದೆಯುವ ಪಂಚೆಗಳನ್ನು ಕೊಟ್ಟು ಸತ್ಕರಿಸುತ್ತಿದ್ದರು.

ಉದಾ: ಪ್ರತಿವರ್ಷ ಹರಿಸರ್ವೋತ್ತಮದಾಸರು ಶ್ರಾವಣಮಾಸದಲ್ಲಿ ಬಂದು ಹರಿಕಥೆ ಮಾಡುತ್ತಾರೆ.

ನೋಡಿ: ಕೀರ್ತನಕಾರರು, ಹರಿದಾಸರು

<harikathe> (-) Narration of sacred legend - Harikatha, Purana discourse, Ramayana parayana, all taking once a year is the tradition of village. Harikathadas (Keerthanakara) was coming from outside. When he stays in the village he was being invited to each house and taking care of him. While returning the villagers together offering honorarium, dhotis.

Eg: Every year Harisarvothhamadasa coming during Shravana month and does harikatha.


See: Keerthanakararu Haridasan

1007. ಹರಿತಾಳ: ನೋಡಿ: ತಾಳ

<harithaaLa> Yellow orpiment - See: Thaala

1008. ಹರಿದಾಸರು: ನೋಡಿ: ಹರಿಕಥೆ

<haridaasaru> See Harikathe



1009. ಹರಿಯೊಲೆ: ಇದು ಒಂದು ವಿಧವಾದ ಒಲೆ. ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ **ಹರಿಯೊಲೆ**ಯಲ್ಲಿ ಅಡಿಗೆ ಮಾಡುತ್ತಾರೆ. ಸುಮಾರು ಎಂಟು–ಹತ್ತು ಅಡಿ ಉದ್ದ, ಒಂದೂವರೆ ಅಡಿ ಅಗಲ, ಎರಡು ಅಡಿ

ಆಳದ ಗುಂಡಿಯನ್ನು ಮಾಡಿ, ದೊಡ್ಡ ದೊಡ್ಡ ಸೌದೆಯನ್ನು ಉರಿಸಿ ಅಡಿಗೆಯನ್ನು ಮಾಡುತ್ತಾರೆ. ಹರಿಯೋಲೆಯ ಮೇಲೆ ಎರಡು ದೊಡ್ಡ ತಪ್ಪಲೆಗಳಲ್ಲಿ ಅನ್ನ, ಎರಡು ಕೊಳದಪ್ಪಲೆಗಳಲ್ಲಿ ಸಾರು, ಹುಳಿ ಬೇಯಿಸಬಹುದು.

ಉದಾ: ಅಡಿಗೆಯವರು ಚಪ್ಪರದ ಆ ಕಡೆ ಮೂಲೇಲಿ ಹರಿಯೋಲೆ ಹಾಕಿದಾರೆ.

<hariyole> (-) Fire place dug like a channel in the ground - This is a type of oven. During marriage, thread ceremony, they cook in hariyole. Making a pit about eight to ten feet length, one-and-half foot width, two feet depth, burning with big firewood, cook. On hariyole, two big vessels rice, two vessels rasam, sambar can be done.

Eg: Cooks have put hariyole in that corner of pandal.




1010. ಹಲಗೆ ಆರತಿ: ಹಲಗೆ ಆರತಿ ಹಿತ್ತಾಳೆಯ ಲೋಹದಿಂದ ಮಾಡಿದುದು. ಅದರ ಮೇಲೆ ಎಣ್ಣೆ ಅಥವಾ ತುಪ್ಪದಿಂದ ನೆನೆಸಿದ ಹತ್ತಿಯ ಬತ್ತಿಯನ್ನು ಹೊತ್ತಿಸಿ ದೇವರಿಗೆ ಮಂಗಳಾರತಿ ಎತ್ತುತ್ತಾರೆ. ಬತ್ತಿ ಸಂಖ್ಯೆಗೆ ತಕ್ಕಂತೆ ಹಲಗಾರ್ತಿ (ಹಲಗೆಆರತಿ) ಎಂದು ಆರತಿ ಹಲಗೆಯನ್ನು ಕರೆಯುತ್ತಾರೆ. ಒಂದೇ ಬತ್ತಿಯಾದರೆ ಅದು ಏಕಾರ್ತಿ, ಐದು ಬತ್ತಿಯಾದರೆ ಅದು ಪಂಚಾರ್ತಿ. ಬತ್ತಿಯ ಬದಲು ಸಾಂಬ್ರಾಣಿ ಪುಡಿಯನ್ನು ಇಟ್ಟು ಹೊತ್ತಿಸಿದರೆ ಅದು ಧೂಪಾರ್ತಿ ಎನಿಸುತ್ತದೆ.

ಉದಾ: ಪಂಚಾರ್ತಿ ತೊಗೊಂಬಾ ಅಲ್ಲಿಡು, ಏಕಾರ್ತಿ ಇಲ್ಲಿಡಿ.

<halageaarathi> Halagearathi is made of brass. On that putting cotton wick dipped in oil or ghee, wave arati to God. According to number of wicks, they call halagarti (halage arathi) for arathihalage. If it is one wick only, that Is Ekarthi, if five wicks, that is Pancharti. Instead of cotton wick if sambrani (a kind of fragrant lump) is put and fire, that is Dhooparti.

Eg: Bring Pancharti, keep it there. Keep Ekarti here.



1011. ಹಲಸಿನಹಣ್ಣು: ಹಲಸಿನಹಣ್ಣಿನಲ್ಲೂ ತರಹಾವಾರಿ ಜಾತಿಗಳಿವೆ – ರಾಜಹಲಸು, ಚಂದ್ರಹಲಸು, ನಾಟಿಹಲಸು, ರುದ್ರಾಕ್ಷಿಹಲಸು. ರಾಜಹಲಸಿನ ತೊಳೆ ಬಹಳ ದಪ್ಪವಾಗಿದ್ದು ತೊಳೆಯನ್ನು ಬಿಡಿಸಿದಾಗ ಒಂದು ಚಮಚದಷ್ಟು ಸಿಹಿಯಾದ ರಸವಿರುತ್ತೆ. ಚಂದ್ರಹಲಸಿನ ತೊಳೆ ಕಾವಿಬಣ್ಣದ್ದಾಗಿರುತ್ತೆ. ನಾಟಿಹಲಸು ಹಣ್ಣಾದರೆ ತಿನ್ನುವುದಕ್ಕಾಗುವುದಿಲ್ಲ. ಅದು ಕಾಯಾಗಿರುವಾಗಲೆ ಬಿಡಿಸಿ ತೊಳೆಯನ್ನು ಚೂರುಚೂರಾಗಿ ಹೆಚ್ಚಿ ಎಣ್ಣೆಯಲ್ಲಿ ಕರಿದು ಉಪ್ಪು, ಖಾರ ಹಾಕಿ ಹಪ್ಪಳದಂತೆ ತಿನ್ನುತ್ತಾರೆ. ರುದ್ರಾಕ್ಷಿಹಲಸಿನ ಹಣ್ಣನ್ನು ಹೆಚ್ಚಿದರೆ ಅದರಲ್ಲಿ ಮೂರು ತೊಳೆ ಮಾತ್ರ ಇರುತ್ತೆ. ಹಲಸಿನಹಣ್ಣಿನ ಮೇಲುಭಾಗ ರುದ್ರಾಕ್ಷಿಯಂತೆ ಗಂಟುಗಂಟಾಗಿರುತ್ತೆ.

ಉದಾ: ನೀನು ಹಳ್ಳಿಯಿಂದ ಬರುವಾಗ ಎರಡು ರಾಜಹಲಸಿನಹಣ್ಣೂ ತರಬೇಕು.

ನೋಡಿ: ಹಲಸಿನ ಹಪ್ಪಳ

<halasinahaNNu> Jack fruit - Among jack fruit also there are different types. Rajahalasu, Chandrahalasu, native halasu, Rudrakshihalasu. The piece of rajahalasu is thick, when split one spoon of juice will be there. Piece of chandrahalasu will be of pink color. Native halasu if ripen cannot eat. When it is raw, cut into small pieces and fry in oil, mix salt, masala and eat like papad. When Rudrakshihalasu is cut there will be three pieces only. Upper skin will be knots like Rudrakshi (a kind of tree and its berry used for rosary).

Eg: While coming from village, you must also bring two Rajahalasu.

See: Halasinahappala (Papad of jack fruit)



1012. ಹಲ್ಲಿಶಕುನ: ಹಲ್ಲಿ ಅಕಸ್ಮಾತ್ ತಲೆಯ ಮೇಲೆ ಅಥವಾ ಭುಜದ ಮೇಲೆ ಬಿದ್ದರೆ ಅಪಶಕುನ ಎಂದು ಹೇಳುತ್ತಾರೆ. ಪಂಚಾಂಗದಲ್ಲಿ ಹಲ್ಲಿಶಕುನದ ವಿವರಗಳನ್ನೆಲ್ಲ ಕೊಟ್ಟಿದ್ದಾರೆ.

ಉದಾ: ಈ ವರ್ಷದಲ್ಲಿ ಕಂಚಿಗೆ ಹೋದರೆ ಅಲ್ಲಿರುವ ಹಲ್ಲಿಯ ಕಂಚಿ ಪ್ರತಿಮೆಯನ್ನು ಮುಟ್ಟಿಬಾ, ಒಳ್ಳೆಯದಾಗುತ್ತೆ.

<hallishakuna> (-) Omen of house lizard - If halli (house lizard) by chance fall on head or shoulder they say bad omen In almanac details of hallishakuna are given.

Eg: This year, if you to go Kanchi touch the idol of bronze lizard and come back. Good will happen.

1013. ಹಸಿನೂಲು: ಹತ್ತಿಯಿಂದ ಮಾಡಿದ ದಾರಕ್ಕೆ **ಹಸಿನೂಲು** ಎನ್ನುತ್ತಾರೆ. ಮದುವೆ ಸಮಾರಂಭದಲ್ಲಿ ವಧೂ–ವರರ ಕೈಗೆ ಕಂಕಣವಾಗಿ ಕಟ್ಟಲು ಹಸಿನೂಲಿಗೆ ಅರಿಶಿನ ಹಚ್ಚಿ ಬಳಸುತ್ತಾರೆ. ಮಲ್ಲಿಗೆ, ಜಾಜಿ ಮುಂತಾದ ಹೂವುಗಳನ್ನು ಮಾಲೆಯಾಗಿ ಕಟ್ಟಲು ಹಸಿನೂಲು ಬಹಳ ಶ್ರೇಷ್ಠ.

ಉದಾ: ಹಸಿನೂಲಿನಉಂಡೆ ತರೂದು ಮರೀಬ್ಯಾಡಾ.

ನೋಡಿ: ಕಂಕಣ

<hasinoolu> (-) Thread made of cotton is called hasinulu. During marriage, to tie to the hands of bride and bridegroom, they use hasinulu smearing turmeric powder. To make garlands of jasmine flowers, jaji etc. flowers hasinulu is excellent.

See: Kankana

1014. ಹಸು: ನೋಡಿ: ಬೆರಣಿ

<hasu> Cow - See: Berani

1015. ಹಸ್ತೋದಕ: ಹಬ್ಬ ಹರಿದಿನಗಳಲ್ಲಿ ಊಟಕ್ಕೆ ಕರೆದ ಬ್ರಾಹ್ಮಣರಿಗೆ ಮೊದಲು ಅಡಿಗೆ ಪದಾರ್ಥಗಳನ್ನು ಬಡಿಸಿ ಅವರು ಪರಿಷೇಚನ ಮಾಡಿದ ಮೇಲೆ **ಹಸ್ತೋದಕ** ಹಾಕಿದ ನಂತರ ಮನೆಯವರು ಊಟ ಮಾಡುತ್ತಾರೆ.

ಉದಾ: ಹಿರಿಯರಿಗೆ ಹಸ್ತೋದಕ ಆಯಿತು ಎಲ್ಲರೂ ಊಟಕ್ಕೆ ಶುರು ಮಾಡಬಹುದು.

ಉದಾ: ನಾಡಿದ್ದು ನಮ್ಮ ಮನೆಯಲ್ಲಿ ಶೃಂಗೇರಿ ಸ್ವಾಮಿಗಳಿಗೆ ಪಾದಪೂಜೆ ಇಟ್ಟಿದೀವಿ ತಪ್ಪದೇ ಬರಬೇಕು.

ಊಟದ ಸಂತರ್ಪಣೆಗಳಲ್ಲಿ ಮತ್ತು ಶ್ರಾದ್ಧಕರ್ಮ ಮಾಡುವ ದಿನ ಬಾಳೆ

ಎಲೆಯ ಮೇಲೆ ಎಲ್ಲ ಅಡುಗೆ ಪದಾರ್ಥಗಳನ್ನು ಬಡಿಸಿದ ನಂತರ ಊಟಕ್ಕೆ ಕುಳಿತವರು ನೀರಿನಿಂದ ಎಲೆಯ ಸುತ್ತಲೂ ಪರಿಷೇಚನ ಮಾಡಿ ಬಲಗೈ ಒಡ್ಡುತ್ತಾರೆ. ಊಟವನ್ನು ನೀಡುವವನು ಉದ್ಧರಣೆಯಿಂದ ನೀರನ್ನು ಬಲಗೈ ಮೇಲೆ ಹಾಕುತ್ತಾನೆ. ಅದನ್ನು **ಹಸ್ತೋದಕ** ಎಂದು ಹೇಳುತ್ತಾರೆ. ಹಸ್ತೋದಕ ಹಾಕಿದ ಮೇಲೆ ಬಲಗೈ ಮೇಲಿರುವ ನೀರನ್ನು ಕುಡಿದು ಊಟಕ್ಕೆ ಪ್ರಾರಂಭಿಸಬೇಕು.

ದೇವಸ್ಥಾನದಲ್ಲಿ ನಡೆಯುವ ವಿಶೇಷ ಸಂದರ್ಭಗಳಲ್ಲಿ ಸಂತರ್ಪಣೆ ಮಾಡುವಾಗ ಊಟಕ್ಕೆ ಮೊದಲು ಎಲ್ಲರಿಗೂ ಕೈಗೆ ಹಸ್ತೋದಕವನ್ನು ಹಾಕಿ, ಶ್ರೀಮದ್ರಮಾರಮಣ ಗೋವಿಂದ ಅಥವಾ ಹರಹರ ಮಹಾದೇವ ಎಂದು ಹೇಳಿದ ನಂತರ ಎಲ್ಲರೂ ಊಟ ಮಾಡುವುದಕ್ಕೆ ಶುರು ಮಾಡುತ್ತಾರೆ.

ಉದಾ: ಎಲ್ಲಾ ಬಡಿಸಿದ ಮೇಲೆ ಯಜಮಾನರು ಎಲ್ಲರಿಗೂ ಹಸ್ತೋದಕ ನೀಡಿದರು.

<hasthoodaka> (-) During mass feeding and death ceremony after serving all items of food, the persons who are sitting, will sprinkle water around the leaf, will put their right hand stretched. Persons who offer food put water from udhharane to their hands. It is called hasthodaka. After putting hasthodaka, they drink that water and start eating. In temple, during mass feeding on special occasions, before eating after putting hasthodaka they recite Sreemad ramaramana govinda, haraharamahadeva, everyone starts eating.

During festival days for invited brahmins serving food items, after they do parishechana (ritualistice sprinkling of water round the eating plate or leaf), after putting hastodaka (water poured into their right hand before meals) the householders take food.

Eg: Putting hastodaka for elderly persons is over. All can start eating.

Eg: Day after tomorrow in our house we have arranged Padapooja for Sringeri Swamiji. Must come without fail.

Eg: After serving everything, the elderly man offered hasthodaka to all.

1016. ಹಳೇತಲೆ: ಊರಿನಲ್ಲಿರುವ ಹಿರಿಯ ಮನುಷ್ಯರಿಗೆ **ಹಳೆತಲೆ** ಎನ್ನುತ್ತಾರೆ. ಬಹಳ ಹಿಂದಿನ ಸಂಗತಿಗಳನ್ನು ತಿಳಿಯಬೇಕಾದರೆ ಅವರಿಂದ ತಿಳಿಯಬಹುದು, ಅದೂ ಅವರ ನೆನಪಿನಲ್ಲಿದ್ದರೆ.

ಉದಾ: ಹಳೇತಲೆ ಮುರುಗೇಂದ್ರಪ್ಪ ಒಬ್ಬ ಅವ್ನೆ, ಬೇಕಾದರೆ ಅವನ್ನ ವಿಚಾರಿಸಿನೋಡಿ.

<halethale> The eldest person in the village is called halethale. To know anything of olden days, we can get from them. That too if they remember.

Eg: Eldest person of previous generation Murugendrappa is there. If you want you can enquire him.


1017. ಹಳೇಹುಲಿ: ಕೆಲಸ ಕಾರ್ಯಗಳಲ್ಲಿ ಬಹಳ ಅನುಭವವುಳ್ಳ ಮನುಷ್ಯನಿಗೆ **ಹಳೇಹುಲಿ** ಅನ್ನುವುದು ರೂಢಿಯಾಗಿದೆ.

ಉದಾ: ತಹಸೀಲ್‌ದಾರ್ ಶೇಖರಪ್ಪ ಬಹಳ ಹಳೇಹುಲಿ, ಯಾವ ಕೆಲಸನಾದರೂ ನಿಭಾಯಿಸ್ತಾನೆ.

<halehuli> Person who has more experience in work, it is common to say Halehuli.

Eg: Thahasildar Shekharappa is a halehuli. Can manage any work.

1018. ಹಾರೆ: ಒರಳುಕಲ್ಲಿನಲ್ಲಿ ಹುರಿದ ಬೇಳೆ ಮುಂತಾದುವನ್ನು ಹಾರೆಯಿಂದಲು ಕುಟ್ಟಬಹುದು. **ಹಾರೆ** ಕಬ್ಬಿಣದ್ದು. ಸುಮಾರು ಒಂದೂವರೆ ಅಡಿ ಎತ್ತರ, ಮೂರು ಅಂಗುಲ ಸುತ್ತಳತೆಯುಳ್ಳದ್ದಾಗಿರುತ್ತೆ. ಅವಲಕ್ಕಿ ಮಾಡುವಾಗ ಇಬ್ಬರು ಹೆಂಗಸರು ಒರಳಿನ ಎದುರು ಬದರು ಕುಳಿತುಕೊಂಡು ಎರಡು ಹಾರೆಗಳಿಂದ ಬೇಯಿಸಿದ ಭತ್ತವನ್ನು ಕುಟ್ಟಿ ಅವಲಕ್ಕಿ ಮಾಡುತ್ತಾರೆ. ಗಢಾರಿ, ಗಡಪಾರಿ ಎಂದೂ ಹಾರೆಗೆ ಹೇಳುತ್ತಾರೆ.



ಉದಾ: ರಂಗಮ್ಮನವರೇ ಬನ್ನಿ ಭತ್ತ ಕುಟ್ಟೋಣ ಹಾರೆತನ್ನಿ.

ನೋಡಿ: ಒನಕೆ, ಒರಳು, ಕುದುರು

<haare> (-) An iron equipment in kitchen - In grinding stone roasted dal etc. can be crushed with hare. Hare is made of iron. About one-and-half foot height, three inches circumference. While making poha two women sitting opposite

to the grinding stone with two hares pound the baked paddy and make poha. For hare they also say gadhari, gadapari (iron crowbar).

Eg: Rangamma come, let us pound paddy. Bring hare.

1019. ಹಾಲಕ್ಕಿ: ಹಕ್ಕಿಶಕುನಗಳಲ್ಲಿ ಹಾಲಕ್ಕಿ (ಆಲಕ್ಕಿ) ಶಕುನವೂ ಒಂದಾಗಿದೆ. ಬುಡುಬುಡಿಕೆಯವರು ಶಕುನ ಹೇಳುವಾಗ ಹಾಲಕ್ಕಿ ನುಡಿಯುತ್ತೈತೆ ಎನ್ನುತ್ತಾರೆ. ಬುಡುಬುಡಿಕೆಯವರನ್ನು ಹಾಲಕ್ಕಿಯವರು ಎಂತಲೂ ಕರೆಯುತ್ತಾರೆ. ಹಾಲಕ್ಕಿಗಳು ಶಕುನಗಳನ್ನು ಸೂಚಿಸುತ್ತವೆ ಎಂದು ಹೇಳುತ್ತಾರೆ.

ಉದಾ: ಮರವಂಜಿ ಕೊರವಿನ್ನಾಗೇ ಆಲಕ್ಕಿ ನುಡಿಯುತ್ತೈತೆ, ಆಲಕ್ಕಿ ನುಡಿಯೂ ಸಟೆಯಲ್ಲಾ, ನಿಮ್ಮ ಮನಸಂತೆ ಕೆಲಸಾ ಆಗ್ತೈತೆ.

<haalakki> Omen bird - Among indication of auspicious and inauspicious omen, halakki shakuna is also one. Persons playing rattle drum when telling omens, recite 'halakki nudiyuthhaithe'. For rattle drummers they also call halakkiyavaru. They say halakki indicates omens.

Eg: Maravanji koravinnage halakki nudithhaithe, halakki nudiyoo sateyalla. Nimma manasanthe kelasa agthaithe. (In Maravanji valley halakki is telling. The verdict of halakki is not false. As per your wish, work will be done).

1020. ಹಾಲ್ಬಾಯಿ: ಹಾಲ್ಬಾಯಿ ಒಂದು ವಿಶೇಷವಾದ ಸಿಹಿ ತಿಂಡಿ. ರಾಗಿ ಅಥವಾ ಗೋಧಿಯನ್ನು ನೀರಿನಲ್ಲಿ ನೆನೆಸಿ, ನಂತರ ಒರಳಿನಲ್ಲಿ ರುಬ್ಬಿ ಬರುವ ಹಾಲನ್ನು ತೆಗೆದು ದಬರಿಯಲ್ಲಿ ಹಾಕಿ ಒಲೆಯ ಮೇಲಿಟ್ಟು ಬೆಲ್ಲವನ್ನು ಬೆರೆಸಿ ಕೂಡಿಸುತ್ತ ಇದ್ದರೆ ಸ್ವಲ್ಪ ಸಮಯದ ನಂತರ ನೀರಿನ ಅಂಶವೆಲ್ಲ ಹೋಗಿ ಮುದ್ದೆಯ ಹಾಗಾಗುತ್ತೆ. ಅದನ್ನು ತಟ್ಟೆಯಲ್ಲಿ ಹಾಕುತ್ತಾರೆ. ನಂತರ ಬಿಲ್ಲೆಯಂತೆ ಕತ್ತರಿಸಬಹುದು. ಇದೇ ಹಾಲ್ಬಾಯಿ. ಮಾಡಿ ತಿಂದು ನೋಡಿ. ಗೋಧಿಯ ಹಾಲ್ಬಾಯಿಗೆ ತೆಂಗಿನಕಾಯಿನ ಹಾಲನ್ನು ಬೆರೆಸಬಹುದು. ಒಂದು ಹಿಡಿ ಅಕ್ಕಿಯನ್ನು ನೀರಿನಲ್ಲಿ ಎರಡು ಗಂಟೆಯ ಕಾಲ ನೆನೆಸಿ ಸಣ್ಣಗೆ ರುಬ್ಬಿ ಬೆರೆಸಿದರೆ ಚೆನ್ನಾಗಿ ಹೊಂದಿಕೊಳ್ಳುತ್ತೆ.

ಉದಾ: ತಿಮ್ಮಜ್ಜಿ ಮಾಡೋ ಹಾಲುಬಾಯಿ ಬಲು ರುಚಿ.

<haalbaayi> (-) Halbayi is a special sweet. Soaking ragi or wheat in water, grinding in grinding stone, put the outcoming milk in a vessel on stove, mix jaggery and go on stirring. After

some time, watery portion will evaporate and become a lump, they spread it on a plate. Then can be cut into small pieces. This is halbayi. Do it and eat. For wheat halbayi, can mix coconut milk. If a handful of rice soaked in water for two hours and grind to become paste and add, it mixes well.

Eg: Halbayi made by Thimmajji is very tasty.

1021. ಹಾಲ್ವಾಣ: ಹಾಲ್ವಾಣ ಒಂದು ಜಾತಿಯ ಮರ. ತೋಟದ ಸುತ್ತ ಬೇಲಿ ಹಾಕಲು ಹಾಲ್ವಾಣದ ಮರವನ್ನು ಬೆಳೆಸುತ್ತಾರೆ. ಹಾಲ್ವಾಣದ ಬೀಜವನ್ನು ನೆಲದಲ್ಲಿ ಹೂಳಿದರೆ ಅದು ಮೊಳಕೆಯಾಗಿ ನಂತರ ಮರವಾಗುತ್ತೆ. ಅಥವಾ ಆ ಮರದ ಮೂರು–ನಾಲ್ಕು ಅಡಿ ಉದ್ದದ ಕೊಂಬೆಯನ್ನು ನೆಲದಲ್ಲಿ ಹೂಳಿದರೂ ಅದು ಚಿಗಿತು ಮರವಾಗುತ್ತೆ. ಹಾಲ್ವಾಣದ ಬೀಜವನ್ನು ಹುಡುಗರು ಚನ್ನಾಮಣೆ ಆಟ ಆಡಲು ಉಪಯೋಗಿಸುತ್ತಾರೆ.

ಉದಾ: ಶೀನ ಬಾರೋ ಹಾಲ್ವಾಣದಲ್ಲಿ ಚೆನ್ನಾಮಣೆ ಆಡೋಣ.

<haalvaaNa> Halvana is a kind of tree. They grow halvana tree around garden to put fence. If halvana seed is put in ground, it sprouts and grow as tree. Or a branch of three to four feet length is put to the ground, it also shoots and become tree. Boys use halvana seeds to play Channamane.

Eg: Sheena, come let us play Channamane with halvana.

1022. ಹಾಲುಕ್ಕಿಸುವುದು: ಹೊಸದಾಗಿ ಕಟ್ಟಿದ ಮನೆಗೆ ಪ್ರವೇಶಮಾಡಿ ವಾಸಿಸುವುದಕ್ಕೆ ಮುಂಚೆ, ಒಂದು ಸಣ್ಣ ಪಾತ್ರೆಯಲ್ಲಿ ಹಾಲನ್ನು ಹಾಕಿ ಒಲೆಯಮೇಲಿಟ್ಟು ಅದು ಉಕ್ಕಿ ಹೊರಗೆ ಚೆಲ್ಲುವಹಾಗೆ ಕುದಿಸುವುದನ್ನು ಹಾಲುಕ್ಕಿಸುವುದು ಎಂದು ಹೇಳುತ್ತಾರೆ.

ಉದಾ: ನಿನ್ನೆ ರಂಗಾಚಾರ್ ಮನೇಲಿ ಹಾಲುಕ್ಕಿಸಿದರು.

ನೋಡಿ: ಗೃಹಪ್ರವೇಶ

<haalukkisuvudu> (-) Before entering and living in the newly constructed house, filling milk in a small vessel, putting on stove and boil till it spills out, is called halukkisuvudu.

Eg: Yesterday in Rangachar's house did milk boiling.

See: Grihapravesha

1023. ಹಾಸಿಗೆಹಿಡಿ: ಬಹುಕಾಲದ ಕಾಯಿಲೆಯಿಂದ ನರಳಿ ನಿಶ್ಶಕ್ತನಾಗಿ ಹಾಸಿಗೆಯಿಂದ ಮೇಲಕ್ಕೇಳಲಾಗದಿದ್ದರೆ **ಹಾಸಿಗೆಹಿಡಿ**ದಿದ್ದಾನೆ ಎನ್ನುತ್ತಾರೆ.

ಉದಾ: ಶೀನಪ್ಪನ ತಂದೆ ಎರಡುತಿಂಗಳಿಂದ ಹಾಸಿಗೆಹಿಡಿದ್ದಿಟ್ಟಿದಾನಂತೆ.

<haasigehiDi> Bedridden - Suffering from a long-time disease with weakness cannot get up from bed, they say hasigehidididdane.

Eg: Sheenappa's father is bedridden from two months.

1024. ಹಾಳುಮನೆ: ನೋಡಿ: ಪಾಳು

<haaLumane> See: Paalu

1025. ಹಿಚಕವರೆ: ಹೊಲದಲ್ಲಿ ಬೆಳೆದ ಅವರೆಕಾಯಿನ ಕಾಳನ್ನು ನೀರಿನಲ್ಲಿ ಒಂದೆರಡು ಗಂಟೆಗಳ ಕಾಲ ನೆನೆಸಿ ಒಂದೊಂದು ಕಾಳನ್ನು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಇಟ್ಟು ಅಮುಕಿದರೆ ಸಿಪ್ಪೆಯಿಂದ ಕಾಳು ಹೊರಕ್ಕೆ ಬರುತ್ತೆ. ಅದನ್ನು ಹಿಚಕವರೆ (ಹಿತಕವರೆ) ಎಂದು ಹೇಳುತ್ತಾರೆ. ಹಿಚಕವರೆಯಿಂದ ಮಾಡಿದ ಸಾರು, ಅಕ್ಕಿರೊಟ್ಟಿ, ಉಪ್ಪಿಟ್ಟು ತಿನ್ನಲು ಬಹಳ ರುಚಿಯಾಗಿರುತ್ತೆ.

ಉದಾ: ನಮ್ಮ ಸ್ನೇಹಿತರು ಬರ್ತಾರೆ ಹಿತಕವರೆ ಮಾಡು.

<hichakavare> Skin removed seed - Soaking the seed of Avarekayi (a kind of vegetable) grown in field, in water for one or two hours, putting each seed in between thumb and forefinger and press seed will come out of skin. They say it is hichakavare (hithakavare). Rasam made of hichakavare, rice roti, upma is tasty to eat.

Eg: Our friends are coming. Make hithakavare.

1026. ಹಿಂಡಿ: ನೆಲಗಡಲೇಕಾಯಿ ಅಥವಾ ಒಣ ಕೊಬರಿಯನ್ನು ಎಣ್ಣೆ ಮಾಡುವುದಕ್ಕಾಗಿ ಗಾಣಕ್ಕೆ ಹಾಕುತ್ತಾರೆ. ಎಣ್ಣೆ ತೆಗೆದ ನಂತರ ಉಳಿಯುವ ಭಾಗಕ್ಕೆ **ಹಿಂಡಿ** ಎಂದು ಹೆಸರು. ಹಿಂಡಿಯನ್ನು ದನಕರುಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ.

ಉದಾ: ಸಂಜೆ ಬರುವಾಗ ಒಂದು ಚೀಲ ಕಡ್ಲೇಹಿಂಡಿ ತಂದಿಡು.

<hinDi> Oil cake - Groundnut or dry coconut to make oil put into oil grinder. After taking out oil the remaining portion is

called hindi. They use oil cake as food to cattle.

Eg: While coming in the evening, bring a bag of groundnut oil cake and keep it.



1027. ಹಿಡಿ: ಕಬ್ಬಿಣದ ಮಚ್ಚು, ಕುಡುಗೋಲು, ಚಾಕು ಮುಂತಾದುವನ್ನು ಹಿಡಿದುಕೊಳ್ಳುವುದಕ್ಕೆ ಸುಮಾರು ಮೂರು ಅಂಗುಲ ಉದ್ದವಿರುವ ಮರದ ತುಂಡನ್ನು ಸೆಕ್ಕಿಸುತ್ತಾರೆ. ಅದಕ್ಕೆ **ಹಿಡಿ** ಎಂದು ಹೆಸರು. ನೊಜೆಹುಲ್ಲಿನ ಪರಕೆಯನ್ನೂ ನೊಜೆಹಿಡಿ ಎನ್ನುತ್ತಾರೆ.

ಉದಾ: ಕುಡುಗೋಲು ಮಚ್ಚು ಎರಡಕ್ಕೂ ಹಿಡಿ ಹಾಕಿಸ್ಕಂಡ್ಬಾ.

ನೋಡಿ: ಮುಚ್ಚಳ

<hiDi> Handle - To hold iron sickle, knife etc. about three inches length wooden piece they attach. It is called hidi (handle). Broom of nojehullu (a kind of grass) is also called nojehidi.

Eg: For both sickles get handles.

See: Muchhala

1028. ಹಿಡುಗಲು: ನೋಡಿ: ನೊಜೆಪರಕೆ

<hiDugalu> See: Nojeparake

1029. ಹಿತ್ತಿಲು: ಮನೆಯ ಹಿಂಭಾಗದಲ್ಲಿ ಸಣ್ಣ ತೋಟದ ಹಾಗೆ ತರಕಾರಿ, ಹೂವಿನ ಗಿಡಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುವಂತೆ ಮಾಡಿಕೊಂಡಿರುವ ಜಾಗಕ್ಕೆ **ಹಿತ್ತಿಲು** ಎಂದು ಹೆಸರು. ಅಡಕೆ ಮತ್ತು ತೆಂಗಿನ ಸೊಸಿಗಳನ್ನು ಮಾಡಲು ಹಿತ್ತಿಲಲ್ಲಿ ಮೊಟ್ಟೆ ತೆಂಗಿನಕಾಯಿ ಮತ್ತು ಅಡಕೆಕಾಯನ್ನು ನೆಲದಲ್ಲಿ ಹೂಳಿ ಅವು ಮೊಳಕೆಯೊಡೆದು ಒಂದು ಅಡಿಯಷ್ಟು ಎತ್ತರ ಬೆಳೆದ ಮೇಲೆ ತೋಟಕ್ಕೆ ಬದಲಾಯಿಸುತ್ತಾರೆ.

ಉದಾ: ಹಿತ್ತಿಲಲ್ಲಿ ಮಲ್ಲಿಗೆ ಹೂವಿದೆ ಕುಯ್ಕಂಬಾ.

ನೋಡಿ: ಕೈದೋಟ

<hithhilu> Backyard of a house - The place behind the house like a small garden suitable to grow vegetable, flowers is

called hithhilu (Kitchen garden). To make saplings of Areca and mango putting coconut and Areca with skin in the ground, after it sprouts and grow about one-foot height, they shift to garden.

Eg: In kitchen garden, jasmine flowers are there. Pluck and bring.

1030. ಹಿತ್ತಿಲಗಿಡ: ನೋಡಿ: ಕೈದೋಟ

<hithhalagiDa> See: Kaidota (Kitchen garden)

1031. ಹಿತ್ತಲಮದ್ದು: ನೋಡಿ: ಕೈಔಷಧಿ

<hithhalamaddu> (-) See: Kaioushadhi (Native medicine)

1032. ಹಿಲಾಲು: ನೋಡಿ: ಪಂಜು

<hilaalu> See: Panju (Torch)

1033. ಹಿಸ್ಸೆ: ಅಣ್ಣ ತಮ್ಮಂದಿರು ಒಬ್ಬರಿಗೊಬ್ಬರು ಮನೆ, ಗದ್ದೆ, ತೋಟ ಮುಂತಾದ ಆಸ್ತಿಗಳನ್ನು ಹಂಚಿಕೊಳ್ಳುವುದಕ್ಕೆ **ಹಿಸ್ಸೆ** ಎನ್ನುತ್ತಾರೆ. ಹಿಸ್ಸೆ ಎಂದರೆ ತಮಗೆ ಬರಬೇಕಾದ ಭಾಗ, ಹಂಚಿಕೆ ಆದ ಭಾಗ.

ಉದಾ: ಎರಡು ಎಕರೆ ತೋಟ ರಾಮಪ್ಪನ ಹಿಸ್ಸೆಗೆ ಬಂತು.

<hisse> Brothers distributing house, field, garden etc. properties among themselves, they say hisse (Share). Hisse means the share they get divided portion.

Eg: Two acres of garden came to Ramappa's share.

1034. ಹೀಚು: ಮಾವು, ಸೀಬೆ ಮತ್ತು ಪೇರಲ ತುಂಬಾ ಎಳೆಯದಾಗಿರುವಾಗ ಅದನ್ನು ಹೀಚು ಎಂದು ಹೇಳುವುದು ರೂಢಿ. ಪಿಂದೆ ಎಂದೂ ಹೇಳುತ್ತಾರೆ.

ಉದಾ: ಈಗೆಲ್ಬಂತು ಹಣ್ಣು, ಶ್ರಾವಣ ಮಾಸಕ್ಕೆ ಭರ್ಜರಿ ಹಣ್ಣು ಬರುತ್ತೆ. ಈಗಿನ್ನೂ ಹೀಚುಕಾಯಿ.

ನೋಡಿ: ಪೀಚು

ಪದರೂಪ: ಹೀಚು (ಪೀಚು) (ಪಿಂದೆ)

<heechu> Unripe fruit - Mango, Guava and Perala (a

kind of fruit) when it is tender it is common to say heechu.

Eg. Where can you get fruit now? In Shravana month get plenty of fruits. Now it is still unripe.

See: Peechu

Different version: Heechu (Peechu, Pinde)

1035. ಹೀನಸುಳಿ: ಕೆಟ್ಟ ನಡತೆ, ಯಾವಾಗಲೂ ನಿಕೃಷ್ಟವಾದ ಮಾತುಗಳನ್ನು ಆಡುವ ಸ್ವಭಾವವನ್ನು ಹೀನಸುಳಿ ಎಂದು ಹೇಳುತ್ತಾರೆ.

ಉದಾ: ಹೀನಸುಳಿ ಬೋಳಿಸಿದರೆ ಹೋಗುವುದಿಲ್ಲ ಅನ್ನುವುದು ಒಂದು ಗಾದೆಯಮಾತು.

<heenasuLi> Wicked nature - Nature of bad character, speaking ill of others, they say heenasuli.

Eg: Heenasuli bolisidare hoguvudilla (a proverb). The spiral on body, if you cut, will not go.

1036. ಹೀರುಕಾಗದ: ನೋಡಿ: ಒತ್ತುಕಾಗದ (ಒತ್ತುಕರಡು)

<heerukaagada> See: Othhukaagada (Blotting paper)

1037. ಹುಚ್ಚುಹೊಳೆ: ಮಳೆ ಜಾಸ್ತಿಯಾಗಿ ಬಂದು ಕೆರೆತುಂಬಿ ನೀರು ದಡವನ್ನು ಉಚಾಯಿಸಿ ಮೇಲೆ ಹರಿದಾಗ **ಹುಚ್ಚುಹೊಳೆ** ಹರೀತಾ ಇದೆ ಎನ್ನುತ್ತಾರೆ.

ಉದಾ: ಬುಕ್ಕಾಂಬುಧಿ ಕೆರೆಯಲ್ಲಿ ನಾಲ್ಕು ದಿವಸದಿಂದ ಹುಚ್ಚುಹೊಳೆ ಹರಿಯುತ್ತಾ ಇದೆ.

ನೋಡಿ: ಜಡಿಮಳೆ, ಕುಂಭದ್ರೋಣಮಳೆ

<huchhuhoLe> Heavy rain - Raining heavily, tank full, if water flows beyond shore, they call huchhuhole is flowing (overflowing its bank).

Eg: In Bukkambudhi tank, from four days huchhuhole is overflowing)

See: Jadimale, kumbhadronamale.

1038. ಹುಟ್ಟುಗುಣ: ಮನೆತನದಲ್ಲಿ ವಂಶ ಪಾರಂಪರ್ಯವಾಗಿ ಹುಟ್ಟಿ ಬಂದಿರುವ ಒಳ್ಳೆಯಗುಣ ಅಥವಾ ಕೆಟ್ಟ ಗುಣವನ್ನು ರೂಢಿಸಿಕೊಂಡು ಬಂದಿರುವವರನ್ನು

ಕುರಿತು "ಇದು ಅವರ ವಂಶದ **ಹುಟ್ಟುಗುಣ**" ಎಂದು ಹೇಳುತ್ತಾರೆ.

ಉದಾ: ಅವಳ ಹುಟ್ಟೇ ಹಾಗಿದೆ, ವಂಶದ ಹುಟ್ಟುಗುಣ ಸುಟ್ಟರೂ ಹೋಗುಲ್ವಂತೆ.

<huTTuguNa> Born character - In a family traditionally followed good character or bad character, they say, 'this is their family congenital nature.

Eg: Her birth itself is like that. Family's nature, even if you burn will not go.

1039. ಹುದುಗು: ಇಡ್ಲಿ, ದೋಸೆಯನ್ನು ಮಾಡುವುದಕ್ಕೆ ಅಕ್ಕಿಯ ಜೊತೆಗೆ ಮೆಂತ್ಯ ಅಥವಾ ಉದ್ದಿನ ಬೇಳೆಯನ್ನು ನೀರಿನಲ್ಲಿ ನೆನೆಸಿ ಸ್ವಲ್ಪ ಕಾಲದ ನಂತರ ರುಬ್ಬಿಟ್ಟರೆ ಮಾರನೆಯ ದಿನ ಬುಸುಬುಸು ನೊರೆ ಬರುತ್ತೆ. ಅದಕ್ಕೆ **ಹುದುಗು** ಎನ್ನುತ್ತಾರೆ. ಹುದುಗು ಚೆನ್ನಾಗಿ ಬಂದರೆ ದೋಸೆ, ಇಡ್ಲಿ ಹದವಾಗಿರುತ್ತೆ.

ಉದಾ: ತುಂಬಾ ಥಂಡಿ ಹವ, ಅದಕ್ಕೇ ಹುದುಗು ಚೆನ್ನಾಗಿ ಬಂದಿಲ್ಲ.

<hudugu> (-) For making idli, dosa, if methi or urd dal soaked in water for some time and grind and mix with rice, next day it ferments, and foam comes up. This is called hudugu. If it ferments nicely, dosa, idli will become perfectly.

Eg: Very cold weather, that is why hudugu has come well.

1040. ಹುರಿಮಂಜು: ಇದು ಕೆಂಪು ಬಣ್ಣದ ಒಂದು ವಿಧವಾದ ಮಣ್ಣು. **ಹುರಿಮಂಜನ್ನು** ಬಾಗಿಲಿನ ಹೊಸಲಿಗೆ ಹಚ್ಚುತ್ತಾರೆ. ಹುರಿಮಂಜನ್ನು ಹಚ್ಚಿ ಅದು ಒಣಗಿದ ನಂತರ, ರಂಗೋಲಿ ಅಥವಾ ಅಕ್ಕಿಯನ್ನು ನುಣ್ಣಗೆ ರುಬ್ಬಿದ ನೀರಿನಿಂದ ಎಳೆಯನ್ನಿಟ್ಟರೆ ಅಂದವಾಗಿ ಕಾಣುತ್ತೆ.

ಉದಾ: ಇನ್ನೇನು ಹಬ್ಬಸಾಲು ಶುರುವಾಯಿತು ಎಲ್ಲಾ ಹೊಸಲಿಗೂ ಹುರಿಮಂಜು ಹಚ್ಚು.

ಅನ್ಯಪದ: ಕೆಮ್ಮಣ್ಣು, ಕೆಂಬಣ್ಣ

ನೋಡಿ: ಸಾರಣೆಕಾರಣೆ

<hurimanju> (-) This is a type of red color soil. This soil they smear to the door bottom. Smearing hurimanju after it is dried, if rangoli or paste of rice well grinded with water, if lines are put it looks beautiful.

Eg: Now series of festivals commenced. Smear red soil to bottom of all doors.

Other words: Kemmannu, Kembara.

See: Saranakarane

1041. ಹುರಿಹಗ್ಗ: ನೋಡಿ: ಹಗ್ಗ

<hurihagga> See: Hagga

1042. ಹುರಿಹಿಟ್ಟು: ರಾಗಿಯನ್ನು ನೀರಿನಲ್ಲಿ ನೆನೆಸಿ ಕೂಡಲೆ ನೀರನ್ನು ಬಸಿದು ಒಂದು ಸೌಟಿನಷ್ಟು ಮೊಸರು, ಒಂದು ಚಿಟಿಕೆ ಉಪ್ಪು ಬೆರೆಸಬೇಕು. ಕಾದ ಕಬ್ಬಿಣದ ಬಾಣಲೆಯಲ್ಲಿ ಒಂದೊಂದೆ ಚಮಚದಷ್ಟು ರಾಗಿಯನ್ನು ಹಾಕಿ ಕಡ್ಡೀ ಪರಕೆಯಿಂದ ಹುರಿದರೆ ರಾಗಿ ಅರಳಿನಂತಾಗುತ್ತದೆ. ನಂತರ ಏಳೆಂಟು ಏಲಕ್ಕಿಕಾಯನ್ನು ಬೆರೆಸಿ ಬೀಸುವಕಲ್ಲಿನಲ್ಲಿ ಬೀಸಿದರೆ ನಯವಾದ ಹಿಟ್ಟಾಗುತ್ತದೆ. ಹಿಟ್ಟಿಗೆ ಬೆಲ್ಲ ಅಥವಾ ಮಜ್ಜಿಗೆಯನ್ನು ಬೆರೆಸಿ ತಿನ್ನಬಹುದು. ಈ ರೀತಿ ಮಾಡಿದ ರಾಗಿಹಿಟ್ಟನ್ನು ಹುರಿಟ್ಟು (ಹುರಿಹಿಟ್ಟು) ಅನ್ನುತ್ತಾರೆ. ಒಪ್ಪತ್ತು ಮಾತ್ರ ಊಟ ಮಾಡುವ ಮನೆಯ ಹಿರಿಯರಿಗೆ ಹುರಿಟ್ಟು ಒಳ್ಳೆಯ ತಿಂಡಿ. ಮಜ್ಜಿಗೆಗೆ ಹುರಿಟ್ಟನ್ನು ಬೆರೆಸಿ ಕುಡಿದರೆ, ದೇಹ ಬಹಳ ತಂಪಾಗುತ್ತೆ. ಹುಣಿಸೇ ಹಣ್ಣಿನ ತಿಳಿನೀರಿಗೆ ಹುರಿಟ್ಟನ್ನು ಹಾಕಿ ಪಾನಕದಂತೆ ಕುಡಿಯುತ್ತಾರೆ. ಬಿಸಿಲಿನ ಕಾಲದಲ್ಲಂತೂ ಈ ತರಹ ಆಹಾರ ಬಹಳ ತಂಪಾಗಿರುತ್ತೆ.

ಉದಾ: ಹುರಿಟ್ಟು ಮಾಡುವುದಕ್ಕೆ ಹಳೇರಾಗಿಯನ್ನು ಬಳಸಿದರೆ ಚೆನ್ನಾಗಿ ಅರಳೇಳುತ್ತೆ.

ನೋಡಿ: ಅರಳು

<hurihiTTu> Roasted ragi powder - Soaking ragi in water for few minutes, taking all water, a spoon of curds a pinch of salt mix. In heated iron pan put a spoon of ragi and stir, it becomes parched. Then grind in grinding stone it becomes powder. For that powder, either jaggery or curds can be mixed and eaten. This type of ragi flour is called hurittu (hurihittu). Elders in house who take one meal a day, hurittu is a good food. If adding hurittu to buttermilk and drink, body becomes cool. If water of tamarind, mix hurittu and drink like juice. Particularly in summer, this type of food is quite cool.

Eg: For making hurittu if old ragi is used it becomes quite parched.

See: Aralu

1043. ಹುರುಳಿಕಟ್ಟು: ಹುರುಳಿಕಾಳನ್ನು ಬೇಯಿಸಿ ಬಸಿದ ನೀರಿಗೆ ಹುರುಳಿಕಟ್ಟು ಎಂದು ಹೆಸರು. ಬೇಯಿಸಿದ ಹುರುಳಿಕಾಳನ್ನು ಎತ್ತುಗಳಿಗೆ ಆಹಾರವಾಗಿ ಕೊಟ್ಟರೆ, ಉಳಿಯುವ ಹುರುಳಿಕಟ್ಟನ್ನು ನಾವು ತಿನ್ನುವ ರಾಗಿಮುದ್ದೆಗೆ ಸಾರು ಮಾಡುತ್ತಾರೆ. ಒಂದಕ್ಕೊಂದು ಹೊಂದಾಣಿಕೆಯಾಗುತ್ತೆ. ಬೇಯಿಸಿದ ಹುರುಳಿಕಾಳಿಗೆ ಮೆಣಸಿನಕಾಯಿ ಒಗ್ಗರಣೆ ಹಾಕಿದರೆ ಖಾರದಕಾಳಾಗುತ್ತೆ, ಬೆಲ್ಲವನ್ನು ಬೆರೆಸಿದರೆ ಸಿಹಿಕಾಳಾಗುತ್ತೆ. ಎರಡೂ ತಿನ್ನಲು ರುಚಿ.

ಉದಾ: ನೀವು ಮಾಡೋ ಹುರುಳಿ ಕಟ್ಟುಸಾರು ನಮ್ಮಕ್ಕನಿಗೆ ಬಲು ಇಷ್ಟ.


ನೋಡಿ: ರಾಗಿಮುದ್ದೆ

<huruLikaTTu> (-) Juice of baked horsegram - The water in which horse gram has been boiled is called hurulikattu. If boiled horse gram is given as food to oxen, the water they use to make rasam for raage ball. Each suit to one another. For baked horse gram if vagar of green chilly is added it becomes masala gram, if jaggery is mixed sweet gram. Both are tasty to eat.

Eg: The hurulikattu you make is very pleasing to my sister.

See: Ragi ball

1044. ಹುಲಿಕುರಿ ಆಟ: ಹುಲಿಕುರಿ ಆಟವನ್ನು ಕೂಡಾ ಇಬ್ಬರು ಆಡಬಹುದು. ಒಬ್ಬೊಬ್ಬರಿಗೂ ಹತ್ತು ಬೀಜಗಳನ್ನಿಟ್ಟುಕೊಂಡು ಆಡುತ್ತಾರೆ. ಒಬ್ಬರು ಒಂದು ಬೀಜವನ್ನು ಇಟ್ಟರೆ ಇನ್ನೊಬ್ಬರು ಅದನ್ನು ದಾಟದಂತೆ ಇಡಬೇಕು. ಸಾಧ್ಯವಾಗದೇ ಹೋದಾಗ ಇನ್ನೊಬ್ಬನು ಅದನ್ನು ದಾಟಿ ಆ ಬೀಜವನ್ನು ತೆಗೆದುಕೊಳ್ಳುತ್ತಾನೆ. ಯಾರು ಎಲ್ಲಾ ಬೀಜವನ್ನೂ ಕಳೆದುಕೊಳ್ಳುತ್ತಾರೋ ಅವರು ಸೋತಹಾಗೆ.



<hulikuriaaTa> (-) A kind of play - Hulikuriata also can be played by two. Each one plays with ten seeds. If one puts a seed the other should keep seeing that he can cross. When it is not possible, the other player will cross and takes that seed. One who loses all the seeds is declared as failed.

1045. ಹುಳಿ: ತರಕಾರಿಹಾಕಿ ಮಾಡುವುದಕ್ಕೆ ಹುಳಿ ಎನ್ನುತ್ತಾರೆ. ಸೊಪ್ಪು ಹಾಕಿದಾಗ ಸೊಪ್ಪಿನಹುಳಿ ಎನ್ನುತ್ತಾರೆ. ಮೊಸರು ಸೇರಿಸಿ, ಬೆಂಡೆಕಾಯಿ ಅಥವಾ ಬೂದುಗುಂಬಳ ಮೊದಲಾದ ತರಕಾರಿ ಹೆಚ್ಚಿ ಹೋಳು ಮಾಡಿ ಹಾಕಿದ ಹುಳಿಯನ್ನು **ಮಜ್ಜಿಗೆಹುಳಿ** ಅಥವಾ **ಪಳದ್ಯ** ಎನ್ನುತ್ತಾರೆ. ಹಲವುಬಗೆ ತರಕಾರಿ ಸೇರಿಸಿ ಮಾಡುವ ಹುಳಿಗೆ **ಕೂಟು** ಎನ್ನುತ್ತಾರೆ. ಹುಳಿಯಲ್ಲಿ ಹೋಳುಗಳು ಸಾಕಷ್ಟು ದಪ್ಪ ಇರುತ್ತವೆ. ಪಲ್ಯಕ್ಕಾದರೆ ಸಾಕಷ್ಟು ಸಣ್ಣಗೆ ಹೆಚ್ಚಿರುತ್ತಾರೆ.


ಉದಾ: ನಿನ್ನೆ ಸಮಾರಾಧನೆಯಲ್ಲಿ ಮಜ್ಜಿಗೆಹುಳಿ ತುಂಬಾ ಚೆನ್ನಾಗಿತ್ತು. ನಾನು ಎರಡುಸಲ ಹಾಕಿಸಿಕೊಂಡೆ.

ನೋಡಿ: ಸೊಪ್ಪಿನಹುಳಿ, ಮಜ್ಜಿಗೆಹುಳಿ, ಕೂಟು

<huLi> (-) A kind of broth made of dal and vegetable - To make with vegetables they call huli (sambar). If made with greens, they say Soppinahuli (Green sambar). Mixing curds, adding bhendi or pumpkin etc. vegetables in pieces, they call majjigehuli or Paladya. Mixing varieties of vegetables making sambar, they say kootu. In sambar the pieces of vegetables will be enough big. For palya, they cut very small.

Eg: Yesterday in mass feeding, majjigehuli was very nice. I ate twice.

See: Soppinahuli, Majjigehuli, Kuutu.



1046. ಹೂರಣದೊಬ್ಬಟ್ಟು: ಕಡಲೆಬೇಳೆಯನ್ನು ಬೇಯಿಸಿ, ಬೆಲ್ಲವನ್ನು ಬೆರೆಸಿ ಹೂರಣ ಮಾಡಿಕೊಂಡು ಕಣಕದೊಳಗಿಟ್ಟು ಹಾಳೆಯಂತೆ ಒತ್ತಿ ಕಾವಲಿಯ ಮೇಲೆ ಸುಟ್ಟರೆ ಅದು **ಹೂರಣದೊಬ್ಬಟ್ಟು** ಎನಿಸುತ್ತದೆ. ಕೆಲವು ಕಡೆ ಹೂರಣದೊಬ್ಬಟ್ಟು ಕೇವಲ ಅಂಗೈ ಅಗಲದಷ್ಟು ಮಾಡುತ್ತಾರೆ. ಇದು ಕರ್ನಾಟಕದ ಬಾಣಾವರ ಎಂಬ ಊರಿನಲ್ಲಿ ಹೆಚ್ಚು. ಅದಕ್ಕಾಗಿ ಅಲ್ಲಿ ಹೂರಣದೊಬ್ಬಟ್ಟನ್ನು **ಬಾಣಾವರದ ಬಿಲ್ಲೆ** ಎಂದು ಹೇಳುವುದು ಜನಜನಿತವಾದ ಶಬ್ದವಾಗಿದೆ. ನೀವು ಒಂದುಬಾರಿ ಮಾಡಲು ಪ್ರಯತ್ನ ಮಾಡಿ. ಕಾಯೊಬ್ಬಟ್ಟಿಗೆ ಬಿಸಿಹಾಲನ್ನು ಹಾಕಿ ತಿಂದು ರುಚಿ ಹೇಳಿ.

ಉದಾ: ಮೊನ್ನೆ ಗೌರಿಹಬ್ಬದ ದಿನ ಮಾಡಿದ್ದ ಹೂರಣದೊಬ್ಬಟ್ಟನ್ನು ಎರಡು ದಿವಸ ತಿಂದೆವು.

ಸಮಾನಾರ್ಥಕ: ಬಾಣಾವರದ ಬಿಲ್ಲೆ

<hooraNadobbaTTu> (-) A kind of sweet - Boiling gram dal, mixing jaggery, putting that stuff in duff of soji and press like a round sheet and bake on heated pan is known as hooranadobbattu. In some places they do hooranadobbattu in a size of palm. This is common in Banavara (Karnataka). There calling as Banavaradabille is known to the whole of Karnataka. You also try to do it once. Mix boiling milk to Kayobbattu, eat and tell the taste.

Eg: Day before yesterday hooranadobbattu prepared on Gowri festival day, we ate for two days.

Equivalent: Banavaradabille



1047. ಹೂವೀಳ್ಯ: ಮದುವೆ ಸಮಾರಂಭದಲ್ಲಿ **ಹೂವೀಳ್ಯ ನಡೆಸುವುದು ಒಂದು ಆಚರಣೆ**. ಹೂವೀಳ್ಯಕ್ಕೆ ಹತ್ತು ಜನ ಮುತ್ತೈದೆಯರನ್ನು ಕರೆದು ಕಾಲಿಗೆ ಅರಿಶಿನ ಹಚ್ಚಿ ನೀರಿನಲ್ಲಿ ತೊಳೆದು ಒಳಗಡೆ ಮಣೆಯ ಮೇಲೆ ಕೂರಿಸುತ್ತಾರೆ. ನಂತರ ಅವರಿಗೆ ಕುಂಕುಮ, ಹೂವು ಕೊಟ್ಟು ಆರತಿ ಎತ್ತಿ, ಕೋಸುಂಬರಿ, ತಂಬಿಟ್ಟು, ಚಿಗಳಿ, ಪಾನಕ ಕೊಡುತ್ತಾರೆ. ಇದು ಹೆಣ್ಣಿನ ಮನೆಯವರಾಗಿ ಮಾಡುವ ಸಂಪ್ರದಾಯ.

ಉದಾ: ಹೂವೀಳ್ಯಕ್ಕೆ ಮುತ್ತೈದೆಯರಿಗೆ ಹೇಳಿಕಳಿಸಿದೆ.

<hooveeLya> (-) A cutom of distributing flowers and betel leaves to women - During marriage functions, to observe hoovilya is a custom. For hoovilya inviting ten married women, smearing turmeric powder to their legs washing with water, they will be seated on a plank. Then giving them kunkum, flowers, waving arati give kosumbari, thambittu (made of rice flour), Chigali (made of sesame), juice. This is the custom of bride's family.

Eg: For hoovilya, women have been informed.

1048. ಹೂಳು: ಕೆರೆ ಬಾವಿಗಳಲ್ಲಿ ನೀರು ಜಾಸ್ತಿ ಸೇರದಂತೆ ತಳದಲ್ಲಿ ಕೆಸರುಮಣ್ಣು ತುಂಬಿರುತ್ತೆ. ಅದನ್ನು **ಹೂಳು** ಎನ್ನುತ್ತಾರೆ. ಒಬ್ಬರು ಬಾವಿಯೊಳಕ್ಕೆ ಇಳಿದು ಮಂಕರಿಗೆ ಹೂಳನ್ನು ತುಂಬಿದರೆ, ಇನ್ನೊಬ್ಬರು ಮೇಲಿನಿಂದ ಅದನ್ನು ಎಳೆದುಕೊಳ್ಳುತ್ತಾರೆ. ಇದನ್ನು ಹೂಳು ತೆಗೆಯುವುದು ಎನ್ನುತ್ತಾರೆ.

ಉದಾ: ನಮ್ಮ ಬಾವಿಯಲ್ಲೂ ಹೂಳು ತುಂಬಿದೆ, ತೆಗೆಸಬೇಕು.

ಉದಾ: ನಮ್ಮೂರ ಕೆರೆಯಲ್ಲಿ ಹೂಳು ತುಂಬಿದೆ, ನಾಳೆ ತೆಗೆಸುತ್ತಾರೆ.

<hooLu> Slit or sediment - In tank, wells, water cannot accumulate more at bottom soil will have been filled. They call it as hoolu (Silt). If one goes inside the well and fill the silt into basket, the other will pull up from the top. This is called as removing of silt.

Eg: In our well also silt is filled. Must get it removed.

Eg: In our village tank silt is filled. Tomorrow they are removing.

1049. ಹೆಂಗಸರ ಆಭರಣಗಳು: ಹಳ್ಳಿಗಳಲ್ಲಿ ಹೆಂಗಸರ ಆಭರಣಗಳೆಂದರೆ ಅಡ್ಡಿಕೆ, ಕರಿಮಣಿಸರ ತಾಳಿ ಸಮೇತ (ಕೊರಳಿಗೆ), ಮೂಗುಬಟ್ಟು ಅಥವಾ ಬುಗುಡಿ, ಕಿವಿಗೆ ಬೆಂಡೋಲೆ, ಕೆನ್ನೆಸರಪಣಿ, ತಲೆಯ ಕೂದಲಿನ ಮೇಲೆ ನಾಗರ, ಕೈಗೆ ಗಾಜಿನಬಳೆ, ಬೆರಳಿಗೆ ಉಂಗುರ, ಸೊಂಟಕ್ಕೆ ಡಾಬು, ಕಾಲಿನ ಬೆರಳಿಗೆ ಕಾಲುಂಗರ (ಮದುವೆಯಾದವರಿಗೆ ಮಾತ್ರ), ಕಾಲಿಗೆ ಬೆಳ್ಳಿಯ ಬಳೆ ಅಥವಾ ಗೆಜ್ಜೆ ಇತ್ಯಾದಿ.

<hengasara aabharanagaLu> Women's ornaments - In villages, ornaments of women mean, Addike, Karimanisara with thaali (for neck), Moogubottu or bugudi (nose string), for ear Bendole (ear ring), Kennesarapani, nagara on head hair, for hand glass bangle, for finger ring, for waist dabu, for finger of leg Ring (for married women only), for leg silver bangle or gejje etc.

1050. ಹೆಂಚು: ಮನೆ ಕಟ್ಟುವಾಗ ಮೇಲ್ಛಾಗವನ್ನು ಮುಚ್ಚಲು ಉಪಯೋಗಿಸುವ ಸಾಧನಕ್ಕೆ ಹೆಂಚು ಎನ್ನುತ್ತಾರೆ. ಹೆಂಚು ಕೆರೆಯಲ್ಲಿ ಸಿಗುವ ಕರೀಮಣ್ಣಿನಿಂದ ತಯಾರಾದುದು. ಇದನ್ನು ನಾಡು ಹೆಂಚು ಎನ್ನುತ್ತಾರೆ. ಹೆಂಚು ತಯಾರು ಮಾಡುವವರಿಗೆ ಕುಂಬಾರರು ಎಂದು ಹೇಳುತ್ತಾರೆ. ಕೆಂಪು ಜೇಡೀಮಣ್ಣಿನಿಂದ ತಯಾರಾದ ಹೆಂಚಿಗೆ ಮಂಗಳೂರು ಹೆಂಚು ಎಂದು ಕರೆಯುತ್ತಾರೆ. ಇದು ಚಚ್ಚೌಕವಾಗಿರುತ್ತೆ.

ನೋಡಿ: ಮಂಗಳೂರು ಹೆಂಚು, ಕರಿ ಹೆಂಚು, ನಾಡು ಹೆಂಚು, ಕುಂಬಾರ

<henchu> Tile - While constructing the house to cover the top, the equipment used is called as henchu. Tile is made of

black soil available in tank. They call it as Naduhenchu (native tile). Who prepares tiles is called Kumbara (Pot maker). Tile made of red sticky soil is called Mangalore tile. This will be like square.

See: Mangalore tile, Black tile, Native tile, Kumbara.

1051. ಹೆಚ್ಚುಗಟ್ಟಲೆ: ವಿಶೇಷ ಸಂಭ್ರಮದ ಊಟಕ್ಕೆ **ಹೆಚ್ಚುಗಟ್ಟಲೆ** ಎನ್ನುತ್ತಾರೆ. ಹೆಚ್ಚುಗಟ್ಟಲೆಗೆ ಎಚ್ಚುಗಟ್ಟಲೆ ಎಂದೂ ಹೇಳುತ್ತಾರೆ.

ಉದಾ: ನಮ್ಮದು ಭೈರಾದೇವರ ಒಕ್ಕಲು. ಇವತ್ತು ಹೆಚ್ಚುಗಟ್ಟಲೆ ಊಟ ನಮ್ಮನೇಲಿ ಬರ್ಬೇಕು.

<hechhugattale> (-) For meals of special occasion, they call it as Hechhugattale. For hechhugattale, they also call as echhugattale.

Eg: We are the same race of Bhairadevaru. Today is meals of hechhugattale in our house. You must come.

1052. ಹೆಡೆಮೊಟ್ಟೆ: ತೆಂಗಿನ ಮರದ ಸೋಗೆಯಗರಿಗಳ ಬುಡದಲ್ಲಿರುವ ಭಾಗಕ್ಕೆ **ಹೆಡೆಮೊಟ್ಟೆ** ಎನ್ನುತ್ತಾರೆ. ಸೋಗೆ ಒಣಗಿ ಕೆಳಕ್ಕೆ ಬಿದ್ದ ನಂತರ ಒಣಗಿದ ಹೆಡೆಮೊಟ್ಟೆಯನ್ನು ಎರಡು ಮೊಳ ಉದ್ದಕ್ಕೆ ತುಂಡು ಮಾಡಿ ನೆಲದಿಂದ ಆರೇಳು ಅಡಿ ಎತ್ತರದವರೆಗು ಒಟ್ಟಾಗಿ ಪೇರಿಸಿರುತ್ತಾರೆ. ಇದು ಸ್ನಾನಕ್ಕೆ ನೀರು ಕಾಯಿಸುವ ಒಲೆಗೆ ಸೌದೆ.

ಉದಾ: ತ್ವಾಟದಿಂದ ಬರುವಾಗ ಒಣಗಿದ ಹೆಡೆಮೊಟ್ಟೆನೆಲ್ಲ ಗಾಡೀಲಿ ತುಂಬ್ಕಂಡ್ಬಾ.

<hedemotte> Stump of coconut branch - The portion of bottom of leaves of coconut leaf is called as hedemotte. When dried branch falls, cutting it three feet length, they pile up six to seven feet height. This is the firewood for heating water to bathe.

Eg: While coming back from garden, bring all the dried hedemotte in cart.

1053. ಹೆಣ್ಣೊಪ್ಪಿಸುವುದು: ಹೆಣ್ಣೊಪ್ಪಿಸುವುದೂ ಒಂದು ಶಾಸ್ತ್ರ ಸಂಪ್ರದಾಯ. ಹೆಣ್ಣಿನ ಅತ್ತೆ ಮಾವ ಅಲ್ಲದೆ ಅವರ ಪೈಕಿ ಹಿರಿಯರಾದವರು ಅವರುಗಳ ತೊಡೆಯ ಮೇಲೆ




ವಧುವನ್ನು ಕೂರಿಸುತ್ತಾರೆ. ಅವಳು ಅವರಿಂದ ಆಶೀರ್ವಾದ ಪಡೆಯುತ್ತಾಳೆ.

ಉದಾ: ವಧುವನ್ನು ಮೊದಲು ಅತ್ತೆಯ ತೊಡೆಯ ಮೇಲೆ ಕೂರಿಸಿ.

<heNNoppisuvudu> (-) Offering the bride to the bridegroom's parents - Hennoppisuvudu is also a ritualistic custom. Apart from Bride's mother in law or father in law, the other elderly persons, on their thigh the bride will be seated. She gets blessings from them.

Eg: Seat the bride first on mother in law's thigh.



1054. ಹೆಪ್ಪಳಿಕೆ: ಗದ್ದೆಗಳಲ್ಲಿ ಒಬ್ಬರ ಜಮೀನಿಗೂ ಇನ್ನೊಬ್ಬರ ಜಮೀನಿಗೂ ಮಧ್ಯೆ ಗುರ್ತಿಸುವುದಕ್ಕಾಗಿ ಉದ್ದಕ್ಕೂ ಒಂದು ಅಡಿ ಅಗಲ, ಒಂದು ಅಡಿ ಎತ್ತರ ಮಣ್ಣನ್ನು ಹಾಕುತ್ತಾರೆ. ಅದಕ್ಕೆ **ಬದು** ಎಂದು ಹೆಸರು. ಅದರ ಮೇಲೆ ಹಸಿಹುಲ್ಲನ್ನು ಇಡುತ್ತಾರೆ. ಗುದ್ದಲಿಯಿಂದ ಕೆತ್ತಿದಾಗ ಅಷ್ಟೇ ಅಗಲದಷ್ಟು ಹುಲ್ಲು ಮಣ್ಣಿನ ಸಮೇತ ಬರುತ್ತೆ. ಅದಕ್ಕೆ ಹೆಪ್ಪಳಿಕೆ ಎಂದು ಹೆಸರು. ಹೆಪ್ಪಳಿಕೆ ಬದುವಿನ ಜೊತೆಗೇ ಸೇರಿಕೊಂಡು ಬೆಳೆಯುತ್ತೆ.

ಉದಾ: ರಾಮಪ್ಪ ಒಂದು ಅಡಿ ಜಾಗ ಒತ್ತಲಿಸಿ ಬದು ಹಾಕ್ಕಂಡಿದಾನೆ.

ನೋಡಿ: ಬದು

<heppaLike> (-) In the field to indicate between one's jameen and another person's jameen, throughout one-foot width, one-foot height they put soil. It is called Badu (border). On top of that put green grass. When cut with spade, the same width of grass comes out together with soil. It is called heppalike. Heppalike grows along with Badu.

Eg: Ramappa has encroached one foot and put Badu.

See: Badu

1055. ಹೆಬ್ಬೆಟ್ಟೊತ್ತು: ಸಹಿ ಮಾಡಲು ಬಾರದವರಿಂದ (ಅನಕ್ಷರಸ್ಥರಿಂದ) ಶಾಯಿಯ ಮೇಲೆ ಹೆಬ್ಬೆಟ್ಟನ್ನು ಒತ್ತಿಸಿ ಅಥವಾ ಶಾಯಿಯನ್ನು ಹೆಬ್ಬೆಟ್ಟಿಗೆ ಬಳಿದು ಆ ಹೆಬ್ಬೆಟ್ಟಿಂದ ಕಾಗದದ ಮೇಲೆ ಒತ್ತಿಸುತ್ತಾರೆ. ಅದೇ ಆ ವ್ಯಕ್ತಿಯ ಸಹಿ ಇದ್ದಂತೆ. ಲೋಕದಲ್ಲಿ ಒಬ್ಬರ



ಹೆಬ್ಬೆಟ್ಟಿನ ಗುರುತಿನಹಾಗೆ ಇನ್ನೊಬ್ಬರದು ಇರುವುದಿಲ್ಲ. ಆದ್ದರಿಂದ ಅದೊಂದು ಖಚಿತ ಚಿಹ್ನೆ ಆದಕಾರಣಕ್ಕೆ ದಾಖಲೆಗಾಗಿ ಅಕ್ಷರಸ್ಥರಿಂದಲೂ ಅನೇಕಬಾರಿ ಹೆಬ್ಬೆಟ್ಟನ್ನು ಒತ್ತಿಸುತ್ತಾರೆ.

ಉದಾ: ರಂಗಪ್ಪಾ, ಕಾಗದದ ಮೇಲೆ ಇಲ್ಲಿ ಹೆಬ್ಬೆಟ್ಟೊತ್ತು.

ನೋಡಿ: ದಸ್ಕತ್ತು

<hebbeTTothhu> Thumb impression - From those who cannot sign (illiterates) pressing thumb on ink pad or smearing ink on thumb get pressed on paper. That is as if his signature. In general, one's thumb impression will not be same as others. Therefore, it is a perfect mark. For the same reason, for documents get thumb impression from literates also.

Eg: Rangappa, press your thumb on this paper.

See: Daskathhu

1056. ಹೆರಿಗೆ: ಮಗು ಹುಟ್ಟುವುದನ್ನು **ಹೆರಿಗೆ** ಅನ್ನುತ್ತಾರೆ. ಹೆರಿಗೆ ಮಾಡಿಸುವವಳಿಗೆ ಸೂಲಗಿತ್ತಿ ಎಂದು ಹೆಸರು. ಅವಳು ಮನೆಗೆ ಬಂದು ಮಗುವನ್ನು ಹೊರಕ್ಕೆ ತೆಗೆದು ಗಲೀಜನ್ನೆಲ್ಲ ತೊಳೆದು ಬೆಚ್ಚನೆಯ ಬಟ್ಟೆಯನ್ನು ಕೇರುವಮೊರದಲ್ಲಿ ಹಾಸಿ ಮಗುವನ್ನು ಮಲಗಿಸುತ್ತಾಳೆ. ಮಗು ಹುಟ್ಟಿದ ಹನ್ನೊಂದು ದಿವಸವಾದ ಮೇಲೆ ಶುಭಸ್ನಾನ ಮಾಡಿದ ನಂತರ ಅಡಿಗೆ ಮನೆಯನ್ನು ಪ್ರವೇಶಿಸಬೇಕು. ಮಗುವನ್ನು ಆ ದಿನ ತೊಟ್ಟಿಲಿಗೆ ಹಾಕುತ್ತಾರೆ.

ಉದಾ: ರಾಮಯ್ಯನವರ ಮಗಳಿಗೆ ನಾಳೆ ಹೆರಿಗೆಯಾಗುತ್ತೆ, ನಾನು ಹೋಗಬೇಕು ಎಂದು ನಮ್ಮ ಅಜ್ಜಿ ಹೇಳುತ್ತಿದ್ದರು.

ನೋಡಿ: ಕೇರುವಮೊರ, ಶುಭಸ್ನಾನ, ಸೂಲಗಿತ್ತಿ

<herige> Childbirth - One who does Herige is called Soolagithhi (Midwife). She comes home, taking out the child, cleaning the dirt, putting warm cloth in bamboo fan, and put the baby. After eleven days of childbirth taking ritual bath, then only must enter kitchen. On that day they put the child in cradle.

Eg: For Ramayya's daughter tomorrow is childbirth. Our grandmother was telling that she must go.

See: Bamboo fan, Ritual bath, Midwife.



1057. ಹೊಂಡ: ನೀರು ನಿಂತಿರುವ ಹಳ್ಳಕ್ಕೆ **ಹೊಂಡ** ಎನ್ನುತ್ತಾರೆ. ಹೊಂಡಕ್ಕೆ ಮಳೆಯ ನೀರೇ ಗತಿ. ಕೆರೆಯಂತೆ ಹಾಗೆ ಹೊಂಡ ಹೆಚ್ಚು ಅಗಲವಾಗಿರುವುದಿಲ್ಲ. ಮುಸುರೆ ಪಾತ್ರೆಗಳನ್ನು ತೊಳೆಯಲು ಹೊಂಡದ ನೀರನ್ನು ಬಳಸುತ್ತಾರೆ. ಕೆಲವು ಬಾರಿ ಎಮ್ಮೆಗಳು ಹೊಂಡಕ್ಕೆ ನುಗ್ಗಿದರೆ ನೀರೆಲ್ಲ ರಾಡಿಯಾಗಿ ಉಪಯೋಗಿಸುವುದಕ್ಕಾಗುವುದಿಲ್ಲ. ನಮ್ಮ ಹಳ್ಳಿಯಲ್ಲಿ ಒಂದು ವರ್ಷ ಹೊಂಡದಲ್ಲಿ ತುಂಬ ಜೊಂಡು ಬೆಳೆದು ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಜೊಂಡನ್ನು ಮೇಲಕ್ಕೆ ಎಳೆಯಲು ಅರಣ್ಯ ಇಲಾಖೆಯಿಂದ ಆನೆಯನ್ನು ಕಳುಹಿಸಿಕೊಟ್ಟಿದ್ದರು. ನೀರಿನ ಮೇಲೆ ತೇಲುವ ಹಾಗೆ ಮರದ ತೆಪ್ಪವನ್ನು ಕಟ್ಟಿ, ಅದರ ಮೇಲೆ ಕುಳಿತು ಜೊಂಡನ್ನು ಕತ್ತರಿಸಿ ಅಲ್ಲಲ್ಲೇ ಬಿಡುತ್ತಿದ್ದರು. ಆನೆ ಅದನ್ನೆಲ್ಲ ಸೊಂಡಲಿನಿಂದ ಎಳೆದು ಹೊರಕ್ಕೆ ತಂದು ಹಾಕಿತು.


ಉದಾ: ಹೊಂಡದ ನೀರೆಲ್ಲ ರಾಡಿಯಾಗಿದೆ ಇನ್ನೆರಡು ದಿನ ನೀರು ತರುಕ್ಕಾಗುಲ್ಲ.

ನೋಡಿ: ರಾಡಿ

<honDa> Pond - The small stream where water is stagnated is called Honda. For Pond only rainwater. Like tank, Pond will not be so big. To clean the cooking vessels, they use Pond water. Sometimes if buffalos enter the Pond water becoming muddy, cannot be used. In our village one year, in Pond grew Jondu (rotten leaves) and water could not be used. From Forest Department they had sent an elephant to pull out the rotten leaves to the top. On water, putting a wooden raft, sitting on that cutting the leaves and leaving there. Elephant drew leaves from its trunk.

Eg: Pond's water is muddy. For two days cannot bring water.

See: Radi (Muddy)



1058. ಹೊಂಬಾಳೆ: ತೆಂಗು ಮತ್ತು ಅಡಕೆಮರಗಳಲ್ಲಿ ಕಾಯಿ ಬಿಡುವುದಕ್ಕೆ ಮುಂಚೆ ಬೆಳೆಯುವ ಹೂವಿನ ಗೊಂಚಲಿಗೆ **ಹೊಂಬಾಳೆ** ಎಂದು ಹೆಸರು. ಹೊಂಬಾಳೆಯನ್ನು ವಿಶೇಷ ಸಂದರ್ಭಗಳಲ್ಲಿ ಮಂಟಪದ ಅಲಂಕಾರಕ್ಕೆ ಮತ್ತು ಕಲಶಕ್ಕೆ

ಉಪಯೋಗಿಸುತ್ತಾರೆ.

ಉದಾ: ನಮ್ಮ ತೋಟದಲ್ಲಿ 25 ತೆಂಗಿನ ಗಿಡಗಳಲ್ಲಿ ಹೊಂಬಾಳೆ ಹೊರಟಿದೆ.

<hombaaLe> (-) Flower sheath of coconut or areca tree - In coconut and areca tree before the growth of coconut, the bunch of flowers is the Flower Sheath called as Hombale. On special occasions for decorating pandal and for Kalasha use Hombale.

Eg: In our garden, the Flower Sheath has sprouted in twenty-five coconut trees.

1059. ಹೊಗಳಿಕೆಗಳು: ಬೈಗುಳಗಳ ಹಾಗೆ ಹೊಗಳುವುದೂ, ಪ್ರಶಂಸೆ ಮಾಡುವುದೂ ಹಾಗೇ ನಾನಾರೀತಿ ಇವೆ. ರಾಮಾಯಣ, ಮಹಾಭಾರತದ ಪೌರಾಣಿಕ ವ್ಯಕ್ತಿಗಳನ್ನು ಉದಾಹರಿಸುವುದು ಸಾಮಾನ್ಯ. ಕರ್ಣ (ದಾನದಲ್ಲಿ), ಭೀಮ (ಪರಾಕ್ರಮದಲ್ಲಿ) ಸತೀಸಾವಿತ್ರಿ (ಚಾರಿತ್ರ್ಯದಲ್ಲಿ), ಸೀತೆ, ರಾಮಭಂಟ, ಮಹಾಲಕ್ಷ್ಮಿ, ಧರ್ಮರಾಯ ಇತ್ಯಾದಿ. ವಿಡಂಬನವಾಗಿ ಕೆಲವೊಮ್ಮೆ ವ್ಯಂಗವಾಗಿ ಒಳ್ಳೆಯ ವ್ಯಕ್ತಿಗಳ ಹೆಸರನ್ನು ಬಳಸುವುದುಂಟು ಹೊಗಳಿಕೆ ರೂಪದಲ್ಲಿ.

ಉದಾ: ಅದ್ಯ ನೀನು ಸಾಕ್ಷಾತ್ ಧರ್ಮರಾಯ ನಿನಗಾರು ನ್ಯಾಯ ಹೇಳ್ತಾರೆ.

ಉದಾ: ಮಹಾಸ್ವಾಮಿಗಳೇ ದಯಮಾಡಿಸಿ.

ಉದಾ: ಅವನ್ನೇನೂ ಅಂತ ತಿಳಿದಿದೀಯಾ, ಭೂಪತಿರಂಗ, ನಾಲ್ಕು ಜನ ಮಾಡೂ ಕೆಲಸಾನ ಒಬ್ಬನೆ ಮಾಡ್ಬಿಡ್ತಾನೆ. ಸೀತಾರಾಮರಾಯರದು ಬಹಳ ಧಾರಾಳದ ಮನಸ್ಸು, ಪುಣ್ಯವಂತರು. ಕರ್ಣನಂತೆ ಯಾರು ಹೋಗಿ ಕೇಳಿದರೂ ಇಲ್ಲಾ ಅನ್ನುವುದಿಲ್ಲ.

ಉದಾ: ರಾಧಮ್ಮ ಒಳ್ಳೆ ಹೆಂಗಸು, ಅತ್ತೇ ಮಾವನ್ನ ಚೆನ್ನಾಗಿ ನೋಡ್ಕತಾಳೆ. ಅಂಥ ಸೀತೆಯಂಥ ಸೊಸೇನ್ನ ಪಡೆಯೋಕೂ ಪುಣ್ಯ ಮಾಡಿರ್ಬೇಕು. ಅಂಥವಳನ್ನು ಹೆಂಡತಿಯನ್ನಾಗಿ ಪಡೆಯೋದಕ್ಕೆ ಅವನ ಗಂಡ ಬಹಳ ಅದೃಷ್ಟವಂತನಾಗಿರಬೇಕು.

ಉದಾ: ಪಕ್ಕದಮನೆ ಸೊಸೆ ಗಿರಿಜಾ ಮಹಾಲಕ್ಷ್ಮಿ ಹಾಗೆ ಇದ್ದಾಳೆ.

<hogaLikegaLu> Praising a person - Just like abusing (taunting), praising is also in so many ways. Giving example of Pouranic characters in Ramayana, Mahabharat is common. Bheema (in valor), Sati Savitri (in character) Seethe, Ramabhanta, Mahalakshmi, Dharmaraya etc. as imitating, sometimes as irony, using names of eminent persons for

praising.

Eg: You are almost like Dharmaraya, who can advise justice.

Eg: Mahaswamiji please come in.

Eg: What do you know about him? Bhupathiranga. He alone can do four peoples' work.

Eg: Seetharamaraya is very generous, merited person. Just like Karna, he will not say No to anyone who asks.

Eg: Radhamma is a good lady. She looks after mother in law, father in law well. To get a daughter in law like Seethe, we must have merit. To get a wife like her, her hushand must be lucky.

Eg:Neighbor house daughter in law Girija is like Mahalakshmi.

1060. ಹೊಟ್ಟೆಕಿಚ್ಚು: ನೋಡಿ: ಕಣ್ಣುರಿ

<hoTTekichhu> Jealous - See: Kannuri

1061. ಹೊತ್ತಾರೆ: ಸೂರ್ಯೋದಯಕ್ಕೆ ಮುಂಚೆ ಸ್ವಲ್ಪ ಬೆಳಕಿರುವ ಸಮಯವನ್ನು **ಹೊತ್ತಾರೆ** ಅನ್ನುತ್ತಾರೆ. ಅರುಣೋದಯ ಎಂದೂ ಹೇಳುತ್ತಾರೆ.

ಉದಾ: ಹೊತ್ತಾರೆಯಿಂದ ಸಂಜೇವರೆಗೂ ಗದ್ದೆಕೆಲಸ ಮಾಡಬೇಕಾಗುತ್ತೆ, ಆಳುಗಳಿಗೆ ಬರಹೇಳು.

<hothhaare> Early morning - Before sunrise, with little light, they call hothare. Also say Arunodaya.

Eg: From hothare (early morning) till evening field work must have to be done. Ask the workers to come.

1062. ಹೊರಗೆಹೋಗುವ ಶಾಸ್ತ್ರ: ಮಗುವಿಗೆ ನಾಲ್ಕುತಿಂಗಳು ತುಂಬಿದ ನಂತರ ಮೊದಲ ಬಾರಿಗೆ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರಿಗೆ ಪೂಜೆ ಮಾಡಿಸುತ್ತಾರೆ.

ಉದಾ: ನಾಳೆ ನಮ್ಮ ಚಿಕ್ಕಪ್ಪನ ಮೊಮ್ಮಗನ್ನ ಮೊದಲ ಬಾರಿಗೆ ರಾಮದೇವರ ಗುಡಿಗೆ ಕರೆದುಕೊಂಡು ಹೋಗ್ತಾರೆ.

<horegehooguvashaasthra> (-) A custom of taking the child out after birth - After four months of childbirth, for first time take the child to temple and get worshipped to God.

Eg: Tomorrow my uncle's grandson first time, are taking to Rama's Temple.

1063. ಹೊಸ ಬಟ್ಟೆ: ಯುಗಾದಿ ಹಬ್ಬದ ದಿನ ಮನೆಯವರೆಲ್ಲರು ಬೆಳಿಗ್ಗೆ ಅಭ್ಯಂಗನ ಮಾಡಿ (ಸ್ನಾನ) ಹೊಸ ಬಟ್ಟೆಯನ್ನು (ಗಂಡು ಮಕ್ಕಳಿಗೆ ಅಂಗಿ ಚಡ್ಡಿ, ಹೆಣ್ಣುಮಕ್ಕಳಿಗೆ ಲಂಗ, ಕುಬುಸ, ಹೆಂಗಸರಿಗೆ ಸೀರೆ, ಕುಬುಸ, ಮನೆಯ ಯಜಮಾನನಿಗೆ ಪಂಚೆ) ದೇವರ ಮುಂದೆ ಕುಂಕುಮ ಹಚ್ಚಿಟ್ಟು ನಂತರ ಧರಿಸುತ್ತಾರೆ. ಮದುವೆಯಾದ ಹೆಣ್ಣು ಬೇರೆ ಊರಿನಲ್ಲಿದ್ದರು ಗೌರಿ ಹಬ್ಬಕ್ಕೆ ರೇಷ್ಮೆಯ ಖಣ, ಅರಿಶಿನ, ಕುಂಕುಮವನ್ನು ಬಳೆ ಬಿಚ್ಚೋಲೆಯೊಂದಿಗೆ ಕಳುಹಿಸಿಕೊಡುತ್ತಾರೆ.

<hosabaTTe> New clothes - On Ugadi festival day, all householders take bath, new clothes (for male children, shirt and shorts, for female skirt, blouse, for women saree, blouse, for main person of family, dhothi) smearing Kunkum, placing before God and then wear. For married girl even she is in different town, for Gowri festival, silk blouse piece, turmeric powder, Kunkum, bangle with bichhole will be sent.


1064. ಹೊಳಲು ಸುತ್ತುವುದು: ಹೊಳಲು ಸುತ್ತುವುದು ಕೇವಲ ಹೆಂಗಸರ ಕಾರ್ಯಕ್ರಮ. ಅಕ್ಕಿ ಅಥವಾ ಗೋಧಿ ಹಿಟ್ಟಿನಿಂದ ಮಾಡಿದ ದೊಡ್ಡ ದೀಪದ ಸೊಡಲುಗಳಲ್ಲಿ ದೀಪವನ್ನು ಹಚ್ಚಿಟ್ಟು ಅದರ ಸುತ್ತ ಎರಡು ಕಡೆಯ ಹೆಂಗಸರು ಹಾಡನ್ನು ಹೇಳಿಕೊಂಡು ಸುತ್ತುತ್ತಾರೆ.

ಉದಾ: ಹೊಳಲು ಸುತ್ತುವುದಕ್ಕೆ ಮುತ್ತೈದೆಯರನ್ನು ಕರೆಯಿರಿ.

<hoLalusuttuvudu> (-) Holalusuthhuvudu is only women's program. They put big lamp made of rice or wheat flour, put the burning wick in it, around the women of both sides go round reciting songs.

Eg: To go round Holalu, invite women.

1065. ಹೋಮ: ಮದುವೆ, ಮುಂಜಿ ಸಮಾರಂಭಗಳಲ್ಲಿ ಔಪಾಸನೆ ಮಾಡುವಾಗ ಪುರೋಹಿತರು ಹೋಮಕುಂಡದ ನಾಲ್ಕು ಕಡೆಗೂ ದರ್ಭೆಯನ್ನಿಟ್ಟು ಆವಾಹನೆ



ಮಾಡುತ್ತಾರೆ. ಅದರೊಳಕ್ಕೆ ಅಗ್ನಿಸ್ಥಾಪನೆ ಮಾಡುವುದಕ್ಕೆ ಇಬ್ಬರು ಮುತ್ತೈದೆಯರು ಒಂದು ತಟ್ಟೆಯಲ್ಲಿ ಕೆಂಡವನ್ನಿಟ್ಟು ಇನ್ನೊಂದು ತಟ್ಟೆಯಿಂದ ಮುಚ್ಚಿತಂದು **ಹೋಮಕುಂಡದೊಳಕ್ಕೆ** ಹಾಕುತ್ತಾರೆ. ಅವರಿಗೆ ಎಲೆ ಅಡಿಕೆ ತಾಂಬೂಲ ಕೊಡಬೇಕು. ನಂತರ ಪುರೋಹಿತರು ಅರಳಿಮರದ ಕಡ್ಡಿಗಳನ್ನು (ಅದಕ್ಕೆ ಸಮಿತ್ತು ಎಂದು ಹೆಸರು) ತುಪ್ಪದಲ್ಲಿ ಅದ್ದಿ ಮಂತ್ರ ಹೇಳಿಕೊಂಡು ಅಗ್ನಿಯನ್ನು ಪ್ರಜ್ವಲಗೊಳಿಸುತ್ತಾರೆ. ಹೋಮಕ್ಕೆ ಚರು (ಅರಿಶಿನ ಬೆರೆಸಿ ಮಾಡಿದ ಅನ್ನ) ಮಾಡಿಕೊಂಡಿರುತ್ತಾರೆ. ಹೋಮದ ಕಡೆಯಲ್ಲಿ ಪೂರ್ಣಾಹುತಿಗೆ ಒಂದು ತಟ್ಟೆಯಲ್ಲಿ ಒಣಕೊಬರಿ, ಅರಿಶಿನ, ಕುಂಕುಮ, ರೇಷ್ಮೆಯ ವಸ್ತ್ರಗಳನ್ನಿಟ್ಟು ಹೋಮಕುಂಡದೊಳಕ್ಕೆ ಹಾಕಿ ತುಪ್ಪವನ್ನು ಸುರಿಯುತ್ತಾರೆ. ಅವೆಲ್ಲವೂ ಉರಿದು ಭಸ್ಮವಾದ ಮೇಲೆ ತುಪ್ಪವನ್ನು ಸವರಿದ ವೀಳೆಎಲೆ ಅಥವಾ ಮುತ್ತುಗದ ಎಲೆಯಿಂದ ಭಸ್ಮವನ್ನು ತೆಗೆದು ರಂಗಳಿಸಿ ಹಣೆಗೆ ಹಚ್ಚಿಕೊಳ್ಳುತ್ತಾರೆ. ಅದಕ್ಕೆ ರಕ್ಷೆ ಎಂದು ಹೆಸರು.

ಉದಾ: ಶಾಸ್ತ್ರಿಗಳು ಸಾಂಗೋಪಾಂಗವಾಗಿ ಹೋಮಕಾರ್ಯವನ್ನು ನಡೆಸಿಕೊಟ್ಟರು.

<hooma> Oblation - During marriage, thread ceremony functions while doing Oupasane (worship of sacred fire) priests invoke putting darbhe (a kind of grass) around fire pit. Inside to put fire, two women in a plate put burning piece of firewood covering with another plate dump into the Hoomakunda. For them betel leaves, areca must be given. Then the priests dipping the sticks of Arali tree in ghee (For that it is called Samithhu) put into Hoomakunda and blaze up the fire. For Hooma, will have prepared Cheru (cooked rice with turmeric powder). At the end, for Poornahuti (Final oblation in a sacrifice) in a plate dry coconut, turmeric powder, Kunkum, silk cloth, pour into the fire with ghee. After burning when it becomes ash, smearing ghee to betel leaf or leaf of flame tree, taking out the ash cleanly mix and smear to forehead. For that it is called Rakshe (Sanctified ash).

Eg: The priests got Homakarya done in a very ritualistic way.

1066. ಹೋರಿ: ಪ್ರಾಣಿಗಳಲ್ಲಿ 3 ಜಾತಿಗಳಿವೆ ಗಂಡು, ಹೆಣ್ಣು. ಎರಡು ಲಿಂಗ ವ್ಯತ್ಯಾಸವಲ್ಲದೆ ಸಂತಾನಕ್ಕೆ ಬಳಸುವ ವಿಶಿಷ್ಟ ಗಂಡನ್ನು ಹೋರಿ, ಕೋಣ ಎನ್ನುತ್ತಾರೆ. ಬುಕ್ಕಾಂಬುಧಿ ಪಕ್ಕದಲ್ಲಿರುವ ಅಜ್ಜಂಪುರದ ಪ್ರಾಣಿಗಳ ಆಸ್ಪತ್ರೆಯಲ್ಲಿ ಹೋರಿಯನ್ನು ಇಟ್ಟಿದ್ದರು. ಕರು ಹಾಕದೆ ಇರುವ ಹಸುವನ್ನು ತೆಗೆದುಕೊಂಡು ಹೋಗಿ ಹೋರಿಹಾಯಿಸಿಕೊಂಡು ಬರುತ್ತಿದ್ದರು.

ಉದಾ: ಹಸು, ಎತ್ತು, ಗೂಳಿ, ಹೋರಿ, ಹೆಣ್ಣೆಮ್ಮೆ, ಗಂಡೆಮ್ಮೆ, ಕೋಣ ಎಂಬ ವರ್ಗೀಕರಣ ಕಾಣುತ್ತೇವೆ.

ನೋಡಿ: ಮಣಕ, ಗೂಳಿ


<hoori> Young ox - There are three types in animals. Male, female, neuter gender without difference in male or female, a special type of male used for pregnancy they say Hoori, Kona. In the Veterinary hospital of Ajjampur near Bukikambudhi, they had kept a Hoori. Taking the cow without calving they used to get it pregnant.

Eg: Cow, Ox, Gooli, Hori, Female buffalo, Male buffalo, Kona, we see categorization.

See: Manaka, Gooli.

❑

ಬುಕ್ಕಾಂಬುಧಿ


CHIKKAMAGALURU
DISTRICT
N
DAVANAGERE
SHIVAMOGGA
CHITRADURGA
TUMAKURU
UDUPI
DAKSHINA KANNADA
HASSAN
Bhaktana Katte
Bukkambudhi
Shivani
Hadikere
Gadihalli
Karkuchi
Hunsaghatta
Muttinakoppa
Tarikere
Ajjampura
Bavikere
Lakkavalli
Baggavalli
Chowlahiriyur
Kadahinabylu
Doranalu
Kudlur
Hirenalluru
Narasimharajapura
Nagalapura
Lingadahalli
Birur
Yagati
Chavalamane
Harandur
Chikkangala
Kadur
Kunkanadu
Panchanahalli
Koppa
Udeva
Maccherei
Singatagere
Hariharapura
Nuggi
Kamanadurga
Thogarihankal
Yemmedoddi
Pattanagere
Mathigatta
Karekeshwara
Suguduvani
Hochihalli
Sringeri
Menase
Bidare
Shiravase
Bilekallahalli
Sakrepatna
Jayapura
Byaravalli
Nidaghatta
Yelemadalu
Aralaguppe
CHIKKAMAGALURU
Byredevaru
B. Kanabur
Devadana
Mylimane
Kurvangi
S.Bidre
Hornadu
Magundi
Kalasapura
Eswarahalli
Amble
Kudremukha
Kalasa
Vasthare
Marasanige
Koove
Aldur
Javali
Machagondanahalli
Balur
Banakal
Mudigere
Daradahalli
Gonibeedu
LEGEND
National Highway
Major Road
District Boundary
Railway
River/Lake
District Headquarter
Major City
Other City

ಬುಕ್ಕಾಂಬುಧಿ ಊರಿನ ಪರಿಚಯ

ಬುಕ್ಕಾಂಬುಧಿ ಗ್ರಾಮ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನಲ್ಲಿ ಒಂದು ಹಳ್ಳಿ. ಬುಕ್ಕಾಂಬುಧಿ ಗ್ರಾಮವು ಸುತ್ತಮುತ್ತಲ ಹಳ್ಳಿಗಳಾದ ಅನುವನಹಳ್ಳಿ, ನಾರಣಾಪುರ, ಶಿವನೆ, ಉಬ್ರಾಣಿ, ಢಣಾಯಕಪುರ, ಚಿಕ್ಕಾನವಂಗಲ ಮತ್ತು ತಾವರೆಕೆರೆ ಮುಂತಾದುವುಗಳಿಂದ ಆವೃತವಾಗಿದೆ. ಆಗಿನ ಕಾಲಕ್ಕೆ ಊರಿಂದೂರಿಗೆ ಹೋಗಲು ಕಾಲುನಡಿಗೆ ಅಥವಾ ಗಾಡಿ ಪ್ರಯಾಣವೇ ಗತಿಯಾಗಿತ್ತು. ಈಗ ಬೇಕಾದಷ್ಟು ಬಸ್ಸುಗಳು ಚಾಲ್ತಿಯಲ್ಲಿವೆ. ಚನ್ನಗಿರಿ, ದಾವಣಗೆರೆ, ಚಿಕ್ಕಮಗಳೂರು ಮೊದಲಾದ ಊರುಗಳಿಗೆಲ್ಲ ಬಸ್ಸಿನಲ್ಲಿ ಪ್ರಯಾಣ ಮಾಡಬಹುದು. ಹತ್ತಿರದ ರೈಲ್ವೆ ಸ್ಟೇಶನ್ ಎಂದರೆ ಐದು ಮೈಲಿ ದೂರದಲ್ಲಿರುವ ಶಿವನೆಸ್ಟೇಶನ್.

ಬುಕ್ಕಾಂಬುಧಿಯಲ್ಲಿರುವ ಕೆರೆ ಬಹಳ ದೊಡ್ಡ ಪ್ರಮಾಣದ್ದು. ಅದರ ತೂಬು 30 ಅಡಿ ಎತ್ತರದ್ದು. ಎರಡು ವರ್ಷ ಮಳೆ ಬಾರದಿದ್ದರೂ ಕೆರೆಯ ನೀರು ಸುತ್ತಮುತ್ತಲ ತೋಟ, ಗದ್ದೆಗಳ ವ್ಯವಸಾಯಕ್ಕೆ ಸಾಕಾಗುತ್ತೆ. ಕೆರೆ ಬುಕ್ಕಾಂಬುಧಿ ಮತ್ತು ತಾವರೆಕೆರೆಗೆ ಮಧ್ಯದಲ್ಲಿದೆ. ಕೆರೆಯ ಸುತ್ತ ಗುಡ್ಡಗಳಿರುವುದರಿಂದ ಮಳೆ ನೀರು ಕೆರೆಗೆ ಹರಿದು ತುಂಬಿ ತಾವರೆಕೆರೆಯ ಸಮೀಪದ ಹೊಲಗಳಿಗೆಲ್ಲ ನುಗ್ಗಿಬಂದದ್ದೂ ಉಂಟು. ಕೆರೆಯ ಪಕ್ಕದಲ್ಲೇ ಇರುವ ದೇವಸ್ಥಾನದ ದೊಡ್ಡ ಗಣಪತಿ ಉದ್ಭವಮೂರ್ತಿ ಎಂದು ಹೇಳುತ್ತಾರೆ.

1940–41ರಲ್ಲಿ ಬಹಳ ಮಂದಿ ರಸದಾಳೆ ಕಬ್ಬನ್ನು ಬೆಳೆಯುತ್ತಿದ್ದರು. ಕರಡಿ ಹಾವಳಿಯಿಂದಾಗಿ ಕೆಲವಾರು ವರ್ಷಗಳು ಚೇಣಿಕಬ್ಬನ್ನು ಬೆಳೆಯಲು ಶುರು ಮಾಡಿದರು. ಈಚೆಗೆ ಅದೂ ತಪ್ಪಿ ಗದ್ದೆಯನ್ನೆಲ್ಲ ತೆಂಗಿನ ತೋಟಕ್ಕಾಗಿ ಬಳಸುತ್ತಿದ್ದಾರೆ. ಅಡಕೆ, ತೆಂಗು, ಬಾಳೆ ಮತ್ತು ಮಾವು ಮುಖ್ಯವಾದ ಬೆಳೆಗಳು. ಕೆಲವಾರು ತೋಟಗಾರರು ಅಡಕೆಯನ್ನು ಮನೆಯ ಪಕ್ಕದಲ್ಲೇ ಬೇಯಿಸಿ, ಒಣಗಿಸಿ ಮಾರಾಟ ಮಾಡುತ್ತಾರೆ. ಉಳಿದವರೆಲ್ಲ ಕೇಣಿಗೆ ಕೊಟ್ಟು ಬಿಡುತ್ತಾರೆ.

ಬುಕ್ಕಾಂಬುಧಿಯ ಜನಸಂಖ್ಯೆ ಸುಮಾರು 4000. ಹೆಚ್ಚುಮಂದಿ ವ್ಯವಸಾಯಗಾರರು. ನಮ್ಮ ಬ್ರಾಹ್ಮಣರ ಕೇರಿಯಲ್ಲಿ ಸುಮಾರು 25 ಸಂಸಾರಗಳಿದ್ದುವು. ಮಕ್ಕಳ ಕಾಲಕ್ಕೆ ಎಲ್ಲರೂ ಅಲ್ಲಿ ಇಲ್ಲಿ ಚದರಿ, ಕೇವಲ ಕೆಲವಾರು ಸಂಸಾರಗಳು ಹೆಸರಿಗೆ ಮಾತ್ರ ಉಳಿದಿವೆ.

ABOUT BUKKAMBUDHI

BUKKAMBUDHI is a village in Tarikere Taluk, Chikmagalur District (Karnataka State). Bukkambudhi is surrounded by Anuvanahalli, Naranapura, Shivane, Ubrani, Dhanayakapura, Chikkanavangala and Thavarekere. In olden days, to travel from village to village, it was only by walk or bullockcart. Now number of busses are there. May travel in bus to places like Channagiri, Davanagere, Chikmagalur. The nearby railway station is Shivane five miles away.

The tank in Bukkambudhi is quite big. The outlet of that tank is 30 feet height. Even if we do not get rain for two subsequent years, the water in the tank is enough for cultivation and garden around.The tank is in between Bukkambudhi and Thavarekere. Since there are hills around the tank, the rainwater flows down to the tank and rush to the nearby fields. The Ganesha idol in the temple which is by side of the tank is self-originated they say.

In 1940-41 many villagers were growing Rasadale sugarcane. Because of bear havoc, they started growing Cheni sugarcane. Of late, they have even turned out the fields and using as Coconut Garden. Areca, coconut, plantain, and mango are main crops. Some of gardeners bake Areca near the house, dry and sell. Rest of them give to contractors.

The population of Bukkambudhi is about 4,000. Majority of them are Cultivators. There were 25 families in our Brahmin locality. Next generation they moved here and there, a few families are there just namesake.

ಬುಕ್ಕಾಂಬುಧಿ ಕೃಷ್ಣಮೂರ್ತಿ

ಜೀವನ ಪಥ

08.01.1926	ಕೃಷ್ಣಮೂರ್ತಿಯವರ ಜನನ
1933	ತಾಯಿ ನಂಜಮ್ಮ ತೀರಿಕೊಂಡರು
1933–34	ಪ್ರೈಮರಿ ವಿದ್ಯಾಭ್ಯಾಸ ಮೈಸೂರಿನಲ್ಲಿ
1935–39	ಮಾಧ್ಯಮಿಕ ವಿದ್ಯಾಭ್ಯಾಸ ಚಿಕ್ಕಮಗಳೂರಿನಲ್ಲಿ
1940–42	ಹೈಸ್ಕೂಲ್ ವಿದ್ಯಾಭ್ಯಾಸ ಚಿಕ್ಕಮಗಳೂರಿನಲ್ಲಿ
1943–44	ಟೈಪ್‌ರೈಟಿಂಗ್, ಷಾರ್ಟ್ ಹ್ಯಾಂಡ್ ವಿದ್ಯಾಭ್ಯಾಸ ಬೆಂಗಳೂರಿನಲ್ಲಿ
1944	ಶ್ಯಾನುಭೋಗ್ ರಂಗಯ್ಯನವರ ಮಗಳು ಚಿನ್ನಮ್ಮನೊಂದಿಗೆ ಮದುವೆ
1945	ಕಾಫೀಬೋರ್ಡಿನಲ್ಲಿ ಕೆಲಸಕ್ಕೆ ಸೇರಿದ್ದು
1949	ಚಿಕ್ಕಮಗಳೂರಿಗೆ ವರ್ಗ
1959	ಬಾಳೇಹೊನ್ನೂರಿಗೆ ವರ್ಗ
1966	ಜಯನಗರದಲ್ಲಿ ಮನೆ ಕಟ್ಟಿದ್ದು, ಬೆಂಗಳೂರು
1974	ತಂದೆ ವೆಂಕಟರಮಣ ಭಾಗವತರು ದೈವಾಧೀನರಾದರು
1980	ಚಿನ್ನಮ್ಮನಿಗೆ ಪಾರ್ಶ್ವವಾಯು ಮದರಾಸಿನಲ್ಲಿದ್ದಾಗ
1984	ಕೃಷ್ಣಮೂರ್ತಿಯವರು ಕಾಫೀಬೋರ್ಡ್ ಕೆಲಸದಿಂದ ನಿವೃತ್ತರಾದರು
1994	ಚಿನ್ನಮ್ಮ ಹದಿನಾಲ್ಕು ವರ್ಷ ನರಳಿ ತೀರಿಕೊಂಡಳು
1997	ಕೃಷ್ಣಮೂರ್ತಿಯವರು ಅಮೆರಿಕಾಕ್ಕೆ ಬಂದದ್ದು
1998	ಪುನಃ ಕೆಲಸಕ್ಕೆ ಪ್ರಾರಂಭ ಲಾಯರ್ ನಾಗಾನಂದರವರ ಆಫೀಸಿನಲ್ಲಿ
2019	ಕೃಷ್ಣಮೂರ್ತಿಯವರಿಗೆ ಕನಕಾಭಿಷೇಕ, ಬೆಂಗಳೂರು
2025	ಕೃಷ್ಣಮೂರ್ತಿಯವರು 99 ವರ್ಷ ದಾಟಿದರು

ಟಿಪ್ಪಣಿ:

ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ಕೆಲಸದಿಂದ ನಿವೃತ್ತರಾಗುವುದಕ್ಕೆ ಇನ್ನೂ ಮನಸ್ಸು ಮಾಡಿಲ್ಲವಂತೆ. ಯಾರ ಉಪದೇಶವೂ ಸಫಲವಾಗಿಲ್ಲವಂತೆ. ನೀವು ಏನೇ ಹೇಳಿ, ಅವರು ಒಂದು ಥರಾ ಮನುಷ್ಯ ಕಣ್ರೀ ಹೋಗಲಿ ಬಿಡಿ ಇನ್ನೊಬ್ಬರ ವಿಷಯ ನಮಗ್ಯಾಕೆ.

ಕೃಷ್ಣಮೂರ್ತಿಯವರ ಪ್ರಕಟಿತ ಕೃತಿಗಳು

ಚಿಕ್ಕಮಗಳೂರು ವೆಂಕಟರಮಣ ಭಾಗವತರು

ನನ್ನ ವಿದೇಶ ಪ್ರವಾಸ

ನಮ್ಮೂರಿನ ಕಿರುಪ್ರಸಂಗಗಳ ಮಾಲೆ

ನಾನು ನಡೆದುಬಂದ ಹಾದಿ

ಪ್ರವಾಸಗಳ ಕಂತೆ / Bundle of Travelogues

ನನ್ನ ಒಡನಾಟದ ವ್ಯಕ್ತಿಗಳು

ನೆನಪಿಸಿಕೊಂಡ ವಿನೋದ ಪ್ರಸಂಗಗಳು / Remembered Jokes

ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ ಕನ್ನಡ–ಇಂಗ್ಲಿಷ್

ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ಪ್ರವಾಸ ಮಾಡಿದ ಸ್ಥಳಗಳು

1976 – ಹೊರನಾಡು, ಮಂಗಳೂರು, ಧರ್ಮಸ್ಥಳ, ಉಡುಪಿ, ಆಗುಂಬೆ, ಗೋಕರ್ಣ, ಗೋವಾ, ಮುಂಬೈ, ಅಜಂತ, ಎಲ್ಲೋರ, ಹೈದರಾಬಾದ್, ಸಿಕಂದರಾಬಾದ್ (ಜೊತೆಯಲ್ಲಿ ಹೆಂಡತಿ ಚಿನ್ನಮ್ಮ)

1982–84 – (ಆಫೀಸ್ ಕೆಲಸದಮೇಲೆ) ಮಹಾರಾಷ್ಟ್ರ, ಆಂಧ್ರಪ್ರದೇಶ, ಒರಿಸ್ಸಾ, ದೆಹಲಿ, ಕಲ್ಕತ್ತ, ತಮಿಳುನಾಡು, ಕೇರಳ.

1994 – ಬೋಧಗಯ, ನಳಂದ, ಶ್ರಾವಸ್ತಿ, ರಾಜಗೃಹ, ವಾರಣಾಸಿ, ಲುಂಬಿನಿ, ವೈಶಾಲಿ, ಜೇತವನ, ಕುಷೀನಾರ, ಅಯೋಧ್ಯ ಮತ್ತು ಖಟ್ಮಂಡು (ಜೊತೆಯಲ್ಲಿ,

ರಾಜಾರಾಂ, ಸಂಧ್ಯಾ, ರತ್ನ, ವಸುಧ, ಸರಯು ಮತ್ತು ಮಹಾಬೋಧಿ ಆಶ್ರಮದ ಭಕ್ತರು, ಒಟ್ಟು ಮುವ್ವತ್ತೈದು ಜನ)

1997 – ಅಮೆರಿಕಾಕ್ಕೆ ಪ್ರವೇಶ.

2000 – ಆಸ್ಟ್ರೇಲಿಯ (ಮಗಳು ಇಂದಿರಾ ಪುರುಷೋತ್ತಮ್ ಜೊತೆ)

2001 – ಬಹಾಮಾ ದ್ವೀಪಗಳು (ಜೊತೆಯಲ್ಲಿ ನಾಗಾನಂದ ಮತ್ತು ಮಕ್ಕಳು, ಪ್ರತಿಭಾ ಮತ್ತು ಮಕ್ಕಳು, ಅಚ್ಚುಪಾಟಿ, ಶ್ರೀರಂಗಮ್ಮ, ಕಲ್ಪನ).

2004 – ಗುಜರಾತ್‌ನಲ್ಲಿ ಜುನಾಗಡ್, ಸೋಮನಾಥ್, ದ್ವಾರಕಾ, ಅಹಮ್ಮದಾಬಾದ್, ಡೈಯು ದ್ವೀಪ, ನಡಿಯಾದ್ (ಜೊತೆಯಲ್ಲಿ ಕಲ್ಪನ).

2006 – ಆಸ್ಟ್ರೇಲಿಯಾದಲ್ಲಿ ಕ್ಲೀನ್ಸ್‌ಲ್ಯಾಂಡ್, ಟ್ಯಾಸ್ಮೇನಿಯಾ, (ಜೊತೆಯಲ್ಲಿ ಸುಧಾ, ಪ್ರಭಾಕರ್, ಇಂದು, ಪುರುಷೋತ್ತಮ್, ಗಾಯತ್ರಿ, ಶ್ರೀಧರ್, ಅನುರಾಧಾ, ಆನಂದ, ಅಂಕಿತ, ಅನೀಶ) ಗ್ರೇಟ್ ಬ್ಯಾರಿಯರ್ ರೀಫ್ (ಜೊತೆಯಲ್ಲಿ ಅನು, ಆನಂದ, ಅಂಕಿತ, ಅನೀಶ).

2007 – ಕೆನಡಾದಲ್ಲಿ ಟೊರಾಂಟೊ (ಜೊತೆಯಲ್ಲಿ ನಾಗಾನಂದ), ಇನ್ನೊಂದುಸಲ ಮಾಂಟ್ರಿಯಲ್‌ಗೆ ಡಾ. ರಶ್ಮಿ ಬಾಲಸುಬ್ರಮಣ್ಯರವರ ಜೊತೆ, ಮೂರನೆಯ ಬಾರಿ ಟೊರಾಂಟೊಗೆ ಒಂದು ಪಂಜಾಬಿ ಮದುವೆಗಾಗಿ (ನಾಗಾನಂದರವರ ಜೊತೆ).

2007 – ರಾಜಾಸ್ಥಾನ್ (ಜೊತೆಯಲ್ಲಿ ರಾಜಾರಾಂ, ಸಂಧ್ಯಾ, ಸರಯು, ತಂಗಿ ಸೀತಮ್ಮ, ಗಂಗಮ್ಮ, ಮಾನಸ)

2013 – ಹವಾಯ್ ದ್ವೀಪಗಳು (ಜೊತೆಯಲ್ಲಿ ಆದಿತ್ಯ –ರಾಜೇಂದ್ರ ಝಂಕಾರ್‌ರವರ ಮಗ).

2014 – ಶ್ರೀಲಂಕಾದಲ್ಲಿ ಅಭಯಗಿರಿ, ಕ್ಯಾಂಡಿ, ನುವರೇಲಿಯ, ಕೊಲಂಬೊ, ಔಕಾನಾ, ಬೆಂತೊಟಾ, ಅನೂರಾಧಪುರ (ಜೊತೆಯಲ್ಲಿ ರಾಜಾರಾಂ, ಸಂಧ್ಯಾ, ಸರಯು).

2014 – ಗೆಲಪಗೋಸ್ – ಸೌತ್ ಅಮೆರಿಕಾ (ಜೊತೆಯಲ್ಲಿ ನಾಗಾನಂದ, ಸಹನ, ತುಷಾರ್, ರೋಹಿತ್, ನಿಲೀಮಾ ಜೈನ್)

2017 – ಆಸ್ಟ್ರೇಲಿಯ, ನ್ಯೂಝಿಲ್ಯಾಂಡ್ (ಜೊತೆಯಲ್ಲಿ ಅನೂರಾಧ, ಕೃಷ್ಣಮೂರ್ತಿ ಮತ್ತು ಪ್ರಭಾ).

2017 – ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು (ಜೊತೆಯಲ್ಲಿ ತಂಗಿ ಸೀತಮ್ಮ, ಶ್ರೀಧರ, ಗಾಯತ್ರಿ, ಇಂದು, ಪುರುಷೋತ್ತಮ್, – ರಾಜಾರಾಂ ಮತ್ತು ಸಂಧ್ಯಾ).

2018 – ದುಬಾಯ್‌ನಲ್ಲಿ ಮದುವೆ (ಜೊತೆಯಲ್ಲಿ ನಾಗಾನಂದ).

2018 – ಬಹಾಮಾ ದ್ವೀಪ, ಪೆರು – ಸೌತ್ ಅಮೆರಿಕಾ (ಜೊತೆಯಲ್ಲಿ ನಾಗಾನಂದ, ಅನೂರಾಧ, ಆನಂದ, ಅಂಕಿತ ಮತ್ತು ಅನೀಶ).

2018 – ಪೋರ್ಟೋರಿಕೋ (ಜೊತೆಯಲ್ಲಿ ನಾಗಾನಂದ, ಟೋನಿ, ಉಷಾ ಮತ್ತು ಮಕ್ಕಳು, ಅಪ್ಸರಾ ಮತ್ತು ಸುಧಾಕುಮಾರ್).

2019 – ಲಂಡನ್, ಪ್ಯಾರಿಸ್ (ಜೊತೆಯಲ್ಲಿ ನಾಗಾನಂದ)

2019 – ಲೇ, ಲಡಾಕ್ (ಜೊತೆಯಲ್ಲಿ ನಾಗಾನಂದ, ರಾಜೀಕೋಟ, ರಾಜಾರಾಂ, ಸಂಧ್ಯಾ)

2019 – ಈಜಿಪ್ಟ್ (ಜೊತೆಯಲ್ಲಿ ನಾಗಾನಂದ, ಮಂಜುಳ, ಮುರಳೀಧರ, ಟೋನಿ, ಉಷಾ, ಆದಿತ್ಯ, ಅದ್ವಿಕ, ರಾಜೀಕೋಟ ಮತ್ತು ಅವರ ಅಕ್ಕ).

2023 – ಅಲಾಸ್ಕ ಪ್ರವಾಸ

2023 – ಕಾಶೀಯಾತ್ರೆ, ಅಯೋಧ್ಯ, ಪ್ರಯಾಗರಾಜ್, ಗಯಾ, ಬೋಧಗಯಾ, ವಾರಣಾಸಿ (24 ಜನ ಬಂಧುಗಳ ಜೊತೆ),

2023 – ಅಸ್ಸಾಂ–ಮೇಘಾಲಯ ಪ್ರವಾಸ (ಇಂದು, ಪುರುಷೋತ್ತಮ್, ಅನಂತ, ಸುನಿತಾ ದುಬೆ, ಅರಿಹಂತ್, ಅರ್ಷನ್, ಅನಿತ, ಉಷಾ)

2024 – ಜನವರಿ 8 – 99ನೇ ವರ್ಷದ ಹುಟ್ಟುಹಬ್ಬ, ಕಾಶೀ ಸಮಾರಾಧನೆ ಸ್ಥಳ: ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ, ಬೆಂಗಳೂರು.

2024 – ಜನವರಿ 12 – ಮರಳಿ ಅಮೆರಿಕಾಕ್ಕೆ.

2025 – ಅಕ್ಟೋಬರ್ 25– ಬೆಂಗಳೂರಿಗೆ ಬಂದರು

2025 – ಡಿಸೆಂಬರ್ 21 ಬಾಳೆಹೊನ್ನೂರಿನಲ್ಲಿ ಕಾಫಿ ಬೋರ್ಡ್ ವತಿಯಿಂದ ಗೌರವ

2026 – ಜನವರಿ 8, 9, 10 ಮತ್ತು 11 ರಂದು ಶತಾಯುಷಿಗಳಿಗೆ ಗೌರವ ಸನ್ಮಾನ

2026 – ಜನವರಿ 15 ಮರಳಿ ಅಮೇರಿಕಾಕ್ಕೆ

ಪ್ರವಾಸಗಳ ವಿವರಗಳನ್ನು ಅವರು ಪ್ರಕಟಿಸಿರುವ 'ಪ್ರವಾಸಗಳ ಕಂತೆ'ಯಲ್ಲಿ ತಿಳಿಸಿದ್ದಾರೆ.

ಕೃತಿಗಳ ಬಗ್ಗೆ – ಗಣ್ಯರ ಅಭಿಪ್ರಾಯಗಳು

1. **ನನ್ನ ಒಡನಾಟದ ವ್ಯಕ್ತಿಗಳು:** ಮಹದಾನಂದ ಪ್ರಕಾಶನ, ಬೆಂಗಳೂರು, 2020. ಈ ಗ್ರಂಥ ಕೇವಲ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರ ವೈಯಕ್ತಿಕ ಜೀವನದ ಪ್ರಸಂಗಗಳಷ್ಟೇ ಅಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಶಾನುಭೋಗರು, ಅರ್ಚಕರು, ಉಪಾಧ್ಯಾಯರು, ಮೊದಲಾದ ಮಧ್ಯಮ ವರ್ಗದ ಜನ ಗ್ರಾಮೀಣ ಬದುಕಿನಲ್ಲಿ ಎಷ್ಟರಮಟ್ಟಿಗೆ ಸಂಸ್ಕೃತಿವಂಚಿತರಾಗಿ ಬಾಳುತ್ತಿದ್ದರು. ಅವರಲ್ಲಿ ಜೀವನ ಮೌಲ್ಯಗಳು ಆದರ್ಶಗಳು ಎಷ್ಟರಮಟ್ಟಿಗೆ ನೆಲೆಯೂರಿದ್ದವು ಎಂಬ ಸಂಗತಿಗಳನ್ನು ಸೋದಾಹರಣವಾಗಿ ಈ ಗ್ರಂಥ ನಿರೂಪಿಸುತ್ತದೆ. ಗ್ರಂಥ 3 ಭಾಗಗಳಲ್ಲಿದ್ದು ಮೊದಲನೇ ಭಾಗದಲ್ಲಿ 7, 2ನೇ ಭಾಗದಲ್ಲಿ 10, 3ನೇ ಭಾಗದಲ್ಲಿ 17 ಜನರ ವ್ಯಕ್ತಿಚಿತ್ರಗಳಿದೆ.

2. **ನಾ ನಡೆದು ಬಂದ ಹಾದಿ:** ಮಹದಾನಂದ ಪ್ರಕಾಶನ, ಬೆಂಗಳೂರು, 2008. ಬೆಂಗಳೂರು ವಾಸಿಗಳಾಗಿದ್ದು 39 ವರ್ಷಗಳ ಸೇವೆಯ ಅನಂತರ ನಿವೃತ್ತರಾದ ಮೇಲೆ ನ್ಯೂಜರ್ಸಿಯಲ್ಲಿ ನೆಲೆಸಿರುವ ಕೃಷ್ಣಮೂರ್ತಿಗಳು ಅಲ್ಲಿಯ ಸಾಹಿತ್ಯದ ಚಟುವಟಿಕೆಗಳಲ್ಲಿ ಸದ್ದಿಲ್ಲದೆ ತೊಡಗಿಸಿಕೊಂಡಿದ್ದಾರೆ. ಅಮೇರಿಕ ಕನ್ನಡ ಸಾಹಿತಿಗಳಾಗಿ ಇತಿಹಾಸಕ್ಕೆ ಅಮೂಲ್ಯ ಸಂಗತಿಗಳನ್ನು ದಾಖಲಿಸಿರುವ ಆತ್ಮಕಥನವನ್ನು "ನಾ ನಡೆದು ಬಂದ ಹಾದಿ" ಗ್ರಂಥ 2008 ಆಗಸ್ಟ್‌ನಲ್ಲಿ ಚಿಕಾಗೋದಲ್ಲಿ ನಡೆದ 5ನೇಯ ವಿಶ್ವಕನ್ನಡ ಸಮ್ಮೇಳನದಲ್ಲಿ ಬಿಡುಗಡೆಯಾಗಿದೆ.

3. **ನಮ್ಮೂರಿನ ಕಿರುಪ್ರಸಂಗಗಳ ಮಾಲೆ:** ಮಹದಾನಂದ ಪ್ರಕಾಶನ, ಬೆಂಗಳೂರು, 2015. ಈ ಹೊತ್ತಿಗೆಯಲ್ಲಿ ಕೃಷ್ಣಮೂರ್ತಿಯವರ ಊರಿನ ಕೆಲವು ವಿನೋದಾತ್ಮಕ ಪ್ರಸಂಗಗಳ ಕಥನವಾಗಿದೆ. ಇದರಲ್ಲಿ 37 ಪ್ರಸಂಗಗಳಿದೆ. ನನ್ನ ತಿಥಿ, ತಿಪ್ಪಾಭಟ್ಟರ ಭವಿಷ್ಯ, ಕರಪೀಮಂದಿ, ಕಳ್ಳನನ್ನು ಹಿಡಿದಿದ್ದು, ಮೊದಲಾದ ಶೀರ್ಷಿಕೆಗಳೇ ಪ್ರಸಂಗಗಳ ವಿನೋದಾತ್ಮಕತೆಯನ್ನು ಸೂಚಿಸುವಂತಿದೆ.

4. **ನೆನಪಿಸಿಕೊಂಡ ವಿನೋದ ಪ್ರಸಂಗಗಳು:** ಮಹದಾನಂದ ಪ್ರಕಾಶನ, ಬೆಂಗಳೂರು 2023, ಈ ಗ್ರಂಥ ನಗೆಹನಿಗಳು (23), ನಗೆ ಪ್ರಸಂಗಗಳು

(63), ನಗೆಹಾಸ್ಯ ಪ್ರಬಂಧಗಳು (41) ನೆನಪಿಸಿಕೊಂಡ ಘಟನೆಗಳು (22) ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. "ನನ್ನ ಆರನೆಯ ಮರಿಮಗುವಿನ ಜನನ" ಅತ್ಯಂತ ರೋಚಕವಾಗಿದೆ.

5. **Bundle of Travelogues:** ಮಹದಾನಂದ ಪ್ರಾಕಾಶನ, ಬೆಂಗಳೂರು, 2020. ಈ ಕೃತಿ ಪ್ರವಾಸಕಥನ ರೂಪವಾಗಿದ್ದು ಕೃಷ್ಣಮೂರ್ತಿಗಳು ಕಂಡ ಅಮೇರಿಕಾ, ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್, ಶ್ರೀಲಂಕಾ, ನ್ಯೂಜಿಲ್ಯಾಂಡ್, ದುಬೈ, ಪೆರು, ನೇಪಾಳ, ಅಂಡಮಾನ್ ನಿಕೋಬಾರ್ ದ್ವೀಪಗಳು ಎಂಬ ವಿದೇಶ ಪ್ರವಾಸಗಳು ಭಾರತದ ಗುಜರಾತ್, ರಾಜಾಸ್ಥಾನ, ಬೆಂಗಳೂರಿನ ವರ್ಣನೆಗಳಿವೆ.


6. **ಚಿಕ್ಕಮಗಳೂರು ಶ್ರೀ ವೆಂಕಟರಮಣ ಭಾಗವತರ ಕಿರುಪರಿಚಯ:** ಇದೊಂದು ಜೀವನ ಚರಿತ್ರೆಯ ರೂಪದಲ್ಲಿದ್ದು ಇಂದಿರಾ ಇಂಟರ್ ನ್ಯಾಷನಲ್ ಪಬ್ಲಿಕೇಷನ್ಸ್, ನ್ಯೂಯಾರ್ಕ್‌ನಿಂದ 1998ರಲ್ಲಿ ಪ್ರಕಟವಾಗಿದೆ.

7. **ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಮಾತುಗಳಲ್ಲಿ ಹೇಳುವುದಾದರೆ:** ಕೃಷ್ಣಮೂರ್ತಿಗಳ ಹವ್ಯಾಸ ದ್ವಿಮುಖವಾದುದು. ಮೊದಲನೆಯದಾಗಿ ಸದಾ ಬಿಡುವಾದಾಗಲೆಲ್ಲಾ ಕನ್ನಡ ಕೃತಿ ರಚನೆಯಲ್ಲಿ ತೊಡಗುವುದು. ಎರಡನೆಯದಾಗಿ ಬಿಡುವಿಲ್ಲದಿದ್ದರೂ ಬಿಡುವು ಮಾಡಿಕೊಂಡು ಜಗತ್ತನ್ನು ಸುತ್ತುವುದು. ಅಮೇರಿಕದಿಂದ ಬೆಂಗಳೂರಿಗೆ ವರ್ಷಕ್ಕೊಮ್ಮೆ ಬರುವಾಗ ಯಾವುದಾದರೂ ಒಂದು ಕನ್ನಡ ಗ್ರಂಥವನ್ನು ಸಿದ್ಧಪಡಿಸಿಕೊಂಡೇ ಬರುತ್ತಾರೆ. ಅದನ್ನು ಅಚ್ಚು ಮಾಡಿಸಿ ಬಿಡುಗಡೆ ಮಾಡಿ ಅಮೇರಿಕೆಗೆ ಪ್ರತಿಗಳನ್ನು ಒಯ್ದು ಮಿತ್ರರಿಗೆ ಹಂಚುವುದು. ಬೆಂಗಳೂರಿನಲ್ಲಿದ್ದಾಗ ನಾಟಕ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿದ್ದ ಅವರು ಮಹಾಬೋಧಿ ಸೊಸೈಟಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮುಂತಾದ ಸಂಸ್ಥೆಗಳಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ.



ಉಲ್ಲಾಸ–ಉತ್ಸಾಹ–ಉತ್ಸವ

ಬಿ ವಿ ಕೃಷ್ಣಮೂರ್ತಿ – ಕೆ ಬಿ ಮೂರ್ತಿ
ಬುಕ್ಕಾಂಬುಧಿ ಕೃಷ್ಣಮೂರ್ತಿ



ಶತಾಯುಷಿ
100
ವರ್ಷಗಳು



ಈ ಎಲ್ಲಾ ಹೆಸರು ಒಬ್ಬರದ್ದೇ. ಇವರು ಶ್ರಮಜೀವಿ, ಕ್ರೀಡಾಪಟು, ನಟರು ಈಗ ಶತಾಯುಷಿ. (8–1–1926) ಶಿಕ್ಷಣದಲ್ಲಿ ಕನ್ನಡ ಓದಿದವರಲ್ಲ. ಆದರೆ ಸಾಹಿತ್ಯಾಭಿಮಾನಿ. ಅವರ ಅಚ್ಚುಮೆಚ್ಚಿನ ಸಾಹಿತಿ – ಬೀಚಿ. ತಿಂಮನನ್ನು ಚೆನ್ನಾಗಿ ಪರಿಚಯ ಮಾಡಿಕೊಂಡಿದ್ದಾರೆ. ಆ ಹಿನ್ನೆಲೆಯಿಂದಾಗಿಯೇ ಅವರು ಬರೆದ ಕೆಲವಾರು ರಚನೆಗಳಲ್ಲಿ ವಿನೋದ – ಸರಳತೆ – ಸರಸತೆ – ಹಾಸ್ಯ ಒಳಹೊಕ್ಕಿದೆ. ಅವರ ಜೀವನದಲ್ಲಿ ಪಡೆದ ಅನುಭವಗಳನ್ನು ಅವರು ಉದಾಹರಿಸಿರುವುದೂ ಹಾಸ್ಯದ ಪರಿಯಲ್ಲಿಯೇ. ಮಾತಿಗೊಂದು ವಿನೋದ ಪ್ರಸಂಗ ಹೇಳುವ ಪರಿ, ಎಲ್ಲವೂ ಸೊಗಸು.

ಭಾರತ ದೇಶದಲ್ಲಿದ್ದಾಗ ಕರ್ನಾಟಕದಲ್ಲಿ ಕೆಲಸದಲ್ಲಿದ್ದಾಗ ಟೈಪಿಂಗ್ ಮತ್ತು ಶಾರ್ಟ್ ಹ್ಯಾಂಡ್ ವಿದ್ಯೆಯಲ್ಲಿ ಅಪಾರ ಪರಿಣತಿ ಮತ್ತು ಸಾಧನೆ. ಕೇಂದ್ರ ಸರ್ಕಾರದ ಕಾಫಿ ಬೋರ್ಡ್‌ನಲ್ಲಿ ವೃತ್ತಿಯಲ್ಲಿದ್ದಾಗ (1945–1984) ಬಿವಿಕೆ ಯೆಂದೇ ಹೆಸರುವಾಸಿ. ಬಹಳ ಜನ ಸ್ನೇಹಿತರು. ಜೀವನಾನುಭವ ಅಪಾರವಾದದ್ದು. ಅನೇಕರಿಗೆ ದಾರಿ ದೀಪ. ಮಾದರಿ.

ಅವರು ಅಮೆರಿಕ ದೇಶದಲ್ಲಿ ವಾಸ ಮತ್ತು ವೃತ್ತಿ (1997–2025) ಆರಂಭಿಸಿದಾಗಿಂದ ಬಿಡುವಿನ ವೇಳೆಯಲ್ಲಿ ಬರವಣಿಗೆಯೇ ಅವರ ಹವ್ಯಾಸ. ತಮ್ಮ ಎಪ್ಪತ್ತರ ವಯಸ್ಸಿನಲಿ ಅಮೇರಿಕದಲ್ಲಿ ಕಂಪ್ಯೂಟರ್ ಕಲಿತರು. ತಾವು ನೋಡಿ ಬಂದ ಊರು ಸ್ಥಳ ಪ್ರವಾಸ ಮಾಡಿದ ಬಗ್ಗೆ ಬರೆಯಲು ಆರಂಭಿಸಿದರು. ಹೀಗೆ ಅವರ ನೆನಪಿನ ಬುತ್ತಿಯಲ್ಲಿನ ಅನೇಕ ವಿಷಯಗಳು ಹತ್ತು ಕೃತಿಗಳಾಗಿ ಪ್ರಕಟವಾಗಿವೆ.


ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ ಸುಮಾರು 20 ವರ್ಷಗಳ ಕಾಲ ನಿರಂತರವಾಗಿ ಪದಗಳನ್ನು ಜೋಡಿಸಿದ್ದರ ಫಲ. ಅದು ಇಂದಿನ ಇಂಗ್ಲೀಷ್ ಕಲಿತವರಿಗೂ ಅದರ ಓದಿನ ಲಾಭವಾಗಬೇಕೆಂದು ಆ ಪದಗಳ ಅರ್ಥವನ್ನು ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಅಲ್ಲಲ್ಲಿ ಸಚಿತ್ರ ವಿವರಣೆ ಇದೆ.

ಈ ಶ್ರಮ ಸಾರ್ಥಕವಾಗಲಿ. ಆ ಪದಗಳ ಅರ್ಥ, ಆ ಕಾಲದ ಆಚರಣೆಗಳು, ವಸ್ತುಗಳ ಚಿತ್ರಗಳು ಎಲ್ಲರ ಗಮನಕ್ಕೆ ಬರಲಿ ಎಂಬುದೇ ಅವರ ಅಭಿಲಾಷೆ.

ಡಾ. ಮುಖ್ಯಮಂತ್ರಿ ಚಂದ್ರು – ಡಾ. ಬಿ.ವಿ.ರಾಜಾರಾಂ




ಉಲ್ಲಾಸ–ಉತ್ಸಾಹ–ಉತ್ಸವ



Centenarian

100

Years



B V Krishnamurthy - K B Murthy
Bukkambudhi Krishnamurthy

When KB Murthy started living and working in America since 1997, writing was his hobby in his free time. He started writing about the places he visited and traveled. Thus, many things from his memory have come into his works - over 10 books have been published.


Bukkambudhi Pradeshika Padakosha is the result of continuously compiling words for about 20 years. It can also be read by today's English learners, the meaning of these words have been translated into English. There are some illustrations also.

His wish is that the meaning of these words, the rituals of that time, and the pictures of things should reach other's knowledge.

This book is being released in the 8th NAVIKA Festival, at Tampa Orlando, Florida, USA - Aug 29th – 31st 2025.

This book is published by Sri Melukote N. Muralidhar of Suhaas Graphics, Rajajinagar, Bengaluru. This book is available on Amazon.in and also in publisher's official website suhaasgraphics.com.

Address: Krishna Murthy
200 Middlesex - Essex Tpke,
Suite 103, Iselin, NJ 08830, USA
Ph.: +1 732-986-7041
E-mail : kbmurthy26@hotmail.com



ಹೆಸರು: **ಜಿ ಅಶ್ವತ್ಥನಾರಾಯಣ**

ತಂದೆ–ತಾಯಿ: **ಹೆಚ್.ಗುಂಡಪ್ಪ, ಜಿ.ಜಾನಕಮ್ಮ**

ಜನ್ಮದಿನ: 12–5–1938

ಜನ್ಮಸ್ಥಳ: ಬೆಂಗಳೂರು

ಮನೆ ವಿಳಾಸ: ನಂ. 95, 34ನೇ 'ಬಿ' ಕ್ರಾಸ್, 16ನೇ ಮುಖ್ಯರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು – 560 041,


ಶಿಕ್ಷಣ: ಎಂ.ಎ., ಕನ್ನಡ, ಎಂ.ಎ., ಸಮಾಜ ಶಾಸ್ತ್ರ, ಶಾಸನ ಶಾಸ್ತ್ರ ಡಿಪ್ಲೋಮಾ, ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ


ಉದ್ಯೋಗ: ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಡಿಗ್ರಿ ಕಾಲೇಜುಗಳಲ್ಲಿ 30 ವರ್ಷಗಳ ಕಾಲ ಕನ್ನಡಅಧ್ಯಾಪಕ ಹಾಗೂ ಪ್ರಾಧ್ಯಾಪಕನಾಗಿಕನ್ನಡ ಬೋಧನಾ ಸೇವೆ,1996ರಲ್ಲಿ ನಿವೃತ್ತಿ.


ಪ್ರಶಸ್ತಿಗಳು:


ಕುವೆಂಪು ಶ್ರೀ ಪ್ರಶಸ್ತಿ – 2004
ಗುರುಗೋವಿಂದ ವಿಠಲ ದಾಸ ಸಾಹಿತ್ಯ ಪ್ರಶಸ್ತಿ – 2007
ಕನ್ನಡ ಶ್ರೀ ಪ್ರಶಸ್ತಿ – 2008
ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ – 2011
ಕನ್ನಡ ಸಾಹಿತ್ಯ ಪರಿಷತ್ತಿನಗ್ರಂಥ ಪ್ರಶಸ್ತಿ – 2012
ಸುಮಾ ವಸಂತ ಸಾಹಿತ್ಯ ಪ್ರಶಸ್ತಿ – 2012
ಕರ್ನಾಟಕ ಸಾಹಿತ್ಯಅಕಾಡೆಮಿ ಪ್ರಶಸ್ತಿ – 2013
ಟಿ.ವಿ. ವೆಂಕಟಚಲ ಶಾಸ್ತ್ರಿ ವಿದ್ಯುತ್ ಪ್ರಶಸ್ತಿ – 2023
ಕನ್ನಡ ಸಾಹಿತ್ಯ ಪರಿಷತ್ತು
ನಾಡಪ್ರಭುಕೆಂಪೇಗೌಡ ಪ್ರಶಸ್ತಿ – 2015 ಬಿಬಿಎಂಪಿ
ನಾಡಿನ ನಾನು ಸಂಸ್ಥೆಗಳು ಸಾಹಿತ್ಯ ಸೇವೆಗಾಗಿ ಗೌರವಿಸಿದೆ


ದೂರವಾಣಿ:
080–26637783



ಓಂ
ಚಿಕ್ಕಮಗಳೂರು
ಶ್ರೀ ವೆಂಕಟರಮಣ ಭಾಗವತರ
ಕಿರುಪರಿಚಯ
ಲೇಖಕರು
ಬುಕ್ಕಾಂಬುಧಿ ಕೃಷ್ಣಮೂರ್ತಿ



A330
ನನ್ನ ವಿದೇಶ ಪ್ರವಾಸ
ಬುಕ್ಕಾಂಬುಧಿ ಕೃಷ್ಣಮೂರ್ತಿ



ನಾ
ನಡೆದು ಬಂದ
ಹಾದಿ
ಬುಕ್ಕಾಂಬುಧಿ ಕೃಷ್ಣಮೂರ್ತಿ



ನಮ್ಮೂರಿನ ಕಿರುಪ್ರಸಂಗಗಳ ಮಾಲೆ
ಬುಕ್ಕಾಂಬುಧಿ ಕೃಷ್ಣಮೂರ್ತಿ



ಪ್ರವಾಸಗಳ
ಕಂತೆ
ಬುಕ್ಕಾಂಬುಧಿ ಕೃಷ್ಣಮೂರ್ತಿ



Bundle of
Travelogues
Bukkambudhi Krishnamurthy



ಬುಕ್ಕಾಂಬುಧಿ
ಪ್ರಾದೇಶಿಕ
ಪದಕೋಶ
ಬುಕ್ಕಾಂಬುಧಿ ಕೃಷ್ಣಮೂರ್ತಿ
ಜೊ. ಜಿ. ಅಕ್ಷತ್ತನಾರಾಯಣ


ನನ್ನ
ಒಡನಾಟದ
ವ್ಯಕ್ತಿಗಳು
ಬುಕ್ಕಾಂಬುಧಿ ಕೃಷ್ಣಮೂರ್ತಿ


ನೆನಪಿನಿಂದ
ವಿನೋದ ಪ್ರಸಂಗಗಳು
ಬುಕ್ಕಾಂಬುಧಿ ಕೃಷ್ಣಮೂರ್ತಿ


Remembered
JOKES
Bukkambudhi
Krishnamurthy


ಬುಕ್ಕಾಂಬುಧಿ
ಕೃಷ್ಣಮೂರ್ತಿ
100
ಜೂರು
ಪಾರು


Bukkambudhi
Krishnamurthry
100
Waves
of
Thoughts



ಬುಕ್ಕಾಂಬುಧಿ ಕೃಷ್ಣಮೂರ್ತಿ

ಪ್ರತಿಬಾರಿ ಬೆಂಗಳೂರಿಗೆ ಬಂದಾಗ ಯಾವುದಾದರೂ ಸಾಹಿತ್ಯಕೃತಿಯ ಹಸ್ತಪ್ರತಿ ತಂದು, ನೋಡಿಕೊಡಿ ಎನ್ನುತ್ತಿದ್ದರು. ಈ ಬಾರಿ ಅವರು ತಂದದ್ದು ಸಾಹಿತ್ಯಕೃತಿ ಅಲ್ಲ. **ಪದಕೋಶ** ಪ್ರತಿ. ನನಗೆ ಆಶ್ಚರ್ಯವಾಯಿತು. ಅಮೆರಿಕೆಯಲ್ಲಿ ಒಬ್ಬರೇ ಕೂತು ಯಾವುದೇ ತಕ್ಕ ಆಕರಗಳ ಮತ್ತು ಗ್ರಂಥಗಳ ನೆರವೂ ಇಲ್ಲದೆ, ಸ್ವಂತ ಅನುಭವ ಅಭಿಮಾನದಿಂದ, ತಮ್ಮ ಊರಿನ ಜನ ಬಳಸುತ್ತಿದ್ದ ಭಾಷೆಯನ್ನು ಕುರಿತು, ತಮ್ಮ ಕಾಲದ ಆಚರಣೆಗಳನ್ನು ಕುರಿತು, ಹಿರಿಯರ ಪದ್ಧತಿಗಳನ್ನು ಕುರಿತು ರಚಿಸಿದ ಪ್ರಾದೇಶಿಕ – ಸಾಮಾಜಿಕ ನಿಘಂಟಿನ ಕರಡುಪ್ರತಿ ತಂದಿದ್ದರು.

"ನಮ್ಮೂರಿನ ಭಾಷೆಯನ್ನು ಕನ್ನಡವನ್ನು, ನಮ್ಮ ಹಿರಿಯರ ಆಚರಣೆ ಅನುಭವಗಳನ್ನು ಕುರಿತು ನಮ್ಮ ಈಗಿನ ತಲೆಮಾರಿನವರಿಗೆ ಪರಿಚಯವೇ ಇಲ್ಲ. ಅದರಲ್ಲೂ ಯುವಕರಿಗೆ ಏನೇನೂ ಪರಿಚಯವಿಲ್ಲ. ಅದನ್ನು ತಿಳಿಸಬಲ್ಲ ಹಿರಿಯರೂ ಕಡಿಮೆ ಆಗುತ್ತಿದ್ದಾರೆ. ಇನ್ನು ನಮ್ಮ ಆಡುಮಾತಿನಲ್ಲಿ ನಾವು ಬಳಸುತ್ತಿದ್ದ ಅಚ್ಚ ಕನ್ನಡಪದಗಳು, ನುಡಿಗಟ್ಟುಗಳು ಮರೆಯಾಗುತ್ತಿವೆ. ಇವೆಲ್ಲವನ್ನೂ ನನಗೆ ತಿಳಿದಮಟ್ಟಿಗೆ ಒಂದುಕಡೆ ಬರೆದಿಟ್ಟಿರುವ ಗ್ರಂಥವೇ **ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ.** ನಾನು ವಿದ್ವಾಂಸನಲ್ಲ, ಪಾಂಡಿತ್ಯವಿಲ್ಲ, ಕನ್ನಡದ ವಿಶೇಷ ಅಧ್ಯಯನ ಮಾಡಿದವನೂ ಅಲ್ಲ. ಕನ್ನಡ ಸೇವೆಯನ್ನು ಕೈಲಾದಷ್ಟು ಮಾಡಬೇಕು, ಎಂಬ ಆಸೆಯಿಂದ ಈಗಿನ ಯುವಜನರಿಗೆ ತಿಳಿಸಬಹುದಾದ ನಮ್ಮ ಹಿರಿಯರ ಜೀವನಸಾಧನೆ, ಅವರ ಕನ್ನಡ ಭಾಷೆಯ ಬಳಕೆಯಲ್ಲಿ ಇದ್ದ ಕನ್ನಡ ಪದ ಬಳಕೆ, ನುಡಿಗಟ್ಟು ಬಳಕೆ, ಭಾಷೆಯ ಸೊಗಸು, ನಮ್ಮ ಸಂಸ್ಕೃತಿ, ಹಬ್ಬಹರಿದಿನಗಳ ಆಚರಣೆ ಇಲ್ಲಿದೆ. ಬುಕ್ಕಾಂಬುಧಿ ಮತ್ತು ಸುತ್ತಮುತ್ತಲ ಜನರ ಬದುಕಿನ ಭಾಷೆ ಇತ್ಯಾದಿ ತಿಳಿಸುವ ಪ್ರಯತ್ನಮಾಡಿದ್ದೇನೆ" ಎಂದು ಗ್ರಂಥವನ್ನೂ ಕೊಟ್ಟರು.

During every visit to Bangalore, he will give me some manuscript or other for my reading, opinion and corrections etc. What he brought during his present visit was not a literary book. It was a **Padakosha** I was surprised to the core. Sitting alone in America, without the help of any source books etc., just with his own self interest and love for the place, he has completed this **Bukkambudhi Pradeshika Padakosha.**

– ಪ್ರೊ. ಜಿ. ಅಶ್ವತ್ಥನಾರಾಯಣ

9 789390 952267

ಬೆಲೆ ರೂ 600/-

ಸುಹಾಸ್ ಗ್ರಾಫಿಕ್ಸ್
Suhaas Graphics
CREATIVE • DESIGN • DEVELOPMENT
www.suhaasgraphics.com | Ph: 98453 55509